JJ-51
SRS
(B) 25226 (2)

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಎನೇ ಅಧಿವೇಶನ
2ND SESSION

ಸಂಪುಟ – ೫ (ಕ್ರಮಾಂಕ – ೦೧)
Volume - 5 (No. 01)

(೩೧ನೇ ಜುಲೈ ೨೦೦೮)
(31st July 2008)

ಭಾಗ–೩
Part-III

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 25226 (2)

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೨ನೇ ಅಧಿವೇಶನ

2ND SESSION

ಸಂಪುಟ – ೫ (ಕ್ರಮಾಂಕ – ೦೧)

Volume - 5 (No. 01)

(೩೧ನೇ ಜುಲೈ ೨೦೦೮,)

(31st July 2008)

ಭಾಗ–೩

Part-III

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್

ಅಧ್ಯಕ್ಷರು

ಕರ್ನಾಟಕ ವಿಧಾನಸಭೆ

ಗುರುವಾರ 31ನೇ ಜುಲೈ 2008ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.18 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು

ಪೀಠವನ್ನು ಅಲಂಕರಿಸಿದ್ದರು

ದಿನಾಂಕ: 31.07.2008

ವಿಷಯಾನು ಕ್ರಮಣಿಕೆ

ಸರದಿ ಸಂಖ್ಯೆ

1. ಹೇಳಿಕೆ: 1

ವಿಷಯ: ರಾಜ್ಯದಲ್ಲಿ ಉಂಟಾದ ವಿದ್ಯುತ್ ಲೋಡ್ ಶೆಡ್ಡಿಂಗ್ ಬಗ್ಗೆ.
ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು)

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ: 2

ವಿಷಯ: ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

3. ಪ್ರಶ್ನೋತ್ತರ: 4–197

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್	112(522)
ಶ್ರೀ ಯು.ಟಿ. ಖಾದರ್	115(508)
ಶ್ರೀ ಗುರು ಪಾದಪ್ಪ ನಾಗಮಾರಪಲ್ಲಿ	116(526)
ಶ್ರೀ ಆರ್. ರೋಷನ್ ಬೇಗ್	117(277)
ಶ್ರೀ ಕರಡಿ ಸಂಗಣ್ಣ ಅಮರಪ್ಪ	118(278)
ಶ್ರೀ ವಿ. ಸೋಮಣ್ಣ	119(439)
ಶ್ರೀ ಶಿವಸಂಕರೆಡ್ಡಿ ಎನ್.ಹೆಚ್.	121(524)
ಶ್ರೀ ಡಾ. ಬಗಲಿ ಸರ್ವಭೌಮ ಸಠಗೌಡ	122(462)
ಶ್ರೀ ಗೋಪಾಲ ಭಂಡಾರಿ ಹೆಚ್.	123(527)
ಶ್ರೀ ಈಶ್ವರ ಭೀಮಣ್ಣ ಖಂಡ್ರೆ	124(518)
ಶ್ರೀ ಡಾ. ಸುಧಾಕರ್ .ಎಂ.ಸಿ.	125(348)
ಶ್ರೀ ಕಿಮ್ಮನೆ ರತ್ನಾಕರ್	126(521)
ಶ್ರೀ ಗುರುಪಾದಪ್ಪ ನಾಗಮೊರಪಲ್ಲಿ	45(200)
ಶ್ರೀ ಡೆಂಕ್ ಎಂ.ಬಿ.ಮಲ್ ಇನ್ ಪಾ	42(94)
ಶ್ರೀ ಟಿ.ಬಿ.ಜಯಚಂದ್ರ	2(28)
ಶ್ರೀ ಎಂ. ಶ್ರೀನಿವಾಸ್	67(383)
ಶ್ರೀ ಸಿ.ಎಸ್.ಪುಟ್ಟೇಗೌಡ	68(120)
ಶ್ರೀ ಎಸ್.ಆರ್. ವಿಶ್ವನಾಥ್	69(118)
ಶ್ರೀ ಸಿ.ಎಸ್. ಪುಟ್ಟರಾಜು	70(387)

ಶ್ರೀ ಈಶ್ವರ ಭೀಮಣ್ಣ ಖಂಡ್ರೆ 71(371)

II

ಶ್ರೀ ಪಾಟೀಲ್ ಎ.ಎಸ್. 72(261)
ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ 73(264)
ಶ್ರೀ ಟಿ.ಬಿ. ಜಯಚಂದ್ರ 75(377)
ಶ್ರೀ ಎನ್. ಸಂಪಂಗಿ 76(359)
ಶ್ರೀ ಜೆ.ಡಿ.ನಾಯ್ಕ 77(169)
ಶ್ರೀ ರೇವಣ್ಣ ಹೆಚ್.ಡಿ. 79(161)
ಶ್ರೀ ಉಮೇಶ್ ವಿ.ಕತ್ತಿ 80(251)
ಶ್ರೀ ಕೆ.ಎಂ. ಕೃಷ್ಣಮೂರ್ತಿ 114(499)
ಶ್ರೀ ನರೇಂದ್ರ ಬಾಬು 120(512)

(ಆ) ಚುಕ್ಕೆ ಗುರುತಿಲ್ಲದ ಲಿಖಿತ ಮೂಲಕ ಉತ್ತರಿಸಿದ ಪ್ರಶ್ನೆಗಳು.

ಅನುಬಂಧ -- I 31/07/08
ಅನುಬಂಧ – II 30/07/08
ಅನುಬಂಧ –III 29/07/08
ಅನುಬಂಧ—IV 28/07/08

4. ಕಾರ್ಯದರ್ಶಿಯವರ ವರದಿ **198**

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು **198–199**

6. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ. **199**

7. ನಿಲುವಳಿ ಸೂಚನೆ ಅನುಮತಿ ಕೋರಿ ಚರ್ಚೆ: **200–227**

ವಿಷಯ: ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್.
ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
ಶ್ರೀ ಮಲ್ಲಿಕಾರ್ಜುನ ಖರ್ಗೆ
ಶ್ರೀ ಸಿದ್ಧರಾಮಯ್ಯ

8. ನಿಯಮ 69ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ: 227-970

III

ವಿಷಯ: ರಾಮನಗರ ಜಿಲ್ಲೆಗೆ ಮಂಜೂರಾಗಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಬೇರೆಡಗೆ ಸ್ಥಳಾಂತಿಸಿರುವ ಬಗ್ಗೆ ಹಾಗೂ ಕ್ಯಾಂಪಸ್ ಮತ್ತು ಹಣಕಾಸು ವಿಷಯದಲ್ಲಿ ಹಗರಣ ನಡೆದಿದೆ, ಎಂದು ಮುಖ್ಯಮಂತ್ರಿಯವರು ನೀಡಿರುವ ಹೇಳಿಕೆಗಳಿಂದ ಉಂಟಾಗಿರುವ ಗೊಂದಲದ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಶ್ರೀ ಡಿ.ಕೆ. ಶಿವಕುಮಾರ್
ಶ್ರೀ ಡಾ. ಹೆಚ್.ಸಿ. ಮಹದೇವಪ್ಪ
ಶ್ರೀ ಎಂ.ಪಿ. ರೇಣುಕಾಚಾರ್ಯ
ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)
ಶ್ರೀ ಹೆಚ್.ಡಿ. ರೇವಣ್ಣ

ಅಧ್ಯಕ್ಷರು: ಪ್ರಾರಂಭದಲ್ಲಿ ವಿದ್ಯುತ್ load shedding ಬಗ್ಗೆ ಮಾನ್ಯ ಮಂತ್ರಿಯವರು Statement ಮಾಡುತ್ತಾರೆ.

1. ಹೇಳಿಕೆ

ವಿಷಯ: ರಾಜ್ಯದಲ್ಲಿ ವಿದ್ಯುತ್ ಪರಿಸ್ಥಿತಿ ಕುರಿತು

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :-

ರಾಜ್ಯದ ಎಲ್ಲೆಡೆ ಉತ್ತಮ ಮಳೆಯಾಗುತ್ತಿರುವುದು ಹರ್ಷದ ಸಂಗತಿ. ಕಳೆದ 3 ದಿನಗಳಿಂದ ಜಲಾಶಯಗಳಿಗೆ ಉತ್ತಮ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ನಮ್ಮ ವಿದ್ಯುತ್ ಕ್ಷೇತ್ರದ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಬಂದಿದೆ.

ಜುಲೈ 31 ರಂದು ಪ್ರಮುಖ ಜಲಾಶಯಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೀಗಿದೆ:-

		ಒಳಹರಿವು
ಲಿಂಗನಮಕ್ಕಿ	: 1410 ಮಿ.ಯು.	31635 ಕ್ಯೂಸೆಕ್ಸ್
ಸೂಪ	: 692 ಮಿ.ಯು.	27022 ಕ್ಯೂಸೆಕ್ಸ್
ಮಾಣಿ	: 290 ಮಿ.ಯು.	6188 ಕ್ಯೂಸೆಕ್ಸ್
ಒಟ್ಟು	2392 ಮಿ.ಯು.	

- ಆದರೆ, ಕಳೆದ ವರ್ಷ ಇದೇ ದಿನದಲ್ಲಿ ಈ ಮೂರು ಜಲಾಶಯಗಳಿಂದ 5860 ಮಿ.ಯು.ಗಳಿಗೆ ಬೇಕಾದಷ್ಟು ನೀರಿನ ಶೇಖರಣೆ ಇತ್ತು.
- ಮತ್ತೊಂದು ಸಂತಸದ ಸಂಗತಿ ಎಂದರೆ, ಬಳ್ಳಾರಿಯ ಶಾಖೋತ್ಪನ್ನ ಘಟಕ-1, ಯಶಸ್ವಿಯಾಗಿ ಕಾರ್ಯಾರಂಭ ಮಾಡಿದೆ. ಆಗಸ್ಟ್ 1ರಿಂದ ಬಿ.ಟಿ.ಪಿ.ಎಸ್.-1 ರಿಂದ 100 ಮೆ.ವ್ಯಾ. (2.5 ಮಿ. ಯುನಿಟ್) ವಿದ್ಯುತ್ ಉತ್ಪಾದನೆ ಆಗಲಿದ್ದು, ನಮ್ಮ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನೀಗಿಸಲಿದೆ.
- ರಾಯಚೂರಿನಲ್ಲಿನ ಎಲ್ಲಾ 7 ಘಟಕಗಳನ್ನು ಸುಸ್ಥಿತಿಯಲ್ಲಿಡುವ ಕಾರ್ಯ ನಡೆದಿದ್ದು, ಆಗಸ್ಟ್‌ನಲ್ಲಿ ಈ ಘಟಕಗಳಿಂದ 32 ಮಿ.ಯು.ಗಳನ್ನು ಉತ್ಪಾದಿಸುವ ಗುರಿ ಹೊಂದಿದೆ. ಪವನ (Wind) ವಿದ್ಯುತ್‌ನಿಂದ 10 ಮಿ.ಯು.ಗಳನ್ನು ಉತ್ಪಾದಿಸಲಿದ್ದೇವೆ. ಜಲವಿದ್ಯುತ್‌ನಿಂದ 15 ಮಿ.ಯು. ಉತ್ಪಾದನೆಯಾಗಲಿದೆ.
- ಕೇಂದ್ರದ ಗ್ರಿಡ್‌ನಿಂದ 35 ಮಿ.ಯು. ಪಡೆಯಲು ಉದ್ದೇಶಿಸಿದ್ದೇವೆ. ಹೀಗಾಗಿ, ನಮಗೆ ಪ್ರತಿನಿತ್ಯ 105 ಮಿ.ಯು.ನಷ್ಟು ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸ್ಥಿತಿ ಇದೆ. ರಾಜ್ಯದಲ್ಲಿ ಮಳೆ ಆಗುತ್ತಿರುವುದರಿಂದ ವಿದ್ಯುತ್ ಬಳಕೆಯ ಪ್ರಮಾಣದಲ್ಲೂ ಗಣನೀಯ ಇಳಿಕೆ ಕಂಡು ಬಂದಿರುವುದು ಗಮನಾರ್ಹ.

- ಪರಿಸ್ಥಿತಿಯನ್ನು ಅವಲೋಕಿಸಲು 29ರ ಬೆಳಿಗ್ಗೆ ಸಚಿವ ಸಂಪುಟ ಉಪ ಸಮಿತಿ (ವಿದ್ಯುತ್) ಸಭೆ ನಡೆಸಿತು. ಎಲ್ಲಾ ಸಾಧಕಗಳನ್ನು ಚರ್ಚಿಸಿತು. ರಾಜ್ಯದ ಜನತೆಗೆ ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚು ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ಅದರಂತೆ.
  - ಯೋಜಿತ ಲೋಡ್ ಶೆಡ್ಡಿಂಗ್ ಶೇಕಡ 20 ರಷ್ಟು ಇದ್ದದ್ದನ್ನು ಶೇಕಡ 15 ಕ್ಕೆ ಇಳಿಸಲು ನಿರ್ಧರಿಸಿದೆ.
  - ವಿದ್ಯುತ್ ವಿತರಣಾ ಕಂಪನಿಗಳಿಗೆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಹಂಚಿಕೆ ಮಾಡುವುದು.
  - ಆಗಸ್ಟನಲ್ಲಿ (ಸುಧಾರಣೆ ಆಗಿರುವುದರಿಂದ) ಪವರ್ ಕಟ್ ಮಾಡದೇ ಇರಲು ನಿರ್ಧರಿಸಿದೆ.
  - ಕೈಗಾರಿಕೋದ್ಯಮಿಗಳಿಗೆ ಹೆಚ್ಚಿಗೆ ತೊಂದರೆಯಾಗದಂತೆ ವಾರಕ್ಕೆ ಒಮ್ಮೆ (ಭಾನುವಾರ ಹೊರತುಪಡಿಸಿ) ಹೆಚ್.ಟಿ.ಲೈನ್ ನಿಲ್ಲಿಸಲು ತೀರ್ಮಾನಿಸಿತು. ಈ ಬಗ್ಗೆ ಕೈಗಾರಿಕೋದ್ಯಮಿಗಳ ಸಭೆ ನಡೆಸಿ ಅವರ ಮನವೊಲಿಸಿ, ಈ ಕ್ರಮದ ಅನಿವಾರ್ಯತೆ ವಿವರಿಸಲು ತೀರ್ಮಾನಿಸಿತು.
  - ಖಾಸಗಿ ವಿದ್ಯುತ್ ಉತ್ಪಾದಕರಿಂದ ಜಿಂದಾಲ್, ಟಾಟಾ ಹಾಗೂ ಛತ್ತೀಸಘಡದಿಂದ ಹೆಚ್ಚಿಗೆ ವಿದ್ಯುತ್ ಪಡೆಯುವುದನ್ನು ಮುಂದುವರೆಸಲಾಗುವುದು.
  - ಆದರೆ Energy Exchange ನಿಂದ Spot Purchase ಮಾಡುವುದನ್ನು ನಿಲ್ಲಿಸಲು ನಿರ್ಧರಿಸಲಾಯಿತು.

ಈ ಮೇಲ್ಕಾಣಿಸಿದ ಕ್ರಮಗಳ ಮೂಲಕ ರಾಜ್ಯದ ಜನರಿಗೆ ಹೆಚ್ಚು ತೊಂದರೆ ಆಗದಂತೆ ವಿದ್ಯುತ್ ಒದಗಿಸಲು ನಿರ್ಧರಿಸಲಾಗಿದೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ:

ವಿಷಯ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಬಹಳ ಮುಖ್ಯವಾದ ವಿಷಯ, ಅಂದರೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಚರ್ಚಿಸಲು ತಮಗೆ ನಿಲುವಳಿ ಸೂಚನೆ ಮೇಲೆ ಪ್ರಸ್ತಾಪಿಸಲು ಕೇಳಿಕೊಂಡಿದ್ದೇನೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು

ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಮಾನ ನಿಲ್ದಾಣವನ್ನಾಗಿ ಮಾಡಬೇಕೆಂದು ಕರ್ನಾಟಕ ಸರ್ಕಾರವು ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ ಮೇಲೆ ಅಂತರಾಷ್ಟ್ರೀಯ ಮಟ್ಟದ ಸೀಮನ್ಸ್ ಮುಖಂಡತ್ವದ ಸಂಸ್ಥೆಗೆ ಸುಮಾರು 4 ಸಾವಿರ ಎಕರೆ ಜಮೀನನ್ನು 350 ಕ್ಕೂ ಹೆಚ್ಚು ಕೋಟಿ ಹಣ ನೀಡಿ ಕೊಂಡು ಅನೇಕ ರೀತಿಯಲ್ಲಿ ಬ್ಯಾಂಕ್‌ಗಳ ರಿಯಾಯಿತಿಗಳು, ಸರ್ಕಾರದ ರಿಯಾಯಿತಿಗಳು, ಬ್ಯಾಂಕಿನ ಗ್ಯಾರಂಟಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ಅನುಮತಿಗಳನ್ನು ಈ ವಿಮಾನ ನಿಲ್ದಾಣಕ್ಕೆ ನೀಡಿದರೂ, ಈ ವಿಮಾನ ನಿಲ್ದಾಣ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಆಗದೇ ಒಂದು ಸಾಮಾನ್ಯ ವಿಮಾನ ನಿಲ್ದಾಣ ಆಗಿರುವುದನ್ನು ನೋಡಿ ಬಹಳ ಆಶ್ಚರ್ಯ ಮೂಡಿದೆ. ಕೇಂದ್ರ ಸರ್ಕಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ವಿಮಾನ ನಿಲ್ದಾಣ ನಿರ್ಮಾಣ ಆಗಿಲ್ಲ ಎಂದು ಆತಂಕ ವ್ಯಕ್ತಪಡಿಸಿದೆ. ವಿನ್ಯಾಸವೂ ಸಹ ಉತ್ತಮ ಮಟ್ಟದಲ್ಲಿ ಇಲ್ಲ ಎಂಬ ಸಂಶಯ ಪಟ್ಟಿದ್ದಾರೆ. ಮತ್ತು ಸಾರ್ವಜನಿಕರೂ ಕೂಡ, ಕರ್ನಾಟಕ ರಾಜ್ಯ ಮತ್ತು ಕೇಂದ್ರ ಸರ್ಕಾರ ಒಂದು ಉತ್ತಮವಾಗಿ ವಿಮಾನ ನಿಲ್ದಾಣ ಕಟ್ಟಬೇಕಾಗಿತ್ತು. ಅಂಥ ವಿಮಾನ ನಿಲ್ದಾಣ ಕಟ್ಟಿರುವುದಿಲ್ಲ ಮತ್ತು ಸಾರ್ವಜನಿಕರಿಗೆ ಸರಿಯಾದ ಸೌಲಭ್ಯವಿಲ್ಲ ಎಂಬ ದೂರುಗಳು ಕೇಳಿ ಬರುತ್ತಿವೆ. ಆದ್ದರಿಂದ ನಾನು ಈ ಒಂದು ವಿಮಾನ ನಿಲ್ದಾಣದ ಬಗ್ಗೆ, ಏಕೆಂದರೆ ನಾನು ಆ ವಿಮಾನ ನಿಲ್ದಾಣಕ್ಕೆ ಹೋಗಿ ನೋಡಿದೆ. ನೋಡಿದ ತಕ್ಷಣ ನನ್ನ blood boil ಆಗುತ್ತಿತ್ತು. ಏಕೆಂದರೆ, It is the biggest betrayal of the century. ಇಂಥ ಹಗಲು ದರೋಡೆ ಇದೆಯಲ್ಲ, ನನಗೆ ಪ್ರಸ್ತಾಪಿಸಲಿಕ್ಕೆ ತಾವು ಅನುಮತಿ ಕೊಡಿ, ನಾನು ವಿವರವಾಗಿ ಪ್ರಸ್ತಾಪಿಸುತ್ತೇನೆ. ನಾಲ್ಕು ಸಾವಿರ ಎಕರೆ ಜಮೀನು ನಮ್ಮ ಸರ್ಕಾರದ ಹಣ, ನೀರು, ಕರೆಂಟ್, ರಸ್ತೆಗಳು, ಎಲ್ಲಾ concession ನಲ್ಲಿ ಕೊಟ್ಟು ಒಂದು Match Factory ಮಾಡಿದ ಹಾಗೆ ಮಾಡಿದ್ದಾರೆ. ಈ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ಏಕೆಂದರೆ, ನಾವು ಏನಾದರೂ ಎಚ್ಚೆತ್ತುಕೊಳ್ಳದಿದ್ದರೆ, ನಾವು ಇದರ ಬಗ್ಗೆ ಕರ್ನಾಟಕ ಸರ್ಕಾರ ಗಮನಿಸಲಿಲ್ಲವೆಂದರೆ, ಇಡೀ ರಾಷ್ಟ್ರಕ್ಕೆ ಮತ್ತು ಇಡೀ ರಾಜ್ಯಕ್ಕೆ ದೊಡ್ಡ ದ್ರೋಹ ಬಗೆದಂತಾಗುತ್ತದೆ. ನಮ್ಮ ದೇಶದ, ನಮ್ಮ ರಾಜ್ಯದ ದೊಡ್ಡ ಲೂಟಿಯಾದಂತೆ ಆಗುತ್ತದೆ. ಕರ್ನಾಟಕ ಸರ್ಕಾರ ಕಣ್ತೆರೆಯಬೇಕಾಗುತ್ತದೆ. ನಾವೆಲ್ಲರೂ ಇದರ ಬಗ್ಗೆ ಬೆಳಕನ್ನು ಚೆಲ್ಲಲೇಬೇಕಾಗುತ್ತದೆ. ಆದುದರಿಂದ, ಇದರ ಬಗ್ಗೆ ದೀರ್ಘವಾಗಿ ಪ್ರಸ್ತಾಪಿಸಲು, ಚರ್ಚೆಗೆ ತೆಗೆದುಕೊಳ್ಳಲು ತಾವು ಅವಕಾಶ ಕೊಡಿ.

ಅಧ್ಯಕ್ಷರು: ತಮ್ಮ ನಿಲುವಳಿ ಸೂಚನೆ ಬಗ್ಗೆ ಈ ಪ್ರಶ್ನೋತ್ತರ ವೇಳೆ ಮುಗಿದ ನಂತರ ಪ್ರಸ್ತಾಪಿಸಿ.

ಶ್ರೀ ಡಿ.ಕೆ. ಶಿವಕುಮಾರ್ : Thank you Sir.

2. ಪ್ರಶ್ನೋತ್ತರ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು. ಸೇಡಂ ವಿಧಾನ ಸಭಾ ಮತ ಕ್ಷೇತ್ರದಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಬಂದಿರುವ ಪ್ರಸ್ತಾವನೆಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**112 (522)**
ಸದಸ್ಯರ ಹೆಸರು	:	**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)**
ವಿಷಯ	:	**ಸೇಡಂ ನಲ್ಲಿ ಹೊಸ ವಸತಿ ನಿಲಯಗಳು**
ಸಚಿವರ ಹೆಸರು ಮತ್ತು ಪದನಾಮ	:	**ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು)**

ಅ. ಸೇಡಂ ವಿಧಾನ ಸಭಾ ಮತಕ್ಷೇತ್ರದಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಬಂದಿರುವ ಪ್ರಸ್ತಾವನೆಗಳ ಸಂಖ್ಯೆ:

1. ಸಮಾಜ ಕಲ್ಯಾಣ ಇಲಾಖೆ:

ಸೇಡಂ ವಿಧಾನ ಸಭಾ ಕ್ಷೇತ್ರದಲ್ಲಿ 2008-09ನೇ ಸಾಲಿಗೆ ಪರಿಶಿಷ್ಟ ಜಾತಿಯ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ.

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಸೇಡಂ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ 7 ಮೆಟ್ರಿಕ್-ಪೂರ್ವ ಮತ್ತು 1 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಬೇಡಿಕೆ ಇರುತ್ತದೆ. ವಿವರ ಕೆಳಕಂಡಂತಿರುತ್ತದೆ.

1) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅಡಕಿ,
2) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಂದ್ರಿ,
3) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಾಬಾಳ,
4) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಉಡಗಿ,
5) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ರಂಜೋಳ,
6) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮೋತಕಪಲ್ಲಿ
7) ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ-ಸೇಡಂ ಟೌನ್

8) ಮೆಟ್ರಿಕ್- ನಂತರದ ಬಾಲಕಿಯರ ವಿದ್ಯಾರ್ಥಿನಿಲಯ-ಸೇಡಂ ಟೌನ್

3. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಸೇಡಂ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯ ಮಂಜೂರಾತಿ ಕುರಿತು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಆ. ಈ ಪೈಕಿ ಮಂಜೂರಾಗಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು?

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಇವುಗಳಲ್ಲಿ ಯಾವುದೇ ಹೊಸ ವಿದ್ಯಾರ್ಥಿನಿಲಯಗಳು ಇಲ್ಲಿಯವರೆವಿಗೂ ಮಂಜೂರಾಗಿರುವುದಿಲ್ಲ.

ಇ. ಮೇಲೆ ತಿಳಿಸಿದ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸುವ ಪ್ರಸ್ತಾವನೆ ಇದೆಯೇ?

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಹೊಸ ವಿದ್ಯಾರ್ಥಿನಿಲಯಗಳು ಮಂಜೂರಾಗದೇ ಸಂಖ್ಯಾಬಲ ಹೆಚ್ಚಳದ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ ಸಾ.ಕಾ.ಹಿ : 134 ಸ್ವೀಮರ 2008

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:. ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಉತ್ತರದಲ್ಲಿ ನಾನು ಕೇಳಿರುವ ಉದ್ದೇಶ ಈಡೇರಿಲ್ಲ. ನಾನು ನನ್ನ ಮತಕ್ಷೇತ್ರಕ್ಕೆ ಸೀಮಿತವಾದ ಪ್ರಶ್ನೆ ಕೇಳಿದ್ದೆ. ಏನೆಂದರೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಠ ವರ್ಗದವರಿಗೆ ಎಷ್ಟು ಹಾಸ್ಟೆಲ್‌ಗಳನ್ನು ತೆರೆಯಲು ಪ್ರಸ್ತಾವನೆ ಬಂದಿದೆ ಎನ್ನುವುದಕ್ಕೆ ಉತ್ತರಿಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಯಾವುದೇ ಪ್ರಸ್ತಾವನೆ ಬಂದಿಲ್ಲವೆಂದು ಹೇಳಿದ್ದಾರೆ. ಇದು ತಪ್ಪು ಮಾಹಿತಿ. ಏಕೆಂದರೆ, ನಾನು ಈ ಹಿಂದೆ Personal ಆಗಿ, ಈ ಸಚಿವರು ಹೊಸದಾಗಿ ಬಂದಿದ್ದಾರೆ. ಹಿಂದಿನ ಸಚಿವರಿಗೆ ಬಹಳಷ್ಟು ಸಲ ಮನವಿ ಮಾಡಿ ಮಾಡಿ ಅದು ಒಂದು ಡಿಗ್ಗಿನೇ ಆಗಿರಬೇಕು ಅದನ್ನು ಎಲ್ಲಿ ಬಿಸಾಕಿದ್ದಾರೆ ನನಗೆ ಗೊತ್ತಿಲ್ಲ. ಆದರೆ, ಎರಡನೆ ಉಪ ಪ್ರಶ್ನೆ ನಾನು ಕೇಳಿದ್ದೆ ಎಂದರೆ, ಇದರಲ್ಲಿ ಯಾವ್ಯಾವುದು ಮಂಜೂರು ಮಾಡುತ್ತೀರಿ ಎಂದು ಕೇಳಿದ್ದೆ. ಅದಕ್ಕೆ ಸಚಿವರು ನಿರ್ದಿಷ್ಟವಾದ ಉತ್ತರ ಕೊಟ್ಟಿಲ್ಲ. ಮಂಜೂರು ಮಾಡಿಲ್ಲವೆಂದು ಕೊಟ್ಟಿದ್ದಾರೆ. ಆದರೆ, ಮುಂದೆ ಮಾಡಬೇಕೆನ್ನುವ ಉದ್ದೇಶದಿಂದ ಕೇಳಿದ್ದೇನೆ. ಏಕೆಂದರೆ, ಸೇಡಂ ತಾಲ್ಲೂಕು ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದು: ಕಳೆದ ಸರ್ಕಾರದಲ್ಲಿ ಒಂದು ಹಾಸ್ಟೆಲ್‌ನ್ನು ನಮ್ಮ ಕ್ಷೇತ್ರಕ್ಕೆ ಮಂಜೂರು ಮಾಡಲಿಲ್ಲ. ಅದನ್ನು ಏಕೆ ಮಾಡಿಲ್ಲವೋ? ಡಾ: ನಂಜುಂಡಪ್ಪನವರ

ವರದಿಯ ಪ್ರಕಾರ ಅತ್ಯಂತ ಹಿಂದುಳಿದ ಮತಕ್ಷೇತ್ರಗಳಿಗೆ ಕೊಡಲೇಬೇಕೆಂದು ಇದ್ದರೂ ಯಾವುದೇ ಒಂದು ಹಾಸ್ಟೇಲ್‌ನ್ನು ಕಳೆದ ಸರ್ಕಾರ ಕೊಡಲಿಲ್ಲ. ಈ ಸರ್ಕಾರದಲ್ಲಾದರೂ ನಮಗೆ ಹಿಂದುಳಿದ ವರ್ಗಗಳ ಇಲಾಖೆಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್‌ಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ ಕೇಳಿದ್ದೇನೆ. ಇನ್ನೊಂದು ಉಪ ಪ್ರಶ್ನೆ ಏನೆಂದರೆ, ನೀವು ಇರುವ ಹಾಸ್ಟೆಲ್‌ಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಳ ಮಾಡುತ್ತೀರಾ? ಏಕೆಂದರೆ, ಯಾರೇ ಶಾಸಕರಿರಲಿ ಈ ಹಾಸ್ಟೆಲ್ ಸೆಲೆಕ್ಷನ್‌ನಲ್ಲಿ ಬಹಳ ಒತ್ತಡ ಇದೆ. ಆದರೆ, ನಾವು ಅದರಲ್ಲಿ invlove ಆಗುವ ಹಾಗೆ ಇಲ್ಲ. ಅದು ಮೆರಿಟ್ ಪ್ರಕಾರ ಆಗುತ್ತಿದೆ. ಅದಕ್ಕೆ ನಾವೇನು ಕೇಳಿದ್ದೇವೆ ಎಂದರೆ, ಇರುವ ಹಾಸ್ಟೆಲ್‌ಗೆ ನೀವು ಸೀಟುಗಳನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ. 50 ಇದ್ದರೆ 75,75 ಇದ್ದರೆ 100 ಮಾಡಬೇಕಾಗುತ್ತದೆ. ನಾನು ಇದರ ಬಗ್ಗೆ ಕೇಳಿದ್ದಕ್ಕೆ ಉತ್ತರ ಏನು ಕೊಟ್ಟಿದ್ದಾರೆಂದರೆ, ಮಂಜೂರಾಗಿಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರಿಸಿದ್ದಾರೆ. ಬಹುಶಃ ಅವರು ಇದನ್ನು ತಪ್ಪಾಗಿ ಭಾವಿಸಿಕೊಂಡಿರಬಹುದು. ನಾನು ಮಾನ್ಯ ಶಾಸಕರಲ್ಲಿ ನಿರ್ದಿಷ್ಟವಾದ ಉತ್ತರ ಬಯಸುತ್ತೇನೆ. ಏನೆಂದರೆ, ನಮ್ಮ ಸೇಡಂ ಮತ ಕ್ಷೇತ್ರ ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದಿರುವುದರಿಂದ ನೀವು ಮಂಜೂರು ಮಾಡಲೇ ಬೇಕು. ಇರುವ ಹಾಸ್ಟೆಲ್‌ನಲ್ಲಿ ಸೀಟು ಹೆಚ್ಚು ಮಾಡುವುದು ಬಹಳ ಸರಳವಿದೆ. ಅದಕ್ಕೆ ಮಾನ್ಯ ಸಚಿವರು ನಿರ್ಧಿಷ್ಟವಾದ ಭರವಸೆಯನ್ನು ಸದನಕ್ಕೆ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಸುಧಾಕರ: ಸೇಡಂ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಹಾಸ್ಟೆಲ್ ಆಗಲಿ, ಪರಿಶಿಷ್ಟ ಪಂಗಡ ಇಲಾಖೆಯಡಿಯಲ್ಲಿ ಬರುವ ಹಾಸ್ಟೆಲ್‌ಗಳ ಬಗ್ಗೆ ಅವರ ಬೇಡಿಕೆ ಇಲ್ಲ. ಅವರ ಬೇಡಿಕೆ ಇಟ್ಟರೆ ಖಂಡಿತವಾಗಿಯೂ ಪರಿಶೀಲಿಸಿ ಈಡೇರಿಸುತ್ತೇವೆಂದು ಹೇಳುತ್ತೇನೆ. ಸೀಟು ಹೆಚ್ಚಳದ ಬಗ್ಗೆ ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ತಾವು ತಮ್ಮ ಕ್ಷೇತ್ರಕ್ಕೆ ಎಷ್ಟು ಬೇಕೆಂದು ಪ್ರಸ್ತಾವನೆ ಕಳುಹಿಸಿ ಕೊಟ್ಟರೆ ಖಂಡಿತವಾಗಿ ಅದನ್ನು ಪರಿಶೀಲಿಸಿ ಮಾಡುತ್ತೇವೆಂದು ಹೇಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರೇ ಉತ್ತರದಲ್ಲಿ Request has been received for starting of 7 pre-metric and 1 post-metric hostels ಎಂದು ಹೇಳುತ್ತಾರೆ. ಒಂದೂ ಬಂದಿಲ್ಲವೆಂದೂ ಹೇಳುತ್ತೀರಲ್ಲ?

ಅಧ್ಯಕ್ಷರು: ಸುಧಾಕರ ರವರೇ ನಿಮ್ಮ ಉತ್ತರದಲ್ಲಿ ಕಾಣಿಸಿದಿರಿ.

ಶ್ರೀ ಡಿ. ಸುಧಾಕರ: ಅದು ಬಿಸಿಎಂ ಹಾಸ್ಟೆಲ್ ಬಗ್ಗೆ ಹೇಳಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೌದು. ಎಸ್‌ಸಿ-ಎಸ್‌ಟಿಗೆ ಬಂದಿಲ್ಲವೆಂದು ಹೇಳಿದಿರಿ, but, ಬಿಸಿಎಮ್‌ಗೆ ಬಂದಿದ್ದನ್ನು ಹೇಳಿದ್ದೀರಿ.

ಅಧ್ಯಕ್ಷರು: ಹೌದು ಬಿಸಿಎಂ ಬಗ್ಗೆ ಲಿಸ್ಟ್ ಕೊಟ್ಟಿದ್ದಾರೆ. ಮುಂದಿನ ಪ್ರಶ್ನೆ. ಸಿದ್ದರಾಜು ರವರು, ಅವರು ಇಲ್ಲ. ಕೃಷ್ಣಮೂರ್ತಿಯವರು ಅವರು ಇಲ್ಲ. ಖಾದರ್ ರವರು ನೀವು ಕೇಳಿ.

<u>ರಾಜ್ಯದಲ್ಲಿ ದರ್ಜಿಗಳ (ಬಟ್ಟೆ ಹೊಲಿಯುವರ)ಕ್ಷೇಮ ನಿಧಿ ಮಂಡಳಿಯನ್ನು ಸ್ಥಾಪಿಸಲು ಸರ್ಕಾರವು ಕ್ರಮಕೈಗೊಳ್ಳುವ ಬಗ್ಗೆ.</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	115(508)
ಮಾನ್ಯ ಸದಸ್ಯರ ಹೆಸರು	:	ಶ್ರೀ ಖಾದರ್. ಯು.ಟಿ. [ಮಂಗಳೂರು]
ಉತ್ತರಿಸುವವರು	:	ಶ್ರೀ ಬಿ.ಎನ್.ಬಚ್ಚೇಗೌಡ . (ಕಾರ್ಮಿಕ ಸಚಿವರು)

ಅ ರಾಜ್ಯದಲ್ಲಿ ದರ್ಜಿಗಳ (ಬಟ್ಟೆ ಹೊಲಿಯುವವರು) ಕ್ಷೇಮ ನಿಧಿ ಮಂಡಳಿಯನ್ನು ಸ್ಥಾಪಿಸಲು ಸರ್ಕಾರವು ಕ್ರಮಕೈಗೊಳ್ಳುವುದೆ:

ಹೌದು

ಆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದ ಉದ್ಯೋಗ ಖಾತ್ರಿ ಯೋಜನೆಯು ರಾಜ್ಯದಲ್ಲಿ ಯಶಸ್ವಿಯಾಗಲು ಕಾರ್ಮಿಕರಿಗೆ ಕನಿಷ್ಠ ದರವನ್ನು 125 ರೂಪಾಯಿಗಳಿಗೆ ಹೆಚ್ಚಿಸುವ ಯೋಜನೆ ರಾಜ್ಯ ಸರ್ಕಾರಕ್ಕಿದೆಯೇ:

ಇಲ್ಲ.

ಇ. ಹಾಗಿದ್ದಲ್ಲಿ, ಇದನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಉದ್ಭವಿಸುವುದಿಲ್ಲ.

ಶ್ರೀ ಯು.ಟಿ.ಖಾದರ್: ಉತ್ತರದಲ್ಲಿ ಹೌದು ಎಂದು ಕೊಟ್ಟಿದ್ದಾರೆ. ಇದೀಗ ನಾನು ಏನು ಕೇಳಲಿಕ್ಕೆ ಇಚ್ಛಿಸುತ್ತೇನೆಂದರೆ, ಅದನ್ನು ತಾವು ಯಾವ ರೀತಿಯಿಂದ ಮಾಡುತ್ತೀರಿ? ಏಕೆಂದರೆ, ಈ ಬಜೆಟ್‌ನಲ್ಲಿ ತಾವು ಅಸಂಘಟಿತ ಕಾರ್ಮಿಕರ ಅಡಿಯಲ್ಲಿ ಟೈಲರ್‌ರವರನ್ನು ಸೇರಿಸಿಕೊಂಡು ಐದು ಕೋಟಿ ಅನುದಾನ ಇಟ್ಟಿದ್ದೀರಿ. ಕಳೆದ ಬಜೆಟ್‌ನಲ್ಲಿ ಇಂಥ ಕಾರ್ಯಕ್ರಮದಡಿಯಲ್ಲಿ ಮೂರು ಕೋಟಿ ಅನುದಾನ ಇಟ್ಟು ಅದು ಯಾವ ರೀತಿ ಖರ್ಚಾಗಿದೆ? ಅದು ಎಲ್ಲಿ ಹೋಗಿದೆ ಎನ್ನುವ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ದರ್ಜಿಗಳಿಗೆ ಯಾವುದೇ ರೀತಿಯ ಪ್ರಯೋಜನ ಸಿಕ್ಕಲಿಲ್ಲ. ಆದಕಾರಣ, ದರ್ಜಿಗಳಿಗೆ ಪ್ರತ್ಯೇಕವಾದ ಕ್ಷೇಮ ನಿಧಿ ಸ್ಥಾಪಿಸಬೇಕಾಗುತ್ತದೆ.

ನಮ್ಮ ನೆರೆ ರಾಜ್ಯವಾದ ಕೇರಳದಲ್ಲಿ ಯಾವ ರೀತಿ ಇದೆ ಆ ರೀತಿ ಪ್ರತ್ಯೇಕವಾದ ಕ್ಷೇಮ ನಿಧಿ ಸ್ಥಾಪಿಸುವ ಯೋಜನೆ ಇದೆಯೆ? ಎಂದು ಕೇಳಲಿಕ್ಕೆ ಇಚ್ಛಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಟೈಲರ್ಸ್ ರವರು ಅಸಂಘಟಿತ ಕಾರ್ಮಿಕರ ವಲಯದಲ್ಲಿ ಬರುತ್ತಾರೆ. ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರು ಸುಮಾರು 2 ಕೋಟಿ 50 ಲಕ್ಷ ಇದ್ದಾರೆ. ಕೃಷಿ ಕಾರ್ಮಿಕರು, ಬೇರೆ ಬೇರೆ ಕೆಲಸ ಮಾಡುವವರು ಸಂಘಟನೆಯಲ್ಲಿ ಇಲ್ಲದೇ ಇರುವವರು ಸುಮಾರು ಎರಡೂವರೆ ಲಕ್ಷ ಜನರು ಇದ್ದಾರೆ. ಇದರಲ್ಲಿ 92% unorganized sector ನಲ್ಲಿ ಕೆಲಸ ಮಾಡುತ್ತಿದ್ದಾರೆ. 8% ಮಾತ್ರ out of 100% ಅವರು ಕಾರ್ಮಿಕರು, ಕೈಗಾರಿಕೆ ಬೇರೆ ಬೇರೆ ಇಲ್ಲಿ ಕೆಲಸ ಮಾಡುವಂಥವರು. 11 ಸಾವಿರ ಕೈಗಾರಿಕೆಗಳಲ್ಲಿ ಸುಮಾರು 18 ಲಕ್ಷ ಕಾರ್ಮಿಕರು ಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ National average is 94.6% of the National average ಸಂಘಟಿತ ವಲಯದಲ್ಲಿ ಕೆಲಸ ಮಾಡುವವರು. ಆದರೆ, ಆ average ಗಿಂತ ಕರ್ನಾಟಕದಲ್ಲಿ 2% ಜಾಸ್ತಿ ಇದ್ದೇವೆ. ಮೊನ್ನೆ ತಾನೆ ಮಾನ್ಯ ಆಸ್ಕರ್ ಫರ್ನಾಂಡೀಸ್ ರವರು ಕೇಂದ್ರ ಕಾರ್ಮಿಕ ಸಚಿವರು, ನಮ್ಮ ಇಲಾಖೆಯನ್ನು ರಿವ್ಯೂ ಮಾಡಿದರು. ಆಗ ಅವರು appreciate ಮಾಡಿದರು. you are better 2% ahead ಇದ್ದೀರಿ ಎಂದು ಹೇಳಿದರು. ಆದ್ದರಿಂದ ಈ ಟೈಲರ್ಸ್ ಅಸಂಘಟಿತ ವಲಯದಲ್ಲಿ ಬರುವುದರಿಂದ ಕೇಂದ್ರ ಸರ್ಕಾರದವರು 11ಕ್ಕೆ ಬಿಲ್ ಮಂಡನೆ ಮಾಡುವವರು ಇದ್ದಾರೆ. ನಮ್ಮಲ್ಲಿ 2002 ರಲ್ಲಿ ಅಸಂಘಟಿತ ವಲಯದ ಬಿಲ್ ಮಂಡನೆ ಮಾಡಿ ಈ ಸದನದಲ್ಲಿ ಪಾಸಾಗಿ ನಂತರ ಕೌನ್ಸಿಲ್‌ಗೆ ಹೋಗಿ Joint Select Committee ಯಿಂದ ವಾಪಸ್ ಬಂದಿದೆ.Government has withdrawn it. ಈಗ ಅವರು ಹೇಳಿದರು. ತುರ್ತಾಗಿ 11ಕ್ಕೆ ಬರುವ Parliament Session Pass ಮಾಡಿ ಕಳುಹಿಸುತ್ತೇವೆಂದು ಹೇಳಿದ್ದಾರೆ.

ಅದಕ್ಕೆ ನಾವು ರೂಲ್ಸ್‌ನ್ನು ಫ್ರೇಮ್ ಮಾಡಬೇಕಾಗಿದೆ. ಈಗ ನಾವು ಟೈಲರ್ಸ್‌ಗೆ ಮತ್ತೆ ಇತರರಿಗೆ ಕನಿಷ್ಟ ವೇತನ ಸುಮಾರು 74 ರೂಪಾಯಿಯನ್ನು ಕೊಡುತ್ತಿದ್ದೇವೆ. ಅವರು ಅಸಂಘಟಿತ ವಲಯದಲ್ಲಿ ಬರುವುದರಿಂದ ಸಾಮಾಜಿಕ ಭದ್ರತೆ ಮತ್ತು ಇತರೆ ಸೌಲಭ್ಯಗಳು ಸಿಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ಈಗ ಟೈಲರ್ಸ್ ಅಸೋಸಿಯೇಷನ್‌ರವರು ಇಡೀ ರಾಜ್ಯದಲ್ಲಿ ಒಂದು ಸಂಘಟನೆ ಮಾಡಿಕೊಂಡು, ಅವರಿಗೆ ರಕ್ಷಣೆ ಸಿಗುವಂಥ ರೀತಿಯಲ್ಲಿ ಕೇರಳದಲ್ಲಿ ಒಂದು ಕಾನೂನನ್ನು ತೆಗೆದುಕೊಂಡು ಬಂದಿದ್ದಾರೆ. ಅದೇ

ರೀತಿಯಲ್ಲಿ ಇಲ್ಲಿಯೂ ಕೂಡ ಮಾಡಿ ಎಂದು ಮಾನ್ಯ ಖಾದರ್‌ರವರು ಕೇಳುತ್ತಿದ್ದಾರೆ.

ಶ್ರೀ ಮಾಲಿಕಯ್ಯ ವೆಂಕಯ್ಯ ಗುತ್ತೇದಾರ್:- ಮಾನ್ಯ ಅಧ್ಯಕ್ಷರೆ, ತಮಿಳುನಾಡು ಮತ್ತು ಕೇರಳದಲ್ಲಿ ಈ ರೀತಿಯಾದ ಕಾನೂನು ಇದೆ. 50 ವರ್ಷಗಳವರೆಗೆ ಟೈಲರಿಂಗ್ ಕೆಲಸ ಮಾಡಿದರೆ ಅವರಿಗೆ ಕಣ್ಣು ಹೋಗುತ್ತದೆ. ಆದ್ದರಿಂದ, ಅವರಿಗೆ ರಕ್ಷಣೆ ಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಅಲ್ಲಿ 80 ರೂಪಾಯಿ ಕೊಡುತ್ತಾರೆ. ಆದರೆ, ಬೇರೆ ಬೇರೆ ರಾಜ್ಯಗಳಲ್ಲಿ ಇನ್ನೂ ಕಡಿಮೆ ಕೊಡುತ್ತಿದ್ದಾರೆ. ಇವರು ಅಸಂಘಟಿತ ವಲಯದಲ್ಲಿ ಬರುತ್ತಾರೆ. ಕೇಂದ್ರ ಸರ್ಕಾರ ಇವರಿಗೋಸ್ಕರ ಒಂದು ಕಾನೂನು ಮಾಡುವುದರಿಂದ ಅದರಲ್ಲಿ ಈ ಎಲ್ಲಾ ಅಂಶಗಳು ಬರುತ್ತವೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಯು.ಟಿ. ಖಾದರ್:- ಮಾನ್ಯ ಅಧ್ಯಕ್ಷರೆ, ಎರಡು ಸಂಶಯಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಎಲ್ಲಾ ರಂಗದ ಅಸಂಘಟಿತ ಕಾರ್ಮಿಕರಿಗೋಸ್ಕರ ಈ ಸಾರಿ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಕಳೆದ ಸಲ 3 ಕೋಟಿ ಇಡಲಾಗಿತ್ತು. ಇದರಿಂದ ಯಾರಿಗೂ ಸರಿಯಾಗಿ ಉಪಯೋಗವಾಗುವುದಿಲ್ಲ. ಏಕೆಂದರೆ, ಬೇರೆ ಬೇರೆ ಕಾರಣಗಳಿಂದ ಜೀವ ಕಳೆದುಕೊಳ್ಳುತ್ತಾರೆ. ಅವರ ಕಡೆಯವರು ಈ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಅದನ್ನು ಯಾವ ರೀತಿಯಲ್ಲಿ ಬೇರೆ ಬೇರೆ ಅಸಂಘಟಿತ ಕಾರ್ಮಿಕರಿಗೆ ಉಪಯೋಗಿಸುತ್ತೀರೆಂಬ ವಿಶೇಷವಾದ ಬೈಲಾವನ್ನು ಮಾಡಬೇಕಾಗುತ್ತದೆ. ಎರಡನೆಯದು ಏನೆಂದರೆ, ಕೇರಳ ಮಾದರಿಯಲ್ಲಿಯೆ ಇಲ್ಲಿಯೂ ಕೂಡ ಮಾಡುವಂಥ ಆಲೋಚನೆ ಇದೆಯೇ? ಇದನ್ನು ನಾವು ಏಕೆ ಮಾಡಬಾರದು? ಅವರು ನಮ್ಮ ಮಾನವನ್ನು ಕಾಪಾಡುತ್ತಾರೆ. ಆದ್ದರಿಂದ ಅವರ ಮಾನವನ್ನು ಕಾಪಾಡುವಂಥ ಕೆಲಸವನ್ನು ನಾವು ಮಾಡಬಹುದಲ್ಲವೆ? ಆದ್ದರಿಂದ, ಅದರ ಬಗ್ಗೆ ಪುನರ್ ವಿಮರ್ಶೆ ಮಾಡಿ ಅವರಿಗೆ ಆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾಡಿಕೊಡುತ್ತೇನೆ.

ಶ್ರೀ ಆರ್. ರೋಷನ್‌ಬೇಗ್:- ಮಾನ್ಯ ಅಧ್ಯಕ್ಷರೆ, ಈಗ ಟೈಲರ್ಸ್ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾನು ತಮ್ಮ ಮುಖಾಂತರ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ,Karnataka Construction Workers ನಲ್ಲಿ 36 ಕ್ಯಾಟಗರಿ ತಮ್ಮ ಹತ್ತಿರ ಇದೆ. ಆದರೆ, ತಮಿಳುನಾಡಿನಲ್ಲಿ ಸುಮಾರು 76 ಕ್ಯಾಟಗರಿ ಸೇರಿಸಿಕೊಂಡಿದ್ದಾರೆ. ಅದರಲ್ಲಿ ದೋಬಿ, ಬಾರ್ಬರ್, ಅಮಾಲಿಗಳು ಈ ರೀತಿಯಾಗಿ

ಒಟ್ಟು 76 ಕ್ಯಾಟಗರಿ ಇದೆ. ಕರ್ನಾಟಕದಲ್ಲಿರುವ ಎಪಿಎಂಸಿ ಯಾರ್ಡ್‌ನಲ್ಲಿ ಸಾವಿರಾರು ಅಮಾಲಿಗಳಿದ್ದಾರೆ. ಮತ್ತೆ ರೈಲ್ವೆ ಸ್ಟೇಷನ್‌ನಲ್ಲಿ ಖಾಸಗಿಯಾಗಿ ಮೂಟೆ ಎತ್ತುವಂಥ ಕೆಲಸ ಮಾಡುವ ಕೂಲಿಗಾರರನ್ನು ಸೇರಿಸಿಕೊಳ್ಳಬೇಕು.on par with Tamil Nadu ಮಾಡಬಹುದಾಗಿದೆ. ಪಾರ್ಲಿಮೆಂಟ್‌ನಲ್ಲಿ ಬಿಲ್ ಪಾಸ್ ಆಗುವವರೆಗೆ ಕಾಯಬೇಕಾಗಿಲ್ಲ. ಇದಕ್ಕೆ ಸಂಬಂಧಪಟ್ಟಂಥ ಬಿಲ್ ಪಾರ್ಲಿಮೆಂಟ್‌ನಲ್ಲಿ introduce ಆಗುತ್ತದೆಂದು ನಾನು ಸುಮಾರು 2 ವರ್ಷಗಳಿಂದ ಕೇಳುತ್ತಲೇ ಇದ್ದೇನೆ. ಆದ್ದರಿಂದ, on par with kerala and Tamil Nadu ಏಕೆ ಮಾಡಬಾರದು?

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, Construction activities ನಿಂದ ನಾವು ಈಗಾಗಲೇ ಸೆಸ್ ಅನ್ನು ಕಲೆಕ್ಟ್ ಮಾಡುತ್ತಿದ್ದೇವೆ. ಯಾರು ಕಟ್ಟಡಗಳನ್ನು ಕಟ್ಟುತ್ತಾರೆ ಅವರಿಂದ 1% ಸೆಸ್ ಕಲೆಕ್ಟ್ ಮಾಡುತ್ತೇವೆ. ಇದರಿಂದ ಸುಮಾರು 80 ಕೋಟಿ ರೂಪಾಯಿ ಬಂದಿದೆ. ಮಾನ್ಯ ರಾಜ್ಯಪಾಲರ ಆಡಳಿತ ಇದ್ದಂಥ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸಭೆಯನ್ನು ಮಾಡದೆ ಮುಂದೆ ಸರ್ಕಾರ ಬಂದಾಗ ಮಾಡುತ್ತಾರೆಂದು ಹೇಳಲಾಗಿತ್ತು. ನಾವು ಮೊನ್ನೆದಿವಸ ಸಭೆಯನ್ನು ಮಾಡಿದ್ದೇವೆ. ಯಾರ್‍ಯಾರಿಗೆ ಏನೇನು ಸವಲತ್ತುಗಳನ್ನು ಕೊಡಬೇಕೆಂಬುದನ್ನು ನೀವು ಮಾತನಾಡುವಾಗ ಬೇರೆ ರೂಪದಲ್ಲಿ ಈಗಾಗಲೇ ನನಗೆ ತಿಳಿಸಿದ್ದೀರಿ. ತಮಿಳುನಾಡು ಮಾದರಿಯಲ್ಲಿ ಮಾಡಿ, ಬಹಳ ಒಳ್ಳೆಯ ಹೆಸರು ಬರುತ್ತದೆ ಮತ್ತೆ ಅವರ ಕಲ್ಯಾಣ ಕಾರ್ಯಕ್ರಮಕ್ಕೂ ಕೊಡಿ ಎಂದು ತಾವು ಹೇಳಿದ್ದೀರಿ. ಬಹಳ ಒಳ್ಳೆಯ ಕಲ್ಯಾಣ ಕಾರ್ಯಕ್ರಮಗಳನ್ನು ನಾವು ಕೊಟ್ಟಿದ್ದೇವೆ. ಮೃತಪಟ್ಟವನಿಗೆ ಒಂದು ಲಕ್ಷ ಕೊಡತಕ್ಕಂಥದ್ದು ಅಥವಾ ಅವರಿಗೆ ಕ್ಯಾನ್ಸರ್ ಅಥವಾ ಬೇರೆ ಬೇರೆ ಕಾಯಿಲೆಗಳು ಬಂದರೆ 50 ಸಾವಿರ ರೂಪಾಯಿ ಕೊಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ಬಚ್ಚೇಗೌಡರೆ, ಇದು ಟೈಲರ್‌ಗಳಿಗೆ ಸಂಬಂಧಪಟ್ಟಂಥ ಪ್ರಶ್ನೆಯಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಖಾದರ್‌ರವರು ಹೇಳಿರುವಂತೆ ಟೈಲರ್‌ನ್ನು ಇದರಲ್ಲಿ ಸೇರಿಸಿಕೊಳ್ಳುತ್ತೇವೆ. ಮತ್ತೆ ಅವರಿಗೆ ಬೇಕಾಗಿರತಕ್ಕಂಥ ಸಾಮಾಜಿಕ ಭದ್ರತೆಯನ್ನು ಕೊಡುವಂಥ ಕೆಲಸವನ್ನು ಮಾಡುತ್ತೇವೆ. ಮತ್ತೆ ಕೇರಳದಲ್ಲಿರುವಂತೆ ಮಾಡಿ ಎಂದು ಹೇಳಿದ್ದಾರೆ. ಎಲ್ಲಾ ದಕ್ಷಿಣ ರಾಜ್ಯಗಳಿಗಿಂತ ಕೇರಳದಲ್ಲಿ ಹೆಚ್ಚಿಗೆ ಕೊಡುತ್ತಾರೆ. ಅಲ್ಲಿ ಕನಿಷ್ಠ ವೇತನ 125 ರೂಪಾಯಿ ಇದೆ. ಅವರಿಗೆ ಹೆಚ್ಚು ಕೊಡಲೆಂದು ಅವರ ಉದ್ದೇಶ ಅಲ್ಲಿದೆ. ಆದರೆ, ಇದು ಅಸಂಘಟಿತ

ವಲಯವಾಗಿದೆ. ಇದನ್ನು ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:- ಏನು ಬದಲಾವಣೆ ಮಾಡಬೇಕೆಂದು ಇದ್ದೀರೊ ಅದನ್ನು ಆದಷ್ಟು ಬೇಗನೆ ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾಡಿಕೊಡುತ್ತೇವೆ.

ಶ್ರೀ ಆರ್. ರೋಷನ್‌ಬೇಗ್:- ಕೂಲಿ ಕಾರ್ಮಿಕರನ್ನು ಸೇರಿಸಿಕೊಳ್ಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಕೂಲಿ ಕಾರ್ಮಿಕರು ಅದರಲ್ಲಿ ಬರುತ್ತಾರೆ. ತಾವು 75 ಕ್ಯಾಟಗರಿ ಬಗ್ಗೆ ಹೇಳಿದ್ದೀರಿ. ಅದರಲ್ಲಿ ಈ ಎಲ್ಲಾ ವರ್ಗದವರು ಬರುತ್ತಾರೆ.

ಅಧ್ಯಕ್ಷರು:- ಅವರು ಮಾಡುತ್ತಾರೆ ಬಿಡಿ.

ಶ್ರೀ ಮಾಲಿಕಯ್ಯ ವೆಂಕಯ್ಯ ಗುತ್ತೇದಾರ್:- ಅವರಿಗೆ 50 ವರ್ಷಗಳಾದ ಮೇಲೆ ಮಾಸಾಶನ ನೀಡುವುದರ ಬಗ್ಗೆ ಹೇಳಬೇಕು.

ಅಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟಂತೆ ಮಾಡುವ ಗೈಡ್‌ಲೈನ್ಸ್‌ನಲ್ಲಿ ಇದೆಲ್ಲಾ ಬರುತ್ತದೆ. ಒಂದು ಸಲ ಫಾರ್ಮೆಟ್ ಆದರೆ ಅದೆಲ್ಲಾ ಮುಗಿದು ಹೋಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಇದಕ್ಕೆ ಸಂಬಂಧಪಟ್ಟಂಥ ಬಿಲ್ ಬಂದ ಮೇಲೆ ನಾವು ರೂಲ್ಸ್ ಫ್ರೇಮ್ ಮಾಡಿ ಅದನ್ನು ಮಾಡಿ ಕೊಡುತ್ತೇವೆ.

ಅಧ್ಯಕ್ಷರು:- ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಬೀದರ್ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯೋಜನೆಗಳನ್ನು ಅನುಷ್ಠಾನ ಮಾಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**116 (526)**
ಸದಸ್ಯರ ಹೆಸರು	:	**ಶ್ರೀ. ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಮಾಡುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆ (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿರುವುದಿಲ್ಲ.

ಆ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ಹಣವೆಷ್ಟು?
ಉದ್ಭವಿಸುವುದಿಲ್ಲ.

ಇ) ಈ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಸರ್ಕಾರವು ಮಂಜೂರಾತಿ ನೀಡಿದೆ:
ಉದ್ಭವಿಸುವುದಿಲ್ಲ.

ಈ) ಈಗ ಜಾರಿಯಲ್ಲಿರುವ ಯೋಜನೆಗಳು ಯಾವುವು ಹಾಗೂ ಯಾವ ಹಂತದಲ್ಲಿವೆ?

ಈ ಎಲ್ಲಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು ಪ್ರಗತಿಯಲ್ಲಿವೆ.

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಯೋಜನೆಗಳು	ನಿಗಧಿ ಪಡಿಸಿರುವ ಅನುದಾನ
1	ನಗರ ಆರೋಗ್ಯ ಸೇವೆಗಳು	23.31
2	ಆರೋಗ್ಯ ಇಲಾಖೆಯ ಕಟ್ಟಡಗಳ ನಿರ್ವಾಹಣೆ	10.13
3	ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳು	10.13
4	ಆರ್.ಐ.ಡಿ.ಎಫ್. ಕಾಮಗಾರಿಗಳು	38.51
5	ಆಂಬ್ಯುಲೆನ್ಸ ಗಳ ವ್ಯವಸ್ಥೆ	10.13
6	ರಕ್ತ ನಿಧಿ ಸ್ಥಾಪನೆ	10.13
7	ತಾಲ್ಲೂಖಿೂ ಆಸ್ಪತ್ರೆಗಳಿಗೆ ಕ್ಷ–ಕಿರಣ ಸೌಲಭ್ಯಗಳು.	8.11
8	ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆ.	73.97
9	ಆಸ್ಪತ್ರೆಯ ಸಲಕರಣೆಗಳ ದುರಸ್ತಿ	5:07
10	ರಾಷ್ಟ್ರೀಯಾ ಮಲೇರಿಯಾ ನಿರೋಧ ಕಾರ್ಯಕ್ರಮ (ಗ್ರಾಮೀಣ)	303.99
11	ಮಾನಸಿಕ ಆರೋಗ್ಯ ಯೋಜನೆ (ಎನ್.ಎಂ.ಇ.ಪಿ)	0.13
12	ರೋಗಗಳ ನಿವಾರಣೆ ಮತ್ತು ನಿಯಂತ್ರಣ	10.13
13	ಜಿಲ್ಲಾ ಆ.ಕು.ಶ ಕಛೇರಿ ಕಟ್ಟಡಗಳು	10.13
14	ಐ.ಸಿ.ಡಿ.ಎಸ್	0.51

15	ಶಾಲಾ ಆರೋಗ್ಯ ಸೇವೆಗಳು	2.03
16	ಸಾಮಾಗ್ರಿಗಳ ಸರಬರಾಜು	10.13
17	ಕುಷ್ಠ ರೋಗ ನಿಯಂತ್ರಣ ಯೋಜನೆ	2.50
18	ಕೇಂದ್ರ ಪುರಸ್ಕೃತ ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣಾ ಕಾರ್ಯಕ್ರಮ	0.25
19	ಕೇಂದ್ರ ಪುರಸ್ಕೃತ ಗಿನಿಜಂತು ನಿರ್ಮೂಲನಾ ಯೋಜನೆ.	0.10
	ಒಟ್ಟು	**529.56**

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಜಿಲ್ಲೆಗೆ ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಕ್ಕೆ ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ, ಕೆಲವು ಅಂಶಗಳನ್ನು ಇದರಲ್ಲಿ, ಕಾರ್ಯರೂಪಕ್ಕೆ ತರುತ್ತೇವೆಂದು ಕಳೆದ ಸಲ ಮಾನ್ಯ ಯಡಿಯೂರಪ್ಪನವರು ತಮ್ಮ ಬಜೆಟ್‌ನಲ್ಲಿ ಹೇಳಿದ್ದರು 2007-2008ನೇ ಸಾಲಿನಲ್ಲಿ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿ ಹಾಗೂ ಹಣಕಾಸಿನ ಸಚಿವರಾಗಿದ್ದಾಗ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂಬುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

"During 2006-07 our Government introduced telemedicine at all our district hospitals. National health programmes like malaria programme, programme for prevention and control of blindness, tuberculosis control programme are being implemented as contemplated and our share will be fully provided. In 2007-08 budget, Government of India has announced the introduction of a new scheme called" Aam Admi Bima Yojana" and we will explore the possibility of linking our "Suvarana Suraksha" scheme with this. for implementing Suvarna Suraksha I propose to allocate Rs. 35 crore in 2007-08". ಇದನ್ನು ಲಿಂಕ್ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅದನ್ನು ಸುವರ್ಣ ಸುರಕ್ಷ ಯೋಜನೆಯಲ್ಲಿ ಲಿಂಕ್ ಮಾಡಿದ್ದಾರೆಯೇ ಅಥವಾ ಇಲ್ಲವೇ? ಇನ್ನೊಂದು ಪ್ರಶ್ನೆ ಏನೆಂದರೆ, ಕಳೆದ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಿರುವ ಯೋಜನೆಗಳಾದ ಮಡಿಲು ಮತ್ತು ಪ್ರಸೂತಿ ಆರೈಕೆ, ಇವುಗಳ ಅನುಷ್ಠಾನಕ್ಕಾಗಿ

ಬೀದರ್ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಮತ್ತೆ ಅದರಿಂದ ಎಷ್ಟು ಜನರಿಗೆ ಸೌಲಭ್ಯ ಸಿಕ್ಕಿದೆ ಎಂಬುದನ್ನು ಅಥವಾ ಈ ಯೋಜನೆಗಳನ್ನು ತೆಗೆದುಕೊಂಡಿದ್ದೀರಾ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗೆ ಅರ್ಥವಾಗಿಲ್ಲ. ಒಂದು ವೇಳೆ ಇನ್ನೂ ತೆಗೆದುಕೊಂಡಿಲ್ಲವೆಂದರೆ, ಯಾವಾಗ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಏಕೆಂದರೆ ಕಳೆದ ಸಲ ಈ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಆದರೆ ಇಲ್ಲಿಯವರೆಗೆ ಅನುಷ್ಠಾನವಾಗದಿದ್ದರೆ ಏಕೆ ಆಗಿಲ್ಲವೆಂದು ಹೇಳಬೇಕು.

ಶ್ರೀ ಬಿ. ಶ್ರೀರಾಮಲು:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಸದ್ಯಕ್ಕಂತೂ ಬೀದರ್ ಜಿಲ್ಲೆಯ ಆಸ್ಪತ್ರೆಯಿಂದ ಯಾವುದೇ ಹೊಸ ಯೋಜನೆಗಳಿಗೆ ಪ್ರಸ್ತಾವನೆಯನ್ನು ನೀಡಿಲ್ಲ. ಕಳೆದ ಸಾರಿ ಹಣಕಾಸಿನ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಯಡಿಯೂರಪ್ಪನವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಆದ್ದರಿಂದ, ಬೀದರ್ ಜಿಲ್ಲೆಯ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಏನೇನು ಬೇಕಾಗುತ್ತದೆಂಬುದರ ಬಗ್ಗೆ ಒಂದು ಪತ್ರದಲ್ಲಿ ಕೊಟ್ಟರೆ ತಕ್ಷಣ ಅದನ್ನು ಮಾಡಿಕೊಡುತ್ತೇನೆ.

ಅಧ್ಯಕ್ಷರು:- ಮಾನ್ಯ ಶ್ರೀರಾಮಲುರವರೆ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಏನು ಕೇಳುತ್ತಿದ್ದಾರೆಂದರೆ, ಹಿಂದೆ ಉಪ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲವೊಂದು ಸ್ಕೀಂಗಳನ್ನು ಪ್ರಕಟಣೆ ಮಾಡಿದ್ದರು. ಆ ಯೋಜನೆಗಳು ನಮ್ಮ ಬೀದರ್ ಜಿಲ್ಲೆಗೆ ಅನ್ವಯವಾಗುತ್ತದೆಯೇ ಅಥವಾ ಇಲ್ಲವೇ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಬಿ. ಶ್ರೀರಾಮಲು:- ಆ ಯೋಜನೆಗಳು ಇನ್ನೂ ಜಾರಿಗೆ ಬಂದಿಲ್ಲ. ಇನ್ನು ಮುಂದೆ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇದು ನಮ್ಮ ಜಿಲ್ಲೆಗೆ ಅನ್ವಯವಾಗುತ್ತದೆಯೇ?

ಶ್ರೀ ಬಿ. ಶ್ರೀರಾಮಲು :- ಖಂಡಿತ ಬೀದರ್ ಜಿಲ್ಲೆಗೂ ಕೂಡ ಅನ್ವಯವಾಗುತ್ತದೆ.

ಅಧ್ಯಕ್ಷರು:- ಇಡೀ ರಾಜ್ಯಕ್ಕೆ ಅನ್ವಯವಾಗುವಂಥ ಸ್ಕೀಂ ಇದಾಗಿದೆ. ಆದ್ದರಿಂಧ ಬೀದರ್ ಜಿಲ್ಲೆಗೆ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದು ಅವರ ಪ್ರಶ್ನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಈ ಸಾರಿ ಪ್ರಾರಂಭ ಮಾಡುತ್ತೀರಾ?

ಶ್ರೀ ಬಿ. ಶ್ರೀರಾಮುಲು:- ನಾನು ಹೊಸದಾಗಿ ಖಾತೆಯನ್ನು ವಹಿಸಿಕೊಂಡಿದ್ದೇನೆ. ಎಲ್ಲಾ ಕಡೆ ಇದನ್ನು ಜಾರಿ ಮಾಡುತ್ತೇವೆ.

ಅಧ್ಯಕ್ಷರು:- ಇದು ರಾಜ್ಯದ ಎಲ್ಲಾ ಕಡೆ ಜಾರಿ ಮಾಡಬೇಕಾಗುತ್ತದೆ. ಆದ್ದರಿಂದ, ಅಲ್ಲಿಗೂ ಕೂಡ ಜಾರಿ ಮಾಡುತ್ತೀರಲ್ಲವೆ?

ಶ್ರೀ ಬಿ. ಶ್ರೀರಾಮುಲು :- ಖಂಡಿತ ಬೀದರ್ ಜಿಲ್ಲೆಗೂ ಜಾರಿ ಮಾಡುತ್ತೇವೆ.

ರಾಜ್ಯದಲ್ಲಿ ಚಿಕುಂಗುನ್ಯ ಖಾಯಿಲೆಯಿಂದ ಆಸ್ಪತ್ರೆಗೆ ದಾಖಲಾಗಿರುವವರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 117 (277)
ಸದಸ್ಯರ ಹೆಸರು : ಶ್ರೀ. ರೋಷನ್ ಬೇಗ್. ಆರ್. (ಶಿವಾಜಿನಗರ)
ಉತ್ತರಿಸುವ ಸಚಿವರು : ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿ ಚಿಕುಂಗುನ್ಯ ಖಾಯಿಲೆಯಿಂದ ಆಸ್ಪತ್ರೆಗೆ ದಾಖಲಾಗಿರುವವರ ಸಂಖ್ಯೆ ಯೆಷ್ಟು?

ರಾಜ್ಯದಲ್ಲಿ ಚಿಕುಂಗುನ್ಯ ರೋಗವು 23 ಜಿಲ್ಲೆಗಳಲ್ಲಿ ವರದಿಯಾಗಿದ್ದು ಇದುವರೆಗೆ ಶಂಕಿತ ಚಿಕುಂಗುನ್ಯ ರೋಗದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದವರ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

ಜಿಲ್ಲೆ	ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದವರ ಸಂಖ್ಯೆ
ದಕ್ಷಿಣ ಕನ್ನಡ	2991
ಉಡುಪಿ	242
ಧಾರವಾಡ	73
ಶಿವಮೊಗ್ಗ	11
ಬೆಳಗಾಂ	4
ಬೆಂಗಳೂರು ನಗರದ ವಿವಿದ ಆಸ್ಪತ್ರೆಗಳು	24
ಉಳಿದ ಜಿಲ್ಲೆಗಳಲ್ಲಿ ಶಂಕಿತ ಚಿಕುಂಗುನ್ಯ ರೋಗಿಗಳು ಹೊರರೋಗಿಗಳಾಗಿ ಚಿಕಿತ್ಸೆ ಪಡಿದಿರುತ್ತಾರೆ.	

ಆ ಸರ್ಕಾರ ಇದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

ಚಿಕುಂಗುನ್ಯ ರೋಗವು ಈಡಿಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಉಂಟಾಗುವುದು, ಈ ರೋಗಕ್ಕೆ ಎಲ್ಲ ಜಿಲ್ಲೆಗಳಲ್ಲೂ ಏಕ ರೂಪದ ನಿಯಂತ್ರಣ ಕ್ರಮಗಳನ್ನು ಅನುಸರಿಸಲಾಗುತ್ತದೆ. ಆದುದರಿಂದ, ರಾಜ್ಯಾದ್ಯಂತ ಚಿಕುಂಗುನ್ಯ ರೋಗವನ್ನು ತಡೆಗಟ್ಟಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಅನುಷ್ಠಾನಗೊಳಿಸಿರುತ್ತದೆ.

1, ಈ ರೋಗವನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಹಾಗೂ ರೋಗಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ನಿಯಂತ್ರಣ ಕ್ರಮಗಳ ಬಗ್ಗೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮಾರ್ಗದರ್ಶಿ ಸುತ್ತೋಲೆಗಳನ್ನು ಕಳುಹಿಸಿಕೊಡಲಾಗಿದೆ.

2. ಸರ್ಕಾರದ ಆರೋಗ್ಯ ಕಾರ್ಯದರ್ಶಿಗಳು, ಆಯುಕ್ತರು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಈ ರೋಗದ ನಿಯಂತ್ರಣ ಕ್ರಮಗಳನ್ನು ಖುದ್ದಾಗಿ ಪರಿಶೀಲಿಸಿ, ಮೇಲ್ವಿಚಾರಣೆ ನಡೆಸಲು ಸೂಚಿಸಿರುತ್ತಾರೆ.

3. ಈ ರೋಗ ಬಾರದಂತೆ ಸ್ವತಃ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಸಮರೋಪಾದಿಯಲ್ಲಿ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಕೈಗೊಂಡಿರುತ್ತದೆ.

4. ಗ್ರಾಮ ಪಂಚಾಯಿತಿ, ಸ್ವಯಂ ಸೇವಾ ಸಂಸ್ಥೆಗಳು, ಸ್ವಸಹಾಯ ಗುಂಪುಗಳು, ಸಮುದಾಯ ಮತ್ತು ಧಾರ್ಮಿಕ ಸಂಸ್ಥೆಗಳನ್ನೊಳಗೊಂಡಂತೆ ಎಲ್ಲಾ ವರ್ಗದ ಜನರಿಗೂ ಈ ರೋಗದ ಬಗ್ಗೆ ಹಾಗೂ ರೋಗ ಬಾರದಂತೆ ಕೈಗೊಳ್ಳಬೇಕಾದ ಸ್ವಯಂ ರಕ್ಷಣಾ ವಿಧಾನಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

5. ರೋಗಿಗಳ ನಿರ್ವಹಣೆಗಾಗಿ ಸಾಕಷ್ಟು ಪ್ರಮಾಣದಲ್ಲಿ ಸೂಕ್ತ ಔಷಧಿಗಳ ದಾಸ್ತಾನನ್ನು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಇರಿಸಲಾಗಿದೆ.

6. ಸಂಚಾರಿ ಘಟಕಗಳನ್ನು ರೋಗ ಹೆಚ್ಚಾದ ಪ್ರದೇಶಗಳಿಗೆ ನಿಯೋಜಿಸಿ ರೋಗಿಗಳಿಗೆ ಸ್ಥಳೀಯವಾಗಿ ಸೂಕ್ತ ಔಷಧೋಪಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ ಹಾಗೂ ಆಂಬುಲೆನ್ಸ್ ವಾಹನಗಳನ್ನು ತುರ್ತು ನಿರ್ವಹಣೆಗಾಗಿ ನಿಯೋಜಿಸಲಾಗಿದೆ.

7. ರೋಗವು ಶೀಘ್ರವಾಗಿ ನಿಯಂತ್ರಣಕ್ಕೆ ಬರಲು ಉಪಯೋಗವಾಗುವಂತೆ ಕೀಟನಾಟಕ ಧೂಮೀಕರಣ ಹಾಗೂ ಈಡೀಸ್ ಉತ್ಪತ್ತಿ ತಾಣಗಳ ನಿರ್ಮೂಲನಾ ಕಾರ್ಯವನ್ನು ಕೈಗೊಳ್ಳಲಾಗಿದ್ದು ಇದಕ್ಕಾಗಿ ಒಟ್ಟು 1655 ಧೂಮೀಕರಣ ಯಂತ್ರಗಳು

ಎಲ್ಲ ಜಿಲ್ಲೆಗಳಲ್ಲೂ ಲಭ್ಯವಿರುತ್ತವೆ. ಧೂಮೀಕರಣಕ್ಕಾಗಿ ಕೀಟನಾಶಕ ದ್ರಾವಣಗಳನ್ನೂ ಸಹ ಸರಬರಾಜು ಮಾಡಲಾಗಿದೆ.

8. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೇರಳ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯದ ಅಧಿಕಾರಿಗಳೊಂದಿಗೆ ದಿನಾಂಕ: 7-6-2008ರಂದು ಬೆಂಗಳೂರು ಮತ್ತು 19-6-2008ರಂದು ಕೇರಳ ಜಿಲ್ಲೆಯ ಕಾಸರಗೋಡು ಇಲ್ಲಿ ವಿಶೇಷ ಗಡಿ ಪ್ರದೇಶಗಳ ಸಭೆ ನಡೆಸಿ ಈ ರೋಗ ನಿಯಂತ್ರಣಕ್ಕೆ ಜಂಟಿ ಕಾರ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

9. ಈ ರೋಗ ನಿಯಂತ್ರಣ ಚಟುವಟಿಕೆಗಳನ್ನು ಖುದ್ದಾಗಿ ಪರಿಶೀಲಿಸಲು ಆರೋಗ್ಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ರೋಗ ಪೀಡಿತ ಪ್ರದೇಶಗಳಿಗೆ ಬೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡಿರುತ್ತಾರೆ.

10. ಇದುವರೆಗೆ, ಚಿಕುಂಗುನ್ಯ ರೋಗ ನಿಯಂತ್ರಣ ಚಟುವಟಿಕೆಗಳಿಗಾಗಿ ರೂ. 86.07 ಲಕ್ಷಗಳ ಅನುದಾನವನ್ನು ಎಲ್ಲ ಜಿಲ್ಲೆಗಳಿಗೆ ಹಂಚಲಾಗಿದ್ದು, ಮತ್ತೆ ರೂ. 38.50 ಲಕ್ಷಗಳ ಅನುದಾನದ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಚಿಕೂನ್ ಗುನ್ಯ ರೋಗಕ್ಕೆ ಒಳಗಾಗಿರುವ ರೋಗಿಗಳ ಲಿಸ್ಟ್‌ನ್ನು ಕೊಟ್ಟಿದ್ದಾರೆ. ಆದರೆ ಇದು ಸರಿಯಾದ ಅಂಕಿ-ಅಂಶವಲ್ಲವೆಂದು ಹೇಳುತ್ತೇನೆ. ಇನ್ನೂ ಬಹಳಷ್ಟು ಜನ ಈ ಒಂದು ಕಾಯಿಲೆಗೆ ತುತ್ತಾಗಿದ್ದಾರೆ. ಬೆಂಗಳೂರು ನಗರದ ವಿವಿಧ ಆಸ್ಪತ್ರೆಗಳಲ್ಲಿ 24 ಜನ ರೋಗಿಗಳು ದಾಖಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ನನ್ನ ಅಂದಾಜಿನ ಪ್ರಕಾರ ಬೆಂಗಳೂರಿನ ಸುತ್ತಾ ಮುತ್ತಾ ಕೊಳಚೆ ಪ್ರದೇಶಗಳಿದ್ದು, ಇಲ್ಲಿ ಚಿಕೂನ್ ಗುನ್ಯ ಕೇಸಸ್ ಸಾಕಷ್ಟು ರಿಪೋರ್ಟ್ ಆಗಿದೆ. ಆದರೆ, ತಮ್ಮ ವರದಿಯಲ್ಲಿ ಕೇವಲ 24 ಎಂದು ತೋರಿಸಿದ್ದೀರಿ. ಇನ್ನೊಂದು ಪ್ರಶ್ನೆಯನ್ನು ನಾನು ಕೇಳುವುದೇನೆಂದರೆ, ಕೇಂದ್ರ ಸರ್ಕಾರದ National Rural Health Mission ನಿಂದ ನಿಮಗೆ ಸಾಕಷ್ಟು ಹಣ ಬಂದಿದೆ. ಈ ಹಣದಿಂದ ಚಿಕೂನ್ ಗುನ್ಯ ರೋಗಿಗಳಿಗೆ ಏನಾದರೂ ಕೊಡುತ್ತಿದ್ದೀರಾ?

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2991, ಉಡುಪಿಯಲ್ಲಿ 242, ಧಾರವಾಡದಲ್ಲಿ 73, ಶಿವಮೊಗ್ಗದಲ್ಲಿ 11, ಬೆಳಗಾಂದಲ್ಲಿ 4, ಬೆಂಗಳೂರಿನಲ್ಲಿ 24; ಇತ್ತೀಚೆಗೆ ಚಿಕೂನ್ ಗುನ್ಯಾ ರೋಗವು ರಾಜ್ಯದಲ್ಲಿ ಮಾರ್ಚ್ 2008 ರಿಂದ ಚಿಕೂನ್ ಗೂನ್ಯಾ ದಕ್ಷಿಣ ಕನ್ನಡ, ಸುಳ್ಯ, ಪುತ್ತೂರುಗಳಲ್ಲಿ ಪ್ರಾರಂಭಗೊಂಡು ಅದು ಮಂಗಳೂರು ಜಿಲ್ಲೆಗಳಲ್ಲಿ ಹಿಡಿದು ರಾಜ್ಯದ ಒಟ್ಟು 25

ಜಿಲ್ಲೆಗಳಲ್ಲಿ ಹಬ್ಬಿದೆ. ಸಾಕಷ್ಟು ಎಲ್ಲಾ ಜಿಲ್ಲಾ ಅಸ್ಪತ್ರೆಗಳಲ್ಲಿ ಬೇಕಾದಂಥ paracetamol ಆಗಿರಬಹುದು I.V. fluid ಆಗಿರಬಹುದು, ಸಾಕಷ್ಟು ಆಸ್ಪತ್ರೆಗಳಲ್ಲಿ ಕೂಡ ಎಲ್ಲಾ ಜಿಲ್ಲೆಗಳಿಗೆ ಚಿಕೂನ್ ಗುನ್ಯಾಗೆ ಸಂಬಂಧಪಟ್ಟಂತೆ ಔಷಧಿಗಳನ್ನು ಪೂರೈಸಿದ್ದೇವೆ. ಸದ್ಯಕ್ಕೆ ಈ ಚಿಕೂನ್ ಗುನ್ಯಾಗೆ ಬಹಳಷ್ಟು precaution ತೆಗೆದುಕೊಳ್ಳಬೇಕೆಂದು ಹೇಳಿ ಗ್ರಾಮ ಪಂಚಾಯತಿ ಸದಸ್ಯರಿಗೆ, ಸ್ವಸಹಾಯ ಗುಂಪುಗಳಿಗೆ ಜೊತೆಗೆ ನಗರಪಾಲಿಕೆಗಳಿಗೆ ತಿಳಿಸಿದ್ದೇವೆ. ಮೊನ್ನೆ ಬೆಂಗಳೂರಿನ ಮಹಾ ನಗರಪಾಲಿಕೆಯ ಆಯುಕ್ತರು ಮತ್ತು ಎಲ್ಲಾ ಸದಸ್ಯರನ್ನು ಕರೆದು ಯಾವ ರೀತಿಯಾಗಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಯಾವ ರೀತಿಯಾಗಿ ಈ ಚಿಕೂನ್ ಗುನ್ಯಾ ಯಾವ ರೀತಿಯಾಗಿ ಬರುತ್ತದೆ ಎನ್ನುವ ವಿಷಯದ ಬಗ್ಗೆ ನಾವು ಮಾಡುತ್ತಿದ್ದೇವೆ. ಇವತ್ತು ಚಿಕೂನ್ ಗುನ್ಯಾಗೆ ಸಂಬಂಧಪಟ್ಟಂತೆ ಕೇವಲ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಆ ಸೊಳ್ಳೆ ಕೂಡ ರಾತ್ರಿ ಸಮಯದಲ್ಲಿ ಕಡಿಯುವುದಿಲ್ಲ ಅದು ಬೆಳಗಿನ ಸಮಯದಲ್ಲಿ ಕಡಿಯುತ್ತದೆ. ಅದಕ್ಕೋಸ್ಕರ ಮನೆಯಲ್ಲಿ ಇವತ್ತು ಕುಡಿಯುವ ನೀರಿನಲ್ಲಿ ಸಹ ಒಂದೊಂದು ಸಲ ಬಂದು ಕುಳಿತು ಮನುಷ್ಯನನ್ನು ಕಚ್ಚುವುದರಿಂದ ಈ ಚಿಕೂನ್ ಗುನ್ಯಾ ಬರುವ ಸಾಧ್ಯತೆ ಇರುತ್ತದೆ. ಅದಕ್ಕೋಸ್ಕರ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕೆಂದು ಹೇಳಿ ನಗರಪಾಲಿಕೆಯರಿಗೆ, ಗ್ರಾಮ ಪಂಚಾಯತಿಗಳಿಗೆ ಜಿಲ್ಲಾ ಪಂಚಾಯತಿಗಳಿಗೆ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ರಾಜ್ಯದ ಎಲ್ಲಾ ಕಡೆ ನಮ್ಮ ಎಲ್ಲಾ ಜಿಲ್ಲೆಯ DHO ಗಳ ಸಭೆಯನ್ನು ನಾನು ನಡೆಸಿರುತ್ತೇನೆ. ಮುಖ್ಯವಾಗಿ ಎಂದರೆ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರಬೇಕು. ಇದರ ಬಗ್ಗೆ ನಾವು ಎಲ್ಲರ ಜೊತೆಯಲ್ಲಿ ಒಂದು ಪಯತ್ನವನ್ನು ಮಾಡುತ್ತಿದ್ದೇವೆ. ಇನ್ನು ಮುಂಬರುವ ದಿನಗಳಲ್ಲಿ ಈ ಚಿಕೂನ್ ಗುನ್ಯಾ ಬಗ್ಗೆ ಶಾಶ್ವತವಾಗಿ ಒಂದು ಪರಿಹಾರವಾಗಬೇಕೆಂದು ತಜ್ಞರ ಜೊತೆಯಲ್ಲಿ ಒಂದು ಸಮಾಲೋಚನೆಯನ್ನು ಮಾಡುತ್ತಿದ್ದೇವೆ. ಆದರೆ ಇದು ಎಷ್ಟರಮಟ್ಟಿಗೆ ಜಾರಿಯಾಗುತ್ತದೆಂದು ಗೊತ್ತಾಗುತ್ತದೆ. ಈ ಚಿಕೂನ್ ಗುನ್ಯಾ ಬಂದಿರುವಂಥ ಬಡರೋಗಿಗಳಿಗೆ ಮೈ ಕೈಕಾಲು ನೋವು ಬರುವುದರೊಳಗೆ ನಮಗೆ ಏನೋ ಆಗಿದೆ ಎನ್ನುವಂತೆ ಅವರು ಭಯ ಬೀಳುತ್ತಾರೆ. ಆದರೆ ಸಾಯುವಂಥ ಸ್ಥಿತಿ ಈ ಚಿಕೂನ್ ಗುನ್ಯಾದಲ್ಲಿ ಇಲ್ಲ. ಆದರೆ ಕೆಲವೊಂದು ಸಲ ಭಯ ಬಿದ್ದ ಸಂದರ್ಭದಲ್ಲಿ ಬೇರೆ ಬೇರೆ ರೀತಿಯಲ್ಲಿ ಡೆತ್ ಆಗಿದೆ ಎನ್ನುವ ಒಂದು ಆದೇಶವನ್ನು ನಾನು ನೋಡಿದ್ದೇನೆ. ಆದರೆ ಚಿಕೂನ್ ಗುನ್ಯಾಗೆ ಸಂಬಂಧಪಟ್ಟಂತೆ ಎಲ್ಲಾ ವಿಷಯಗಳನ್ನು ಯಾವ ರೀತಿಯಲ್ಲಿ ಅದಕ್ಕೆ ಏನು ಪೂರೈಕೆ ಮಾಡಬೇಕು ಅದನ್ನು ನಾನು ಪೂರೈಕೆ ಮಾಡುತ್ತೇನೆ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸಾವಿರಾರು ಜನ ಡಾಕ್ಟರ್‌ಗಳು ಇದ್ದಾರೆ. ಈ ಚಿಕೂನ್ ಗುನ್ಯಾಗೆ ನಾವು ಇದುವರೆಗೆ ಒಂದು ಇಂತಹ ಮೆಡಿಸಿನ್ ಕೊಟ್ಟರೆ ಈ ಚಿಕೂನ್ ಗುನ್ಯಾ ಹೋಗುತ್ತದೆಂದು ಹೇಳುವುದರಲ್ಲಿ ನಾವು ಫೇಲಾಗಿದ್ದೇವೆ ಅದಕ್ಕೆ ನೀವು ಒಪ್ಪಿಕೊಳ್ಳುತ್ತೀರಾ? ತಮಗೆ ನಾನು ಹೇಳುತ್ತಿಲ್ಲ. ಪಾಪ ತಾವು ಹೊಸದಾಗಿ ಮಂತ್ರಿಯಾಗಿ ಬಂದಿದ್ದೀರಿ, ಸ್ಮಾರ್ಟ್ ಆಗಿ ಬರುತ್ತೀರಿ ಅದರ ಬಗ್ಗೆ ನಮಗೆ ಏನೂ ಇಲ್ಲ. ಪಾಪ ಹಾಸ್ಪಿಟಲ್‌ಗಳಿಗೆ ಎಲ್ಲಾ ಹೋಗುತ್ತೀರಿ inspection ಮಾಡುತ್ತೀರಿ.

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮಷ್ಟು ಶೋಕಿ, ನಿಮ್ಮಷ್ಟು ಸ್ಮಾರ್ಟ್ನು, ನಿಮ್ಮಷ್ಟು ಕಳೆ ಪಾಪ ಅವರಿಗೆಲ್ಲಾ ಬರುವುದಿಲ್ಲ. ಪಾಪ ಏಕೆ ನೀವು ಅವರನ್ನು ಗೋಳು ಹೊಯ್ದುಕೊಳ್ಳುತ್ತೀರಿ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಸ್ಮಾರ್ಟ್ ಆಗಿ ಬರುತ್ತಾರೆ. ಕಳೆದ ಮೂರು-ನಾಲ್ಕು ವರ್ಷಗಳಿಂದ ಈ ಚಿಕೂನ್ ಗುನ್ಯಾ ಬಗ್ಗೆ ಕೇಳಿಕೊಂಡು ಬರುತ್ತಿದ್ದೇವೆ. Have not you failed to identify the proper medicine for chikoongunya? ಈ ಟ್ರೀಟ್‌ಮೆಂಟ್ ಕೊಡುವುದರಲ್ಲಿ ನಾವು ಫೇಲಾಗಿದ್ದೇವೆಂದು ಈ ಡಾಕ್ಟರ್‌ಗಳು ಯಾವುದೋ ಇಂತಹ ಒಂದು ಮೆಡಿಷನ್ ಕೊಟ್ಟರೆ ಈ ಕಾಯಿಲೆ ಹೋಗುತ್ತದೆಂದು ನಾವು ಇದುವರೆಗೆ ಪತ್ತೆ ಹಚ್ಚಿಲ್ಲ ಇದಕ್ಕೆ ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಬಿ. ಶ್ರೀರಾಮುಲು: ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಬಹಳ ಉತ್ತಮವಾಗಿದೆ. ಏಕೆಂದರೆ ನಾನು ಸುಳ್ಯ, ಪುತ್ತೂರು ಆ ಭಾಗಕ್ಕೆ ಹೋದ ಸಂದರ್ಭದಲ್ಲಿ ಬಹಳಷ್ಟು ಜನ ಬಡತನದಲ್ಲಿದ್ದಂಥವರು ಚಿಕೂನ್ ಗುನ್ಯಾ ಬಂದಿರುವ ಕುಟುಂಬದಲ್ಲಿ ಬಹಳಷ್ಟು ಜನರು ಕಷ್ಟದಲ್ಲಿ ಮತ್ತು ಬಹಳಷ್ಟು ಸಮಸ್ಯೆಗಳು ಇದ್ದಂಥ ಸಂದರ್ಭದಲ್ಲಿ ನಾನು ಖುದ್ದಾಗಿ ಭೇಟಿಯನ್ನು ಕೊಟ್ಟಿರುತ್ತೇನೆ. ಭೇಟಿ ಕೊಟ್ಟ ನಂತರ ಅವರಿಗೆ ಏನು ನಮ್ಮ ಸರ್ಕಾರದಿಂದ ಔಷಧಿಗಳನ್ನು ಕೊಡುತ್ತಿದ್ದೇವೆ ಅದು ಅವರಿಗೆ ಸಮರ್ಪಕವಾಗಿ ಎಲ್ಲಾ ರೀತಿಯಲ್ಲಿ ಚಿಕೂನ್ ಗುನ್ಯಾ ಏನು ಜ್ವರ ಬರುತ್ತದೆ ಅದು ವಾಸಿಯಾಗುತ್ತಿಲ್ಲ. ಈ ಚಿಕೂನ್ ಗುನ್ಯಾ ಬಂದಿದೆ ಎಂದು ಗೊತ್ತಾದ ತಕ್ಷಣ ಅವರು ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗಬೇಕು. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುತ್ತೇನೆ.

ಶ್ರೀ ವಸಂತ್ ಬಂಗೇರ: ಮಾನ್ಯ ಅಧ್ಯಕ್ಷರೆ, ಇದು ಚಿಕನ್ ಗುನ್ಯಾ, ಮಟನ್ ಗುನ್ಯಾ ಅಲ್ಲ. ಇದು ಚಿಕೂನ್ ಗುನ್ಯಾ, ಇದರ ಬಗ್ಗೆ ನಿಮಗೆ ಗೊತ್ತಿಲ್ಲ.

ಅಧ್ಯಕ್ಷರು: ಇದನ್ನು ಸರಿ ಮಾಡಿಸುತ್ತೇನೆ.

ಶ್ರೀ ವಸಂತ್ ಬಂಗೇರ: ಚಿಕೂನ್ ಗುನ್ಯಾ, ಡೆಂಗ್ಯು, ಮಲೇರಿಯಾ, ಇಲಿ ಜ್ವರ, ಟೊಮ್ಯಾಟೋ ಜ್ವರ, 1982–83ನೇ ಸಾಲಿನಲ್ಲಿ ಹೊಸದಾಗಿ ಮಂಗನ ಕಾಯಿಲೆ ಎಂದು ಬಂದಿತ್ತು.

ಅಧ್ಯಕ್ಷರು: ನೀವು Specific ಆಗಿ ಪ್ರಶ್ನೆಯನ್ನು ಕೇಳಿ.No Speech. ಆದರೆ ನೀವು speech ಮಾಡುವುದಿದ್ದರೆ ಬೇರೆ ನೋಟೀಸ್‌ನ್ನು ಕೊಡಿ.

ಶ್ರೀ ವಸಂತ್ ಬಂಗೇರ: ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಯಲ್ಲಿ ಸೇರಿ ಸುಮಾರು 5 ಲಕ್ಷ ಜನರಿಗೂ ಮಿಕ್ಕಿ ಈ ರೋಗ ಬಾಧೆಯಾಗಿದೆ. ಸುಮಾರು 100 ಮಂದಿಗೂ ಮಿಕ್ಕಿ ಮೃತಪಟ್ಟಿದ್ದಾರೆ. ಮಾನ್ಯ ಸಚಿವರು ಹೇಳಿಕೆಯನ್ನು ಕೊಡುತ್ತಾರೆ ಈ ರೋಗದಿಂದ ಯಾರೂ ಮೃತಪಟ್ಟಿಲ್ಲ, ಹಾಗಾದರೆ ಯಾವ ರೋಗದಿಂದ ಮೃತಪಟ್ಟಿದ್ದಾರೆ ಸ್ವಾಮಿ. ಒಬ್ಬೊಬ್ಬರಿಗೆ 10 ಕೆ.ಜಿ. ಅಕ್ಕಿಯನ್ನು ಬಿಕ್ಷೆಯಾಗಿ ಕೊಡುತ್ತಾರೆ. APL, BPL, card ನಮ್ಮ ಜಿಲ್ಲೆಯಲ್ಲಿ ಶ್ರೀಮಂತರಿಗೆ BPL card ಬಡವರಿಗೆ APL card, . ಇವರು ಹೇಳುತ್ತಾರೆ BPL card Holder ಗೆ ಮಾತ್ರ ಕೊಡುತ್ತೇವೆಂದು, ಒಂದು ಮನೆಯಲ್ಲಿ ಒಬ್ಬನಿಗೆ ರೋಗ ಬಂದರೆ ಇಡೀ ಮನೆಯ ಎಲ್ಲಾ ಸದಸ್ಯರಿಗೂ ರೋಗ ಬರುತ್ತದೆ. ಇವರು ಒಂದು ಮನೆಯವರಿಗೆ ಹತ್ತು ಕೆ.ಜಿ. ಅಕ್ಕಿಯನ್ನು ಭಿಕ್ಷೆ ಕೊಡುತ್ತಾರೆ. ಸರ್ 100 ಕ್ಕೆ 99.99 ಜನ ಬಡವರು. ನೀವು ಇದಕ್ಕೆ ಮೆಡಿಷನ್‌ನ್ನು ತಯಾರು ಮಾಡಿಲ್ಲ. ಇದು ಬಡವರಿಗೆ ಬರುವಂಥ ಕಾಯಿಲೆ ಒಬ್ಬೊಬ್ಬರಂತೆ ಯಾರಿಗೆ ಈ ರೋಗಬಾಧೆಯಾಗಿದೆ ಅವರೆಲ್ಲರಿಗೂ ಒಂದೊಂದು ಕ್ವಿಂಟಲ್ ಅಕ್ಕಿಯನ್ನು ಕೊಡಬೇಕು. ಅವರಿಗೆ ನಾಲ್ಕು ತಿಂಗಳು ದುಡಿಯುವುದಕ್ಕಾಗುವುದಿಲ್ಲ. ಅಷ್ಟೆ ಅಲ್ಲ ಯಾರು ಮೃತಪಟ್ಟಿದ್ದಾರೆ ಅವರೆಲ್ಲರಿಗೂ ಒಂದು ಲಕ್ಷ ರೂ.ಗಳ ಪರಿಹಾರವನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಯು.ಟಿ. ಖಾದರ್: ಚಿಕೂನ್ ಗುನ್ಯಾ ಆದ ಸಂದರ್ಭದಲ್ಲಿ ತಕ್ಷಣದಲ್ಲಿ ಮಾನ್ಯ ಸಚಿವರು ಆ ಪ್ರದೇಶಕ್ಕೆ ಬಂದಿದ್ದಾರೆ ಧೈರ್ಯವನ್ನು ಕೊಟ್ಟಿದ್ದಾರೆ. ಈ ರೋಗದ ದೊಡ್ಡ ವಿಶೇಷವೆಂದರೆ, ಜ್ವರ ಹೋಗುತ್ತದೆ ಆದರೆ ನೋವು ಹೋಗುವುದಿಲ್ಲ. ಮೈ ಕೈ ನೋವು ಮೂರು ತಿಂಗಳು continuous ಆಗಿ ಇರುತ್ತದೆ. ಅಂತಹ ಸಂದರ್ಭದಲ್ಲಿ, ಅವರಿಗೆ ಇವತ್ತು ಸಹಾಯ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಡಾಕ್ಟರುಗಳು ಈ ಚಿಕೂನ್ ಗುನ್ಯಾದಿಂದ ಯಾರೂ ಸಾಯುವುದಿಲ್ಲವೆಂದು ಹೇಳುತ್ತಾರೆ. ಯಾರಿಗೆ ಬಿ.ಪಿ. ಇದೆ ಷುಗರ್ ಕಾಯಿಲೆ ಇದೆ ಅವರಿಗೆ ಈ ರೋಗ ಬಂದಾಗ ಬಹಳ ಸೀರಿಯಸ್ಸಾಗಿ ಅವರು ಇದರಲ್ಲಿ ಮೃತಪಡುವ ಒಂದು ಚಾನ್ಸೆಸ್ ಇರುತ್ತದೆ. ಆದಕಾರಣ ಇ

ಗುರ್ತಿಸಿಕೊಳ್ಳಬೇಕಾದರೆ ಅವರು ಖಾಸಗಿ ಆಸ್ಪತ್ರೆಗೆ ಹೋಗುವಂಥದ್ದು ಬಡವರಿಗೆ ಖಾಸಗಿ ಆಸ್ಪತ್ರೆಗೆ ಹೋಗುವುದಕ್ಕಾಗುವುದಿಲ್ಲ. ಖಾಸಗಿ ಆಸ್ಪತ್ರೆಗೆ ಯಾರು ಹೋಗುತ್ತಾರೆ ಅವರಿಗೂ ಸಹಾಯವನ್ನು ಒದಗಿಸುವಂಥ ಕೆಲಸವನ್ನು ಮಾಡಬೇಕು. ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಇವತ್ತು ನಾವು ಈ ರೋಗದಿಂದ ಜ್ವರ ಬಂದವರಿಗೆ ಮದ್ದು ಕೊಡಬಹುದು. ಈ ರೋಗವನ್ನು ತಡೆಯುವುದಕ್ಕೆ ಒಂದು ವಿಶೇಷವಾದ ಆಲೋಚನೆಯನ್ನು ಮಾಡಬೇಕು. ಸೊಳ್ಳೆಗಳನ್ನು ಕೊಲ್ಲುವತನಕ ಅದರ ಮೊಟ್ಟೆಗಳನ್ನು ಡೆಸ್ಟ್ರಾಯ್ ಮಾಡುವ ತನಕ ಅದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಸೊಳ್ಳೆಗಳನ್ನು ಹಿಡಿಯುವುದಕ್ಕೆ ಅದನ್ನು ಕೊಲ್ಲುವುದಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಇವತ್ತು ವಿಶೇಷವಾಗಿ ಒಂದು ಸ್ಪ್ರೇಯಿಂಗ್ ಮೆಷಿನ್‌ನ್ನು ಆ ಮೊಟ್ಟೆಯನ್ನು ಕೊಲ್ಲುವುದಕ್ಕೆ ಸೊಳ್ಳೆಗಳನ್ನು ಕೊಲ್ಲುವುದಕ್ಕೆ ಫ್ರಾಗಿಂಗ್ ಮೆಷಿನ್‌ನ್ನು ಪ್ರತಿ ಗ್ರಾಮ ಪಂಚಾಯತಿಗೆ ಒದಗಿಸುವಂಥ ಕೆಲಸವನ್ನು ಮಾಡಿ ಆ ಗ್ರಾಮ ಪಂಚಾಯತಿಗಳಿಗೆ ಸಂಪೂರ್ಣವಾದ ಒಂದು ಜವಾಬ್ದಾರಿಯನ್ನು ಕೊಟ್ಟರೆ ಆ ಕೆಲಸವಾಗುತ್ತದೆ. ಆ ಕಾರಣ ಅಲ್ಲಿ ಅನುದಾನವಿಲ್ಲದಿದ್ದರೆ ಅದು ಆಗುವುದಿಲ್ಲ. ಈ ಎರಡು ಮೆಷಿನ್‌ಗಳನ್ನು ಯಾವುದಾದರೊಂದು ಅನುದಾನದ ಅಡಿಯಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಗೋಪಾಲ್ ಭಂಡಾರಿ: ಮಾನ್ಯ ಅಧ್ಯಕ್ಷರೆ, ಬಹುಶಃ ಇಲ್ಲಿ ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ಹೆಚ್ಚು ಕಡಿಮೆ 2000 ಜನ ಈಗಾಗಲೇ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಆದರೆ ಇಲ್ಲಿಯ ಸಂಖ್ಯೆ 242 ಎಂದು ಮಾತ್ರ ಇದೆ. ಇದನ್ನು ನೋಡಿದರೆ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲವೆಂದು ಕಾಣುತ್ತದೆ. ಇದು ನಮ್ಮ ಜಿಲ್ಲೆಯಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿದೆ. ಬಹುಶಃ ಈ ಆಸ್ಪತ್ರೆಗೆ ಹೋದ ತಕ್ಷಣ ನಿಮಗೆ ಚಿಕೂನ್ ಗುನ್ಯಾ ಇದೆ ಎಂದು paracetamol ಕೊಟ್ಟು ಕಳುಹಿಸುತ್ತಿದ್ದಾರೆ. ಬೇರೆ ಕಾಯಿಲೆ ಇದ್ದರೂ ಕೂಡ ಅದನ್ನು ಐಡೆಂಟಿಫೈ ಮಾಡತಕ್ಕಂಥ ಕೆಲಸವಾಗುತ್ತಿಲ್ಲ. ಇಲಿ ಜ್ವರದಿಂದ ನಮ್ಮ ತಾಲ್ಲೂಕಿನಲ್ಲಿ ಎರಡು ಜನ ಮೊನ್ನೆ ಮೃತಪಟ್ಟಿದ್ದಾರೆ. ಅವರು ಬಹುಶಃ ಇದು ಇಲಿ ಜ್ವರ ಎಂದು ಖಾಸಗಿ ಆಸ್ಪತ್ರೆಯ ವೈದ್ಯರು ಅದನ್ನು ಐಡೆಂಟಿಫೈ ಮಾಡಿದ್ದರಿಂದ ಅದು ಗೊತ್ತಾಯಿತು. ಇದು ಈ ರೀತಿಯಲ್ಲಿದೆ, ಇದನ್ನು ತಡೆಯುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನ ಬಾರದೆ ಇರುವ ನಿಟ್ಟಿನಲ್ಲಿ ಇದನ್ನು ತಡೆಗಟ್ಟುವ ಒಂದು ವ್ಯವಸ್ಥೆ ಬೇಕು ಎಂದು ಜನ ನಿರೀಕ್ಷೆ ಮಾಡುತ್ತಾರೆ. ಬಹುತೇಕ ನಮ್ಮ ಆರೋಗ್ಯ ಇಲಾಖೆಯಲ್ಲಿ ಅಲೋಪತಿಕ್ ಮೆಡಿಷನ್ ಇದೆ ನಮ್ಮ ಇಲಾಖೆ ಅಲೋಪತಿಕ್ ಬಗ್ಗೆ ಮಾತ್ರ ಯೋಚನೆ ಮಾಡುತ್ತಿದೆ ನಮ್ಮ

ಜಿಲ್ಲೆಯಲ್ಲಿ ಕೆಲವು ಹೊಮಿಯೋಪತಿಕ್ ಆಸ್ಪತ್ರೆಗಳು ಮತ್ತು ಕಾಲೇಜುಗಳು ಇವೆ. ಅವರು ಆ ರೋಗವನ್ನು ತಡೆಯತಕ್ಕಂಥ ಹಂತದಲ್ಲಿ ಕೆಲವು ಔಷಧಿಗಳನ್ನು ಕೊಡುತ್ತಿದ್ದಾರೆ. ಅದರ ಬಗ್ಗೆ ಏನಾದರೂ ಮಾನ್ಯ ಮಂತ್ರಿಗಳಿಗೆ ಮಾಹಿತಿ ಇದೆಯೇ? ದಯವಿಟ್ಟು ಅದು ಇದ್ದರೆ ಅದನ್ನು ವಿತರಣೆ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಅದಕ್ಕೆ ಅಲೋಪತಿಕ್‌ನವರು ಒಪ್ಪುತ್ತಿಲ್ಲ.

ಅಧ್ಯಕ್ಷರು: ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವುದರಿಂದ ಇದನ್ನು ನಾನು ಆ ಕ್ಷೇತ್ರದವರಿಗೆ ಮಾತನಾಡಲು ಕೊಟ್ಟಿದ್ದೇನೆ ಅಷ್ಟೆ. ಮಾನ್ಯ ರಮಾನಾಥ್ ರೈ ಒಬ್ಬರಿಗೆ, ಬೇರೆಯವರಿಗೆ ಮಾತನಾಡುವುದು ಬೇಡ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ: ಸಪೋರ್ಟ್ ಮಾಡುತ್ತೇವೆಂದರೆ ಬೇಡ ಎನ್ನುತ್ತಿದ್ದೀರಿ.

ಅಧ್ಯಕ್ಷರು: ಬೇಡ ಬೇಡ ಟೈಮ್ ಆಗುತ್ತದೆ.

ಶ್ರೀ ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಈ ಚಿಕೂನ್ ಗುನ್ಯಾ ರೋಗ ಬಹಳಷ್ಟು ಮಟ್ಟಿಗೆ ಒಂದು ಮಾರಕ ರೋಗವಾಗಿದೆ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟವಾಳ , ಬೆಳ್ತಂಗಡಿ ತಾಲ್ಲೂಕಿನಲ್ಲಿ ಇದೆ, ಇದರ ಬಗ್ಗೆ ನಾವು ಒಂದು ಗಮನ ಸೆಳೆಯುವ ಸೂಚನೆಯನ್ನು ಈಗಾಗಲೇ ಮಾನ್ಯ ವಸಂತ ಬಂಗೇರಗೆ ನಾವು ಕಳುಹಿಸಿ ಕೊಟ್ಟಿದ್ದೇವೆ. ಆದರೂ ಕೂಡ ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅವರೂ ಕೂಡ ಈ ಜಿಲ್ಲೆಗೆ ಬಂದಿದ್ದರು. ಅವರು ನಮ್ಮ ಜಿಲ್ಲೆಗೆ ಬಂದಿದ್ದರು. ಅವರು ಬಂದಾಗ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಈ ಚಿಕೂನ್ ಗುನ್ಯಾವನ್ನು ತಡೆಗಟ್ಟಲು ಪ್ರಾರಂಭ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ, ನೀವು ಸೌಜನ್ಯಕ್ಕಾಗಿ ಯಾದರೂ ಯಾವುದೇ ಶಾಸಕರನ್ನು ಕರೆಸಿ, ಏನು ಪರಿಸ್ಥಿತಿಯಾಗಿದೆ ಎಂದು ಮಾತನಾಡುವ ಕೆಲಸವನ್ನು ಮಾಡಲಿಲ್ಲ. ಜಿಲ್ಲೆಯ ಜನರು ಭಯದ ವಾತಾವರಣದಲ್ಲಿದ್ದಾರೆ.

ಅಧ್ಯಕ್ಷರು: ತಾವು ನಿಖರವಾದ ಪ್ರಶ್ನೆಯನ್ನು ಕೇಳಿ. ಇದೇ ವಿಚಾರದ ಬಗ್ಗೆ ಗಮನಸೆಳೆಯುವ ಸೂಚನೆ ಇರುವುದರಿಂದ ಅಲ್ಲಿ ಮಾತನಾಡುವಿರಂತೆ.

ಶ್ರೀ ಬಿ. ರಮಾನಾಥ ರೈ : ಇದನ್ನು ನಿಯಂತ್ರಣ ಮಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನಮ್ಮ ಜಿಲ್ಲೆಯಲ್ಲಿ ಕೆಲವು ಖಾಸಗಿ ಹೋಮಿಯೋಪತಿ ಆಸ್ಪತ್ರೆಗಳು, ಆಯುರ್ವೇದಿಕ್ ಆಸ್ಪತ್ರೆಗಳವರು ಸ್ವಯಂ ಪ್ರೇರಿತವಾಗಿ ಇದನ್ನು ನಿಯಂತ್ರಣ ಮಾಡುವುದಕ್ಕೆ ವಿಶೇಷವಾದ ಕ್ಯಾಂಪುಗಳನ್ನು

ಮಾಡಿ ನಿಯಂತ್ರಣ ಮಾಡುವ ಕೆಲಸವನ್ನು ಮಾಡಿದ್ದಾರೆಯೇ ಹೊರತು ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಇವತ್ತು ಕೂಡ ಸರ್ಕಾರದ ಲೆಕ್ಕಾಚಾರದ ಪ್ರಕಾರ ಒಂದು ಲಕ್ಷಕ್ಕು ಮೇಲ್ಪಟ್ಟು ಸಂಶಯಾಸ್ಪದ ಚಿಕೂನ್ ಗುನ್ಯಾ ರೋಗಿಗಳು ನಮ್ಮ ಜಿಲ್ಲೆಯಲ್ಲಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಇದು ಖಂಡಿತವಾಗಿ ಮೂರು ಲಕ್ಷಕ್ಕಿಂತ ಹೆಚ್ಚು ಜನರು ಸಂಶಯಾಸ್ಪದ ಚಿಕೂನ್ ಗುನ್ಯಾ ರೋಗಿಗಳು ಇದ್ದಾರೆ. 40–50 ಜನರು ಸತ್ತಿದ್ದಾರೆ. ಸತ್ತದ್ದನ್ನು ಸಹ ಸರ್ಕಾರ ಒಪ್ಪುವುದಿಲ್ಲ. ಈ ದೃಷ್ಟಿಯಲ್ಲಿ ಮತ್ತೆ ಪ್ರಶ್ನೆ ಇದೆ ಆಗ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಇಡೀ ದೇಶದಲ್ಲಿ mosquito-borne diseases have come back to India. Mosquito combat programme is a national programme ಇದರಲ್ಲಿ .ಮಲೇರಿಯಾ ಇದೆ, ಫೈಲೇರಿಯಾ ಇದೆ.

ಅಧ್ಯಕ್ಷರು: ಮಾನ್ಯ ಮಹದೇವಪ್ಪನವರೆ, ಇದರ ಬಗ್ಗೆ ಗಮನಸೆಳೆಯುವ ಸೂಚನೆ ಇದೆ. ಆಗ ಇದರ ಬಗ್ಗೆ ಚರ್ಚೆ ಮಾಡುವಿರಂತೆ. ಇದು ಪ್ರಶ್ನೋತ್ತರ. ಇದರಲ್ಲಿ ಈ ರೀತಿ ಚರ್ಚೆ ಮಾಡಿದರೆ ಬಹಳ ಸಮಯವಾಗುತ್ತದೆ. ಹೀಗಾದರೆ ಬೇರೆಯವರಿಗೆ ಅವಕಾಶ ಸಿಗುವುದಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ: ಚಿಕನ್‌ಗುನ್ಯಾ ಎಂಬುದು ಭಯಾನಕ ರೋಗವಲ್ಲ. ಇದರಿಂದ ಸಾವು ನೋವು ಉಂಟಾಗುವುದಿಲ್ಲ. ಆದರೆ, ರಾಜ್ಯದ 27 ಜಿಲ್ಲೆಗಳಲ್ಲೂ ಚಿಕನ್‌ಗುನ್ಯಾ ರೋಗ ಇದೆ. ಸರ್ಕಾರ ತನ್ನ ವಾರ್ಷಿಕ ವರದಿಯಲ್ಲಿ ಆರೋಗ್ಯ ಇಲಾಖೆಯವರು ಕೊಟ್ಟಿದ್ದಾರೆ. ಅದರ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ, ಸಮಯ ಇಲ್ಲ. ಇವರು ಏನು ಮಾಡಬೇಕು ಎಂದರೆ, mosquito control programme, national programme ಆದಮೇಲೆ successful ಆಗಿ control ಮಾಡಬೇಕು. ಸಾಂಕ್ರಾಮಿಕ ರೋಗಗಳು ಬುವುದಕ್ಕೆ ಒಂದು surveillance unit ರಾಜ್ಯ ಮಟ್ಟದಲ್ಲಿದೆ. ಯಾವ್ಯಾವ ಕಾಲದಲ್ಲಿ ಯಾವ್ಯಾವ ರೋಗಗಳು ಬರುತ್ತದೆ ಎಂದು ಹೇಳುವುದಕ್ಕೆ ಒಂದು ಯೂನಿಟ್ ಇದೆ.14 National Programme ಇದೆ. ಆದರೆ ಪ್ರೋಗ್ರಾಮ್ ಅಧಿಕಾರಿಗಳೇ ಇಲ್ಲ. Public health improve ಮಾಡುವುದಕ್ಕೆ hand ಗಳೇ ಇಲ್ಲ. ಇಬ್ಬರೇ ಇಬ್ಬರು ಇರುವುದು? ಹೀಗಾದರೆ ಕಂಟ್ರೋಲ್ ಮಾಡುವುದು ಹೇಗೆ? ಆದ್ದರಿಂದ ಪ್ರೋಗ್ರಾಮ್ ಅಧಿಕಾರಿಗಳನ್ನು ಹಾಕಿ, mosquito controlನಲ್ಲಿ ಫೈಲೇರಿಯಾ ರೋಗಕ್ಕೂ ಇದೆ, ಮಲೇರಿಯಾ ರೋಗಕ್ಕೂ ಇದೆ. ಚಿಕೂನ್ ಗುನ್ಯಾ

ತಡೆಗಟ್ಟುವುದಕ್ಕೂ ಇದೆ. ಆದರೆ ಇಲ್ಲಿ programme officers ಇಲ್ಲದಿದ್ದ ಮೇಲೆ ನೀವು ಮಾಡುವುದು ಏನು? ಆದ್ದರಿಂದ ಸರ್ಕಾರ ಸೀರಿಯಸ್ ಆಗಿ National Programme implementation ಮಾಡುವಾಗ ಅದಕ್ಕೆ ಬೇಕಾದ Public Health Officers, programmer officersನ್ನು fill up ಮಾಡಬೇಕು. 14 ರಲ್ಲಿ ಎರಡೇ ಇರುವುದು.

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ಇದರ ಬಗ್ಗೆ ಸಲಹೆ ಕೊಟ್ಟಿರುವ ಎಲ್ಲಾ ಶಾಸಕರ ಸಭೆಯೊಂದನ್ನು ಕರೆದು ಈ ರೋಗವನ್ನು ಸಂಪೂರ್ಣವಾಗಿ ಯಾವ ರೀತಿಯಾಗಿ ತಡೆಗಟ್ಟಬಹುದು ಎಂಬುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಡಾ: ಬಗಲಿ ಸಾರ್ವಭೌಮ ಸಡಗೌಡ: ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಇದೆ. ಆಗ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಡಾ: ಬಗಲಿ ಸಾರ್ವಭೌಮ ಸಡಗೌಡ: ಮಾನ್ಯ ಅಧ್ಯಕ್ಷರೆ, Please listen to me, it is a self linden disease. Hence ನಾವು ಏನು ಮಾಡುತ್ತೇವೆಂದರೆ, ಇದರಿಂದ ಏನು ಸಿಂಪ್ಟಮ್ಸ್ ಬರುತ್ತವೆ, ಇದಕ್ಕೆ ಟ್ರೀಟ್ಮೆಂಟ್ ಇದೆ. It is very wrong to say that there is no treatment to chikungunya. chikungunya is self disease. There are sufficient drugs to treat is. There is no chance of the disease being grave.

ಡಾ: ಹೆಚ್.ಸಿ. ಮಹದೇವಪ್ಪ : ಡಾ: ಬಗಲಿಯವರು ಡಿ.ಹೆಚ್.ಓ. ಆಗಿದ್ದರು. Programme Officer ಆಗಿದ್ದರು. ಅವರು ಸಲಹೆ ಕೊಡಲಿ.

•

ಕೊಪ್ಪಳ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ಶಾಲೆಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	118 (278)
ಸದಸ್ಯರ ಹೆಸರು	:	ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ವಿಷಯ	:	ವಸತಿ ಶಾಲೆಗಳು
ಸಚಿವರ ಹೆಸರು ಮತ್ತು ಪದನಾಮ	:	ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು)

ಅ ಕೊಪ್ಪಳ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು):

1. ಸಮಾಜ ಕಲ್ಯಾಣ ಇಲಾಖೆ:

ಇಲಾಖಾವತಿಯಿಂದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ಶಾಲೆಗಳು ನಡೆಯುತ್ತಿರುವುದಿಲ್ಲ.

ಆದರೆ, 1ನೇ ತರಗತಿಯಿಂದ 5ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಕೊಪ್ಪಳ ಜಿಲ್ಲೆಯಲ್ಲಿ ಗಂಗಾವತಿ ತಾಲ್ಲೂಕಿನ ಗಂಗಾವತಿ ಟೌನಿನಲ್ಲಿ ಒಂದು ವಸತಿ ಶಾಲೆಯನ್ನು ನಡೆಸಲಾಗುತ್ತಿದೆ.

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ 36 ಮೆಟ್ರಿಕ್-ಪೂರ್ವ ಮತ್ತು 7 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ತಾಲ್ಲೂಕು	ಮೆಟ್ರಿಕ್-ಪೂರ್ವ		ಮೆಟ್ರಿಕ್-ನಂತರ	
	ನಿಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ	ನಿಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ
ಕೊಪ್ಪಳ	8	460	2	125
ಕುಷ್ಠಗಿ	9	520	1	65
ಗಂಗಾವತಿ	7	395	2	125
ಯಲಬುರ್ಗಾ	12	690	2	125
ಒಟ್ಟು	**36**	**2065**	**7**	**440**

3. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಯಾವುದೇ ವಸತಿ ಶಾಲೆಗಳಿರುವುದಿಲ್ಲ.

ತಾಲ್ಲೂಕು	ವಸತಿ ಶಾಲೆಗಳ ಸಂಖ್ಯೆ
1. ಗಂಗಾವತಿ	3
2. ಯಲಬುರ್ಗಾ	5

4.

3. ಕೊಪ್ಪಳ	2
4. ಕುಷ್ಟಗಿ	2
ಒಟ್ಟು	**12**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:

ಕೊಪ್ಪಳ ಜಿಲ್ಲೆಗೆ 12 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮಂಜೂರಾಗಿರುತ್ತವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಆ ಸದರಿ ತಾಲ್ಲೂಕಿಗೆ ನೂತನವಾಗಿ ಮಂಜೂರಾಗಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

1. ಸಮಾಜ ಕಲ್ಯಾಣ ಇಲಾಖೆ:

ಈ ಇಲಾಖೆಯಿಂದ ಸದರಿ ತಾಲ್ಲೂಕಿಗೆ ನೂತನವಾಗಿ ವಸತಿ ಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ.

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಈ ಇಲಾಖೆಯಿಂದ ಹೊಸ ವಿದ್ಯಾರ್ಥಿನಿಲಯಗಳು ಮಂಜೂರಾಗಿರುವುದಿಲ್ಲ.

3. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:

ಕೊಪ್ಪಳ ತಾಲ್ಲೂಕಿಗೆ ಈವರೆಗೆ ಒಂದು ಹಿಂದುಳಿದ ವರ್ಗಗಳ ಹಾಗೂ ಒಂದು ಅಲ್ಪಸಂಖ್ಯಾತರ ವಸತಿ ಶಾಲೆ ಒಟ್ಟು ಎರಡು ವಸತಿ ಶಾಲೆಗಳು ಮಂಜೂರಾಗಿರುತ್ತವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಉತ್ತರದಲ್ಲಿ ಇಲಾಖಾವತಿಯಿಂದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ಶಾಲೆಗಳು ನಡೆಯುತ್ತಿರುವುದಿಲ್ಲವೆಂದು ಹೇಳಿದ್ದಾರೆ. ಆ ಶಾಲೆಗಳನ್ನು ಈಗಲಾದರು ಪ್ರಾರಂಭ ಮಾಡುತ್ತೀರ ಎಂಬುದನ್ನು ಮಾನ್ಯ ಸಚಿವರಲ್ಲಿ ಕೇಳ ಬಯಸುತ್ತೇನೆ. ಎರಡನೆಯದು, ಅವರು ಜಿಲ್ಲಾವಾರು ಮೆಟ್ರಿಕ್ ಪೂರ್ವ ಮತ್ತು ನಂತರ ಎಷ್ಟು ಹಾಸ್ಟೆಲ್‌ಗಳು ಇವೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಅಲ್ಲಿ 36 ಹಾಸ್ಟೆಲ್‌ಗಳಿದೆಯೆಂದು ಹೇಳಿದ್ದಾರೆ. ನಮ್ಮ ಭಾಗದಲ್ಲಿ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಇಲ್ಲದಿರುವುದರಿಂದ ಉನ್ನತ ವ್ಯಾಸಂಗ ಮಾಡಲು ಆಗುತ್ತಿಲ್ಲ. ಈಗ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರು ಇದರ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಬಿ.ಸಿ.ಎಂ. ಅಧಿಕಾರಿಗಳೂ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಕೊಪ್ಪಳ ತಾಲ್ಲೂಕಿಗೆ

ಕಾಲೇಜು ಬಾಲಕಿಯರ ಮತ್ತು ಬಾಲಕರ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳನ್ನು ಹೆಚ್ಚುವರಿಯಾಗಿ ಕೊಡುವುದಕ್ಕೆ ಅವರು ಬಯಸುತ್ತಾರೆಯೇ ಎಂದು ತಮ್ಮ ಮೂಲಕ ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ ಮೆಟ್ರಿಕ್ ಪೂರ್ವ ಮತ್ತು ನಂತರದ ಕೆಲವು ಹಾಸ್ಟೆಲ್ ಬಗ್ಗೆ ಪ್ರಸ್ತಾವನೆ ಬಂದಿದೆ. ಇದನ್ನು ಪರಶೀಲಿಸಿ ಆ ಕ್ಷೇತ್ರಕ್ಕೆ ಮಂಜೂರಾತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಒಂದು ವರದಿಯನ್ನು ಕೊಟ್ಟಿದ್ದಾರೆ. ಡಾ: ನಂಜುಂಡಪ್ಪನವರು ಕೂಡ ಏನು ಹೇಳಿದ್ದಾರೆಂದರೆ ರಾಜ್ಯದಲ್ಲಿ ಸುಮಾರು 29 ಜಿಲ್ಲೆಗಳಲ್ಲಿ ಕಾಲೇಜು ಮಟ್ಟದ ಬಾಲಕಿಯರ ಹಾಗೂ ಬಾಲಕರ 58 ವಸತಿನಿಲಯವನ್ನು ಪ್ರಾರಂಭ ಮಾಡಬೇಕೆಂಬ ವರದಿ ಇದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ತಿಳಿಸಬೇಕು.

ಶ್ರೀ ಡಿ. ಸುಧಾಕರ: ಈ ಬಾರಿ 175 ಬಿ.ಸಿ.ಎಂ. ಮಹಿಳಾ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. 15 ಎಸ್.ಟಿ. ಜನಾಂಗದವರಿಗೆ 100 ಎಸ್.ಸಿ. ಜನಾಂಗದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರೇನು ಪ್ರಸ್ತಾವನೆಯನ್ನು ಕೇಳಿದ್ದಾರೆ ಅದನ್ನು ಇದರಲ್ಲಿ ಮಾಡಿಕೊಡಲು ಪರಿಶೀಲನೆ ಮಾಡುತ್ತೇನೆ.

ರಾಜ್ಯದಲ್ಲಿ ಸಾರ್ವಜನಿಕ ಕಟ್ಟಡಗಳಲ್ಲಿ ಧೂಮಪಾನ ನಿಷೇಧ ಮಾಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**119 (439)**
ಸದಸ್ಯರ ಹೆಸರು	:	**ಶ್ರೀ ಸೋಮಣ್ಣ. ವಿ. (ಗೋವಿಂದರಾಜ ನಗರ)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ರಾಜ್ಯದಲ್ಲಿ ಈಗ ಸಾರ್ವಜನಿಕ ಕಟ್ಟಡಗಳಲ್ಲಿ ಧೂಮಪಾನ ನಿಷೇಧ ಮಾಡಲಾಗಿದೆಯೇ:

ಹೌದು

ಆ) ಹಾಗಿದ್ದಲ್ಲಿ, ಧೂಮಪಾನ ನಿಷೇಧ ಮಾಡಲಾದ ಸಾರ್ವಜನಿಕ ಕಟ್ಟಡ ಹಾಗೂ ಸಾರ್ವಜನಿಕ ಸ್ಥಳಗಳು ಯಾವುವು:

ಸರ್ಕಾರದ ಆದೇಶ ಸಂಖ್ಯೆ: ಸಂವ್ಯೆಶಾಇ 34 ಶಾಸನ 2001, ಬೆಂಗಳೂರು ದಿನಾಂಕ 10-03-2003 ರಲ್ಲಿ ಆಸ್ಪತ್ರೆಗಳು, ಆರೋಗ್ಯ ಸಂಸ್ಥೆಗಳು, ಸಾರ್ವಜನಿಕರ ಕಛೇರಿಗಳು, ನ್ಯಾಯಾಲಯಗಳು, ಶಾಲೆಗಳು, ಆರಾಧನ ಸ್ಥಳಗಳ ಆವರಣದಲ್ಲಿ ಧೂಮಪಾನ ನಿಷೇಧ ಮಾಡಲಾಗಿದೆ.

ಇ) ಈ ಕಾನೂನನ್ನು ಉಲ್ಲಂಘಿಸಿರುವ ಪ್ರಕರಣಗಳೆಷ್ಟು ಹಾಗೂ ಎಷ್ಟು ಜನರ ಮೇಲೆ ಇಲ್ಲಿಯವರೆಗೆ ಕ್ರಮ ಕೈಗೊಳ್ಳಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಈ ಕಾನೂನನ್ನು ಉಲ್ಲಂಘಿಸಿರುವ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.

ಈ) ಈ ನಿಷೇಧವನ್ನು ಖಾಸಗಿ ಕಟ್ಟಡಗಳಿಗೂ ವಿಸ್ತರಿಸಲು ಕೇಂದ್ರ ಸರ್ಕಾರ ಆದೇಶಿಸಿದೆಯೇ:

ಹೌದು

ಉ) ಹಾಗಿದ್ದಲ್ಲಿ, ಈ ನಿಯಮವನ್ನು ಪಾಲಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ?

ಸರ್ಕಾರ ಈ ದಿಸೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ತಂಬಾಕು ನಿಯಂತ್ರಣ ಕಾಯಿದೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಶಾಸನ, ಕಾಯಿದೆ ಎಂದು ಮಾಡಿದ ಮೇಲೆ ಅದು ಜಾರಿಗೆ ಬರಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಶ್ರೀರಾಮುಲುರವರು 2 ತಿಂಗಳಿನಿಂದ ಸಚಿವರಾಗಿದ್ದಾರೆ. ನಾನು ಕೂಡ ಬೆಂಗಳೂರು ನಗರದಲ್ಲಿ 25 ವರ್ಷದಿಂದ ಜನಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ. 2003 ರಲ್ಲಿ ಬಂದಂಥ ಈ ಕಾಯಿದೆ, ಯಾವ್ಯಾವ ಇಲಾಖೆಯಲ್ಲಿ ಇದನ್ನು ಸರ್ಕಾರ ಮಾಡಿದೆ 2001ರಲ್ಲಿ ಎಂಬುದಕ್ಕೆ ಆರೋಗ್ಯ ಸಂಸ್ಥೆಗಳು, ಸಾರ್ವಜನಿಕ ಆಸ್ಪತ್ರೆಗಳು, ಸಾರ್ವಜನಿಕ ಕಛೇರಿಗಳು ನ್ಯಾಯಾಲಯಗಳು, ದೇವಸ್ಥಾನಗಳು ಇನ್ನಿತರೆ ಕಡೆ ಧೂಮಪಾನವನ್ನು ನಿಷೇಧ ಮಾಡಿದ್ದೇವೆ ಎಂದು ಹೇಳುತ್ತಾರೆ. ನಿಮ್ಮ ಇಲಾಖೆಗಳಲ್ಲು ಕೆಲಸ ಮಾಡುತ್ತಿದ್ದಾರಲ್ಲ ಆ ಬಾತ್‌ರೂಮ್‌ಗೆ ಹೋದರೆ, ಟಾಯ್‌ಲೇಟ್‌ಗಳಲ್ಲಿ ಹೋದರೆ ಧೂಮಪಾನ ಮಾಡಿದ್ದಾರೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಎಲ್ಲೋ ಒಂದು ಕಡೆ ಶಾಸನ ಎಂಬುದು ಶಾಸನವಾಗಿದೆಯೇ ಹೊರತು ಇದನ್ನು ಆಳವಡಿಸುವ ಕೆಲಸವನ್ನು ಯಾರು ಕೂಡ ಮಾಡಿಲ್ಲ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಇಂಥ ಕಾನೂನನ್ನು

ಮಾಡಿ ಸಾರ್ವಜನಿಕವಾಗಿ ಎಲ್ಲವನ್ನು ಕೂಡ ಪೇಚಿಗೆ ಸಿಲುಕಿಸುವ ಬದಲು ಇದನ್ನು ಮಾಡಲು ಆಗುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಮಾಡಲು ತಿಳಿಸಿ, ಇಲ್ಲದಿದ್ದರೆ ಇದನ್ನು ಮಾಡಬೇಕು ಎಂದರೆ ಕಟ್ಟುನಿಟ್ಟಾಗಿ ತನ್ನಿ. ಇದನ್ನು ಕಟ್ಟುನಿಟ್ಟಾಗಿ ತಾರದೆಯೆ ಇಲ್ಲಿ ಏನು ಹೇಳುತ್ತಿದ್ದೀರಿ. ಉತ್ತರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಈ ಕಾನೂನನ್ನು ಉಲ್ಲಂಘಿಸಿರುವ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ ಎಂದು ಹೇಳಿದ್ದೀರಿ. ಇದನ್ನು ಬೇರೆ ಬೇರೆ ಖಾಸಗಿ ಸಂಸ್ಥೆಗಳಿಗೂ ವಿಸ್ತರಿಸುತ್ತೀರ ಎಂದು ಕೇಳಿದ್ದರೆ, ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಹಾಗಿದ್ದರೆ ಈ ನಿಯಮವನ್ನು ಪಾಲಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ ಎಂದು ಕೇಳಿದರೆ, ಮಾಡುತ್ತೇವೆಂದು ಉತ್ತರವನ್ನು ಕೊಡುತ್ತೀರಿ. ಇದುವರೆಗು, ಯಾವುದಾದರು ಒಂದೇ ಒಂದು ಘಟನೆ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 8 ದಿನ ಮಾಡಿ ಎಂದು ಕಳುಹಿಸಿದರೆ, ಪಾಠ ಮಾಡುವ ಮಾಸ್ಟರ್‌ಗಳನ್ನು ಕರೆದುಕೊಂಡು ಬಂದು ಬೀಡಿ ಸೇದುತ್ತಿರುವವರನ್ನು ಹಿಡಿದು ಹಾಕಿದ್ದೇವೆಂದು ಹೇಳಿದರು. ಈ ಕಾನೂನು ಇಲ್ಲಿಯವರೆಗೆ ಸಾರ್ವಜನಿಕವಾಗಿ ಜಾರಿಗೆ ಬಂದಿಲ್ಲ. ಜಾರಿಗೆ ಬರುವುದಕ್ಕೆ ನಿಮ್ಮ ಕೈಯಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳಲು ಸಾಧ್ಯವಿದೆಯೇ? ತೆಗೆದುಕೊಳ್ಳಲು ಸಾಧ್ಯವಿಲ್ಲದಿದ್ದರೆ ದಯಮಾಡಿ ಇದನ್ನು ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಹೇಳಿ. ಇದನ್ನು ತೆಗೆದುಕೊಳ್ಳುವಾಗ ನಾವು ಯಾವ ಕಾನೂನನ್ನು ಜಾರಿಗೆ ತಂದಿದ್ದೇವೆ ಅದನ್ನು ಜಾರಿಗೆ ತರತಕ್ಕ ಅಧಿಕಾರಿಗಳು ಯಾರಿದ್ದಾರೆ, ಕಛೇರಿಗಳು ಯಾವುದು ಇದೆ, ದೇವಾಲಯಗಳು ಯಾವುದು ಇದೆ? ಇವತ್ತಿನಿಂದಲಾದರು ಕಟ್ಟುನಿಟ್ಟಾಗಿ ಬೀಡಿ, ಸಿಗರೇಟು ಸೇದತಕ್ಕ, ಧೂಮಪಾನ ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಇದನ್ನು ಕಾನೂನಿನ ಚೌಕಟ್ಟಿನಲ್ಲಿ ತರುತ್ತೀರೋ ಇಲ್ಲವೊ ದಯಮಾಡಿ ಹೇಳಬೇಕು.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಧೂಮಪಾನ ನಿಷೇಧದ ಬಗ್ಗೆ ಇದುವರೆಗೂ ಯಾವುದೇ ಕೇಸ್ ದಾಖಲಾಗಿಲ್ಲ. ಏಕೆಂದರೆ, ಇತ್ತೀಚೆಗೆ ನಾನು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂದರ್ಭದಲ್ಲಿ ಈ ವಿಷಯವನ್ನು ನನ್ನ ಗಮನಕ್ಕೆ ತಂದರು. ಜಿಲ್ಲಾ ಆಸ್ಪತ್ರೆಗಳಲ್ಲಿ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ತಹಶೀಲ್ದಾರ್ ಕಚೇರಿಗಳಲ್ಲಿ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಯಾರು ಧೂಮಪಾನ ಮಾಡುತ್ತಾರೋ, ಕಡ್ಡಾಯವಾಗಿ ಅಧಿಕಾರಿಗಳಾದ ನೀವೇ ಕೇಸ್ ದಾಖಲಿಸಿಕೊಳ್ಳಬೇಕೆಂದು ಈಗಾಗಲೇ ಪತ್ರವನ್ನೂ ಕೂಡ ಕಳುಹಿಸಿಕೊಟ್ಟಿದ್ದೇನೆ. ಇಲ್ಲಿಯವರೆಗೂ ಯಾವುದೇ ಧೂಮಪಾನದ ಕೇಸ್ ದಾಖಲಾಗಿಲ್ಲ. ಇನ್ನು ಮುಂದೆ ಎಲ್ಲಾ ಇಲಾಖೆಗಳಿಂದ ಎಷ್ಟೆಷ್ಟು ಕೇಸುಗಳು ಬರುತ್ತವೋ,.....

ಅಧ್ಯಕ್ಷರು: ಶ್ರೀರಾಮುಲುರವರೆ, ಧೂಮಪಾನ ಮಾಡುವವರು ಯಾರೂ ಸಿಕ್ಕಿಲ್ಲವೋ? ಅಥವಾ ಧೂಮಪಾನ ಮಾಡುವವರ ಮೇಲೆ ಕೇಸ್ ಹಾಕಿಲ್ಲವೋ?

ಶ್ರೀ ವಿ.ಸೋಮಣ್ಣ: ನಾನು ತಮ್ಮ ಮೂಲಕ ಶ್ರೀರಾಮುಲು ಅವರಲ್ಲಿ ವಿನಂತಿಸಿಕೊಳ್ಳುವುದಿಷ್ಟೆ ಯಾವ ಇಲಾಖೆಗಳು, ಈಗ ದೇವಸ್ಥಾನ ... ನಿಮ್ಮ ಇಲಾಖೆ ಏನು ಮಾಡುತ್ತದೆ ಸ್ವಾಮಿ? ದೇವಸ್ಥಾನ, ಶಾಲೆಗಳು ಎಂದು ಹೇಳುತ್ತೀರಿ, ಇದಕ್ಕೆ ಯಾರೂ ಸಹ ಜವಾಬ್ದಾರಿ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ನೀವು ಆರೋಗ್ಯ ಇಲಾಖೆ ಬಗ್ಗೆ ಕೇಳಿದ್ದೀರಿ, ಅವರು ಯಾವುದೇ ಧೂಮಪಾನ ಪ್ರಕರಣಗಳು ದಾಖಲಾಗಿಲ್ಲವೆಂದು ಹೇಳಿದ್ದಾರೆ. ನಿಮ್ಮ ಇಲಾಖೆಗೆ ಸಂಬಂಧಿಸಿದಂತೆ ಮುಂದೆ ಏನು ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಬಿ. ಶ್ರೀರಾಮುಲು: ಕಟ್ಟುನಿಟ್ಟಾಗಿ ಯಾವ ರೀತಿ ಕ್ರಮ ಕೈಗೊಳ್ಳಬೇಕೋ ಆದಷ್ಟು ಬೇಗ ಕ್ರಮ ಕೈಗೊಳ್ಳುವುದಕ್ಕೆ ನಾನು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಸೋಮಣ್ಣ: ಅಧ್ಯಕ್ಷರೆ, ನಾನು ಕೇಳುತ್ತಿರುವುದನ್ನು ತಾವು ಅರ್ಥ ಮಾಡಿಕೊಂಡಿರಿ. ಈ ಕಾನೂನು ಏನು ನಾವು ತಂದಿದ್ದೇವೆ, ದಯಮಾಡಿ ತಾವು ಸ್ವಲ್ಪ ಗಮನಿಸಬೇಕು. ಪ್ರಶ್ನೆಯಲ್ಲಿ ಹಾಗಿದ್ದಲ್ಲಿ, ಧೂಮಪಾನ ನಿಷೇಧ ಮಾಡಲಾದ ಸಾರ್ವಜನಿಕ ಕಟ್ಟಡ ಹಾಗೂ ಸಾರ್ವಜನಿಕ ಸ್ಥಳಗಳು ಯಾವುವು? ಎಂದು ಕೇಳಿದ್ದೇವೆ. ಅಧ್ಯಕ್ಷರೆ, ನಾನು ಹೇಳುವುದನ್ನು ದಯಮಾಡಿ ಕೇಳಿ. ನ್ಯಾಯಾಲಯಗಳಿಗೆ ಆರೋಗ್ಯ ಇಲಾಖೆಯವರು ಹೋಗುತ್ತಾರೆಯೇ? ಶಾಲೆಗಳಿಗೆ ಆರೋಗ್ಯ ಇಲಾಖೆಯವರು ಹೋಗುತ್ತಾರೆಯೇ?

ಅಧ್ಯಕ್ಷರು: ಸೋಮಣ್ಣನವರೆ, ಈ ಪ್ರಶ್ನೆಯನ್ನು ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿ.

ಶ್ರೀ ವಿ.ಸೋಮಣ್ಣ: ಆರೋಗ್ಯ ಇಲಾಖೆಯವರು ನೇಮಕ ಮಾಡಬೇಕು. ಕಾನೂನು ಮಾಡಿದವರು ಯಾರಿದ್ದಾರೆ, ಆ ಇಲಾಖೆ ಇದರ ಬಗ್ಗೆ ಆಸಕ್ತಿ ವಹಿಸಬೇಕಾಗುತ್ತದೆ.

ಅಧ್ಯಕ್ಷರು: ಅದನ್ನು ಮಾಡುತ್ತೇವೆಂದು ಅವರು ಹೇಳಿದರಲ್ಲ.

ಶ್ರೀ ಬಿ. ಶ್ರೀರಾಮುಲು: ನಮ್ಮ ಇಲಾಖೆಯಲ್ಲಿ ಸಿಬ್ಬಂದಿ ಕೂಡ ಬಹಳಷ್ಟು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಏಕೆಂದರೆ, ನಮ್ಮ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕಡಿಮೆ ಇರುವ ಸಮಯದಲ್ಲೇ ಈ ಧೂಮಪಾನ ನಿಷೇಧದ ಬಗ್ಗೆ ನಮ್ಮ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ನೇಮಿಸುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಅದನ್ನು ಅನುಷ್ಠಾನಕ್ಕೆ ಪೊಲೀಸಿನವರು ತರುತ್ತಿಲ್ಲ. ದೇವಸ್ಥಾನಗಳಲ್ಲೂ ಸೇದುತ್ತಾರೆ, ಹೋಟೆಲ್‌ಗಳಲ್ಲೂ ಸೇದುತ್ತಾರೆ, ಆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದಲ್ಲಿ ಮಾತ್ರ ಕಾನೂನು ತಂದಿದ್ದಕ್ಕೆ ಸಾರ್ಥಕವಾಗುತ್ತದೆಯೇ ಹೊರತು ಇಲ್ಲದಿದ್ದರೆ ಏನೂ ಉಪಯೋಗವಾಗುವುದಿಲ್ಲ.

ಅಧ್ಯಕ್ಷರು: ಜನರೂ ಸಹ ತಮ್ಮ ಮೇಲೆ ನಿಯಂತ್ರಣ ಹೇರಿಕೊಳ್ಳಬೇಕು.

ಡಾ: ಹೆಚ್.ಸಿ. ಮಹದೇವಪ್ಪ: ಅಧ್ಯಕ್ಷರೆ, ವಿಧಾನ ಸೌಧ ಮತ್ತು ಎಂ.ಎಸ್. ಬಿಲ್ಡಿಂಗ್‌ಗಳಲ್ಲಿ ಧೂಮಪಾನ ನಿಷೇಧಿಸಬೇಕೆಂದು ತಾವು ಸರ್ಕಾರಕ್ಕೆ ಒಂದು ಸೂಚನೆ ಕೊಡಿ. ಜೊತೆಗೆ, ಯಾರ್‍ಯಾರು ಸ್ಮೋಕ್ ಮಾಡುತ್ತಾರೆ, ನಾನ್-ಸ್ಮೋಕರ್ಸ್ ಇದ್ದರೆ, Passive effect ಆಗುತ್ತದೆ. Active smokers and Passive smokers, it's effect on the non-smokers. ದಯಮಾಡಿ ಈ ಸರ್ಕಾರಕ್ಕೆ ಸೂಚನೆ ಕೊಡಬೇಕು. ವಿಧಾನಸೌಧ ಮತ್ತು ಎಂ.ಎಸ್. ಬಿಲ್ಡಿಂಗ್‌ಗಳಲ್ಲಿ ಕಟ್ಟುನಿಟ್ಟಾಗಿ ಧೂಮಪಾನ ನಿಷೇಧ ಮಾಡಬೇಕೆಂದು ಹೇಳಬೇಕು.

ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿ ಮಹಲನ್ನು ನಿರ್ಮಿಸಲು ಸರ್ಕಾರವು ಮಂಜೂರಾತಿ ನೀಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	121 (524)
ಸದಸ್ಯರ ಹೆಸರು	:	ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.ಎಂ.ಎಲ್.ಎ. (ಗೌರಿಬಿದನೂರು)
ವಿಷಯ	:	ಶಾದಿಮಹಲ್ ನಿರ್ಮಾಣಕ್ಕೆ ಅನುದಾನ ಮಂಜೂರಾತಿ
ಉತ್ತರಿಸುವ ಸಚಿವರು	:	ಪ್ರೊ.ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್‌ನ್ನು ನಿರ್ಮಿಸಲು ಸರ್ಕಾರವು ಮಂಜೂರಾತಿಯನ್ನು ನೀಡುವುದೇ;

ಪ್ರಸ್ತಾವನೆ ಸರ್ಕಾರದ ಪರಶೀಲನೆಯಲ್ಲಿದೆ

ಆ) ಈ ಶಾದಿ ಮಹಲ್ ಕಟ್ಟಡದ ನಿರ್ಮಾಣಕ್ಕೆ ಗೌರಿಬಿದನೂರು ಪಟ್ಟಣದಲ್ಲಿ 1 ಎಕರೆ ಜಮೀನನ್ನು ಕಾಯ್ದಿರಿಸಿದ್ದು, ಹಣ ಬಿಡುಗಡೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಇ) ಹಾಗಿದ್ದಲ್ಲಿ, ಶಾದಿಮಹಲ್ ಕಟ್ಟಡದ ನಿರ್ಮಾಣಕ್ಕೆ ಹಣವನ್ನು ಬಿಡುಗಡೆ ಮಾಡಿ ಈ ಭಾಗದ ಅಲ್ಪಸಂಖ್ಯಾತ ಜನಾಂಗದವರಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳುವುದೇ?

ಪರಿಶೀಲಿಸಲಾಗುವುದು.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಉತ್ತರದಲ್ಲಿ ಪರಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ನಮ್ಮ ಪಟ್ಟಣದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಜನಾಂಗವಿದೆ. ಅನೇಕ ಸಂದರ್ಭಗಳಲ್ಲಿ ಅವರು ತಮ್ಮ ಕಾರ್ಯಕ್ರಮಗಳನ್ನು ಏರ್ಪಡಿಸಬೇಕಾದರೆ ಶಾಲಾ ಆವರಣಗಳಲ್ಲಿ ಮತ್ತು ಬಯಲು ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಪರಿಸ್ಥಿತಿ ಒದಗಿ ಬಂದಿದೆ. ಇದು ಸರ್ವೆಸಾಮಾನ್ಯವಾಗಿದೆ. ಬಹಳಷ್ಟು ವರ್ಷಗಳಿಂದ ನಾವು ಶಾದಿ ಮಹಲ್ ನಿರ್ಮಾಣಕ್ಕಾಗಿ ಪ್ರಯತ್ನಿಸುತ್ತಿದ್ದೇವೆ. ಮಾನ್ಯ ಸಚಿವರು ನಿರ್ದಿಷ್ಟವಾಗಿ ಶಾದಿ ಮಹಲ್ ನಿರ್ಮಿಸಿಕೊಡುತ್ತೇವೆಂದು ಭರವಸೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಏಕೆಂದರೆ, ಇದಕ್ಕೆ ಈಗಾಗಲೇ ನಾವು ಒಂದು ಎಕರೆಯಷ್ಟು ಜಮೀನನ್ನು ಕಾದಿರಿಸಿದ್ದೇವೆ. ದಯಮಾಡಿ ಇದನ್ನು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಭರವಸೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಪ್ರೊ: ಮುಮ್ತಾಜ್ ಅಲಿ ಖಾನ್: ನಾನು ನಿಮ್ಮ ಪ್ರಶ್ನೆಯನ್ನು ಕೂಲಂಕಷವಾಗಿ ಗಮನಿಸಿದ್ದೇನೆ. ನಾನು ಜಿಲ್ಲಾ ಉಸ್ತವಾರಿ ಮಂತ್ರಿಯಾಗಿರುವ ಕಾರಣ ಅನೇಕ ಸಲ ಭೇಟಿ ನೀಡಿದ್ದೇನೆ, ವೈಯಕ್ತಿಕವಾಗಿಯೂ ಪರಿಶೀಲಿಸಿದ್ದೇನೆ. ಶಾದಿ ಮಹಲ್ ಅನ್ನು ಗೌರಿಬಿದನೂರಿಗೆ ಇದುವರೆಗೂ ಕೊಡದೇ ಇದ್ದರೆ ಖಂಡಿತವಾಗಿಯೂ ನಿಮಗೆ ಆಶ್ವಾಸನೆ ಕೊಡುತ್ತೇನೆ: ಒಂದು ಶಾದಿ ಮಹಲ್ ಕೊಡುತ್ತೇವೆ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಅದು ನಮಗೆ ಸಂಬಂಧಪಟ್ಟಿದ್ದೇ ಆಗಿದೆ.

ಅಧ್ಯಕ್ಷರು: ಮಾನ್ಯ ಸಚಿವರು ಶಾದಿ ಮಹಲ್ ಅನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ: ಚಿಕ್ಕಬಳ್ಳಾಪುರದಲ್ಲಿ ಇದುವರೆಗೂ ಎಷ್ಟು ಶಾದಿ ಮಹಲ್‌ಗಳನ್ನು ಕೊಟ್ಟಿದ್ದಾರೆಂಬ ವಿವರಗಳು ಬೇಕಲ್ಲ. ಶಾದಿ ಮಹಲ್ ಕಾರ್ಯಕ್ರಮ ಕಳೆದ 2-3 ವರ್ಷಗಳಿಂದ ಬರುತ್ತಿದೆ. ಇದುವರೆಗೂ ಎಷ್ಟು ಶಾದಿ ಮಹಲ್‌ಗಳನ್ನು ಕೊಟ್ಟಿದ್ದೀರೆಂಬ ವಿವರಗಳಾದರೂ ಬೇಕಲ್ಲವೇ?

ಅಧ್ಯಕ್ಷರು: ಈಗ ಅವರು ಕೇಳಿದ್ದು ಗೌರಿಬಿದನೂರಿಗೆ ಸಂಬಂಧಿಸಿದ್ದು.

ಶ್ರೀ ಎನ್. ಸಂಪಂಗಿ: ಗೌರಿಬಿದನೂರು ಅಲ್ಲ, ಶಾದಿ ಮಹಲ್‌ಗಳನ್ನು ಎಷ್ಟು ಕೊಟ್ಟಿದ್ದಾರೆಂಬ ಮಾಹಿತಿ ಬೇಕಲ್ಲ.

ಅಧ್ಯಕ್ಷರು: ತಾವು ಪ್ರತ್ಯೇಕ ಪ್ರಶ್ನೆ ಕೇಳಿ.

ಇಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಣ್ಣಿನ ಬಗ್ಗೆ ಲೆನ್ಸ್ ಅಳವಡಿಸುವ ಉಪಕರಣ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ?

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	122 (462)
ಸದಸ್ಯರ ಹೆಸರು	:	ಶ್ರೀ. ಡಾ: ಬಗಲಿ ಸಾರ್ವಭೌಮ ಸತಗೌಡ (ಇಂಡಿ)
ಉತ್ತರಿಸುವ ಸಚಿವರು	:	ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಣ್ಣಿನ ಲೆನ್ಸ್ ಅಳವಡಿಸುವ ಉಪಕರಣ (ಆಪರೇಟಿಂಗ್ ಮೈಕ್ರೋಸ್ಕೋಪ್) ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಇಂತಹ ಉಪಕರಣವನ್ನು ಸಾರ್ವಜನಿಕ ಆಸ್ಪತ್ರೆಗೆ ಪೂರೈಸುವ ಯೋಜನೆ ಸರ್ಕಾರದ ಮುಂದೆ ಇದೆಯೇ:

ಸಾರ್ವಜನಿಕ ಆಸ್ಪತ್ರೆ, ಮುದ್ದೆಬಿಹಾಳ್‌ನಲ್ಲಿದ್ದ ಸದರಿ ಉಪಕರಣವನ್ನು ಸಾರ್ವಜನಿಕ ಆಸ್ಪತ್ರೆ, ಇಂಡಿ ಇಲ್ಲಿಗೆ ನೀಡಲಾಗಿದೆ.

ಇ) ಇದ್ದಲ್ಲಿ ಯಾವ ಅವಧಿಯೊಳಗೆ ಈ ಉಪಕರಣವನ್ನು ಪೂರೈಸಲಾಗುವುದು ವಿವರ ನೀಡುವುದು;

ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಸುಮಾರು 11 ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಕಣ್ಣಿನ ಲೆನ್ಸ್ ಅಳವಡಿಸುವ

ಉಪಕರಣ (ಆಪರೇಟಿಂಗ್ ಮೈಕ್ರೋಸ್ಕೋಪ್)ವನ್ನು ಪೂರೈಸುವ ಯೋಜನೆ ಕೈಗೊಂಡಿದೆ.

ಈ) ಇಂತಹ ಯೋಜನೆ ಇಲ್ಲದಿದ್ದಲ್ಲಿ, ಸಾರ್ವಜನಿಕ ಹಿತದೃಷ್ಟಿಯಿಂದ ಈ ಉಪಕರಣವನ್ನು ಪೂರೈಸಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳುವರೆ?

ಉದ್ಭವಿಸುವುದಿಲ್ಲ.

ಡಾ: ಬಗಲಿ ಸಾರ್ವಭೌಮ ಸತಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇಂಡಿ ಸಾರ್ವಜನಿಕ ಆಸ್ಪತ್ರೆಗೆ ಕಣ್ಣಿನ ಲೆನ್ಸ್ ಆಳವಡಿಸುವ ಉಪಕರಣ (Operating Microscope) ಪೂರೈಸಿದ್ದಕ್ಕಾಗಿ ನಾನು ಅವರಿಗೆ ಮೊದಲನೆಯದಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ Microscope ತಾತ್ಪೂರ್ತಿಕವಾಗಿ ಪೂರೈಸಲಾಗಿದೆ. ಮಾನ್ಯ ಮಂತ್ರಿಗಳು ಮುಂದುವರೆದು ಹೇಳಿದ್ದಾರೆ: ರಾಷ್ಟ್ರೀಯ ಅಂಧತ್ವ ನಿವಾರಣ ಕಾರ್ಯಕ್ರಮದಡಿಯಲ್ಲಿ ಸುಮಾರು 11 ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಅಳವಡಿಸುವ Microscope ಅನ್ನು ಪೂರೈಸುವ ಯೋಜನೆ ಕೈಗೊಂಡಿದೆ. ಈ ಯೋಜನೆಯಡಿಯಲ್ಲಿ ಇಂಡಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಪರ್ಮನೆಂಟಾಗಿ ಒಂದು microscope ಅನ್ನು ಒದಗಿಸಿಕೊಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಮುಂದುವರೆದು, ಬಹುತೇಕ ತಾಲ್ಲೂಕು ಆಸ್ಪತ್ರೆಗಳಲ್ಲಿ ಈ Operating Microscope ಉಪಕರಣ ಇಲ್ಲದ ಕಾರಣ ನಾವು ರೋಗಿಗಳನ್ನು ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸಿಕೊಡಬೇಕಾಗುತ್ತದೆ. ಆದುದರಿಂದ, ದಯವಿಟ್ಟು ಮಾನ್ಯ ಮಂತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿ Operating Microscope ಉಪಕರಣಗಳನ್ನು ಪಡೆದು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳಿಗೆ ಪೂರೈಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಸದಸ್ಯರು ನೀಡಿರುವ ಸಲಹೆಗಳೆಲ್ಲವನ್ನೂ ಒಪ್ಪಿಕೊಂಡು ಜಾರಿಗೆ ತರಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

<u>ವಿದ್ಯಾರ್ಥಿ ನಿಲಯಗಳ ವಿವರ.</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 123(527)

ಸದಸ್ಯರ ಹೆಸರು : ಶ್ರೀ ಗೋಪಾಲ ಭಂಡಾರಿ ಹೆಚ್.

ಕಾರ್ಕಳ

ವಿಷಯ : ವಿದ್ಯಾರ್ಥಿ ನಿಲಯಗಳ ವಿವರ

ಉತ್ತರಿಸುವ ಸಚಿವರು : ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಕಾರ್ಕಳ ತಾಲ್ಲೂಕು ಮತ್ತು ಉಡುಪಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು,

ವಿವರಗಳು ಕೆಳಕಂಡಂತಿದೆ.

ಉಡುಪಿ ಜಿಲ್ಲೆ

ವಿವರ	ಬಾಲಕರು	ಬಾಲಕಿಯರು	ಒಟ್ಟು
ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	10	7	17
ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ	1	–	1

ಕಾರ್ಕಳ ತಾಲ್ಲೂಕು

ವಿವರ	ಬಾಲಕರು	ಬಾಲಕಿಯರು	ಒಟ್ಟು
ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	4	1	5

ಆ ಈ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳೆಷ್ಟು;

ಉಡುಪಿ ಜಿಲ್ಲೆಯ 18 ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 764 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ವಿದ್ಯಾರ್ಥಿ ನಿಲಯಗಳಲ್ಲಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ–133 ಖಾಲಿ ಇರುವ ಹುದ್ದೆಗಳ ಸಂಖ್ಯೆ–53. ಕಾರ್ಕಳ ತಾಲ್ಲೂಕಿನಲ್ಲಿರುವ 5 ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು–146 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ವಿದ್ಯಾರ್ಥಿ ನಿಲಯಗಳಲ್ಲಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ–16. ಖಾಲಿ ಇರುವ ಹುದ್ದೆಗಳ ಸಂಖ್ಯೆ–8

ಇ ಕಳೆದೆರಡು ವರ್ಷಗಳ ಹಿಂದೆ ಕಾರ್ಕಳ ತಾಲ್ಲೂಕಿನಲ್ಲಿ ಪರಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ವಿದ್ಯಾರ್ಥಿ ವೇತನದ ಹಣ ಹಂಚದೆ ಇಲಾಖೆಯ ಅಧಿಕಾರಿಯೊಬ್ಬರು ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು, ಶ್ರೀ. ಎಸ್. ಕೃಷ್ಣಮೂರ್ತಿ ಮೂಲತಃ ಕೃಷಿ ಇಲಾಖೆ ಇವರು ಈ ಹಿಂದೆ ಕಾರ್ಕಳ ತಾಲ್ಲೂಕಿನಲ್ಲಿ ನಿಯೋಜನೆ ಮೇಲೆ ತಾ.ಸ.ಕ.ಅ. ರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ 2004-05ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಬಿಡುಗಡೆಯಾದ ಹಣದಲ್ಲಿ ರೂ. 4,02,925/- ಗಳನ್ನು ವಿವಿಧ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಹೆಸರಿನಲ್ಲಿ ವಿದ್ಯಾರ್ಥಿವೇತನೇತರ ಉದ್ದೇಶಗಳಿಗಾಗಿ ಬಳಕೆ ಮಾಡಿರುವುದು ಗಮನಕ್ಕೆ ಬಂದಿರುತ್ತದೆ.

ಈ ಹಣ ದುರುಪಯೋಗವಾಗಿದ್ದಲ್ಲಿ,ವಿದ್ಯಾರ್ಥಿ ವೇತನ ವಿತರಣೆಯಾಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು:

ಸದರಿ ಸಾಲಿನಲ್ಲಿ ವಿದ್ಯಾರ್ಥಿ ವೇತನ ಪಾವತಿಯಾಗದ ವಿದ್ಯಾರ್ಥಿಗಳು ಇರುವುದಿಲ್ಲ.

ಉ ಹಾಗಿದ್ದಲ್ಲಿ , ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ತೆಗೆದುಕೊಂಡಿರುವ ಕ್ರಮವೇನು?

ಸದರಿ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಗಳು 1957 ರ ನಿಯಮ 11 ರಡಿ ಇಲಾಖಾ ವಿಚಾರಣೆಯನ್ನು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ನಡೆಸಲಾಗಿರುತ್ತದೆ. ಸದರಿ ಇಲಾಖಾ ವಿಚಾರಣೆಯಲ್ಲಿ ಅಧಿಕಾರಿಗಳ ವಿರುದ್ಧ ಮಾಡಲಾದ ಆರೋಪ ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮತ್ತು ಮೇ) ನಿಯಮಾವಳಿಗಳು 1957 ರ ನಿಯಮ 16 (2) (ಬ) ರನ್ವಯ 8ನೇ ನಿಯಮದಲ್ಲಿ ವಿವರಿಸಿರುವಂತೆ ದಂಡನೆ ವಿಧಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸದರಿ ಅಧಿಕಾರಿಯ ಮಾತೃ ಇಲಾಖೆಯಾದ ಕೃಷಿ ಇಲಾಖೆಯನ್ನು ಕೋರಲಾಗಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ಕಾರ್ಕಳ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣಾಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಕೊಡಬೇಕಾದ ವಿದ್ಯಾರ್ಥಿ ವೇತನ ಹಣಕ್ಕೆ ಸಂಬಂಧಿಸಿದ ದುರುಪಯೋಗದ ಪ್ರಕರಣದ ಬಗ್ಗೆ ನಾನು ಕೇಳಿದ್ದೇನೆ. ಮಾನ್ಯ ಸಚಿವರು ನನಗೆ ಕೊಟ್ಟಿರುವ ಉತ್ತರದಲ್ಲಿ ಬಹುಶ:, ಇದರಲ್ಲಿ 4,02,925.00 ರೂಪಾಯಿಗಳನ್ನು ವಿವಿಧ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಹೆಸರಿನಲ್ಲಿ ವಿದ್ಯಾರ್ಥಿ ವೇತನೇತರ ಉದ್ದೇಶಗಳಿಗಾಗಿ ಬಳಕೆ ಮಾಡಿರುವುದು ಗಮನಕ್ಕೆ ಬಂದಿರುತ್ತದೆ ಎಂದು ಇದೆ. ಮಾನ್ಯ ಅಧ್ಯಕ್ಷರೆ, ನಾನು ತಾಲ್ಲೂಕಿನಲ್ಲಿ ಕೆ.ಡಿ.ಪಿ. ಹಾಗೂ ಇನ್ನಿತರ ಸಭೆಗಳಲ್ಲಿ ಕೇಳಿದಂತೆ ಹೆಚ್ಚು-

ಕಡಿಮೆ ಒಂಭತ್ತು ಲಕ್ಷ ರೂಪಾಯಿಗಳು ಅಲ್ಲಿ ವಿದ್ಯಾರ್ಥಿ ವೇತನಕ್ಕೆಂದು ಬ್ಯಾಂಕಿನಲ್ಲಿದ್ದ ಹಣ ದುರುಪಯೋಗವಾಗಿದೆ. ಇಲ್ಲಿ ಸ್ಪಷ್ಟ ಮಾಹಿತಿಗಳಿಲ್ಲ.

ಇದರ ಜೊತೆಗೆ, ಉತ್ತರದಲ್ಲಿ ಹೇಳಿರುವಂತೆ, ವಿವಿಧ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಹೆಸರಿನಲ್ಲಿ ವಿದ್ಯಾರ್ಥಿ ವೇತನೇತರ ಉದ್ದೇಶಗಳಿಗಾಗಿ ಬಳಕೆ ಮಾಡಿಕೊಂಡಿದ್ದೇವೆಂದು ಹೇಳಿದ್ದರೆ. ವಿದ್ಯಾರ್ಥಿ ವೇತನಕ್ಕೆಂದು ಮೀಸಲಿಟ್ಟ ಅನುದಾನವನ್ನು ಬೇರೆ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ಅಥವಾ ಬ್ಯಾಂಕಿನಲ್ಲಿದ್ದ ಹಣವನ್ನು ಚೆಕ್ ಮುಖಾಂತರ ಆ ವಿದ್ಯಾರ್ಥಿ ವೇತನಕ್ಕೆ ಕೊಡುವ ಬದಲು ಅದನ್ನು self ನಲ್ಲಿ ಡ್ರಾ ಮಾಡುವುದಕ್ಕೆ ಆ ಅಧಿಕಾರಿಗಳಿಗೆ ಅಧಿಕಾರವಿದೆಯೇ? ಅಥವಾ ಅಧಿಕಾರಿ ಮೇಲೆ ಇದುವರೆಗೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು? ಆ ಅಧಿಕಾರಿ ಅಷ್ಟು ಪ್ರಾಭಾವಿಯಾಗುವುದಕ್ಕೆ ಕಾರಣವೇನು? ಇದೆಲ್ಲದರ ಜೊತೆಗೆ, ಯಾವುದೇ ಕ್ರಮ ಕೈಗೊಂಡ ಬಗ್ಗೆ ಉತ್ತರದಲ್ಲಿ ತಿಳಿಸಿಲ್ಲ. ನಾನು ಕೇಳಿದ್ದೆ. ಅವರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಮತ್ತು ಆ ಕುರಿತಾದ ಸಂಪೂರ್ಣ ವಿವರಗಳನ್ನು ಒದಗಿಸಿಕೊಡಬೇಕೆಂದು ಕೇಳಿದ್ದೇನೆ. ಯಾವುದನ್ನೂ ಕೂಡ ಒದಗಿಸಿಕೊಟ್ಟಿಲ್ಲ.

ಇನ್ನೊಂದು ವಿಚಾರವೇನೆಂದರೆ, ವಿದ್ಯಾರ್ಥಿ ವೇತನವನ್ನು ಆ ವರ್ಷದಲ್ಲಿ ವಿತರಣೆ ಮಾಡದೇ ಇದ್ದಂಥ ವಿದ್ಯಾರ್ಥಿಗಳು ಇಲ್ಲ ಎನ್ನುವಂಥಾದ್ದು. ಇದು ಖಂಡಿತವಾಗಿಯೂ ಸಮಂಜಸವಲ್ಲ. ಅಲ್ಲಿರುವ ವಿದ್ಯಾರ್ಥಿಗಳಿಗೆ ಎಷ್ಟು ಹಣ ಬೇಕೋ ಅಷ್ಟನ್ನು ಮಾತ್ರ ಬ್ಯಾಂಕಿಗೆ ಬಂದಿತ್ತು. ಆ ಹಣ ದುರುಪಯೋಗವಾಗಿದ್ದರಿಂದ ಹೆಚ್ಚುವರಿ ಹಣ ಆ ವರ್ಷ ಬಂದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಆ ವರ್ಷ ವಿದ್ಯಾರ್ಥಿ ವೇತನ ಸಿಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಇದಕ್ಕೆ ಸ್ಪಷ್ಟೀಕರಣವನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು): ಆ ಸಾಲಿನಲ್ಲಿ ಯಾವುದೇ ವಿದ್ಯಾರ್ಥಿ ವೇತನ ಎಲ್ಲವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗಿರುತ್ತದೆ. ಜೊತೆಗೆ ಕೃಷಿ ಇಲಾಖೆಯಿಂದ ಏನು ಒಬ್ಬರು ಅಧಿಕಾರಿ ನಮ್ಮ ಇಲಾಖೆಗೆ ಡೆಪ್ಯೂಟೇಷನ್ ಬಂದಿದ್ದರು ಅವರ ಮೇಲೆ ಈಗಾಗಲೇ ಸಂಬಂಧಪಟ್ಟ ಇಲಾಖೆಗೆ ಅವರನ್ನು ವಜಾ ಮಾಡಬೇಕೆಂದು ಶಿಫಾರಸ್ಸು ಆಗಿದೆ. ಅದು ತಕ್ಷಣ ಜಾರಿಯಾಗುತ್ತದೆಯೆಂದು ತಿಳಿಸಬಯಸುತ್ತೇನೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಖಂಡಿತವಾಗಿ ವಿದ್ಯಾರ್ಥಿ ವೇತನ ವಿತರಣೆಯಾಗಿಲ್ಲ. ಇದನ್ನು ಸಾಬೀತು ಮಾಡಲು ನಾನು ತಯಾರಿದ್ದೇನೆ. ಮಾನ್ಯ ಸಚಿವರು ಇದರ ಬಗ್ಗೆ ಪುನಃ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಅದರ ಬಗ್ಗೆ ದಾಖಲೆಗಳಿದ್ದರೆ ಕೊಡಿ.

ಶ್ರೀ ಡಿ. ಸುಧಾಕರ್: ಆ ರೀತಿ ಏನಾದರೂ ವಿದ್ಯಾರ್ಥಿವೇತನ ಬಾರದಿರುವ ಬಗ್ಗೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಖಂಡಿತವಾಗಿ ಆ ವಿದ್ಯಾರ್ಥಿ ವೇತನವನ್ನು ಕೊಡಿಸುವ ಕೆಲಸವನ್ನು ಮಾಡುತ್ತೇನೆ.

ಭಾಲ್ಕಿಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ನೂರು ಹಾಸಿಗೆಗಳ ಆಸ್ಪತ್ರೆಯು ಎಂದಿನಿಂದ ಕಾರ್ಯ ನಿರ್ವಹಿಸುತ್ತಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	124(518)
ಸದಸ್ಯರ ಹೆಸರು	:	ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಉತ್ತರಿಸುವ ಸಚಿವರು	:	ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಭಾಲ್ಕಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ನೂರು ಹಾಸಿಗೆಗಳ ಆಸ್ಪತ್ರೆಯು ಎಂದಿನಿಂದ ಕಾರ್ಯ ನಿರ್ವಹಿಸುತ್ತಿದೆ;

ದಿನಾಂಕ 31/01/2007 ರಿಂದ 100 ಹಾಸಿಗೆಯ ಆಸ್ಪತ್ರೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಆ) ಈ ಆಸ್ಪತ್ರೆಗೆ ಎಷ್ಟು ಆಂಬ್ಯುಲೆನ್ಸ್‌ಗಳು, ಜನರೇಟರ್‌ಗಳು ಹಾಗೂ ಇತರೆ ಯಾವ ಯಾವ ಹೊಸ ಉಪಕರಣಗಳನ್ನು ಒದಗಿಸಲಾಗಿದೆ; ಇವುಗಳಿಗೆ ತಗುಲಿದ ವೆಚ್ಚವೆಷ್ಟು;

ಈ ಆಸ್ಪತ್ರೆಗೆ 2 ಆಂಬುಲೆನ್ಸ್ ವಾಹನಗಳನ್ನು ಒದಗಿಸಲಾಗಿದೆ. ಹಾಗೂ ಈ ಅಸ್ಪತ್ರೆಗೆ ಒದಗಿಸಲಾದ 22 ಹೊಸ ಉಪಕರಣಗಳ ಪಟ್ಟಿ ಲಗತ್ತಿಸಿದೆ. ಆಂಬುಲೆನ್ಸ್ ವಾಹನವನ್ನು ಭಾರತ ಸರ್ಕಾರದಿಂದ ಕಾಣಿಕೆ ರೂಪದಲ್ಲಿ ಪಡೆದಿದ್ದರಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ವೆಚ್ಚವಾಗಿರುವುದಿಲ್ಲ. ಉಪಕರಣಗಳನ್ನು ಒದಗಿಸಲು ರೂ. 20.00 ಲಕ್ಷ ವೆಚ್ಚವಾಗಿರುತ್ತದೆ.

ಇ) ಸದರಿ ಆಸ್ಪತ್ರೆಗೆ ಒದಗಿಸಿರುವ ಜನರೇಟರ್ ಮತ್ತು ಹೊಸ ಉಪಕರಣಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆಸ್ಪತ್ರೆಯಲ್ಲಿರುವ ಉಪಕರಣಗಳ ಪೈಕಿ ಜನರೇಟರ್ ಉಪಕರಣ ಕೆಲಸ ಮಾಡುತ್ತಿರಲಿಲ್ಲ. ನಂತರ ಜನರೇಟರ್ ಅನ್ನು ದುರಸ್ಥಿಗೊಳಿಸಿದ್ದು. ಈಗ ಅದು ಕಾರ್ಯ ನಿರ್ವಹಿಸುತ್ತಿದೆ.

ಈ) ಹಾಗಿದ್ದಲ್ಲಿ. ಎಷ್ಟು ದಿನಗಳಿಂದ ಈ ಉಪಕರಣಗಳು ಕೆಟ್ಟಿವೆ; ಇವುಗಳನ್ನು ದುರಸ್ಥಿ ಮಾಡಲು ಕೈಗೊಂಡ ಕ್ರಮವೇನು?

ಉದ್ಭವಿಸುವುದಿಲ್ಲ.

ಅನುಬಂಧ

ಭಾಲ್ಕಿ 100 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಗೆ ರೂ. 20 ಲಕ್ಷ ವೆಚ್ಚದಲ್ಲಿ ಸರಬರಾಜು ಮಾಡಿದ ಹೊಸ ಉಪಕರಣಗಳ ವಿವರ.

1. ಸೋಲಾರ್ ಸ್ಟ್ರೀಟ್ ಲೈಟ್.
2. ಕ್ಯೂ.ಬಿ.ಸಿ. ಕ್ಯಾಪಿಲರಿ. ,
3. ಅಲ್ಟ್ರಾಸೌಂಡ್ ಸ್ಕ್ಯಾನರ್.
4. ಕಂಪ್ಯೂಟರ್
5. ಡೆಂಟಲ್ ಕಿಟ್.
6. ಇನ್‌ಕ್ಯೂಬೇಟರ್.
7. ಡೆಂಟಲ್ ಎಕ್ಸ್‌ರೇ ಘುಟ್
8. ಸೆಕ್ಷನ್ ಆಪರೇಟರ್
9. ಜನರೇಟರ್ ಸೆಟ್
10. ಮೊಬೈಲ್ ಎಕ್ಸರೇ ಯುನಿಟ್
11. ಇ.ಸಿ.ಜಿ. ಮೆಷಿನ್
12. ಫೀಟಲ್ ಮಾನಿಟರ್.
13. ಡಿ. ಫ್ರಿಬಿಲೇಟರ್
14. ಡೆಂಟಲ್ ಛೇರ್.
15. ಓ.ಟಿ. ಬಾಯಲ್ಸ್ ಅಪರೇಟರ್.
16. ಓ.ಟಿ. ಶ್ಯಾಡೋ–ಲೆಸ್ ಲ್ಯಾಂಪ್.
17. ಏರ್ ಕಂಡಿಷನರ್.

18. ಸೋಲಾರ್ ಎಸ್.ಪಿ.ಜಿ. ಸಿಸ್ಟಂ.
19. ವಾಟರ್ ಕೂಲರ್.
20. ಸೆಂಟ್ರಿ ಫ್ಯೂಜ್ ಮಿಷಿನ್.
21. ಯು.ಪಿ.ಎಸ್.
22. ಫಿಲಿಫ್ಸ್ ಇ.ಸಿ.ಜಿ. ಮೆಷಿನ್.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದ ಪ್ರಶ್ನೆಗೆ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ನಾನು ಕೇಳಿದ್ದು ನೂರು ಹಾಸಿಗೆಯ ಆಸ್ಪತ್ರೆಯಲ್ಲಿ ಅಂಬುಲೆನ್ಸ್ ಎಷ್ಟು ಇದೆಯೆಂದು. 2 ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಇದು ಕೆಟ್ಟರೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸುಮಾರು ಎರಡು ವರ್ಷಗಳಿಂದ ಈ ಆಸ್ಪತ್ರೆಯಲ್ಲಿರುವ ಅಂಬುಲೆನ್ಸ್ ಕೆಟ್ಟುಹೋಗಿದೆ. ಎರಡೂ ಕೆಲಸ ಮಾಡುತ್ತಿಲ್ಲ. ನಾನೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿದ್ದೇನೆ. ಇದರ ಬಗ್ಗೆ ಯಾವುದೇ ಉತ್ತರವಿಲ್ಲ. ಮಾಹಿತಿ ಸಹ ಇಲ್ಲ. ಈ ಆಸ್ಪತ್ರೆಯಲ್ಲಿ ಏನು ಉಪಕರಣ ಇದೆ, ಉದಾಹರಣೆಗೆ ಇಲ್ಲಿ ಏನು ಜನರೇಟರ್ ಇದೆ ಕಳೆದ ಎರಡೂವರೆ ವರ್ಷಗಳಿಂದ ಇದನ್ನು ಒಂದು ಸಲವೂ ಪ್ರಾರಂಭ ಮಾಡಿಲ್ಲ. ಈಗ ನಾನು ಕೇಳಿದ್ದ ಪ್ರಶ್ನೆಗೆ ಉತ್ತರವಾಗಿ ಇದು ದುರಸ್ತಿಯಾಗಿದೆಯೆಂದು ಹೇಳಿದ್ದಾರೆ. ನಾನು ಇದನ್ನು ಕೇಳಿದ ಮೇಲೆ ದುರಸ್ತಿಯಾಗಿದೆಯೆಂದು ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ. ಈ ಆಸ್ಪತ್ರೆಯಲ್ಲಿ ಅಂಬುಲೆನ್ಸ್ ಇಲ್ಲದ ಕಾರಣ ಅನೇಕ ಜನರು ಅಪಘಾತಗಳಾದ ಮೇಲೆ ಬೀದರ್ ಕೇಂದ್ರಕ್ಕೆ ಹೈಯರ್ ಸೆಂಟ್‌ರ್‌ಗೆ ರೆಫರ್ ಮಾಡುತ್ತಾರೆ. ಅನೇಕ ಜನ ರೋಗಿಗಳು ದಾರಿಯಲ್ಲೇ ಮೃತಪಟ್ಟಿರುವ ದಾಖಲೆಗಳು ಇದೆ. ಜೊತೆಯಲ್ಲಿ ಆನೂರು ಹಾಸಿಗೆಯ ಆಸ್ಪತ್ರೆ ಕೇವಲ ಹೆಸರಿಗೆ ಮಾತ್ರ ಪ್ರಾರಂಭವಾಗಿದೆ. ಅಲ್ಲಿ ವೈದ್ಯರ, ನರ್ಸಿಂಗ್ ಸಿಬ್ಬಂದಿಯ ಕೊರತೆ, ಉಪಕರಣಗಳ ಕೊರತೆ ಇದೆ. ರಕ್ತ ನಿಧಿ ಇಲ್ಲ. ಮೂಲಭೂತ ಸೌಕರ್ಯಗಳು ಯಾವುದೂ ಇಲ್ಲ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುತ್ತಿದೆ?

ಶ್ರೀ ಬಿ. ಶ್ರೀರಾಮುಲು (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಸುಮಾರು 20 ಲಕ್ಷ ರೂಪಾಯಿ ವೆಚ್ಚದಲ್ಲಿ ಎಲ್ಲಾ ಉಪಕರಣಗಳನ್ನು ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಅವರು ಜನರೇಟರ್ ವಿಷಯವನ್ನು ಪ್ರಸ್ತಾಪ ಮಾಡಿದರು. ಅವರು ಪ್ರಶ್ನೆ ಮಾಡಿದ ನಂತರವೇ ಅದನ್ನು ದುರಸ್ತಿ ಮಾಡಲಾಗಿದೆ. ಅವರು ಪ್ರಶ್ನೆ ಮಾಡುವ ಮೊದಲು ನಮ್ಮ ಗಮನಕ್ಕೆ ಬಂದಿರಲಿಲ್ಲ. ಅಂಬುಲೆನ್ಸ್ ಏನು ಕೆಟ್ಟಿದೆ ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೆ,

ಡಿ.ಹೆಚ್.ಓ.ಗಳಿಗೆ ಸೂಚನೆ ಮಾಡಿದ್ದೇನೆ, ಸಂಬಂಧ ಪಟ್ಟ ಎಲ್ಲಾ ಅಂಬುಲೆನ್ಸ್‌ಗೆ ಇಬ್ಬರು ಚಾಲಕರುಗಳನ್ನು ಏನು ಏಜೆನ್ಸಿ ಮೂಲಕ ತೆಗೆದುಕೊಳ್ಳಬೇಕು, ಎರಡು ಅಂಬುಲೆನ್ಸ್ ಎಂದರೆ ನಾಲ್ಕು ಜನ ಚಾಲಕರುಗಳನ್ನು ತೆಗೆದುಕೊಳ್ಳಬೇಕು. ಜೊತೆಗೆ ಸಂಪೂರ್ಣವಾಗಿ ತಾವೇನು ಸಲಹೆಗಳನ್ನು ಕೊಟ್ಟಿದ್ದೀರೋ ಆದಷ್ಟು ಬೇಗ ಆ ಅಂಬುಲೆನ್ಸ್ ರಿಪೇರಿ ಮಾಡಿಸಿಕೊಡುತ್ತೇವೆ. ಮತ್ತು ಆ ಅಂಬುಲೆನ್ಸ್‌ಗೆ 24 ಗಂಟೆಗಳ ಕಾಲ ಸಹ ಚಾಲಕರುಗಳು ಕೆಲಸ ಮಾಡುವಂತೆ ಮಾಡಿಸಿಕೊಡುತ್ತೇನೆ. ಇನ್ನು ಏನಾದರು ಮಾಹಿತಿ ಅದರ ಬಗ್ಗೆ ಇದ್ದರೂ ನನ್ನ ಗಮನಕ್ಕೆ ತಂದರೆ ತಕ್ಷಣ ಬಾಲ್ಕಿ ಸರ್ಕಾರಿ ಆಸ್ಪತ್ರೆಗೆ ಏನು ವ್ಯವಸ್ಥೆ ಮಾಡಿಕೊಡಬೇಕೊ ಅದೆಲ್ಲವನ್ನು ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಅವರಿಗೆ ಮಾತುಕೊಡುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ನಮ್ಮದು ಮೊದಲೇ ಹಿಂದುಳಿದ ಪ್ರದೇಶ. ಗಡಿ ಭಾಗದಲ್ಲಿರುವ ಪ್ರದೇಶ. ಅಲ್ಲಿ ವೈದ್ಯರ, ನರ್ಸಿಂಗ್ ಮತ್ತು ತಂತ್ರಜ್ಞರ ಹುದ್ದೆ ಖಾಲಿ ಇದೆ. ಅದನ್ನು ಯಾವಾಗ ತುಂಬುತ್ತೀರಿ?

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಷ್ಟು ವೈದ್ಯರ ಹುದ್ದೆ ಖಾಲಿ ಇದೆ.

ಅಧ್ಯಕ್ಷರು: ಅದಕ್ಕೆ ತಾವು ಪ್ರತ್ಯೇಕವಾದ ಪ್ರಶ್ನೆ ಹಾಕಿ. ಮಾನ್ಯ ಸದಸ್ಯರು ಅವರ ಆಸ್ಪತ್ರೆಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿದ್ದಾರೆ. ನೀವು ಇಡೀ ರಾಜ್ಯದ್ದು ಎಷ್ಟು ಖಾಲಿ ಹುದ್ದೆ ಇದೆಯೆಂದರೆ ಅವರು ಹೇಗೆ ಉತ್ತರ ಹೇಳಬೇಕು? ಇದು ಆಗುವುದಿಲ್ಲ. ಇದಕ್ಕೆ ಪ್ರತ್ಯೇಕವಾದ ನೋಟೀಸ್ ಕೊಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ರಾಜ್ಯದಲ್ಲಿರುವ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ. ಅದನ್ನು ನೂರು ಬೆಡ್ಡೆಡ್ ಆಸ್ಪತ್ರೆಗಳನ್ನಾಗಿ ಮಾಡಿ. ಅಲ್ಲಿ ವೈದ್ಯರ ಕೊರತೆ ಇದೆ. 'ಡಿ' ದರ್ಜೆ ನೌಕರರ ಕೊರತೆ ಇದೆ.

ಅಧ್ಯಕ್ಷರು: ಇದಕ್ಕೆ ನಾನು ಅಲೋ ಮಾಡುವುದಿಲ್ಲ. ಕೃಷ್ಣಮೂರ್ತಿಯವರೆ ಇದು ಬೇಡ. ಬೇರೆ ರೂಪದಲ್ಲಿ ಕೇಳಿ. ನೀವು ಬೇರೆ ನೋಟೀಸ್ ಕೊಡಿ. ನೀವು ಇಡೀ ರಾಜ್ಯದ್ದು ಕೇಳಿದ್ದರೆ ಹೇಗೆ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು.

ಅಧ್ಯಕ್ಷರು: ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಬೇರೆ ನೋಟೀಸ್ ಕೊಡಿ. No. I will not allow it.

ಶ್ರೀ ಬಿ. ಶ್ರೀರಾಮುಲು: ಬಾಲ್ಕಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದೆಯೆಂದು ಮಾನ್ಯ ಸದಸ್ಯರೇನು ಪ್ರಸ್ತಾಪ ಮಾಡಿದ್ದಾರೆ, ಈ ರಾಜ್ಯದಲ್ಲಿರುವ ವೈದ್ಯರು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಯನ್ನು ಸುಮಾರು ಐದು ಸಾವಿರ

ಮಂದಿಯನ್ನು ನೇಮಕ ಮಾಡಲು ಮೊನ್ನೆ ಕ್ಯಾಬಿನೇಟ್ ಒಪ್ಪಿಗೆ ಕೊಟ್ಟಿದೆ. ಈ ಜಿಲ್ಲೆಯಲ್ಲಿರುವ ಎಲ್ಲಾ ಆರೋಗ್ಯ ಆಸ್ಪತ್ರೆಗಳಿಗೆ ಸಾಕಷ್ಟು ವೈದ್ಯರುಗಳ ಕೊರತೆ ಇದೆ. ಘನ ಸರ್ಕಾರದ ಮುಖ್ಯಮಂತ್ರಿಯವರು ಏನು 5 ಸಾವಿರ ಹುದ್ದೆಗಳನ್ನು ತುಂಬಲು ಅನುಮತಿ ಕೊಟ್ಟಿದ್ದಾರೆ ಇನ್ನೂ 5 ಸಾವಿರ ಮಂದಿಯ ನೇಮಕಾತಿಗೆ ಅನುಮತಿ ಕೊಟ್ಟರೆ ಎಲ್ಲಾ ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿಯ ಕೊರತೆಯನ್ನು ಪೂರೈಸಲು ಸಾಧ್ಯವಾಗುತ್ತದೆ. ತಾವೇನು ವೈದ್ಯರ ಕೊರತೆಯ ಬಗ್ಗೆ ಕೇಳಿದ್ದೀರಿ ಕೇವಲ ಒಂದೂವರೆ ತಿಂಗಳಿನಲ್ಲಿ ಅದನ್ನು ಮಾಡಿಕೊಡುವುದಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಚಿಂತಾಮಣಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೆ ಇರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**125(348)**
ಸದಸ್ಯರ ಹೆಸರು	:	**ಶ್ರೀ ಡಾ: ಸುಧಾಕರ್.ಎಂ.ಸಿ. (ಚಿಂತಾಮಣಿ)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೈವಾರವು ಯಾತ್ರಾ ಸ್ಥಳವಾಗಿದ್ದು, ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಸದರಿ ಆಸ್ಪತ್ರೆಗೆ 3 ಹುದ್ದೆಗಳು ಮಂಜೂರಾಗಿದ್ದು, 3 ಹುದ್ದೆಗಳು ಭರ್ತಿಯಾಗಿರುತ್ತದೆ. ಆದರೆ ಒಬ್ಬರು ಕಾರ್ಯ ನಿರ್ವಹಿಸುತ್ತಿರುತಾರೆ. ಇಲ್ಲಿಂದ ಬೇರೆ ಕಡೆಗೆ ಇಬ್ಬರು ವೈದ್ಯಾಧಿಕಾರಿಗಳನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ. ಈ ನಿಯೋಜನೆ ಆದೇಶವನ್ನು ರದ್ದು ಪಡಿಸಲಾಗಿದ್ದು ವೈದ್ಯರನ್ನು ಕೈವಾರದಲ್ಲಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.

ಆ) ಈ ಸ್ಥಳಕ್ಕೆ ಯಾತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸಲು ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ:

ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರಧ ಮುಂದೆ ಇರುವುದಿಲ್ಲ.

ಇ) ಹಾಗಿದ್ದಲ್ಲಿ, ಈ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಉದ್ಭವಿಸುವುದಿಲ್ಲ.

ಡಾ. ಎಂ.ಸಿ. ಸುಧಾಕರ್: ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮೂರು ಹುದ್ದೆಗಳಲ್ಲಿ ಒಬ್ಬರು ವೈದ್ಯರಿದ್ದಾರೆ. ಇನ್ನೂ ಇಬ್ಬರನ್ನು ಬೇರೆಡೆಗೆ ನಿಯೋಜಿಸಲಾಗಿತ್ತು. ಆ ನಿಯೋಜನೆಯನ್ನು ರದ್ದು ಮಾಡಿದ್ದೇವೆ ಎಂದು ಉತ್ತರದಲ್ಲಿ ಒದಗಿಸಿದ್ದಾರೆ. ಮುಖ್ಯವಾದ ವಿಚಾರ, ಕೈವಾರ ಎನ್ನತಕ್ಕದ್ದು ಒಂದು ದೊಡ್ಡ ಯಾತ್ರಾ ಸ್ಥಳ. ಸಾವಿರಾರು ಜನ ಅಲ್ಲಿ ವಾಸವಾಗಿದ್ದಾರೆ. ಸುತ್ತಮುತ್ತಲು ಗ್ರಾಮಗಳಿಂದ ಜನರು ಸೇರಿದರೆ ಸುಮಾರು 15-20 ಸಾವಿರ ಜನರಿಗೆ ಅಲ್ಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡತಕ್ಕ ವ್ಯವಸ್ಥೆ ಇದೆ. ಇಲ್ಲಿ ಸುಮಾರು ಒಂದು ವರ್ಷದಿಂದ ಗುತ್ತಿಗೆ ಆಧಾರದ ಮೇಲೆ ಒಬ್ಬರು ಡಾ: ರವಿ ಎಂದು ವೈದ್ಯರು ಇದ್ದರು. ಅವರು ಬೆಳಿಗ್ಗೆಯೇ ಕುಡಿಯಲು ಪ್ರಾರಂಭ ಮಾಡುತ್ತಾರೆ. ಅವರು ಯಾವುದೇ ರೀತಿಯಾಗಿ ಸೌಲಭ್ಯವನ್ನು ಒದಗಿಸುತ್ತಿಲ್ಲ, ಅವರನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಹೇಳಿದಾಗ ಅವರನ್ನು ವರ್ಗಾಹಿಸದೆ ಬೇರೆ ಭಾಗಕ್ಕೆ ನಿಯೋಜನೆ ಮಾಡಿದ್ದಾರೆ. ಇನ್ನೊಬ್ಬ ಮಹಿಳಾ ವೈದ್ಯರು ಬೆಂಗಳೂರಿನ ಕೆ.ಆರ್.ಪುರಂಗೆ ನಿಯೋಜನೆಯ ಮೇರೆಗೆ ಬಂದಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ ಒಬ್ಬ ವೈದ್ಯ ಅಲ್ಲಿ ಕುಡುಕನಾಗಿದ್ದು ಅವನನ್ನು ತೆಗೆಯಿರಿ ಎಂದು ಹೇಳಿದರೆ ಗುತ್ತಿಗೆ ಆಧಾರದ ಮೇಲಿರುವ ಅವರ ಗುತ್ತಿಗೆಯನ್ನು ರದ್ದುಪಡಿಸಬೇಕಾಗಿತ್ತು. ಆದರೆ, ಆ ಕೆಲಸವನ್ನು ಮಾಡದೆ ಅವರನ್ನು ಬೇರೆ ಭಾಗಕ್ಕೆ ವರ್ಗಾಯಿಸಿದ್ದರೆ. ಕುಡುಕರನ್ನು ಬೇರೆ ಕಡೆ ಹಾಕಿದರೆ ಅವರು ಕುಡಿಯುವುದನ್ನು ಬಿಡುತ್ತಾರೆಯೇ? ಅಲ್ಲಿ ಪೋಸ್ಟ್ ಖಾಲಿಯಾದ ಮೇಲೆ ಬೇರೆಯವರನ್ನು ನೇಮಕ ಮಾಡಬಹುದಿತ್ತು. ಅದಕ್ಕೂ ಅವಕಾಶ ಕೊಟ್ಟಿಲ್ಲ. ಕೆ.ಆರ್. ಪುರಂಗೆ ಬಂದಿರುವ ಮಹಿಳಾ ವೈದ್ಯರಿಗೆ ಅಲ್ಲಿ ಇಷ್ಟ ಇಲ್ಲ ಎಂದರೆ ದಯವಿಟ್ಟು ಅವರನ್ನು ಕೆ.ಆರ್.ಪುರಂಗೇ ಕೊಟ್ಟುಬಿಡಿ. ನಮಗೆ ಅಲ್ಲಿರುವ ಪೋಸ್ಟನ್ನು ಖಾಲಿ ಮಾಡಿಸಿಕೊಡಿ. ಅಲ್ಲಿಗೆ ಸರ್ಕಾರದಿಂದ ನೇರವಾಗಿ ಭರ್ತಿ ಮಾಡಿ ಇಲ್ಲದಿದ್ದರೆ ಜಿಲ್ಲಾಧಿಕಾರಿಗಳ ಮೂಲಕ ಭರ್ತಿ ಮಾಡುವ ವ್ಯವಸ್ಥೆಯನ್ನು ಈ ಎರಡು ಹುದ್ದೆಗಳಿಗೆ ಮಾಡಬೇಕೆಂದು ಸಚಿವರಲ್ಲಿ ವಿನಂತಿಸುತ್ತೇನೆ. ಮತ್ತೊಂದು, ಸಮುದಾಯ ಆರೋಗ್ಯ ಕೇಂದ್ರವಾಗಿ ಇದನ್ನು ಮೇಲ್ದರ್ಜೆಗೆ ಏರಿಸಬೇಕೆಂದು ನಮ್ಮ ಬೇಡಿಕೆ ಇದೆ. ಏಕೆಂದರೆ,

ಅಲ್ಲಿ ಸುಮಾರು 20 ಸಾವಿರ ಜನರಿದ್ದಾರೆ. 3 ವೈದ್ಯರು ಇದ್ದಾರೆ. ಅಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳು ಇದೆ. ಕಟ್ಟಡ, ಸ್ಥಳ ಎಲ್ಲವೂ ಇದೆ. ಆದ್ದರಿಂದ ದಯವಿಟ್ಟು ಅದನ್ನು ಈ ವರ್ಷದಲ್ಲಿ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ವೈದ್ಯರ ಬಗ್ಗೆ ಅವರೇನು ತಿಳಿಸಿದರು ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ನಿನ್ನೆ ಸಹ ತಾವು ಇದಕ್ಕೆ ಸಂಬಂಧಿಸಿದಂತೆ ಪತ್ರವನ್ನು ಕೊಟ್ಟಿದ್ದೀರಿ. ಕೈವಾರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದೆ. ಜೊತೆಗೆ ಏನೇನು ಮಾಡಬೇಕು ಎಂಬ ಬಗ್ಗೆ ಪತ್ರವನ್ನು ಕೊಟ್ಟಿದ್ದೀರಿ. ಅಧಿಕಾರಿಗಳ ಜೊತೆ ನಾನು ಮಾತನಾಡಿದ್ದೇನೆ. ಇನ್ನೊಂದು ವಾರದಲ್ಲಿ ಇದನ್ನು ಸರಿಪಡಿಸುತ್ತೇನೆ. ಸಮುದಾಯ ಅರೋಗ್ಯ ಕೇಂದ್ರದ ಬಗ್ಗೆ ಪ್ರಸ್ತಾವನೆ ಬಂದಿಲ್ಲ.ಆ ದಷ್ಟು ಬೇಗ ಅದಕ್ಕೆ ಯಾವ ರೀತಿಯಾಗಿ ವ್ಯವಸ್ಥೆ ಮಾಡಬೇಕೊ ಅದನ್ನು ಮಾಡಲು ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**126(521)**
ಸದಸ್ಯರ ಹೆಸರು	:	**ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)**
ಉತ್ತರಿಸುವ ದಿನಾಂಕ	:	**31-07-2008**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು:

ಶ್ರೀಮತಿ ಉಮಾದೇವಿ ಎಂಬುವವರ ಪ್ರಕರಣದಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಪ್ರಕಾರ ಯಾವುದೇ ಹುದ್ದೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರವೇ ತುಂಬಬೇಕಾಗುತ್ತದೆ. ಅದರಂತೆ ಗುತ್ತಿಗೆ ವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕಲ್ಪಿಸಿರುವ ಅವಕಾಶದಂತೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ದಿಸೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಖಾಲಿಯಿರುವ 815 ವೈದ್ಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದುದರಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ವೈದ್ಯರ ಸಂಖ್ಯೆ ಎಷ್ಟು?

ಒಟ್ಟು 631 ವೈದ್ಯರು ಗುತ್ತಿಗೆ ಆಧಾರ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಅಧ್ಯಕ್ಷರೆ, ಲಿಖಿತ ಉತ್ತರ ಬಂದಿದೆ. ನನ್ನ ಪ್ರಶ್ನೆ ಪ್ರಮುಖವಾಗಿರತಕ್ಕದ್ದು, ಈ ಹಿಂದಿನ ಸದಸ್ಯರಿಗೆ ಹೇಳಿರತಕ್ಕಂಥ ಉತ್ತರದಲ್ಲೂ ಕೂಡ ಇಲ್ಲಿ 815 ಜನ ವೈದ್ಯರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಮಾನ್ಯ ಸಚಿವರು ರಾಜ್ಯಾದ್ಯಂತ 5000 ಹುದ್ದೆಗಳು ಖಾಲಿ ಇರುವುದಾಗಿ ಈಗಾಗಲೇ ಉತ್ತರ ಕೊಟ್ಟರು. ಜೊತೆಗೆ ಹಿಂದೆ 10 ವರ್ಷಗಳ ಹಿಂದೆಯೇ ಕೂಡ ಏನು contract basis ಮೇಲೆ ವೈದ್ಯರನ್ನು ತೆಗೆದುಕೊಂಡಿದ್ದರು, ನೇರ ನೇಮಕಾತಿ ಮೂಲಕ ಅವರನ್ನೂ ಕೂಡ ತೆಗೆದುಕೊಂಡಿದ್ದಾರೆ. ಈವರೆಗೆ ಆಗಿರತಕ್ಕ ವಿಳಂಬಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈಗಿರತಕ್ಕ ವಿಳಂಬ ಏನಿದೆ, ಕಾನೂನಿನ ತೊಡಕು ಏನಿದೆ, 10 ವರ್ಷಗಳ ಹಿಂದೆಯೇ ಅದು ಇತ್ತು. ಈಗ ನೇರ ನೇಮಕಾತಿಗೆ ಆಗಿರತಕ್ಕಂಥ ತೊಂದರೆ ಏನು? ಈಗಾಗಲೇ ಅವರನ್ನು ತೆಗೆದುಕೊಳ್ಳಬೇಕಾಗಿತ್ತು. Supreme Court judgment ಏನಿದೆ, ಅದು ಇದಕ್ಕೆ ಅಡ್ಡಿ ಬರುವುದಿಲ್ಲವೆಂದು ಹೇಳುತ್ತಾರೆ. ಈಗಾಗಲೇ ತಾವು ಲಿಖಿತವಾಗಿ ಕೊಟ್ಟಿದ್ದೀರಿ. 631 ಜನ ವೈದ್ಯರು ಇಲ್ಲಿದ್ದಾರೆಂದು ಹೇಳುತ್ತಿದ್ದೀರಿ. ಈಗಾಗಲೇ ಹಿಂದಿನ ನಮ್ಮ ಮಾನ್ಯ ಸದಸ್ಯರಿಗೆ ನೀವು ಉತ್ತರ ಕೊಡುವಾಗ 5 ಸಾವಿರ ಜನ ವೈದ್ಯರು ಖಾಲಿ ಇದ್ದಾರೆಂದು ಹೇಳಿದ್ದೀರಿ. ಇಲ್ಲಿ 815 ಜನ ವೈದ್ಯರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಬಜೆಟ್ ಮಂಡನೆಯಲ್ಲಿಯೂ ಕೂಡ 5000 ಜನ ವೈದ್ಯರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಈ ಎರಡು ಉತ್ತರಗಳ ಅರ್ಥ ನನಗೆ ಆಗಲಿಲ್ಲ. 815 ವೈದ್ಯರ ಹುದ್ದೆ...

ಅಧ್ಯಕ್ಷರು:- ಆಯಿತು, ಮತ್ತೆ repeat ಮಾಡಬೇಡಿ. ಆ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಬಿ. ಶ್ರೀರಾಮುಲು:- ಮಾನ್ಯ ಅಧ್ಯಕ್ಷರೆ, 815 ಜನ ವೈದ್ಯರ ಜೊತೆಯಲ್ಲಿ ಸುಮಾರು 4300 paramedical Staff ಅನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಅನುಮೋದನೆ ಕೊಟ್ಟಿದೆ. ಸದ್ಯಕ್ಕೆ ಉಮಾದೇವಿಯವರ ಪ್ರಕರಣದಲ್ಲಿ Supreme Court Judgment ವೊಂದಿದೆ. ತಕ್ಷಣ ಗ್ರೂಪ್-ಡಿಯಲ್ಲಿ ಏನು ಕೆಲಸ ಮಾಡುತ್ತಿದ್ದಾರೆ, ಅವರನ್ನು ಖಾಯಂಗೊಳಿಸಬೇಕೆಂದರೆ, Supreme Court Judgment ಇರುವ ಕಾರಣ, ಅವರ್ಯಾರನ್ನೂ ಖಾಯಂಗೊಳಿಸಬಾರದೆನ್ನುವ ಪ್ರಶ್ನೆಯೊಂದಿದೆ. ಜೊತೆಯಲ್ಲಿ ಖಾಯಂಗೊಳಿಸಬೇಕೆಂಬ ಬಗ್ಗೆ ನಾನು ಮೊನ್ನೆ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದೆ. ನಮ್ಮ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ 631 ಜನ ಏನು ಕೆಲಸ ಮಾಡುತ್ತಿದ್ದಾರೋ, ಅವರನ್ನು ಖಾಯಂಗೊಳಿಸಬೇಕಾಗಿದೆ. ಅವರ age ಮುಗಿಯುತ್ತಿದೆ., first priority ಅವರಿಗೆ ಕೊಡಿ, ಅವರಿಗೆ ಕೊಟ್ಟ ನಂತರ, ಕಡಿಮೆ ಬಂದಂತಹ Staffಗೆ Priority ಕೊಟ್ಟು ಅವರನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇನೆ. ಯಾರನ್ನಾದರೂ ಖಾಯಂಗೊಳಿಸಬೇಕೆಂದರೆ, ಆ ಬಗ್ಗೆ ಪುನಃ Cabinetಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ನಾನು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಯಾವ ರೀತಿಯಲ್ಲಿ ಇದನ್ನು ಸರಿಪಡಿಸಬಹುದು ಎಂದು ನೋಡಿ, ಇದನ್ನು ಸರಿಪಡಿಸಿಕೊಡುವಂತಹ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ, ಇವತ್ತಿನ ಪಟ್ಟಿಯಲ್ಲಿ ನನ್ನದೊಂದು ಪ್ರಶ್ನೆ ಇದೆ.

ಶ್ರೀ ನೆ.ಲ. ನರೇಂದ್ರಬಾಬು:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಪ್ರಸ್ತಾಪಿಸಲು ಅವಕಾಶ ಕೊಡಿ.

ಅಧ್ಯಕ್ಷರು:- ನಾನು ಆಗಲೇ ತಮ್ಮ ಹೆಸರನ್ನು ಕರೆದಾಗ ತಾವು ಅಗಿದ್ದಿರಿ. ಇದರಿಂದಾಗಿ ನೀವು ನಿಮ್ಮ opportunity ಕಳೆದುಕೊಂಡಿದ್ದೀರಿ. ಈ ರೀತಿ absent ಅಗಿದ್ದವರಿಗೆ ಮುಂದೆ ಟೈಮ್ ಉಳಿದರೆ, ನಾನು ಅವಕಾಶ ಕೊಡುತ್ತೇನೆ. ಮಾನ್ಯ ಕೃಷ್ಣಮೂರ್ತಿಯವರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಬಂದ ನಂತರ ನಾನು ನಿಮಗೆ ಉತ್ತರ ಕೊಡಿಸುತ್ತೇನೆ.

ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡಿರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	45(200)
ಸದಸ್ಯರ ಹೆಸರು	:	ಶ್ರೀ. ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)
ವಿಷಯ	:	ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡಿರುವುದು
ಉತ್ತರಿಸುವ ಸಚಿವರು	:	ಪ್ರೊ|ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ. ಬೆಂಗಳೂರು ನಗರವೂ ಸೇರಿದಂತೆ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಕ್ಫ್ ಸಂಸ್ಥೆಗೆ ಜಾಗಗಳನ್ನು ಅತಿಕ್ರಮಣ ಮಾಡಿಕೊಳ್ಳಲಾಗಿದೆ;

ರಾಜ್ಯದಲ್ಲಿ ವಕ್ಫ್ ಸಂಸ್ಥೆಗಳಿಗೆ ಸೇರಿದ ಒಟ್ಟು 135 ಪ್ರಕರಣಗಳಲ್ಲಿ ಅತೀಕ್ರಮಣ ಮಾಡಿಕೊಳ್ಳಲಾಗಿರುವ ವಿವರಗಳನ್ನು ಅನುಬಂಧ- 'ಎ' ನಲ್ಲಿ ಲಗತ್ತಿಸಿದೆ.

ಆ. ಹಾಗಿದ್ದಲ್ಲಿ, ಯಾವ ಪ್ರದೇಶದಲ್ಲಿ ಎಷ್ಟು ಎಕರೆ ಜಾಗವನ್ನು ಯಾರು ಒತ್ತುವರಿ ಮಾಡಿ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದಾರೆ. (ವಿವರಗಳನ್ನು)

ವಿವರವನ್ನು ಅನುಬಂಧ-'ಎ' ನಲ್ಲಿ ಒದಗಿಸಿದೆ.

ಇ. ಈ ಜಾಗದ ಇಂದಿನ ಮಾರುಕಟ್ಟೆ ಮೌಲ್ಯವೆಷ್ಟು;

ವಿವರವನ್ನು ಅನುಬಂಧ – 'ಎ'ನಲ್ಲಿ ಒದಗಿಸಿದೆ.

ಈ. ಈ ಜಾಗವನ್ನು ವಕ್ಫ್ ಮಂಡಲಿಯು ತನ್ನ ಸ್ವಾದೀನಕ್ಕೆ ತೆಗೆದುಕೊಳ್ಳಲು ಕೈಗೊಂಡಿರುವ ಕ್ರಮಗಳೇನು;

ವಕ್ಫ್ ಸಂಸ್ಥೆಗಳಿಗೆ ಸೇರಿದ ಜಾಗವನ್ನು ಅತಿಕ್ರಮಣ ಮಾಡಿಕೊಂಡಿರುವುದನ್ನು, ರಾಜ್ಯ ವಕ್ಫ್ ಮಂಡಲಿಯು ತನ್ನ ಸ್ವಾದೀನಕ್ಕೆ ತೆಗೆದುಕೊಳ್ಳಲು ಕರ್ನಾಟಕ ಪಬ್ಲಿಕ್ ಪ್ರೆಮಿಸಸ್ ಆಕ್ಟ್ 1974 ಹಾಗೂ ವಕ್ಫ್ ಕಾಯಿದೆ 1995 ರ ಕಲಂ 54 ಹಾಗೂ ಕರ್ನಾಟಕ ವಕ್ಫ್ ನಿಯಮ 1997 ರ ಪ್ರಕಾರ ವಕ್ಫ್ ಸಂಸ್ಥೆಗಳಿಗೆ ಸೇರಿದ ಜಾಗಗಳನ್ನು ತೆರವುಗೊಳಿಸಲು ಆಗಿಂದಾಗ್ಗೆ ತೆಗೆದುಕೊಂಡ ಕ್ರಮವನ್ನು ಅನುಬಂಧ 'ಎ'ನಲ್ಲಿ ಒದಗಿಸಿದೆ.

ಉ. ಯಾವ ಅವದಿಯಿಂದ ಈ ಜಾಗವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ?

ವಿವರವನ್ನು ಅನುಬಂಧ- 'ಎ' ನಲ್ಲಿ ಲಗತ್ತಿಸಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ವಕ್ಫ್ ಬೋರ್ಡಿಗೆ ಸೇರಿದ ಸಾವಿರಾರು ಎಕರೆ ಜಮೀನನ್ನು un-authorize ಆಗಿ ಒತ್ತುವರಿ ಮಾಡಲಾಗಿದೆ. ಆ ರೀತಿ ಒತ್ತುವರಿ ಮಾಡಿರುವವರಲ್ಲಿ ಶೇಕಡ 90 ರಷ್ಟು ಮುಸ್ಲಿಂ ಜನರೇ ಇದ್ದರೆ. ಸಾವಿರಾರು ಕೋಟಿ ರೂ.ಗಳಷ್ಟು ಬೆಲೆ ಬಾಳುವ ಜಮೀನನ್ನು ಮುಸ್ಲಿಂ ಸಮುದಾಯದವರೇ acquire ಮಾಡಿದ್ದಾರೆ. 'Action initiated', 'Action pending', 'ಬೋರ್ಡ್ ಮುಂದಿದೆ' ಇಂತಹ ಉತ್ತರಗಳನ್ನೇ ಮಾನ್ಯ ಸಚಿವರು ನೀಡಿದ್ದಾರೆ. ಏನಾದರೂ ಕಠಿಣ ಕ್ರಮಗಳನ್ನು ಕೈಗೊಂಡು ಕೋಟ್ಯಂತರ ರೂಪಾಯಿಗಳ ಮೌಲ್ಯದ ಜಮೀನನ್ನು ಉಳಿಸುತ್ತೀರಾ? ಏತಕ್ಕಾಗಿ ತಾವು ಕ್ರಮ ಕೈಗೊಳ್ಳಲು ಹಿಂದೆ-ಮುಂದೆ ನೋಡುತ್ತಿದ್ದೀರಿ? ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣಗಳೇನು? ಕೋಟ್ಯಂತರ ರೂ.ಗಳ ಮೌಲ್ಯದ ಆಸ್ತಿ ಒತ್ತುವರಿಯಾಗಿದೆ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಮಾನ್ಯ ಸಚಿವರು ನೀಡಿರುವ ಉತ್ತರಗಳಿಂದ ಏನೂ ಆಗುವುದಿಲ್ಲ. ಆ ಜಮೀನು ಏನೂ ವಾಪಸ್ ಬರುವುದಿಲ್ಲ. ಒತ್ತುವರಿಯಲ್ಲಿ ಶೇಕಡ 90 ರಷ್ಟು ಮುಸ್ಲಿಂ ಸಮುದಾಯದವರೇ ಇರುವುದರಿಂದ ಕ್ರಮ ತೆಗೆದುಕೊಳ್ಳದೆ ಹಾಗೆಯೇ ಬಿಡುತ್ತಿದ್ದೀರಾ? ಎಂಬ ಬಗ್ಗೆ ಹೇಳಬೇಕು. ತಾವು ಇದಕ್ಕೆ ಉತ್ತರ ಕೊಟ್ಟ ನಂತರ, ನಾನು ಮತ್ತೊಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಮುಮ್ತಾಜ್ ಅಲಿಖಾನ್:- ಮಾನ್ಯ ಅಧ್ಯಕ್ಷರೆ, ಬಹಳ ಅಮೂಲ್ಯವಾದಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಪ್ರಶ್ನೆಗಳ ಉತ್ತರ ಕೇವಲ ಬೀದರ್ ಜಿಲ್ಲೆಗೆ ಸೀಮಿತವಾದುದಲ್ಲ, ಇಡೀ ಕರ್ನಾಟಕಕ್ಕೆ ಸೀಮಿತವಾಗಿದೆ. ಶೇಕಡ 90 ರಷ್ಟು ಮುಸ್ಲಿಂ ಸಮುದಾಯದವರು ಅತೀಕ್ರಮಣ ಮಾಡಿರುವುದರಿಂದ ತಾವೇನಾದರೂ ಸುಮ್ಮನಿದ್ದೀರಾ? ಎಂದು ತಾವು ಕೇಳಿದಿರಿ. ಖಂಡಿತವಾಗಿಯೂ ಆ ರೀತಿ ಇಲ್ಲ. ಇಸ್ಲಾಂ ಧರ್ಮದ ಅಡಿಯಲ್ಲಿ ದೇವರ ಭಯದಿಂದ, 'ಸತ್ಯಂ ಶಿವಂ ಸುಂದರಂ' ಎಂಬ ಮಾತು ಇಟ್ಟುಕೊಂಡು ಮಾತನಾಡುತ್ತೇನೆ, ಶೇಕಡ 80 ರಷ್ಟು ಮುಸಲ್ಮಾನರು ಏನು ಒತ್ತುವರಿ ಮಾಡಿಕೊಂಡಿದ್ದಾರೆ, ಇವರು ಇಸ್ಲಾಂ ಧರ್ಮದ ದ್ರೋಹಿಗಳು, ಸಮಾಜ ದ್ರೋಹಿಗಳು ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಇಂತಹ ದ್ರೋಹಿಗಳಿಗೆ ಉತ್ತೇಜನ ಕೊಟ್ಟವರು, ಮನ್ನಣೆ ಕೊಟ್ಟವರು, ಅವರ ಬಗ್ಗೆ ಕಾಳಜಿ ತಳೆದಿರುವವರು ಮುಸ್ಲಿಂ ನಾಯಕರು, ಮುಸ್ಲಿಂ ಧರ್ಮ ಗುರುಗಳು. ಎಲ್ಲರೂ ಸೇರಿ ಹೊಂಚು ಹಾಕಿದ್ದಾರೆ ಎಂದು ಹೇಳಿದರೂ ತಪ್ಪಿಲ್ಲ. ಒಬ್ಬ ದಾನಿ ಕೊಟ್ಟಂತಹ ಜಮೀನನ್ನು ಯಾರೂ ಆಕ್ರಮಣ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಇಸ್ಲಾಂ ಧರ್ಮದ

ಪ್ರಕಾರ ಬೇರೆಯವರ ಆಸ್ತಿ ಮೇಲೆ ಕಣ್ಣಿಟ್ಟರೆ ಅದು ಪಾಪವಾಗುತ್ತದೆ. ಮಸೀದಿ ವಿಷಯ ಬೇಕಾದರೆ ನಾನು ಹೇಳುತ್ತೇನೆ. ನೀವು ಮಸೀದಿ ಕಟ್ಟಬೇಕಾದರೆ, ಆ ಜಮೀನು ನೂರಕ್ಕೆ ನೂರರಷ್ಟು ನಿಮಗೆ ಸೇರಿದೆಯೇ? ಅದರಲ್ಲಿ ಏನೂ ಅನುಮಾನ ಇಲ್ಲ, ಶಂಕೆ ಇಲ್ಲ, ಆಗ ಮಾತ್ರ ನೀವು ಮಸೀದಿ ಕಟ್ಟಬೇಕು ವಿನ: ಅನ್ಯರ ಜಮೀನಿನಲ್ಲಿ ಮಸೀದಿ ಕಟ್ಟಬಾರದು. ಅದು ಅಪರಾಧ, ಪಾಪ. ಹೀಗಿರುವಾಗ ನಾನು ಖಂಡಿತವಾಗಿಯೂ ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ. ನಾನು ಮುಸ್ಲಿಂ ಆಗಿದ್ದೇನೆ, ಯಾವಾಗಲೂ ನನ್ನಿಂದ ಮುಸ್ಲಿಂ ಪರ ಮಾತು ಬರುವುದೇ ಇಲ್ಲ. ಅನೇಕ ಮುಸ್ಲಿಮರು ನನ್ನ ಮಾತುಗಳನ್ನು ಒಪ್ಪಿಕೊಳ್ಳುವುದೇ ಇಲ್ಲ. ಏಕೆಂದರೆ, ನಾನೊಬ್ಬ ಪ್ರಗತಿಪರನಾಗಿದ್ದೇನೆ. ಆದ್ದರಿಂದ ನಾನು ಕೆಲವು ಮಾತುಗಳನ್ನು....

ಅಧ್ಯಕ್ಷರು:- ಮಾನ್ಯ ಸಚಿವರು ನೇರವಾಗಿ ಪ್ರಶ್ನೆಗೆ ಸಂಬಂಧಿಸಿದಂತೆ ಮಾತ್ರ ಉತ್ತರ ಕೊಡಿ.

ಶ್ರೀ ಮುಮ್ತಾಜ್ ಅಲಿ ಖಾನ್:- ಮಾನ್ಯ ಶಾಸಕರಿಗೆ ಉತ್ತರವನ್ನು ಹೇಳಿ ಬಿಡುತ್ತೇನೆ. ಈಗ ಎರಡೂ ಕಾನೂನುಗಳಿವೆ, ಅವುಗಳು ಹರಿತವಾಗಿಲ್ಲ, ಅವುಗಳಿಗೆ ಶಕ್ತಿ ಇಲ್ಲ. ಆ ಕಾನೂನುಗಳನ್ನು ಬದಲಾಯಿಸಬೇಕು. ಈಗ ನಾಲ್ಕು ಕಂದಾಯ ವಿಭಾಗಗಳಿಗೆ ನಾಲ್ಕು tribunals ಇವೆ. ಆ tribunalsಗೆ ಪ್ರಕರಣಗಳ ವಿಚಾರಣೆಗೆ ಸಮಯ ಸಿಗುತ್ತಿಲ್ಲ, ಅದನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. 4 tribunals ಬದಲಿಗೆ ಒಂದು tribunal ನಮಗೆ ಕೊಡಿ, ಆ tribunal 24 ಗಂಟೆ ಇದೇ ತರಹದ ಪ್ರಕರಣಗಳನ್ನು ತೆಗೆದುಕೊಳ್ಳಬೇಕು, ಬೇರೆಯದನ್ನು ತೆಗೆದುಕೊಳ್ಳಬಾರದು ಎಂದು ನಾವು ಹೇಳುತ್ತಿದ್ದೇವೆ. ಸರ್ವೇಯರ್‌ಗಳೇನಿದ್ದಾರೆ, ಅವರು ನಮಗೆ ಸರ್ಕಾರದ ಕೆಲಸ ಮಾಡಲಿಕ್ಕೆ ಕಾಲವಕಾಶವಿಲ್ಲ, ಖಾಸಗಿ ಜಮೀನನ್ನು ಸರ್ವೆ ಮಾಡಲಿಕ್ಕಾಗುವುದಿಲ್ಲ ಎನ್ನುತಾರೆ. ಅದಕ್ಕೊಂದು ಪರಿಹಾರವನ್ನು ಹುಡುಕುತ್ತಿದ್ದೇವೆ. ಖಾಸಗಿ ಸರ್ವೇಯರ್ಸ್ ಲೈಸೆನ್ಸ್ ಪಡೆದಿದ್ದರೆ, ಅವರಿಗೆ ಅಧಿಕಾರ ಕೊಟ್ಟು, ಅವರು ಕೊಟ್ಟ ವರದಿಯನ್ನು ತಹಸೀಲ್ದಾರ್ authentication ಮಾಡಬೇಕು ಎಂದು ಮಾಡುತ್ತಿದ್ದೇವೆ. ಯಾವ ರೀತಿಯಾಗಿ BDA ನವರು ಅತಿಕ್ರಮಣ ಕಟ್ಟಡಗಳನ್ನು ಧ್ವಂಸ ಮಾಡುತ್ತಾರೆಯೋ, ಅದೇ ರೀತಿಯಲ್ಲಿ task forece ವೊಂದನ್ನು ನಮ್ಮಲ್ಲೂ ಮಾಡಬೇಕಾಗಿದೆ. ಅದು ಇಲ್ಲದಿದ್ದರೆ ಅತಿಕ್ರಮಣ ತೆರವುಗೊಳಿಸಲು ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದೇನೆಂದು ನನಗನಿಸುತ್ತಿದೆ. ಇನ್ನೂ ಹೆಚ್ಚಿಗೆ ಮಾಹಿತಿಯನ್ನು ಅವರು ಕೇಳಿದ್ದಲ್ಲಿ, ಅದನ್ನು ಹೇಳಲು ನಾನು ಸಿದ್ಧನಿದ್ದೇನೆ.

ಶ್ರೀ ಡಿ.ಕೆ ಶಿವಕುಮಾರ್:- ಅತಿಕ್ರಮಣವಾಗಿರುವ ವಕ್ಫ್ ಆಸ್ತಿಗಳನ್ನು ಮಾನ್ಯ ಸಚಿವರು ಎಷ್ಟು ದಿನಗಳಲ್ಲಿ ತೆರವುಗೊಳಿಸುತ್ತೀರಿ? ಎಂಬುದನ್ನು ತಿಳಿಸಬೇಕು.

ಶ್ರೀ ಮುಮ್ತಾಜ್ ಅಲಿ ಖಾನ್:- ಮಾನ್ಯ ಸದಸ್ಯರ ಇನ್ನೊಂದು ಪ್ರಶ್ನೆ ಇದೆ. ಅದನ್ನೂ ಕೇಳಲಿ. ಒಟ್ಟಿಗೇ ಎರಡಕ್ಕೂ ಉತ್ತರಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಗುರುಪಾದಪ್ಪನವರೆ, ತಮ್ಮ ಪ್ರಶ್ನೆಯನ್ನೂ ಕೇಳಿಬಿಡಿ.

ಶ್ರೀ ಡಿ.ಕೆ. ಶಿವಕುಮಾರ್:- BDA ರೀತಿಯಲ್ಲಿ task force ಮಾಡುತ್ತೇವೆ, ಇರುವ ಕಾನೂನನ್ನು strengthen ಮಾಡುತ್ತೇವೆಂದು ಗೌರವಾನ್ವಿತ ಸಚಿವರು ಹೇಳಿದ್ದಾರೆ. ಬಹಳ ಸಂತೋಷ, ನಿಮಗೆ ನಾವು ಈ ಬಗ್ಗೆ congratulate ಮಾಡುತ್ತೇವೆ. Including ವಿಂಡ್ಸರ್ ಮ್ಯಾನರ್ ಹೋಟೆಲ್, ಎಷ್ಟು ದಿನಗಳಲ್ಲಿ ಅತಿಕ್ರಮಣಕ್ಕೊಳಗಾಗಿರುವ ಇಂತಹ Propoerties ಅನ್ನು ತಾವು Vacate ಮಾಡಿಸುತ್ತೀರಿ? ಇದಕ್ಕೆ time bound Programme fix ಮಾಡಿದ್ದೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ವಿಂಡ್ಸರ್ ಮ್ಯಾನರ್ ಬಗ್ಗೆ 'On recovering wakf property of 5 acres given to windsor Manor, Rehaman Khan said that the property was given on lease for 30 years. The lease period is completed in 2003.'

ಅಧ್ಯಕ್ಷರು:- ಮಾನ್ಯ ನಾಗಮಾರಪಲ್ಲಿಯವರೆ, ತಾವು Specific ಪ್ರಶ್ನೆ ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- 'Later the lease period has been extended for 90 years through illegal means' ಈ ರೀತಿಯಾಗಿ illegal means ನಿಂದ 90 ವರ್ಷಕ್ಕೆ ಲೀಸ್ ಪೀರಿಯಡ್ ಎಂದು ಅವರು ಮಾಡಿಕೊಂಡಿದ್ದರೆ. 2003ಕ್ಕೇ ಅವರ ಲೀಸ್ ಪೀರಿಯಡ್ ಮುಗಿದು ಹೋಗಿದೆ.

ವಿಂಡ್ಸರ್ ಮ್ಯಾನರ್‌ಗೆ ಎಷ್ಟು ಮಂತ್ರಿಗಳು ಬಂದರು, ಹೋದರು ಯಾರು ಖಾಲಿ ಮಾಡುವಂತಿಲ್ಲ, unauthorized ಆಗಿದ್ದಾರೆ, ಸಾವಿರಾರು ಕೋಟಿ ಜಮೀನು, ಯಾರು ಕೇಳುವಂತಿಲ್ಲ.

ಅಧ್ಯಕ್ಷರು: ನಾಗಮಾರಪಲ್ಲಿಯವರೆ, ನೇರವಾಗಿ ಪ್ರಶ್ನೆಯನ್ನು ಕೇಳಿ, ಬಹಳ ಸರ್ಕಾರಗಳು ಬಂದು ಹೋಗಿದ್ದಾವೆ, ಅವಲ್ಲಿ ನೀವು ಇದ್ದೀರಿ, ಪಾಪ ಅವರು ಏನೋ ಹೊಸದಾಗಿ ಮಂತ್ರಿಗಳಾಗಿ ಬಂದಿದ್ದಾರೆ, ಮಾಡುತ್ತೇನೆಂದು ಹೇಳುತ್ತಿದ್ದರೆ, ಮಾಡುವುದಕ್ಕೆ ಅವರಿಗೆ ಅವಕಾಶ ಕೊಡಿ, ನಿರ್ದಿಷ್ಟವಾಗಿ ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅ ಜಮೀನನ್ನು 90 ವರ್ಷ ಲೀಸ್ ಹಾಕಿಕೊಂಡಿದ್ದಾರೆ, ಏನಾಯಿತೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ನಿಮ್ಮನ್ನು

ಮುಸ್ಲಿಂ ಸಮುದಾಯದವರೆಂದು ಮಂತ್ರಿ ಮಾಡಿದ್ದಾರೆ, ಬೇರೆಯವರೆಂದು ಮಾಡಿಲ್ಲ, ಅದಂತು ಎಲ್ಲರಿಗೂ ಗೊತ್ತಿದೆ ನೀವು ಹೇಳುವುದೇ ಬೇಡ. ಅದಕ್ಕಾಗಿ ಅಲ್ಲಿ ಏಕೆ ಹಾಗೆ ಆಗುತ್ತಿದೆ, ಏತಕ್ಕೆ ಹಾಗಾಗಿದೆ ಎಂಬುದನ್ನು ತಾವು ಹೇಳಿ.

ಶ್ರೀ ಸಿ.ಟಿ. ರವಿ: ಯಾರ ಕಾಲದಲ್ಲಾಯಿತು, ಯಾರ್‍ಯಾರು ಎಷ್ಟೆಷ್ಟು ಆಸ್ತಿಯನ್ನು ಹೊಡೆದಿದ್ದಾರೆಂಬುದನ್ನು ಹೇಳಬೇಕು ಸರ್.

ಡಾ: ಮುಮ್ತಾಜ್ ಅಲಿ ಖಾನ್: ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್ ಅವರ ಪ್ರಶ್ನೆಗೆ ಬ್ರಹ್ಮ ಬಂದರು ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಬ್ರಹ್ಮ ಬಂದರೂ ಇದಕ್ಕೆ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಕಾರಣ ಅನೇಕ ದಶಕಗಳಿಂದ ಈ ಕೆಲಸ ನಡೆದಿದೆ, ನಾವು ಈಗ ತಾನೆ ಕಣ್ಣುಬಿಟ್ಟಿದ್ದೇವೆ. ಎಷ್ಟು ತಿಂಗಳಲ್ಲಿ, ಎಷ್ಟು ವರ್ಷಗಳಲ್ಲಿ ಎಂಬುವ ಆಶ್ವಾಸನೆಯನ್ನು ನಾನಲ್ಲ, ನೀವಿದ್ದರು, ಯಾರಿಂದಲೂ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ನಾವು ನಿಷ್ಠೆಯಿಂದ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್: ಮಂತ್ರಿಗಳು ಅಸಹಾಯಕತೆಯಿಂದ ದೇವರು ಬಂದರು ಆಗುವುದಿಲ್ಲವೆಂದು ಹೇಳಿದ ಮೇಲೆ ಇನ್ಯಾರನ್ನು ನಾವು ಕೇಳುವುದು,

ಅಧ್ಯಕ್ಷರು: ಅವರು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ಮಾಡಲಿ We will give you strength. You do whatever you want.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬ್ರಹ್ಮ ಬಂದರು ಆಗುವುದಿಲ್ಲವೆಂದರೆ ಇನ್ಯಾರು ಬಂದರೆ ಆಗುತ್ತದೆ?

ಶ್ರೀ ಡಿ.ಕೆ. ಶಿವಕುಮಾರ್: ನಿನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು, ಏನು ಸಂಕಲ್ಪ ಮಾಡಿದ್ದಾರೆ ಅಧಿಕಾರಕ್ಕೆ ಬಂದ ತಕ್ಷಣ ತೆಗೆದುಹಾಕುತ್ತೇನೆಂದು ಮುಖ್ಯಮಂತ್ರಿಗಳು ಏನು ಮಾಡಿದ್ದರೆ.

ಅಧ್ಯಕ್ಷರು: ಬಾಲಕೃಷ್ಣನವರೆ, No. I will not allow.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೆ, ಹಿಂದೆ ಇದ್ದವರಿಗಂತು ಮಾಡುವುದಕ್ಕಾಗಲಿಲ್ಲ, ಈಗಿರುವವರಾದರು ಮಾಡುತ್ತಾರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಆಗುವುದಿಲ್ಲವೆಂದರೆ ಏನರ್ಥ?

ಅಧ್ಯಕ್ಷರು: ಅವರು ಪ್ರಯತ್ನ ಮಾಡುತ್ತೇವೆಂದು ಹೇಳಿದರಲ್ಲ, ಆಗುವುದಿಲ್ಲವೆಂದು ಅವರು ಹೇಳಲಿಲ್ಲ, ಇದಕ್ಕೆ ಕಾಲಮಿತಿಯನ್ನು ಕೊಡುವುದಕ್ಕಾಗುವುದಿಲ್ಲ, ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ, ನೋಡೋಣ ಅದನ್ನೆಲ್ಲಾ interpretation ಮಾಡುವುದಕ್ಕೆ ಹೋಗಬೇಡಿ.

ಶ್ರೀ ಯು.ಟಿ. ಫರೀದ್: ಮಾನ್ಯ ಅಧ್ಯಕ್ಷರೆ, ಇದು ಹಲವಾರು ವರ್ಷಗಳಿಂದ ಬಂದದ್ದು, ಸಡನ್ ಆಗಿ ಸರಿಮಾಡುವ ಪರಿಸ್ಥಿತಿ ಇಲ್ಲ. ಆದಕಾರಣ, ಇದನ್ನು ಸಂಪೂರ್ಣವಾಗಿ, ಯಾವ ರೀತಿಯಾಗಿ ಮುಂದಕ್ಕೆ ಮಾಡಬೇಕೆಂಬುದನ್ನು ಹೇಳಬೇಕು ಹಾಗೂ ಜಂಟಿ ಸದನ ಸಮಿತಿಯನ್ನು ರಚಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಮುಮ್ತಾಜ್ ಅಲಿ ಖಾನ್: ಖಂಡಿತವಾಗಿಯು ಪ್ರಯತ್ನಪಡುತ್ತೇವೆ, ಕೇವಲ ಕೆಲವು ತಿಂಗಳುಗಳಲ್ಲಿ ಆಗುವುದಿಲ್ಲ. ಅದಕ್ಕಾಗಿ ನಾನು ಬ್ರಹ್ಮನನ್ನು ಜ್ಞಾಪಿಸಿಕೊಂಡೆವು, ಇಲ್ಲದಿದ್ದರೆ ನಾವು ಪ್ರಯತ್ನಮಾಡುತ್ತೇವೆ. ವಿಂಡರ್ಸ್ ಮ್ಯಾನರ್‌ಗೆ ಏನು ಲೀಸ್ ಕೊಟ್ಟಿದ್ದೇವು, ಅದು ಬಹಳ ಕೆಟ್ಟ ಕೆಲಸ. ಎಕೆಂದರೆ ಒಂದು ವರ್ಷ ಬಿಡದೆ ಮಾರನೆ ವರ್ಷ 30 ವರ್ಷ ಕೊಟ್ಟರು. ಲೀಸ್ ಮುಗಿಯುವುದಕ್ಕೆ ಮೊದಲೇ ಒಂದನೆ ಸಲ, ಎರಡನೆ ಸಲ, ಮೂರನೆ ಸಲ ವಿಸ್ತರಿಸಿದರು. ಸಾಮಾನ್ಯವಾಗಿ ಲೀಸ್ ಅವಧಿ ಮುಗಿದ ನಂತರ ಲೀಸ್ ಕೊಡುತ್ತಾರೆ. ಎರಡನೆಯದಾಗಿ, ಇಸ್ಲಾಂ ಧರ್ಮದ ದೃಷ್ಟಿಯಿಂದ ವಿಂಡರ್ಸ್ ಮ್ಯಾನರ್‌ಗೆ ಲೀಸ್ ಕೊಟ್ಟಿದ್ದು ಪಾಪದ ಕೆಲಸ. ಅಲ್ಲಿ ಸಾರಾಯಿ ಇದೆ, ಬಾರ್ ಇದೆ, ಹಂದಿ ಮಾಂಸ ಮಾಡುತ್ತಾರೆ, ಅದನ್ನು ತಿನ್ನುವುದಕ್ಕೆ ಬಿಡುತ್ತಾರೆ, ಇವರೆಡು ಇಸ್ಲಾಂ ಧರ್ಮದಲ್ಲಿ ಅವಕಾಶವಿಲ್ಲ. ಈಗ ಕೊಟ್ಟಿರುವ ಮುಸ್ಲಿಂ ನಾಯಕರು ಅವರು ಅದಕ್ಕೆ ಜವಾಬ್ದಾರರು.

ಶ್ರೀ ಆರ್. ರೋಷನ್ ಬೇಗ್: ಯಾವ್ಯಾವ ಕಾಲದಲ್ಲಾಯಿತೆಂಬ ಸ್ವಲ್ಪ ವಿವರವನ್ನು ಕೊಡುತ್ತಿರಾ? ಆಗ ಯಾರು ಮಂತ್ರಿಗಳಾಗಿದ್ದರು?

ಶ್ರೀ ಡಿ.ಕೆ. ಶಿವಕುಮಾರ್: ಈಗ ತಾವು ತಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ, ತಾವು ಹೇಳುತ್ತಿರುವುದೆಲ್ಲಾ ಸತ್ಯ, ಇದೆಲ್ಲಾ ಆಗಿಹೋಗಿದೆ, ಇದನ್ನು ಸರಿ ಹೇಗೆ ಮಾಡುತ್ತೀರಿ.

ಅಧ್ಯಕ್ಷರು: ಮಾಡುತ್ತೇವೆಂದು ಹೇಳಿದರಲ್ಲ.

ಶ್ರೀ ಡಿ.ಕೆ ಶಿವಕುಮಾರ್: ಲೀಸ್ ಕ್ಯಾನ್ಸಲ್ ಮಾಡುತ್ತಿದ್ದೀರಾ, ಇಲ್ಲವೆಂದರೆ ಮತ್ತೆ ಏನಾದರೂ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು, ಮತ್ತೆ ಕನ್ಸಿಡರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಿರಾ? ದಯವಿಟ್ಟು ತಾವು ಹೇಳಬೇಕು.

ಡಾ: ಮುಮ್ತಾಜ್ ಅಲಿ ಖಾನ್: ಮಾನ್ಯ ಶಾಸಕರೆ, ತಮಗೆ ನಾನು ಇಷ್ಟು ನೇರವಾಗಿ ಉತ್ತರವನ್ನು ಕೊಡುತ್ತೇನೆ, ಆ ಜಮೀನನ್ನು ಸರ್ಕಾರ ತೆಗೆದುಕೊಂಡಿದೆ, ಸರ್ಕಾರ ವಾಪಸ್ ತೆಗೆದುಕೊಳ್ಳುತ್ತೇವೆ, ಮುಸಲ್ಮಾನರಿಂದ ಕೆಲವು ಹಿಂದುಗಳಿಂದ ಎಲ್ಲರಿಂದ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೇವೆ.

ಅನಾಥ ವೃದ್ಧಾಶ್ರಮಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	42 (94)
ಸದಸ್ಯರ ಹೆಸರು	:	ಶ್ರೀ. ಡೆರಿಕ್ ಎಂ.ಬಿ. ಫುಲ್‌ಇನ್‌ಫಾ (ನಾಮನಿರ್ದೇಶನ)
ಉತ್ತರಿಸುವ ದಿನಾಂಕ	:	24-07-2008
ಉತ್ತರಿಸುವವರು	:	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಅ) ಅನಾಥ ವೃದ್ಧರಿಗೆ ಬೆಂಗಳೂರು ನಗರದಲ್ಲಿ ಸರ್ಕಾರದ ವತಿಯಿಂದ ನಡೆಸಲಾಗುತ್ತಿರುವ ವೃದ್ಧಾಶ್ರಮಗಳ ಒಟ್ಟು ಸಂಖ್ಯೆ?

ಬೆಂಗಳೂರು ನಗರದಲ್ಲಿ ಎರಡು ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ.

ಆ) ಪ್ರತಿ ವೃದ್ಧಾಶ್ರಮದಲ್ಲಿರುವ ಒಟ್ಟು ಫಲಾನುಭವಿಗಳ ಸಂಖ್ಯೆ ಹಾಗೂ ವೃದ್ಧಾಶ್ರಮಕ್ಕೆ ತುಂಬಿಕೊಳ್ಳಬಹುದಾದ ಫಲಾನುಭವಿಗಳ ಸಂಖ್ಯೆ ಎಷ್ಟು?

ಪ್ರತಿ ವೃದ್ಧಾಶ್ರಮದಲ್ಲಿ 25 ಜನ ವೃದ್ಧರು ಇರುತ್ತಾರೆ ಪ್ರತಿ ವೃದ್ಧಾಶ್ರಮದಲ್ಲಿ ತುಂಬಿಕೊಳ್ಳಬಹುದಾದ ಫಲಾನುಭವಿಗಳ ಸಂಖ್ಯೆ 25

ಇ) ಬೆಂಗಳೂರು ನಗರ ಹಾಗೂ ಕರ್ನಾಟಕದಾದ್ಯಂತ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ನಡೆಸುತ್ತಿ ರುವ ವೃದ್ಧಾಶ್ರಮಗಳ ಸಂಖ್ಯೆ ಎಷ್ಟು?

ಬೆಂಗಳೂರು ನಗರದಲ್ಲಿ 10 ಹಾಗೂ ಕರ್ನಾಟಕಾದ್ಯಾಂತ 71 ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳು ನಡೆಸಲಾಗುತ್ತಿವೆ.

ಈ)ಸರ್ಕಾರವು ಕರ್ನಾಟಕ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ವೃದ್ಧಾಶ್ರಮಗಳನ್ನು ಪ್ರಾರಂಭಿಸಲಾಗುತ್ತಿದೆಯೇ?

ಉಡುಪಿ ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ. ಈ 3 ಜಿಲ್ಲೆಗಳಲ್ಲೂ ವೃದ್ಧಾಶ್ರಮ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.

SRI DERRICK M.B. FULLINFAW (NOMINATED): Few days back, I read news item that the Central Government has decided to set up six rehabilitation centers for ailing and destitute elephants in Karnataka alone. What about destitute human beings?

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು: ಅಧ್ಯಕ್ಷರೆ, ಕನ್ನಡದಲ್ಲಿ ಮಾತನಾಡಬೇಕೆಂದು ಅವರಿಗೆ ತಿಳಿಸಿ...

[ಗೊಂದಲ]

ಅಧ್ಯಕ್ಷರು: ನಾನು ಹಿಂದಿನ ಅಧಿವೇಶನದಲ್ಲು ಕೂಡ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಇವತ್ತು ಈ ಸದನದಲ್ಲಿರುವವರು ಕರ್ನಾಟಕದಲ್ಲಿದ್ದೇವೆ. ಎಲ್ಲಾ ಸದಸ್ಯರು ಇಲ್ಲೆ ಇದ್ದು ಇಲ್ಲೆ ವಾಸಿಸಿ, ಇಲ್ಲೆ ಬದುಕಿ ನಾವು ಬಾಳುತ್ತಿದ್ದೇವೆ. ನಾನು ಡೆರಿಕ್ ಒಬ್ಬರಿಗೆ ಹೇಳುತ್ತಿಲ್ಲ, ಆ ಕಡೆ ಈ ಕಡೆ ಇರುವ ಎಲ್ಲಾ ಸದಸ್ಯರು ಕನ್ನಡದಲ್ಲೇ ಹೆಚ್ಚಿನದಾಗಿ ಕಾರ್ಯಕಲಾಪದಲ್ಲಿ ಭಾಗವಹಿಸಬೇಕು, ಕನ್ನಡ ಭಾಷೆಯಲ್ಲಿಯೇ ಆಗಬೇಕೆನ್ನುವುದು ನನ್ನ ಆಶಯವೆಂದು ಹೇಳುತ್ತೇನೆ. ಮತ್ತೊಂದನ್ನು ಇಲ್ಲಿ ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ, ಇವತ್ತು ಇಲ್ಲಿರುವ ಗೌರವಾನ್ವಿತ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕು. ಆದರೆ ಸಂವಿಧಾನ ಬದ್ಧವಾಗಿ ಆಂಗ್ಲ ಭಾಷೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ಹೇಳುವುದಿಲ್ಲ. ಸಂವಿಧಾನಬದ್ಧವಾಗಿ ಮಾತನಾಡುವುದಕ್ಕೆ ಅವಕಾಶ, ಹಕ್ಕು ಇದೆ. ಅದರೆ ನಾವು ಇಲ್ಲಿರುವ ಎಲ್ಲರ ಭಾವನೆಗಳನ್ನು ಅರ್ಥಮಾಡಿಕೊಂಡು, ಸನ್ಮಾನ್ಯ ಎಲ್ಲಾ ಸದಸ್ಯರು ಕನ್ನಡದಲ್ಲೇ ಹೆಚ್ಚು ಕಾರ್ಯಕಲಾಪದಲ್ಲಿ ಭಾಗವಹಿಸುವುದನ್ನು ಮಾಡಬೇಕೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತೇನೆ. ಡೆರಿಕ್‌ರವರೆ, ನೀವು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೀರೆಂಬುದು ನನಗೆ ಗೊತ್ತಿದೆ, ಅದಕ್ಕಾಗಿ ಪ್ರಶ್ನೆಯನ್ನು ಕನ್ನಡದಲ್ಲೇ ಕೇಳಿ, ಏನಾದರೂ ತೊಂದರೆಯಾದರೆ ನಾವು ನಿವಾರಣೆ ಮಾಡುತ್ತೇವೆ. ಅದು ಎಲ್ಲಾ ಕಡೆಗೂ ಅನ್ವಯಿಸುತ್ತದೆ, ಅಲ್ಲಿಗೂ ಇಲ್ಲಿಗೂ ಅನ್ವಯವಾಗುತ್ತದೆ, ಇಲ್ಲಿ ಯಾರೋ ಮಾತನಾಡಿದಾಗ ನೀವು ಸುಮ್ಮನೆ ಕುಳಿತುಕೊಳ್ಳಬಾರದು. ಡೆರಿಕ್ ಅವರೆ, ನಿಮಗೆ ಹಕ್ಕಿದೆ ಇಲ್ಲವೆಂದು ಹೇಳುವುದಿಲ್ಲ. ಆದರೆ ನಾವೆಲ್ಲಾ ಕರ್ನಾಟಕದವರು, ಕನ್ನಡಿಗರು ಎಂಬುದನ್ನು ನೆನಪಿಟ್ಟುಕೊಂಡು ಪ್ರಶ್ನೆಯನ್ನು ಕೇಳಿ.

SRI DERRICK M.B. FULLINFAW:- Sir, the Central Government has promised to set up ...

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಶಾಸಕರೇ ಸದನದಲ್ಲಿ ಕನ್ನಡದಲ್ಲಿ ಮಾತನಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಅಧಿಕಾರಿಗಳು ಹೇಗೆ ಕನ್ನಡದಲ್ಲಿ ಮಾತನಾಡುತ್ತಾರೆ?

ಅಧ್ಯಕ್ಷರು: Please, Please ಕುಳಿತುಕೊಳ್ಳಿ.

ಶ್ರೀ ಡೆರಿಕ್ ಫುಲ್‌ಇನ್‌ಫಾ: ಒಡಿ. speaker I withdraw my question.

ಭದ್ರಾ ಮೇಲ್ದಂಡೆ ಯೋಜನೆಯಿಂದ ಶಿರಾ ತಾಲ್ಲೂಕಿಗೆ ನೀರಿನ ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2 (28)
ಸದಸ್ಯರ ಹೆಸರು	:	ಶ್ರೀ ಜಯಚಂದ್ರ ಟಿ.ಬಿ. (ಶಿರಾ)
ಉತ್ತರಿಸುವ ಸಚಿವರು	:	ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಭದ್ರಾ ಮೇಲ್ದಂಡೆ ಯೋಜನೆಯ ಸ್ಕೀಂ–ಎ ನಲ್ಲಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿಗೆ ನೀರನ್ನು ಕೊಡುವ ಉದ್ದೇಶವಿದೆಯೇ?

ಭದ್ರಾ ಮೇಲ್ದಂಡೆ ಯೋಜನೆಯ ಸ್ಕೀಂ'ಎ' ಅಡಿಯಲ್ಲಿ ಶಿರಾ ತಾಲ್ಲೂಕಿನ ಸುಮಾರು 41 ಸಣ್ಣ ನೀರಾವರಿ ಕೆರೆಗಳಿಗೆ ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ಕುಡಿಯುವ ನೀರು ಪೂರೈಸುವ ಉದ್ದೇಶವಿದೆ.

ಆ) ಹಾಗಿದ್ದಲ್ಲಿ, ಶ್ರೀ. ಕೆ.ಸಿ. ರೆಡ್ಡಿ ವರದಿಯಂತೆ ಈ ನೀರನ್ನು ಹೊಸೂರು ಬಳಿಯಿಂದ ಏತ ನೀರಾವರಿ ಮೂಲಕ ಕೊಡಲು ಉದ್ದೇಶಿಸಿರುವುದರಿಂದ ಅದನ್ನು ಮಾರ್ಪಡಿಸಿ ಅಜ್ಜಂಪುರ ಹತ್ತಿರ ಬಲದಂಡೆ ನಾಲೆಯನ್ನು ನಿರ್ಮಿಸಿ ತುಮಕೂರು ನಾಲೆ ಎಂದು ನಾಮಕರಣ ಮಾಡಿ ನೈಸರ್ಗಿಕವಾಗಿ ನೀರು ಹರಿಸಲು ಸರ್ಕಾರ ಚಿಂತಿಸುವದೇ?

ಶ್ರೀ. ಕೆ.ಸಿ. ರೆಡ್ಡಿ ವರದಿಯ ಪ್ರಕಾರ ಸ್ಕೀಂ 'ಎ' ಅಡಿಯಲ್ಲಿ ಚಿತ್ರದುರ್ಗಾ, ಚಿಕ್ಕಮಗಳೂರು ಜಿಲ್ಲೆಗಳಿಗೆ ನೀರಾವರಿ ಉದ್ದೇಶಕ್ಕಾಗಿ ಹಾಗೂ ನಂತರ ತುಮಕೂರು, ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ನೀರನ್ನು ಪೂರೈಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ನೀರಾವರಿ ನಿಗಮಕ್ಕೆ ವಹಿಸಲಾಗಿದೆ. ಅದರಂತೆ ನಿಗಮವು ಕ್ರಮ ತೆಗೆದುಕೊಳ್ಳುತ್ತಿದೆ. ತುಮಕೂರು ಪ್ರದೇಶಕ್ಕೆ ನೀರನ್ನು ಭದ್ರಾ ಮೇಲ್ದಂಡೆ ಯೋಜನೆ ಅಡಿ ಒದಗಿಸುವ ಪ್ರಸ್ತಾವನೆಯು ಸ್ಕೀಂ–ಬಿ ಅಡಿಯಲ್ಲಿ ಬರುತ್ತದೆ.

ಇ) ಸ್ಕೀಂ–ಎ ಮತ್ತು ಸ್ಕೀಂ–ಬಿ ನಲ್ಲಿ ಬರುವಂತಹ ನೀರಿಗೆ ಒಂದು ಸಮಗ್ರವಾದಂತ ಭದ್ರಾ ಮೇಲ್ದಂಡೆ ಯೋಜನೆಯನ್ನು ರೂಪಿಸಿ ತುಮಕೂರು ಜಿಲ್ಲೆ ಶಿರಾ, ಚಿಕ್ಕನಾಯಕನಹಳ್ಳಿ ಮತ್ತು ಚಿತ್ರದುರ್ಗಾ ಜಿಲ್ಲೆಯ ಹಿರಿಯೂರು ಮತ್ತಿತರ ಭಾಗಗಳಿಗೆ ನೀರನ್ನು ಕೊಡಲು ಸರ್ಕಾರ ಚಿಂತಿಸುವುದೇ?

ಭದ್ರಾ ಮೇಲ್ದಂಡೆ ಯೋಜನೆಗಾಗಿ ಸ್ಕೀಂ–ಬಿ ಅಡಿಯಲ್ಲಿ ಲಭ್ಯವಾಗಬಹುದಾದ ನೀರಿನ ಪ್ರಮಾಣವು ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಮಾನವನ್ನು ಅವಲಂಬಿಸಿರುತ್ತದೆ. ಅದರಂತೆ, ನ್ಯಾಯಾಧಿಕರಣದ ತೀರ್ಮ ಹೊರಬಂದ ನಂತರ, ಸ್ಕೀಂ–ಬಿ ಅಡಿ ಲಭ್ಯವಾಗುವ ನೀರಿಗೆ ಯೋಜನೆಯ ರೂಪುರೇಷೆಯನ್ನು ನಿರ್ಧರಿಸಬೇಕಾಗಿರುವುದರಿಂದ ಸ್ಕೀಂ–ಎ ಮತ್ತು ಸ್ಕೀಂ–ಬಿ ಅಡಿಯಲ್ಲಿ ಸಮಗ್ರವಾದ ಭದ್ರಾ ಮೇಲ್ದಂಡೆ ಯೋಜನೆಯನ್ನು ರೂಪಿಸುವುದರ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಆದರೆ ನಾನು ಈ ಸಂದರ್ಭದಲ್ಲಿ ಸರ್ಕಾರ ಹರಿಯುವ ನೀರಿಗೆ ಆದ್ಯತೆ ಇದೆಯೋ ಅಥವಾ ಏತ ನೀರಾವರಿಗೆ ಆದ್ಯತೆ ಇದೆಯೋ ಎಂದು ತಾವು ಖಚಿತವಾಗಿ ಹೇಳಬೇಕು. ನಾನು ಇಲ್ಲಿ ಕೇಳಿರತಕ್ಕಂತಹ ಎರಡನೇ ಪ್ರಶ್ನೆಗೆ ತಾವು ಉತ್ತರ ಕೊಟ್ಟಿರತಕ್ಕಂಥದ್ದು ತುಮಕೂರು ಪ್ರದೇಶಕ್ಕೆ ಭದ್ರಾ ಮೇಲ್ದಂಡೆ ಯೋಜನೆಯ ನೀರನ್ನು ಒದಗಿಸುವ ಪ್ರಸ್ತಾವನೆಯು ಸ್ಕೀಮ್ 'ಬಿ' ಅಡಿಯಲ್ಲಿ ಬರುತ್ತದೆ ಎಂದು ಹೇಳಿದ್ದೀರಿ. ನಾನು ಕೇಳಿರತಕ್ಕಂಥದ್ದು ಅದಲ್ಲ. ತುಮಕೂರು ನಾಲೆ ಎಂದರೆ, ಸ್ಕೀಮ್ 'ಎ'ನಲ್ಲಿ ಏನು 5.6 TMC ನೀರನ್ನು ಇವತ್ತು ತುಮಕೂರು ಮತ್ತು ಕೋಲಾರಕ್ಕೆ ಇಡಬೇಕೆಂದು ಇಟ್ಟಿದ್ದೀರಿ, ಆ ನೀರನ್ನು ನೈಸರ್ಗಿಕವಾಗಿ ನಾಲೆ ಮುಖೇನ ತುಮಕೂರಿಗೆ ನೀರು ತರುವುದಕ್ಕೆ ಸಾಧ್ಯವೇ ಎನ್ನತಕ್ಕಂತಹ ಮಾತನ್ನು ಕೇಳಿದ್ದೇನೆ. ಏಕೆಂದರೆ ಇದಕ್ಕೆ ಈಗಾಗಲೇ ಪ್ರಸ್ತಾವನೆ ಬಂದಿದೆ. Technical advisor committee ಯಿಂದ ತೀರ್ಮಾನವಾಗಿ ಕಡತ ಕೂಡ ತಮ್ಮ ಮುಂದೆ ಬಂದಿದೆ. ಸ್ಕೀಮ್ 'ಬಿ' ದು ಬೇರೆ ಪ್ರಶ್ನೆ. ಸ್ಕೀಮ್ 'ಎ'ನಲ್ಲಿ ಬರತಕ್ಕಂಥದ್ದನ್ನು ನೈಸರ್ಗಿಕವಾಗಿ ನಾಲೆ ಮುಖೇನ ಕೊಡುತ್ತೀರಾ ಎಂದು ಪ್ರಶ್ನೆ.

ಶ್ರೀ ಬಸವರಾಜ ಬೊಮ್ಮಾಯಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಏನು ಕೇಳಿದ್ದಾರೆ ಕೆ.ಸಿ. ರೆಡ್ಡಿ ವರದಿಯಂತೆ ನೀರನ್ನು ಹೊಸೂರು ಬಳಿಯಿಂದ ಏತ ನೀರಾವರಿ ಮೂಲಕ ತರುವ ಉದ್ದೇಶದಿಂದ ಅದನ್ನು ಮಾರ್ಪಡಿಸಿ ಅಜ್ಜಂಪುರ ಬಲದಂಡೆ ನಾಲೆಯನ್ನು ನಿರ್ಮಿಸಿ ತುಮಕೂರು ನಾಲೆ ಎಂದು ನಾಮಕರಣ ಮಾಡಿ ನೈಸರ್ಗಿಕವಾಗಿ ನೀರನ್ನು ಹರಿಸುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ. ಈ ಎಲ್ಲ ವಿಷಯಗಳನ್ನು ಕೆ.ಸಿ. ರೆಡ್ಡಿಯವರ ಆಯೋಗದಲ್ಲಿ ಚರ್ಚೆಯಾಗಿ, TAC ಮುಂದೆ ಬಂದು, ಅಲ್ಲಿ ಕೂಡ ಹಲವಾರು ಮೀಟಿಂಗ್‌ಗಳಾಗಿ ಪರಿಶೀಲನೆ ಮಾಡಿ ಕೊನೆಗೆ. ಇದರ ಉದ್ದೇಶ ಏನು? Component ಇದೆ. ಮೊದಲನೆಯದು ಬರಪೀಡಿತ ಪ್ರದೇಶವಾದ ಚಿತ್ರದುರ್ಗ ಜಿಲ್ಲೆಗೆ ನೀರಾವರಿ

ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ಕೆರೆ ತುಂಬಿಸಿ ಅದರ ಮುಖಾಂತರ ಕುಡಿಯುವ ನೀರಿನ ಯೋಜನೆ ಮಾಡುವುದು. ಈ ಎರಡು component ಗಳಿವೆ. ಕೃಷ್ಣ ಬೇಸಿನ್‌ನಲ್ಲಿ ಈ ಭಾಗಕ್ಕೆ ಬೇರೆ ರೀತಿ ನೀರು ಕೊಡುವುದಕ್ಕೆ ಸಾಧ್ಯವಿಲ್ಲ ಅಂದಾಗ, ಜಯಚಂದ್ರರವರಿಗೆ ಚೆನ್ನಾಗಿ ಗೊತ್ತಿದೆ. ಈ ಯೋಜನೆ ಇವತ್ತು ತುಂಗಾದಿಂದ 15 TMC ಮತ್ತು ವಿಜಯನಗರ ನಾಲೆಯಿಂದ 6.5TMC ... ಈ 15TMC ನಾವು ಏನು ತುಂಗಾ ನಾಲೆಯಿಂದ ತರುತ್ತಿದ್ದೇವೆ. ಅದು ಸೀಸನಲ್ ಇದೆ. ಜೂನ್‌ನಿಂದ ಅಕ್ಟೋಬರ್‌ವರೆಗೆ ಮಾತ್ರ. ಈ ಪ್ರದೇಶಗಳಿಗೆ ಕುಡಿಯುವ ನೀರಿನ ಸಲುವಾಗಿ ಆ ಸೀಸನಲ್ ನೀರನ್ನು ಎತ್ತಿ, ಭದ್ರಾ ನಾಲೆಗೆ ತಂದು ಅಲ್ಲಿಂದ ಅಜ್ಜಂಪುರಕ್ಕೆ ತಂದು ಮಾಡುತ್ತಿರುವುದು ನಿಮಗೆ ಗೊತ್ತಿದೆ ಇದರಲ್ಲಿ limited scope ಇದೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, water utilization ಮಾಡುವುದಕ್ಕೆ limited scope ಇದೆ. ನಮ್ಮ ಉದ್ದೇಶ ಇವತ್ತು ಎಲ್ಲಿ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಅಲ್ಲಿ ಸುಮಾರು 119 ಸಣ್ಣ ಕೆರೆಗಳನ್ನು ಸಿರಾ, ಕೊರಟಗೆರೆ, ಪಾವಗಡ ಮತ್ತು ಕೋಲಾರ ಜಿಲ್ಲೆಗಳಿಗೆ 119 ಸಣ್ಣ ಕೆರೆಗಳಿಗೆ ನೀರು ತುಂಬಿಸಬೇಕಾಗುತ್ತದೆ. ತಾವು ಹೇಳಿರುವುದು ನೈಸರ್ಗಿಕವಾಗಿ ಮಾಡುವುದನ್ನು ಸರ್ವೇ ಸಾಮಾನ್ಯವಾಗಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಪ್ರಶ್ನೆಯೇ ಇಲ್ಲ. ಆದರೆ ಇದನ್ನು ಮಾಡುವುದರ ಮುಖಾಂತರ ಏನು ನೀವು ತುಮಕೂರು ನಾಲೆ ಮಾಡಬೇಕೆಂದು ಮಾಡಿದ್ದೀರಿ ಅಲ್ಲಿ ಅಚ್ಚುಕಟ್ಟು ಪ್ರದೇಶ ಇದೆ. ಆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಿದರೆ, ಚಿತ್ರದುರ್ಗ ಮತ್ತು ಈ ಅಚ್ಚುಕಟ್ಟು ಪ್ರದೇಶ ಎರಡಕ್ಕೂ ನೀರನ್ನು ಒದಗಿಸಿದರೆ, ಮುಂದೆ ನಮ್ಮ ತುಮಕೂರು ಮತ್ತು ಕೋಲಾರ ಜಿಲ್ಲೆಗೆ ಕುಡಿಯುವ ನೀರಿಗಾಗಿ ಕೆರೆಗಳ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವತ್ತು ಕೆ.ಸಿ. ರೆಡ್ಡಿಯವರು TAC ಯನ್ನು ಡೀಟೇಲಾಗಿ ನೋಡಿ ಬಹಳ ವರ್ಷ ನೆಗೆದು ಬಿದ್ದು ಅಂತಿಮ ತೀರ್ಮಾನಕ್ಕೆ ಬಂದಿದೆ. ಬರಗಾಲ ಪ್ರದೇಶಕ್ಕೆ ಎಲ್ಲರೂ ಸೇರಿ ಒಂದು ಯೋಜನೆಯನ್ನು ಮಾಡಿದ್ದೇವೆ. ಈ ಸಂದರ್ಭದಲ್ಲಿ ಅದು ಈಗಾಗಲೇ ಟೆಂಡರ್ ಫೈನಲೈಸ್ ಮಾಡುವ ಪರಿಸ್ಥಿತಿಯಲ್ಲಿದ್ದಾಗ ಈಗ ಮಾರ್ಪಾಡು ಮಾಡಿದರೆ, ಮತ್ತೆ ಆ ಬರಗಾಲ ಪ್ರದೇಶಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ಏನು ಸಲಹೆ ಕೊಟ್ಟಿದ್ದೀರಿ, ನಿಮ್ಮ ಭಾಗಕ್ಕೆ ಮತ್ತು ತುಮಕೂರು ನಾಲೆ ಮುಖಾಂತರ ಏನು ಸಲಹೆ ಕೊಟ್ಟಿದ್ದೀರಿ, ಅದನ್ನು ಸ್ಕೀಮ್ 'ಬಿ' ಎಂದು ನಾವೇನು ಕರೆಯುತ್ತಿದ್ದೇವೆ, ಸ್ಕೀಮ್ 'ಎ' ಮತ್ತು ಸ್ಕೀಮ್'ಬಿ' ಎನ್ನುವ ಗೊಂದಲದಲ್ಲಿ ಬೀಳುವುದು ಬೇಡ ಇವತ್ತು ಏನು ಟ್ರಿಬ್ಯುನಲ್ ಮುಂದಿದೆ ಅದು ಮುಂದಿನ ಮಾರ್ಚ್ ಏಪ್ರಿಲ್‌ನಲ್ಲಿ ತೀರ್ಮಾನ ಬರುತ್ತದೆ. ಅಲ್ಲಿಯವರೆಗೆ ಕಾಯುವುದು ಬೇಡ.

ಸಮಗ್ರವಾಗಿ ಈ ಯೋಜನೆಯನ್ನು ಈ ನೀರಿನ ಒಂದು ಹನಿಯನ್ನೂ ಯಾವ ರೀತಿಯಾಗಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದರ ಸಲುವಾಗಿ ನಮ್ಮ ಸರ್ಕಾರ ಬಂದ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಈ ಸರ್ಕಾರ ಬರುವವರೆಗೆ ಸ್ಕೀಮ್ 'ಬಿ' ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಈಗ ನಾವು ಬಂದ ಮೇಲೆ ಸ್ಕೀಮ್'ಬಿ' ಇರಲಿ ಯಾವುದೇ ಇರಲಿ, ನಮ್ಮ ನೀರನ್ನು ಬಳಕೆ ಮಾಡುವುದರ ಸಲುವಾಗಿ ನಾವು ಮುಂದುವರೆಯಬೇಕು. ಸರ್ವೇ ಕಾರ್ಯ ಮುಗಿಸಬೇಕು. administrative sanction ಆಗುವವರೆಗೆ TAC Board ಎಲ್ಲಾ clear ಮಾಡಿ ನಾವು ತಯಾರಿರಬೇಕು ಎಂಬ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ತಾವು ಏನು ಸಲಹೆ ಕೊಡುತ್ತೀರಿ ಆ ನಿರ್ಣಯದ ಅನುಗುಣವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕೆ.ಸಿ.ರೆಡ್ಡಿಯವರು ಈಗಾಗಲೇ ಶಿಫಾರಸ್ಸು ಮಾಡಿದ್ದಾರೆ. ತುಮಕೂರು ಮತ್ತು ಕೋಲಾರ ಭಾಗಕ್ಕೆ ನೀರು ಕೊಡಬೇಕಾದಾಗ ಅದನ್ನು ಏತ ನೀರಾವರಿ ಮುಖೇನ ತೆಗೆದುಕೊಂಡು ಹೋಗಬೇಕಾದರೆ, 1,100 ಕೋಟಿ ರೂ. ಅಂದಾಜಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ, 1,100 ಕೋಟಿ ರೂಪಾಯಿಗಳನ್ನು ಬಳಸಿ ಸುಮಾರು 6 TMC ನೀರು ಕೊಡಬೇಕಾದುದನ್ನು ನೈಸರ್ಗಿಕವಾಗಿ ಕೊಡುವುದರ ಬಗ್ಗೆ ದಯಮಾಡಿ ಪರಿಶೀಲನೆ ಮಾಡಿ. ಇದು ಒಂದು. ಎರಡನೆಯದು ನಾನು ನಿಮ್ಮ ಉತ್ತರವನ್ನು ಸ್ವಾಗತ ಮಾಡುತ್ತೇನೆ. ತಮ್ಮ ಸರ್ಕಾರ ಬಂದ ಮೇಲೆ ಸ್ಕೀಮ್ 'ಬಿ' ಯನ್ನು ಸರ್ವೇ ಮಾಡಿಸುವುದಕ್ಕೆ ನಾವು ಒಪ್ಪಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿರತಕ್ಕಂಥದ್ದು ಬಹಳ ಸಂತೋಷ. ನಾನು ಸ್ವಾಗತ ಮಾಡುತ್ತೇನೆ. ಅದೇ ರೀತಿಯಾಗಿ ತಮ್ಮ ಉತ್ತರದ ಹಿನ್ನೆಲೆಯಲ್ಲಿ ಈಗ ನಾವು ಕೇಳುತ್ತಿರತಕ್ಕಂಥದ್ದು ಏನೆಂದರೆ, ಸ್ಕೀಮ್ 'ಎ' ಮತ್ತು ಸ್ಕೀಮ್ 'ಬಿ', ಸ್ಕೀಮ್ 'ಬಿ' ಯಲ್ಲಿ ಇರುವುದು 19 TMC ಸ್ಕೀಮ್ 'ಬಿ'ಯಲ್ಲಿ ವಾಣಿವಿಲಾಸಕ್ಕೆ ಇರತಕ್ಕಂಥದ್ದು 15 TMC, Scheme 'B' ಯಲ್ಲಿ ಇರತಕ್ಕಥದ್ದು 23TMC. ಅಲ್ಲಿಗೆ ಟೋಟಲ್ಲಿ 57 TMC ಅಲೋಕೇಷನ್ ಆಗುತ್ತದೆ. ಫಿಕ್ಸ್ ಆದಾಗ ಸ್ವಲ್ಪ ಕಡಿಮೆ ಆಗಬಹುದು. ಅದಕ್ಕೆ ಸಮಗ್ರವಾದ Comprehensive ಆಗಿರತಕ್ಕಂತಹ ಪ್ರಾಜೆಕ್ಟ್‌ಗಳನ್ನು ಮಾಡುತ್ತೀರ ಎನ್ನತಕ್ಕಂಥದ್ದು ಒಂದು. ಕಾರಣವೇನೆಂದರೆ ಸ್ಕೀಮ್ 'ಎ'ಗೆ ಒಂದು ನಾಲೆ, ಸ್ಕೀಮ್ 'ಬಿ' ಇನ್ನೊಂದು ವರ್ಷಕ್ಕೆ ಬರುತ್ತದೆ. ಅದಕ್ಕೆ ಇನ್ನೊಂದು ನಾಲೆ ಮಾಡುವುದರ ಬದಲು, Comprehensive ಆಗಿ ಡಿಸೈನ್ ಅನ್ನು ಈಗಲೇ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ನೇತ್ರಾವತಿ ಕಿರು ಯೋಜನೆ ಇವೆರಡೂ ಕೂಡ ನಮ್ಮ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೂಡ ಮಾಡಬೇಕೆಂದು ಹಿಂದೆ ಒಂದು ವರದಿ ಕೂಡ ಸಲ್ಲಿಸಲಾಗಿತ್ತು. ವರದಿಯನ್ನು ಪರಮಶಿವಯ್ಯನವರು ಸಲ್ಲಿಸಿದ್ದರು. ಅದಕ್ಕೆ ಸರ್ವೇ ಕಾರ್ಯ ಮಾಡಬೇಕೆಂದು ಹಿಂದಿನ ಸರ್ಕಾರದಲ್ಲಿ ತೀರ್ಮಾನವಾಗಿತ್ತು. ಹೈದರಾಬಾದ್ ಸೆಟಲೈಟ್ ಸಂಸ್ಥೆಯವರು ಸರ್ವೇ ಮಾಡುವುದಕ್ಕೆ 12 ಕೋಟಿ ರೂ. ತಗಲುತ್ತದೆ ಎಂದು ಅಂದಾಜು ಮಾಡಿದ್ದರು. ಅದರಲ್ಲಿ ಕೇವಲ ಎರಡು ಕೋಟಿ ರೂ. ಮಾತ್ರ ಬಿಡುಗಡೆ ಆಗಿದೆ. ನೇತ್ರಾವತಿ ಕಿರು ಯೋಜನೆ ಬಗ್ಗೆ ಮತ್ತು ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಸರ್ವೇ ಕಾರ್ಯ ಮುಗಿದರೆ ಮಾತ್ರ ಫೀಸಿಬಿಲಿಟಿ ಗೊತ್ತಾಗುತ್ತದೆ. ಸರ್ವೇ ಕಾರ್ಯಕ್ಕೆ ಸುಮಾರು 4–5 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದರೆ, ಸಾಧ್ಯತೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ದಯಮಾಡಿ ಸರ್ವೇ ಕಾರ್ಯಕ್ಕೆ 4–5 ಕೋಟಿ ರೂ. ಸರ್ಕಾರ ಬಿಡುಗಡೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಭದ್ರ ಮೇಲ್ದಂಡೆ ಕಡೂರಿಗೆ ಬರುತ್ತದೆ. ಕಡೂರಿಗೆ ಮೂರೂ ಕೆರೆಗಳನ್ನು ತುಂಬಿಸಲಿಕ್ಕೆ ಈಗಾಗಲೇ ಯೋಜನೆ ಸಿದ್ಧವಾಗಿ ಸರ್ವೇ ಕಾರ್ಯ ನಡೆಯುತ್ತಿದೆ. ಆದರೆ ಏನಾಗಿದೆ ಎಂದರೆ, ಭದ್ರಾ ಮತ್ತು ತುಂಗಾ ನದಿ, ನೇತ್ರಾವತಿ ನದಿ ಇವೆಲ್ಲಾ ಹುಟ್ಟಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದೇ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಇಲ್ಲ. ಇಲ್ಲಿ ಏನಾಗಿದೆಯೆಂದರೆ ಈ ಭದ್ರಾ ಮತ್ತು ತುಂಗಾ ಹಾಗೂ ನೇತ್ರಾವತಿ ನದಿಗಳೆಲ್ಲವೂ ಹುಟ್ಟಿ ಚಿಕ್ಕಮಗಳೂರು ಜಿಲ್ಲೆಗೆ ಒಂದೇ ಒಂದು ಹೆಕ್ಟೇರ್‌ಗೂ ನೀರಾವರಿ ಸೌಲಭ್ಯವಿಲ್ಲ. ಈಗ ಮಾನ್ಯ ಬಸವರಾಜ ಬೊಮ್ಮಾಯಿಯವರು ಕೇವಲ ಚಿತ್ರದುರ್ಗ, ಕೋಲಾರ ಮತ್ತು ಶಿರಾದಂಥ ಭಾಗಗಳನ್ನು ಹೇಳಿದ್ದಾರೆ. ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ತರೀಕೆರೆ ವಿಧಾನ ಸಭಾ ಕ್ಷೇತ್ರದೇ ಎಷ್ಟು ಕೆರೆಗಳನ್ನು ತುಂಬಿಸುತ್ತೀರಿ ಮತ್ತು ಎಷ್ಟು ಹೆಕ್ಟೇರ್‌ಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುತ್ತೀರೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರಾರವರು ಏನು ಡಿಸ್ಯನ್ ಬಗ್ಗೆ ಹೇಳಿದ್ದಾರೆ ಅದನ್ನು ನಾವು ಟಿ.ಎ.ಸಿ. ಮುಂದೆ ಅದರ ಪರಿಗಣನೆಗೆ ಇಡುತ್ತೇನೆ. ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಇನ್ನು ನಮ್ಮ ಶಿವಶಂಕರ್‌ರೆಡ್ಡಿಯವರು ಮಾತನಾಡಿ ಇಸ್ರೋದಿಂದ ಆಗುವಂಥ ಸರ್ವೆ ಕಾರ್ಯಕ್ಕೆ ಹಣ ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಮೊನ್ನೆ

ಮೀಟಿಂಗ್‌ನಲ್ಲಿ ನಾನು ಪರಿಶೀಲನೆ ಮಾಡಿದ್ದೇನೆ, ಅದಕ್ಕೆ ಬಾಕಿ ಕೊಡಬೇಕಾಗಿರುವ ಹಣವನ್ನು ಕೂಡಲೇ ಬಿಡುಗಡೆ ಮಾಡಲು ನಾನು ಆದೇಶವನ್ನು ಕೊಡುತ್ತೇನೆ. ಇನ್ನು ಮಾನ್ಯ ಕೃಷ್ಣಮೂರ್ತಿಯವರು ಕಡೂರಿನ ಬಗ್ಗೆ ಹೇಳಿದ್ದಾರೆ. ಚಿಕ್ಕಮಗಳೂರು ಜಿಲ್ಲೆಗೆ, ಕಡೂರು ಮತ್ತು ತರಿಕೆರೆಗೆ ಸುಮಾರು ಹದಿಮೂರು ಸಾವಿರ ಎಕರೆಗೆ ನೀರಾವರಿಯಾಗುತ್ತದೆ ಮತ್ತು ನಾಲ್ಕು ಕೆರೆಗಳಿಗೆ ನೀರು ತುಂಬಿಸುವಂಥದ್ದೂ ಕೂಡ ಇದರಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನಾನು ಒತ್ತಾಯ ಮಾಡುತ್ತಿರತಕ್ಕಂಥದ್ದೇನೆಂದರೆ, ನೀವು ತುಮಕೂರು ನಾಲೆ ಮಾಡಿದಾಗ ಕಡೂರು ಮುಖೇನವೇ ಅದು ಬರಬೇಕಾಗುತ್ತದೆ. ಅದಕ್ಕಾಗಿ ನೀವು ನನಗೂ ಸಮಾಧಾನ ಮಾಡಬಹುದು, ಕೃಷ್ಣಮೂರ್ತಿಯವರಿಗೂ ಸಮಾಧಾನ ಮಾಡಬಹುದು, ಅಲ್ಲಿ ಕುಳಿತಿರುವ ಎಲ್ಲರಿಗೂ ಸಮಾಧಾನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ನೀವು ನೈಸರ್ಗಿಕವಾಗಿ ನೀರು ತರತಕ್ಕಂಥದ್ದರ ಬಗ್ಗೆ ಚಿಂತನೆಯನ್ನು ಮಾಡಿ. ನೀವು. ಕೆ.ಸಿ. ರೆಡ್ಡಿಯವರ ವರದಿ ಪ್ರಕಾರ ಸಾವಿರ ಕೋಟಿಯನ್ನು ಲಿಫ್ಟ್ ಮಾಡುತ್ತೇನೆಂದು ಹೇಳಿದ್ದೀರಿ. ಅದು ಸಾಧುವಾದುದಲ್ಲ. ಆದುದರಿಂದ ನೀವು ದಯಮಾಡಿ ಈ ವಿಚಾರದಲ್ಲಿ ಇಂಟರೆಸ್ಟೆಡ್ ಶಾಸಕರನ್ನು ಕರೆದು ಒಂದು ಸಭೆ ಮಾಡಿ. ನಾವುಗಳೆಲ್ಲರೂ ಸಭೆಗೆ ಬಂದು ನಿಮ್ಮನ್ನು ಕನ್‌ವಿನ್ಸ್ ಮಾಡುತ್ತೇವೆ. ಅದನ್ನಾದರೂ ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರಾರವರು ಏನು ಹೇಳಿದ್ದಾರೆ ಆ ಬಗ್ಗೆ ಏನು ನಮ್ಮ ಟೆಕ್ನಿಕಲ್ ಅಡ್‌ವೈಸರಿ ಕಮಿಟಿಯವರು ಹೇಳುತ್ತಾರೆ ಅದನ್ನು ತಿಳಿದು ಸಭೆಯನ್ನು ಕರೆಯುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಒಪ್ಪಿಕೊಂಡಿದ್ದೇನಲ್ಲಾ ಸ್ವಾಮಿ, ಒಪ್ಪಿಕೊಂಡಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್:- ಈಗ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಹೇಳುವುದಕ್ಕೂ, ಒಬ್ಬ ಸಾಮಾನ್ಯ ರೈತನಿಗೆ ಮಳೆ ಯಾವಾಗ ಬರುತ್ತದೆ, ಏನು ವ್ಯವಸಾಯ ಮಾಡಬೇಕು ಎಂದು ಹೇಳುವುದಕ್ಕಾಗುವುದಿಲ್ಲವೆ?

ಶ್ರೀ ಬಸವರಾಜ ಬೊಮ್ಮಾಯಿ:- ಅದೆಲ್ಲವೂ ಗೊತ್ತಿದೆ ಸ್ವಾಮಿ.

ಶ್ರೀ ಡಿ.ಕೆ. ಶಿವಕುಮಾರ್:- ಹಾಗಾದರೆ ಮಾನ್ಯ ಜಯಚಂದ್ರಾರವರು ಹೇಳಿದಂತೆ ಕೇಳಿ ನೀವು.

ಶ್ರೀ ಬಸವರಾಜ ಬೊಮ್ಮಾಯಿ:- ನಾನೆಲ್ಲವನ್ನೂ ಕೇಳಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್:- ಮತ್ತೆ taunt ಎನ್ನುತ್ತಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:- Taunt ಏನೂ ಇಲ್ಲಾ Advisorಗೆ advice ಮಾಡುತ್ತೇವೆ ಎಂಬುದನ್ನು ಹೇಳಿದ್ದೇನೆ. ನೀವೇ ಎಲ್ಲವನ್ನೂ taunt ಆಗಿ ತೆಗೆದುಕೊಳ್ಳುತ್ತೀರಲ್ಲಾ. ಅವರು sprotive ಆಗಿ ತೆಗೆದುಕೊಂಡಿದ್ದಾರೆ. ನೀವು ಮಾತ್ರ sprotive ಆಗಿ ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಭದ್ರಾ ಮೇಲ್ದಂಡೆ ಯೋಜನೆ ಆಗುವುದೇ ಇಲ್ಲವೆಂದು ಹೇಳಿದಂಥ ಸಂದರ್ಭದಲ್ಲಿ ಆ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯ ಇದೆಯೆಂದು ಸಾಧನೆ ಮಾಡಿದ್ದು ನಮ್ಮ ಹೋರಾಟದಿಂದಲೆ. ದಯಮಾಡಿ ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ತಾವೇನೋ ಟೆಕ್ನಿಕಲ್ ಅಡವೈಸರ್ಸ್‌ರವರನ್ನೇ ಬಹಳ, ಬಹಳ....

ಶ್ರೀ ಬಸವರಾಜ ಬೊಮ್ಮಾಯಿ:- ಅದರ ಬಗ್ಗೆ ನನಗೆ ಗೌರವವಿದೆ. ನೀವು ಯಾವಾಗ ಪ್ರಸ್ತಾಪ ಮಾಡಿದರೂ ಕೂಡ ಅದು ಓಪನ್ ಮೈಂಡ್‌ನಲ್ಲಿದೆ ಎಂದು ಹೇಳಿದ್ದೇನೆ. ಈಗಲೂ ಕೂಡ ಹೇಳಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಇವೊತ್ತು ಬೋರ್‌ವೆಲ್ ತೆಗೆದದ್ದೂ ಕೂಡ ಯಾವುದೂ ಉಪಯೋಗವಾಗುತ್ತಿಲ್ಲ. 150 ಅಡಿಯಿಂದ 250 ಅಡಿ ಆಳಕ್ಕೆ ತೆಗೆದುಕೊಂಡು ಹೋಗುತ್ತಿರುವುದರಿಂದ ಅಜ್ಜಂಪುರ, ಅಣ್ಣಯ್ಯಗುಡ್ಡದಿಂದ, ಅಲ್ಲಿ ತರೀಕೆರೆ ತಾಲ್ಲೂಕಿನ ರೈತರಿಗೆ ಏನೊಂದು ಭಾವನೆ ಬಂದಿದೆಯೆಂದರೆ ಈ ಯೋಜನೆಯಿಂದ ತರೀಕೆರೆ ತಾಲ್ಲೂಕಿನ ಹುಣಸಗಟ್ಟ ಹೋಬಳಿ, ಅಜ್ಜಂಪುರ ಹೋಬಳಿ ಮತ್ತು ಸಿಗುಣೆ ಹೋಬಳಿಗಳು ಬರಡು ಭೂಮಿಯಾಗುತ್ತದೆ. ಈಗೇನು ಬಾಗೂರು ನವಿಲೆ ಅಗಿದೆ ಅದೇ ರೀತಿಯಾಗುತ್ತದೆ ಎನ್ನುವ ಮನೋಭಾವನೆ ಇದೆ. ಮೊನ್ನೆ ತರೀಕೆರೆ ತಾಲ್ಲೂಕಿನ ಮುಖಂಡರು ಮತ್ತು ಎಲ್ಲಾ ಪಕ್ಷದ ಮುಖಂಡರ ನಿಯೋಗ ಒಂದು ಬಸವರಾಜ ಬೊಮ್ಮಾಯಿಯವರನ್ನು ಭೇಟಿ ಮಾಡಿದ್ದಾರೆ. ಅವರೇನು ಹೇಳುತ್ತಿದ್ದಾರೆಂದರೆ ಈಗಿರುವ ವಿನ್ಯಾಸವನ್ನು ಸ್ವಲ್ಪ ಬದಲಾಯಿಸಿದರೆ ಅದು ಆಗಬಹುದು ಎನ್ನುವ ವಿಚಾರವನ್ನು ತಮ್ಮ ಮುಖಾಂತರ ಬಸವರಾಜ ಬೊಮ್ಮಾಯಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎನ್. ಸಂಪಂಗಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿರುವುದನ್ನು ಇವೊತ್ತು ಪತ್ರಿಕಾ ವರದಿಯಲ್ಲಿ ನೋಡಿದ್ದೇನೆ. ನಾಲ್ಕು ವರ್ಷಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆ ನೀರನ್ನು ಕಾಲುವೆಗಳನ್ನೆಲ್ಲಾ ದುರಸ್ತಿ ಮಾಡಿ ಚಿಕ್ಕಬಳ್ಳಾಪುರ ಮತ್ತು ಸುತ್ತಮುತ್ತಲಿನ ಕಡೆಗೆಲ್ಲಾ ನೀರನ್ನು ಕೊಡುತ್ತೇವೆಂದು

ಹೇಳಿದ್ದಾರೆ. ಎಲ್ಲ ಕೆರೆಗಳನ್ನೂ ತುಂಬಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ನೀವು ನಾಲ್ಕು ವರ್ಷಗಳಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಈ ಸದನಕ್ಕೆ ತಿಳಿಸಬೇಕು.

ಶ್ರೀ ಬಸವರಾಜ ಬೊಮ್ಮಾಯಿ:- ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಬಹುತೇಕವಾಗಿ ಎಲ್ಲ ಕಾರ್ಯಗಳು ಅಗಿದ್ದು ಇನ್ನು ಇ.ಪಿ.ಸಿ. ಕಾಂಟ್ರಾಕ್ಟ್ ಇದೆ ಅವರು ತಮ್ಮ ಪ್ರಪೋಸಲ್ ಅನ್ನು ಕೊಟ್ಟಿದ್ದರೆ. ಟಿ.ಎ.ಸಿ. ಯವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಕೂಡಲೇ ಅದಕ್ಕೆ ಎಲ್ಲ ರೀತಿಯ ಅನುಮೋದನೆ ಸಿಗುತ್ತದೆ. ನಾಲ್ಕು ವರ್ಷದಲ್ಲಿ ಸಂಪೂರ್ಣವಾಗಿ ಮುಗಿಸುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ತರೀಕೆರೆ ತಾಲ್ಲೂಕಿನ ಬಗ್ಗೆ ಹೇಳಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಸದಸ್ಯರು ಕೇಳಿರುವುದು ಪ್ರಶ್ನೆ ವ್ಯಾಪ್ತಿಯಲ್ಲಿ ಬರುತ್ತಿಲ್ಲವಾದರೂ ಅವರಿಗೆ ಉತ್ತರ ಕೊಡಬಯಸುತ್ತೇನೆ. ತರೀಕೆರೆ ಭಾಗದಲ್ಲಿರುವಂಥ ರೈತರ ಆತಂಕವೇನಿದೆ ಅದನ್ನು ಸಂಪೂರ್ಣ ಹೋಗಲಾಡಿಸಲು ಈಗಾಗಲೇ ಟಿ.ಎ.ಸಿ. ಅಧ್ಯಕ್ಷರಾದ ದೇಸಾಯಿಯವರಿಗೆ ಹೇಳಿದ್ದೇನೆ. ಆ ಭಾಗದ ರೈತರ ಸಭೆಯನ್ನು ಅವರು ಕರೆಯುತ್ತಾರೆ. ಅವರನ್ನು ಅಲ್ಲಿಗೆ ಕಳುಹಿಸಬೇಕು, ಅಥವಾ ಅವರನ್ನೇ ಇಲ್ಲಿಗೆ ಕರೆಸಿ ಏನೇನು ಆತಂಕಗಳಿವೆ ಟನೆಲ್ ಆದರೆ ಅಲ್ಲಿರುವಂಥ ನೀರು ಬತ್ತು ಹೋಗುತ್ತದೆ, ನೀರು ಟೆನಲ್‌ನಲ್ಲಿ ಸೋರಿಹೋಗಿಬಿಡುತ್ತದೆ ಮತ್ತು ಬಾಗಲೂರು ನವಿಲೆ ರೀತಿಯಾಗುತ್ತದೆ, ಹೀಗೆ ಇವೆಲ್ಲಾ ಆತಂಕಗಳಿಗೆ ಟೆಕ್ನಿಕಲ್ ಕಮಿಟಿಯವರು ಏನೇನು ವರದಿಯನ್ನು ಇದುವರೆಗೆ ಪರಿಶೀಲನೆ ಮಾಡಿದ್ದಾರೆ ಆ ಬಗ್ಗೆ ರೈತರ ಜೊತೆ ಚರ್ಚೆ ಮಾಡಿ ಅವರಿಗೆ ಕನ್‌ವಿನ್ಸ್ ಮಾಡಿ ಸಮಾಧಾನ ಮಾಡಿ ಅದಕ್ಕೇನಾದರೂ ಬದಲಾವಣೆ ಮಾಡುವ ಅವಶ್ಯಕತೆ ಇದ್ದರೂ ಕೂಡ ಮಾಡುವುದಕ್ಕೆ ನೀವೆಲ್ಲಾ ಸಿದ್ಧರಾಗಬೇಕು ಎನ್ನುವ ಮಾತನ್ನು ಕುಡ ಹೇಳಿದ್ದೇವೆ.

ಕೆ.ಆರ್. ಎಸ್. ಅಣೆಕಟ್ಟು ಪ್ರದೇಶದ ಸಂಪರ್ಕ ರಸ್ತೆಗಳ ದುರಸ್ಥಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	67 (383)
ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್. ಎಂ. (ಮಂಡ್ಯ)
ಉತ್ತರಿಸುವ ಸಚಿವರು	:	ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ ಕೆ.ಆರ್.ಎಸ್. ಅಣೆಕಟ್ಟು ಪ್ರದೇಶ ಹಾಗೂ ಅದಕ್ಕೆ ಸೇರುವ ಎಲ್ಲಾ ಕಾಲುವೆಗಳ ಸಮೀಪದ ಸಂಪರ್ಕ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕಾವೇರಿ ನೀರಾವರಿ ನಿಗಮಕ್ಕೆ ಸರ್ಕಾರದಿಂದ ಒದಗಿಸುವ ವಾರ್ಷಿಕ ಅನುದಾನದಲ್ಲಿ ನಿಗಮದ ವ್ಯಾಪ್ತಿಯಲ್ಲಿ ಬರುವ "ರಸ್ತೆಗಳು- 3054" ಶೀರ್ಷಿಕೆಯಲ್ಲಿ ನಿಗದಿಪಡಿಸುವ ಅನುದಾನದ ಮೇರೆಗೆ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಕಾಲದಿಂದ ಕಾಲಕ್ಕೆ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. 2008-09ನೇ ಸಾಲಿನಲ್ಲಿ ಕೃಷ್ಣರಾಜಸಾಗರ ಯೋಜನೆಯ ಅಚ್ಚುಕಟ್ಟು ರಸ್ತೆಗಳ ಅಭಿವೃದ್ಧಿಗೆ ಕಾವೇರಿ ನೀರಾವರಿ ನಿಗಮಕ್ಕೆ ರೂ. 330.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಆದ್ಯತೆಯ ಮೇರೆಗೆ ಈ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಲದೆ, ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಬೆಳಗೊಳ ವೃತ್ತದಿಂದ ಬೃಂದಾವನ ಉದ್ಯಾನವನಕ್ಕೆ ಹೋಗುವ ರಸ್ತೆಯನ್ನು ಸಹಾ ಒಟ್ಟು ರೂ. 523.00 ಲಕ್ಷದ ಅಂದಾಜು ವೆಚ್ಚದಲ್ಲಿ 2008-09 ನೇ ಸಾಲಿನಲ್ಲಿ ಉನ್ನತೀಕರಿಸಲಾಗುತ್ತಿದೆ.

ಇ ಕಳೆದ 3 ವರ್ಷಗಳಲ್ಲಿ ಸದರಿ ರಸ್ತೆಗಳ ದುರಸ್ಥಿ ಕಾರ್ಯಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು? (ವಿವರ ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಕೃಷ್ಣರಾಜಸಾಗರ ಯೋಜನೆಯ ಅಚ್ಚುಕಟ್ಟು ರಸ್ತೆಗಳ ಅಭಿವೃದ್ಧಿಗೆ ಕಾವೇರಿ ನೀರಾವರಿ ನಿಗಮಕ್ಕೆ ನಿಗದಿಪಡಿಸಿದ್ದ ಅನುದಾನ ಮತ್ತು ಆಗಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ
2005-06	376.50	289.16
2006-07	301.98	275.08
2007-08	430.00	356.20
ಒಟ್ಟು:-	**1108.48**	**920.44**

ಈ ಜನರು, ಜಾನುವಾರುಗಳು ಮತ್ತು ವಾಹನ ಸಂಚಾರಕ್ಕೆ ತೀರ ಅನಾನುಕೂಲ ಸ್ಥಿತಿಯಲ್ಲಿರುವ ಸದರಿ ರಸ್ತೆಗಳನ್ನು ವ್ಯವಸ್ಥಿತಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಸದರಿ ರಸ್ತೆಗಳನ್ನು ವ್ಯವಸ್ಥಿತಗೊಳಿಸಲು ಪ್ರತಿ ವರ್ಷ ಅಚ್ಚುಕಟ್ಟು ರಸ್ತೆ ಶೀರ್ಷಿಕೆಯಡಿಯಲ್ಲಿ ಒದಗಿಸುವ ಅನುದಾನಕ್ಕೆ ತಕ್ಕಂತೆ ಆದ್ಯತೆ ಮೇರೆಗೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಕೆ.ಆರ್.ಎಸ್. ಅಣೆಕಟ್ಟು ಪ್ರದೇಶ ಹಾಗೂ ಅದಕ್ಕೆ ಸೇರುವ ಎಲ್ಲಾ ಕಾಲುವೆಗಳ ಸಮೀಪದ ಸಂಪರ್ಕ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿರುವುದಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಜೊತೆಯಲ್ಲಿ 2008–09ನೇ ಸಾಲಿನಲ್ಲಿ 3054 ಶೀರ್ಷಿಕೆಯಡಿಯಲ್ಲಿ 330.00 ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಒದಗಿಸಲಾಗಿದೆ ಎಂದಿದ್ದಾರೆ. ಕಾಲುವೆಗಳಿಗೆ ಸಂಪರ್ಕ ರಸ್ತೆಗಳು ಸರಿಯಾಗಿರುವುದಿಲ್ಲ. ಇಲ್ಲಿ ವಾಹನಗಳು ಓಡಾಡುವುದಕ್ಕೆ, ಜನರು ಆ ರಸ್ತೆಯಲ್ಲಿ ಓಡಾಡಲು ಕೂಡ ಆಗುವುದಿಲ್ಲ. ಯಾವ ರಸ್ತೆಗಳನ್ನು ದುರಸ್ತಿ ಮಾಡಿಸಲಾಗುವುದು ಎಂದು ನಿಖರವಾಗಿ ಹೇಳಿರುವುದಿಲ್ಲ. ಇದರಲ್ಲಿ ನನ್ನ ಕ್ಷೇತ್ರ ವ್ಯಾಪ್ತಿಯ 15 ರಿಂದ 21 ಕಿ.ಮೀ.ವರೆಗೆ ಕಾಲುವೆಗಳಿಗೆ ಒಂದೂ ರಸ್ತೆಗಳು ಇಲ್ಲ, ದಯಮಾಡಿ ಅಲ್ಲಿ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. 2008–09ನೇ ಸಾಲಿಗೆ 330 ಲಕ್ಷ ರೂಪಾಯಿಗಳ ಅನುದಾನವನ್ನು ಈಗಾಗಲೇ ಒದಗಿಸಲಾಗಿದೆ. ಆ ಕಾರ್ಯ ನಡೆಯುತ್ತಿದೆ. ಇನ್ನೊಂದು ಮಂಡ್ಯ ನ್ಯಾಷನಲ್ ಪೇಪರ್‌ನ ಬೆಳಗೊಳ ವೃತ್ತದಿಂದ ಬೃಂದಾವನಕ್ಕೆ ಸುಮಾರು 5 ಕೋಟಿ 23 ಲಕ್ಷ ರೂಪಾಯಿಗಳಲ್ಲಿ ರಸ್ತೆ ಮಾಡುವ ಕೆಲಸವನ್ನು ಈಗ ತೆಗೆದುಕೊಂಡಿದ್ದೇವೆ. ಈ ಕಾಡಾ ರಸ್ತೆಗಳಲ್ಲಿ 1313 ಕಿ.ಮೀ. ನಲ್ಲಿ ಈಗಾಗಲೇ ಸುಮಾರು 800 ಕಿ.ಮೀ. ರಸ್ತೆಗಳು ಒಳ್ಳೆಯ ಸ್ಥಿತಿಯಲ್ಲಿವೆ. ಇನ್ನು 500 ಕಿ.ಮೀ. ರಸ್ತೆಯಲ್ಲಿ ಸಾಕಷ್ಟು ರಿಪೇರಿ ಆಗಬೇಕಾಗಿದೆ. ಈ ವರ್ಷ ಸುಮಾರು 100 ಕಿ.ಮೀ. ತೆಗೆದುಕೊಂಡಿದ್ದೇವೆ. 330 ಲಕ್ಷ ರೂಪಾಯಿಗಳನ್ನು ಅದಕ್ಕೆ ಒದಗಿಸಿದ್ದೇವೆ. ಎಲ್ಲಿ ನಿಜವಾಗಿಯೂ ಕೂಡ ಯಾವುದೇ ರೀತಿಯ ಸಂಪರ್ಕವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಅಂಥ ರಸ್ತೆಗಳ ಬಗ್ಗೆ ಈಗಾಗಲೇ ಅವರು ಹೇಳಿದರು. ಅವರ ಕ್ಷೇತ್ರದಲ್ಲಿ ಬರುವಂಥದ್ದು 15 ರಿಂದ 21 ಕಿ.ಮೀ. ಬಗ್ಗೆ. ಎಲ್ಲಿ ನಿಜವಾಗಿ ಸಂಪರ್ಕ ಆಗುವುದೇ

ಇಲ್ಲ ಎಂಬುದು ನನ್ನ ಗಮನಕ್ಕೆ ಬಂದರೆ ಅಲ್ಲಿ ಕೂಡಲೇ ರಿಪೇರಿ ಕೆಲಸವನ್ನು ತೆಗೆದುಕೊಳ್ಳಲು ನಾನು ಆದೇಶವನ್ನು ಕೊಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್:- 15 ನೇ ಕಿ.ಮೀ. ನಿಂದ 21ನೇ ಕಿ.ಮೀ. ವರೆಗೆ.

ಶ್ರೀ ಬಸವರಾಜ ಬೊಮ್ಮಾಯಿ:- ಆಯಿತು, ಮಾಡಿಸೋಣ. ಮಾಡಿಸೋಣ.

ಹೊಗೇನಿಕಲ್ ಪ್ರದೇಶವನ್ನು ಸರ್ವೆಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	68(120)
ಸದಸ್ಯರ ಹೆಸರು	:	ಶ್ರೀ ಪುಟ್ಟೇಗೌಡ ಸಿ.ಎಸ್ (ಶ್ರವಣಬೆಳಗೊಳ)
ವಿಷಯ	:	ಕರ್ನಾಟಕ ಮತ್ತು ತಮಿಳುನಾಡು ಗಡಿ ಹೊಗೇನಕಲ್ ಪ್ರದೇಶವನ್ನು ಸರ್ವೆ ಮಾಡುವುದು.
ಉತ್ತರಿಸುವ ಸಚಿವರು	:	ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

(ಅ) ಕರ್ನಾಟಕ ಮತ್ತು ತಮಿಳುನಾಡು ಗಡಿ ಪ್ರದೇಶದಲ್ಲಿರುವ ಹೊಗೇನಕಲ್ ಪ್ರದೇಶವನ್ನು ಸರ್ವೆ ಮಾಡಿಸಿ ಗಡಿಯನ್ನು ಗುರುತಿಸುವ ಕಾರ್ಯವನ್ನು ಸರ್ಕಾರ ಕೈಗೊಂಡಿದೆಯೇ, ತಿಳಿಸುವುದು.

– ಹೌದು–

ಕರ್ನಾಟಕ ಮತ್ತು ತಮಿಳುನಾಡು ಗಡಿಯ ಪರಿಶೀಲನೆ ಕಾರ್ಯಕ್ಕೆ ಎರಡು ರಾಜ್ಯಗಳ ಅಧಿಕಾರಿಗಳ ಜಂಟಿ ಸರ್ವೆ ತಂಡವನ್ನು ರಚಿಸಲಾಗಿತ್ತು. ಈ ಬಗ್ಗೆ ದಿನಾಂಕ: 10-03-2006 ರಂದು ಮೈಸೂರಿನಲ್ಲಿ. ಎರಡು ರಾಜ್ಯಗಳ ಅಧಿಕಾರಿಗಳ ಜಂಟಿ ಸಭೆ ನಡೆಸಿ ದಿನಾಂಕ: 05-04-2006 ರಿಂದ ಸದರಿ ಕಾರ್ಯವನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು. ತದನಂತರದಲ್ಲಿ ಹಲವು ಬಾರಿ ಕರ್ನಾಟಕ ವತಿಯಿಂದ ಜಂಟಿ ಸಭೆಗಳನ್ನು ಕರೆಯಲಾಗಿ, ತಮಿಳುನಾಡು ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಹಾಗೂ ಮುಖ್ಯ ಕಾರ್ಯದರ್ಶಿಯವರ ಹಂತದಲ್ಲಿ ಪತ್ರ ವ್ಯವಹಾರ ನಡೆಸಲಾಗಿದೆ.

(ಆ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

–ಉದ್ಭವಿಸುವುದಿಲ್ಲ.

(ಇ) ತಮಿಳುನಾಡು ರಾಜ್ಯವು ಕರ್ನಾಟಕದ ಹೊಗೇನಕಲ್ ಭಾಗವನ್ನು ಅತಿಕ್ರಮಿಸಿ ಕುಡಿಯುವ ನೀರಿನ ಯೋಜನೆಯನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತಮಿಳುನಾಡು ಸರ್ಕಾರವು ಹೊಗೇನಕಲ್ ಬಳಿ ಪ್ರಾರಂಭಿಸಿರುವ ಕುಡಿಯುವ ನೀರಿನ ಯೋಜನೆಯ ವಿಷಯವು ರಾಜ್ಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಸದರಿ ಯೋಜನೆಯ ಬಗ್ಗೆ ಪತ್ರಿಕಾ ವರದಿಗಳಲ್ಲಿ ಪ್ರಕಟವಾದ ಕೂಡಲೇ ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳು ದಿನಾಂಕ: 14.02.2008ರ ಪತ್ರದಲ್ಲಿ ತಮಿಳುನಾಡು ರಾಜ್ಯದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಆದೇಶವು ಸರ್ವೋಚ್ಛ ನ್ಯಾಯಾಲಯ ಹಾಗೂ ನ್ಯಾಯಾಧಿಕರಣದಲ್ಲಿ ಪ್ರಶ್ನಿಸಿರುವ ಹಿನ್ನೆಲೆಯಲ್ಲಿ ಯೋಜನೆಯನ್ನು ತೆಗೆದುಕೊಳ್ಳದಂತೆ ಕೋರಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ತಮಿಳುನಾಡು ಸರ್ಕಾರದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಬರೆದಿರುವ ದಿನಾಂಕ: 27.02.2008ರ ಪತ್ರದಲ್ಲಿ ಸದರಿ ಯೋಜನೆಯಿಂದ ಆಗುವ ಅಂತರ ರಾಜ್ಯ ಪರಿಣಾಮಗಳನ್ನು ಪರಶೀಲಿಸಲು ಯೋಜನಾ ವರದಿಯ ಪ್ರತಿಯನ್ನು ಕಳುಹಿಸಿಕೊಡುವಂತೆ ಕೋರಿರುತ್ತಾರೆ.

ರಾಜ್ಯದ ಮುಖ್ಯ ಕಾರ್ಯದರ್ಶಿಗಳು ದಿನಾಂಕ: 28.02.2008ರ ಪತ್ರದಲ್ಲಿ ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳನ್ನು ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನು ಮುಂದುವರೆಸದಂತೆ ಕೋರಿರುತ್ತಾರೆ.

ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ: 27.03.2008ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರದಿರುವ ಪತ್ರದಲ್ಲಿ ಸದರಿ ಯೋಜನೆಯ ಪ್ರಸ್ತಾಪವನ್ನು ಕಾವೇರಿ ನ್ಯಾಯಾಧಿಕರಣದ ಮುಂದೆ ತಮಿಳುನಾಡು ರಾಜ್ಯವು ಪ್ರಸ್ತಾಪಿಸಿಲ್ಲದಿರುವುದರಿಂದ, ಈ ಯೋಜನೆಗೆ ಕೇಂದ್ರ ಸರ್ಕಾರವು ನೀಡಿರುವ ನಿರಪೇಕ್ಷಣೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು, ಯೋಜನೆಯ ವಿವರವಾದ ವರದಿ ಹಾಗೂ ಸಂಬಂಧಿಸಿದ ಮಾಹಿತಿಗಳ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ಒದಗಿಸದೇ ತಮಿಳುನಾಡು ರಾಜ್ಯವು

ಯೋಜನೆಯನ್ನು ತೆಗೆದುಕೊಳ್ಳಬಾರದೆಂದು ತಿಳಿಸಿ. ಯೋಜನೆಯನ್ನು ಮುಂದುವರೆಸದಂತೆ ಕೋರಲಾಗಿದೆ.

ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ:24.05.2008ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರದಿರುವ ಪತ್ರದಲ್ಲಿ ತಮಿಳುನಾಡು ರಾಜ್ಯವು ಕೈಗೊಂಡಿರುವ ಯೋಜನೆಯಿಂದ, ಕರ್ನಾಟಕ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವುದಿಲ್ಲವೆಂದು ರಾಜ್ಯಕ್ಕೆ ಮನವರಿಕೆ ಮಾಡಿಕೊಳ್ಳುವ ಜವಾಬ್ದಾರಿ ಆ ರಾಜ್ಯಕ್ಕೆ ಇರುವುದರಿಂದ, ಯೋಜನೆಯ ವರದಿ ಹಾಗೂ ಇತರೆ ಸಂಬಂಧಿಸಿದ ವಿವರಗಳನ್ನು ಕರ್ನಾಟಕ ರಾಜ್ಯಕ್ಕೆ ಒದಗಿಸುವಂತೆ ಕೋರಲಾಗಿದೆ. ಮುಂದುವರೆದು ಯೋಜನೆ ಮುಂದುವರೆಸದಂತೆ ಸಹ ಕೋರಲಾಗಿದೆ.

ರಾಜ್ಯದ ಜಲಸಂಪನ್ಮೂಲ ಸಚಿವರು ಕೇಂದ್ರ ಜಲ ಸಂಪನ್ಮೂಲ ಸಚಿವರಿಗೆ ಬರೆದಿರುವ ದಿನಾಂಕ: 17.07.2008ರ ಪತ್ರದಲ್ಲಿ ತಮಿಳುನಾಡು ಸರ್ಕಾರವು ಯೋಜನೆಯನ್ನು ಮುಂದುವರೆಸದಂತೆ ಆ ರಾಜ್ಯಕ್ಕೆ ನಿರ್ದೇಶನ ನೀಡಲು ಹಾಗೂ ಸದರಿ ವಿಷಯವು ಇತ್ಯರ್ಥವಾಗುವವರೆಗೆ ಯೋಜನೆಗೆ ನೀಡಿರುವ ಅಭ್ಯಂತರ ರಹಿತ ಪ್ರಮಾಣ ಪತ್ರವನ್ನು ತಡೆ ಹಿಡಿಯುವಂತೆ ಕೋರಲಾಗಿದೆ. ಮುಂದುವರೆದು, ವಿಷಯವನ್ನು ಇತ್ಯರ್ಥ ಮಾಡಲು ಎರಡೂ ರಾಜ್ಯಗಳ ಪ್ರತಿನಿಧಿಗಳನ್ನು ಚರ್ಚೆಗೆ ಕರೆಯುವಂತೆ ಸಹ ಕೋರಲಾಗಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮಗೆಲ್ಲರಿಗೂ ತಿಳಿದಿರುವ ಹಾಗೆ ಹೊಗೇನಕಲ್ ಜಲಪಾತದ ಹತ್ತಿರ ದೊಡ್ಡ ಗಲಾಟೆಯಾಗಿ ಚುನಾವಣಾ ಪೂರ್ವದಲ್ಲಿಯೇ ಅದಕ್ಕೊಂದು ದೊಡ್ಡ ಸುದ್ದಿಯನ್ನೇ ಮಾಡಿದರು. ಬಹುಶಃ ಈಗಿರತಕ್ಕಂಥ ಹಾಲಿ ಮುಖ್ಯಮಂತ್ರಿಗಳು ಕೂಡ ಆ ಪ್ರದೇಶಕ್ಕೆ ಹೋಗಿದ್ದರು ಎಂಬುದನ್ನು ಪತ್ರಿಕೆಯಲ್ಲಿ ನೋಡಿ ತಿಳಿದುಕೊಂಡಿದ್ದೇನೆ. ದಯಮಾಡಿ ಅದನ್ನು ಸರ್ವೆ ಮಾಡಿದ್ದೀರ? ತಮಿಳುನಾಡಿನವರು ಕುಡಿಯುವ ನೀರಿಗೆ ಎಂದಿದ್ದಾರೆ. ನಮ್ಮ ಭಾಗದವರು ಕೇಳುವುದೂ ಕೂಡ ಕುಡಿಯುವ ನೀರಿಗಾಗಿಯೇ. ಆದರೂ ನೀರು ಕೊಡುವುದಕ್ಕೆ ಆಗುವುದಿಲ್ಲವೆಂದು ಎಲ್ಲರಿಗೂ ಗೊತ್ತಾಗಿದೆ. ಆಗಲೇ ನಮ್ಮ ಜಯಚಂದ್ರರವರು ಮತ್ತು ಕೃಷ್ಣಮೂರ್ತಿಯವರು ಹಾಗೂ ಇನ್ನಿತರರೆಲ್ಲರೂ ಹೇಳುತ್ತಿದ್ದರು, ಎಲ್ಲಾ ಭಾಗದ ರೈತರೂ ಕೇಳುವುದು, ನೀವು ಏನು ಕೊಡದೇ ಹೋದರೂ ಪರವಾಗಿಲ್ಲಪ್ಪಾ, ಪುಣ್ಯಾತ್ಮರೆ, ನೀವು ವಿಧಾನ ಸೌಧಕ್ಕೆ ಹೋಗಿರುವುದಕ್ಕೆ ನೀವು ನಮಗೆ ಕುಡಯುವ ನೀರನ್ನು ಕೊಡಿಸಿಬಿಡಿ, ನಮ್ಮ ಊರು ಕೆರೆಯಲ್ಲಿ ನೀರು ತುಂಬಿಸಿ ಎಂದೇ ಕೇಳುವುದು. ಇದಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ, ಸರ್ವೆ ಮಾಡಿಸಿದ್ದೀರಿ? ನೀವು ಸುಮ್ಮನೇ ಇದ್ದರೆ ಅಲ್ಲಿ ತಮಿಳುನಾಡಿನವರು ಪ್ರಾಜೆಕ್ಟ್ ವರ್ಕ

ಮಾಡಿಸುತ್ತಲೇ ಇರುತ್ತಾರೆ. ನೀವು ಅದಕ್ಕೆ ಅಡ್ಡಿ ಮಾಡಲಿಲ್ಲವೆಂದರೆ ಅವರು ಕಟ್ಟುತ್ತಲೇ ಇರುತ್ತಾರೆ. ದಯಮಾಡಿ ಇದಕ್ಕೆ ಉತ್ತರ ಕೊಡಬೇಕು. ರೆವಿನ್ಯು ಸಚಿವರು ಕೊಡುತ್ತಾರೋ ಅಥವಾ ನೀರಾವರಿ ಸಚಿವರೋ ಕೊಡುತ್ತಾರೋ ಅಥವಾ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೋ?

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಉತ್ತರದಲ್ಲಿ ತಿಳಿಸಿದ್ದೇವೆ. ಇದು ಪ್ರಾರಂಭವಾಗಿದ್ದು, 13.09.1984ರಲ್ಲಿ ತಮಿಳುನಾಡಿನವರಿಗೆ ನಾವು ಒಂದು ಜಂಟಿ ಸರ್ವೆ ಮಾಡಬೇಕು ಎಂದು ಒಂದು ಪತ್ರ ಬರೆದ ಮೇಲೆ, ಕರ್ನಾಟಕ ಸರ್ಕಾರ ಸಾಕಷ್ಟು ಸಭೆಗಳನ್ನು ನಡೆಸಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುವಂತಹ ಸಮಯದಲ್ಲಿ ತಮಿಳುನಾಡಿನವರು ಇದನ್ನು ಕೃಷ್ಣಗಿರಿಯಿಂದ ಪ್ರಾರಂಭ ಮಾಡಬೇಕೆಂದು ಒಂದು ಬಾರಿ ಪತ್ರ ಬರದಿದ್ದಾರೆ. ಅದಕ್ಕೆ ನಾವು staff ಅನ್ನು ಒದಗಿಸಿಕೊಟ್ಟಿದ್ದೇವೆ. ಸರ್ವೆ ಪ್ರಾರಂಭ ಮಾಡೋಣ ಎಂದು ಕರ್ನಾಟಕ ಸರ್ಕಾರ ಅನೇಕ ಸಾರಿ ಒತ್ತಾಯ ಮಾಡಿದರೂ ಕೂಡ, ಅನೇಕ ಸಭೆಗಳನ್ನು ನಡೆಸಿ ದಿನಾಂಕಗಳನ್ನು ನಿಗದಿಪಡಿಸಿದರೂ ಕೂಡ ತಮಿಳುನಾಡಿನವರು ಮುಂದೆ ಬಂದಿಲ್ಲ. ಇದರ ಬಗ್ಗೆ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿತ್ತು. ತಮಿಳುನಾಡು ಮುಖ್ಯಮಂತ್ರಿಯವರು ಅಲ್ಲಿ ಭೂಮಿ ಪೂಜೆ ನೆರವೇರಿಸುತ್ತಾರೆ ಎನ್ನುವ ವಿಚಾರ ಗೊತ್ತಾದ ಮೇಲೆ, ನಮ್ಮ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿರಬಹುದು, ಕಂದಾಯ ಇಲಾಖೆಯ principal Secretary ಆಗಿರಬಹುದು, ಇದರ ಬಗ್ಗೆ ಸಾಕಷ್ಟು ಒತ್ತಾಯ ತಂದು ಆ ರೀತಿ ಮಾಡಬಾರದು ಎಂದರೂ ಕೂಡ ಅಲ್ಲಿ ಪೂಜೆಯನ್ನು ನೆರವೇರಿಸಿದ್ದಾರೆ. ಅದಾದ ಮೇಲೆ survey of India ದವರೆಗೂ ಕೂಡ ತಾವು ಮುಂದೆ ಬಂದು ಎರಡು ರಾಜ್ಯಗಳನ್ನು ಸರ್ವೆ ಮಾಡಿ, ಗಡಿ ಗುರುತನ್ನು ನಿಗದಿ ಮಾಡಬೇಕೆಂದು ಪತ್ರಗಳನ್ನು ಬರೆದಿದ್ದೇವೆ. ಇದರ ಬಗ್ಗೆ ಜಲಸಂಪನ್ಮೂಲ ಸಚಿವರು ಕೂಡ ಸಾಕಷ್ಟು ಪತ್ರ ಬರೆದು ಯೋಜನೆಯನ್ನು ಕೂಡಲೇ ನಿಲ್ಲಿಸಬೇಕು, ಮೊದಲು ಗಡಿ ಗುರುತು ಆದ ಮೇಲೆ ತಾವು ಯಾವುದೇ ಯೋಜನೆಯನ್ನು ತೆಗೆದುಕೊಳ್ಳಿ ಎನ್ನುವ ವಿಚಾರವನ್ನು ಕೂಡ ತಿಳಿಸಿದ್ದೇವೆ.

ಶ್ರೀ ಸಿ.ಎಸ್. ಪುಟ್ಟೇಗೌಡ: ಇದನ್ನು ಹೀಗೆ ಬಿಟ್ಟುಕೊಂಡು ಹೋದರೆ, ಅವರು ಕಟ್ಟಿಕೊಂಡ ಮೇಲೆ ನೀವು ಆಮೇಲೆ ಏನು ಮಾಡುತ್ತೀರಿ? ಬೊಮ್ಮಾಯಿ ಸಾಹೇಬರೆ ನಿಮಗೆ ಇಚ್ಛಾಶಕ್ತಿ ಬೇಕು. ನೀವು ಒಬ್ಬ ಮಾಜಿ ಮುಖ್ಯಮಂತ್ರಿ ಮಗ, ನೀರಾವರಿ ಸಚಿವರಾಗಿದ್ದೀರಿ. ಸರ್ವೆ ಮಾಡಿಸುವುದು, ನೀರು ಕೊಡುತ್ತೀರಾ ಎಂದು ನಾನು ವಿಧಾನಸೌಧದಲ್ಲಿ ಕೇಳುವುದು, ನೀವು ಅಧಿಕಾರಿಗಳನ್ನು ಕೇಳಿ ಹೇಳುತ್ತೇನೆ

ಎಂದು ಹೇಳುವುದು, ಇದೆಲ್ಲಾ ವಾಡಿಕೆಯಾಗಿ ಹೋಗಿದೆ. ಇದರಿಂದ ಏನೂ ಕೂಡ ಆಗುವುದಿಲ್ಲ. ದಿವಂಗತ ನಿಜಲಿಂಗಪ್ಪನವರು, ಮಾನ್ಯ ವೀರೇಂದ್ರ ಪಾಟೀಲರು, ಮಾನ್ಯ, ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ಮಾನ್ಯ ದೇವೇಗೌಡರು ನೀರಾವರಿಗೆ ಶಕ್ತಿ ತುಂಬಿದ್ದಾರೆ. ನೀವು ಈ ರೀತಿ ಬಿಟ್ಟುಕೊಂಡು ಕುಳಿತುಕೊಂಡರೆ ಇರುವಂತಹ ನೀರೆಲ್ಲ ಹೋಗಿ ಸಮುದ್ರ ಸೇರುತ್ತದೆ ಅಥವಾ ಯಾರ್‍ಯಾರೋ ಬಳಕೆ ಮಾಡಿಕೊಳ್ಳುತ್ತಾರೆ. ನಾವು ಬಡವಾಗಿ ಹೋಗುತ್ತೇವೆ, ನಮ್ಮನ್ನು ಕೇಳುವವರಿರುವುದಿಲ್ಲ, ನಿರ್ಗತಿಕರಾಗುತ್ತೇವೆ. ಕುಡಿಯುವ ನೀರು ಕೊಡುವುದುಕ್ಕೆ ಶಕ್ತಿ ಇಲ್ಲ, ದಯವಿಟ್ಟು ಸರ್ಕಾರ ಇದಕ್ಕೆ ತಮ್ಮದೇ ಆದಂತಹ ಇಚ್ಛಾಶಕ್ತಿ ವ್ಯಕ್ತಪಡಿಸಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟೇಗೌಡರು ಏನು ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಅದು ನನಗೆ ಅರ್ಥವಾಗುತ್ತದೆ. ನಾವು ಇವತ್ತು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದಕ್ಕೆ ಎಷ್ಟು ಕಷ್ಟಪಡುತ್ತಿದ್ದೇವೋ, ಇವತ್ತು ಅದೇ ಸಂದರ್ಭದಲ್ಲಿ ನಮ್ಮ ಪಾಲಿನ ನೀರನ್ನು ಅವರು ಬಳಸಿಕೊಳ್ಳಬಾರದು ಎಂದು ನೋಡಿಕೊಳ್ಳುವುದು ಅಷ್ಟೇ ಬಹಳ ಮುಖ್ಯವಾಗಿರುವಂತಹ ಅವರ ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ನಾನು ಬಂದ ತಕ್ಷಣ ಆ ಯೋಜನೆ ಏನಿದೆ ಅದನ್ನು ಕೂಡಲೇ ನಿಲ್ಲಿಸಬೇಕು ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿದ್ದೇವೆ. ಇದರಲ್ಲಿ ಪ್ರಮುಖವಾಗಿರುವಂತಹ ಅಂಶ ಏನೆಂದರೆ ಸುಮಾರು 67 ಕಿ.ಮೀ. ಕರ್ನಾಟಕ ಮತ್ತು ತಮಿಳುನಾಡಿನ ಎರಡರದೂ ಬಾರ್ಡರ್ ಇದೆ. ಬ್ರಿಟಿಷ್ ಕಾಲದಲ್ಲಿ ಇದ್ದಂತಹ ಬಾರ್ಡರ್, ಆಮೇಲೆ ಎರಡೂ ರಾಜ್ಯಗಳು re organisation ಆದ ಮೇಲೆ ಬಾರ್ಡರ್ fix ಆಗಿಲ್ಲ. ಆ ಕಾರಣದಿಂದ ಅವರು ಮಾಡಿರುವಂತಹ ಯೋಜನೆ ಕರ್ನಾಟಕ ನೆಲದಲ್ಲಿದೆಯೋ, ತಮಿಳುನಾಡಿನ ನೆಲದಲ್ಲಿದಯೋ ಎನ್ನುವದು ಮೊದಲು ತೀರ್ಮಾನವಾಗಬೇಕು. ಎರಡನೆಯದಾಗಿ ಅವರು ಅವರ ಪಾಲಿನ ನೀರಿನಲ್ಲಿ ಮಾಡುತ್ತಿದ್ದಾರೋ ಅಥವಾ ನಮ್ಮ ಪಾಲಿನ ನೀರಿನಲ್ಲಿ ಮಾಡುತ್ತಿದ್ದಾರೋ ಎನ್ನುವುದು ಕೂಡ ತೀರ್ಮಾನವಾಗಬೇಕು. ಮೂರನೆಯದಾಗಿ ಅವರು ಎಷ್ಟು ನೀರನ್ನು ಬಳಕೆ ಮಾಡುತ್ತಿದ್ದಾರೆ? ಯಾವ ಉದ್ದೇಶಕ್ಕೆ ಬಳಕೆ ಮಾಡುತ್ತಿದ್ದಾರೆ? ಅದರಲ್ಲಿ ನಮ್ಮ ಪಾಲು ಏನಾದರೂ ಸೇರುತ್ತದೆಯೇ ಎನ್ನುವುದನ್ನು ಕೂಡ ತೀರ್ಮಾನ ಮಾಡಬೇಕು. ಈಗಾಗಲೇ Tribunal final order ಕೊಟ್ಟಮೇಲೆ, Supreme Court ನಲ್ಲಿ ಈCase ಇರುವಾಗ ಇದನ್ನು ಅವರು ಮಾಡಕೂಡದು ಎಂದು ನಮ್ಮ ಕರ್ನಾಟಕ ಸರ್ಕಾರವು ನಿಲುವು ಇದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನಾನು ಉತ್ತರ ಹೇಳುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ನಿಮ್ಮ ಕಳಕಳಿ ಅರ್ಥ ಮಾಡಿಕೊಂಡೆ ನಾನು ಹೇಳುತ್ತಿರುವುದು, ತಾವು ಸುಮ್ಮನೆ ಕುಳಿತುಕೊಳ್ಳಿ. ಈ ಹಿನ್ನೆಲೆಯಲ್ಲಿ ಇವತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈಗಾಗಲೇ ವಿರೋಧ ಪಕ್ಷದ ನಾಯಕರ ಸಭೆಯನ್ನು ಮಾಡಿ ಈ session ಮುಗಿದಮೇಲೆ ಕೇಂದ್ರ ಸರ್ಕಾರಕ್ಕೆ ನಮ್ಮ ನಿಲುವನ್ನು ತಿಳಿಸಲು ಮತ್ತು ಆ ಯೋಜನೆ ಕಾರ್ಯಾರಂಭ ಆಗಬಾರದು ಎನ್ನುವಂತಹ ನಿಲುವನ್ನು ಇಟ್ಟುಕೊಂಡು ಒಂದು ಸರ್ವ ಪಕ್ಷಗಳ ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುತ್ತೇವೆ. ಎರಡನೆಯದಾಗಿ ಮೊನ್ನೆ ನಡೆದಂತಹ ಚರ್ಚೆಯ ಹಿನ್ನೆಲೆಯಲ್ಲಿ ಕಾವೇರಿ ನಿಗಮದ MD ಮತ್ತು ಎಲ್ಲಾ ಸಂಬಂಧಪಟ್ಟ engineer ಗಳನ್ನು ಆ spotಗೆ ಕಳುಹಿಸಿ, ಅವರು ತಮಿಳುನಾಡಿಗೆ ಹೋಗಿ ಅಲ್ಲಿ ಯಾವುದೇ ಕಾಮಗಾರಿಗಳು ನಡೆಯುತ್ತಿವೆಯೇ ಎನ್ನುವುದರ ಬಗ್ಗೆ ನಾವು ವರದಿಯನ್ನು ಪಡೆದುಕೊಂಡಿದ್ದೇವೆ. ಸದ್ಯಕ್ಕೆ ಅವರು ground level ಯಾವುದೇ ರೀತಿಯ ಕಾಮಗಾರಿಯನ್ನು ಪ್ರಾರಂಭ ಮಾಡಿಲ್ಲ. ಆದರೆ ಒಂದು office ತೆರೆದಿದ್ದಾರೆ ಹಾಗೂ ಒಂದು ಗೋಡೌನ್ ಹಾಕಿದ್ದಾರೆ. ಮುಂದೆ ಅಲ್ಲಿ ಮಾಡುವುದಕ್ಕೆ ಎಲ್ಲಾ ತಯಾರಿಗಳನ್ನು ಮಾಡಿಕೊಂಡಿದ್ದಾರೆ. ಸರ್ಕಾರ ಇದನ್ನು ಸುಮ್ಮನೆ ಬಿಟ್ಟಿಲ್ಲ. ಇದನ್ನು ನಾವು ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುತ್ತವೆ. ನಮ್ಮ ನೀರಿನ ಹಕ್ಕನ್ನು ನಾವು ಬಿಟ್ಟಿಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಬೇಡ, ಮುಂದಿನ ಪ್ರಶ್ನೆ ವಿಶ್ವನಾಥ್ ಕೇಳಿ.No, Please I will not allow. ಮಹಾದೇವಪ್ರಸಾದ್‌ರವರೇ ಬೇಡ, ಹಿಂದೆ ಈಗಾಗಲೇ ಚರ್ಚೆಯಾಗಿದೆ. ನಾನು question hourನಲ್ಲಿ allow ಮಾಡುವುದಿಲ್ಲ.

(ಗೊಂದಲ)

ಶ್ರೀ ಹೆಚ್. ಎಸ್. ಮಹದೇವಪ್ರಸಾದ್: ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಬೇಡ, ಸದನದಲ್ಲಿ ಹೊಗೇನಕಲ್ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಈಗ ಪ್ರಶ್ನೋತ್ತರದಲ್ಲಿ ಕೇಳುವುದು ಬೇಡ, ವಿಶ್ವನಾಥರವರೇ, ಪ್ರಶ್ನೆ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಆ ಜಿಲ್ಲೆಯ ಎಲ್ಲಾ ಶಾಸಕರ ಪ್ರತ್ಯೇಕವಾದ ಸಭೆಯನ್ನು ಕರೆಯುತ್ತೇನೆ. ಅಧಿಕಾರಿಗಳನ್ನು ಕರೆದು .... leaders ಅನ್ನ ಕರೆದು.....

(ಗೊಂದಲ)

ಅಧ್ಯಕ್ಷರು: ಅವರನ್ನು ಕರೆದು ಮಾತನಾಡಿ, ಆಗ ಅಲ್ಲಿ ಚರ್ಚೆ ಮಾಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ನನಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಈಗ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ಈಗಾಗಲೇ ಬಹಳ ಚರ್ಚೆಯಾಗಿದೆ. ಅವರದು involvement ಇದೆ. ಮತ್ತೆ ಎಲ್ಲರೂ ಎದ್ದು ಮಾತನಾಡುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಒಂದು special meeting ಕರೆಯುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಸಭೆ ಕರೆಯಿರಿ. ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ವಿಚಾರ ಅಡಕವಾಗಿದೆ. ಒಂದು ಹೊಗೇನಕಲ್ ಜಲಪಾತದ ಬಳಿ ತಮಿಳುನಾಡು, ಕೃಷ್ಣಗಿರಿ, ಧರ್ಮಪುರಿ ಹಾಗೂ ಹೊಸೂರಿಗೆ ಕುಡಿಯುವ ನೀರಿಗೆ ಏನೊಂದು ಪ್ರಾಜೆಕ್ಟ್ ಮಾಡಿದೆ, ಅದಕ್ಕೆ ಹೊಗೇನಕಲ್ ಕುಡಿಯುವ ನೀರಿನ ಯೋಜನೆ ಎನ್ನುವ ಹೆಸರಿನಲ್ಲಿ ಅವರು ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಮಾನ್ಯ ಜನ ಸಂಪನ್ಮೂಲ ಸಚಿವರು ಉತ್ತರ ಹೇಳಿದ ಹಾಗೆ 67 ಕಿ.ಮೀ. ಒಂದು ಭಾಗ ತಮಿಳುನಾಡಿನ ಗಡಿ ಇದೆ, ಒಂದು ಭಾಗ ಕರ್ನಾಟಕದ ಗಡಿ ಇದೆ. ಬಿಳಿಗುಂಡ್ಲು ಮಾಪನ ಕೇಂದ್ರ ನಮ್ಮ ಎರಡೂ ರಾಜ್ಯದ ನೀರಿನ ಯೋಜನೆ ಮಾಡುವುದು ಏನಿದೆ, ಅದರಿಂದ ಮುಂದಕ್ಕೆ, ಹೊಗೇನಕಲ್ ಜಲಪಾತ ಹತ್ತು ಕಿಮೀ ವ್ಯಾಪ್ತಿಯಲ್ಲಿದೆ. ಹಾಗಾಗಿ ನಮ್ಮ ರಾಜ್ಯಕ್ಕೂ ತಮಿಳುನಾಡಿಗೂ ನೀರಿನ ನಿಗದಿ ಪಡಿಸುವಂತಹ ಬಿಳಿಗುಂಡ್ಲು ಇರುವುದು ಹೊಗೇನಕಲ್‌ಗಿಂತ ಇನ್ನು 10 ಕಿ.ಮೀ. ಹಿಂಭಾಗಕ್ಕೆ ಇದೆ. ಈ ಹೊಗೇನಕಲ್ ಜಲಪಾತ ಏನಿದೆ ಅಲ್ಲಿ ಒಂದು ನಡುಗಡ್ಡೆ ಎಂದು ದ್ವೀಪ ಇದೆ. ಆ ದ್ವೀಪ ಪ್ರದೇಶ ಏನಿದೆ ಅದು ತಮಿಳುನಾಡು ಗಡಿ ಭಾಗಕ್ಕೂ ಇಲ್ಲ, ಈ ಕಡೆ ಕರ್ನಾಟಕದ ಗಡಿ ಭಾಗಕ್ಕೂ ಇಲ್ಲ, ನೀರಿನ ಮಧ್ಯದಲ್ಲಿದೆ. ಇದು ಯಾವ ರಾಜ್ಯಕ್ಕೆ ಸೇರಬೇಕು ಎನ್ನುವುದು ಮೊದಲು ಇತ್ಯರ್ಥವಾದರೆ ಅನಂತರ ನೀರಿನ ವ್ಯಾಜ್ಯ ಬರುತ್ತದೆ. Survey of India ದವರಿಗೆ ಕರ್ನಾಟಕದಿಂದ ನಾಲ್ಕಾರು ಬಾರಿ... ಹಿಂದೆ ನಾನು ಜಿಲ್ಲಾ ಸಚಿವನಾಗಿದ್ದಾಗಲೂ ಕೂಡ ಪ್ರಯತ್ನಗಳನ್ನು ಮಾಡಿದ್ದೇನೆ. ಆದರೆ Survey of India ದವರು ಆಸಕ್ತಿ ತೋರಿಸುತ್ತಿಲ್ಲ. ನಮ್ಮ ರಾಜ್ಯದವರು ಎಷ್ಟು ಮೀಟಿಂಗ್‌ಗೆ ಹೋಗಿ ಕುಳಿತುಕೊಂಡರೂ ಕೂಡ ತಮಿಳುನಾಡಿನವರು ಭಾಗವಹಿಸುತ್ತಿಲ್ಲ. ಮಾನ್ಯ ಕಂದಾಯ ಸಚಿವರು, ಆ ನಡುಗಡ್ಡೆ ಪ್ರದೇಶ ಏನಿದೆ, ಅದು ಯಾವ ರಾಜ್ಯಕ್ಕೆ ಸೇರುತ್ತದೆ ಎಂದು bye-junction point ಅನ್ನು ನಿಗದಿ ಪಡಿಸಿ, ತಮಿಳುನಾಡು ಮತ್ತು ಕರ್ನಾಟಕದ ಗಡಿ ಭಾಗ ಇತ್ಯರ್ಥವಾದರೆ ಕುಡಿಯುವ ನೀರಿನ ವಿಚಾರದಲ್ಲೇ ತಾನಾಗಿಯೇ

ಇತ್ಯರ್ಥವಾಗುತ್ತದೆ. ಇದನ್ನು ಆದಷ್ಟು ಬೇಗ ಮಾಡಬೇಕು. ಅವರು ಏನು ಮಾಡುತ್ತೇವೆಂದು ಹೇಳಲಿಲ್ಲವಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಅದರ ಬಗ್ಗೆ ಒಂದು ಪ್ರತ್ಯೇಕ ಸಭೆಯನ್ನು ಕರೆಯುತ್ತೇನೆಂದು ಹೇಳಿದರು. ಅಲ್ಲಿ ಇದರ ಬಗ್ಗೆ discussion ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಒಂದು ಸಭೆ ಕರೆಯುತ್ತೇನೆ, ಅಲ್ಲಿ ಚರ್ಚೆ ಮಾಡೋಣ.

ಸರ್ಕಾರಿ ಜಮೀನನ್ನು ಮಂಜೂರು ಮಾಡಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**69(118)**
ಸದಸ್ಯರ ಹೆಸರು	:	**ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ)**
ಉತ್ತರಿಸುವವರು	:	**ಶ್ರೀ ಕರುಣಾಕರರೆಡ್ಡಿ (ಕಂದಾಯ ಸಚಿವರು)**

ಅ) ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ, ಸಾದೇನಹಳ್ಳಿ, ಅದ್ದೆ ವಿಶ್ವನಾಥಪುರ, ಚೊಕ್ಕನಹಳ್ಳಿ ಗ್ರಾಮಗಳಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಎಕರೆ ಸರ್ಕಾರಿ ಜಮೀನು ಯಾವ ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ. ಉಳಿದ ಸರ್ಕಾರಿ ಜಮೀನು ಎಷ್ಟು ಗ್ರಾಮವಾರು ಮಾಹಿತಿ ಒದಗಿಸುವುದು;

ಕೃಷಿ ಉದ್ದೇಶಕ್ಕಾಗಿ 2 ಎಕರೆ 2 ಗುಂಟೆ ಮತ್ತು ಸರ್ಕಾರಿ ಸಂಸ್ಥೆಗಳಿಗೆ 23 ಎಕರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ. ಉಳಿಕೆ ಸರ್ಕಾರಿ ಜಮೀನಿನ ಒಟ್ಟು ವಿಸ್ತೀರ್ಣ 548.25 ಎಕರೆ ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಮೇಲ್ಕಂಡ ಗ್ರಾಮಗಳ್ಲಿ ಯಾರು ಯಾರಿಗೆ ಸರ್ಕಾರಿ ಜಮೀನು ಮಂಜೂರಾಗಿರುತ್ತದೆ. ಇದಕ್ಕಾಗಿ ಸರ್ಕಾರದ ಅನುಸರಿಸಿದ ಮಾನದಂಡವೇನು, ಪೂರ್ಣ ಮಾಹಿತಿಯೊಂದಿಗೆ ಫಲಾನುಭವಿಗಳ ಪಟ್ಟಿಯನ್ನು ಒದಗಿಸುವು;

ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94 (ಬಿ) ರಡಿಯಲ್ಲಿ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕಾಗಿ ಸಲ್ಲಿಸಲಾದ ಅರ್ಜಿಗಳನ್ನು ಸಂಬಂಧಪಟ್ಟ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿನ ಬಗರ್ ಹುಕುಂ ಸಕ್ರಮೀಕರಣ ಸಮಿತಿಯ

ಮುಂದೆ ಮಂಡಿಸಲಾಗಿತ್ತು. ಸದರಿ ಸಮಿತಿಯಲ್ಲಿ ದಿ: 31.08.05ರಂದು ಈ ಕೆಳಕಂಡವರಿಗೆ ಸಕ್ರಮಗೊಳಿಸಿ ಮಂಜೂರು ಮಾಡಲಾಗಿರುತ್ತದೆ.

ಕ್ರಸ	ಫಲಾನುಭವಿಗಳ ಹೆಸರು	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)
1	ಎಸ್.ಎಂ.ಪಟಾಲಯ್ಯ ಬಿನ್ ಮುನಿನಂಜಪ್ಪ	ಸಾದೇನಹಳ್ಳಿ	30	0.22
2	ಅಶ್ವಥ್ ನಾರಾಯಣ ರೆಡ್ಡಿ	ಅದ್ದೆವಿಶ್ವನಾಥಪುರ	69	0.20
3	ಆರ್.ಡಿ. ರಾಮಯ್ಯ ಬಿನ್ ದೊಡ್ಡತಿಮ್ಮಯ್ಯ	ಅದ್ದೆವಿಶ್ವನಾಥಪುರ	68	0.10
4	ಸುರೇಶಬಾಬು ಬಿನ್ ಕೃಷ್ಣಪ್ಪ	ಅದ್ದೆವಿಶ್ವನಾಥಪುರ	70	0.30
			ಒಟ್ಟು	**2.02**

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 265 ಎಲ್‌ಜಿಬಿ 2007 (ಪಿ6), ದಿ: 23.10.2007ರಂತೆ ಬಿಎಂಟಿಸಿಗೆ 21 ಎಕರೆ ಹಾಗೂ ಕೆಪಿಟಿಸಿಎಲ್‌ಗೆ 2 ಎಕರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ.

ಅನುಬಂಧ
ಮಂಜೂರು ಮಾಡಲಾದ ಸರ್ಕಾರಿ ಜಮೀನಿನ ವಿವರ.

ಕ್ರಸ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಕ್ರಸ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)
ಕೃಷಿ ಉದ್ದೇಶಕ್ಕಾಗಿ				ಸರ್ಕಾರಿ ಸ್ವಾಯತ್ತ ಸಂಸ್ಥೆಗಳಿಗೆ			
				ಬಿಎಂಟಿಸಿ			ಕೆಪಿಟಿಸಿಎಲ್
1	ಸಾದೇನಹಳ್ಳಿ	30	0.22	ಸಾದೇನಹಳ್ಳಿ	20	5.00	2.00
2	ಅದ್ದೆವಿಶ್ವನಾಥಪುರ	69	0.20	ಸಾದೇನಹಳ್ಳಿ	24	10.00	–
3	ಅದ್ದೆವಿಶ್ವನಾಥಪುರ	68	0.10	ಸಾದೇನಹಳ್ಳಿ	30	6.00	–
4	ಅದ್ದೆವಿಶ್ವನಾಥಪುರ	70	0,30		ಒಟ್ಟು	**21.00**	**2.00**
	ಒಟ್ಟು		**2.02**				

ಉಳಿಕೆ ಸರ್ಕಾರಿ ಜಮೀನಿನ ವಿವರ

ಕ್ರ.ಸ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)
1	ಚೊಕ್ಕನಹಳ್ಳಿ	60 (ಗೋಮಾಳ)	26.00
	-"-	7	23.00
	-"-	37	2.15
	-"-	59	9.12
	-"-	60(ಖರಾಬು)	26.00
		ಒಟ್ಟು ವಿಸ್ತೀರ್ಣ	**86.27**
2	ಅದ್ದೆವಿಶ್ವನಾಥಪುರ	29	0.17
	-"-	63	30.10
	-"-	67	30.00
	-"-	68	32.26
	-"-	70	24.19
	-"-	81	88.20
	-"-	121	15.05
	-"-	69	23.15
		ಒಟ್ಟು ವಿಸ್ತೀರ್ಣ	**244.32**
3	ಸಾದೇನಹಳ್ಳಿ	15	0.06
	-"-	24	10.36
	-"-	30	159.30
	-"-	31	10.39
	-"-	74	0.05
	-"-	133	6.16
	-"-	20	28.34
		ಒಟ್ಟು ವಿಸ್ತೀರ್ಣ	**217.06**
		3 ಗ್ರಾಮಗಳ ಒಟ್ಟು ವಿಸ್ತೀರ್ಣ	**548.25**

ಶ್ರೀ ಎಸ್. ಆರ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ನಾವು ಕೊನೇ ಬೆಂಚಿನಲ್ಲಿರುವುದರಿಂದ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂದುಕೊಂಡಿದ್ದೆನು. ನನಗೆ ಅವಕಾಶ ಒದಗಿಸಿ ಕೊಟ್ಟಿರುವುದಕ್ಕೆ ಮಾನ್ಯ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಯಲಹಂಕ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೇನೆ. ಅದು ಬೆಂಗಳೂರಿಗೆ ಬಹಳ ಸಮೀಪವಾಗಿರತಕ್ಕಂಥ ಕ್ಷೇತ್ರ. ಇದು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವಂತಹ ಕ್ಷೇತ್ರ. ಅಲ್ಲಿ ಭೂಮಿಯ ಬೆಲೆ ಬಂಗಾರದ ಬೆಲೆ ಇದೆ. ಮೂರು ವರ್ಷದ ಅವಧಿಯಲ್ಲಿ ಭೂ ಮಂಜೂರಾತಿ ಆಗಿರತಕ್ಕಂಥ ವಿಚಾರದಲ್ಲಿ ಯಾರ್ಯಾರಿಗೆ ಆಗಿದೆ ಎಂದು ಕೆಲವು ಹಳ್ಳಿಗಳನ್ನು ಕೇಳಿದ್ದೆನು ಮತ್ತು ನಿಯಮ ಕೇಳಿದ್ದೆನು, ಆದರೆ ನಿಯಮ ಕೊಟ್ಟಿಲ್ಲ. ನನಗೆ ಗೊತ್ತಿರುವ ಪ್ರಕಾರ ನಿಯಮ 1991 ರಲ್ಲಿ ಹಿಂದೆ ಮೂರು ವರ್ಷದಲ್ಲಿ ಯಾರು ಉಳುಮೆ ಮಾಡುತ್ತಿದ್ದರು. ಫಾರಂ 50ಕ್ಕೆ ಯಾರು ಅರ್ಜಿ ಸಲ್ಲಿಸಿರುತ್ತಾರೆ, ಅವರಿಗೆ ಕೊಡಬೇಕೆಂದು ಇತ್ತು. ಅದಾದನಂತರ ಯಾರಿಗೆ ಅವಕಾಶ ಸಿಗಲಿಲ್ಲವೋ ಅವರಿಗೆ 1997-98ರಲ್ಲಿ ಫಾರಂ 53ರಲ್ಲಿ ಮತ್ತೊಂದು ಅವಕಾಶ ಇತ್ತು.

ಒಟ್ಟು ಕುಟುಂಬದ ಮಂಜೂರಾತಿ ಜಾಗವನ್ನೂ ಸೇರಿ 4 ಎಕರೆ 30 ಗುಂಟೆಗೆ ಮೀರದಂತೆ ಇರಬೇಕೆಂಬುದು ಮತ್ತು 1999ಕ್ಕೆ ರೂ. 11,800 ವಾರ್ಷಿಕ ವರಮಾನ ಇರಬೇಕೆಂದು ನಿಯಾಮವಳಿಯಲ್ಲಿತ್ತು. ಆದರೆ, ನನ್ನ ಕ್ಷೇತ್ರದಲ್ಲಿ ಕೆಲವರಿಗೆ ಭೂ ಮಂಜೂರಾತಿ ಮಾಡಿದ್ದರೆ ಇದನ್ನೂ ನಿಯಮಕ್ಕೆ ವಿರುದ್ಧವಾಗಿ ಕೊಟ್ಟಿದ್ದಾರೆ. ಅದನ್ನು ನಾನು ಇಲ್ಲಿ ಪ್ರಸ್ತಾಪಮಾಡುತ್ತಿದ್ದೇನೆ. ಬೆಂಗಳೂರು ಸುತ್ತಮುತ್ತ ಕಾರ್ಪೋರೇಷನ್ ಏರಿಯಾದಲ್ಲಿ 18 ಕಿ.ಮೀ. ಒಳಗೆ ಇರುವ ಜಾಗವನ್ನು ಮಂಜೂರು ಮಾಡಬಾರದು. ಕೇವಲ 17 ಕಿ.ಮೀ. ದೂರದಲ್ಲಿ ಇರತಕ್ಕಂತಹ ಅದ್ದೆವಿಶ್ವನಾಥಪುರದಲ್ಲಿ 9 ಎಕರೆ 35 ಗುಂಟೆ ಜಾಗವನ್ನು ಮಂಜೂರು ಮಾಡಿದ್ದಾರೆ. ತಹಶೀಲ್ದಾರರು ನಮ್ಮ ಕಂದಾಯ ಸಚಿವರಿಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ 2 ಎಕರೆ 3 ಗುಂಟೆ ಎಂದು ಆದರೆ, 9 ಎಕರೆ 35 ಗುಂಟೆ ಜಾಗವನ್ನು ಇತ್ತೀಚೆಗೆ ಮಂಜೂರು ಮಾಡಿದ್ದಾರೆ. ತಹಶೀಲ್ದಾರರು ಕಂದಾಯ ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅಲ್ಲಿ ಯಾವುದೇ ಬೆಲೆ ಬಾಳುವಂತಹ ಮರ ಇಲ್ಲ. ಜಾಗವನ್ನು ಅವರು ಉಳುಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಹತ್ತಿರ ಅದರ ಫೋಟೋಗಳಿವೆ. ಆ ಜಾಗವನ್ನು ಅವರು developerಗೆ ಕೊಟ್ಟಿದ್ದಾರೆ. ಅವರಿಗೆ ಹಕ್ಕುಪತ್ರವೂ ಸಿಕ್ಕಿಲ್ಲ. ಸುಮಾರು 25 ವರ್ಷಗಳ ಹಿಂದೆ ಮಾಜಿ ಪ್ರಧಾನಿ ದೇವಿಲಾಲ್ ಅವರು ಕಾಡು ಗಿಡವನ್ನು ನೆಟ್ಟಿದ್ದರು. ಆ ಕಾಡು ಗಿಡಗಳನ್ನೆಲ್ಲಾ ಕಡಿದು Developers ಅದನ್ನು ಮಟ್ಟ ಮಾಡುತ್ತಿದ್ದಾರೆ. ಪೋಲಿಸ್ ಕಂಪ್ಲೇಟ್ ಕೂಡ

ಕೊಟ್ಟಿದ್ದೇವೆ. ಆದರೂ ಜಾಗವನ್ನೂ ವಾಪಸ್ಸು ತೆಗೆದುಕೊಳ್ಳುತ್ತಿಲ್ಲ. ಒಬ್ಬರಿಗೆ 19 ಎಕರೆ ಸ್ವಂತ ಜಮೀನು ಇದೆ ಆದರೂ, ಅವರಿಗೆ ಎರಡು ಎಕರೆ ಜಾಗವನ್ನು ಮಂಜೂರು ಮಾಡಿದ್ದಾರೆ. ಕಾನೂನಿನಲ್ಲಿ ಒಟ್ಟು ಜಾಗ 4 ಎಕರೆ 38 ಗುಂಟೆ ಒಟ್ಟು ಕುಟುಂಬ ಎಂದು ಇದ್ದರೂ ಕೂಡ ಒಂದೇ ಹೆಸರಿನಲ್ಲಿ ಅಷ್ಟಿದೆ. ಎರಡನೆಯದಾಗಿ ಒಂದೇ ಕುಟುಂಬದವರು ಬೇರೆ ಬೇರೆಯವರಿಗೆ ಕೊಡುವ ಹಾಗೆ ಇಲ್ಲ. ಚೊಕ್ಕನಹಳ್ಳಿಯಲ್ಲಿ ಸರ್ವೆ ನಂ. 6-7ರಲ್ಲಿ 6 ಜನಕ್ಕೆ ಅವನಿಗೆ, ಅವನ ಹೆಂಡತಿಗೆ, ತಂದೆಗೆ ಮೂರು ಜನ ತಮ್ಮಂದಿರಿಗೆ, ಅಕ್ಕನಿಗೆ ಒಂದೇ ಕುಟುಂಬದವರಿಗೆ ಎರಡೆರಡು ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ. ನಾಗದಾಸನ ಹಳ್ಳಿ ಎಂಬ ಪಕ್ಕದ ಗ್ರಾಮ airportಗೆ ಹೊಂದಿಕೊಂಡಿರುವಂತಹ ಜಾಗ. ಅಲ್ಲಿ ಬಡವರು ಉಳುಮೆ ಮಾಡುತ್ತಿದ್ದಾರೆ. PWD ಅವರು ಒಂದು ವರದಿಯನ್ನು ಕೊಟ್ಟಿದ್ದು ಅದರಲ್ಲಿ 21.25 ಕಿ.ಮೀ. ಬರುತ್ತದೆಂದು, ಇನ್ನೊಂದು ವರದಿ ಪ್ರಕಾರ 18.4 ಕಿ.ಮೀ. ಎಂದು ಹೇಳಿದ್ದಾರೆ. ಆದರೆ, ತಹಶೀಲ್ದಾರರು ಮಂಜೂರು ಮಾಡುವಾಗ ಇದು 17 ಕಿಲೋಮೀಟರ್ ಒಳಗೆ ಬರುವುದರಿಂದ ನಿಮಗೆ ಜಾಗ ಮಂಜೂರು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದು ಯಾವ ರೀತಿ ಅನ್ಯಾಯ ಮಾಡುತ್ತಾರೆ ಎಂದರೆ, ಯಾರು ಬಡವರಿದ್ದಾರೆ, ಅಧಿಕಾರಿಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಅವರಿಗೆ ಮಂಜೂರಾತಿ ಮಾಡುವುದಿಲ್ಲ. ಯಾರು ವ್ಯವಸ್ಥೆ ಮಾಡುತ್ತಾರೆ ಅವರಿಗೆ ಅಧಿಕಾರ ಮೀರಿ ಕೊಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಸಮಗ್ರ ತನಿಖೆಯನ್ನು ಮಾಡಬೇಕು. ಇಡೀ ನನ್ನ ಕ್ಷೇತ್ರದ ತನಿಖೆ ಮಾಡಬೇಕು.

ಅಧ್ಯಕ್ಷರು: ಅದರ ಡೀಟೇಲ್‌ನ್ನು ಅವರಿಗೆ ಕೊಡಿ.

ಶ್ರೀ ಸಿ.ಟಿ.ರವಿ: ಇದಕ್ಕೆ ಪೂರಕವಾಗಿ ಒಂದು ಮಾತು.

ಅಧ್ಯಕ್ಷರು: ಬೇಡ. ಅವರು ಕ್ಷೇತ್ರಕ್ಕೆ ಸೀಮಿತವಾಗಿ ಕೇಳಿದ್ದಾರೆ.

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು): ಮಾನ್ಯ ಸದಸ್ಯರು ಏನು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರೆ, ನಿಯಮಾವಳಿ ತಪ್ಪಿಸಿ ಏನು ಭೂ ಮಂಜೂರಾತಿಯಾಗಿದೆ ಎಂಬ ವಿಚಾರವನ್ನು ಹೇಳಿದ್ದಾರೆ ಅದರ ಬಗ್ಗೆ ಖಂಡಿತ ನಾನು ಸಮಗ್ರವಾದ ತನಿಖೆಯನ್ನು ಮಾಡಿ ತಪ್ಪಿತಸ್ಥ ಅಧಿಕಾರಿಗಳು ಆ ರೀತಿ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ: ಬೆಂಗಳೂರು ಸುತ್ತಮುತ್ತ ಬೇರೆ ಬೇರೆ ತಾಲ್ಲೂಕುಗಳಲ್ಲಿ ಇದೇ ರೀತಿಯಾಗಿ ಅಕ್ರಮವಾಗಿ ಮಂಜೂರಾದ ಭೂಪ್ರದೇಶಗಳ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಸಚಿವರು ಈ ತಪ್ಪಿತಸ್ಥ ಅಕ್ರಮಗಳನ್ನು ಬಯಲಿಗೆಳೆಯಲಿ ವಿಶೇಷ ತನಿಖೆಯನ್ನು ಮಾಡುತ್ತೀರಾ?

ಅಧ್ಯಕ್ಷರು: ತಾವು ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿ.

ಮೇಲುಕೋಟೆಯಲ್ಲಿ ಕೈಮಗ್ಗಗಳು ಸ್ಥಗಿತಕೊಂಡಿರುವ ಬಗ್ಗೆ

ಸದಸ್ಯರ ಹೆಸರು	:	ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	70(387)
ಉತ್ತರಿಸುವ ಸಚಿವರು	:	ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು
ಉತ್ತರಿಸುವ ಸಚಿವರು	:	ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು)

ಅ) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿ ನೂರಾರು ಕೈಮಗ್ಗಗಳು ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ನಿರುದ್ಯೋಗಿ ನೇಕಾರರು ಹಾಗೂ ಕುಟುಂಬಗಳು ಕಷ್ಟದಲ್ಲಿರುವುದರಿಂದ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಮೇಲುಕೋಟೆಯಲ್ಲಿ ಸ್ಥಾಪಿಸಿರುವ ಉತ್ಪಾದನಾ ಕೇಂದ್ರದಲ್ಲಿ ಪ್ರಸ್ತುತ 42 ಕೈಮಗ್ಗ ನೇಕಾರರಿಗೆ ರೇಷ್ಮೆ ಸೀರ/ಬಟ್ಟೆ ಉತ್ಪಾದನೆಗೆ ಅಗತ್ಯವಾದ ಕಚ್ಚಾಮಾಲನ್ನು ಒದಗಿಸಿ ನಿರಂತರ ಉದ್ಯೋಗ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಇಲಾಖೆಯ ವಿವಿಧ ಅಭಿವೃದ್ಧಿ ಯೋಜನೆಗಳಡಿ ಮೇಲುಕೋಟೆಯ ಕೈಮಗ್ಗ ನೇಕಾರರ ಅಭಿವೃದ್ಧಿಗಾಗಿ ಸಾಮೂಹಿಕ ನೇಯ್ಗೆ ಕೇಂದ್ರ, ನೇಕಾರರ ವಸತಿ ಕಾರ್ಯಾಗಾರಗಳು, ಸುಧಾರಿತ ಕೈಮಗ್ಗಗಳು, ಜೀವವಿಮೆ ಆರೋಗ್ಯ ವಿಮೆ, ಕುಡಿಯುವ ನೀರಿನ ಸೌಲಭ್ಯ, ಆರೋಗ್ಯ ಸೌಲಭ್ಯಗಳು, ನೇಕಾರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಿಷ್ಯವೇತನ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ.

ಕೇಂದ್ರ ಪುರಸ್ಕೃತ ಇಂಟಗ್ರೇಟೆಡ್ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಸ್ಕೀಮ್ (ಐಹೆಚ್‌ಡಿಎಸ್) ನಡಿ 2008–09ನೇ ಸಾಲಿನಲ್ಲಿ ಮೇಲುಕೋಟೆ ಗ್ರಾಮದ 27 ನೇಕಾರರ ಗುಂಪನ್ನು ರಚಿಸಿ ಅವರ ಉದ್ಯೋಗಕ್ಕೆ ಪೂರಕವಾಗಿ ಕೈಮಗ್ಗಗಳ ಪೂರೈಕೆ, ಡಾಬಿ ಮತ್ತು ಜಕಾರ್ಡ್ ಪೂರೈಕೆ ಹಾಗೂ ದುಡಿಯುವ ಬಂಡವಾಳ

ಪಡೆಯಲು ಅಗತ್ಯವಾದ ಮಾರ್ಜಿನ್‌ಮನಿ ಮಂಜೂರಾತಿಗಾಗಿ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿ.ಎಸ್. ಪುಟ್ಟರಾಜು: ಮೇಲುಕೋಟೆಯಲ್ಲಿ ಸದ್ಯಕ್ಕೆ ನೂರಾರು ಕೈಮಗ್ಗಗಳು ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಈಗಾಗಲೇ ಉತ್ತರದಲ್ಲಿ ತಿಳಿಸಿದ್ದಾರೆ. ಇವತ್ತು ಅಲ್ಲಿ ನೂರಾರು ಬಡ ಕುಟುಂಬಗಳು ಕೈಮಗ್ಗದ ಕೆಲಸವನ್ನು ನಂಬಿ ಜೀವನ ನಡೆಸತಕ್ಕಂಥದ್ದನ್ನು ಇಲ್ಲಿಯ ಸ್ಥಳೀಯ ಪ್ರತಿನಿಧಿಯಾಗಿ ನೋಡಿದ್ದೇನೆ. ಆದರೆ ಅಲ್ಲಿರತಕ್ಕಂತಹ ಕೈಮಗ್ಗ ನೇಕಾರರನ್ನು ಸದೃಢವಾದಂಥ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಸರ್ಕಾರದಿಂದ ಕೊಡತಕ್ಕಂತಹ ಸೌಲಭ್ಯಗಳನ್ನು ಅವರಿಗೆ ಸಮರ್ಪಕವಾಗಿ ತಲುಪಿಸುವಲ್ಲಿ ಸ್ಥಳೀಯ ಅಧಿಕಾರಿಗಳು ವಿಫಲರಾಗಿದ್ದಾರೆ ಎಂಬುದನ್ನು ನಾನು ಹಲವಾರು ಸಭೆಗಳನ್ನು ಮಾಡುವುದರ ಮೂಲಕ ಗಮನಿಸಿದ್ದೇನೆ.

ಅಧ್ಯಕ್ಷರು: ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿ.

ಶ್ರೀ ಸಿ.ಎಸ್. ಪುಟ್ಟರಾಜು: ಅಲ್ಲಿ ಯಾವ ರೀತಿ ಪರಿಸ್ಥಿತಿ ಇದೆ ಎಂದರೆ ಯಾವುದೇ ಲೆಕ್ಕಕ್ಕೆ ಸಿಕ್ಕುತ್ತಿಲ್ಲ. ಇದ್ದಂತಹ ಸಾವಿರಾರು ಕುಟುಂಬಗಳು ಇವತ್ತು ಬೆಂಗಳೂರು ಮಹಾನಗರಕ್ಕೆ ಗುಳೇ ಬರತಕ್ಕಂತಹ ಕೆಲಸವಾಗಿದೆ. ತತ್‌ಕ್ಷಣ ರಾಜ್ಯ ಮಟ್ಟದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಸಭೆ ಮಾಡಿಸಿ ನೇಕಾರರಿಗೆ ಒಂದು ಆತ್ಮಸ್ಥೈರ್ಯವನ್ನು ತುಂಬತಕ್ಕಂತಹ ಕೆಲಸವನ್ನು ಮಾಡಬೇಕು. ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಯಾವ್ಯಾವ ಕಾರ್ಯಕ್ರಮಗಳನ್ನು ನಿಮಗೆ ಮಾಡುತ್ತಿದ್ದೇವೆಂದು ಮತ್ತು ನಿಮಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎನ್ನತಕ್ಕದ್ದನ್ನು ತ್ವರಿತವಾಗಿ ಮಾಡತಕ್ಕಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕು. ತಕ್ಷಣ ಇದರ ಬಗ್ಗೆ ಕ್ರಮತೆಗೆದುಕೊಳ್ಳಬೇಕು.

ಶ್ರೀ ಗೂಳಿಹಟ್ಟಿ ಶೇಖರ್(ಜವಳಿ ಮತ್ತು ಯುವಜನ ಸೇವೆ ಸಚಿವರು): ನೇಕಾರರಿಗೆ ಆತ್ಮಸ್ಥೈರ್ಯ ತುಂಬುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಈಗಾಗಲೇ 27 ಜನ ನೇಕಾರರಿಗೆ ಉದ್ಯೋಗ ಒದಗಿಸುವ ದೃಷ್ಟಿಯಿಂದ ಸುಮಾರು 3 ಲಕ್ಷ ಅನುದಾನ ಪಡೆಯುವುದಕ್ಕೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಅದರ ಬಗ್ಗೆ ಮಾಹಿತಿ ಬಂದ ತಕ್ಷಣ ತಮಗೆ ತಿಳಿಸುತ್ತೇನೆ.

ಕಾರಂಜಾ ನೀರಾವರಿ ಯೋಜನೆಯಿಂದ ದೊರಕುವ ಸೌಲಭ್ಯದ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 71(371)

ಸದಸ್ಯರ ಹೆಸರು : ಶ್ರೀ. ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಉತ್ತರಿಸುವ ಸಚಿವರು : ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ಕಾರಂಜಾ ನೀರಾವರಿ ಯೋಜನೆ ಎಂದು ಪ್ರಾರಂಭವಾಯಿತು ಬೀದರ್ ಜಿಲ್ಲೆಯಲ್ಲಿ ಈ ಯೋಜನೆಯಿಂದ ಯಾವ ಯಾವ ತಾಲ್ಲೂಕಿನ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುವ ಬಗ್ಗೆ ಅಂದಾಜು ಮಾಡಲಾಗಿದೆ. ಈಗ ಇದರಿಂದಾಗಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುತ್ತಿದೆ;

ಕಾರಂಜಾ ನೀರಾವರಿ ಯೋಜನೆಯು 1971–72 ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯಿಂದ ಬೀದರ್ ಜಿಲ್ಲೆಯ ಒಟ್ಟು 35,614 ಹೆ. (ಬೀದರ್ ತಾಲ್ಲೂಕಿನ 12,141 ಹೆ., ಭಾಲ್ಕಿ ತಾಲ್ಲೂಕಿನ 23,473 ಹೆ.,) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಅಂದಾಜು ಮಾಡಲಾಗಿತ್ತು.

2007–08ನೇ ಸಾಲಿನಲ್ಲಿ ಜಲಾಶಯದಲ್ಲಿ ಲಭ್ಯವಿದ್ದ ನೀರಿನ ಪ್ರಮಾಣಕ್ಕನುಸಾರವಾಗಿ ಒಟ್ಟು 4,182 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿರುತ್ತದೆ.

ಆ) ಈ ಯೋಜನೆ ಪ್ರಾರಂಭ ಗೊಂಡಾಗ ಇದ್ದ ಯೋಜನಾ ವೆಚ್ಚ ಮತ್ತು ಈವರೆವಿಗೂ ಎಷ್ಟು ಹಣ ವೆಚ್ಚವಾಗಿದೆ (ಪೂರ್ಣ ವಿವರಗಳನ್ನು ಒದಗಿಸುವುದು)

ಕಾರಂಜಾ ಯೋಜನೆ ಪ್ರಾರಂಭಗೊಂಡಾಗ ಯೋಜನೆಯ ಅಂದಾಜು ಮೊತ್ತ ರೂ. 9.90 ಕೋಟಿ ಹಾಗೂ ಇಲ್ಲಿಯವರೆಗೆ ಈ ಯೋಜನೆಗೆ ಖರ್ಚಾಗಿರುವ ಒಟ್ಟು ವೆಚ್ಚ ರೂ. 472.81 ಕೋಟಿಗಳಾಗಿರುತ್ತದೆ. (ವಿವರ ಲಗತ್ತಿಸಿದೆ.).

ಇ) ಈ ಯೋಜನೆ ನಿಗಧಿತ ಅವಧಿಯೊಳಗೆ ಪೂರ್ಣಗೊಳ್ಳದಿರಲು ಕಾರಣಗಳೇನು;

ಕಾರಂಜಾ ಯೋಜನೆಯನ್ನು ಮುಖ್ಯವಾಗಿ ಈ ಕೆಳಕಂಡ ಕಾರಣಗಳಿಂದ ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ.

1. 1973 ರಲ್ಲಿ ಈ ಯೋಜನೆಯು ಪ್ರಾರಂಭವಾಗಿದ್ದರೂ ಸಹ ಕೇಂದ್ರ ಜಲ ಆಯೋಗದ ಅನುಮೋದನೆಯು 1992 ರಲ್ಲಿ ಅಂದರೆ 19 ವರ್ಷ ಗತಿಸಿದ ನಂತರ ದೊರಕಿರುತ್ತದೆ.

2. ಈ ಯೋಜನೆಯ ಕಾಲುವೆ ಉಪಕಾಲುವೆ ಇತ್ಯಾದಿ ಕಾಮಗಾರಿಗಳ ಅನುಷ್ಠಾನದಲ್ಲಿ ಭೂಸ್ವಾಧೀನ ಪ್ರಕರಣಗಳಲ್ಲಿ ಉಂಟಾದ ವಿಳಂಬ.

3. ಭೂಮಾಲೀಕರಿಂದ ಕೋರ್ಟ್‌ಗಳಲ್ಲಿನ ವ್ಯಾಜ್ಯ, ಹೆಚ್ಚಿನ ಪರಿಹಾರಕ್ಕೆ ಒತ್ತಾಯಿಸಿ, ಕಾಮಗಾರಿಗಳಿಗೆ ತಡೆ ಒಡ್ಡಿರುವುದರಿಂದ ವಿಳಂಬವಾಗಿದೆ.

ಸದರಿ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು 1997-98 ರಲ್ಲಿ ಕೇಂದ್ರ ಸರ್ಕಾರದ ಎ.ಐ.ಬಿ.ಪಿ. ಯೋಜನೆ ಅಡಿಯಲ್ಲಿ ಸೇರ್ಪಡೆಗೊಂಡಿದ್ದು, 2001-2002 ರವರೆಗೆ ನಾರ್ಮಲ್ ಟ್ರ್ಯಾಕ್ ಅಡಿಯಲ್ಲಿ ಹಾಗು 2002-03ರಿಂದ ಇಲ್ಲಿಯವರೆಗೆ ಫಾಸ್ಟ ಟ್ರ್ಯಾಕ್ ಅಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ) ಈ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಎಷ್ಟು ಅಕ್ರಮ/ಅವ್ಯವಹಾರಗಳು ಪತ್ತೆಯಾಗಿವೆ. ಎಷ್ಟು ಜನ ಈ ಪ್ರಕರಣಗಳಲ್ಲಿ ಭಾಗಿಯಾಗಿದ್ದರೆ, ಇದುವರೆವಿಗೂ ಎಷ್ಟು ಜನರಿಗೆ ಶಿಕ್ಷೆಯಾಗಿದೆ; (ಅಕ್ರಮಗಳಲ್ಲಿ ಭಾಗಿಯಾಗಿರುವವರ ಹೆಸರು, ನಷ್ಟವಾಗಿರುವ ಹಣದ ವಿವರ ಒದಗಿಸುವುದು);

ಕಾರಂಜಾ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸುಮಾರು 16 ಅಕ್ರಮ/ ಅವ್ಯವಹಾರಗಳು ಪತ್ತೆಯಾಗಿವೆ. ಈ ಪ್ರಕಾರಣಗಳಲ್ಲಿ ಸುಮಾರು 138 ಅಧಿಕಾರಿ/ ನೌಕರರು ಭಾಗಿಯಾಗಿದ್ದಾರೆ. ಅವರುಗಳಲ್ಲಿ 35 ಜನರಿಗೆ ಶಿಕ್ಷೆಯಾಗಿದೆ. (ಪ್ರತ್ಯೇಕ ಪಟ್ಟಿ ಲಗತ್ತಿಸಲಾಗಿದೆ.).

ಉ) ಈ ಯೋಜನೆ ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?

ಕಾರಂಜಾ ಯೋಜನೆಯಲ್ಲಿ 2007 ರ ಹಿಂಗಾರು ಹಂಗಾಮಿಯಲ್ಲಿ ಬಲದಂಡೆ ಕಾಲುವೆಯಲ್ಲಿ ಕಿ.ಮೀ. 80 ರವರೆಗೆ ಹಾಗೂ ಎಡದಂಡೆ ಕಾಲುವೆಯಲ್ಲಿ ನೀರನ್ನು ಹರಿಸಲಾಗಿದೆ. ಬಲದಂಡೆ ಕಾಲುವೆಯ ಕಿಮೀ. 127 ರವರೆಗೆ ಕಾಲುವೆ ಜಾಲ, ಹೊಲಗಾಲುವೆಯನ್ನು ಸೇರಿಸಿಕೊಂಡು ಬಹುತೇಕ ಪೂರ್ಣಗೊಂಡಿರುತ್ತದೆ. ಬಲದಂಡೆ ಕಾಲುವೆಯ 127ನೇ ಕಿಮೀ ರಿಂದ 131 ರವರೆಗೆ ಕಿಮೀ 127.30 ಹಾಗೂ ಕಿಮೀ. 128.51 ರಲ್ಲಿನ ಅಕ್ವಡಕ್ಟ್ ಕಾಮಗಾರಿಗಳನ್ನು ಹೊರತುಪಡಿಸಿ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆ ಮುಗಿದಿದ್ದು, ಹೊಲಗಾಲುವೆ ಕಾಮಗಾರಿಗಳು ಕೈಗೊಳ್ಳಬೇಕಾಗಿದೆ. ಏತ ನೀರಾವರಿಯ ಪುನಃಶ್ಚೇತನ ಕಾಮಗಾರಿಯನ್ನು ಸೇರಿಸಿಕೊಂಡು ಯೋಜನೆಯ ಎಲ್ಲಾ ಬಾಕಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರಂಜಾ ಯೋಜನೆ ಅಡಿಯಲ್ಲಿ1970-7 ರಿಂದ 2006 -07ನೇ ಸಾಲಿನ ಅವಧಿಯ ವೆಚ್ಚದ ವಿವರಗಳು:

ಲೆಕ್ಕ ಶೀರ್ಷಿಕೆ 4701(ಯೋಜನೆ)

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ವರ್ಷ	ವೆಚ್ಚ
1	1970-71	4.32
2	1971-72	12.11
3	1972-73	33.00
4	1973-74	30.00
5	1974-75	58.50
6	1975-76	69.49
7	1976-77	104.00
8	1977-78	207.00
9	1978-79	117.00
10	1979-80	250.08
11	1980-81	236.01
12	1981-82	256.82
13	1982-83	339.35
14	1983-84	399.35
15	1984-85	476.00
16	1985-86	278.00
17	1986-87	914.71
18	1987-88	670.56
19	1988-89	675.37
20	1989-90	845.40
21	1990-91	812.36
22	1991-92	1011.13
23	1992-93	1575.49
24	1993-94	1582.22

25	1994–95	1570.78
26	1995–96	1829.03
27	1996–97	1787.21
28	1997–98	2118.28
29	1998–99	3413.86
30	1999–2000	3520.40
31	2000–2001	3183.72
32	2001–2002	3233.87
33	2002–2003	2883.99
34	2003–2004	2484.75
35	2004–2005	4832.47
36	2005–2006	2295.05
37	2006–2007	2083.70
38	2007–2008	1106.48

ಕಾರಂಜಾ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಪತ್ತೆಯಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಭಾಗಿಯಾಗಿರುವವರ ಹೆಸರುಗಳು.

*****

ಕ್ರಮ. ಸಂಖ್ಯೆ.	ಪ್ರಕರಣ ಸಂಖ್ಯೆ	ಆರೋಪಿತ ಅಧಿಕಾರಿ /ನೌಕರರ ಹೆಸರು	ಸರ್ಕಾರಕ್ಕೆ ನಷ್ಟವುಂಟು ಮಾಡಿದ ಮೊತ್ತ ಮತ್ತು ಶಿಕ್ಷೆಯ ವಿವರ
1	137	1) ಶ್ರೀ. ಸೈಯದ್ ಮಹಮದ್ ಹುಸೇನ್, ಕಾರ್ಯಾಪಾಲಕ ಇಂಜಿನಿಯರ್ (ನಿವೃತ್ತ)	ರೂ. ಒಂದು ಕೋಟಿ ನಷ್ಟ ಆಗಿರುವ ಬಗ್ಗೆ ಆರೋಪವಿದ್ದು ವಿಚಾರಣಾ ವರದಿ ಬಂದಿದೆ. ಆರೋಪ ಸಾಬೀತಾಗಿಲ್ಲದ ಕಾರಣ ನಿಖರವಾಗಿ ಎಷ್ಟು ನಷ್ಟ ಉಂಟಾಗಿದೆ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ.
2	188/2004	1)ಶ್ರೀ ಹರಿಹರ	ಸರ್ಕಾರಿ ಆದೇಶ ಸಂಖ್ಯೆ:

		ಸದಾಶಿವರಾವ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಪ್ರೇಮಸಿಂಗ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 3) ಶ್ರೀ ಎನ.ಟಿ.ಕೋಳೇಕರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 4) ಶ್ರೀ ಎಂ.ಮಹಮದ್ ಹುಸೇನ್, ಸಹಾಯಕ ಇಂಜಿನಿಯರ್ 5) ಶ್ರೀ ಶಾಹೇದ ಆಲಿ, ಸಹಾಯಕ ಇಂಜಿನಿಯರ್ 6) ಶ್ರೀ ಬಿ.ಎ. ತಮಸಂಗೆ, ಸಹಾಯಕ ಇಂಜಿನಿಯರ್ 7) ಶ್ರೀ ಎಂ.ಡಿ.ಅಜರುಲ್ ಹಕ್ ಸಿದ್ದಿಕಿ, ಸಹಾಯಕ ಇಂಜಿನಿಯರ್ 8) ಶ್ರೀ ಮಲ್ಲಿಕಾರ್ಜುನ ಕರಂಜಿ, ಸಹಾಯಕ ಇಂಜಿನಿಯರ್ 9) ಶ್ರೀ ರಾಜೇಂದ್ರ, ಸಹಾಯಕ ಇಂಜಿನಿಯರ್ 10. ಶ್ರೀ ಡಿ.ಆರ್.ಕುಲಕರ್ಣಿ, ಸಹಾಯಕ ಇಂಜಿನಿಯರ್ 11) ಶ್ರೀ ಫಬ್ಬಾ ರವಿಕಿರಣ, ಸಹಾಯಕ ಇಂಜಿನಿಯರ್ 12) ಶ್ರೀ ಶಫಿಯೋದ್ದೀನ್, ಸಹಾಯಕ ಇಂಜಿನಿಯರ್	ಜಸಂಇ 188 ಸೇಇವಿ 2004, ದಿನಾಂಕ: 25-4-2008ರ ಆದೇಶದಲ್ಲಿ ಸದರಿಯವರಿಗೆ ದಂಡನೆಯನ್ನು ವಿಧಿಸಲಾಗಿದೆ.

		13) ಶ್ರೀ ಕಲಿಮೋದ್ದೀನ್, ಸಹಾಯಕ ಇಂಜಿನಿಯರ್ 14) ಶ್ರೀ ಅಶೋಕ ಕುಮಾರ್, ಕಿರಿಯ ಇಂಜಿನಿಯರ್ 15) ಶ್ರೀ ಪಿ.ಬಸವರಾಜ, ಕಿರಿಯ ಇಂಜಿನಿಯರ್ 16) ಶ್ರೀ ರಾಚಪ್ಪಾ ಪಾಟೀಲ್, ಕಿರಿಯ ಇಂಜಿನಿಯರ್ 17) ಶ್ರೀ ನವಾಬೋದ್ದೀನ್, ಕಿರಿಯ ಇಂಜಿನಿಯರ್ 18) ಶ್ರೀ ಪಾಂಡುರಂಗ, ಕಿರಿಯ ಇಂಜಿನಿಯರ್ 19) ಶ್ರೀ ರವೀಂದ್ರ ಕಿರಿಯ ಇಂಜಿನಿಯರ್ 20) ಶ್ರೀ ಅರುಣ ಕುಮಾರ, ಕಿರಿಯ ಇಂಜಿನಿಯರ್	
3	192/2004	1) ಶ್ರೀ ನಸರುಲ್ಲಾ ಖಾನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 2) ಶ್ರೀ ಎನ್.ಎ.ಶ್ರೀಪತಿರಾವ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 3) ಶ್ರೀ ಅಶೋಕ ಡೋಯಿಜೋಡೆ, ಪ್ರಥಮ ದರ್ಜೆ ಉಗ್ರಾಣ ಪಾಲಕ 4) ಶ್ರೀ ಎನ್.ಎಸ್.	ರೂ.22.84 ಲಕ್ಷಗಳನ್ನು ಆಪಾದಿತರಿಂದ ವಸೂಲಿ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಜಸಂಇ 192 ಸೇಇವಿ 2004, ದಿನಾಂಕ:12/5/2008 ರಲ್ಲಿ ದಂಡನೆ ವಿಧಿಸಲಾಗಿದೆ.

		ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 5) ಶ್ರೀ ದಯಾನಂದ ಸ್ವಾಮಿ, ಪ್ರಥಮ ದರ್ಜೆ ಉಗ್ರಾಣ ಪಾಲಕ 6) ಶ್ರೀ ಗುಂಡಪ್ಪಾ ಮಾಡಗೋಳ, ಲೆಕ್ಕಪರಿಶೋಧನಾಧಿಕಾರಿ	
4	94/2001	1) ಶ್ರೀ ಸುಧಾಕರ ಕುಲಕರ್ಣಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 2) ಶ್ರೀ ಖಾಜಾ ಮಸೂದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	ರೂ.866.13 ಲಕ್ಷಗಳು. ಈ ಬಗ್ಗೆ ವಿಚಾರಣಾ ವರದಿ ಬಂದಿದೆ. ಪರಿಶೀಲನೆಯಲ್ಲಿದೆ.
5	83/1996 (ಭಾ)	1) ಶ್ರೀ ಬಸವರಾಜ ಸಲಗಾರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಅಶೋಕ ಡೋಯಿಜೋಡೆ, ಪ್ರಥಮ ದರ್ಜೆ ಉಗ್ರಾಣ ಪಾಲಕ 3) ಶ್ರೀ ಎಲ್.ಎ.ವಿಶ್ವನಾಥ, ಕಾವಲುಗಾರ 4) ಶ್ರೀ ಮಹ್ಮದ್ ಖಾಜಾ, ಕಾವಲುಗಾರ	ರೂ.2.41 ಲಕ್ಷಗಳನ್ನು ಆಪಾದಿತರಿಂದ ವಸೂಲಿ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಜಸಂಇ 83 ಸೇಇವಿ 96(ಭಾ), ದಿನಾಂಕ:4/6/2008 ರ ಅನ್ವಯ ದಂಡನೆ ವಿಧಿಸಲಾಗಿದೆ.

		5) ಶ್ರೀ ಮನೋಹರ, ಕಾವಲುಗಾರ 6) ಶ್ರೀ ಅಬ್ದುಲ್ ಹಮೀದ, ಕಾವಲುಗಾರ 7) ಶ್ರೀ ಹಣಮಂತ, ಕಾವಲುಗಾರ 8) ಶ್ರೀ ಗಣಪತಿ, ಕಾವಲುಗಾರ 9) ಶ್ರೀ ಪಟ್ಟಣಕರ ಪಾಂಡುರಂಗ, ಸಹಾಯಕ ಇಂಜಿನಿಯರ್	
6	148/99	1) ಶ್ರೀ ಎನ್.ಎಲ್.ಮೇತ್ರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಪಿ.ಬಿ.ನಂದೂರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 3) ಶ್ರೀ ಗುಣಶೀಲ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 4) ಶ್ರೀ ಶಂಕರಪ್ಪಾ ಸುರವರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 5) ಶ್ರೀ ಎಸ್.ಜೆ.ಗುಗ್ಗವಾಡ, ಸಹಾಯಕ ಕಾರ್ಯಪಾಲಕ	ರೂ.270.95 ಲಕ್ಷಗಳು ಈ ಪ್ರಕರಣದಲ್ಲಿ ವಿಚಾರಣೆ ನಡೆಯುತ್ತಿದೆ.

		ಇಂಜಿನಿಯರ್ (ನಿವೃತ್ತ) 6) ಶ್ರೀ ಸಿ.ನಂಜೇಗೌಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 7) ಶ್ರೀ ಹರಿಹರ ಸದಾಶಿವರಾವ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 8) ಶ್ರೀ ಎಸ್.ಎ.ಶಫಿಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 9) ಶ್ರೀ ಘಬ್ಬಾ ರವಿಕಿರಣ, ಸಹಾಯಕ ಇಂಜಿನಿಯರ್ 10) ಶ್ರೀ ಲಕ್ಷ್ಮಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 11) ಶ್ರೀ ಹೆಚ್.ಆರ್.ಕೃಷ್ಣಮೂರ್ತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 12) ಶ್ರೀ ಎಸ್.ಕೆ.ಗಾಯತೊಂಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 13) ಶ್ರೀ ಬಿ.ಎಸ್.ಬಿರಾದಾರ, ಸಹಾಯಕ ಇಂಜಿನಿಯರ್ 14) ಶ್ರೀ ಮೋಹನ ಬಾಚಾ, ಲೆಕ್ಕಪರಿಶೋಧನಾಧಿಕಾರಿ 15) ಶ್ರೀ ದೇವೇಂದ್ರಪ್ಪಾ,	

		ಲೆಕ್ಕಪರಿಶೋಧನಾಧಿಕಾರಿ 16) ಶ್ರೀ ಗುಂಡಪ್ಪಾ, ಲೆಕ್ಕಪರಿಶೋಧನಾಧಿಕಾರಿ 17) ಶ್ರೀ ವೀರಶೆಟ್ಟಿ, ಲೆಕ್ಕಪರಿಶೋಧನಾಧಿಕಾರಿ -	
7	173-2004	1) ಶ್ರೀ ಹರಿಹರ ಸದಾಶಿವರಾವ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಎಂ.ಎಸ್.ನಾಗರಾಜ್, ಕಾರ್ಯಪಾಲಕ ಇಂಜಿನಿಯರ್ 3) ಶ್ರೀ ಲಕ್ಷ್ಮಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 4) ಶ್ರೀ ಸೂರ್ಯಕಾಂತ ಶೇಂದ್ರೆ, ಸಹಾಯಕ ಇಂಜಿನಿಯರ್ 5) ಶ್ರೀ ವಿದ್ಯಾಸಾಗರ, ಸಹಾಯಕ ಇಂಜಿನಿಯರ್ 6) ಶ್ರೀ ಸುಭಾಷ ಥಗೆ, ಕಿರಿಯ ಇಂಜಿನಿಯರ್ 7) ಶ್ರೀ ಅಣ್ಣಪ್ಪಾ, ಕಿರಿಯ ಇಂಜಿನಿಯರ್ 8) ಶ್ರೀ ವಿ.ಜಗನ್ನಾಥರಾವ್, ಲೆಕ್ಕಪರಿಶೋಧನಾಧಿಕಾರಿ	ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರದ ಬಗ್ಗೆ ವಿಚಾರಣೆ ನಡೆಯುತ್ತಿದೆ.
8	38/2004	1) ಶ್ರೀ ಅನಿಲ್‌ಕುಮಾರ್ ಗರುಡಕರ್, ಸಹಾಯಕ ಕಾರ್ಯಪಾಲಕ	ರೂ.66,95,389/- ಆರ್ಥಿಕ ನಷ್ಟದ ಆರೋಪವಿದ್ದು ಇಲಾಖಾ

		ಇಂಜಿನಿಯರ್ 2) ಶ್ರೀ ಎಸ್.ಎ.ಢಗೆ, ಲೆಕ್ಕಪರಿಶೋಧನಾಧಿಕಾರಿ (ಪ್ರಭಾರಿ)	ವಿಚಾರಣೆ ನಡೆಯುತ್ತಿದೆ.
9	89/2002	1) ಶ್ರೀ ಬಸವರಾಜ ಹಾರಕುಡೆ, ಸಹಾಯಕ ಇಂಜಿನಿಯರ್ 2) ಶ್ರೀ ರಾಮಚಂದ್ರ, ಕಿರಿಯ ಇಂಜಿನಿಯರ್	ರೂ.5,30,419/- ವಿಚಾರಣಾ ವರದಿ ಬಂದಿದೆ. ಪರಿಶೀಲನೆಯಲ್ಲಿದೆ.
10	181/2004	1) ಶ್ರೀ ಹರಿಹರ ಸದಾಶಿವರಾವ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ರಾಜುಡಾಂಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 3) ಶ್ರೀಎನ್.ಟಿ.ಕೋಳೇಕರ್, ಸಹಾಯಕ ಇಂಜಿನಿಯರ್ 4) ಶ್ರೀ ವಿ.ಕೆ.ಭಂಜಂತ್ರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 5) ಶ್ರೀ ಕೆ.ಎಸ್.ನಂದಕುಮಾರ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 6) ಶ್ರೀ ಎಂ.ಡಿ.ಭಂಜಂತ್ರಿ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	ರೂ.1,15,858/- ಆರ್ಥಿಕ ನಷ್ಟ. ವಿಚಾರಣಾ ವರದಿ ಬಂದಿದೆ. ಪರಿಶೀಲನೆಯಲ್ಲಿದೆ. ನಿವೃತ್ತ ಅಧಿಕಾರಿಗಳಿಂದ ಉಂಟಾದ ಆರ್ಥಿಕ ನಷ್ಟ ವಸೂಲು ಮಾಡುವ ಬಗ್ಗೆ ಸಿವಿಲ್‌ದಾವೆ ಹೂಡಲು ಕ್ರಮ ಕೈಗೊಳ್ಳಲಾಗಿದೆ.

		7) ಶ್ರೀ ಎಸ್.ರಾಮಚಂದ್ರ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 8) ಶ್ರೀ ಎಂ.ಬಿ.ಮುದಿಯಪ್ಪನವರ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 9) ಶ್ರೀ ವೈಜನಾಥ ಚಿಮಕೋಡೆ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 10) ಶ್ರೀ ವಿ.ಹೆಚ್.ಅಗರಖೇಡ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 11) ಶ್ರೀ ಎಂ.ಬಿ.ವೆಂಕಟರೆಡ್ಡಿ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 12) ಶ್ರೀ ಬಿ.ಎಸ್.ಬಂತೂರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 13) ಶ್ರೀ ಜಿ.ನಾರಾಯಣರಾವ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 14) ಶ್ರೀ ವಿ.ವೆಂಕಟೇಶ್, ಸಹಾಯಕ ಕಾರ್ಯಪಾಲಕ	

		ಇಂಜಿನಿಯರ್ (ನಿವೃತ್ತ) 15) ಶ್ರೀ ಎನ್.ಎಲ್.ಮೇತ್ರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 16) ಶ್ರೀ ಪಿ.ಬಿ.ನಂದೂರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 17) ಶ್ರೀ ಶೇಖ್ ಆಲಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	
11	185/2005	1) ಶ್ರೀ ಕೆ.ಬಿ.ಶಂಕರನಾರಾಯಣ, ಮುಖ್ಯ ಇಂಜಿನಿಯರ್ (ನಿವೃತ್ತ) 2) ಶ್ರೀ ಬಿ.ಡಿ.ಪಾಂಡುರಂಗರಾವ್, ಅಧೀಕ್ಷಕ ಇಂಜಿನಿಯರ್ (ನಿವೃತ್ತ) 3) ಶ್ರೀ ಕೆ.ಹನುಮಂತಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 4) ಶ್ರೀ ವಿ.ಜೆ.ಖೇಣೇದ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 5) ಶ್ರೀ ಸೈಯದ್ ಮಹಮದ್ ಹುಸೇನ್, ಕಾರ್ಯಪಾಲಕ	ರೂ.266.00 ಲಕ್ಷಗಳ ಆರೋಪವಿದ್ದು, ನಿವೃತ್ತ ಅಧಿಕಾರಿಗಳ ಮೇಲೆ ಸಿವಿಲ್‌ದಾವೆ ಹೂಡಲು ಕ್ರಮ ಕೈಗೊಂಡಿದೆ ಹಾಗೂ ಸೇವೆಯಲ್ಲಿರುವ ಶ್ರೀ ಗಿರೀಶ್ ಕುಮಾರ್‌ರವರ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ.

		ಇಂಜಿನಿಯರ್ (ನಿವೃತ್ತ) 6) ಶ್ರೀ ಎಸ್.ಕೆ.ಗಾಯತೊಂಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) (ಸಿವಿಲ್ ದಾವೆ) 7) ಶ್ರೀ ಗಿರೀಶ್‌ಕುಮಾರ್, ಸಹಾಯಕ ಇಂಜಿನಿಯರ್	
12	74/2007	1) ಶ್ರೀ ಎಸ್.ಕ್ಯೂ.ಖಾದ್ರಿ, ಸಹಾಯಕ ಇಂಜಿನಿಯರ್ 2) ಶ್ರೀ ಬಿ.ಎಲ್.ಚಂದ್ರ, ಸಹಾಯಕ ಇಂಜಿನಿಯರ್ 3) ಶ್ರೀ ಬಿ.ಎಸ್.ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 4) ಶ್ರೀ ನಗೇಶ ಮಂಠಾಳೆ, ಸಹಾಯಕ ಇಂಜಿನಿಯರ್ 5) ಶ್ರೀ ವಿ.ಡಿ.ಪೂಜಾರಿ, ಕಿರಿಯ ಇಂಜಿನಿಯರ್ 6) ಶ್ರೀ ಹೆಚ್.ಜ್ಞಾನಪ್ರಕಾಶ್, ಪ್ರಥಮ ದರ್ಜೆ ಉಗ್ರಾಣ ಪಾಲಕ 7) ಶ್ರೀ ದಯಾನಂದ ಸ್ವಾಮಿ, ಪ್ರಥಮ ದರ್ಜೆ ಉಗ್ರಾಣ ಪಾಲಕ 8) ಶ್ರೀ ಚಂದ್ರಕಾಂತ, ಉಗ್ರಾಣಪಾಲಕ 9) ಶ್ರೀ ವಿಶ್ವನಾಥ ಕಂಡ್ರೆ, ಉಗ್ರಾಣ ಪಾಲಕ	ರೂ.50.00 ಲಕ್ಷಗಳ ಆರೋಪ ವಿದ್ದು, ಸೇವೆಯಲ್ಲಿರುವವರನ್ನು ಅಮಾನತ್ತುಗೊಳಿಸಲಾಗಿದೆ. ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಆರೋಪ ಪಟ್ಟಿ ಸಿದ್ಧಪಡಿಸಲಾಗುತ್ತಿದೆ.

		10) ಶ್ರೀ ಶಾಂತವೀರ, ಲೆಕ್ಕಪರಿಶೋಧನಾಧಿಕಾರಿ (ಪ್ರಭಾರ 11) ಶ್ರೀ ಸುಧಾಕರ ಕುಲಕರ್ಣಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 12) ಶ್ರೀ ಮುರಳೀಧರರಾವ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 13) ಶ್ರೀ ಟಿ.ಆರ್.ಪವಾರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ) 14) ಶ್ರೀ ಎಸ್.ಎ.ಶಫಿ ಅಹಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 15) ಶ್ರೀ ಎಸ್.ಕೆ.ಸಿದ್ದಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 16) ಶ್ರೀ ಮುಂಡಲೀಕ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ 17) ಶ್ರೀ ಎಂ.ಎಸ್.ನಾಗರಾಜ್, ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ) 18) ಶ್ರೀ ಮುರಕುಂದೆ ಸುಭಾಷ,	

		ಕಾರ್ಯಪಾಲಕ ಇಂಜಿನಿಯರ್	
13	187/2004	1) ಶ್ರೀ ವಿ.ಜಿ.ಖೇಣದ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಕೆ.ಹನುಮಂತ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 3) ಶ್ರೀ ಪಾಂಡುರಂಗ ಬಿರಾದಾರ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	ರೂ.121.30 ಲಕ್ಷಗಳ ಆರೋಪ ವಿದ್ದು ಇವರುಗಳ ವಿರುದ್ಧ ಸಿವಿಲ್ ದಾವೆ ಹೂಡಲು ಕ್ರಮ ಕೈಗೊಳ್ಳಲಾಗಿದೆ.
14	21/2003	1) ಶ್ರೀ ಎಸ್.ಎ.ಶಫಿ ಅಹಮದ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಹರಿಹರ ಸದಾಶಿವರಾವ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 3) ಶ್ರೀ ಸೈಯದ್ ಹುಸೇನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 4) ಶ್ರೀ ಎಂ.ಜೆಡ್.ಬಾಬರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 5) ಶ್ರೀ ವಿ.ಕೆ.ಭಜಂತ್ರಿ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	ರೂ.1.53 ಲಕ್ಷಗಳ ಆರೋಪವಿದ್ದು ಇವರುಗಳ ವಿರುದ್ಧ ಸಿವಿಲ್ಲ ದಾವೆ ಹೂಡಲು ಕ್ರಮ ಕೈಗೊಳ್ಳಲಾಗಿದೆ.

		6) ಶ್ರೀ ಹೆಚ್.ವಿ.ಪರಮೇಶ್ವರಯ್ಯ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 7) ಶ್ರೀ ಜೆ.ಸಿ.ಸುರಪೂರ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 8) ಶ್ರೀ ಜಿ.ಎಂ.ಸದಾಶಿವಯ್ಯ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 9) ಶ್ರೀ ಹೆಚ್.ಪುಂಡಲೀಕ್, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 10) ಶ್ರೀ ಬಿ.ಎಸ್.ಶಿರವಾಳ, ಸಹಾಯಕ ಇಂಜಿನಿಯರ್ (ಮರಣ)	
15	157/2004 (ಕ್ರಿಮಿನಲ್)	1) ಶ್ರೀ ಹನುಮಂತಪ್ಪಾ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 2) ಶ್ರೀ ಪಾಂಡುರಂಗ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 3) ಶ್ರೀ ಜೆ.ಸಿ.ಸುರಪೂರ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 4) ಶ್ರೀ ವಿ.ಹೆಚ್.ಅಗರಖೇಡ, ಅಧೀಕ್ಷಕ ಇಂಜಿನಿಯರ್ (ನಿವೃತ್ತ) 5) ಶ್ರೀ ಸೂರ್ಯಕಾಂತ, ಸಹಾಯಕ	ರೂ.16.52 ಲಕ್ಷಗಳ ಆರೋಪ ವಿದ್ದು ಇವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮ ಕೈಗೊಂಡಿದೆ.

		ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	
16	364/2004	1) ಶ್ರೀ ವಿ.ಹೆಚ್.ಅಗರಖೇಡ, ಅಧೀಕ್ಷಕ ಇಂಜಿನಿಯರ್ (ನಿವೃತ್ತ) 2) ಶ್ರೀ ಎಸ್.ಕೆ.ದೇಸಾಯಿ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 3) ಶ್ರೀ ಕೆ.ದಿನಕರರಾವ್, ಅಧೀಕ್ಷಕ ಇಂಜಿನಿಯರ್ (ನಿವೃತ್ತ) 4) ಶ್ರೀ ಎಂ.ಬಿ.ವೆಂಕಟರೆಡ್ಡಿ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 5) ಶ್ರೀ ಎಂ.ವಿ.ಸದಾಶಿವಯ್ಯ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 6) ಶ್ರೀ ಪಿ.ಸಿದ್ದಪ್ಪಾ , ಮುಖ್ಯ ಇಂಜಿನಿಯರ್ (ನಿವೃತ್ತ) 7) ಶ್ರೀ ಬಿ.ಶಂಕರಪ್ಪಾ , ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 8) ಶ್ರೀ ಕೆ.ಹನುಮಂತಪ್ಪಾ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) 9) ಶ್ರೀ ಹೆಚ್.ಮುಂಡಲೀಕರಾವ್, ಕಾರ್ಯಪಾಲಕ	ರೂ.1509.67, ಲಕ್ಷಗಳ ಆರೋಪವಿದ್ದು ಸದರಿ ಆರೋಪ ಇಲಾಖಾ ವಿಚಾರಣೆಯಿಂದ ಸಾಬೀತಾಗಿರುವುದಿಲ್ಲ. ವಿಚಾರಣಾ ವರದಿಯನ್ನು ಒಪ್ಪಿ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 364 ಸೇಇವಿ 2004, ದಿನಾಂಕ:27/10/2007ರಲ್ಲಿ ದೋಷ ಮುಕ್ತರನ್ನಾಗಿ ಮಾಡಿದೆ.

		ಇಂಜಿನಿಯರ್ (ನಿವೃತ್ತ) 10) ಶ್ರೀ ಎಸ್.ಕೆ.ಗಾಯತೊಂಡ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)	

ಶ್ರೀ ಈಶ್ವರ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರೇ ತಿಳಿಸಿದಂತೆ ಈ ಯೋಜನೆ 1971-72 ರಲ್ಲಿ ಪ್ರಾರಂಭವಾಗಿತ್ತು. ಆಗ ಅದರ ಅಂದಾಜು ಮೊತ್ತ 9.90 ಕೋಟಿ ಯಾಗಿದ್ದು ಇಲ್ಲಿಯವರೆಗೆ ಈ ಯೋಜನೆಗೆ ಖರ್ಚಾಗಿರುವ ಒಟ್ಟು ವೆಚ್ಚ 472.81 ಕೋಟಿ ರೂಪಾಯಿಗಳಾಗಿರುತ್ತದೆ. ಅವರು 35,000 ಎಕರೆ ಭೂಮಿ ನೀರಾವರಿಗೆ ಒದಗಿಸಬೇಕಾಗಿತ್ತು. ಇಲ್ಲಿಯವರೆಗೆ 4,182 ಎಕರೆ ಪ್ರದೇಶಗಳಿಗೆ ಮಾತ್ರ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಈಗಲಾದರೂ ಈ ಯೋಜನೆಗೆ ಕಾಲಮಿತಿ ಇಟ್ಟುಕೊಳ್ಳಬೇಕು. ಏಕೆಂದರೆ, ಮಾನ್ಯ ಸಚಿವರು ಮೊನ್ನೆ ಶಾಸಕರ ಸಭೆಯನ್ನು ಕರೆದಿದ್ದರು. ಸಭೆಯಲ್ಲಿ ಅತೀ ಶೀಘ್ರವಾಗಿ ಈ ಯೋಜನೆಯನ್ನು ಪೂರ್ತಿ ಮಾಡುತ್ತೇವೆಂದು ಹೇಳಿ ಪರಿಶೀಲನೆ ಮಾಡಿದ್ದಾರೆ. ಅದಕ್ಕೆ ಅವರಿಗೆ ಅಭಿನಂದನೆಯನ್ನು ಹೇಳುತ್ತಾ, ಈಗಲಾದರೂ ಈ ಯೋಜನೆಯನ್ನು ಯಾವಾಗ ಮುಗಿಸುತ್ತೀರೆಂದು ತಿಳಿಸಬೇಕೆಂದು ಕೇಳುತ್ತೇನೆ ಅದರ ಜೊತೆಯಲ್ಲಿ ಈ ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರ ಪ್ರಕರಣಗಳಾಗಿವೆ. ಯೋಜನೆಯ ಅನುಷ್ಠಾನದಲ್ಲಿ ಎಷ್ಟು ಮೊತ್ತದ ಹಣ ಅವ್ಯವಹಾರವಾಗಿದೆ ಎಂದು ನಾನು ಕೇಳ ಬಯಸುತ್ತೇನೆ. ಮತ್ತೊಂದು ಮುಖ್ಯವಾದಂತಹ ವಿಷಯವೆಂದರೆ, ಅವರೇ ತಿಳಿಸಿದಂತಹ ಉತ್ತರದಲ್ಲಿ 2004ರಲ್ಲಿ ಪ್ರಕರಣದ ಸಂಖ್ಯೆ 364 ರಲ್ಲಿ 15 ಕೋಟಿ ರೂಪಾಯಿ ಹಣದ ದುರುಪಯೋಗದ ಆರೋಪವಿದ್ದರೂ ಸಹ ಇದು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿಲ್ಲವೆಂದು ತಿಳಿಸಿದ್ದಾರೆ. ಇದರಲ್ಲಿ ಭಾಗಿಗಳಾಗಿದ್ದವರನ್ನು ದೋಷ ಮುಕ್ತರನ್ನಾಗಿ ಮಾಡಲಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ. ಒಂದು ವೇಳೆ ಇದು ಸಾಬೀತಾಗಿಲ್ಲವೆಂದರೆ ಅವ್ಯವಹಾರವಾಗಿದ್ದಂತಹ 15 ಕೋಟಿ ರೂಪಾಯಿ ಎಲ್ಲಿಗೆ ಹೋಯಿತು ಎಂದು ತಿಳಿಸಬೇಕು. ಜೊತೆಗೆ ಇದರಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು 138 ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. 138 ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೇವೆ ಎಂದು ಹೇಳಲಾಗಿದೆ. ಅದರಲ್ಲಿ ಬರೀ ಸಣ್ಣಪುಟ್ಟ ಕ್ರಮಗಳಾದ increment held up ಆಗಿದೆ

ಅಷ್ಟೆ. ಏನು ದುರುಪಯೋಗವಾಗಿದೆ ಅದರ ಬಗ್ಗೆ ಸಿವಿಲ್ ದಾವೆ ಹೂಡಿ ಆ ಹಣವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಏನಾದರೂ ಹೂಡಿ ಅಥವಾ ಲೋಕಾಯುಕ್ತಕ್ಕೆ ಕೊಟ್ಟು ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯ, ಈ ಯೋಜನೆ 1972ರಲ್ಲಿ ಪ್ರಾರಂಭವಾದರೂ ಕೂಡ, ಆಗ ಇದಕ್ಕೆ 10 ಕೋಟಿ ಇತ್ತು. ಈಗ 472ಕೋಟಿ ರೂಪಾಯಿಗಳು ಖರ್ಚು ಆಗಿದೆ. ಇದು ಏಕೆ ಆಗಿದೆಯೆಂಬ ಬಗ್ಗೆ ನಾನು ಉತ್ತರದಲ್ಲಿ ತಿಳಿಸಿದ್ದೇನೆ. ಈ ಯೋಜನೆಗೆ 1972ರಲ್ಲಿ sanction ಕೊಟ್ಟರೂ ಕೂಡ ಇದರ 1992 ರ ವರೆಗೆ ಯಾವುದೇ ಕೆಲಸವಾಗಿರಲಿಲ್ಲ, CWC ಯವರು clearance ಕೊಟ್ಟಿರಲಿಲ್ಲ. 1992ರ ನಂತರ CWC ಯವರು clearance ಕೊಟ್ಟ ನಂತರ ಇದರ ಕಾರ್ಯ ಆರಂಭವಾಯಿತು. 1997-98ರಲ್ಲಿ AIBP scheme ಬಂತು, ಕೇಂದ್ರಸರ್ಕಾರದ Accelerated Irrigation Benefit Programme ಬಂದ ಮೇಲೆ ಈ ಕೆಲಸ ಚುರುಕುಗೊಂಡಿದೆ. ಈಗ ಇದು ಒಂದು ಮುಕ್ತಾಯದ ಹಂತದಲ್ಲಿದೆ. ಇಲ್ಲಿ ಪ್ರಮುಖವಾಗಿ ಇರುವಂಥಾದ್ದು ಒಟ್ಟು 137 right bank canal ಏನು ಇದೆ, ಅದರಲ್ಲಿ ಕಳೆದ ವರ್ಷ 80 ಕಿ.ಮೀ.ವರೆಗೆ ನೀರನ್ನು ಹರಿಸಿದ್ದೇವೆ. ಎಲ್ಲೆಲ್ಲಿ leakage ಇದೆ, ಅವುಗಳನ್ನು ಈಗಾಗಲೇ plug ಮಾಡಿದ್ದಾರೆ. ಇದರಲ್ಲಿ ಪ್ರಮುಖವಾದ ಕಾಮಗಾರಿ 127 ರಿಂದ 128ನೇ ಕಿ.ಮೀ.ನಲ್ಲಿ aquaduct ಏನು ಇದೆ, ನಾನು ಅದನ್ನು ಮೊನ್ನೆ ಹೋಗಿ ತಪಾಸಣೆ ಮಾಡಿದ್ದೇನೆ. ಅದನ್ನು ಕೂಡಲೇ repair ಮಾಡುವುದಕ್ಕೆ ಹೇಳಿದ್ದೇನೆ. ಆ ಕಾರ್ಯ ಈ ಗಾಗಲೇ ಪ್ರಾರಂಭವಾಗಿದೆ, ಅದಕ್ಕೆ ಬೇಕಾದಂಥ ಹಣವನ್ನು ಕೂಡ ಒದಗಿಸಲಾಗಿದೆ. ಇನ್ನು ಕಳೆದ ವರ್ಷ ನಾವು ಸುಮಾರು ಐದು ಸಾವಿರ ಎಕರೆಗೆ notify ಮಾಡಿದ್ದೆವು. ಈ ಎಲ್ಲಾ ರಿಪೇರಿ ಕಾಮಗಾರಿಯನ್ನು ನಾವು ಜೂನ್ 2009 ರೊಳಗೆ ಮುಗಿಸಬೇಕೆಂದು programme ಹಾಕಿಕೊಂಡಿದ್ದೇವೆ. ಅದು ಮುಗಿದರೆ ಇನ್ನೊಂದು 20,000 ಎಕರೆಗೆ ನೀರಾವರಿಯನ್ನು ನಾವು ಮಾಡುವುದಕ್ಕೆ ಸಾಧ್ಯವಿದೆ. ಇನ್ನು ತಾವು ಅಧಿಕಾರಿಗಳ ಬಗ್ಗೆ ಕೇಳಿದ್ದೀರಿ. ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಮನವಿ ಇದೆ, ಈ ನೀರಾವರಿ ಇಲಾಖೆಯಲ್ಲಿ ಎಲ್ಲಾ ಯೋಜನೆಗಳಲ್ಲೂ ಕಾವೇರಿ ಕಣಿವೆಯಲ್ಲಿರಬಹುದು, ಕೃಷ್ಣ ಕಣಿವೆಯಲ್ಲಿರಬಹುದು, ಕಾಮಗಾರಿ ಪ್ರಾರಂಭ ಮಾಡುವುದಕ್ಕೆ ಇರುವಂಥ estimateಗೂ, ಕೆಲಸ ಮಾಡುವಾಗ ಇರುವಂಥ estimateಗೂ, ಬಹಳಷ್ಟು ವ್ಯತ್ಯಾಸವಿರುತ್ತದೆ. ಅದಕ್ಕೆ ಸಕಾರಣಗಳು ಇವೆ, ಕೆಲವೆಲ್ಲಾ ಬೇರೆ ರೀತಿಯ ಭ್ರಷ್ಟಾಚಾರಕ್ಕೆ ಅನುಕೂಲವಾಗುವಂಥ ಕಾರಣಗಳು ಕೂಡ ಇವೆ.

ಕೆಲವು ಕಾಮಗಾರಿಗಳು ಸಕಾರಣವಾಗಿ approval ಮಾಡಿರುವಂಥಾದ್ದಕ್ಕೂ ಅಪಾದನೆ ಇದೆ, ಮತ್ತೆ ಭ್ರಷ್ಟಾಚಾರ ಮಾಡಿರುವಂಥಾದ್ದಕ್ಕೂ ಅಪಾದನೆ ಎದೆ. ಒಂದೊಂದು ಯೋಜನೆಯಲ್ಲಿ 130, 150, 125 ಅಧಿಕಾರಿಗಳ ಬಗ್ಗೆ ವಿಚಾರಣೆ ನಡೆಯುತ್ತಿದೆ. ಈ ರೀತಿ ನಾವು ಯಾವ್ಯಾವ ಕಾಮಗಾರಿಗಳಲ್ಲಿ ಏನೇನು ಆಗಿದೆ, 20 ವಷ, 30ವರ್ಷ, ಈಗ ಅವುಗಳ ಬಗ್ಗೆ ನಾವು ಚರ್ಚೆ ಮಾಡದೇ ಯಾರ್‍ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ action ತೆಗೆದುಕೊಳ್ಳಬೇಕು. ಈ ಪ್ರಕರಣದಲ್ಲಿ ನಾನು ವಿವರವಾಗಿ ಉತ್ತರದಲ್ಲಿ ಕೊಟ್ಟಿದ್ದೇನೆ. ಆ ಅಧಿಕರಿಗಳ ಹೆಸರು, ಅವರಿಂದ ಎಷ್ಟು ನಷ್ಟವಾಗಿದೆ, ಆರೋಪ ಎಷ್ಟು ಇತ್ತು, ವಿಚಾರಣೆ ಏನಾಗಿದೆ, ದಂಡನೆ ಏನೇನು ಕೊಟ್ಟಿದ್ದೇವೆಂಬುದನ್ನು ಕೊಟ್ಟಿದ್ದೇವೆ. ಉದಾಹರಣೆಗೆ ಸೈಯದ್ ಮಹಮದ್ ಹುಸೇನ್‌ರವರ ಮೇಲೆ ಒಂದು ಕೋಟಿ ರೂಪಾಯಿಗಳಷ್ಟು ನಷ್ಟ ಮಾಡಿರುವ ಆರೋಪವಿದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಾನು ವಿಶೇಷವಾಗಿ ಪ್ರಕರಣ ಸಂಖ್ಯೆ: 364/2004ರಲ್ಲಿ ತಾವೇ ತಿಳಿಸಿದಂತೆ 15 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಅದರ ಮೇಲೆ ಇಲಾಖಾ ತನಿಖೆ ನಡೆಯುತ್ತಿದೆಯೆಂದು ಹೇಳಿದೆ. ಈ 15 ಕೋಟಿ ರೂಪಾಯಿಗಳ ಬಗ್ಗೆ ಇಲಾಖಾ ತನಿಖೆಯಿಂದ ಇದು ಸಾಬೀತು ಆಗಿಲ್ಲವೆಂದು ದೋಷ ಮುಕ್ತರನ್ನಾಗಿ ಮಾಡಲಾಗಿದಯೆಂದು ತಿಳಿಸಿದ್ದೀರಿ. ಅಂದ ಮೇಲೆ ಈ 15 ಕೋಟಿ ರೂಪಾಯಿಗಳ ಅವ್ಯವಹಾರ ಎಲ್ಲಿ ಆಯಿತು?

ಶ್ರೀ ಬಸವರಾಜ ಬೊಮ್ಮಾಯಿ: ಕೆಲವು ಅಪಾದನೆಗಳು ಸಾಬೀತು ಆಗುವುದಿಲ್ಲ, ಆ ರೀತಿಯಾಗಿ ಸಾಬೀತು ಆಗಿಲ್ಲ, ಅಷ್ಟೆ. ಈ ಬಗ್ಗೆ ವಿಚಾರಣಾ ವರದಿ ಏನು ಇದೆ, ಅದನ್ನು ತಮಗೆ ಕೊಟ್ಟಿದ್ದೇವೆ. ನಿಮಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಇದ್ದರೆ, ನಿಜವಾಗಿಯೂ ಅಲ್ಲಿ 15 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆಯೆಂಬ ಪುರಾವೆ ಇದ್ದರೆ, ನಾನು ಆ ಬಗ್ಗೆ ಪುನರ್ ವಿಚಾರಣೆ ಮಾಡುವುದಕ್ಕೆ ತಯಾರು ಇದ್ದೇನೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಇಲ್ಲಿ ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ತಿಳಿಸಿದೆ. ನಾವು ಇದನ್ನು ಹೇಳುತ್ತಾ ಇಲ್ಲ, ಸರ್ಕಾರದ ಉತ್ತರದಲ್ಲಿ ಇದು ಬಂದಿದೆ. ಅದಕ್ಕೆ ಇದು ಮುಖ್ಯವಾದ ವಿಷಯವೆಂದು ನಾನು ಸರ್ಕಾರದಿಂದ ಉತ್ತರವನ್ನು ಬಯಸುತ್ತಿದ್ದೇನೆ. ಇದರಲ್ಲಿ ಮುಖ್ಯವಾದ ವಿಚಾರವೆಂದರೆ, ಈ ಯೋಜನೆಯಿಂದ ಬೀದರ್ ಜಿಲ್ಲೆಯಲ್ಲಿ ಅನೇಕ ಜನರು ಸುಮಾರು ಹಳ್ಳಿಗಳಲ್ಲಿ ತಮ್ಮ ಭೂಮಿಯನ್ನು ಕಳೆದು ಕೊಂಡಿದ್ದಾರೆ. ಸಂತ್ರಸ್ಥರು ಅನೇಕ ಬಾರಿ ಹೋರಾಟವನ್ನು ಮಾಡಿದ್ದಾರೆ. ಅವರಿಗೆ ಎಲ್ಲರಿಗಿಂತ ಕಡಿಮೆ ಹಣ ಸಿಕ್ಕಿದೆ, ಹೀಗಾಗಿ ಇದಕ್ಕೆ ಕಳೆದ ಬಾರಿ ಒಂದು

High Power Committee ಮಾಡಲಾಗಿತ್ತು. ಅವರಿಗೆ ಅಲಮಟ್ಟಿ ಮಾದರಿ ಯೋಜನೆಯಲ್ಲಿ ಪರಿಹಾರವನ್ನು ಕೊಡಬೇಕೆಂದು ಇತ್ತು. ಅದರ ಬಗ್ಗೆ ಏನು ಆಗಿದೆ? ಮತ್ತು ಅವರಿಗೆ ಪುನರ್‌ವಸತಿ.....

ಅಧ್ಯಕ್ಷರು: ಇದು ನಿಮ್ಮ ಪ್ರಶ್ನೆಯಲ್ಲಿ ಇಲ್ಲ. ಎಲ್ಲವನ್ನು ಒಂದೇ ಪ್ರಶ್ನೆಯಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ.

ಶ್ರೀ ಈಶ್ವರ್ ಬೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಇವರಿಗೆ ಪುನರ್ ವಸತಿಯನ್ನು ಕೊಟ್ಟಿಲ್ಲ, ಅದರ ಬಗ್ಗೆ ಸನ್ಮಾನ್ಯ ಮಂತ್ರಿಯವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನೀವು ಆ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿ. ಮುಂದಿನ ಪ್ರಶ್ನೆ ಎ.ಎಸ್.ಪಾಟೀಲ್‌ರವರ ಕೇಳೀ.

ಡೋಣಿ ನದಿ ಹೂಳೆತ್ತುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	72(261)
ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀ. ಪಾಟೀಲ್. ಎ.ಎಸ್ (ನಡಹಳ್ಳಿ) (ದೇವರ ಹಿಪ್ಪರಗಿ)
ಉತ್ತರಿಸಬೇಕಾದ ಸಚಿವರು	:	ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಡೋಣಿ ನದಿ ಪ್ರವಾಹದಿಂದ ಬಿಜಾಪೂರ ಜಿಲ್ಲೆಯಲ್ಲಿ ಪ್ರತಿವರ್ಷ ಅಪಾರ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಬಿಜಾಪುರ ಜಿಲ್ಲೆ ಡೋಣಿ ನದಿ ಹೊಳೆತ್ತುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ; ಹಾಗಿದ್ದಲ್ಲಿ, ಈ ಬಗ್ಗೆ ಕ್ರಮ ಕೈಗೊಳ್ಳುವುದು ಯಾವಾಗ (ವಿವರ ನೀಡುವುದು);

ಡೋಣಿ ನದಿ ಹೊಳೆತ್ತುವ ಪೈಲೆಟ್ ಯೋಜನೆ Reclamation of Problamatic soils through surface drainage and flood control measures in Sarvad village of Don river, Bijapur Dist." ಎಂಬ ಶಿರೋನಾಮದಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ ಯಡಿ ಭೂಸಂಪನ್ಮೂಲ ವತಿಯಿಂದ ರೂ.4.82353 ಕೋಟಿಗಳಿಗೆ ಅನುಮೋದನೆ ದಿನಾಂಕ:26/5/2003ರ ಪತ್ರದಲ್ಲಿ ದೊರಕಿರುತ್ತದೆ. ಒಟ್ಟು ಯೋಜನಾ ಮೊತ್ತದಲ್ಲಿ ರೂ.3.00483ಕೋಟಿಗಳು

ಕೇಂದ್ರ ಸರ್ಕಾರದ ಭೂಸಂಪನ್ಮೂಲ ಇಲಾಖೆಯಿಂದ ಒದಗಿಸುವುದು ಮತ್ತು ಫಲಾನುಭವಿಗಳಿಂದ ರೂ.1.8187 ಕೋಟಿಗಳನ್ನು ಒದಗಿಸಿಕೊಳ್ಳುವುದು.

ಕರ್ನಾಟಕ ಸರ್ಕಾರವು ದಿನಾಂಕ:24/02/2005 ರ ಪತ್ರದಲ್ಲಿ ಕೃಷ್ಣಾಭಾಗ್ಯ ಜಲ ನಿಗಮಕ್ಕೆ ಫಲಾನುಭವಿಗಳಿಂದ ಒದಗಿಸಿಕೊಳ್ಳಬೇಕಾಗಿದ್ದ ರೂ.1.8187 ಕೋಟಿಗಳಲ್ಲಿ ಶೇ.10 ರಷ್ಟು ಅಂದರೆ ರೂ.0.1818 ಕೋಟಿಗಳನ್ನು ಫಲಾನುಭವಿಗಳಿಂದ ಒದಗಿಸಿಕೊಂಡು ಉಳಿದ ರೂ.16368 ಕೋಟಿಗಳನ್ನು ಕೃಷ್ಣಾಭಾಗ್ಯ ಜಲ ನಿಗಮದಿಂದ ಒದಗಿಸುವಂತೆ ನಿರ್ಧರಿಸಲಾಯಿತು.

ಅದರಂತೆ ದಿನಾಂಕ:17/3/2005ರಂದು ಕೃಷ್ಣಾಭಾಗ್ಯ ಜಲ ನಿಗಮದಿಂದ ಭರಿಸಬೇಕಾಗಿದ್ದ ರೂ.1.6368 ಕೋಟಿಗಳ ಶೇ.50ರಷ್ಟು ಅಂದರೆ ರೂ.81.84 ಲಕ್ಷಗಳನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ಬಿಡುಗಡೆ ಮಾಡಲಾಗಿದೆ.

ಕೃಷಿ ವಿಶ್ವವಿದ್ಯಾ ನಿಲಯ, ಧಾರವಾಡ ವತಿಯಿಂದ ಕೇವಲ ಪ್ರಾರಂಭಿಕ ಚರಂಡಿ, ತನಿಖಾ ಕಾರ್ಯ, ವಿನ್ಯಾಸ ಮತ್ತು ಅಂದಾಜು ತಯಾರಿಕೆ, ಮತ್ತು ತರಬೇತಿ ಕಾರ್ಯಕ್ರಮಗಳು ಮಾತ್ರ ಕೈಗೊಳ್ಳಲಾಗಿರುತ್ತದೆ.

ಸದರಿ ಯೋಜನೆಯ ಪ್ರಗತಿ ಕುಂಠಿತವಾಗಿದ್ದು ಇದನ್ನು ಚುರುಕುಗೊಳಿಸುವ ಉದ್ದೇಶದಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಇವರು ದಿನಾಂಕ:7/3/2008 ರಂದು ಪುನರ್ ಪರಿಶೀಲನಾ ಸಭೆಯನ್ನು ಜರುಗಿಸಿದ್ದು, ಸಭೆಯಲ್ಲಿ ಕೃಷಿ ವಿಶ್ವವಿದ್ಯಾಲ, ಧಾರವಾಡ ಅಧಿಕಾರಿಗಳು ಕೃಷಿ ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ಅನುಭವವುಳ್ಳ ಸಿಬ್ಬಂದಿಯ ಲಭ್ಯತೆ ಇಲ್ಲದೆ ಈ ಯೋಜನೆಯನ್ನು ಕಾರ್ಯಗತಗೊಳಿಸಲು ವಿಶ್ವವಿದ್ಯಾನಿಲಯದಿಂದ ಸಾಧ್ಯವಿರುವದಿಲ್ಲ ವೆಂದು ತಿಳಿಸುತ್ತಾ, ತಾಂತ್ರಿಕ ಅನುಭವ ಹೊಂದಿರುವ ಸಿಬ್ಬಂದಿ ಜಲಸಂಪನ್ಮೂಲ ಇಲಾಖೆಯಲ್ಲಿ ಲಭ್ಯವಿದ್ದು, ಆ ಇಲಾಖೆಯಿಂದ ಬೇರೆ ಯಾವುದಾದರೂ ನಿರ್ಧರಿಸುವ ಮೂಲಗಳಿಗೆ ಕೂಡಲೇ ಹಸ್ತಾಂತರಿಸಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಬಹುದೆಂದು ನಿರ್ಧರಿಸಲಾಯಿತು.

ಅದರಂತೆ ಕೃಷಿ ವಿಶ್ವವಿದ್ಯಾನಿಲಯದಿಂದ ಸರ್ಕಾರಕ್ಕೆ ಬರೆದುಕೊಂಡಿರುವ ದಿನಾಂಕ:29/6/2008 ರ ಪತ್ರದಲ್ಲಿ ಯೋಜನೆಯನ್ನು ಜಲಸಂಪನ್ಮೂಲ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ದಿನಾಂಕ:30/6/2008 ರಂದು ಕೃಷಿ ಇಲಾಖೆಯಿಂದ ಸದರಿ ಯೋಜನೆಯನ್ನು ಕೃಷ್ಣಾಭಾಗ್ಯ ಜಲ ನಿಗಮ ವತಿಯಿಂದ ಯೋಜನೆಯನ್ನು ಕೈಗೊಳ್ಳಬಹುದಾಗಿದೆ ಎಂದು ತಿಳಿಸುತ್ತಾ, ಕಡತವನ್ನು ವರ್ಗಾಯಿಸಿರುತ್ತಾರೆ. ಈಗ,

ಯೋಜನೆಯನ್ನು ಜಲಸಂಪನ್ಮೂಲ ಇಲಾಖೆ/ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೊಳ್ಳುವ ಕುರಿತು ಪರಿಶೀಲನೆಯಲ್ಲಿದೆ.

ಇ) ಸದರಿ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಬಿಡುಗಡೆಯಾಗಿದ್ದಲ್ಲಿ, ಕಾಮಗಾರಿ ವಿಳಂಬಕ್ಕೆ ಕಾರಣವೇನು (ವಿವರ ನೀಡುವುದು)?

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಡಿ ಭೂಸಂಪನ್ಮೂಲ ಇಲಾಖೆಯ ಪತ್ರದ ಸಂ:1–5/99–ಟಿಇ ದಿನಾಂಕ:30/12/2003 ರಂದು ಡಿಮ್ಯಾಂಡ್ ಸಂ:78ರ ಮುಖ್ಯ ಲೆಕ್ಕ ಶೀರ್ಷಿಕೆ 2501 ರಡಿಯಲ್ಲಿ ರೂ.1.45 ಕೋಟಿಗಳು ಈ ಯೋಜನೆಗೆ ಬಿಡುಗಡೆಯಾಗಿರುತ್ತದೆ.

ಕೃಷ್ಣಾಭಾಗ್ಯ ಜಲ ನಿಗಮದ ವತಿಯಿಂದ ಮೊದಲನೆ ಕಂತಿನ ಪ್ರತಿಶತ 50% ರಷ್ಟು ರೂ.81.84ಲಕ್ಷಗಳನ್ನು ದಿನಾಂಕ:17/3/2005 ರಂದು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.

ಶ್ರೀ ಎ.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಡೋಣಿ ನದಿ ಪ್ರವಾಹ ಪ್ರತಿ ವರ್ಷ ಏನು ಬರುತ್ತಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೇನೆ. ಅದಕ್ಕೆ ಸರ್ಕಾರ ಗಮನಕ್ಕೆ ಬಂದಿದೆಯೆಂದು ಉತ್ತರವನ್ನು ಕೊಟ್ಟಿದ್ದೆ. ಎರಡನೆಯದಾಗಿ ಡೋಣಿ ನದಿಯ ಹೊಳೆತ್ತುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ, ಎಂದು ಕೇಳಿದ್ದೆ. ಅದಕ್ಕೆ ಒಂದೇ ಶಬ್ದದಲ್ಲಿ ಉತ್ತರವನ್ನು ಕೊಟ್ಟು ಮುಗಿಸಬಹುದಾಗಿತ್ತು. ಅದನ್ನು lengthy ಆಗಿ ಉತ್ತರವನ್ನು ಬರೆದಿದ್ದಾರೆ. ಇದರ ಬಗ್ಗೆ ಕ್ರಮ ಕೈಗೊಳ್ಳವುದು ಯಾವಾಗ ಎಂದು ಕೇಳಿದರೆ, ಅದಕ್ಕೆ ಪರಿಶೀಲನೆಯಲ್ಲಿದೆಯೆಂದು ತಿಳಿಸಿದ್ದಾರೆ. ನಾನು ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ, ಏಕೆಂದರೆ 1999ರಲ್ಲಿ ಕೇಂದ್ರ ಸರ್ಕಾರದ ಸಚಿವರು ಸ್ಥಳಕ್ಕೆ ಭೇಟಿ ಕೊಟ್ಟ ನಂತರ ಕೇಂದ್ರ ಸರ್ಕಾರದಿಂದ ಇದಕ್ಕೆ ಏನು ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದನ್ನೆಲ್ಲಾ ನೀವು ಉತ್ತರದಲ್ಲಿ ಹೇಳಿದ್ದೀರಿ. ಆದರೆ 1999 ರಿಂದ 2008.....

ಅಧ್ಯಕ್ಷರು: ಮಾನ್ಯ ಪಾಟೀಲ್ ರವರೆ, ತಾವು specific ಪ್ರಶ್ನೆಯನ್ನು ಕೇಳಿ. ತಾವು ಬಜೆಟ್ ಭಾಷಣದಲ್ಲಿ ಇದನ್ನು ಹೇಳಿದ್ದೀರಿ. ಈಗ ತಾವು specific ಆಗಿ ಏನು ಆಗಬೇಕೆಂಬುದನ್ನು ಕೇಳಿ. ಅವರು detail ಆಗಿ ಉತ್ತರವನ್ನು ಕೊಟ್ಟಿದ್ದಾರೆ. ಈಗ ಅದರಲ್ಲಿ ಏನಾದರೂ ಸರಿ ಇಲ್ಲವೆಂದರೆ ಹೇಳಿ.

ಶ್ರೀ ಎ.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು specific ಆಗಿಯೇ ಪ್ರಶ್ನೆಯನ್ನು ಕೇಳಿತ್ತಿದ್ದೇನೆ. ಹೂಳೆತ್ತುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ

ಎಂದು ಕೇಳಿದರೆ ಇದೆಯೆಂದು ಅವರು ಹೇಳಿಲ್ಲ. ಅವರು ಉತ್ತರವನ್ನು lengthy ಆಗಿ ಕೊಟ್ಟಿದ್ದಾರೆ. ಅದಕ್ಕೆ ನಾನು lengthy ಆಗಿ ಮಾತನಾಡಬೇಕಾಗುತ್ತದೆ. ಇನ್ನು ಎರಡನೆಯ ಪ್ರಶ್ನೆ ಕ್ರಮ ಕೈಗೊಳ್ಳುವುದು ಯಾವಾಗ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಪರಿಶೀಲನೆಯಲ್ಲಿದೆಯೆಂದು ಕೊಟ್ಟಿದ್ದಾರೆ. ನಾನು ಮಾನ್ಯ ಮಂತ್ರಿಯವರನ್ನು ಕೇಳುವಂಥಾದ್ದು ಇದನ್ನು ಈ ವರ್ಷ ಮಾಡುತ್ತಿರಾ? ಮುಂದಿನ ವರ್ಷ ಮಾಡುತ್ತೀರಾ? ಇಲ್ಲ, ಇನ್ನು 10 ವರ್ಷಕ್ಕೆ ಮಾಡುತ್ತಿರಾ? 20 ವರ್ಷಕ್ಕೆ ಮಾಡುತ್ತೀರಾ? ಏಕೆಂದರೆ ನಾವು 1962ರಲ್ಲಿ ಆಲಮಟ್ಟಿ ಯೋಜನೆ ಪ್ರಾರಂಭ ಮಾಡಿ ಇವತ್ತಿಗೂ ಅದರ ಬಗ್ಗೆ ಕಾಯುತ್ತಿದ್ದಾರೆ. ಈಗ ಇನ್ನು ಇಷ್ಟು ವರ್ಷ ಕಾಯಬೇಕೆಂಬುದರ ಬಗ್ಗೆ ದಯಮಾಡಿ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಡೋಣಿ ನದಿಯ ಬಗ್ಗೆ ಬಹಳ ವರ್ಷಗಳಿಂದ ಹೂಳು ತೆಗೆಯಬೇಕೆಂಬ ಕಾರ್ಯಕ್ರಮದ ಬಗ್ಗೆ ಇಡೀ ನದಿಯಲ್ಲಿ ಹೂಳು ತೆಗೆಯುವ ಬಗ್ಗೆ ಸಾಧ್ಯ, ಸಾಧ್ಯತೆಗಳ ಬಗ್ಗೆ ಚರ್ಚೆ ನಡೆದು ಕೇಂದ್ರ ಸರ್ಕಾರದ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವರು ಸ್ಥಳಕ್ಕೆ ಭೇಟಿ ಕೊಟ್ಟು, ಇದಕ್ಕೆ ಒಂದು ಯೋಜನೆಯನ್ನು ಮಾಡಿದರು. Inclination or problematic soils,ಅದರಡಿಯಲ್ಲಿ drainage ಮಾಡಬೇಕೆಂಬ ಕಾರ್ಯಕ್ರಮದ ಅಡಿಯಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳನ್ನು pilot project ಆಗಿ ಕೊಟ್ಟರು. ಇಡೀ ಡೋಣಿ ನದಿಯಿಂದ ಅಲ್ಲಿನ ಹಳ್ಳಿಗಳಿಗೆ ಪ್ರವಾಹ ಬರುತ್ತದೆ. ಅದನ್ನು ಮಾಡಬೇಕಾದರೆ ಇದರಿಂದ ಸಾಧ್ಯವಿಲ್ಲ. ಈ pilot project ಅನ್ನು ಕೊಟ್ಟಮೇಲೆ ಅವರೇ ಇದನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಟ್ಟರೆ ಒಳ್ಳೆಯದೆಂದು ಹೇಳಿ, ನಮ್ಮ ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯಕ್ಕೆ pilot project ಮಾಡುವುದಕ್ಕೆ ಕೊಟ್ಟರು. ಯಾವ ರೀತಿ ಯೋಜನೆಗಳು ತಪ್ಪು ನಿರ್ಧಾರಗಳಿಂದ ಆಗುತ್ತದೆಂದರೆ, ಇದು ಬಹಳ ಮುಖ್ಯವಾದ ಉದಾಹಣೆಯಾಗಿದೆ. ನಾನು ಸರ್ಕಾರದ ಮಂತ್ರಿಯಾಗಿ ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇನೆ. ಕೇಂದ್ರ ಸರ್ಕಾರ ಏನು ಮೂರು ಕೋಟಿ ರೂಪಾಯಿಗಳ pilot project ಅನ್ನು ಸೀಮಿತವಾಗಿ ಅದನ್ನು 6 ತಿಂಗಳು, 8 ತಿಂಗಳಲ್ಲಿ, ಮುಗಿಸಿದ್ದರೆ, ಅದೇ ಮಾದರಿಯಲ್ಲಿ ಇಡೀ ನದಿಯ ಹೂಳನ್ನು ತೆಗೆಯಬಹುದಾಗಿತ್ತು. ಅದನ್ನು ಮಾಡದೇ ಇವತ್ತು ನಮ್ಮ ಕಡೆಯಿಂದ ಕೃಷ್ಣ ಭಾಗ್ಯ ಜಲ ನಿಗಮದಿಂದ ಕೊಡಬೇಕಾಗಿದ್ದ margin money 81 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು, ಆ ದುಡ್ಡನ್ನು ಕೂಡ ಕೊಟ್ಟಿದ್ದೇವೆ. ಇಷ್ಟೆಲ್ಲ ಆದ ಮೇಲೆ ಈಗ ದಿನಾಂಕ:29.06.2008ರಲ್ಲಿ ಕೃಷಿ ವಿಶ್ವ ವಿದ್ಯಾನಿಲಯದವರು ನಮ್ಮಲ್ಲಿ experts ಇಲ್ಲ, ನಮ್ಮ ಕೈಯಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ಪತ್ರವನ್ನು ಬರೆದಿದ್ದಾರೆ.

ಸುಮಾರು 8 ವರ್ಷಗಳು ಇದರಲ್ಲಿ ಹೋಗಿದೆ. ಈಗ ನಾನು ಬಂದ ತಕ್ಷಣವೇ ಇದನ್ನು review ಮಾಡಿದ್ದೇನೆ. ಇದು ಅವರಿಗೂ ಗೊತ್ತಿದೆ. ಆಲಮಟ್ಟಿಯಲ್ಲಿ ಚರ್ಚೆಯಾದ ಮೇಲೆ ನಾನು ಇಲ್ಲಿ ಬಂದಮೇಲೆ review ಮಾಡಿದ್ದೇನೆ. ಮಾನ್ಯ ಸದಸ್ಯರು ಆ ಸಭೆಯಲ್ಲಿ ಇದ್ದರು, Minor Irrigation ಮಂತ್ರಿಯವರು ಇದ್ದರು. ಅವರೇ ಸಲಹೆಯನ್ನು ಮಾಡಿದ್ದಾರೆ. ಈ ಯೋಜನೆಯನ್ನು , Minor Irrigation ನಲ್ಲಿ ತೆಗೆದುಕೊಳ್ಳುತ್ತೇವೆ. ನಾವು ಡೋಣಿ ನದಿ ಹೂಳನ್ನು ತೆಗೆಯುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುತ್ತೇವೆಂದು ಹೇಳಿದರು. ಅಲ್ಲಿಂದ ಬಂದ ನಂತರವೂ ಚರ್ಚೆಯನ್ನು ಮಾಡಿದ್ದಾರೆ. ಇದನ್ನು, Minor Irrigation Department ನಿಂದ ಹೂಳು ತೆಗೆಯುವಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ರವರೆ ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರ ಬಗ್ಗೆ ವಿಶ್ವಾಸವಿದೆ, ಗೌರವವೂ ಇದೆ.

ಅಧ್ಯಕ್ಷರು: ಆಯಿತು.

ಶ್ರೀ ಅಪ್ಪಾಜಿ ಎಸ.ನಾಡಗೌಡ: ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈಗ ಇದನ್ನು ವಿಶೇಷವಾಗಿ ತಾವು Major Irrigation ಪರಿವರ್ತನೆ ಮಾಡಬೇಕು. ಏನೆಂದರೆ ಒಂದು canal ರೀತಿ ಮಾಡಬೇಕು. ನೀವು ಇದಕ್ಕೆ ಒಂದು estimate ಮಾಡಿಸಿ. ಕೊನೆಗೆ budgetary support ನಲ್ಲಿ ನಮ್ಮ ಸರ್ಕಾರದಿಂದಲೇ ಮಾಡಿಸುವಂಥಾದ್ದನ್ನು ಮಾಡಿಸಬಹುದು. ಇಲ್ಲಿ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳ ಬೆಳೆ ಹಾನಿಯಾಗುತ್ತಿದೆ, ಆಸ್ತಿ ಹಾನಿಯಾಗುತ್ತಿದೆ. ಈಗ ಏನೆಂದರೆ per K.M. excavation ಮಾಡಿದರೆ ಸಾಕು, ನಮಗೆ ಏನು lining ಬೇಡ, you just make it an canal, open canal ಇದ್ದದ್ದನ್ನು de-silt ಮಾಡಿ ಅದನ್ನು ಪಕ್ಕಕ್ಕೆ ಹಾಕಿ, canal ಮಾಡಿದರೆ ಸಾಕು. ಅದಕ್ಕೆ ಒಂದು estimate ಅನ್ನು ಆದರೂ ಮಾಡಿಸಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು Minor Irrigation ಮುಖಾಂತರ ಆ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಅಪ್ಪಾಜಿ ಎಸ್.ನಾಡಗೌಡ: ಅದು Minor Irrigation ಗೆ ಬರುವುದಿಲ್ಲ, ಅದಕ್ಕೆ ನಾನು ಹೇಳುತ್ತಿದ್ದೇನೆ. It is a river, ಇದು Minor Irrigation ಗೆ ಬರುವುದು. ತಾವು ದಯವಿಟ್ಟು confusion ಮಾಡಿಕೊಳ್ಳಬೇಡಿ. Be clear on that,

ಇದು Minor Irrigation ಗೆ ಹೋಗಬೇಕು. ನೀವು ಕೆಲಸವನ್ನು entrust ಮಾಡುವುದಾದರೆ Minor Irrigation ಮಾಡಿ, ಅದು ಬೇರೆ ಕೆಲಸ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಅಷ್ಟೆ ಹೇಳುತ್ತಿರುವುದು, ನಾನು ಏನು confusion ನಲ್ಲಿ ಇಲ್ಲ, ನನಗೆ ಗೊತ್ತಿದೆ.

ಅಧ್ಯಕ್ಷರು: ಆಯಿತು, ಅದರ ಬಗ್ಗೆ discussion ಆಗಿದೆ. ನಿಮ್ಮ ಸಲಹೆಯನ್ನು ಮಾನ್ಯ ಮಂತ್ರಿಯವರು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು: ಬೇಡ ಪಾಟೀಲ್‌ರವರೇ ಸಾಕು, ಈಗಾಗಲೇ clear cut ಹೇಳಿದ್ದಾರೆ.

ಶ್ರೀ ಎ.ಎಸ್.ಪಾಟೀಲ್: ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. I know the timings. ಸನ್ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದು ಇಷ್ಟೇ. 2007ರ ಜೂನ್ ತಿಂಗಳಲ್ಲಿ ಬಹಳ ದೊಡ್ಡ ಹಾನಿಯಾಗಿದೆ. ಆ ಸಮಯದಲ್ಲಿ ಹಿಂದೆ ಇದ್ದಂಥ ಸಚಿವರೂ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಸುಮಾರು 11 ಹಳ್ಳಿಗಳು ಸಂಪೂರ್ಣ ಮುಳುಗಿ ಹೋಗಿದ್ದವು, 6,500 ಮನೆಗಳು ಸಂಪೂರ್ಣ ನಾಶವಾಗಿವೆ, ಇವತ್ತಿಗತೂ ಪ್ರತಿಹಳ್ಳೀಯಲ್ಲಿ 8–10 ಕುಟುಂಬಗಳು ಶೆಡ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ. ದಯಮಾಡಿ, ಸಚಿವರು ಈ ಸಾರಿ ಬಿಜಾಪುರ ಜಿಲ್ಲೆಗೆ ಬಂದಾಗ ಅಲ್ಲಿಗೆ visit ಮಾಡಬೇಕು. ಸನ್ಮಾನ್ಯ ನಾಡಗೌಡ ಸಾಹೇಬರು ಏನು ಹೇಳಿದ್ದಾರೆ, ತಾವು ಆ ರೀತಿ ಕೆನಾಲ್ ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಬಹಳ ದೊಡ್ಡ ಅನಾಹುತ ಮತ್ತೆ ಆಗುತ್ತದೆ ಎನ್ನುವ ಮನವಿಯನ್ನು ನಿಮ್ಮ ಮುಂದೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಆಯಿತು.

ಗುಲ್ಬರ್ಗಾದಲ್ಲಿ ಹೊಸ ಸಿಮೆಂಟ್ ಕಾರ್ಖಾನೆ ಸ್ಥಾಪಿಸು ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**73 (264)**
ಸದಸ್ಯರ ಹೆಸರು	:	**ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)**
ಉತ್ತರಿಸುವ ಸಚಿವರು	:	**ಮಾನ್ಯ ಶ್ರೀ ಮಾರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)**
ಉತ್ತರಿಸುವ ದಿನಾಂಕ	:	**28.7.2008**

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹೊಸ ಸಿಮೆಂಟ್ ಕಾರ್ಖಾನೆ ಸ್ಥಾಪಿಸಲು ಹಲವಾರು ಪ್ರಸ್ತಾವನೆಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಅನುಮೋದಿಸಿದ ಪ್ರಸ್ತಾವೆಗಳ ಸಂಖ್ಯೆ ಎಷ್ಟು?

ಎಂಟು

ಇ) ಬಾಕಿ ಇರುವ ಪ್ರಸ್ತಾವನೆಗಳನ್ನು ಅನುಮೋದಿಸಲು ಬೇಕಾಗುವ ಸಮಯ ಎಷ್ಟು?

ಹಾಲಿ ಬಾಕಿ ಇರುವ ಒಂದು ಪ್ರಸ್ತಾವನೆಯನ್ನು ಮುಂದಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ಅನುಮೋದನೆಗೆ ಮಂಡಿಲಾಗುವುದು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಉತ್ತರವನ್ನು ಒದಗಿಸಿದ್ದಾರೆ. ನಾನು ಉತ್ತರವನ್ನು ಕೇಳಿರುವ ಉದ್ದೇಶ ಇಷ್ಟೇ. ಗುಲ್ಬರ್ಗ ಜಿಲ್ಲೆಯಲ್ಲಿ limestone deposit ಇದೆ. ಈಗ ಬಹಳಷ್ಟು ಕಂಪನಿಗಳು, ಸಿಮೆಂಟ್ ಫ್ಯಾಕ್ಟರಿಗಳು application ಹಾಕುತ್ತಿವೆ. ಆದರೆ cement zone ಮಾಡತಕ್ಕಂಥಾದ್ದು ಸಚಿವರ ಪ್ರಸ್ತಾವನೆಯಲ್ಲಿ ಇಲ್ಲ. ಅದನ್ನು ಕೂಡ ಮಾಡಬೇಕು. ಎರಡನೆಯದು ಏನೆಂದರೆ, ಸಿಮೆಂಟ್ ಕಂಪನಿಗಳಿಗೆ ಬಹಳಷ್ಟು ಭೂಮಿಯನ್ನು ರೈತರಿಂದ ತೆಗೆದುಕೊಳ್ಳುತ್ತಿದ್ದಾರೆ. ಕಂಪನಿಯವರು ಯಾರದ್ದೋ ಮುಖಾಂತರ ಭೂಮಿಯನ್ನು purchase ಮಾಡುತ್ತಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅವರು K.I.A.D.B.ಯಿಂದ ಭೂಮಿ ತೆಗೆದುಕೊಳ್ಳಬಹುದು. ಇಲ್ಲವೆಂದರೆ, Land Reform Act, 109ರ ಪ್ರಕಾರ Government of Karnataka, Revenue Department permission ತೆಗೆದುಕೊಂಡು ಮಾತ್ರ ಅವರು directಆಗಿ ಭೂಮಿಯನ್ನು Purchase ಮಾಡಬಹುದು. ಆದರೆ, ಇಲ್ಲಿ ಅವರು ಏನು ಮಾಡುತ್ತಿದ್ದಾರೆಂದರೆ, ಅವರು mining lease ಹಾಕಿಬಿಟ್ಟು, ಬೇರೆಯವರ ಮುಖಾಂತರ ಅಂದರೆ agency ಮುಖಾಂತರ purchase ಮಾಡುವುದರಿಂದ ರೈತರಿಗೆ ಏನು ಹಾನಿಯಾಗುತ್ತಿದೆ ಎಂದರೆ.....

ಅಧ್ಯಕ್ಷರು: ಶರಣ ಪ್ರಕಾಶ್‌ರವರೇ, ನಿಮ್ಮ ಪ್ರಶ್ನೆ ಏನಿದೆ? ನೀವು ಕೇಳುತ್ತಿರುವುದೇನು? ಇದು ಸರಿಯಲ್ಲ. ನಿಮ್ಮ ಪ್ರಶ್ನೆಯಲ್ಲಿ ಅದು ಇಲ್ಲ. ನಿಮಗೆ ಅದಕ್ಕೆ ಉತ್ತರ ಬೇಕಾದರೆ ನೀವು ಅವರ ಛೇಂಬರ್‌ಗೆ ಹೋಗಿ ಕೇಳಿ.

ಡಾ: ಶರಣ ಪ್ರಕಾಶ ರುದ್ರರಪ್ಪ ಪಾಟೀಲ್: ಇದು ಸದನದ ಗಮನಕ್ಕೆ ಬರಲಿ ಎಂದು ನಾನು ಹೇಳುತ್ತಿದ್ದೇನೆ. Directly purchase ಮಾಡುವುದಕ್ಕೆ ಕಾನೂನಿನಲ್ಲಿ provision ಇಲ್ಲ. ಯಾರದ್ದೋ ಮುಖಾಂತರ direct purchase ಮಾಡಿದರೆ, ಕೈಗಾರಿಕಾ ನೀತಿ ಪ್ರಕಾರ ರೈತರಿಗೆ ಸಿಗಬೇಕಾಗಿರತಕ್ಕಂಥ ಸವಲತ್ತುಗಳು ಸಿಗುವುದಿಲ್ಲ.

ಆದ್ದರಿಂದ ಇದಕ್ಕೆ ಕಡಿವಾಣ ಹಾಕಬೇಕು. Direct ಆಗಿ purchase ಮಾಡುವ ಹಾಗಿದ್ದರೆ ನೀವು ಅವರಿಗೆ Land Reform Act, Sec. 109 ನಲ್ಲಿ Permission ಕೊಡಿ. ಅವರು ರೈತರ ಜೊತೆ ಒಪ್ಪಂದ ಮಾಡಿಕೊಂಡು ಭೂಮಿ Purchase ಮಾಡಿದರೆ ಅವರಿಗೆ ಸಿಗಬೇಕಾದಂಥ ಎಲ್ಲ ಸವಲತ್ತುಗಳು ಸಿಗುತ್ತವೆ. ಆದ್ದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಮುರುಗೇಶ್ ಆರ್ ನಿರಾಣಿ: ಸಿಮೆಂಟಿಗೂ ಸಹ ಒಂದು zone ಮಾಡಬೇಕೆಂದು ಡಾ: ಶರಣ ಪ್ರಕಾಶ್‌ರವರು ಹೇಳಿದರು. ನಾವು ಆರು zone ಮಾಡುತ್ತಿರುವುದರಲ್ಲಿ steel, cement zone ಕೂಡಾ ಇದೆ. ಹೆಚ್ಚು limestone areaಗಳು ಗುಲ್ಬರ್ಗ, ಬಾಗಲಕೋಟೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿರುವುದರಿಂದ ಅವುಗಳು cement zone ನಲ್ಲಿ ಸೇರಿವೆ ಎನ್ನುವ ಮಾತುಗಳನ್ನು ಹೇಳುತ್ತೇನೆ. Land acquisition ಬಗ್ಗೆ ಹೇಳುವುದಾದರೆ, land ಕೊಡುವಂಥವರು ಮತ್ತು ಖರೀದಿ ಮಾಡುವಂಥವರ ನಡುವೆ ಒಪ್ಪಂದವಾಗಿ ಖರೀದಿ ಮಾಡಿದರೆ, ಅದು mediator ಮುಖಾಂತರವಾಗಲೀ, ನೇರವಾಗಿ ಆಗಲೀ, ಅದನ್ನು ಮಾಡಬಹುದು ಅದನ್ನು ನಾವ್ಯಾರು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ರೈತರಿಗೆ ಹೆಚ್ಚಿನ rate ಸಿಗಬೇಕು ಎನ್ನುವುದು ಅವರ ಉದ್ದೇಶವಾಗಿದೆ. ಅವರು Sec. 109 ಪ್ರಕಾರವಾದರೂ ಮಾಡಬಹುದು ಅಥವಾ through K.I.A.D.B. ಯಿಂದಾದರೂ acquisition ಮಾಡಬಹುದು. Through K.I.A.D.B. acquisition ಮಾಡಿಕೊಳ್ಳಬೇಕಾದರೆ, minimum 60-70% ಭೂಮಿಯನ್ನು ಕೊಡಲಿಕ್ಕೆ ರೈತರು ಒಪ್ಪಿದರೆ, ಉಳಿದಿರುವಂಥ 20–30% ನಷ್ಟವನ್ನು ನಾವು acquisition ಮಾಡಿ ಕಾರ್ಖಾನೆಯವರಿಗೆ ನಾವು ಕೊಡುತ್ತಿದ್ದೇವೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಯಾರದ್ದೋ ಮುಖಾಂತರ purchase ಮಾಡುವುದಕ್ಕೆ ಬಿಡಬೇಡಿ. ಅಂಥವುಗಳು ನಿಮ್ಮ ಗಮನಕ್ಕೆ ಬಂದರೆ ನೀವು ಅದನ್ನು allow ಮಾಡುವುದಕ್ಕೆ ಹೋಗಬೇಡಿ. ರೈತರನ್ನು protect ಮಾಡಿ ಎಂದು ಹೇಳುತ್ತಿದ್ದೇನೆ. ಬೇರೆ ಯಾವ ಉದ್ದೇಶದಿಂದಲೂ ನಾನು ಕೇಳುತ್ತಿಲ್ಲ. ಅಂಥಾದ್ದು ಆದರೆ ಅದನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಆಗ ನೀವು ರೈತರನ್ನು protect ಮಾಡಬೇಕು. Revenue Minister ಸಹ ಇದರಲ್ಲಿ ಭಾಗಿಯಾಗಬೇಕಾಗುತ್ತದೆ. ಅಂಥ ಸಂದರ್ಭ ಬಂದಾಗ ನೀವು ರೈತರನ್ನು protect ಮಾಡಿ ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಮುರುಗೇಶ್ ಆರ್ ನಿರಾಣಿ: ಆಯಿತು.

ಅಧ್ಯಕ್ಷರು: ರಾಜಶೇಖರ ಬಸವರಾಜ್ ಪಾಟೀಲ್‌ರವರೇ ತಮ್ಮ ಪ್ರಶ್ನೆ ಕಂದಾಯ ಇಲಾಖೆಯಿಂದ ಆಹಾರ ಇಲಾಖೆಗೆ ವರ್ಗಾವಣೆ ಯಾಗಿದೆ. ಆದ್ದರಿಂದ, ಅದಕ್ಕೆ ಉತ್ತರ ಬಂದಿಲ್ಲ. ಮುಂದೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ರಾಜಶೇಖರ ಬಸವರಾಜ್ ಪಾಟೀಲ್: ಈ ಅಧಿವೇಶನದಲ್ಲಿ ನನ್ನ ಮೂರು ಪ್ರಶ್ನೆಗಳು ಬಂದಿವೆ. ದಿನಾಂಕ 28, 29 ಮತ್ತು 30 ಈ ಮೂರು ದಿನವೂ ಪ್ರಶ್ನೆಗಳಿದ್ದವು. ಈ ಮೂರು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಯ ಬಗ್ಗೆ ಮಾತನಾಡಲೂ ಅವಕಾಶ ಸಿಗಲಿಲ್ಲ. ಹುಮ್ನಾಬಾದ್ ಬಸ್ ನಿಲ್ದಾಣದ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು: ಆಯಿತು, ಬೇರೆಯದಕ್ಕೆ ಅವಕಾಶ ಕೊಡೋಣ. ಇನ್ನು ಮುಂದೆ ಅದನ್ನು ಸರಿಮಾಡೋಣ.

ರಾಜ್ಯಕ್ಕೆ 734 ಟಿ.ಎಂ.ಸಿ. ನೀರಿನ ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**75 (377)**
ಸದಸ್ಯರ ಹೆಸರು	:	**ಶ್ರೀ ಟಿ.ಬಿ.ಜಯಚಂದ್ರ (ಶಿರಾ)**
ಉತ್ತರಿಸುವ ಸಚಿವರು	:	**ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ. ಸ್ಕೀಂ – ಎ ಅಡಿಯಲ್ಲಿ ರಾಜ್ಯಕ್ಕೆ 734 ಟಿ.ಎಂಸಿ ನೀರು ಹಂಚಿಕೆಯಾಗಿರುವ ಪ್ರಕಾರ ಯಾವ ಯಾವ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಗತಿಯಲ್ಲಿರುವ ಯೋಜನಾ ಕಾಮಗಾರಿಗಳು ಯಾವುವು: ಹೊಸ ಯೋಜನೆಗಳು ಯಾವುವು ಹಾಗೂ 734 ಟಿಎಂಸಿ ನೀರಿನಲ್ಲಿ ಬಳಕೆ ಆಗುತ್ತಿರುವ ನೀರಿನ ಪ್ರಮಾಣ ಎಷ್ಟು:

ಸ್ಕೀಂ – ಎ ಅಡಿಯಲ್ಲಿ ರಾಜ್ಯಕ್ಕೆ ಹಂಚಿಕೆ ಯಾಗಿರುವ 734 ಟಿಎಂಸಿ ಅನುಸಾರ

ಪೂರ್ಣಗೊಳಿಸಲಾಗಿರುವ ಯೋಜನೆಗಳ ಸಂಖ್ಯೆ : 29.

ಮುಕ್ತಾಯ ಹಂತದಲ್ಲಿರುವ ಯೋಜನೆಗಳ ಸಂಖ್ಯೆ: 19.

ಪ್ರಗತಿಯಲ್ಲಿರುವ ಯೋಜನೆಗಳ ಸಂಖ್ಯೆ:13.

ಹೊಸ ಯೋಜನೆಗಳು – ಯಾವುದೂ ಇರುವುದಿಲ್ಲ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಕೈಗಾರಿಕೆ, ಕುಡಿಯುವ ನೀರು ಮತ್ತು ಚೆನ್ನೈನೀರು ಸರಬರಾಜು ಸೇರಿದಂತೆ ಈವರೆಗೆ 598.24 ಟಿಎಂಸಿ ನೀರಿನ ಬಳಕೆ ಮಾಡಲಾಗಿದೆ.

ಆ. ಸ್ಕೀಂ – ಬಿ ಮೇಲೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಈಗಾಗಲೇ ಕಾಮಗಾರಿಗಳನ್ನು ಕೈಗೊಂಡು ಪೂರ್ಣ ಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸ್ಕೀಂ – ಬಿ ಮೇಲೆ ಆಂಧ್ರಪ್ರದೇಶ ಸರ್ಕಾರವು ಯೋಜನೆಗಳನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ. ಹಾಗಿದ್ದಲ್ಲಿ, ರಾಜ್ಯದಲ್ಲಿ ಯಾವುದಾದರೂ ಯೋಜನೆಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನೇನಾದರೂ ಸರ್ಕಾರವು ನೀಡಿದೆಯೇ?

ಇಲ್ಲ.

COMPLETED PROJECTS
ANNEXURE 1

Sl. No.	Name of Project	Sub basin	Year of Commencement	Revised allocation as per Maste Plan 2002 (tmc)
1	Gokak Canal	K-3	1897-98	1.40
2	Ghataprabha (1,11)	K-3		87.70
	Stage 11		1948	
	Stage 11		1956	
3	Kolchi Weir	K-4	1952-53	0.70
4	Hathikuni	K-6	1973-74	0.40
5	Upper Muilamari	K-6	1984-85	108
6	Chandrampalli	K-6	1976-77	1.90
7	Jambadahalla	K-8	1967-68	0.70
8	Ambligola	K-8	1964-65	1.10
9	Anjanapaur	K-8	1936-37	2.50
10	Dharma	K-8	1964-65	1.10
11	Hagaribommanahalli	K-8	1972-73	2.00
12	Rajolibanda	K-8	1959-60	1.20

13	Tunga Anicut	K-8	1956-57	11.50
14	Bhadra Reservoir	K-8	1955-56	61.70
15	Bhadra Anicut	K-8	1923-24	3.10
16	Tungabhadra	K-8	1945-46	132.00
	RBLLC		1945	
	LBC		1945	
55.	9595	M/s. Samar Poly Packs, Sri.B.Jayasimha, No.3/632,2nd Chikkaballapura.	Multi colour Disposable Plastic containers	43 – A 2025	03-02-99	03-02-99			Clause-4 Notice On 03-04-06
56.	9932	M/s. Southern Chemicals,	Coper	43 – B	24-09-04	02-11-04	24-11-04	Vijaya	Failur to

		Sri.Ujval Joshi, Proprietrix No.4928, High Pont/IV, 11th Floor, 45/1, Palace Road, Bangalore-1.	Reeling and Twisting	1875				Bank Race Course Road B'lore 03-09-07	implementation the project before 02-11-05
57.	11215	M/s. S& S. Silk Industries, Smtl.M.Shamala, Proprietrix, M.Dinne Hosahalli, Gorihalli Post, Chikkaballapura Taluk, Kolar District.	Silk Reeling and Twisting	43 – C 2003	27-11-92	19-10-93	26-10-95		Cluase-4 notice as 12-04-07 and called personal hearing on 27-08-07
58.	12365	Sri.Afroz Khan, Prop., S/o BAsa Saheb, M/s. Victory Steels, No.781, Behindsaw, M.S.Steel Materials Mill, Chikkaballapura.	M.S.Steels Materials	43 – D (Part-1) 2283	23-05-06	03-06-06	14-06-06		Grant of extension of time for implementation of project and furnish certificate of investments Chartered accountant.
59.		M/s. G.D.Industries,	Mosaic	43 – D	21-05-99	13-08-	20-10-		Sale deed

		Smt.H.S.Gayathri, Swetha Nilaya, Mahantimutt Road, Devanahalli Town.	Tiles & Marbels	(Part-2) 2872		2000	2000		Executed on 04-08-2004
60.	12685	M/s. Nandi Tiles, Smt.Nagaveni C/o Chikkaganga Reddy Haristhala, Chikkapalayagurki (Post) Chikkaballapura Taluk, Kolar District.	Mosaic Tiles & Cement pipes	44 3779	17-04-95	21-09-95	06-10-95		Implementation report dt:24-4-07 percentage 28.12%
61.	12305	M/s. Johnson Enterprises, No.22, Abbigere main road, Kommagondanahalli, Bangalore-15	Re-Rolling of Steel rods, angles and squares	46 – A 8082	15-11-93	27-12-93	13-01-94		Tr., of lease hold rights called project report, PRC, Sketch and application.
62.	11572	M/s. Shakthi POLYMERS< No.16, D.No.(4-11/1) Nayandahalli Post, Bangalore-39,		46 – B 3181	18-01-94	06-05-94	29-06-94		Sale deed executed on 15-5-2004
63.		M/s. H.P.Exports (P) Ltd., D-72, Golden Enclave, Airport Road, Bangalore.	Quality Bubble Gum,	46 – C 8002	21-09-94	30-11-94	18-11-05		Clause-4 Notice On 01-10-07
64.		Sri.Nasirpasha C/o S.A.Shazand, Propritor, M/s.	Mango Fruit, Pulp	46 – D	12-03-03	22-12-2004	24-01-05		Project to be implemente

		KOHINOOR FRUIT PROCESSING (p) LTD., No.58, TMC Layout, Azadnagar Sidlaghatta-562105	juice,	6750					d before 22-12-06
65.		M/s. Sri Sai Granites, Sri.B.R.Ramesh, No.679, M.G.Road, Chikkaballapura-562101		26 – B 2624					

ಅನುಬಂಧ-2ಬಿ

ಬಾಗೇಪಲ್ಲಿ ತಾಲ್ಲೂಕು

ಸ್ವಾಧೀನಗೊಂಡಿರುವ ಜಮೀನುಗಳ ಭೂದರ ಇನ್ನೂ ನಿಗದಿಪಡಿಸದಿರುವ ಕಾರಣ ಈ ತಾಲ್ಲೂಕಿನಲ್ಲಿ ಯಾವುದೇ ಜಮೀನನ್ನು ಯಾವುದೇ ಕಂಪನಿಗೆ ಹಂಚಿಕೆ ಮಾಡಿರುವುದಿಲ್ಲ.

ಶಿಡ್ಲಘಟ್ಟ ತಾಲ್ಲೂಕು

ಏಕಘಟಕ ಸಂಕೀರ್ಣದಡಿಯಲ್ಲಿ ಪವರ್ ಗ್ರೈಡ್ ಕಾರ್ಪೋರೇಷನ್ ಆಫ್ ಇಂಡಿಯಾ ರವರಿಗೆ 8 ಎಕರೆ 04 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲಾಗಿದೆ.

ಗೌರಿಬಿದನೂರು ತಾಲ್ಲೂಕು (ಹೀರೆಬಿದನೂರು)

ಕೆ.ಎಸ್. ಎಸ್.ಐ.ಡಿ.ಸಿ.ರವರ ಕೋರಿಕೆಯ ಮೇರೆಗೆ 5 ಎಕರೆ 19 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ನೀಡಲಾಗಿದೆ.

ಶ್ರೀ ಎನ್. ಸಂಪಂಗಿ: ಈ ಜಮೀನನ್ನು ಈಗಾಗಲೇ ನೀವು industry site formation ಮಾಡುವುದಕ್ಕೆ tender ಕರೆದು ಗುತ್ತಿಗೆದಾರರನ್ನು ನೇಮಿಸಿದ್ದೀರಾ?

ಶ್ರೀ ಜಿ. ಕರುಣಾಕರರೆಡ್ಡಿ: ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಗೌರಿಬಿದನೂರು, ಬಾಗೇಪಲ್ಲಿಯಲ್ಲಿ ಒಟ್ಟು 542 ಎಕರೆ ಜಮೀನನ್ನು ಕೈಗಾರಿಕೆಯ ಸಲುವಾಗಿ acquisition ಮಾಡುತ್ತಿದ್ದೇವೆ. ಅದರಲ್ಲಿ ಚಿಕ್ಕಬಳ್ಳಾಪುರದಲ್ಲಿ 97 ಎಕರೆ, ಶಿಡ್ಲಘಟ್ಟದಲ್ಲಿ 8 ಎಕರೆ, ಗೌರಿಬಿದನೂರಿನಲ್ಲಿ 245 ಎಕರೆಯಲ್ಲಿ ಕೊಡುವುದರಲ್ಲಿ, ತೆಗೆದುಕೊಳ್ಳುವುದರಲ್ಲಿ ಯಾವುದೇ ರೀತಿಯ dispute ಇಲ್ಲ. ಆದರೆ, ಬಾಗೇಪಲ್ಲಿಯಲ್ಲಿ ಮಾತ್ರ ಸಮಸ್ಯೆ ಇದೆ. ಬಾಗೇಪಲ್ಲಿಯಲ್ಲಿ 35 ಕೈಗಾರಿಕೆಗಳನ್ನು ತೆರೆಯಲಿಕ್ಕೆ Industrialists ಮುಂದೆ ಬಂದಿದ್ದಾರೆ, 192 ಎಕರೆ ಜಾಗ ಅವರಿಗೆ ಸಾಕಾಗುತ್ತದೆ. ಆದರೆ, ಇವತ್ತಿನವರೆಗೂ Price Fixation ಆಗಿಲ್ಲ. D.C.ಯವರ ನೇತೃತ್ವದಲ್ಲಿ ರೈತರಿಗೆ ಎಷ್ಟು ಹಣವನ್ನು ಕೊಡಬೇಕೆನ್ನುವ ಮೀಟಿಂಗ್ ಕರೆದಾಗ ಆ land ಕೊಡುವಂಥವರು ಆ ಸಭೆಗೆ ಹಾಜರಾಗುತ್ತಿಲ್ಲ. ಅದಕ್ಕೆ more than 50–60% ರೈತರು ನಾವು fix ಮಾಡಿರುವಂಥ ರೇಟ್‌ಗೆ ಕೊಡುತ್ತೇವೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಇನ್ನುಳಿದ 30–40% ರೈತರು ಸಭೆಗೇ ಬರುತ್ತಿಲ್ಲವಾದ್ದರಿಂದ pendingನಲ್ಲಿದೆ. ಈ ಸಭೆ ಮುಗಿದ ನಂತರ, D.C. ಮತ್ತು ಆ Price Fixation Committee ಯಲ್ಲಿ ಇರುವಂಥವರೆಲ್ಲರೂ ಸೇರಿ ಸಭೆ ಮಾಡಿ ಅವರಿಗೆ ಒಳ್ಳೆಯ ರೇಟ್ ಕೊಡುವ ತೀರ್ಮಾನ ಮಾಡುತ್ತೇವೆ.

ಶ್ರೀ ಎನ್. ಸಂಪಂಗಿ: ಈಗಾಗಲೇ acquire ಮಾಡಿದ ಜಮೀನನ್ನು site formation ಮಾಡುವುದಕ್ಕೆ tender ಕರೆದು ಗುತ್ತಿಗೆದಾರರನ್ನು ನೇಮಿಸಿದ್ದೀರಾ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆ.

ಶ್ರೀ ಜಿ. ಕರುಣಾಕರರೆಡ್ಡಿ: ಇನ್ನೂ ಮಾಡಿಲ್ಲ.

ಶ್ರೀ ಎನ್. ಸಂಪಂಗಿ: ರೈತರಿಗೆ ಇನ್ನೂ Compensation fix ಮಾಡಿಲ್ಲ. ಆದ್ದರಿಂದ, ನನಗನಿಸುತ್ತದೆ, KIADB ಮೂಲಕ real estate ದಂಧೆ ಪ್ರಾರಂಭವಾಗಿದೆ. ಎಲ್ಲೆಲ್ಲಿ ರೈತರ ಫಲವತ್ತಾದ ಜಮೀನುಗಳಿವೆಯೋ, ಆ ಜಮೀನುಗಳೆಲ್ಲವನ್ನೂ acquire ಮಾಡಿ, ಆಮೇಲೆ release ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ International Airport ಬಂದಿದೆ.

ಅಧ್ಯಕ್ಷರು: Specific ಆಗಿ ಪ್ರಶ್ನೆ ಕೇಳಿ. ನೇರವಾಗಿ ಬಾಗೇಪಲ್ಲಿ, ಚಿಕ್ಕಬಳ್ಳಾಪುರಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿ. ಏನಾಗಬೇಕು ಅದು ಕೇಳಿ.

ಶ್ರೀ ಎನ್. ಸಂಪಂಗಿ: ಈಗ KIADB ಯವರು real estate ದಂಧೆಯನ್ನು ಪ್ರಾರಂಭ ಮಾಡಿದ್ದಾರೆ. ಇಲ್ಲಿಯವರೆಗೂ ರೈತರಿಗೆ ಹಣವನ್ನೂ ಕೊಟ್ಟಿಲ್ಲ ಅಥವಾ acquire ಮಾಡಿಕೊಂಡಿರುವ ವಿಚಾರವನ್ನೂ ಅವರಿಗೆ ಹೇಳಿಲ್ಲ. ಈಗಾಗಲೇ ಗುತ್ತಿಗೆದಾರರನ್ನು ನೇಮಿಸಿಬಿಟ್ಟು, site formation ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಜಿ. ಕರುಣಾಕರರೆಡ್ಡಿ: ಇವತ್ತು ಅಲ್ಲಿ development ಮಾಡುತ್ತಿಲ್ಲ. Agreement ಇಲ್ಲದೆ Development ಹೇಗೆ ಮಾಡುತ್ತಾರೆ? ಇನ್ನೂ ಮಾಡಿಯೇ ಇಲ್ಲ.

ಶ್ರೀ ಎನ್.ಸಂಪಂಗಿ: ರೈತರಿಗೆ ಯಾವುದೇ ಸೂಚನೆಗಳನ್ನು ಕೊಡದೆ ನೀವು approach ಮಾಡಿಬಿಟ್ಟು ಅವರಿಗೆ ಒಳ ಗುತ್ತಿಗೆದಾರರನ್ನು ನೇಮಿಸಿದ್ದಾರೆ. ಇವತ್ತು ಇದೊಂದು ತರಹ real estate ದಂಧೆಯಾಗಿದೆ.

ಶ್ರೀ ಜಿ. ಕರುಣಾಕರರೆಡ್ಡಿ: ಇಲ್ಲ ನಿಮಗೆ ತಪ್ಪು ಮಾಹಿತಿ ಬಂದಿದೆ. ಆ ರೀತಿ ಆಗಿಲ್ಲ. ಅಲ್ಲಿ ಇನ್ನೂ ಅವರಿಗೆ price.ಕೊಟ್ಟಿಲ್ಲ.

ಶ್ರೀ ಎನ್. ಸಂಪಂಗಿ: 192 ಎಕರೆಯನ್ನು ಅವರಿಗೆ ಕೊಡುತ್ತಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, 4(1), 6(1), notification ಆದಮೇಲೆ acquisition final ಆಗಿ ಏನು ಕೊಡಬೇಕೆಂದು ಹೇಳಿ ಪರಿಹಾರ ಕೊಡುವುದೆಲ್ಲ ಆಗುವಂಥದ್ದು ಇದೆ.

ಅಧ್ಯಕ್ಷರು: ಮಾನ್ಯ ಸಂಪಂಗಿಯವರೆ, specific ಆಗಿ ಪ್ರಶ್ನೆ ಕೇಳಿ, ಅವರು ಉತ್ತರ ಹೇಳುತ್ತಾರೆ.

ಶ್ರೀ ಜಿ. ಕರುಣಾಕರರೆಡ್ಡಿ: ಅವರಿಗೆ ಈಗಾಗಲೇ detail ಆಗಿ ಮಾಹಿತಿ ಕಳುಹಿಸಿಕೊಟ್ಟಿದ್ದೇನೆ. ಈ Session ಮುಗಿದ ಮೇಲೆ ಅವರನ್ನೆಲ್ಲ ಸೇರಿಸಿ...

ಶ್ರೀ ಎನ್. ಸಂಪಂಗಿ: ನಾನೇಕೆ ಹೇಳುತ್ತಿದ್ದೇನೆಂದರೆ, 192 ಎಕರೆಯನ್ನು acquire ಮಾಡಿ, ಅವರಿಗೆ ಸರ್ಕಾರದಿಂದ ಪರಿಹಾರ ಕೊಡುವುದಕ್ಕೇ ಸುಮಾರು 10 ಕೋಟಿ ರೂ.ಗಳು ಬೇಕಾಗುತ್ತದೆ. ಆದರೆ, ಈಗಾಗಲೇ ಅದರ ಪಕ್ಕದಲ್ಲಿರುವಂಥ 200 ಎಕರೆ ಸರ್ಕಾರಿ ಜಮೀನಿದೆ. ಇವತ್ತು ಆ ಸರ್ಕಾರಿ ಜಮೀನನ್ನು ಇವರು acquire ಮಾಡಿ, ಅದನ್ನು KIADBಗೆ hand over ಮಾಡಿಬಿಟ್ಟು, Industrial Site formation ಮಾಡಿದರೆ, ಆ ರೈತರಿಗೂ ಅನುಕೂಲವಾಗುತ್ತದೆ.

ಶ್ರೀ ಜಿ. ಕರುಣಾಕರರೆಡ್ಡಿ: ನಾವು land acquisition ಮಾಡುತ್ತಿದ್ದೇವೆ, ಅದರಲ್ಲಿ 60% ರೈತರು ಸಭೆಗೆ ಬರಲಿಕ್ಕೆ ಒಪ್ಪುತ್ತಿದ್ದಾರೆ ಮತ್ತು ಅಷ್ಟು ಹಣ ಕೊಡಿಸಿಬಿಡಿ ನಾವು land ಕೊಡಲು ತಯಾರಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ, ಈಗ 4/1 ಅಧಿಸೂಚನೆ ಆಗಿದೆ, ಇನ್ನೂ ಪೂರ್ತಿ final order ಆಗಿಲ್ಲ. ಅದರ ಸಲುವಾಗಿ ಇನ್ನೂ ಹಣ ಕೊಟ್ಟಿಲ್ಲ, ಇನ್ನೂ development ಮಾಡಲಿಕ್ಕೆ ನಾವು tender ಕರೆದಿಲ್ಲ.

ಅಧ್ಯಕ್ಷರು: ನಿರಾಣಿಯವರು ಅಲ್ಲಿ development ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅದಕ್ಕೇನು ಹೇಳುತ್ತೀರಿ?

ಶ್ರೀ ಜಿ. ಕರುಣಾಕರರೆಡ್ಡಿ: ಮಾಡುತ್ತಿಲ್ಲ.

ಅಧ್ಯಕ್ಷರು: ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. O.K.

ಶ್ರೀ ಎನ್. ಸಂಪಂಗಿ: ಈಗ 45 ಕುಟುಂಬಗಳು ಬೀದಿ ಪಾಲಾಗುತ್ತಿವೆ. ಇವರು ಕೊಡುವ ಪರಿಹಾರ 5 ಲಕ್ಷ ರೂ. ಇರಬಹುದು, 8 ಲಕ್ಷ ಇರಬಹುದು, 10 ಲಕ್ಷ ರೂ. ಇರಬಹುದು, ಆದರೆ, ಇವತ್ತಿನ market rate ಸುಮಾರು 20 ಲಕ್ಷ ರೂ.ಗಳಿಗೇರಿದೆ. ಇವತ್ತು ಆ 45 ಕುಟುಂಬಗಳು ಆಚೆ ಬರುವುದು ನೋಡುತ್ತಾರೆಯೇ? ಅಥವಾ ಸರ್ಕಾರಿ ಜಮೀನು ಇರುವುದನ್ನು ಇವರು acquire ಮಾಡಿ ಅದನ್ನು industry ಮಾಡಿದರೆ ನಿಜವಾಗಿಯೂ ಒಳ್ಳೆಯದಾಗುತ್ತದೆ. ಅದನ್ನು ನೆರವೇರುಸುತ್ತೇನೆಂದು Industry Minister ಈಗಾಗಲೇ ಹೇಳಿದ್ದರೆ. ನಾವೆಲ್ಲ ಭೇಟಿಯಾಗಿ ಮಾತನಾಡಿದಾಗ ಮತ್ತೆ ರೈತರಿಗೆ ಅನುಕೂಲವಾಗುವಂಥ ಕೆಲಸ ಮಾಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು: Discussion ಮಾಡಿ ಒಂದು ನಿರ್ಣಯ ತೆಗೆದುಕೊಳ್ಳಿ,

ಶ್ರೀ ಎನ್. ಸಂಪಂಗಿ: ಆದಷ್ಟು ಬೇಗನೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಸಭೆ ಕರೆಯಬೇಕು.

ಅಧ್ಯಕ್ಷರು: ಆಯಿತು, ಸಭೆ ಕರೆಯಿರಿ.

ಶ್ರೀ ಜಿ. ಕರುಣಾಕರರೆಡ್ಡಿ: O.K. ಮಾಡೋಣ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ...

ಅಧ್ಯಕ್ಷರು: ಇದಕ್ಕೇನು ಸಂಬಂಧವಿದೆ? ಇದು ಚಿಕ್ಕಬಳ್ಳಾಪುರದ ವಿಷಯ. Please ಬೇಡ. ನಿಮ್ಮ ಕ್ಷೇತ್ರದ್ದು ಇದರಲ್ಲಿ ಬಂದಿಲ್ಲ. ಇದು ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ.

ಶ್ರೀ ಎನ್. ಹೆಚ್. ಶಿವಶಂಕರರೆಡ್ಡಿ: ನನ್ನ ತಾಲ್ಲೂಕಿನಲ್ಲೂ ಕೂಡ 250 ಎಕರೆ acquisition ಆಗಿದೆ. ಎಲ್ಲರಿಗೂ compensation ಕೂಡ ಕೊಟ್ಟಿದ್ದಾರೆ. ಬೇಗ lay out ಮಾಡಬೇಕು. ಈಗಾಗಲೇ 50 ಉದ್ದಿಮೆದಾರರು ಕೂಡ ಉದ್ಯೋಗ ಮಿತ್ರದಲ್ಲಿ registration ಮಾಡಿಸಿದ್ದಾರೆ. ಆದಷ್ಟು ಬೇಗ ಅಲ್ಲಿ lay out ಮಾಡಬೇಕು ಮತ್ತು ಮುಂದುವರಿದು, ಅಲ್ಲಿ ಇನ್ನೂ 900 ಎಕರೆ acquire ಮಾಡಬೇಕೆಂದು ಈಗಾಗಲೇ ಗುರುತಿಸಿದ್ದೇವೆ., ದಯಮಾಡಿ, ಆ 900 ಎಕರೆಯನ್ನುacquire ಮಾಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ನಿನ್ನೆ ಎಲ್ಲೋ ಒಂದು ಕಡೆ ಪತ್ರಿಕೆಯಲ್ಲಿ ಓದಿದೆ. Infosys ಸಂಸ್ಥೆಯವರು ಲ್ಯಾಂಡ್ ಇಲ್ಲವೆಂದು ಬೇರೆ ರಾಜ್ಯಕ್ಕೆ ಹೋಗುತ್ತಿದ್ದಾರೆಂದು ಪತ್ರಿಕೆಯಲ್ಲಿ ಓದಿದೆ. ಅವರೇನಾದರೂ ಆ ಕಡೆ ಬರುವುದಾದರೆ, ನಾವು ಅಲ್ಲಿ ಭೂಮಿ ಒದಗಿಸಿಕೊಡುತ್ತೇವೆ.

ಅಧ್ಯಕ್ಷರು: ಅವರು ಎಲ್ಲ ಮಾಡಲಿಕ್ಕೆ ರೆಡಿ ಇದೆ ಎಂದು ಹೇಳುತ್ತಾರೆ. ಬೇಗನೆ ಅದನ್ನು develop ಮಾಡಿಸಿ.

ಶ್ರೀ ಜಿ. ಕರುಣಾಕರರೆಡ್ಡಿ: ಆಗಬಹುದು.

ಸಬ್-ರಿಜಿಸ್ಟ್ರಾರ್ ಕಛೇರಿ ತೆರೆಯುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	77(169)
ಸದಸ್ಯರ ಹೆಸರು	:	ಶ್ರೀ. ನಾಯ್ಕ ಜೆ.ಡಿ. (ಭಟ್ಕಳ)
ಉತ್ತರಿಸುವ ಸಚಿವರು	:	ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ಭಟ್ಕಳ ತಾಲ್ಲೂಕಿನಲ್ಲಿ ಸಬ್-ರಿಜಿಸ್ಟ್ರಾರ್ ಕಛೇರಿ ಇಲ್ಲದೆ ಆಸ್ತಿ/ಪಾಸ್ತಿಗಳ (ಜಮೀನು) ಕ್ರಯ/ವಿಕ್ರಯದಾರರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಭಟ್ಕಳದಲ್ಲಿ ಸಬ್-ರಿಜಿಸ್ಟಾರ್ ಕಛೇರಿಯನ್ನು ಯಾವಾಗ ತೆರೆಯಲಾಗುವುದು?

ಸರ್ಕಾರದ ಆದೇಶ ಸಂಖ್ಯೆ. ಕಂಇ 11 ಮುನೋಮು 2007 ದಿನಾಂಕ: 1–9–2007 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಇಲ್ಲಿಗೆ ಖಾಯಂ ಸಿಬ್ಬಂದಿ ಹಾಗೂ ಹೆಚ್ಚುವರಿ ಅನುದಾನ ಒದಗಿಸುವುದನ್ನು ಬಾಕಿ ಇರಿಸಿ ಇಲಾಖೆಯಲ್ಲಿನ ಸಿಬ್ಬಂದಿಗಳನ್ನು ಮರು ನಿಯೋಜಿಸುವ ಮೂಲಕ ಕೂಡಲೇ ಸದರಿ ಸ್ಥಳದಲ್ಲಿ ಉಪ ನೋಂದಣಿ ಕಛೇರಿಯನ್ನು ತೆರೆಯಲು ಈಗಾಗಲೇ ಆದೇಶಿಸಲಾಗಿದೆ.

ನೋಂದಾಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಉಪ ನೋಂದಣಾಧಿಕಾರಿಗಳ ಮತ್ತು ಸಿಬ್ಬಂದಿಯ ಕೊರತೆಯಿಂದಾಗಿ ಭಟ್ಕಳದಲ್ಲಿ ಉಪ ನೋಂದಣಿ ಕಛೇರಿಯನ್ನು ತೆರೆಯಲು ಸಾಧ್ಯವಾಗಿರುವುದಿಲ್ಲ.

48 ಉಪ ನೋಂದಣಾಧಿಕಾರಿಗಳ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವಂತೆ ಕರ್ನಾಟಕ ಲೋಕ ಸೇವಾ ಆಯೋಗವನ್ನು ದಿನಾಂಕ : 23–10–2007ರ ಪತ್ರದಲ್ಲಿ ಕೋರಲಾಗಿದ್ದು, ಆದರಂತೆ ಆಯೋಗವು ಅರ್ಜಿಗಳನ್ನು ಸ್ವೀಕರಿಸಿದ್ದು, ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಉಪ ನೋಂದಣಾಧಿಕಾರಿಗಳ ನೇಮಕಾತಿ ನಂತರ, ಸಿಬ್ಬಂದಿಯನ್ನು ಮರು ವಿನ್ಯಾಸಗೊಳಿಸುವುದರ ಮೂಲಕ ಭಟ್ಕಳದಲ್ಲಿ ಉಪ ನೋಂದಣಿ ಕಛೇರಿ ಪ್ರಾರಂಭಿಸಲಾಗುವುದು.

ಶ್ರೀ ಜೆ.ಡಿ. ನಾಯ್ಕ: ನಾನು Sub registrar ಕಛೇರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಏಕೆಂದರೆ, ನಾವು ಈಗ ಎಲ್ಲಾ ವ್ಯವಹಾರಕ್ಕೂ ಹೊನ್ನಾವರ ತಾಲ್ಲೂಕಿಗೆ ಹೋಗಬೇಕಾಗಿದ್ದು, ಸುಮಾರು 40 ಕಿ.ಮೀ. ಅಂತರವಿದೆ, ಆಸ್ತಿ ವ್ಯವಹಾರವಿರಬಹುದು, ಬ್ಯಾಂಕಿಗೆ ಸಂಬಂಧಪಟ್ಟ ವ್ಯವಹಾರವಿರಬಹುದು, ಆಶ್ರಯ ಮನೆಗಳಿಗೆ registration ಮಾಡಲಿಕ್ಕೆ ಕೂಢ ಆ ಫಲಾನುಭವಿಗಳು 100, 200 ರೂ. ಖರ್ಚು ಮಾಡಿ ಹೊನ್ನಾವರ ತಾಲ್ಲೂಕಿಗೆ ಹೋಗಬೇಕಾಗುತ್ತದೆ. ಅದಕ್ಕಾಗಿ, ಹೊನ್ನಾವರ ತಾಲ್ಲೂಕು ಬದಲಾಗಿ ಭಟ್ಕಳ ತಾಲ್ಲೂಕಿನಲ್ಲಿ Sub registrar Office open ಮಾಡಿ ಎಂದು ಕೇಳಿದ್ದೆ. ಅದಕ್ಕೆ ಸರ್ಕಾರದಿಂದ 1–9–07ಕ್ಕೆ Sub Registrar Office ಮಂಜೂರಾಗಿದೆ. ಆದರೆ, ಅದನ್ನೇಕೆ ಓಪನ್ ಮಾಡುತ್ತಿಲ್ಲವೆಂದು ಕೇಳಿದರೆ, ಅಲ್ಲಿ ಅನುದಾನವನ್ನು ಬದಿಗಿರಿಸಿ, ಬಾಕಿ ಇರುವ ಸಿಬ್ಬಂದಿಯನ್ನೊದಗಿಸಬೇಕೆಂದು ಹೇಳುತ್ತಾರೆ. ಭಟ್ಕಳದಲ್ಲಿ ಕಛೇರಿಯಾದರ್ರೆ, ಹೊನ್ನಾವರದಲ್ಲಿ 100% work ಕಡಿಮೆಯಿರುತ್ತದೆ, atleast, ಮೂರು ದಿವಸ ಹೊನ್ನಾವರ, ಮೂರು ದಿವಸ ಭಟ್ಕಳದಲ್ಲಿ ಎಂದು ಮಾಡಿದರೆ,

atleast ಭಟ್ಕಳದ ಕೆಲಸ, ಹೊನ್ನಾವರದ ಕೆಲಸವೂ ಆಗುತ್ತದೆ. ಇದಕ್ಕಾಗಿ ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆದಿದ್ದೇವೆ, Sub Registrar ನೇಮಕಾತಿ ನಂತರ ಮಾಡುತ್ತೇವೆ, ಎಷ್ಟು ದಿವಸ ಹಿಡಿಯುತ್ತದೆಂದು ಹೇಳಿಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ನಾನು ಕಂದಾಯ ಸಚಿವರಿಗೆ ಮನವಿ ಮಾಡುತ್ತೇನೆ, ನೀವು ಆ ಕಛೇರಿಯನ್ನು ಎಷ್ಟು ದಿವಸದೊಳಗೆ ಓಪನ್ ಮಾಡುತ್ತೀರಿ ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ alternative ವ್ಯವಸ್ಥೆ ಮಾಡಿ.

ಅಧ್ಯಕ್ಷರು: ನಾನು ಸಹ ಕಂದಾಯ ಸಚಿವನಾಗಿದ್ದಾಗ ಭಟ್ಕಳಕ್ಕೆ Sub Registrar ಕಛೇರಿ ಮಂಜೂರು ಮಾಡಿದ್ದರು. ಅದು ಇನ್ನೂ implement ಆಗಲಿಲ್ಲ. ಅದನ್ನೇ ಅವರು ಹೇಳುತ್ತಿದ್ದಾರೆ.

ಶ್ರೀ ಜಿ. ಕರುಣಾಕರರೆಡ್ಡಿ: ಭಟ್ಕಳ ಒಂದೇ ಅಲ್ಲ ರಾಜ್ಯದ 9 ಕಡೆ ತಾವು ಕಂದಾಯ ಸಚಿವರಾಗಿದ್ದಾಗ ಮಂಜೂರು ಮಾಡಿದ್ದೀರಿ. ಆದರೂ ಕೂಡ, ಲೋಕಸೇವಾ ಆಯೋಗ ಈಗಾಗಲೇ ಅರ್ಜಿ ಸ್ವೀಕಾರ ಮಾಡಿದ್ದಾರೆ, ಆ Process ನಡೆಯುತ್ತಿದೆ. ಅದಾದ ಕೂಡಲೇ, ಅಲ್ಲಿ ನಮ್ಮ ಸಿಬ್ಬಂದಿಯನ್ನೊದಗಿಸಿ ಆ 9 ಕಛೇರಿಗಳನ್ನೂ ಬೇಗ ಪ್ರಾರಂಭ ಮಾಡುವುದಕ್ಕೆ Process ಮಾಡುತ್ತೇವೆ.

ಅಧ್ಯಕ್ಷರು: ಬೇಗ ಮಾಡಿಸಿ. ಸರಿ.

ಶ್ರೀ ಜೆ.ಡಿ. ನಾಯ್ಕ: ಹೊನ್ನಾವರದಲ್ಲಿರುವ ಕಛೇರಿಯನ್ನು ಇಲ್ಲಿ ಭಟ್ಕಳದಲ್ಲಿ ಖಾಯಂ ಕಛೇರಿಯಾಗಿ ಓಪನ್ ಮಾಡಿ, ಹೊನ್ನಾವರದಲ್ಲಿರುವ Sub Registrar ರವರನ್ನು ವಾರಕ್ಕೆ ಮೂರು ದಿವಸ ಭಟ್ಕಳ, ಮೂರು ದಿವಸ ಹೊನ್ನಾವರ ಎಂದು ಮಾಡಿದರೆ ಒಳ್ಳೆಯದು. Atleast ಸಂಚಾರಿ ವ್ಯವಸ್ಥೆಯನ್ನು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಜಿ. ಕರುಣಾಕರರೆಡ್ಡಿ: ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ: ಬೆಳಗಾಂ ಜಿಲ್ಲೆಯ ಸದಲಗದಲ್ಲಿ ಕಟ್ಟಡ ಕಟ್ಟುವುದಕ್ಕೆ ತಾವೇ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಿರಿ. ಇನ್ನೂ ಕಟ್ಟಡ ಪೂರ್ತಿಯಾಗಿಲ್ಲ. 2 ವರ್ಷಗಳಾಯಿತು.

ಅಧ್ಯಕ್ಷರು: ಆಯಿತು. ಅದನ್ನು Separate ಆಗಿ ಕೇಳಿ.

ಶ್ರೀ ಜೆ.ಡಿ. ನಾಯ್ಕ: ಆದಷ್ಟು ಬೇಗ ಇನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೇನೆಂದು ಹೇಳಿದರೆ ಅನುಕೂಲವಾಗುತ್ತದೆ. ಆದಷ್ಟು ಬೇಗ ಮಾಡಿದರೆ ಅನುಕೂಲವಾಗುತ್ತದೆ. ಅದಕ್ಕೆ ನಾನು ಕೇಳುತ್ತಿದ್ದೇನೆ.

ಶ್ರೀ ಜಿ. ಕರುಣಾಕರರೆಡ್ಡಿ: ಖಂಡಿತ ಆ ರೀತಿ ಕ್ರಮ ತೆಗೆದುಕೊಂಡು ತಮಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಸಿ ಕೊಡುತ್ತೇನೆ.

ಶ್ರೀ ಬಿ. ಪ್ರಕಾಶ್ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ ನಾವು ಕೇಳುತ್ತೇನೆ.

ಅಧ್ಯಕ್ಷರು: No, no. ಅವರು ಭಟ್ಕಳಕ್ಕೆ ಸಂಬಂಧಪಟ್ಟ ಹಾಗೆ ಕೇಳಿದ್ದಾರೆ. (ಗೊಂದಲ) ಬೇರೆ ಬೇರೆ ಕ್ಷೇತ್ರಗಳ ಬಗ್ಗೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಕಾವೇರಿ ನೀರಾವರಿ ನಿಗಮ ಬಾಕಿ ಇರುವ ಬಿಲ್ಲುಗಳ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **79(161)**

ಸದಸ್ಯರ ಹೆಸರು : ಶ್ರೀ. ರೇವಣ್ಣ.ಹೆಚ್.ಡಿ. (ಹೊಳೇನರಸಿಪುರ)

ಉತ್ತರಿಸುವ ಸಚಿವರು : ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ. ರಾಜ್ಯದ ಜಲ ಸಂಪನ್ಮೂಲ ಇಲಾಖೆಯು ಕಾವೇರಿ ನೀರಾವರಿ ನಿಗಮದ ವತಿಯಿಂದ ಕೈಗೊಂಡ ಕಾಮಗಾರಿಗಳಿಗಾಗಿ ಕಳೆದ 3 ವರ್ಷಗಳಿಂದ ಬಾಕಿ ಇರುವ ಬಿಲ್ಲುಗಳ ಮೊತ್ತವೆಷ್ಟು? (ವರ್ಷವಾರು, ಕಾಮಗಾರಿವಾರು ವಿವರ ನೀಡುವುದು)

ಕಾವೇರಿ ನೀರಾವರಿ ನಿಗಮದ ವತಿಯಿಂದ ಕೈಗೊಂಡ ಕಾಮಗಾರಿಗಳಿಗಾಗಿ ಕಳೆದ 3 ವರ್ಷಗಳಿಂದ ಪಾವತಿಗಾಗಿ ಬಾಕಿ ಬಿಲ್ಲುಗಳ ವಿವರ ಕೆಳಕಂಡಂತಿದೆ:

2005–06 ನೇ ಸಾಲಿನ ಬಾಕಿ ಬಿಲ್ಲುಗಳು ಇರುವುದಿಲ್ಲ.

2006–07 ನೇ ಸಾಲಿನ ಬಾಕಿ ಬಿಲ್ಲುಗಳು ಇರುವುದಿಲ್ಲ.

2007–08 ನೇ ಸಾಲಿನ ಮಾರ್ಚ್ 31 2008ಕ್ಕೆ ಪಾವತಿಗೆ ಬಾಕಿ ಇದ್ದ ಬಿಲ್ಲುಗಳ ಮೊತ್ತ ರೂ. 190.25 ಕೋಟಿಗಳು.

ದಿನಾಂಕ: 31–03–2008ಕ್ಕೆ ಬಾಕಿ ಇರುವ 2007–08ನೆ ಸಾಲಿನ ಬಿಲ್ಲುಗಳ ವಿವರಗಳು ಕೆಳಕಂಡಂತಿದೆ:

ವಲಯ	ಬಿಲ್ಲುಗಳ ಸಂಖ್ಯೆ	ಮೊತ್ತ (ರೂ.ಕೋಟಿ ಗಳಲ್ಲಿ)
ನೀರಾವರಿ(ದ)ವಲಯ, ಮೈಸೂರು	1745	62.93
ಹೇಮಾವತಿ ಯೋಜನಾ ವಲಯ,ಗೊರೂರು	694	104.52
ಹೇಮಾವತಿ ನಾಲಾ ವಲಯ, ತುಮಕೂರು	580	22.80
ಒಟ್ಟು	**3019**	**19.25**

ಕಾಮಗಾರಿವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಆ ಹಾಗಿದ್ದಲ್ಲಿ ಬಾಕಿಯಿರುವ ಬಿಲ್ಲುಗಳನ್ನು ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಈವರೆವಿಗೂ ಪಾವತಿಸಲಾಗಿರುವ ಬಿಲ್ಲುಗಳೆಷ್ಟು?

ಕಾವೇರಿ ನೀರಾವರಿ ನಿಗಮದಿಂದ ಜೂನ್ 2008ರ ಅಂತ್ಯದವರೆಗೆ ಪಾವತಿಯಾದ ಬಿಲ್ಲುಗಳ ಮೊತ್ತದ ವಿವರ ಕೆಳಕಂಡಂತಿದೆ:

ಮಾರ್ಚ್ 31. 2008ಕ್ಕೆ ಪಾವತಿಗೆ ಬಾಕಿ ಇದ್ದ ಬಿಲ್ಲುಗಳ ಮೊತ್ತ	ರೂ.190.25 ಕೋಟಿ
ಏಪ್ರಿಲ್ 2008 ರಿಂದ ಜೂನ್ 2008ರ ವರೆಗೆ ಪಾವತಿ ಮಾಡಿದ ಮೊತ್ತ	ರೂ. 99.22 ಕೋಟಿ
ಜೂನ್ 2008ರ ಅಂತ್ಯಕ್ಕೆ ಪಾವತಿಗೆ ಬಾಕಿ ಇರುವ ಬಿಲ್ಲುಗಳ ಮೊತ್ತ	ರೂ. 91.03 ಕೋಟಿ

ದಿನಾಂಕ: 30.06.2008ರ ಅಂತ್ಯಕ್ಕೆ 2007-08ನೇ ಸಾಲಿನ ಬಾಕಿ ಬಿಲ್ಲುಗಳ ವಿವರ ಕೆಳಕಂಡಂತಿದೆ:

ವಲಯ	ಬಿಲ್ಲುಗಳ ಸಂಖ್ಯೆ	ಮೊತ್ತ (ರೂ. ಕೋಟಿಗಳಲ್ಲಿ)
ನೀರಾವರಿ (ದ) ವಲಯ, ಮೈಸೂರು	1442	44.86
ಹೇಮಾವತಿ ಯೋಜನಾ ವಲಯ, ಗೊರೂರು	635	41.62
ಹೇಮಾವತಿ ನಾಲಾ ವಲಯ, ತುಮಕೂರು	146	4.55
ಒಟ್ಟು	**2223**	**91.03**

ಕಾಮಗಾರಿವಾರು ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಇ ಬಾಕಿಯಿರುವ ಬಿಲ್ಲುಗಳ ಮೊತ್ತವನ್ನು ನೀಡಲು ಸರ್ಕಾರ ಕೈಗೊಂಡಿರುವ ಮಾನದಂಡವೇನು?

ಬಿಲ್ಲುಗಳನ್ನು ಪಾವತಿಸುವಾಗ 31.03.2008ರ ಮುಂಚಿನ ಬಿಲ್ಲುಗಳಿಗೆ ಆದ್ಯತೆ ನೀಡಿ ಪಾವತಿಸತಕ್ಕದ್ದೆಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ವಿಭಾಗೀಯ ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ತಿಳಿಸಿರುತ್ತಾರೆ (ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಜಲಸಂಪನ್ಮೂಲ ಸಚಿವರು ಕಾವೇರಿ basin ನಲ್ಲಿ ಸುಮಾರು 190 ಕೋಟಿ ರೂ. ಬಾಕಿ ಇದೆಯೆಂದು ಹೇಳುತ್ತಾರೆ. ಅದನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ? .ಕೊಡಬೇಕಾದರೆ ಮಾನದಂಡವೇನಿದೆ?

ಶ್ರೀ ಬಸವರಾಜ ಬೊಮ್ಮಾಯಿ: ಮಾರ್ಚ್‌ವರೆಗೆ 190 ಕೋಟಿ ರೂಪಾಯಿಗಳ ಬಾಕಿ ಏನಿತ್ತು ಅದರಲ್ಲಿ 99 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. 91 ಕೋಟಿ ರೂ.ಗಳು ಬಾಕಿ ಇದೆ. 91 ಕೋಟಿ ರೂ.ಗಳ ಬಾಕಿ ಅನ್ನು ಮೊನ್ನೆ ಸರ್ಕಾರ ಬಿಡುಗಡೆ ಮಾಡಿದೆ. 12/5ರಲ್ಲಿ 80 ಕೋಟಿ ರೂ. 21/5 ರಲ್ಲಿ 10 ಕೋಟಿ ರೂ. 5/6ರಲ್ಲಿ 30 ಕೋಟಿ ರೂ. 12/6ರಲ್ಲಿ 10 ಕೋಟಿ ರೂ. 23/7ರಲ್ಲಿ 60ಕೋಟಿ ರೂ. ಹೀಗೆ 190 ಕೋಟಿ ರೂ. ಬಾಕಿಯನ್ನು ಬಿಡುಗಡೆ ಮಾಡಿದೆ. ಅದರಲ್ಲಿ land acquisition, salary ಎಲ್ಲಾ ಕಳೆದು 99 ಕೋಟಿ ರೂ. ಕೊಟ್ಟ ಮೇಲೆ ಈಗ ಸುಮಾರು 70 ಕೋಟಿ ರೂ. ಬಾಕಿ ಇದೆ. ಅದರಲ್ಲಿ ಇನ್ನೂ 10 ಕೋಟಿ ರೂ.ಗಳನ್ನು land acquisition ಮತ್ತು ಬೇರೆಯದಕ್ಕೆ ಬಿಟ್ಟರೆ ಸುಮಾರು 60 ಕೋಟಿ. ರೂ.ಗಳನ್ನು 91 ಕೋಟಿ ರೂ. ಬಾಕಿ ಬಿಲ್ ಏನಿದೆ ಅದರಲ್ಲಿ 60 ಕೋಟಿ ರೂ.ಗಳನ್ನು ಈ ಕೂಡಲೆ ಬಿಡುಗಡೆ ಮಾಡಲು ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ತಟ್ಟೆ ಕೆರೆ ಎನ್ನುವ ಗ್ರಾಮದಲ್ಲಿ 90 ಮನೆಗಳು ಮುಳುಗಡೆಯಾಗಿದ್ದು, ಆ ಕುಟುಂಬಗಳಿಗೆ ಹಣ ಕೊಡಬೇಕಾಗಿತ್ತು. ಅದು award ಆಗಿ ಒಂದು ವರ್ಷವಾಗಿದೆ. ಅವರಿಗೆ ಕಳೆದ ಒಂದು ವರ್ಷದಿಂದಲೂ ಕೊಟ್ಟಿಲ್ಲ. ಇದನ್ನೇನಾದರೂ ಸಾಧ್ಯವಾಗುತ್ತದೆಯೇ? ಅದನ್ನು ಕೊಡುವುದಕ್ಕೆ ತಾವೇನಾದರೂ ಪ್ರಾತಿನಿಧ್ಯ ಕೊಡುತ್ತೀರೋ ಅಥವಾ contractor bill ಗೆ ಕೊಡುತ್ತೀರೋ ಎನ್ನುವುದನ್ನು ದಯಮಾಡಿ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸದಸ್ಯರು ವಿಷಯ ಪ್ರಸ್ತಾಪಿಸಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡಿ ಆದ್ಯತೆ ಮೇಲೆ ಇದಕ್ಕೆ ಬಿಲ್ ಬಾಕಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಎಷ್ಟು ದಿವಸಗಳಲ್ಲಿ ಕೊಡುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನು ಪರಿಶೀಲನೆ ಮಾಡುತ್ತೇನೆ. ಏಕೆಂದರೆ, ಈ ವಿಷಯ ಈ ಪ್ರಶ್ನೆಯಲ್ಲಿ ಇಲ್ಲ.

ಅಧ್ಯಕ್ಷರು: ಮಾಹಿತಿ ತೆಗೆದುಕೊಂಡು ಮಾಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ತಾವು ಕಂದಾಯ ಸಚಿವರಾಗಿದ್ದವರು. 4(1), 6(1) notification ಆಗಿದೆ, award ಆಗಿದೆ.

ಅಧ್ಯಕ್ಷರು: ತಾವೀಗ ಕೇಳುತ್ತಿರುವ ವಿಷಯ ಆ ಪ್ರಶ್ನೆಯಲ್ಲಿ ಬಂದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: Award ಆದ ಯಾವುದನ್ನೂ ಸರ್ಕಾರ ಬಾಕಿ ಇಡುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: Award ಆದ ಮೇಲೆ ಹಣ ಕೊಡುವುದಕ್ಕೇನಾದರೂ ತೊಂದರೆ ಇದೆಯೇ? Award ಆಗಿರುವುದನ್ನು ಪರಿಶೀಲನೆ ಮಾಡುತ್ತೇನೆಂದರೆ ಹೇಗೆ?

ಅಧ್ಯಕ್ಷರು: ತಾವು ಈಗ ಕೇಳಿರುವ ವಿಷಯಕ್ಕೆ ಮಾಹಿತಿ ಇಲ್ಲ ಎನ್ನುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: 70 ಕೋಟಿ ರೂಪಾಯಿಗಳಲ್ಲಿ 10 ಕೋಟಿ ರೂಪಾಯಿಗಳನ್ನು land acquisitionಗೆ ಕೊಡುವುದಕ್ಕೆ compensation ಇಡುತ್ತಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಒಂದು ಕೋಟಿ ರೂಪಾಯಿ ಅಥವಾ 2 ಕೋಟಿ ರೂಪಾಯಿಗಳನ್ನಾದರೂ ಮೊದಲು ಆ ರೈತರಿಗೆ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾದರೂ ನನಗೆ ಅವಕಾಶ ಕೊಡಿ ಅಥವಾ ಅದಕ್ಕೆ ನೀವೇ Yes ಎಂದು ಹಣವನ್ನು ಬಿಡುಗಡೆ ಮಾಡಿಸಿ. ಅದರಿಂದ ನನಗೇನೂ ತೊಂದರೆ ಇಲ್ಲ. ನನ್ನ ಕೆಲಸ ಹಗುರವಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ಪರಿಶೀಲಿಸುತ್ತೇನೆಂದು ಹೇಳಿದ್ದೀರಲ್ಲಾ, ಅದಕ್ಕೆ ನಾನು ಹೇಳಿದೆ. ಎಷ್ಟು ದಿವಸಗಳಲ್ಲಿ ಹಣ ಕೊಡಿಸುತ್ತೀರಿ ಎಂಬುದನ್ನು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ರೇವಣ್ಣನವರೆ ನಿಮ್ speed ನನಗೆ ಗೊತ್ತಿದೆ. ನಿಮಗೆ ಆ ಒಂದು veto power ಇತ್ತು. ಆ speed ಇತ್ತು. ಆ veto power ನನ್ನ ಕಡೆ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ನಾನು veto power ಕೇಳುತ್ತಿಲ್ಲ.

ಅಧ್ಯಕ್ಷರು: ಅವರು ಉತ್ತರ complete ಮಾಡಲಿ.

ಶ್ರೀ ಹೆಚ್.ಡಿ. ರೇವಣ್ಣ: ಜಲಸಂಪನ್ಮೂಲ ಸಚಿವರಿಂದ ನಾನೇನು ಉತ್ತರ ಬಯಸುತ್ತಿದ್ದೇನೆಂದರೆ, ನಾನು contractor bill ಬಗ್ಗೆ ಕೇಳುತ್ತಿಲ್ಲ.

ಅಧ್ಯಕ್ಷರು: ಅವರು ಉತ್ತರ ಕೊಡುವುದಕ್ಕೆ ನೀವು ಬಿಡುತ್ತಿಲ್ಲವಲ್ಲ. ಅವರು ಉತ್ತರ ಕೊಡಲಿ.

ಶ್ರೀ ಹೆಚ್.ಡಿ. ರೇವಣ್ಣ: veto power ವಿಷಯ ಬೇಡ, ಬಾಕಿ ಬಗ್ಗೆ ಏನಿದೆ ಅದನ್ನು ಹೇಳಲಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸದಸ್ಯರು ತಟ್ಟೆಗೆರೆ ಗ್ರಾಮದ ಬಗ್ಗೆ ಏನು ಹೇಳಿದ್ದಾರೆ, ಅದನ್ನು Priority ಮೇಲೆ ಬಿಡುಗಡೆ ಮಾಡಲು ಆ 10ಕೋಟಿ ರೂಪಾಯಿಗಳಲ್ಲಿ ನಾನು ಆದೇಶ ಕೊಡುತ್ತೇನೆ.

ರಾಜ್ಯದಲ್ಲಿರುವ ಬೃಹತ್ ಜಲಾಶಯಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	80(251)
ಸದಸ್ಯರ ಹೆಸರು	:	ಶ್ರೀ. ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ)
ಉತ್ತರಿಸುವ ಸಚಿವರು	:	ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ರಾಜ್ಯದಲ್ಲಿ ದೊಡ್ಡ ಜಲಾಶಯದಲ್ಲಿ ಒಂದಾದ ರಾಜಾ ಲಖಮಗೌಡಾ ಜಲಾಶಯ ನಿರ್ಮಾಣಗೊಂಡು ಹಲವಾರು ವರ್ಷಗಳು ಕಳೆದರೂ, ಕೃಷ್ಣರಾಜಸಾಗರ ಹಾಗೂ ಆಲಮಟ್ಟಿ ಜಲಾಶಯದ ಹಾಗೇ ಈ ಜಲಾಶಯದಲ್ಲೂ ಹೂತೋಟ ಮುಂತಾದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಾಗದೇ ಕುಂಠಿತಗೊಂಡಿರುವುದು ನಿಜವೇ?

–ಹೌದು–

ಆ) ಈಗಾಗಲೇ ಕೃಷ್ಣರಾಜಸಾಗರ ಹಾಗೂ ಆಲಮಟ್ಟಿ ಜಲಾಶಯ ಮಾದರಿಯಲ್ಲೆ ಇದನ್ನು ಪ್ರವಾಸಿ ತಾಣವನ್ನಾಗಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

–ಇದೆ–

ಇ) ಇದೇ ರೀತಿ ಹಿಡಕಲ್ ಜಲಾಶಯವನ್ನು ಪ್ರವಾಸಿ ತಾಣವನ್ನಾಗಿಸುವ ಯೋಜನೆ ಸರ್ಕಾರಕ್ಕೆ ಇದ್ದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡುವ ಮುಖಾಂತರ ಸದರಿ ಕಾಮಗಾರಿಗೆ ಚಾಲನೆ ನೀಡುವುದು ಯಾವಾಗ, ಹಾಗೂ ಈ ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗುವುದು?

–ಪರಿಶೀಲನೆಯಲ್ಲಿದೆ–

ಶ್ರೀ ಉಮೇಶ್ ವಿ.ಕತ್ತಿ: ರಾಜಾ ಲಖಮಗೌಡಾ ಜಲಾಶಯವನ್ನು 1971 ರಲ್ಲಿ ಕಟ್ಟಿ ಮುಗಿಯಬೇಕಾಗಿತ್ತು. ಇನ್ನೂ ಅದರ ಬಗ್ಗೆ ಮಾಡಬೇಕಾಗಿದೆ, ಮಾಡುವುದಿದೆ, ಹೌದು, ಪರಿಶೀಲಿಸುತ್ತಿದ್ದೇವೆ ಎಂದು ಇದೇ ಉತ್ತರವನ್ನು ಕೇಳುತ್ತಿದ್ದೇನೆ. Specifice

ಆಗಿ ಈ ಜಲಾಶಯ ಹಿಡ್ಕಲ್ ಜಲಾಶಯದ ಎದುರುಗಡೆ ದುಗ್ಗಾಳ್ ಜಲಾಶಯ ಬರುವುದರಿಂದ ಅಲ್ಲಿ ನಡುಗಡ್ಡೆ ಇದೆ, bird sanctuary ಇದೆ, ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದಿಂದ ಮಾಡುವುದರಿಂದ ಸರ್ವೇ ಮಾಡಿಸಿ ಸರಿಯಾದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. 15 ಕಿ.ಮೀ. ವ್ಯಾಪ್ತಿಯಲ್ಲಿ ಮೂರು ಜಲಪಾತಗಳು ಅಂದರೆ, ಗೋಕಾಕ್ ಫಾಲ್ಸ್, ಗೊಳಚಿನ ಮಲ್ಕಿ, ದುಗ್ಗಾಳ್ back water ಆದಾದ ಮೇಲೆ ನಡುಗಡ್ಡೆ ಕಟ್ಟಿ ಅದನ್ನೂ ಕಟ್ಟಬಹುದು. five star ಅಗಬಹುದು., ಅದರ ಜೊತೆಗೆ bird sanctuary ಮಾಡುವುದಕ್ಕೆ ಸಾಧ್ಯವಿದೆ. boating ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಅದು ಒಳ್ಳೆಯ ಪ್ರವಾಸಿ ಕೇಂದ್ರ ಆಗಬಹುದು. ಅದು ಬೆಂಗಳೂರಿನಿಂದಲೂ 500 ಕಿ.ಮೀ. ಆಚೆ ಇದೆ. ಬಾಂಬೆಯಿಂದಲೂ 500 ಕಿ.ಮೀ. ದೂರ ಇದ್ದು ಅದು centre point ನಲ್ಲಿದೆ. ಅದನ್ನೊಂದು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಿದೆ. ಆ ಪೂರಾ ಜಾಗ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ಪ್ರವಾಸೋದ್ಯಮ ಇದರ ಬಗ್ಗೆ ಏನೂ ಗಮನಹರಿಸುತ್ತಿಲ್ಲ. ತಾವಾದರೂ ಅವರನ್ನು ಕರೆಸಿ ಕೂಡಲೆ survey ಮಾಡಿಸಿ BOT ಆಧಾರದ ಮೇಲೆ ಕೊಡುವ ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ? ಅದಕ್ಕೆ ಕಾರ್ಯಕ್ರಮ ರೂಪಿಸಿ ಯಾವಾಗ ಮುಗಿಸುತ್ತೀರಿ? ಖಚಿತವಾದ ದಿನಾಂಕವನ್ನು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಬಹಳ ದಿನಗಳಿಂದ ಇದರ ಬಗ್ಗೆ ಚರ್ಚೆಯಾಗಿ ಹಲವಾರು ಸಭೆಗಳಾಗಿದ್ದು, 2001ರಲ್ಲಿ ಮತ್ತು 2003ರಲ್ಲೂ ಸಭೆ ನಡೆದಿದೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಈಗಾಗಲೇ ನಾವು ಕರ್ನಾಟಕ ನೀರಾವರಿ ನಿಗಮಕ್ಕೆ ಆದೇಶ ಕೊಟ್ಟು detailed project report ತಯಾರಿಸಿ ಎಂದು ಹೇಳಿದ್ದೆವು. ಅದು ಈಗಾಗಲೇ ತಯಾರಾಗಿದೆ. ಆ report ಅನ್ನು ಕೂಡಲೇ ಸರ್ಕಾರಕ್ಕೆ ಕೊಡುವಂತೆ ನಾನು ಹೇಳಿದ್ದೇನೆ. ಅದು ಬಂದ ಮೇಲೆ ಸರ್ಕಾರ ಒಂದು ನೀತಿಯನ್ನು ಮಾಡುತ್ತಿದೆ. ಯಲ್ಲಪ್ಪರೆಡ್ಡಿಯವರ ಸಮಿತಿ ಇತ್ತು, ಆ ಸಮಿತಿಯಲ್ಲಿ ಈ ತರಹ dam site development, canal ಪಕ್ಕದಲ್ಲಿರುವ forestation ನಡುಗಡ್ಡೆಗಳಿದ್ದಲ್ಲಿ herbal plantation ಮಾಡುವುದು, quarryಗಳಿದೆ ಅಲ್ಲಿ fisheries ಮಾಡುವ. ಬಗ್ಗೆ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಕಾವೇರಿ ಜಲಾನಯನದಲ್ಲಿ ನಾಲ್ಕನ್ನು identify ಮಾಡಿ BOT ಆಧಾರದ ಮೇಲೆ ಕೊಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಆದರೆ, ಅದು ಕುಂಠಿತವಾಗಿದೆ. ಅದನ್ನು ಚುರುಕುಗೊಳಿಸುತ್ತಿದ್ದೇವೆ. ಅದಲ್ಲದೆ, ಈಗೇನು

ಕಾವೇರಿ ಜಲಾನಯನದಲ್ಲಾಗಿದೆ. ಅದೇ ರೀತಿ ಇದನ್ನೂ ಕೂಡ BOOT system ನಲ್ಲಿ ಕೊಡಬೇಕೆನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಆ detailed project report ಬಂದ ಮೇಲೆ ಅದಕ್ಕೆ ಏನೇನು conditions ಹಾಕಬೇಕೋ ಎಂದು ತೀರ್ಮಾನ ಮಾಡಿ ಒಂದು ತಿಂಗಳಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: Sufficient ಆಗಿ ಹೇಳಿದ್ದಾರೆ. ಈಗ ಬೊಮ್ಮಾಯಿಯವರು ನೀರಾವರಿ ಖಾತೆಯ ಸಚಿವರಾಗಿದ್ದಾರೆ. ಈಗ ನೀವು ಅದನ್ನು ಮಾಡಿಸಿಕೊಂಡುಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ಹಾರಂಗಿ, ಹೇಮಾವತಿ ನದಿಗೆ ಸಂಬಂಧಿಸಿದಂತೆ ಯಾವಾಗ ಮಾಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು.

<u>ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳ ಸಂಖ್ಯೆ</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**114(499)**
ಸದಸ್ಯರ ಹೆಸರು	:	**ಶ್ರೀ. ಕೃಷ್ಣಮೂರ್ತಿ ಕೆ.ಎಂ. (ಕಡೂರು)**
ವಿಷಯ	:	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಹೊಸದಾಗಿ ಪ್ರಾರಂಭಿಸಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಆಶ್ರಮ ಶಾಲೆಗಳಿಗೆ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡುವ ಬಗ್ಗೆ.**
ಉತ್ತರಿಸುವ ಸಚಿವರು	:	**ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು)**

ಅ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳ ಸಂಖೆ ಎಷ್ಟು

ಅಲೆಮಾರಿ/ ಅರೆ ಅಲೆಮಾರಿ ಜನಾಂಗದವರಿಗಾಗಿ 04 ಆಶ್ರಮ ಶಾಲೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಅವುಗಳಲ್ಲಿ 02 ಆಶ್ರಮ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಆ ಎಲ್ಲಾ ಆಶ್ರಮ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಅಡುಗೆಯವರು ಇದ್ದಾರೆಯೇ:

ಹೊಸದಾಗಿ ಮಂಜೂರಾಗಿರುವ 04 ಶಾಲೆಗಳಿಗೆ ಬೋಧಕ/ ಬೋಧಕೇತರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲ. ಹಿಂದುಳಿದ ವರ್ಗಗಳ ಇಲಾಖೆಯ ಸಿಬ್ಬಂದಿಯಿಂದ ಈ ಶಾಲೆಗಳಿಗೆ ಹುದ್ದೆಗಳನ್ನು ಪ್ರಭಾರ ವ್ಯವಸ್ಥೆಯ ಮೂಲಕ ತಾತ್ಕಾಲಿಕವಾಗಿ ತುಂಬಲಾಗಿದೆ.

ಇ ಈ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆಎಷ್ಟು; ಯಾವ ದಿನಾಂಕದಿಂದ ಈ ಹುದ್ದೆಗಳು ಖಾಲಿ ಇವೆ (ವಿವರ ನೀಡುವುದು):

ಬೋಧಕ ಶಿಕ್ಷಕರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲ. ಆದುದರಿಂದ ಯಾವ ದಿನಾಂಕದಿಂದ ಹುದ್ದೆಗಳು ಖಾಲಿ ಇವೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಈ ಆಶ್ರಮ ಶಾಲೆಗಳಲ್ಲಿಯೂ ಅಡಿಗೆ ಸಿಬ್ಬಂದಿಯವರ ಕೊರತೆಯಿರುವುದು ನಿಜವೆ; ಹಾಗಿದ್ದಲ್ಲಿ, ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಹುದ್ದೆಗಳ ಮಂಜೂರಾತಿ ಪ್ರಸ್ತಾವನೆಯ ಪರಶೀಲನೆಯಲ್ಲಿದೆ. ಹುದ್ದೆಗಳ ಮಂಜೂರಾತಿ ಆದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಪ್ರಸ್ತುತ ಹಿಂದುಳಿದ ವರ್ಗಗಳ ಇಲಾಖೆಯಿಂದ ಹುದ್ದೆಗಳನ್ನು ಪ್ರಭಾರದಲ್ಲಿರಿಸಲಾಗಿದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಹಿಂದುಳಿದ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆ ಎಷ್ಟಿದೆ ಎಂದು ಕೇಳಿದ್ದಕ್ಕೆ 4 ಮಂಜೂರು ಆಗಿವೆ, 2 ಆಶ್ರಮ ಶಾಲೆ ಪ್ರಾರಂಭವಾಗಿದೆ ಎಂದು ಉತ್ತರಿಸಿದ್ದಾರೆ. ಆ 2 ಆಶ್ರಮ ಶಾಲೆಗಳು ಯಾವುದು ಎನ್ನುವುದನ್ನು ಇಲಾಖೆಯವರು ಸರಿಯಾಗಿ ಹೇಳಲಿಲ್ಲ. ಆ ಎರಡು ಶಾಲೆಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? 2008-09ನೇ ಸಾಲಿನಲ್ಲಿ ಏನಾದರೂ ಪ್ರಾರಂಭ ಮಾಡುತ್ತೀರಾ? ಆ ಆಶ್ರಮ ಶಾಲೆಗಳನ್ನು ಜಾಸ್ತಿ ಏಕೆ ಮಾಡಬೇಕೆಂದರೆ, ಧಾರವಾಡ, ಹುಬ್ಬಳ್ಳಿ, ಬೆಳಗಾಂ, ದಾವಣಗೆರೆ, ಬಳ್ಳಾರಿ ಜಿಲ್ಲೆಯಿಂದ ಚಿಕ್ಕಮಗಳೂರಿಗೆ ಕೂಲಿ ಕೆಲಸಕ್ಕೆ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ/ ಪಂಗಡದವರು ಬರುತ್ತಾರೆ. ಚಿಕ್ಕಮಗಳೂರಿನಲ್ಲಿ, ಕಡೂರಿನಲ್ಲಿ ಹೆಚ್ಚು ಆಶ್ರಮ ಶಾಲೆಗಳನ್ನು ತೆರೆದರೆ ಒಳ್ಳೆಯದು. ಎಲ್ಲಾ ಆಶ್ರಮ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಅಡಿಗೆಯವರು ಇದ್ದಾರೆಯೇ ಎಂದು ಕೇಳಿದ್ದಕ್ಕೆ ಬೋಧಕ/ ಬೋಧಕೇತರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲ, ಪ್ರಭಾರ ವ್ಯವಸ್ಥೆ ಮೂಲಕ

ತಾತ್ಕಾಲಿಕವಾಗಿ ಭರ್ತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಇದನ್ನು ಏತಕ್ಕೋಸ್ಕರ ಇಷ್ಟು ದಿವಸವಾದರೂ ತುಂಬಿಲ್ಲ? ಆ ಶಾಲೆಗಳಲ್ಲಿರುವ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಮಂಜೂರಾಗಿವೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ, ಈ ಪ್ರಶ್ನೆಗೆ ಉತ್ತರಗಳು ಸಮಂಜಸವಾಗಿಲ್ಲ. ಏನೋ ಪ್ರಶ್ನೋತ್ತರ ವೇಳೆಯಲ್ಲಿ ತಾವು ಕೂಡ ಅಧ್ಯಕ್ಷರು ಅದನ್ನು ಓಡಿಸಿಕೊಂಡು ಹೋಗುವುದರಿಂದ ಇಲಾಖೆಯ ಅಧಿಕಾರಿಗಳು ಬಹಳ ಕೆಟ್ಟದಾಗಿ.

ಅಧ್ಯಕ್ಷರು: ಕೃಷ್ಣಮೂರ್ತಿಯವರೆ, ಅಧ್ಯಕ್ಷರ ಮೇಲೆ ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾನು ಅಧ್ಯಕ್ಷರ ಮೇಲೆ ಆರೋಪ ಮಾಡುತ್ತಿಲ್ಲ.

ಅಧ್ಯಕ್ಷರು: No, no. ನಾನು ಓಡಿಸಿಕೊಂಡು ಹೋಗುತ್ತಿಲ್ಲ. ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಈ ರೀತಿ ನೀವು ಗಂಭೀರವಾಗಿ ಹೇಳುವುದು ಸರಿಯಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನೀವು one hour fix ಮಾಡಿ.

ಅಧ್ಯಕ್ಷರು: ಹೌದು, one hour ನಲ್ಲಿ ಎಷ್ಟು ಆಗುತ್ತದೆಯೋ ಅಷ್ಟು. ಎಲ್ಲರಿಗೂ ಅವಕಾಶವಾಗುವುದಿಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಪ್ರಶ್ನೆಗೆ ಉತ್ತರ ಸರಿಯಾಗಿಲ್ಲದಿದ್ದರೆ (ಗೊಂದಲ) ನಾವು ಪ್ರಶ್ನೆ ಕೇಳಿದರೆ ವಿಧಾನಸಭೆಯಲ್ಲಿ.... (ಗೊಂದಲ).

ಅಧ್ಯಕ್ಷರು: ನೀವು ಈ ರೀತಿ ಆಪಾದನೆ ಮಾಡಿದ್ದು ಸರಿಯಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾನು ಆಪಾದನೆ ಮಾಡುತ್ತಿಲ್ಲ. (ಗೊಂದಲ) ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಉತ್ತರವೇ?

ಅಧ್ಯಕ್ಷರು: No, no, no. ಈ ರೀತಿ ಓಡಿಸಿಕೊಂಡು ಹೋಗುವುದು ಎಂದು ಹೇಳುವುದು ಸರಿಯಲ್ಲ. ನೋಡಿ, ಸಭಾಧ್ಯಕ್ಷರ ಬಗ್ಗೆ ಹಗುರವಾಗಿ ಮಾತನಾಡುವ ಹಾಗಿಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾನು ಹಗುರವಾಗಿ ಮಾತನಾಡಲಿಲ್ಲ.

ಅಧ್ಯಕ್ಷರು: ನಾನು Discipline maintain ಮಾಡುತ್ತಿದ್ದೇನೆ. ನೀವು ಈ ರೀತಿ ಆಗಾಗ್ಗೆ ಮಾತನಾಡುತ್ತೀರಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ತಾವು emotional ಆಗಬಾರದು.

ಅಧ್ಯಕ್ಷರು: ಇದು emotional ಅಲ್ಲ. ನೀವು ಈ ರೀತಿ ಸಭಾಧ್ಯಕ್ಷರ ಸ್ಥಾನದ ಬಗ್ಗೆ ಹಗುರವಾಗಿ ಮಾತನಾಡಬಾರದು ನೀವು ಈ ರೀತಿ ಆಗಾಗ್ಗೆ ಮಾತನಾಡುತ್ತೀರಿ. ನೀವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಸ್ವಲ್ಪ hour ಜಾಸ್ತಿ ಮಾಡಿ. ಪ್ರಶ್ನೆಗಳಿಗೆ ಸರಿಯಾದ ಉತ್ತರವಿಲ್ಲದಿದ್ದರೆ ಸರಿಯಾಗಿ ಉತ್ತರ ಕೊಡಿ ಎಂದು ಹೇಳಿ.

ಅಧ್ಯಕ್ಷರು: ಪ್ರಶ್ನೆ ಕೇಳುವುದು ಬಿಟ್ಟು subject ಬಿಟ್ಟು ಬೇರೆ ವಿಚಾರಕ್ಕೆ ನೀವು ಹೋಗುತ್ತೀರಿ? ಏನಿದು? ಪ್ರಶ್ನೆ ಕೇಳಿ. ಅವಕಾಶ ಕೊಟ್ಟಿಲ್ಲವೇ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಸರಿಯಾದ ಉತ್ತರ ನನಗೆ ಸಿಗದಿರುವುದರಿಂದ ಮಾನ್ಯ ಮಂತ್ರಿಯವರು ಇದರ ಬಗ್ಗೆ ಪೂರ್ಣ ವಿಚಾರವನ್ನು ನನಗೆ ಸಭೆಯ ಮುಖಾಂತರ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಸುಧಾಕರ: ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಕಳೆದ ಆಯವ್ಯಯದಲ್ಲಿ ಪ್ರಸ್ತಾಪಿಸಿ ಅನುಷ್ಠಾನಗೊಳಿಸಲಾಗಿದೆ. 2007-08ನೇ ಸಾಲಿನಿಂದ ಮಾತ್ರ ಇದು ಅನುಷ್ಠಾನಕ್ಕೆ ಬರುತ್ತಿರುವುದು. 2007-08ನೇ ಸಾಲಿನಲ್ಲಿ 4 ಕಡೆ ಆಶ್ರಮ ಶಾಲೆಗಳನ್ನು ಅಲೆಮಾರಿ ಜನಾಂಗಕ್ಕೆ ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ತುಮಕೂರು, ಬೆಳಗಾಂ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರಾರಂಭಿಸಬೇಕೆಂದಾಗ, ಗುಲ್ಬರ್ಗಾ ಮತ್ತು ಬೆಳಗಾಂ ನಲ್ಲಿ ಮಾತ್ರ ಪ್ರವೇಶಕ್ಕೆ ಅರ್ಜಿಗಳು ಬಂದಿವೆ. ಅಲ್ಲಿ ನಮಗೆ Strength ಸಿಕ್ಕಿಲ್ಲ. ತುಮಕೂರಿನಲ್ಲೂ ಸಹ ತಾವು ಹೇಳಿದ ಹಾಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆ ಪ್ರಸ್ತಾವನೆ ಕಳೆದ ಸಾಲಿನಲ್ಲಿ ಇಲ್ಲ. ಇದನ್ನು ಬರುವಂಥ ಸಾಲಿನಲ್ಲಿ ತೆಗೆದುಕೊಂಡು, ಎಲ್ಲಿ ಅಲೆಮಾರಿ ಜನಾಂಗ ಹೆಚ್ಚು ಇದ್ದಾರೆ ಅಲ್ಲಿ ಪ್ರಾರಂಭಿಸಲಿಕ್ಕೆ ನಾನು ಪ್ರಯತ್ನಿಸುತ್ತೇನೆಂದು ಹೇಳುತ್ತಾ, ತಾವು ಕೇಳಿರುವುದು 2007-08ನೇ ಸಾಲಿನಲ್ಲಿ ಅಗಿರುವುದರಿಂದ ಈ ಹುದ್ದೆಗಳ ಬಗ್ಗೆ ಪ್ರಸ್ತಾವನೆಯು ಈಗಾಗಲೇ ಆರ್ಥಿಕ ಇಲಾಖೆಯ ಮುಂದಿದೆ. ಈ ಸಾಲಿನಲ್ಲಿ ಅದಕ್ಕೆ ಮಂಜೂರಾತಿ ಪಡೆದು, ತುಂಬುವಂಥ ಕೆಲಸ ಇದೇ ಸಾಲಿನಲ್ಲಿ ಮಾಡುತ್ತೇನೆಂದು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಇನ್ನೂ ಎಷ್ಟು ವರ್ಷ ಬೇಕು? ಆರ್ಥಿಕ ಇಲಾಖೆಯಲ್ಲಿ ಏಕೆ ತಡೆಯಾಯಿತು? ಯಾವಾಗ ಅಡಿಗೆಯವರು, ಬೋಧಕರನ್ನು, ಶಿಕ್ಷಕರನ್ನು ನೇಮಿಸುತ್ತೀರಿ? ಏತಕ್ಕಾಗಿ ಎಷ್ಟು ದಿವಸವಾದರೂ ಮಾಡಲಿಲ್ಲ? ಎಷ್ಟು ಜನ ವಲಸೆ ಹೋಗುತ್ತಾರೆಂದು ಇಲಾಖೆಯ ವತಿಯಿಂದ ಏನಾದರೂ ಸರ್ವೆ ಮಾಡಿಸಿದ್ದೀರಾ? ಹೆಚ್ಚು ಕಡಿಮೆ 40 ರಿಂದ 50 ಸಾವಿರ ಜನ ಚಿಕ್ಕಮಗಳೂರು ಜಿಲ್ಲೆಗೆ ರಾಯಚೂರು, ಗುಲ್ಬರ್ಗಾ ಈ ಭಾಗದಿಂದ ಕೆಲಸ ಮಾಡಲಿಕ್ಕೆ ವಲಸೆ ಬರುತ್ತಿದ್ದಾರೆ. ಆದುದರಿಂದ, ಯಾವಾಗ ಈ ಬೋಧಕರನ್ನು ನೇಮಕಾತಿ ಮಾಡುತ್ತೀರಿ? ಅದಕ್ಕೆ ಆರ್ಥಿಕ ಇಲಾಖೆ ಯಾವಾಗ ಅನುಮತಿ ಕೊಡುತ್ತದೆ?

ಯಾವಾಗ ಅಡಿಗೆಯವರನ್ನು ನೇಮಕ ಮಾಡುತ್ತೀರಿ? ಅಲ್ಲಿ ಗುತ್ತಿಗೆಯಾಧಾರದ ಮೇಲೆ ಕೆಲಸ ಮಾಡುತ್ತಿರುವವರು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಡಿ. ಸುಧಾಕರ: ತಮಗೆ ಈಗಾಗಲೇ ತಿಳಿಸಿದ ಹಾಗೆ ಆರ್ಥಿಕ ಇಲಾಖೆಗೆ ಮಂಜೂರಾತಿಗಾಗಿ ಹೋಗಿರುವುದರಿಂದ ಇದೇ ಸಾಲಿನಲ್ಲಿ ಮಂಜೂರಾತಿ ಪಡೆದುಕೊಂಡು ತುಂಬಿಸುವ ಕೆಲಸ ನಾವು ಮಾಡುತ್ತೇವೆ.

ಗಾರ್ಮೆಂಟ್ ನೌಕರರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**120(512)**
ಸದಸ್ಯರ ಹೆಸರು	:	**ಶ್ರೀ. ನರೇಂದ್ರಬಾಬು ಎನ್.ಎಲ್.** **(ಮಹಾಲಕ್ಷ್ಮಿ ಲೇಔಟ್)**
ಉತ್ತರಿಸಬೇಕಾದ ಸಚಿವರು	:	**ಶ್ರೀ ಬಚ್ಚೇಗೌಡ ಬಿ.ಎನ್.** **(ಕಾರ್ಮಿಕ ಸಚಿವರು)**

ಅ) ರಾಜ್ಯದ ಮತ್ತು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವ ಗಾರ್ಮೆಂಟ್ಸ್ ನೌಕರರ ಸಂಖ್ಯೆ ಎಷ್ಟು; (ವಿವರ ನೀಡುವುದು),

30-6-2008ರಂದು ರಾಜ್ಯದಲ್ಲಿರುವ ಒಟ್ಟು 920 ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕ ವಿವರ ಈ ಕೆಳಕಂಡಂತಿದೆ.

ಒಟ್ಟು ಕಾರ್ಮಿಕರ ಸಂಖ್ಯೆ- 3,62,249

ಪುರುಷ ಕಾರ್ಮಿಕರ ಸಂಖ್ಯೆ-1,25,478

ಮಹಿಳಾ ಕಾರ್ಮಿಕರ ಸಂಖ್ಯೆ-2,36,771

ಬೆಂಗಳೂರು ನಗರದಲ್ಲಿರುವ 910 ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ವಿವರ ಈ ಕೆಳಕಂಡಂತಿದೆ.

ಒಟ್ಟು ಕಾರ್ಮಿಕರ ಸಂಖ್ಯೆ-3,55,806

ಪುರುಷ ಕಾರ್ಮಿಕರ ಸಂಖ್ಯೆ-1,23,362

ಮಹಿಳಾ ಕಾರ್ಮಿಕರ ಸಂಖ್ಯೆ-2,32,444

ಆ) ಈ ಕಾರ್ಮಿಕರ ಹಿತ ಕಾಪಾಡಲು ಆರೋಗ್ಯ ಮತ್ತು ಉದ್ಯೋಗ ರಕ್ಷಣೆ ನೀಡಲು ಸರ್ಕಾರದ ಕ್ರಮಗಳೇನು;

ಕಾರ್ಮಿಕರ ಹಿತ ಕಾಪಾಡಲು ಆರೋಗ್ಯ ಮತ್ತು ಉದ್ಯೋಗ ರಕ್ಷಣೆ ನೀಡಲು ಈ ಕೆಳಗಿನ ಕ್ರಮಗಳು ಜಾರಿಯಲ್ಲಿರುತ್ತವೆ.

1) ಕಾರ್ಮಿಕರ ಸಂಖ್ಯೆ 500 ಕ್ಕಿಂತ ಹೆಚ್ಚಿರುವ ಕಾರ್ಖಾನೆಗಳಲ್ಲಿ ಒಬ್ಬರು ವೈದ್ಯರನ್ನು ನೇಮಿಸಿಕೊಳ್ಳುವುದು ಕಡ್ಡಾಯವಾಗಿದೆ.

2) 500 ಕ್ಕಿಂತ ಹೆಚ್ಚು ಕಾರ್ಮಿಕರು ಇರುವ ಕಾರ್ಖಾನೆಗಳಲ್ಲಿ ಆಂಬುಲೆನ್ಸ್ ಕೊಠಡಿ, ಅಂಬುಲೆನ್ಸ್ ವ್ಯಾನ್ ಹಾಗೂ ಪೂರಕ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಜಾರಿಯಲ್ಲಿದೆ.

3) 500 ಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ನೇಮಿಸಿಕೊಳ್ಳುವ ನೇಮಿಸಿಕೊಂಡು ಆ ಮೂಲಕ ಮಹಿಳಾ ಕಾರ್ಮಿಕರ ಕುಂದು ಕೊರತೆಯನ್ನು ನಿವಾರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಮಹಿಳಾ ಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ನಿರ್ವಹಿಸುತ್ತಿರುವ ಕಾರ್ಖಾನೆಯು ಲೈಂಗಿಕ ಕಿರುಕುಳ ನಿವಾರಣಾ ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿದೆ.

4) ಉದ್ಯೋಗದ ಬಗ್ಗೆ ಏನಾದರೂ ತೊಂದರೆ ಇದ್ದಲ್ಲಿ ಕೈಗಾರಿಕಾ ವಿವಾದ ಕಾಯ್ದೆ ಅಡಿಯಲ್ಲಿ ಕಾರ್ಮಿಕರು ವಿವಾದವನ್ನು ಹೂಡಿ ಪರಿಹಾರವನ್ನು ಪಡೆಯಬಹುದಾಗಿದೆ.

ಇ) ಈ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿಸಲು ಸರ್ಕಾರದ ಕ್ರಮವೇನು; (ವಿವರ ನೀಡುವುದು);

ಮಹಿಳಾ ಕಾರ್ಮಿಕರ ಸರ್ವಾಂಗೀಣ ಸಬಲೀಕರಣಕ್ಕಾಗಿ 2007–08ನೇ ಸಾಲಿನಿಂದ ಸರ್ಕಾರವು ಮಹಿಳಾ ಹಕ್ಕು ತರಬೇತಿ ಮತ್ತು ಸುರಕ್ಷತಾ ಉಸ್ತುವಾರಿ ಕೇಂದ್ರವನ್ನು ಮಂಜೂರು ಮಾಡಿದೆ. ಇದು 2008–09ನೇ ಸಾಲಿನಲ್ಲಿ ಕಾರ್ಯರೂಪಕ್ಕೆ ಬಂದಿದೆ.

ಈ) ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ನೀಡುವ ಸಂಬಳವೆಷ್ಟು; (ವಿವರ ನೀಡುವುದು)

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಸರ್ಕಾರವು ನಿಗದಿಪಡಿರುವ ಕನಿಷ್ಟ ವೇತನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

<u>ಅನುಬಂಧ</u>

ಕ್ರ ಸಂ.	ಕೆಲಸದ ವರ್ಗಗಳು	ದಿನ ಒಂದಕ್ಕೆ ನಿಗದಿಯಾದ ಕನಿಷ್ಟ ವೇತನ			
		ವಲಯ–1 ರೂ.	ವಲಯ–2 ರೂ.	ವಲಯ–3 ರೂ.	ವಲಯ–4 ರೂ.
	<u>ಅತಿ ಕುಶಲಿ</u>				
1	ನಕಾಶೆ ಮಾಡುವವ	78–70	77–70	76–70	72–20
2	ಗುರುತು ಮಾಡುವವ				

	ಹಾಗೂ				
3	ಕತ್ತರಿಸುವವ				
4	ದರ್ಜಿ				
5	ನಕಾಶೆ ಹಾಗೂ ಗುರುತು ಮಾಡುವವ				
	<u>ಕುಶಲಿ</u>				
1	ದರ್ಜಿ(1ನೇ ದರ್ಜಿ)				
2	ಮುಖ್ಯ ಅಡಿಗೆಯವ				
3	ಡ್ರೈವರ್(ಚಾಲಕ)				
4	ಕತ್ತರಿಸುವ ಯಂತ್ರ ಚಾಲಕ	77–70	76–70	76–20	71–70
5	ಪರೀಕ್ಷಕ				
6	ದರ್ಜಿ ಮೇಸ್ತ್ರಿ				
7	ಗುರುತು ಮಾಡಿ ಕತ್ತರಿಸುವ				
	<u>ಅರೆ ಕುಶಲಿ</u>				
1	ದರ್ಜಿ(1ನೇ ದರ್ಜಿ)				
2	ಖಾಜಾ ಮಿಷನ್ ಚಾಲಕ				
3	ತಡೆ ಚಕ್ರದ ಮಿಷನ್ ಚಾಲಕ (ಓವರ್ ಲಾಕರ್)	76–20	72–20	71–70	69–40
4	ಇಸ್ತ್ರಿ ಮಾಡುವವ				
5	ಅಳತೆ ಪರೀಕ್ಷಿಸುವವ				
6	ಗುಂಡಿ ಖಾಜಾ ಹೊಲಿಯುವವ				
	<u>ಕುಶಲಿಯಲ್ಲದವ</u>				
1	ಸಹಾಯಕ				
2	ರವಾನಿಸುವವ	77–70	76–70	76–20	71–70
3	ಮಾಲಿ				

4	ವಿತರಣೆ				
5	ಭೋಜನಾಲಯದ ಕೆಲಸಗಾರ				
6	ಟ್ರಿಮ್ ಮಾಡುವವ				
7	ಕೂಲಿ				
8	ಬಟ್ಟೆ ಹರಡುವವ				
9	ದರ್ಜಿ–3ನೇ ದರ್ಜಿ ಪ್ಯಾಕ್ ಮಾಡುವವ				
10	ವಾಚ್ ಅಂಡ್				
11	ವಾರ್ಡ್				
12	ಕುಶಲರಲ್ಲದ ಇನ್ನಿತರ				
	ಕಚೇರಿ ಸಿಬ್ಬಂದಿ				
1	ಲೆಕ್ಕ ಪತ್ರದ ಅಕೌಂಟೆಂಟ್				
2	ನಗದಿ ಗುಮಾಸ್ತ	78–70	77–70	75–70	72–20
3	ಶೀಘ್ರಲಿಪಿಗಾರ				
4	ಬೆರಳಚ್ಚುಗಾರ–ಗುಮಾಸ್ತ				
5	ಬೆರಳಚ್ಚುಗಾರ				
6	ಗುಮಾಸ್ತ				
7	ಸರಕು ಗುಮಾಸ್ತ	77–70	76–70	76–20	71–70
8	ಸ್ವಾಗತಕಾರ				
9	ಟೆಲಿಫೋನ್ ನಿರ್ವಾಹಕ				
10	ಟೆಲಿಫೋನ್ ನಿರ್ವಾಹಕ				
11	ಆಫೀಸ್ ಬಾಯ್	71–70	69–40	68–40	61–90

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮತ್ತು ನಗರದಲ್ಲಿರುವ ಗಾರ್ಮೆಂಟ್ಸ್‌ಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಅದರಲ್ಲಿ 920 ರಾಜ್ಯಾದ್ಯಂತ ಇವೆ ಎಂದು ಹೇಳುತ್ತಾರೆ. 910 ಬೆಂಗಳೂರು ನಗರದಲ್ಲಿವೆ ಎಂದು ಹೇಳುತ್ತಾರೆ. ಅಂದರೆ ಬೆಂಗಳೂರು ನಗರ ಹೊರತುಪಡಿಸಿದರೆ ಕೇವಲ 10 ಗಾರ್ಮೆಂಟ್ಸ್ ಕಾರ್ಖಾನೆಗಳು ಮಾತ್ರ ಬೇರೆ ಕಡೆಗೆ ಇವೆ ಎಂದು ಹೇಳುತ್ತರೆ. ನಾನು ಪ್ರಶ್ನೆ ಸಂಖ್ಯೆ (ಅ) ನಲ್ಲಿ ಇರುವುದನ್ನು ಸ್ಪಷ್ಟೀಕರಣ ಕೇಳುವುದಕ್ಕೆ ಬಯಸುತ್ತೇನೆ. ಎರಡನೇಯದಾಗಿ, 500 ಕ್ಕಿಂತ ಹೆಚ್ಚು ಕಾರ್ಮಿಕರು ಇರುವ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಮಹಿಳಾ ಕಲ್ಯಾಣಾಧಿಕಾರಿಗಳನ್ನು ನೇಮಿಸಿ ಅವರ ಕಷ್ಟ ಸುಖಗಳನ್ನು ಕೇಳತಕ್ಕಂಥ ಮತ್ತು ಲೈಂಗಿಕ ಕಿರುಕುಳ ಆಗದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ನಿವಾರಣ ಸಮಿತಿಯನ್ನು ರಚಿಸಲಾಗುವುದು ಎಂದು ಹೇಳಿದ್ದಾರೆ. ಇರತಕ್ಕಂಥ ಮಹಿಳಾ ಕಾರ್ಮಿಕರ ಸಂಖ್ಯೆ ಮಾನ್ಯ ಸಚಿವರು ಕೊಟ್ಟಿರುವ ಹಾಗೆ 2,32,444 ಅಂದರೆ, 500 ಕಾರ್ಮಿಕರಿಗೆ ಒಬ್ಬರು ಎಂದರೆ 900 ಕಾರ್ಖಾನೆಗಳಲ್ಲಿ ಮಹಿಳಾ ಕಲ್ಯಾಣಾಧಿಕಾರಿಗಳು ಮತ್ತು ಲೈಂಗಿಕ ನಿವಾರಣಾ ಸಮಿತಿಗಳು, ಎಷ್ಟೋ ಹೆಣ್ಣುಮಕ್ಕಳು ಹೇಳಿಕೊಳ್ಳಲಿಕ್ಕೆ ಆಗದೇ ಬಹಳ ಕಷ್ಟವನ್ನು ಕಾರ್ಖಾನೆಗಳಲ್ಲಿ ಅನುಭವಿಸತಕ್ಕಂಥದ್ದು ಆಗುತ್ತಿದೆ. ಈ ಸಮಿತಿಗಳು ನಿಜವಾಗಲೂ ಆಗಿದೆಯೆ? ಎಂದು ಮಾನ್ಯ ಸಚಿವರು ಉತ್ತರ ಕೊಡಬೇಕು. ವಿಶೇಷವಾಗಿ ಮಹಿಳಾ ಕಾರ್ಮಿಕರಿಗೆ ಒಂದು ದಿವಸ ರಜೆ ಕೊಡುವುದಿಲ್ಲ. ನೀವು ನಂಬಿದರೆ ನಂಬಿ, ಬಹಳಷ್ಟು ಜನಕ್ಕೆ ಇದರ ಅನುಭವ ಆಗಿರಬಹುದು. ಒಂದು ದಿವಸ ಏನಾದರೂ ರಜೆ ಹಾಕಿದರೆ ಅವರನ್ನು ಕೆಲಸದಿಂದ ತೆಗೆಯುತ್ತಾರೆ. ಇವರಿಗೆ ರಕ್ಷಣೆ ಕೊಡುವ ಬಗ್ಗೆ ಕೇಳಿದ್ದಕ್ಕೆ ತಾವು, ಉದ್ಯೋಗದ ಬಗ್ಗೆ ಏನಾದರೂ ತೊಂದರೆ ಇದ್ದಲ್ಲಿ ಕೈಗಾರಿಕಾ ವಿವಾದ ಕಾಯ್ದೆ ಅಡಿಯಲ್ಲಿ ಕಾರ್ಮಿಕರು ವಿವಾದವನ್ನು ಹೂಡಿ ಪರಿಹಾರ ಪಡೆಯಬಹುದು ಎಂದು ಹೇಳುತ್ತೀರಿ. ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ, ನನ್ನ ಹಳೆಯ ಮತ್ತು ಹೊಸ ಕ್ಷೇತ್ರದ ವ್ಯಾಪ್ತಿಯಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮಹಿಳಾ ಕಾರ್ಮಿಕರು ಇದ್ದಾರೆ. ಒಂದು ದಿವಸ ರಜೆ ಹಾಕಿದ್ದಕ್ಕೆ ಬಹಳಷ್ಟು ಕಾರ್ಖಾನೆಗಳಲ್ಲಿ ಕೆಲಸದಿಂದ ತೆಗೆದಿರುವುದರಿಂದ ಮತ್ತೆ ಕೆಲಸಕ್ಕೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಈ ಸ್ಥಿತಿ ಇದೆ. ಮಾನ್ಯ ಸಚಿವರ ಬಳಿಗೆ ಖುದ್ದಾಗಿ ಹೋಗಿ ಹೇಳಿದ್ದೇನೆ. ನನ್ನ (ಇ) ಪ್ರಶ್ನೆಗೆ, ಮಹಿಳಾ ಹಕ್ಕು ತರಬೇತಿ ಮತ್ತು ಸುರಕ್ಷತಾ ಉಸ್ತುವಾರಿ ಕೇಂದ್ರವನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ. ನಿಜವಾಗಲೂ ಆ ಕೇಂದ್ರಗಳು ಕೆಲಸ ಮಾಡುತ್ತಿವೆಯೇ ಎಂದು ಕೇಳುತ್ತಾ, ಕನಿಷ್ಠ ವೇತನದ ಬಗ್ಗೆ ತಾವೇನು ಅನುಬಂಧದ ಪಟ್ಟಿ ಕೊಟ್ಟಿದ್ದೀರಾ, ಅಲ್ಲಿರುವುದು ಬೆಂಗಳೂರು ಅಥವಾ

ಬೇರೆ ಕಡೆಗಾಗಲಿ ಜೀವನ ಮಾಡುವುದಕ್ಕೆ ಬಹಳ ಕಷ್ಟವಿದೆ. ಇದನ್ನು ಹೆಚ್ಚಳ ಮಾಡುವ ಉದ್ದೇಶ ತಮಗಿದೆಯೆ? ಈ ಬಗ್ಗೆ ತಾವು ಉತ್ತರ ನೀಡಬೇಕೆನ್ನುವ ಮನವಿ ಮಾಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ರಾಜ್ಯದಲ್ಲಿ ಕಾರ್ಮಿಕ ಕಾಯ್ದೆಯಡಿಯಲ್ಲಿ, ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಲಾಗಿದೆ. ರಾಜ್ಯದಲ್ಲಿ ಒಟ್ಟು 920 ಗಾರ್ಮೆಂಟ್ಸ್ ಇವೆ. ಇದರಲ್ಲಿ 3,62,249 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ 2,36,771 ಮಹಿಳಾ ಕಾರ್ಮಿಕರು ಮತ್ತು 1,25,478 ಪುರುಷ ಕಾರ್ಮಿಕರು ಇದ್ದಾರೆ. ನಗರದಲ್ಲಿ ಒಟ್ಟು 910 ಗಾರ್ಮೆಂಟ್ಸ್ ನಲ್ಲಿ 3,55,806 ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಇದರಲ್ಲಿ 2,32,444 ಮಹಿಳಾ ಕಾರ್ಮಿಕರು ಮತ್ತು 1,23,362 ಪುರುಷ ಕಾರ್ಮಿಕರು ಇದ್ದಾರೆ. ಮಾನ್ಯ ಸದಸ್ಯರು ಕೇಳಿರುವುದು, ಮಹಿಳಾ ಕಾರ್ಮಿಕರ ಸಂಖ್ಯೆ ಎಲ್ಲಿ 500 ಕ್ಕಿಂತ ಹೆಚ್ಚಿದೆ ಅಲ್ಲಿ ಅವರಿಗೆ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚಾಗಿರುವುದರಿಂದ 173 ಕಾರ್ಖಾನೆಗಳಲ್ಲಿ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ. 138 ಮತ್ತು ಮಹಿಳಾ ವೈದ್ಯಾಧಿಕಾರಿಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದಾರೆ. 500 ಕಾರ್ಮಿಕರಿಗಿಂತ ಹೆಚ್ಚಾಗಿರುವ ಕಾರ್ಖಾನೆಗಳಲ್ಲಿ ಒಂದು ಅಂಬುಲೆನ್ಸ್ ವ್ಯಾನ್ ಒದಗಿಸಿಕೊಡಬೇಕಾಗಿದೆ, ಅದಕ್ಕಾಗಿ 139 ಕಾರ್ಖಾನೆಗಳಲ್ಲಿ ಅಂಬುಲೆನ್ಸ್ ಅನ್ನು ಒದಗಿಸಿದ್ದು ಒಟ್ಟಾರೆಯಾಗಿ 154 ಕಾರ್ಖಾನೆಗಳಲ್ಲಿ ಒದಗಿಸಲಾಗಿದೆ. ಕಾರ್ಮಿಕರ ದೃಷ್ಟಿಯಿಂದ 500 ಕಿಂತ ಹೆಚ್ಚು ಕಾರ್ಮಿಕರು ಇರುವ ಕಡೆ ಮಹಿಳಾ ಕಲ್ಯಾಣಾಧಿಕಾರಿಗಳನ್ನು ನೇಮಿಸಿಕೊಂಡು ಅವರ ಮೂಲಕ ಮಹಿಳೆಯರ ಕುಂದು ಕೊರತೆಗಳನ್ನು ಕೇಳಲಾಗುತ್ತಿದೆ, 173 ಕಾರ್ಖಾನೆಗಳ ಪೈಕಿ 160 ಕಾರ್ಖಾನೆಗಳಲ್ಲಿ ಮಹಿಳಾ ಕಲ್ಯಾಣಾಧಿಕಾರಿಗಳನ್ನು ಕೊಡಲಾಗಿದೆ. ಇದಕ್ಕೆ ವಿರುದ್ಧವಾಗಿರುವವರಿಗೆ ಸುಮಾರು 45 ಪ್ರಕರಣಗಳಲ್ಲಿ ಕ್ರಿಮಿನಲ್ ಕೇಸ್‌ಗಳನ್ನು ಹಾಕಲಾಗಿದೆ. ಲೈಂಗಿಕ ಕಿರುಕುಳ ತಡೆಯುವಂಥ ನಿವಾರಣಾ ಸಮಿತಿಯನ್ನು ಆಯಾ 920 ಕಾರ್ಖಾನೆಗಳ ಪೈಕಿ ಸುಮಾರು 697 ಕಾರ್ಖಾನೆಗಳಲ್ಲಿ ಇಂಥ ಸಮಿತಿಗಳನ್ನು ರಚಿಸಲಾಗಿದೆ. ಇದುವರೆವಿಗೂ ಯಾವುದೇ ಪ್ರಕರಣದಲ್ಲಿ ಈ ರೀತಿ ಲೈಂಗಿಕ ಕಿರುಕುಳವಾಗಿದೆ ಎಂದು ವರದಿ ಬಂದಿಲ್ಲ. ನಾವು ಅದರ ಜವಾಬ್ದಾರಿ ತೆಗೆದುಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಪೊಲೀಸ್‌ನವರು ಕ್ರಿಮಿನಲ್ ಮೊಕದ್ದಮೆ ಹೂಡುತ್ತಾರೆ. ಆ ರೀತಿ ಏನಾದರೂ ಮಹಿಳೆಯರಿಗೆ ಲೈಂಗಿಕ ಕಿರುಕುಳವಾಗಿದ್ದರೆ ಅವರು ಕೂಡ ದೂರು ಕೊಡಬಹುದಾಗಿದೆ. ಫಿರ್ಯಾದು ದಾಖಲಿಸಿ ಅದರ ಮೇಲೆ ಅವರು ಕ್ರಮ ತೆಗೆದುಕೊಳ್ಳಬಹುದು. ಕಾರ್ಮಿಕರ ಕಲ್ಯಾಣಕ್ಕೆ ಬಾಲವಾಡಿ, ಮಹಿಳಾ ಕಾರ್ಮಿಕರಿಗೆ ವಿಶ್ರಾಂತಿ, ಉಪಹಾರ ಗೃಹ, ಪ್ರತ್ಯೇಕ

ಶೌಚಾಲಯ, ಕೊಡಬೇಕೆಂದು ಆ ಬಗ್ಗೆ ಈಗಾಗಲೇ ಮಾನ್ಯ ನರೇಂದ್ರಬಾಬುರವರು ಮಾತನಾಡಿದರು. ಪ್ರಸೂತಿ ಸೌಲಭ್ಯ, ಹೆರಿಗೆ ಭತ್ಯೆ, ಇತ್ಯಾದಿಗಳನ್ನು ಕೊಡುವ ಕೆಲಸವನ್ನು ಮಾಡಿದ್ದೇವೆ ಮತ್ತು ಈ ಬಗ್ಗೆ ಮಾಹಿತಿಯನ್ನು ಉತ್ತರದಲ್ಲಿ ಅವರಿಗೆ ನೀಡಲಾಗಿದೆ. ಇದರಲ್ಲಿ ಅವರು minimum wages ಕೇಳಿದ್ದಾರೆ. ಅದರಲ್ಲಿ ತಾವೇನು highly skilled ಎಂದು ಹೇಳಿದ್ದೀರಿ ರೂ. 108.71 ಕೊಡಲಾಗುವುದು, skilled workers ಗೆ ರೂ. 107.71 semi skilled ನವರಿಗೆ ರೂ. 106.21 unskilled ನವರಿಗೆ ರೂ. 71.30 ಮತ್ತು variable dearness allowance ಸೇರಿ ರೂ. 101.70. ಆಗುತ್ತದೆ, ಈ ಮಾಹಿತಿ ತಮಗೆ ಕಳುಹಿಸಿ ಕೊಟ್ಟಿದ್ದೇನೆ. ಹಿಂದೆ ತಮಗೆ ಹಳೆಯ ಮಾಹಿತಿ ಕೊಟ್ಟಿದ್ದು ಈಗ ಹೊಸ ಮಾಹಿತಿಯನ್ನು ಲೇಟೆಸ್ಟ್ ಇರುವುದನ್ನು ಕಳುಹಿಸಿ ಕೊಡುತ್ತೇನೆ ಇಷ್ಟು ಮಿನಿಮಮ್ ವೇಜಸ್ ನಾವು ಕೊಡುತ್ತೇವೆ.

ಶ್ರೀ ನೆ.ಲ. ನರೇಂದ್ರಬಾಬು: ಅದಕ್ಕೇ ನಾನು ಹೇಳಿದ್ದು ಮಾನ್ಯ ಸಚಿವರು ನನಗೆ ಕೊಟ್ಟಿರುವುದಕ್ಕೆ ಈಗ ಕೊಟ್ಟಿರುವುದಕ್ಕೂ ವೇಜಸ್ ಬಗ್ಗೆ ವ್ಯತ್ಯಾಸ ಇತ್ತು. ತಾವು ಈಗ ವೇಜಸ್ ಬಗ್ಗೆ ಕಳುಹಿಸಿದ್ದೀರಿ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಇದ್ದಾರೆ. ತಾವು ಇದರಲ್ಲಿ ಮೂರು ಲಕ್ಷ ಎಂದು ಕೊಟ್ಟಿದ್ದೀರಿ, ಬಹುಶಃ ತಾವು ಇದನ್ನು ಸ್ಪಷ್ಟವಾಗಿ ಕೊಟ್ಟಿಲ್ಲವೆನ್ನುವುದು ನನ್ನ ಭಾವನೆ. ಏಕೆಂದರೆ, ಇನ್ನು ಬಹಳಷ್ಟು ಕಾರ್ಮಿಕರು ನಮ್ಮ ಕಾರ್ಮಿಕ ಇಲಾಖೆಯ ನೆಟ್‌ಗೆ ಬಂದೇ ಇಲ್ಲ. ನಮ್ಮ ಕಾರ್ಮಿಕ ಇಲಾಖೆಯ ನೆಟ್‌ಗೆ ಬಂದಿಲ್ಲದಿರುವವರು ಇದ್ದಾರೆ. ಎಷ್ಟು ಗಂಟೆ ಕೆಲಸ ಮಾಡಬೇಕು ಎಂಬ ಬಗ್ಗೆ ತಿಳಿಸಬೇಕು. ಏಕೆಂದರೆ, ಅವರನ್ನು ಎಷ್ಟು ದುಡಿಸಿಕೊಳ್ಳುತ್ತಿದ್ದಾರೆಂದರೆ, ಒಂದು ರೀತಿ ಜೀತದಾಳುವಿನ ರೀತಿ ದುಡಿಸಿಕೊಳ್ಳುತ್ತಾರೆ. ಇಲ್ಲಾಂದ್ರೆ ಕೆಲಸದಿಂದ ತೆಗೆದು ಹಾಕುತ್ತಾರೆ. ಅವರು ಕಾರ್ಖಾನೆಗಳಿಗೆ ಪ್ರಯಾಣಿಸಬೇಕಾದರೆ, ಪೀಣ್ಯಾ ಸುತ್ತಾಮುತ್ತ ತಾವು ನೋಡಿದರೆ ಗೊತ್ತಾಗುತ್ತದೆ. ಕುರಿಗಳನ್ನು ಖಾಸಯಿಖಾನೆಗೆ ತೆಗೆದುಕೊಂಡು ಹೋಗುವಂಥ ಸಂದರ್ಭದಲ್ಲಿ ಎಷ್ಟೋ ಗೌರವಯುತವಾಗಿ ಕರೆದುಕೊಂಡು ಹೋಗುತ್ತಾರೆ. ಆದರೆ ಅವರನ್ನು ಕರೆದುಕೊಂಡು ಹೋಗುವುದು ಬಹಳ ಅವ್ಯವಸ್ಥೆ ಇದೆ. ಕಲ್ಯಾಣಾಧಿಕಾರಿಗಳು ಕಾರ್ಖಾನೆಗೆ ಸೀಮಿತವಾಗಿದೆ, ಕಾರ್ಮಿಕರು ಕಾರ್ಖಾನೆಗೆ ಮತ್ತು ಮನೆಗೆ ತಲುಪುವ ಪ್ರಯಾಣದ ವ್ಯವಸ್ಥೆ ಮತ್ತು ಅಲ್ಲಿರುವಾಗ ತಮ್ಮ ನೇತೃತ್ವದಲ್ಲಿ ಇದನ್ನು ಚುರುಕುಗೊಳಿಸುವ ಕಾರ್ಯವಾದರೆ ಸುಮಾರು ಐದು ಲಕ್ಷ ಅಸಂಘಟಿತ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಕೊಟ್ಟಂತೆ ಆಗುತ್ತದೆ.

ಈ ವರ್ಗಕ್ಕೆ ನಿಜವಾಗಿಯೂ ನ್ಯಾಯ ದೊರಕಿಸಿಕೊಟ್ಟರೆ ಮಹಿಳೆಯರು ಮತ್ತು ಪುರುಷರು, ವಿದ್ಯಾವಂತರೂ ಕೂಡ ಅಲ್ಲಿ ಕೆಲಸ ಮಾಡುತ್ತಾರೆ. ನಮ್ಮ ನೇತೃತ್ವದಲ್ಲಿ ಶೋಷಣೆ ರಹಿತವಾಗಿ ಆಗಬೇಕೆಂದು ಕೇಳುತ್ತಾ, ಒಂದು ದಿವಸದಲ್ಲಿ ಎಷ್ಟು ಗಂಟೆ ಕೆಲಸ ಮಾಡಬೇಕೆಂಬುದರ ಬಗ್ಗೆ ಏನಾದರು ನಿಯಮ ಇದೆಯೇ ಮತ್ತೆ ಕಾರ್ಮಿಕರ ಪ್ರಯಾಣಿಕ್ಕೂ ಕೂಡ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಪೀಣ್ಯದಲ್ಲಿ ಸುಮಾರು 5 ಲಕ್ಷ ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಗಾರ್ಮೆಂಟ್ಸ್‌ಗೆ ಹೋಗುವವರ ಸಂಖ್ಯೆ ಜಾಸ್ತಿ ಇದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವಂತೆ ಇವತ್ತಿನ ದಿವಸ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಅವದಿ 8 ಗಂಟೆಯಾಗಿರುತ್ತದೆ. ಅವರು 8 ಗಂಟೆ ಅವದಿಯವರೆಗೆ ಕೆಲಸ ಮಾಡಬೇಕು. ಒಂದು ವೇಳೆ ಹೆಚ್ಚಿಗೆ ಕೆಲಸ ಮಾಡಿದರೆ over time ಮಾಡಿರತಕ್ಕಂಥ ಹಣವನ್ನು ಅವರು ಪಡೆಯುತ್ತಾರೆ. ಮಾನ್ಯ ಸದಸ್ಯರು ತಿಳಿಸಿರುವಂತೆ 10, 12, ಗಂಟೆಯವರೆಗೆ ದುಡಿಸಿಕೊಳ್ಳುತ್ತಾರೆಂದರೆ, ಆರೀತಿಯಾಗಿ ದುಡಿಸಿಕೊಂಡವರಿಗೆ over time wages ಕೊಡಬೇಕಾಗುತ್ತದೆ. ಮತ್ತೆ ಕಾರ್ಖಾನೆಗಳಲ್ಲಿರುವ, ಕಲ್ಯಾಣ ಅಧಿಕಾರಿಗಳು ಕಾರ್ಮಿಕರನ್ನು ಕರೆದುಕೊಂಡು ಬರುವುದಕ್ಕೆ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಗಮನ ಕೊಟ್ಟು ಸಾರಿಗೆ ವ್ಯವಸ್ಥೆಯನ್ನೂ ಸಹ ಮಾಡಿ ಕೊಡಲಾಗುತ್ತದೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ಅವದಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

<u>ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು</u> ದಿನಾಂಕ: 31.07.2008 ತಂದು 09ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 42 ಪ್ರಶ್ನೆಗಳ ಪೈಕಿ 42 ಹಾಗೂ ದಿನಾಂಕ: 30.07.2008 ರಂದು 08ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 70 ಪ್ರಶ್ನೆಗಳ ಪೈಕಿ 69 ಹಾಗೂ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಹಾಗೂ ದಿನಾಂಕ: 29.07.2008ರ ಪಟ್ಟಿ 07ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 75 ಪ್ರಶ್ನೆಗಳ ಪೈಕಿ 71 ಮತ್ತು ಸದನದಲ್ಲಿ ಉತ್ತರಿಸುವ 18 ಪ್ರಶ್ನೆಗಳ ಪೈಕಿ 18 ಹಾಗೂ ದಿನಾಂಕ: 28.07.2008ರಂದು 06ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 84 ಪ್ರಶ್ನೆಗಳ ಪೈಕಿ 77 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

4. ಕಾರ್ಯದರ್ಶಿಯವರ ವರದಿ.

ಶ್ರೀ ಬಿ.ಎಸ್. ಪಾಟೀಲ್, ಕಾರ್ಯದರ್ಶಿ:–

ಗೌರವಾನ್ವಿತ ಸಭಾಧ್ಯಕ್ಷರ ಅನುಮೋದನೆಯೊಂದಿಗೆ 12ನೇ ವಿಧಾನ ಸಭೆಯ

1) ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 9 ಮತ್ತು 10ನೇ ವರದಿಗಳನ್ನು

2) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 5ನೇ ವರದಿಯನ್ನು,

3) ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯ 25ನೇ ವರದಿಯನ್ನು ಹಾಗೂ

4) ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 4ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು)

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿ) ಅವರ ಪರವಾಗಿ 1997 ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 48 ಮತ್ತು 49ನೇ ಪ್ರಕರಣದ ಮೇರೆಗೆ:–

1. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2007–08ನೇ ಸಾಲಿನ ವಾರ್ಷಿಕ ವರದಿ.
2. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2007–08ನೇ ಸಾಲಿನ ವಾರ್ಷಿಕ ವರದಿ.
3. ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2007–08ನೇ ಸಾಲಿನ ವಾರ್ಷಿಕ ವರದಿ ಹಾಗೂ
4. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನ ಮಂಡಿಸುತ್ತೇನೆ.

ಶ್ರೀ ಎಸ್.ಎನ್. ಕೃಷ್ಣಯ್ಯ ಶೆಟ್ಟಿ (ಮುಜರಾಯಿ ಮತ್ತು ವಸತಿ ಸಚಿವರು):–

1962 ಕರ್ನಾಟಕ ವಸತಿ ಮಂಡಳಿ ಅಧಿನಿಯಮದ ಕಲಂ 69ರ ಮೇರೆಗೆ.

1. ಕರ್ನಾಟಕ ಗೃಹ ಮಂಡಳಿಯ 2007–08ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು):–

1956ರ ಕಂಪನಿ ಅಧಿನಿಯಮ 619 (ಎ), (2) ಪ್ರಕರಣದ ಮೇರೆಗೆ.

1. ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಲಿ ನಿಯಮಿತದ 2006-07ನೇ 5ನೇ ವಾರ್ಷಿಕ ವರದಿ.
2. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ನಿಯಮಿತದ 2006-07ನೇ ಸಾಲಿನ 31ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು)
ಕುಮಾರಿ ಶೋಭಾ ಕರಂದ್ಲಾಜೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರ ಪರವಾಗಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262 (3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ.

1. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2006-07ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

1956 ರ ಕಂಪನಿ ಅಧಿನಿಯಮದ ಅನುಚ್ಛೇದ 619 (ಎ) ಮೇರೆಗೆ.

ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು, ಇದರ 2006-07ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

6. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ.

ಅಧ್ಯಕ್ಷರು:- ಮಾನ್ಯ ರಾಮಚಂದ್ರಗೌಡರೆ, ಪ್ರಸ್ತಾವವನ್ನು ಮಂಡಿಸಿ.

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು):- ದಿನಾಂಕ 23ನೇ ಜುಲೈ 2008 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಮಂಡಳಿಗೆ ಇಬ್ಬರು ಸದಸ್ಯರನ್ನು ಹಾಗೂ ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಲು ಚುನಾವಣ ಪ್ರಸ್ತಾಪವನ್ನು ಮಂಡಿಸಿದ್ದು, ಮೇಲ್ಕಂಡ ಸದಸ್ಯರುಗಳನ್ನು ನೇಮಿಸಲು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವನೆಗೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

ಈಗ ಮಾನ್ಯ ಸಚಿವರಾಗಿರುವ ಮಾನ್ಯ ಬಸವರಾಜು ಬೊಮ್ಮಾಯಿರವರು ಮತ್ತು ಮಾನ್ಯ ಮುರುಗೇಶ್ ನಿರಾಣಿಯವರು ಮಾನ್ಯ ಸದಸ್ಯರುಗಳ ಗೌರವಾರ್ಥ ಈ ದಿನ ಮಧ್ಯಾಹ್ನ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ. ದಯವಿಟ್ಟು ತಾವೆಲ್ಲಾ ಅದರಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಮುಂದೂಡಲಾಗಿದೆ.

(ಸದನವು 2 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

7. ನಿಲುವಳಿ ಸೂಚನೆ– ಅನುಮತಿ ಕೋರಿ ಚರ್ಚೆ.

ವಿಷಯ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

ಡಿ.ಕೆ. ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ನಾನು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಪ್ರಸ್ತಾವನೆ ಮಾಡಲಿಲ್ಲ ಎಂದರೆ ನನ್ನ ಆತ್ಮಸಾಕ್ಷಿಗೆ ಮೋಸ ಮಾಡಿದಂಥೇ ಆಗುತ್ತದೆ. ಈ ಎಲ್ಲಾ ಅನಾಹುತಕ್ಕೆ ನಾವೇ ಕಾರಣಕರ್ತರಾಗಿರಬಹುದು, ನಮ್ಮ ಸರ್ಕಾರವೇ ಎಡವಿರಬಹುದು, ಆದರೆ ರಾಜ್ಯ ಮುಂದೆ ಎಡವಬಾರದು. ಈ ರಾಜ್ಯಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಬೇಕು ಎನ್ನತಕ್ಕ ದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸಂಸ್ಕೃತದಲ್ಲಿ ಒಂದು ಮಾತು ಇದೆ. "ನರಾಭೋಗಂ ಶೀಲಾ ಭೋಗಂ ಎಂದು" ಅಂದರೆ ಮನುಷ್ಯನಿಗೆ ಮತ್ತು ಶಿಲೆಗೆ ಒಂದೊಂದು ಕಾಲದಲ್ಲಿ ಒಂದೊಂದು ಯೋಗ, ಬಲ ಕೂಡಿಬರುತ್ತದಂತೆ. ಸಾವಿರಾರು ದೇವಾಲಯಗಳು ಇದೆ. ತಿರುಪತಿ ವೆಂಕಟೇಶ್ವರಸ್ವಾಮಿ ದೇವಾಲಯವನ್ನು ನಾವೆಲ್ಲಾ ನೋಡಿದ್ದೇವೆ.

ಶ್ರೀ ಆರ್. ಅಶೋಕ್: ನಿಮಗೆ ಯಾವಾಗ ನಮ್ಮ ಕಡೆಯ ವಿಚಾರ ಬಂತು?

ಶ್ರೀ ದಿನೇಶ್ ಗುಂಡುರಾವ್: ಮಾನ್ಯ ಶಿವಕುಮಾರ್‌ರವರಲ್ಲಿ ಇರತಕ್ಕ ಪಾಂಡಿತ್ಯ ನಿಮ್ಮಲ್ಲಿ ಯಾರಿಗೂ ಇಲ್ಲ ಎಂದು ಹೇಳುತ್ತಿದ್ದೆನೆ.

ಶ್ರೀ ಕಟ್ಟಾಸುಬ್ರಮಣ್ಯೆ ನಾಯ್ಡು: ನೀವು ಕೂಡ ಬ್ರಾಹ್ಮಣೋತ್ತಮರು: ನಿಮಗೂ ಅದು ಇಲ್ಲ.

ಶ್ರೀ ಸಿದ್ದರಾಮಯ್ಯ: ಬಿಜೆ.ಪಿ.ಯವರೆಲ್ಲರಿಗೂ ಇದು ಇಲ್ಲದೇ ಇರತಕ್ಕದ್ದು ಸಾಮಾನ್ಯ ಅಭಿಪ್ರಾಯ. ಅದಕ್ಕೆ ನಿಮ್ಮನ್ನು ಮೀಟ್ ಮಾಡುವುದಕ್ಕೋಸ್ಕರ ಇವರೊಬ್ಬರನ್ನು ತಯಾರಿ ಮಾಡಿ ಇಟ್ಟುಕೊಂಡಿದ್ದೇವೆ.

ಶ್ರೀ ಆರ್. ಅಶೋಕ್: ನಾವೇನು ಮೀಟ್ ಆಗಿಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ಅದೊಂದಕ್ಕೆ ಅಲ್ಲ. ಎಲ್ಲದಿಕ್ಕೂ ಅವರು ತಯಾರಾಗಲಿ ಎಂದು ಹಾರೈಸುತ್ತೇವೆ.

ಶ್ರೀ ಸಿ.ಟಿ.ರವಿ: ಅವರು ಈ ರೀತಿ ತಯಾರಾಗಿದ್ದು ಎಲ್ಲಿ ಎಂದು ಗೊತ್ತಿರಲಿಲ್ಲ. ಈಗ ನಾನು ತಯಾರಾಗಿದ್ದೇ ನಿಮ್ಮ ಗರಡಿಯಲ್ಲಿ ಎಂದು ಹೇಳಿದರು.

ಶ್ರೀ ಡಿ.ಕೆ. ಶಿವಕುಮಾರ್: ಅವರು ಕೇಳಿದರು. ಆದ್ದರಿಂದ ಹೇಳಿದೆ. ಇಲ್ಲಿ ಬಂದು ಶ್ಲೋಕ ಗೊಣಗುತ್ತಿದ್ದರು. ನಾನು ನಿನಗೊಬ್ಬನಿಗೆಯೆ ಬಿ.ಜೆ.ಪಿ. ಎಂದರೆ ಗೊತ್ತಿರುವುದು, ನನಗೂ ಗೊತ್ತಿದೆ ಎಂದು ಹೇಳಿದೆ. ಏನದು ಎಂದರೆ ನಮಸ್ತೆ ಸದಾ ವತ್ಸಲೆ ಮಾತೃ ಭೂಮಿ, ವಯಾ ಹಿಂದೂ ಭೂಮಿ ಸುಗಂ ವಾದಿತೋಹಂ, ಮಹಾ ಮಂಗಲೆ ಪುಣ್ಯ ಭೂಮಿ.. ಸರಿಯೇ ಕಾಗೇರಿಯವರೆ, Am I right?

ಅಧ್ಯಕ್ಷರು: ನೀವು ಯಾವಾಗ ಶಾಖೆಗೆ ಹೋಗಿದ್ದಿರಿ!

ಒಬ್ಬ ಮಾನ್ಯ ಸದಸ್ಯರು: ಪಾರ್ಟಿಗೆ ಬರುವ ಮೊದಲು ಶಾಖೆಯಲ್ಲೇ ಇದ್ದರು ಎಂದು ಕಾಣುತ್ತದೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ನಮಗೆ ಇದರಿಂದ ಸಂತೋಷವಾಗಿದೆ, ಸಮಾಧಾನವಾಗಿದೆ.

ಶ್ರೀ ಸಿ.ಟಿ.ರವಿ: ಇದಕ್ಕಿಂತಾ ಜಾಸ್ತಿ ಹೇಳಿಸಬೇಡಿ. ಮತ್ತೆ ಅವರ ರಾಜಕೀಯ ಆರೋಗ್ಯ ಕೆಟ್ಟು ಹೋಗುತ್ತದೆ!

ಶ್ರೀ ಡಿ.ಕೆ. ಶಿವಕುಮಾರ್: ಸಂಸ್ಕೃತದಲ್ಲಿ ಒಂದು ಮಾತು ಇದೆ. ಅದು ಏನೆಂದರ, 'ನರಾಭೋಗಂ ಶಿಲಾ ಭೋಗಂ' ಎಂದು. ಅಂದರೆ ಮನುಷ್ಯನಿಗೂ ಶಿಲೆಗೂ ಒಂದೊಂದು ಕಾಲದಲ್ಲಿ ಒಂದೊಂದು ಯೋಗ ಬರುತ್ತದಂತೆ. ಪ್ರಸಿದ್ಧವಾದ ಸಂದರ್ಭಗಳು ನಿರ್ಮಾಣವಾಗುತ್ತದೆ. ಉದಾಹರಣೆಗೆ, ತಿರುಪತಿ ವೆಂಕಟರಮಣಸ್ವಾಮಿ ದೇವಾಲಯ. ಬೇಕಾದಷ್ಟು ಕಡೆ ವೆಂಕಟರಮಣಸ್ವಾಮಿ ದೇವಾಲಯ ಇದೆ. ಆದರೆ ಆ ಎಲ್ಲಾ ದೇವಾಲಯಗಳೂ ತಿರುಪತಿಯಾಗಲು ಸಾಧ್ಯವಿಲ್ಲ. ಹಾಗೆಯೆ, ಬೇಕಾದಷ್ಟು ಕಡೆ ಷಣ್ಮುಖ ದೇವಸ್ಥಾನವನ್ನು ನೋಡುತ್ತೇವೆ. ಎಲ್ಲಾ ಕಡೆ ಶಬರಿಮಲೆಯಾಗಲು ಸಾಧ್ಯವಿಲ್ಲ. ಘಾಟಿಸುಬ್ರಮಣ್ಯ ದೇವಸ್ಥಾನ ಆಗಲು ಸಾಧ್ಯವಿಲ್ಲ. ಆ ರೀತಿ ಕೆಲವು ದೇವಸ್ಥಾನಗಳಿಗೆ ತನ್ನದೇ ಆದ ಪ್ರಸಿದ್ಧತೆ ಇದೆ. ಮಂಜುನಾಥ ದೇವಸ್ಥಾನ, ಈಶ್ವರನ ದೇವಸ್ಥಾನ ನೋಡಿದ್ದೇವೆ. ಆದರೆ ಧರ್ಮಸ್ಥಳಕ್ಕೆ

ಇರುವಂತೆ ಇಲ್ಲ. ಈ ರೀತಿ ಅನೇಕ ದೇವಸ್ಥಾನಗಳಲ್ಲಿ ತನ್ನದೇ ಆದ ಸಮಯದಲ್ಲಿ ಪ್ರಸಿದ್ಧತೆಯಾಗಿರುವುದನ್ನು ನೋಡಿದ್ದೇವೆ. ಬಹಳ ಜನ ನಾಯಕರನ್ನು ಈ ರಾಷ್ಟ್ರದಲ್ಲಿ ನೋಡಿದ್ದೇವೆ. ಆದರೆ, ಎಲ್ಲರೂ ಮಹತ್ಮಾಗಾಂಧಿಯಾಗಲು, ಪಂಡಿತ್ ಜವಾಹರ್‌ಲಾಲ್ ನೆಹರು ಆಗಲು ಸಾಧ್ಯವಾಗಲಿಲ್ಲ. ಚಳುವಳಿ, ಹೋರಾಟ ಮಾಡಿದ ಎಲ್ಲರೂ ಬಾಬಾಸಾಹೇಬ್ ಅಂಬೇಡ್ಕರ್ ಆಗಲು ಸಾಧ್ಯವಾಗಲಿಲ್ಲ. ಬೇಕಾದಷ್ಟು ರಾಷ್ಟ್ರ ಕವಿಗಳನ್ನು ನೋಡಿದ್ದೇವೆ ಆದರೆ ಕುವೆಂಪು ಬೇಂದ್ರೆ, ಡಿ.ವಿ.ಗುಂಡಪ್ಪ, ಶಿವರುದ್ರಪ್ಪನವರಂತೆ ಆಗಲು ಆಗಿಲ್ಲ. ಹಾಗೆಯೇ ನಾವು ಬೇಕಾದಷ್ಟು ಇಂಜಿನಿಯರ್ಸ್ ತಯಾರು ಮಾಡಿದ್ದೇವೆ. ಆದರೆ ಎಲ್ಲರೂ ವಿಶ್ವೇಶ್ವರಯ್ಯನವರಾಗಲು ಆಗಲಿಲ್ಲ. ನಾರಾಯಣ ಮೂರ್ತಿಯವರಾಗಲು ಸಾಧ್ಯವಾಗಲಿಲ್ಲ. ಅಂದರೆ ಪ್ರತಿ ಸಂದರ್ಭದಲ್ಲು ಸಹ ಒಂದೊಂದು ಯುಗದಲ್ಲಿ, ಕಾಲದಲ್ಲಿ ಒಬ್ಬೊಬ್ಬರು ಒಂದೊಂದು ಅವಕಾಶವನ್ನು ಸೇವೆ ಮಾಡಲು ಪ್ರಸಿದ್ಧರಾಗಲು ಅವಕಾಶ ಇದೆ. ನಾವೆಲ್ಲ 224 ಜನ ಶಾಸಕರಾಗುತ್ತೇವೆ. ಆದರೆ ಒಬ್ಬರು ಮಾತ್ರ ಮುಖ್ಯಮಂತ್ರಿಯಾಗಲು ಸಾಧ್ಯವಾಗುತ್ತದೆ. ಹುಟ್ಟು ಆಕಸ್ಮಿಕ ಸಾವು ಅನಿವಾರ್ಯ. ಜನನ ಉಚಿತ ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯದಲ್ಲಿ ಯಾರು ಏನು ಮಾಡುತ್ತಾರೆ ಎಂಬುದು ಬಹಳ ಮುಖ್ಯವಾದ ವಿಚಾರ, ನಾನು ವಿಧಾನಸೌಧದಲ್ಲಿ ಕುಳಿತಿದ್ದೇವೆ. ಇದನ್ನು ಕೆಂಗಲ್ ಹನುಮಂತಯ್ಯನವರು ಕಟ್ಟಿದ್ದಾರೆ. Temple of democracy ಏನು ಇದು ಒಂದು ದೇವಸ್ಥಾನವಾಗಿದೆ, ನಮ್ಮೆಲ್ಲರ ದೇವಸ್ಥಾನ ಇದು ಎಂದು ನಾವು ಭಾವಿಸಿದ್ದೇವೆ. ಆದರೆ, ಅವರು ಇಲ್ಲಿ ಕುಳಿತುಕೊಳ್ಳಲು ಆಗಲಿಲ್ಲ. ಆದರೆ, ಅವರು ಏನು ಮಾಡಿ ಬಿಟ್ಟು ಹೋದರು ಅದನ್ನು ನಾವೆಲ್ಲ ನೆನಪಿಸಿಕೊಳ್ಳುತ್ತೇವೆ. ಇವತ್ತು ಬೆಂಗಳೂರನ್ನು ಕಟ್ಟಿ ಬೆಳೆಸಿದ ಕೆಂಪೇಗೌಡರನ್ನು ನೆನಪಿಸಿಕೊಳ್ಳುತ್ತೇವೆ.

ಶ್ರೀ ಆರ್. ಅಶೋಕ್: ಹುಟ್ಟು ಸಾವಿನ ಮಧ್ಯೆ ಏನೋ ಮಾಡಬೇಕೆಂದು ಹೇಳುತ್ತಿದ್ದೀರಲ್ಲ ಅದನ್ನು ಮಾಡಿ. ಅಧ್ಯಕ್ಷರಾಗಿದ್ದಾರೆ, ಮುಖ್ಯಮಂತ್ರಿಯಾಗಿದ್ದಾರೆಂದು ಹೇಳುತ್ತಿದ್ದೀರಲ್ಲಾ, ನಿಮ್ಮನ್ನು ಆ ರೀತಿ ಆಗಬೇಡಿ ಎಂದು ಯಾರೂ ಹೇಳಲಿಲ್ಲ, ಮುಂದೆ ಹೋಗಬೇಡಿ ಎಂದು ಯಾರು ಸಹ ಹೇಳಲಿಲ್ಲವಲ್ಲ. ಆ ಕೆಲಸವನ್ನು ಮಾಡಿ.

ಶ್ರೀ ಸಿ.ಟಿ. ರವಿ. ಈ ಸದನ ಬೇಕಾದರೆ ಅವರು ಕೆ.ಪಿ.ಸಿ.ಸಿ. ಅಧ್ಯಕ್ಷರಾಗಲಿ ಎಂದ ಬಗ್ಗೆ ಯುನಾನಿಮಸ್ ಆಗಿ ರೆಸಲ್ಯೂಷನ್ ಮಾಡುತ್ತದೆ. ಅದಕ್ಕೆ ನಮ್ಮ ಈ ಭಾಗದಿಂದ ತಕರಾರೇನಿಲ್ಲ! ವಿರೋಧ ಇದ್ದರೆ ಆ ಕಡೆಯವರದ್ದೆ.

ಶ್ರೀ ನೆ.ಲಾ. ನರೇಂದ್ರಬಾಬು: ನಮ್ಮ ಮನೆಯಲ್ಲಿ ಏಕೆ ನೀನು ಮೂಗು ತೂರಿಸುತ್ತೀಯ?

ಶ್ರೀ ಡಿ.ಕೆ. ಶಿವಕುಮಾರ್: ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವಿಚಾರದಲ್ಲಿ ಸರ್ಕಾರ ಕಣ್ಣು ತೆರೆಯಬೇಕು ಎಂದು ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ ನಾವೆಲ್ಲ ಒಂದು ಅಂತಾರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಬೆಂಗಳೂರಿನಲ್ಲಿ ಆಗಬೇಕು ಎಂಬ ದೃಷ್ಟಿಯಿಂದ ಅನೇಕ ಸರ್ಕಾರಗಳು ಬೇಕಾದಷ್ಟು ರೀತಿಯಲ್ಲಿ ಚಿಂತನೆ ಮಾಡಿ ಇದಕ್ಕೆ ಸಹಕಾರವನ್ನು ಕೊಟ್ಟುಕೊಂಡು ಬಂದಿದೆ. ಆದರೆ ನಾನು ಬೆಳಿಗ್ಗೆ ಹೇಳುವ ರೀತಿಯಲ್ಲಿ, ನಾನು ಚುನಾವಣೆ ಆದ ತಕ್ಷಣ ಆ ವಿಮಾನ ನಿಲ್ದಾಣಕ್ಕೆ ಹೋಗಿದ್ದೆ. ಆದಾದ ಮೇಲೆ ಆ ವಿಮಾನ ನಿಲ್ದಾಣದ inauguration ಆಯಿತು. ಅದನ್ನು ನೋಡಿದ ತಕ್ಷಣ ನನಗಂತೂ ವೈಯಕ್ತಿಕವಾಗಿ blood boil ಆಗುತ್ತಿದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ನಾನು ತರಲೇ ಬೇಕು. ಏಕೆಂದರೆ, ನಾನು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಇದರ ವಿನ್ಯಾಸವನ್ನು ಅದಕ್ಕೆ ಅಂದು ಸಿ.ಇ.ಓ. ಅಗಿದ್ದ ಜಯರಾಜ್‌ರವರು ಕ್ಯಾಬಿನೇಟ್‌ನಲ್ಲಿ ಬಂದು ತೋರಿಸಿದ್ದರು. ಆಗ ನಾನು ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಅಲ್ಲ ಎಂದು ಹೇಳಿದ್ದೆ ಬೆಂಗಳೂರಿಗಲ್ಲ. ಇದು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಲ್ಲ; ಇದು ಬದಲಾವಣೆ ಆಗಬೇಕು ಎಂದು ಆ ಸಂದರ್ಭದಲ್ಲಿ ನಾನು ಹೇಳಿದ್ದೆ. ಅನೇಕ ವಿನಾಯಿತಿಗಳನ್ನು ನಾವು ಕೊಟ್ಟಂಥ ಸಂದರ್ಭದಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಯಾವ ಮಾದರಿಯಲ್ಲಿ ಇರಬೇಕು ಎಂಬ ಬಗ್ಗೆ ನಾವೆಲ್ಲ ಚಿಂತನೆ, ಚರ್ಚೆಯನ್ನು ಮಾಡಿದ್ದೆವು. ಅಲ್ಲಿ ಏನು ವಿನ್ಯಾಸವನ್ನು ತೋರಿಸಿದರು ಅದನ್ನು ಬದಲಾವಣೆ ಮಾಡುತ್ತೇವೆ ಎಂದು ಹೇಳಿ ಇವತ್ತು ಮತ್ತೆ ಅದನ್ನು ನೋಡಿದ ಮೇಲೆ ಅದೇ ಎನ್.ಜಿ.ಎಫ್. ಮ್ಯಾಚ್‌ಬಾಕ್ಸ್, ಎನ್.ಜಿ.ಎಫ್. ಫ್ಯಾಕ್ಟರಿ ಶೆಡ್ ಯಾವ ರೀತಿ ಇದೆಯೊ ಆ ರೀತಿ ಅದು ನಿರ್ಮಾಣವಾಗಿದೆ. ಇದರಲ್ಲಿ ಏನು ಕೂಡ ಬದಲಾವಣೆಯಾಗಿಲ್ಲ. ನಮಗೆ ಆ ಸಿಮನ್ಸ್ ಸಂಸ್ಥೆಯವರು ಆ ಜರ್ಮನ್ ಸಂಸ್ಥೆಯವರು ಏನು ಭರವಸೆಯನ್ನು ಕೊಟ್ಟಿದ್ದರು, 17 ಜನ ಟೆಂಡರ್‌ನಲ್ಲಿ ಭಾಗವಹಿಸಿದ್ದರೂ ಒಬ್ಬರಿಗೆ ಮಾತ್ರ ನಾವು ಅವಕಾಶ ಕೊಟ್ಟು, ಸ್ವಿಡ್ಜರ್‌ಲ್ಯಾಂಡ್‌ನವರು, ಮಲೇಶಿಯನ್ ಏರ್‌ಪೋರ್ಟ್‌ನವರು, ಸಿಂಗಾಪುರ್ ಏರ್‌ಪೋರ್ಟ್‌ನವರೂ ಭಾಗವಹಿಸಿದ್ದರು. ಈ ರೀತಿ ದೊಡ್ಡ ದೊಡ್ಡವರೆಲ್ಲಾ ಭಾಗವಹಿಸಿದ್ದರು ನಾವು ಇವರೊಬ್ಬರಿಗೆ ಅವಕಾಶ ಮಾಡಿಕೊಟ್ಟೆವು ಇವರು ಯಾವ ರೀತಿಯಾಗಿ ಚೀಟ್ ಮಾಡಿದ್ದಾರೆ ಎಂಬುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಲ್ಲ ಎಂದರೆ ತಪ್ಪಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರು ಈ Airportಗೆ foundation ಹಾಕಲಿಕ್ಕೆ

ಬಂದಿದ್ದರು. ಆಗ ಅವರೊಂದು ಮಾತನ್ನು ಹೇಳಿದರು. ಅದು ಏನೆಂದರೆ, The World Leaders ಪ್ರಪಂಚದ ಎಲ್ಲಾ ರಾಷ್ಟ್ರಗಳ ನಾಯಕರು ದೇಶದ Capital ಆದಂತಹ ದೆಹಲಿಗೆ ಬಂದು, ಬೇರೆ ರಾಜ್ಯಗಳಿಗೆ ಬರುವಂತಹ ಸಂದರ್ಭ ಇತ್ತು. ಆದರೆ ಇವತ್ತು ಬೆಂಗಳೂರಿಗೆ ಬಂದು, ಬೆಂಗಳೂರಿನಿಂದ ದೆಹಲಿ ಮತ್ತಿತರ ಬೇರೆ ಕಡೆಗೆ ಹೋಗುವಂತಹ ಸಂದರ್ಭ ನಿರ್ಮಾಣವಾಗಿದೆ ಎಂದು ಹೇಳಿದ್ದರು. ಇಲ್ಲಿರುವಂತಹ ಸಂಸ್ಕೃತಿ, ಇಲ್ಲಿರುವಂತಹ ಜನ, ಈ ರಾಜ್ಯದ ಬೆಳವಣಿಗೆ, ಇಲ್ಲಿರುವ ಸರ್ಕಾರ ಇದಕ್ಕೆ ಕಾರಣವೆಂದು ಎಸ್.ಎಂ.ಕೃಷ್ಣರವರ ಕಾಲದಲ್ಲಿ ಅವರು ಆಡಿದಂತಹ ಮಾತು ಇವತ್ತು ದಾಖಲೆಯಾಗಿ ಉಳಿದಿದೆ. ಮಾನ್ಯ ಜವಾಹರ್ ಲಾಲ್ ನೆಹರೂರವರು ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಒಂದು ಕಡೆ ಒಂದು ಮಾತು ಏನು ಹೇಳುತ್ತಾರೆಂದರೆ, 'Most of the old cities represent the past of India. They represent the history whereas Bangalore represents the future of India. That is why we are molding Bangalore', ಇಂತಹ ಒಂದು ಸಂದರ್ಭದಲ್ಲಿ ನಾವು Bangalore International Airport ಆಗಬೇಕೆಂದು ನಾವು ಸೀಮೆನ್ಸ್ ಸಂಸ್ಥೆಗೆ ಇವತ್ತು ನಾವು ಜವಾಬ್ದಾರಿಯನ್ನು ವಹಿಸಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಬೇಕಾದಷ್ಟು Airports ನೀವೆಲ್ಲಾ ನೋಡಿದ್ದೀರಿ. ನಮಗಿಂತ ಚಿಕ್ಕ ರಾಜ್ಯವಾದಂತಹ ಮಲೇಷಿಯಾ ನೋಡಿದ್ದೀರಿ. ಸಿಂಗಾಪೂರ್ ನೋಡಿದ್ದೀರಿ, ದುಬೈ ನೋಡಿದ್ದೀರಿ, ಬೇಕಾದಷ್ಟು ಕಡೆ ತಾವೆಲ್ಲಾ ನೋಡಿದ್ದೀರಿ. ಆದರೆ ಈ Airport ನಮ್ಮ ರಾಜ್ಯದ ಏನೊಂದು ಜನಸಂಖ್ಯೆ ಇದೆ, ನಮ್ಮ ರಾಜ್ಯದ ಏನೊಂದು ಶಕ್ತಿ ಇದೆ, ಅದಕ್ಕಿಂತ ಚಿಕ್ಕ ಶಕ್ತಿ ಇರುವಂಥ ರಾಜ್ಯಗಳ Airportಗಳನ್ನು ಬಹುಶಃ ತಾವೆಲ್ಲಾ ನೋಡಿರಬಹುದು. ಅದನ್ನು ಹೋಲಿಕೆ ಮಾಡಿದರೆ, ಈ Airport ಒಂದು District Head Quarters ನಲ್ಲಿ ಇರುವ ರೀತಿಯಲ್ಲಿ ಆಗಿದೆ. ಅದಕ್ಕೋಸ್ಕರ ನಾವೊಂದು ದೊಡ್ಡ blunder ಮಾಡಿದ್ದೇವೆಂದು ನಾನಂತೂ ಭಾವಿಸಿಕೊಂಡಿದ್ದೇನೆ. ಇದು ಬೆಂಗಳೂರು, this is the third busiest Air port in India. Bombay, Delhi ಬಿಟ್ಟರೆ ಇದೇ Airport. ಏಳೂವರೆಮಿಲಿಯನ್ ಪ್ಯಾಸೆಂಜರ್‌ಗಳಿಂದ ಈಗ ಹತ್ತು ಮಿಲಿಯನ್ ಪ್ಯಾಸೆಂಜರ್‌ಗೆ ಹೆಚ್ಚಿದೆ. Parking fees ನಿಂದಲೇ ಇವತ್ತು ಸುಮಾರು 150 ಕೋಟಿ ರೂ.ಗಳು collection ಆಗುತ್ತಿದೆ. 600 ಕೋಟಿ ರೂ.ಗಳು ಕೇವಲ advertisements ನಿಂದಲೇ collection ಆಗುತ್ತಿದೆ. 1000 domestic flights ಒಂದು ವಾರದಲ್ಲಿ ಹಾರಾಟ ನಡೆಸುತ್ತಿವೆ. ನಾವು ಈ Air port ಅನ್ನು ಮಾಡಬೇಕೆಂದು Central Government ಕೂಡ Parliment ನಲ್ಲಿ amendment ಮಾಡಿ, ಇದನ್ನು monopoly control ಕೊಟ್ಟು, 150 ಕಿ.ಮೀ.ವ್ಯಾಪ್ತಿಯಲ್ಲಿ ಯಾವ

Airport ಕೂಡ ಹೊಸದಾಗಿ ಆಗಬಾರದು, ಈ Airport ನ್ನು ಬಿಟ್ಟರೆ ಎಂದು. ಈಗ ಬೆಂಗಳೂರಿನಲ್ಲಿ ಇರುವಂತಹ HAL Air Port ಕೂಡ ಮುಚ್ಚುತ್ತೇವೆಂದು agreement ಮಾಡಿಕೊಂಡು ಈ Airport ಅನ್ನು ನಾವು ಕೊಟ್ಟಿದ್ದೇವೆ. ಇದರಿಂದ ಯಾರಿಗೆ ಅನುಕೂಲವಾಗಿದೆ? ಯಾರಿಗೆ ಸಹಾಯವಾಗಿದೆ? Airport Authority of India ಗೆ ಜಮೀನು ಕಳೆದುಕೊಂಡವರೆಲ್ಲಾ ಭಿಕ್ಷುಕರು ಆದಂತೆ ಆಗಿಬಿಟ್ಟಿದ್ದಾರೆ. ಇವತ್ತು ಅಲ್ಲಿ ಕೆಲಸ ಕೊಡುವ HRD Officer ಯಾರೋ ಕೇರಳದವನು ಇದ್ದಾನೆ. ಅಲ್ಲಿಂದ ಬಂದು ಅವರು ಕುಳಿತುಕೊಂಡಿದ್ದಾರೆ. ಅಲ್ಲಿ ನಮ್ಮ local ನವರು ಒಬ್ಬರೂ ಇಲ್ಲ. ನಮ್ಮ ಕರ್ನಾಟಕಕ್ಕೆ ಕೇವಲ 13% ಮಾತ್ರ, ಮಿಕ್ಕಿದ್ದು Central Government ಮತ್ತು State Government ಎರಡಕ್ಕೂ ಸೇರಿ 26% ಇದೆ, L & Tಗೆ 17%, Zurich ಗೆ 13%, ಸೀಮನ್ಸ್‌ಗೆ 40%. ಹೀಗೆ ಈ Public Private Participation ನಿಂದ ಏನು ಈ Airport ಅನ್ನು ನಾವು ಪ್ರಾರಂಭ ಮಾಡಿದ್ದೇವೆ, ಇದು ಮೊದಲನೇ Airport ಇಡೀ ಭಾರತದಲ್ಲಿ. ಇದು ಒಂದು trial. ಇದು first Airport. ಇದಾದ ಮೇಲೆ ಹೈದರಾಬಾದ್‌ಗೆ ಕೊಟ್ಟರು. ಬಹುಶಃ ತಾವು ಹೈದರಾಬಾದ್‌ಗೆ ಹೋಗಿ ನೋಡಿರಬಹುದು. ಎಷ್ಟು ಸುಂದರವಾಗಿ, ಹೊಸದಾಗಿ Airport ನ್ನು ಅವರು ಮಾಡಿದ್ದಾರೆ. ನಾನು ಅಂದುಕೊಂಡಿದ್ದೆ, ಏನಾದರೂ ಒಂದು ಈ Airport ನ್ನು ನಾವು ಏನು ಮಾಡುತ್ತೇವೆ, ಇಡೀ ಬೆಂಗಳೂರಿನ, ಇವತ್ತಿನ ಸಂದರ್ಭ ಯಾವ ರೀತಿ ನಿರ್ಮಾಣವಾಗಿದೆ ಎಂದರೆ, India ಎಂದರೆ first Bangalore ನ್ನು ಗುರುತಿಸುವಂತಹ ಸಂದರ್ಭ ಇವತ್ತು ನಿರ್ಮಾಣವಾಗಿದೆ. ಅದಕ್ಕೆ ನಮ್ಮ ಹಿರಿಯರೆಲ್ಲರೂ contribution ಮಾಡಿದ್ದಾರೆ. ಕೇವಲ ಒಂದು ಸರ್ಕಾರ ಮಾತ್ರವಲ್ಲ. ಸಾರ್ವಜನಿಕರೂ ಕೂಡ ಇದಕ್ಕೆ ಬೇಕಾದಷ್ಟು contributionನ್ನು ಮಾಡಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ, ಒಂದು ತಾವು ಗಮನಿಸಬೇಕು. ಇದೊಂದು simple calculation ಅಷ್ಟೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 4200 ಎಕರೆ ಜಮೀನನ್ನು ಇವರಿಗೆ ಕೊಡುತ್ತೇವೆಂದು ನಾವು ಒಪ್ಪಿಕೊಂಡು 4050–4075 ಎಕರೆ ಜಮೀನನ್ನು ನಾವು ಅವರಿಗೆ ಕೊಟ್ಟಿದ್ದೇವೆ. 350 ಕೋಟಿ ರೂ.ಗಳ ಹಣವನ್ನು ನಮ್ಮ State Supportನಿಂದ ಕೊಟ್ಟಿದ್ದೇವೆ. ಸುಮಾರು 375ರಿಂದ 400 ಕೋಟಿ ರೂ.ಗಳಷ್ಟು ಹಣವನ್ನು Governmentನಿಂದ Government guaranteeಯಾಗಿ Central Government ಮತ್ತು State Government ನಿಂದ ನಾವು ಕೊಟ್ಟಿದ್ದೇವೆ. ಇವರಿಗೆ Cauvery Water Separate line ಎಳೆದು ಕೊಟ್ಟಿದ್ದೇವೆ. ಎಲ್ಲಾ ರಸ್ತೆಗಳನ್ನು ಹೋಗಿ ಅದರ ಬಾಯಿಗೆ ಬಿಟ್ಟಿದ್ದೇವೆ. Power line ಅನ್ನು ಎತ್ತಿಕೊಂಡು ಹೋಗಿ

ಕೊಟ್ಟಿದ್ದೇವೆ. ಏನೇನು concession ಬೇಕೋ, tax concession, tax free holiday ಎಲ್ಲಾ ಇವತ್ತು ಅವರಿಗೆ ನಾವು ಕೊಟ್ಟಿದ್ದೇವೆ. ನಾನು Urban Development Minister ಆಗಿದ್ದಾಗ ನಮ್ಮ ಅಧಿಕಾರಿಗಳು ಬಂದಿದ್ದರು. 185 ಕೋಟಿ ರೂ.ಗಳ ಹಣವನ್ನು ಇದಕ್ಕೆ ಮಾಫಿ ಮಾಡಬೇಕಾಗುತ್ತದೆಂದು ಅವರು ಹೇಳಿದರು. ನನಗೆ ಮನಸ್ಸಿಗೆ ಸಮಾಧಾನ ಇರಲಿಲ್ಲ. ಆದರೂ ಆ ಸಂದರ್ಭದಲ್ಲಿ, ಏನೋ ನಮ್ಮ ಬೆಂಗಳೂರಿಗೆ ದೊಡ್ಡ ಕೊಡುಗೆಯನ್ನು ಕೊಡುತ್ತಾರೆಂದು amendment move ಮಾಡಿ, ಅದಕ್ಕೆ ನಾವು exemption ಕೊಟ್ಟೆವು. Registration ಇತ್ಯಾದಿ ಬೇರೆ ಎಲ್ಲವನ್ನೂ ಲೆಕ್ಕ ಹಾಕಿಕೊಂಡರೆ, ಅದು ಬೇರೆ ವಿಚಾರವಾಗುತ್ತದೆ. ನಮ್ಮ ಕೇಂದ್ರದ ISRO ಸಂಸ್ಥೆಗೆ ನಾವು ಜಾಗ ಕೊಡಬೇಕಾದರೆ, 1 ಕೋಟಿ 20 ಲಕ್ಷ ರೂ.ಗಳ ಹಣವನ್ನು ನಾವು collect ಮಾಡುತ್ತಿದ್ದೇವೆ. ಬೇರೆಯವರಿಗೆ ಆಜು-ಬಾಜಿನಲ್ಲಿ ನಾವು ಕೊಡಬೇಕಾದರೆ, 3 ಕೋಟಿ ರೂ.ಗಳನ್ನು ನಾವು collect ಮಾಡುತ್ತಿದ್ದೇವೆ. ನಮ್ಮ ಆಚಾರ್ಯ ಸಾಹೇಬರು, ಹಿಂದೆ Cabinet briefing ಸಂದರ್ಭದಲ್ಲಿ ಒಂದು ಕಡೆ ಒಂದು ಮಾತನ್ನು ಹೇಳಿದರು. 400 ಚಿಲ್ಲರೆ ಎಕರೆ Airport ಜಾಗ ಇದೆ, ಆ ಜಾಗವನ್ನು ನಾನು auction ಮಾಡುತ್ತೇನೆ, ನಮಗೆ auction ಮಾಡುವುದರಿಂದ 10 ಸಾವಿರ ಕೋಟಿ ರೂ.ಗಳು ನಮಗೆ ಸಿಗುತ್ತದೆಂದು ಆಚಾರ್ಯರವರು ಒಂದು ಸಂದರ್ಭದಲ್ಲಿ ಹೇಳುತ್ತಾರೆ. 'Karnataka Cabinet today decided to auction 408 acres of excess land acquired for Bangalore International Airport near Devanahalli to realize over 2000 crores' ಅದರೆ 400 ಎಕರೆ ಹೀಗೆ 2200 ಎಕರೆಗೆ ಅಧ್ಯಕ್ಷರೆ, 4000 ಎಕರೆಯಲ್ಲಿ 2000 ಎಕರೆಯನ್ನು freeಯಾಗಿ Airportಗೆ ಕೊಟ್ಟು ಬಿಡೋಣ. ಇನ್ನು 2200 ಎಕರೆ commercial exploitationಗೆ ಇದೆಯಲ್ಲಾ, ಆ commercial exploitationಗೆ 11000 ಕೋಟಿ ರೂ.ಗಳ ಆಸ್ತಿಯಾಗುತ್ತದೆ. ನಾವು ಸರ್ಕಾರದಿಂದ ಕೊಟ್ಟಂತಹ ಎಲ್ಲಾ concession 1500 ಕೋಟಿ ರೂ.ಗಳು ಎಂದಿಟ್ಟುಕೊಳ್ಳೋಣ. ಆದರೆ ಈ project ಗೆ ಆಗಿರತಕ್ಕ cost ಕೇವಲ 1300 ಕೋಟಿ ರೂ.ಗಳು ಮಾತ್ರ. ಅಂದರೆ ಕೇವಲ 10% ಕೂಡ ಇಲ್ಲ. ಇವರಿಗೆ ಏನು advance ಬಂದಿದೆ, ಮತ್ತೊಂದು ಬಂದಿದೆ, ಅದರಲ್ಲಿ 10% ಕೂಡ ಇಲ್ಲ. ಇಂತಹ ಒಂದು Airportನ್ನು, ಇಂತಹ ಒಂದು ಜಾಗವನ್ನು, ಇಂತಹ ಒಂದು ಭೂಮಿಯನ್ನು, ಇಂತಹ ಶಕ್ತಿಯನ್ನೆಲ್ಲಾ ಕೊಟ್ಟಿದ್ದಕ್ಕೆ ಇವತ್ತು ಸೀಮೆನ್ಸ್ ಸಂಸ್ಥೆ ನಮಗೆ ಏನು ಮಾಡಿದೆ? ಯಾವ ಸಹಾಯ ಮಾಡಿದೆ? ಇಷ್ಟೆಲ್ಲಾ ನಾವು ಕೊಟ್ಟರೂ, ಕೇಂದ್ರ ಸರ್ಕಾರ ಎಲ್ಲಾ ತರಹದ agreementಗಳನ್ನು ಮಾಡಿಕೊಂಡು, ಎಲ್ಲಾ ತರಹದ concession ಕೊಟ್ಟರೂ

ಕೂಡ, ಇವತ್ತು ನಮಗೆ ಸಹಾಯ ಮಾಡಿರುವಂತಾದ್ದು ಏನು? ಅದರ CEOರವರಾದ ಬ್ರೂನರ್‌ರವರು ಒಂದು ಕಡೆಗೆ ಹೇಳುತ್ತಾರೆ. 'Bruner Chief Executive Officer of BIAL says; Devanahalli Airport will be built to the world class standards and will spot among the other interesting features'.

ಅಧ್ಯಕ್ಷರು:- ಮಾನ್ಯ ಶಿವಕುಮಾರ್‌ರವರೆ, ತಾವು ನಿಲುವಳಿ ಸೂಚನೆ ಮೇಲೆ preliminary submission ಮಾಡುತ್ತಿದ್ದೀರಿ. ಆದರೆ ನೀವು detail ಆಗಿ ಹೇಳುತ್ತಿದ್ದೀರಿ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಹೌದು, ನಾನು preliminary submission ಅನ್ನೇ ಮಾಡುತ್ತಿದ್ದೇನೆ. ನೀವು ಎಷ್ಟು ಹೊತ್ತಿಗೆ ಮುಗಿಸಬೇಕೆಂದು ಹೇಳುತ್ತೀರೋ, ನಾನು ಅಷ್ಟು ಹೊತ್ತಿಗೆ ಮುಗಿಸುತ್ತೇನೆ. ನನ್ನ ಹತ್ತಿರ four hours ಮಾತನಾಡುವಷ್ಟು materials ಇದೆ. ನಿಮ್ಮ timing ಗೆ ನಾನು ಬದ್ಧನಾಗುತ್ತೇನೆ. I will not go to the details.

ಅಧ್ಯಕ್ಷರು:- 10 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಡಿ.ಕೆ.ಶಿವಕುಮಾರ್:- ಅವರು world class ಮಾಡುತ್ತೇವೆಂದು ಹೇಳಿ, 4 Km runway, big planes, 747 ಬೋಯಿಂಗ್ ಇಂತಹ ಎಲ್ಲವನ್ನೂ ಕೂಡ ಮಾಡಬಹುದೆಂದು ಅವರು ಮಾಡಿದ್ದಾರೆ. ಇಷ್ಟೆಲ್ಲಾ ಆದಮೇಲೆ ಪ್ರಫುಲ್ ಪಟೇಲ್‌ರವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ. 'A day after the Deccan Herald reported, the Union Civil Aviation Minister had appreciation about the design. Architecture and facilities in the upcoming International Airport near Devanahalli, Bangalore. In the Ministry he said that the suggestion may be invited and it is not up to the mark' ಎಂದು ಅವರು ಹೇಳುತ್ತಾರೆ. ಇನ್ನೊಂದು ಕಡೆ Times of Indiaನಲ್ಲಿ report ಮಾಡುತ್ತಾರೆ. 'Hyderabad had scored over Bangalore again. Bangalore Airport design has been flawed. The Union Civil Aviation Ministry has given its stamp on the approval of the GMR Hyderabad International Airport, but dump the design of the Bangalore International Airport at Devanahalli. Ina letter sent to the Bangalore International Airport ltd., in my first week the union Civil Aviation Minister has expressed serious resolution about the quality of the

design.' ಹೀಗೆ ಈ ರೀತಿಯಾಗಿದೆ. ಇಲ್ಲಿ Private Public Partnership exploit ಆಗಬಾರದು, ಇದು mis-use ಆಗಬಾರದು, ಮುಂದಕ್ಕೆ 50 ಸಾವಿರ ಕೋಟಿ ರೂ.ಗಳ ಆದಾಯ ಬರುತ್ತದೆ, ಈ 50 ಸಾವಿರ ಕೋಟಿ ರೂ.ಗಳನ್ನೆಲ್ಲಾ ಈ ಸಂಸ್ಥೆಯವರು ಎತ್ತಿಕೊಂಡು ಹೋಗಬಾರದು, ಮತ್ತೆ ಈ ರಾಜ್ಯದಲ್ಲಿ ಖರ್ಚು ಆಗಬೇಕೆಂದು ಇಷ್ಟೆಲ್ಲಾ ಹೇಳುತ್ತಿದ್ದೇನೆ. ಈಗ ನಾವು ಹೊಸ Airport ವೊಂದನ್ನು ಕಟ್ಟುತ್ತೇವೆ, additional terminal ಕಟ್ಟುತ್ತೇವೆಂದು ಅವರು ಹೇಳುತ್ತಾರೆ. ಅಲ್ಲಿ ಕಟ್ಟುವಂತಹ ಸಂದರ್ಭದಲ್ಲಿ Times of India, Hindustan Times ಎಲ್ಲದರಲ್ಲೂ ವರದಿಯಾಗಿದೆ. ಈಗೊಂದು shed ಕಟ್ಟಿದ್ದಾರಲ್ಲಾ, ಅದೇ ರೀತಿ ಅಲ್ಲಿ ಇವತ್ತು temporary shedವೊಂದನ್ನು ಕಟ್ಟಲಿಕ್ಕೆ ಹೊರಟಿದ್ದಾರೆ. ಆದುದರಿಂದ ನಾವಿದ್ದಂಥ ಸಂದರ್ಭದಲ್ಲಿ ಇದಕ್ಕೆ ಒಂದು State Level Monitor Committee ಕೂಡ ಆಗಿತ್ತು.

The State set up a Committee in August 2001 to negotiate the final deal with the promoters. The Committee was given a mandate to the best value for money by exploring avenues of amazing the object caused and reducing the state support the Committee included Krishna Kumar, B.K.Das, Kempanna, ಜಯರಾಜ್ ಇದಕ್ಕೆ ಸಿಇಒ. ಆಮೇಲೆ users development fees ಎಂದಿತ್ತು. ಅದು ಅರ್ಧ ಇತ್ತು. ಈಗ ಡಬಲ್ ಆಗಿದೆ. ಈ ರೀತಿ ನಾವು ಬೇಕಾದಷ್ಟು ಸಹಾಯವನ್ನು ಮಾಡಿ ಇಲ್ಲಿ ಸಾಮಾನ್ಯವಾದ ಮ್ಯಾಚ್ ಬಾಕ್ಸ್ ರೀತಿಯಲ್ಲಿ, ಮೈಸೂರು ರೋಡ್‌ನಲ್ಲಿ ಅಶೋಕ್ ಅವರದು ಒಂದು ಬಸ್ ಸ್ಟ್ಯಾಂಡ್ ಇದೆ. ಅದು ಚಿಕ್ಕ ಬಸ್ ಸ್ಟ್ಯಾಂಡ್, ಎಷ್ಟು ಸುಂದರವಾಗಿದೆ ಎಂದರೆ, ಒಂದು state of art ಇದೆ. ಆ ಚಿಕ್ಕ ಬಸ್ ಸ್ಟ್ಯಾಂಡ್ ಗಿಂತ ಕೆಳಮಟ್ಟದಲ್ಲಿ ಆ ಏರ್‌ಪೋರ್ಟ್ ಆಗಿದೆ, ಬಸ್ ಸ್ಟ್ಯಾಂಡ್ ಚೆನ್ನಾಗಿದೆ. ಯಾರಾದರು ಹೈದರಾಬಾದ್ ಗೆ ಹೋಗಿರಬಹುದು, ಅಂಥ ಒಂದು ಗುಣಮಟ್ಟವನ್ನು ಇವತ್ತು ಅಲ್ಲಿ ಕಾಪಾಡಿಕೊಂಡಿದ್ದಾರೆ. ಆದುದರಿಂದ, ಈ ಸಂದರ್ಭದಲ್ಲಿ ನಾನು ಕೇಳುವುದು ಇಷ್ಟೆ, ಅವತ್ತು ನಾವು ಹೇಳಿದ್ದೆವು ಈ ಏರ್‌ಪೋರ್ಟ್‌ನಲ್ಲಿ ನಮ್ಮ ಸಂಸ್ಕೃತಿ ಇರಬೇಕು, ಕೆಲಸ ಕೊಡುವಾಗ ಕನ್ನಡಿಗರಿಗೆ ಕೆಲಸ ಕೊಡಬೇಕು, ಬೇರೆ ಎಲ್ಲಾ ತರಹದ ಸಹಕಾರವಾಗಬೇಕು, ನಾವು ಇಷ್ಟೆಲ್ಲಾ ಸಹಾಯ ಮಾಡಿದ್ದೇವೆ. ಈ ಏರ್‌ಪೋರ್ಟ್ ವಿಶ್ವಮಟ್ಟದ್ದಾಗಬೇಕು ಎಂದು ನಾವು ಅನೇಕ ವಿಚಾರಗಳನ್ನು ಹೇಳಿದೆವು. ಇದು ನಮ್ಮ ಏಷ್ಯಾಗೆ best traffic hub, ಇಂಥ ಸಂದರ್ಭದಲ್ಲಿ ಉತ್ತಮವಾದ್ದು ಆಗಬೇಕೆಂದು ನಾವು ಪ್ರಸ್ತಾವನೆ ಮಾಡಿದೆವು. ಯಾರ್‍ಯಾರು ಬಿಡ್ಡರ್ ಮಾಡಿದರು ಎಂಬುದನ್ನೆಲ್ಲಾ ಮತ್ತೆ ನಾನು ಈ ಸಂದರ್ಭದಲ್ಲಿ ಪ್ರಸ್ತಾವನೆ ಮಾಡುತ್ತೇನೆ. ಅಧ್ಯಕ್ಷರೆ,

ತಾವು ನೋಡಿರಬಹುದು, ಅಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಸರಿಯಾದ ವಿಐಪಿ ಲಾಂಜ್ ಇಲ್ಲ. ಅಲ್ಲಿ ನಮ್ಮ ಡ್ರೈವರ್, ಅಥವಾ ಬೇರೆ ಯಾರಾದರು staff ಹೋದರೆ toilet ಇಲ್ಲ. ಏರ್‌ಪೋರ್ಟ್‌ನಿಂದ ಹೋಗುವ ಬರುವ ಜನರು ಇರುತ್ತಾರಲ್ಲ, 12 ಜನಕ್ಕಿಂತ ಜಾಸ್ತಿ ನಿಂತುಕೊಳ್ಳುವುದಕ್ಕಾಗುವುದಿಲ್ಲ. ಮೊನ್ನೆ ನಾನು ಅಶೋಕ್ ದೆಹಲಿಯಿಂದ ಬಂದೆವು. ಅಶೋಕ್ ಕ್ಯೂನಲ್ಲಿ ನಿಂತಿದ್ದರು ಎಂದರೆ ನಾನು toilet ಗೆ urinals ಹೋಗಬೇಕೆಂದು ಈ ರೀತಿ ತೋರಿಸುತ್ತಿದ್ದಾರೆ.

ಶ್ರೀ ಅಶೋಕ್:– ಒಂದು ಇಡ್ಲಿ, ವಡೆಗೆ ರೂ.80 ಸ್ವಾಮಿ, ಅಲ್ಲಿ ಬಡವರ್ಯಾರು ಹೋಗುವಂತಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್:– ಸಾಮಾನ್ಯ ಜನರು ಕುಳಿತುಕೊಳ್ಳುವುದಕ್ಕಾಗುತ್ತಿಲ್ಲ, ಡ್ರೈವರ್‌ಗಳು, ಕಂಡಕ್ಟರ್‌ಗಳು, ಅಸಿಸ್ಟೆಂಟ್‌ಗಳು, ಗನ್‌ಮೆನ್‌ಗಳು ಅಲ್ಲಿಗೆ ಬರುತ್ತಾರಲ್ಲ, ಅವರೇನಾದರು ಕಾಫಿಯನ್ನು ಕುಡಿಯುವುದಕ್ಕೆ ಕಾಫಿ ಡೇಗೆ ಹೋಗಲೇಬೇಕು. ಈ ರೀತಿ low level staff ಇರಬಹುದು, ಸಾಮಾನ್ಯ ಜನರಿರಬಹುದು ನಮಗೆಲ್ಲಾ commercial ಆಗಿ ಕುಳಿತುಕೊಳ್ಳಲು ಎಲ್ಲೂ ಚೇರ್ ಹಾಕದೆ ಹೋಗಿ ಕಡ್ಡಾಯವಾಗಿ ರೆಸ್ಟೋರೆಂಟ್‌ನಲ್ಲೆ ಕುಳಿತುಕೊಳ್ಳಬೇಕು, ಎಲ್ಲೋ ಒಂದಷ್ಟು ಚೇರ್ ಹಾಕಿದ್ದಾರೆ. ನಮ್ಮಲ್ಲಿ 53 ಕೌಂಟರ್‌ಗಳೇನೂ ಇದ್ದಾವೆ, ಹೈದರಾಬಾದ್ ನಲ್ಲಿ 120 ಕಡೆ ಕೌಂಟರ್‌ಗಳಿವೆ. ಹೆಚ್‌ಎಎಲ್ ನಲ್ಲಿ ಕುಳಿತುಕೊಳ್ಳುವುದಕ್ಕೆ 700 ಸೀಟುಗಳಿದ್ದವು, ಇಲ್ಲಿ 360 ಸೀಟುಗಳು ಮಾತ್ರ ಇವೆ. ಆಮೇಲೆ ಏನಾದರೂ, ಒಂದು ದೂರು ಕೊಡುವುದಕ್ಕೆ ವ್ಯವಸ್ಥೆ ಇಲ್ಲ. ನಾನು ಅಗ್ರಿಮೆಂಟ್ ಎಲ್ಲಾ ನೋಡಿದ್ದೇನೆ, ಒಂದು ದೂರು ಕೊಡುವುದಕ್ಕೆ ದೂರಿನ ರಿಜಿಸ್ಟರ್ ಇಡಬೇಕು, ಅಲ್ಲಿ ಯಾರಾದರೂ ಜವಾಬ್ದಾರರಾಗಿರುವ ಜನರಿರಬೇಕು, ಅದೆಲ್ಲಾ ಕೂಡ ಅಗ್ರಿಮೆಂಟ್‌ನಲ್ಲಿದೆ. ನೀವು ಎಲ್ಲಾ ಪತ್ರಿಕಾ ಮಾಧ್ಯಮಗಳಲ್ಲಿ Times of India ನೀವು ನೋಡಿ, Bangalore International Airport needs an international facility. ಎಲ್ಲಾ ಸಾಮಾನ್ಯ ಜನರು, ಮಾಧ್ಯಮದವರು criticize ಮಾಡುವವರೆ. ಆದಾದ ಮೇಲೆ ಇನ್ನೊಂದು ಕಡೆ ಹೈದರಾಬಾದ್ ಬಗ್ಗೆ ಈ ವಾರದ India Today ತೆಗೆದು ನೋಡಿ, Hyderabad Airport-it has been planned Hyderbad ಎಂದಿದೆ ಆ ಏರ್‌ಪೋರ್ಟ್‌ನಿಂದ ಅಷ್ಟರ ಮಟ್ಟಿಗೆ upgrade ಮಾಡಿದ್ದಾರೆ. ಇನ್ನೊಂದು ಕಡೆ Times of India – Bangalore International Airport to expand terminal Block. It will be another 2-3 years before the BIAL can plan for the 2nd phase of expansion which would include terminal block and a 2nd runway. Until then BIAL is looking to erect a temporary structure that

would help to meet the requirement. Bangalore Airport is close to 11 million passengers in the financial year March 2007-08. The city has achieved 250 growth in the passenger traffic over the past 3 years. ಈ ರೀತಿ ನಮಗೆ ಇಲ್ಲಿ ನಮಗೆ toilet ಇಲ್ಲ, ನಾನು ಹೇಳಿದ ಅನೇಕ ವಿಚಾರಗಳನ್ನು ಪತ್ರಿಕೆಗಳಲ್ಲಿ ಬರೆದ ಮೇಲೆ ಜಾಗ ಸಾಕಾಗುವುದಿಲ್ಲವೆಂದು temporary structure ಹಾಕುತ್ತೇವೆಂದು ಹೊರಟಿದ್ದಾರೆ. ಅದಕ್ಕೋಸ್ಕರ ನಮಗೆ ಈ temporary structure ಬೇಡ, ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಇಬ್ಬರು ಸೇರಿ ವಾಪಸ್ ತೆಗೆದುಕೊಳ್ಳುವುದಕ್ಕೆ ಈ ಅಗ್ರಿಮೆಂಟ್‌ನಲ್ಲಿ ಅವಕಾಶವಿದೆ. ಅವರು ಇನ್ನು ಮುಂದೆ ನಮಗೆ ಮಾಡುವುದು ಸಾಕು. ಮತ್ತೆ ನಾನು ಈ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ತಮ್ಮ ಮುಖಂಡತ್ವದಲ್ಲಿ ಒಂದು ಸದನ ಸಮಿತಿಯನ್ನು ರಚಿಸಬೇಕು. ಏಕೆಂದರೆ, ಇದು ವ್ಯಾಪಕವಾದ ವಿಷಯ, ಇಲ್ಲಿ ವಿಪರೀತವಾದ ಚರ್ಚೆಗೆ ಅವಕಾಶವಿದೆ, ಮೊದಲು ಒಂದು ಸದನ ಸಮಿತಿಯನ್ನು ಮಾಡಿ. ಮಾನ್ಯ ಮಂತ್ರಿಗಳಾದ ಜನಾರ್ಧನ ರೆಡ್ಡಿಯವರೆ, ತಾವು ಇಲ್ಲೆ ಇದ್ದೀರಿ ಈ ಸಮಿತಿಯನ್ನು ಮಾಡುವುದಕ್ಕಿಂತ ಮುಂಚೆ ಅವರಿಗೆ ಏನೇನು commercial exploitation ಗೋಸ್ಕರ ಲೈಸನ್ಸ್ ಕೊಡಬೇಕೋ, 2200 ಎಕರೆ ಜಮೀನು commercial exploitation ಅವಕಾಶವಿದೆ. 2000 ಎಕರೆ ಫ್ರೀಯಾಗಿ ಕೊಟ್ಟರು, 2200 ಎಕರೆಗಳ ಎಲ್ಲಾ ಲೈಸನ್ಸ್ ಅನ್ನು ನಿಲ್ಲಿಸಿ, ಮತ್ತೆ renegotiation ಮಾಡಿಸಿ, ಇದರಲ್ಲಿ ಯಾರ್ಯಾರು ತಪ್ಪನ್ನು ಮಾಡಿದ್ದಾರೆ, ನಾನು ಮಾಡಿರಲಿ, ನಮ್ಮ ಸರ್ಕಾರ ಮಾಡಿರಲಿ ಬೇಕಾದರೆ ನಮ್ಮನ್ನು ಹ್ಯಾಂಗ್ ಮಾಡಿ. ನಾವು ಈ ದೇಶಕ್ಕೆ, ರಾಷ್ಟ್ರಕ್ಕೆ ಅನುಕೂಲವಾಗಲೆಂದು, ಒಳ್ಳೆಯದಾಗಲೆಂಬ ದೃಷ್ಟಿಯಿಂದ ಇದಾಗಬೇಕೆಂದು ಕೇಂದ್ರ ರಾಜ್ಯ ಸರ್ಕಾರಗಳು ಎರಡೂ ಸೇರಿ ಇವರಿಗೆಲ್ಲಾ ಎಷ್ಟೊಂದು ಅವಕಾಶವನ್ನು ಕೊಟ್ಟೆವು. ಈ ರೀತಿ 50,000 ಕೋಟಿ ರೂಪಾಯಿಗಳ ಹಣವನ್ನು ಲೂಟಿ ಮಾಡಿಕೊಂಡು ಈ ರಾಜ್ಯದಿಂದ ತೆಗೆದುಕೊಂಡು ಹೋಗುವುದನ್ನು ತಪ್ಪಿಸಬೇಕು. ಮುಂದೆ, ಈ ಹಣದಿಂದ ಏನು ಲಾಭ ಬರುತ್ತದೆ, ನಮ್ಮ ಕರ್ನಾಟಕದ್ದೇನು ಶಕ್ತಿ ಇದೆ, ಕೇಂದ್ರ ಸರ್ಕಾರದ ಶಕ್ತಿ ಏನಿದೆ ಇವರೆಡರದ್ದು ಪ್ರಾಯೋಗಿಕವಾಗಿ ದುಬೈ ರೀತಿಯ ಏರ್‌ಪೋರ್ಟ್ ಅನ್ನು ಕಟ್ಟಬೇಕು, ಮಲೇಷಿಯಾ ಏರ್‌ಪೋರ್ಟ್ ರೀತಿಯದ್ದಾದರು ಕಟ್ಟಬೇಕು, ಸಿಂಗಾಪುರ್ ರೀತಿಯ ಒಂದು ಏರ್‌ಪೋರ್ಟ್ ಅನ್ನು ನಾವು ಕಟ್ಟಬೇಕು, ಕಟ್ಟುವುದಕ್ಕೆ ಇಲ್ಲಿ ಅವಕಾಶವಾಗುತ್ತದೆ. ಜಾಸ್ತಿ ಬೇಕಾಗಿಲ್ಲ, ಒಂದು 10%, 15% ಲಾಭದಲ್ಲಿ ಒಂದು ಹೊಸ ಏರ್‌ಪೋರ್ಟ್ ಅನ್ನು ಕಟ್ಟಬೇಕು, ರನ್ ವೇ ಅದೇ ರನ್ ವೇ, ಜನರು ಬರುವುದಕ್ಕೆ ಹೋಗುವುದಕ್ಕೆ ಸೌಲಭ್ಯವನ್ನು

ಕಲ್ಪಿಸಿಕೊಡಬೇಕು. ಇವತ್ತು ಕೂಡ 12x8 aerobridge ಆದ ಮೇಲೂ ಕೂಡ ನಾವು ಇಳಿದು ಬಸ್ ನಲ್ಲಿ ಹೋಗಿ ಮತ್ತೆ ಪ್ಲೈಟ್ ಹತ್ತಿಕೊಂಡು ಮತ್ತೆ ವಾಪಸ್ ಬರಬೇಕು. ನಾವು ಇನ್ನು 30 ವರ್ಷಗಳ ಹಿಂದೆ ಇದ್ದೇವೆ. ಬೆಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಏರಿಸುವುದಕ್ಕೆ ಯಾವ ರೀತಿಯ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ, ಈ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈ ಬಗ್ಗೆ ಸದನ ಸಮಿತಿ ರಚನೆಯಾಗಬೇಕು, ಇದೆಲ್ಲವನ್ನೂ ನಿಲ್ಲಿಸಬೇಕು, ಈ ಅಗ್ರಿಮೆಂಟ್ ಅನ್ನು ಕ್ಯಾನ್ಸೆಲ್ ಮಾಡಬೇಕು. ಈ ಅಗ್ರಿಮೆಂಟ್ ಕ್ಯಾನ್ಸೆಲ್ ಮಾಡುವುದಕ್ಕೆ ಅವರಿಗೆ ಕೇವಲ 100 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಬೇಕಾಗುತ್ತದೆ. ನಾನು ಅಗ್ರಿಮೆಂಟ್ ಅನ್ನು ಪೂರ್ಣವಾಗಿ ಓದಿದೆ, 100 ಕೋಟಿ ರೂಪಾಯಿಗಳ ಮೇಲೆ ಕೊಡುವಂತಿಲ್ಲ, ಅದೇನೋ ಸಾಲವನ್ನೆಲ್ಲಾ ತೆಗೆದುಕೊಂಡಿದ್ದಾರೆ,. ನಮ್ಮ ಜಮೀನನ್ನು ಅಡವಿಟ್ಟು ತೆಗೆದುಕೊಂಡಿದ್ದಾರೆ. ಇವತ್ತೆಲ್ಲಾ ವೆಬ್ ಸೈಟ್ ನಲ್ಲಿ ತೆಗೆದು ನೋಡಿದರೆ ಒಂದು 52 ಕೋಟಿಯನ್ನೇನೋ ಹಾಕಿದ್ದಾರಂತೆ, ಆಮೇಲೆ ಅವು ಇವೆಲ್ಲಾ ಸೇರಿದರೆ 100–150 ಕೋಟಿ ರೂಪಾಯಿಗಳಾಗುತ್ತವೆ. 100–150 ಕೋಟಿ ರೂಪಾಯಿಗಳನ್ನು ಹಾಕಿ ಬಂದು ಇಲ್ಲಿ ನಮಗೆಲ್ಲಾ ಗಿರಗಿಟ್ಟಲೆ ಆಡಿಸುತ್ತಿದ್ದಾರೆ. ಅಧ್ಯಕ್ಷರೆ, ಈಗ ನೀವು ಹುಬ್ಬಳ್ಳಿಗೆ ಹೋಗುತ್ತಿದ್ದೀರಲ್ಲ, ನಿಮ್ಮನ್ನು ಇಲ್ಲಿ ಇಷ್ಟು ಎತ್ತರಕ್ಕೆ ಕೂರಿಸಿದ್ದೇವೆ, ನಿಮ್ಮನ್ನು ನೋಡುವುದಕ್ಕೆ ಮುಖ್ಯಮಂತ್ರಿಗಳು ನಿಮ್ಮ ಹತ್ತಿರಕ್ಕೆ ಬರಬೇಕು, ನೀವು ಹೋದರೂ ಕೂಡ ಅಲ್ಲೆಲ್ಲೊ ಕಾಫಿ ಡೇನಲ್ಲಿ ಕುಳಿತುಕೊಳ್ಳಬೇಕಾಗುವ ಪರಿಸ್ಥಿತಿ ಬರುತ್ತದೆ. ಹೈದರಾಬಾದ್ ಏರ್‌ಪೋರ್ಟ್‌ನಲ್ಲಿ ಯಾವ ರೀತಿ protocol ಹೇಗಿದೆ, ವ್ಯವಸ್ಥೆ ಹೇಗಿದೆ ಎಂಬುದನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಹೈದರಾಬಾದ್ ಬೆಂಗಳೂರಿನದು ಅರ್ಧವಿದೆ. ಹೀಗಿರುವ ಸಂದರ್ಭದಲ್ಲಿ ತಾವು ದಯವಿಟ್ಟು, ಇನ್ನು 2–3 ಸದಸ್ಯರು ಈ ಸೂಚನೆಗೆ ಸಹಿ ಮಾಡಿರುವವರಿದ್ದಾರೆ, ಈ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ತಮ್ಮ ಅಧ್ಯಕ್ಷತೆಯಲ್ಲಿ ಸರ್ಕಾರದ ಅನುಮತಿಯನ್ನು ಪಡೆದುಕೊಂಡು ಸದನ ಸಮಿತಿ ಆಗಲೇ ಬೇಕು, ಇದನ್ನೆಲ್ಲಾ ನಿಲ್ಲಿಸಿ ಮುಂದಿನ ಪೀಳಿಗೆಗೆ ಮಾದರಿಯಾಗುವಂತೆ ಮಾಡಬೇಕು. ನಾನು ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಂಡಿತವೆಂದು ಆಗಲೇ ಹೇಳಿದೆ. ಈ ಹುಟ್ಟು ಸಾವಿನ ಮಧ್ಯದಲ್ಲಿ ನಾವು ಏನು ಮಾಡುತ್ತೇವೆಂದು ಬಹಳ ಮುಖ್ಯವಾದ ವಿಚಾರವಾಗಿದೆ. ಆದ್ದರಿಂದ ಇವತ್ತು ಈ ಮನೆಯ ಜವಾಬ್ದಾರಿ ಏನು ಇತ್ತು ನಮಗೆ ಸಿಕ್ಕಿದೆ, ಇದಕ್ಕೆ ತಾವು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು. ಇದನ್ನು ಚರ್ಚೆ ಮಾಡುವುದಕ್ಕೋಸ್ಕರ ಕೆಲವರು

Right to Information Act ಕೆಳಗೆ ಅರ್ಜಿ ಹಾಕಿದರು ಇದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಇದೇನು ಸ್ವಂತ ಆಸ್ತಿಯಾ? Right to Information ಹಾಕಿದರೂ ಕೂಡ ಇದನ್ನು ಕೊಡುವುದಕ್ಕಾಗುವುದಿಲ್ಲವೆಂದು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಹೈಕೋರ್ಟಿನಲ್ಲಿ ಇದರ ಬಗ್ಗೆ ಜಡ್ಜ್‌ಮೆಂಟ್ ಬಂದಿದೆ. ನಾನು High Court Judgment ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇದು ನಮ್ಮ ಹಣ ಸಾರ್ವಜನಿಕರ ಹಣ. ಕರ್ನಾಟಕ ಸರ್ಕಾರದ ಬಾಕಿ. ಒಂದು ರೂ. ಆಗಲಿ, ಎರಡು ರೂ. ಆಗಲಿ ನಾವೆಲ್ಲಾ ಜವಾಬ್ದಾರರು. ನಮ್ಮ ವಿಧಾನಸೌಧಕ್ಕೆ ಜನ ಇವತ್ತು ಯಾವ ರೀತಿ ಆಕರ್ಷಣೆ ಆಗುತ್ತಿದ್ದಾರೆ, ಈ ರಾಜ್ಯ ವಿಧಾನಸೌಧ ಎಂದರೆ, ಇಡೀ ಪ್ರಪಂಚ politicians ಕೂಡ ಇದು Democratic Temple ಹನುಮಂತಯ್ಯನವರು ಕಟ್ಟಿದ್ದಾರೆ, ಎಂದು ಯಾವ ರೀತಿ ತಪ್ಪು ದಾರಿಗೆ ಎಳೆಯುತ್ತಿದ್ದಾರೆ, ಅದನ್ನು ನಿಲ್ಲಿಸಿ. ಮುಂದೆ ಹೊಸದಾದ Airport ಕಟ್ಟಬೇಕೆಂದು ಹೊರಟಿದ್ದಾರೆ. second expansion ಏನಿದೆ, HAL Airport ಮತ್ತೆ ತೆಗೆದು ಲೋಕಲ್‌ನವರಿಗೆ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಉತ್ತಮವಾದ ಅಂತರರಾಷ್ಟ್ರೀಯ ಮಟ್ಟದ Airport ಅನ್ನು ಬೆಂಗಳೂರನ್ನು International Standard ಮಟ್ಟಕ್ಕೆ ಕಟ್ಟಲಿಕ್ಕೆ ತಾವು ಸಹಕಾರವನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಮನವಿ ಮಾಡಿಕೊಂಡು, ಇನ್ನಷ್ಟು ದೀರ್ಘವಾಗಿ ಕೆಲವು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಗ್ರಿಮೆಂಟ್ ವಿಚಾರ, ಅಗ್ರಿಮೆಂಟ್‌ನಲ್ಲಿ ಏನೇನು ನಡೆದಿದೆ, ನಾವು ಎಷ್ಟು ಜನ, ಅವರು ಎಷ್ಟು ಜನ, ಏನು ಲೋಪದೋಷಗಳು ಇವೆ, ಅದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಡಿ.ಕೆ.ಶಿವಕುಮಾರ್‌ರವರು ಎಲ್ಲವನ್ನೂ ವಿವರವಾಗಿ ಹೇಳಿದ್ದಾರೆ. ಬೇಗ ಮುಗಿಸಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಬೀದರ್ ಉತ್ತರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಸಂಪೂರ್ಣವಾಗಿ ಹೇಳಿದ್ದಾರೆ. ನಾನು ನನ್ನ ಅನುಭವವನ್ನು ಹೇಳುತ್ತೇನೆ. ನಾನು ಅಷ್ಟು ಉದ್ದ ಹೋಗುವುದಿಲ್ಲ. ನಾನು ಹೈದರಾಬಾದ್‌ಗೆ ಎರಡು ದಿವಸ, ನಾಲ್ಕು ದಿವಸಕ್ಕೊಮ್ಮೆ ಹೋಗುತ್ತೇನೆ. ನಾನು ಜಾಸ್ತಿ ಹೋಗುವುದು ಬರುವುದು ಹೈದರಾಬಾದ್‌ಗೆ, ಹೈದರಾಬಾದ್ ಏರ್‌ಪೋರ್ಟನ್ನೂ ನೋಡಿದ್ದೇನೆ, ಈ ಏರ್‌ಪೋರ್ಟನ್ನೂ ನೋಡಿದ್ದೇನೆ. ಇಲ್ಲಿ ಹೋದರೆ ನಮ್ಮ ಗತಿ ದೇವರೇ ಕಾಪಾಡಬೇಕು. ನಿಲ್ಲುವುದಕ್ಕೆ ಜಾಗ ಇಲ್ಲ, ಕೂರುವುದಕ್ಕೆ ಜಾಗ ಇಲ್ಲ. ಕಾಫಿ

ಶಾಪ್‌ದಲ್ಲಿಯೂ ಜಾಗ ಸಿಗುವುದಿಲ್ಲ. ಆ ಪರಿಸ್ಥಿತಿ ಇದೆ. ಎಲ್ಲಾರೂ ಎಲ್ಲಿ ಕುಳಿತುಕೊಳ್ಳುತ್ತಾರೋ ಅಲ್ಲಿಯೇ ಕೂರಬೇಕು. No VIP Lounge. ಹೈದರಾಬಾದ್ ಏರ್‌ಪೋರ್ಟಿಗೆ ಹೋದರೆ ನಾವು ಇಳಿದ ತಕ್ಷಣ ಅವರು ಕರೆದುಕೊಂಡು ಹೋಗಿ ಲಾಂಜ್‌ನಲ್ಲಿ ಕೂರಿಸಿ ಫ್ರೀ ಕಾಫಿ ಟೀ ಕುಡಿಸಿ ಮತ್ತೆ ನಮಗೆ ಗಾಡಿವರೆಗೆ ಕಳುಹಿಸಿ ಕೊಡುತ್ತಾರೆ. ಮತ್ತೆ ನಾವು ವಾಪಸ್ ಹೋಗುವ ವೇಳೆಗೆ, ಬಾಗಿಲುವರೆಗೆ ಕಳುಹಿಸುತ್ತಾರೆ. ಕೂರುವುದಕ್ಕೆ ಜಾಗ ಅರಾಮವಾಗಿದೆ. ಇಲ್ಲಿ ಕಾಫಿ ತಿಂಡಿ ಏನೂ ಬೇಡ, ಕೂತುಕೊಳ್ಳುವುದಕ್ಕೆ ಜಾಗ ಕೊಟ್ಟರೆ ಸಾಕಾಗಿದೆ. ಅಲ್ಲಿ VIP Lounge ಇಲ್ಲ. ಬೇರೆ ಯಾವುದೂ ಇಲ್ಲ. ನಾವು ದನಗಳ ಸಮಾನಾಗಿದ್ದೇವೆ. MLA ಗಳಿಗೆ ಕಿಮ್ಮತ್ತೇ ಇಲ್ಲ. VIP ಕಾರುಗಳಲ್ಲಿ ಏನು ಹೋಗುತ್ತೇವೆ, VIP ಕಾರುಗಳಲ್ಲಿ ನಮಗೆ ಹೋಗುವುದಕ್ಕೆ ಬಿಡುವುದಿಲ್ಲ. ಟ್ಯಾಕ್ಸಿಗಳ ಹತ್ತಿರ ನಾವು ಜನರಲ್ಲಾಗಿ ಹೋಗಬೇಕು. ನಮಗೆ ಬಂದ್ ಮಾಡಿ ನಿಮ್ಮಲ್ಲಿ ಕಾರ್ಡ್ ಇದೆಯಾ ಎಂದು ಕೇಳುತ್ತಾರೆ. ಕಾರ್ಡು ನಿಮಗೆ ಕೊಟ್ಟಿದ್ದೇವಲ್ಲಾ ಎಂದರೂ ನಾವು ಶಾಸಕರಿದ್ದರೂ ನಿಂತಿರಬೇಕು. ನಮ್ಮ ಗೃಹ ಸಚಿವರಿಗೆ ಈ ರೀತಿ ತಡೆದಿರುವ ಅನುಭವವಾಗಿದೆ. ಒಳಗೆ ಹೋಗುವುದಕ್ಕೆ ಬಿಡಲಿಲ್ಲ. ವಾಪಸ್ ಕಳುಹಿಸಿದರು. ಅವರು ಯಾರಿಗೂ ಹೇಳಿಕೊಂಡಿಲ್ಲ. ಏಕೆ ಹೇಳಿಕೊಂಡಿಲ್ಲವೋ ನನಗೆ ಗೊತ್ತಿಲ್ಲ. ಇವತ್ತು ಇಷ್ಟು ಅಪಮಾನ ಇದೆ, ಆ ವಿಮಾನ ನಿಲ್ದಾಣವನ್ನು foreign ನವರು ಕಟ್ಟಿದ್ದಾರೆ, ಹೈದರಾಬಾದ್ ವಿಮಾನ ನಿಲ್ದಾಣವನ್ನೂ GMR ದವರೇ ಕಟ್ಟಿದ್ದಾರೆ. ಎಂತಹ beautiful ಇದೆ. GMR protocol ಇದೆ. ಕರೆದುಕೊಂಡು ಹೋಗುತ್ತಾರೆ, ಕರೆದುಕೊಂಡು ಬಂದು ಬಿಡುತ್ತಾರೆ. ಇಲ್ಲಿ protocol ಅಂತೂ ಇಲ್ಲ, ನಮಗೆ ಕೂರುವುದಕ್ಕೆ ಜಾಗ ಕೊಟ್ಟರೆ ಸಾಕು. ಅಲ್ಲಿ ಮಾನ ಮರ್ಯಾದೆ ಏನೇನೂ ಇಲ್ಲ. ಇದರ ಅಗ್ರಿಮೆಂಟ್ ಕ್ಯಾನ್ಸಲ್ ಮಾಡಬೇಕು. ಇದನ್ನು ಕ್ಯಾನ್ಸಲ್ ಮಾಡಿ ಒಂದು House Committee ಮಾಡಿ. ಬೆಂಗಳೂರಿನಿಂದ ನೀವು ದೆಹಲಿಗೆ ಹೋಗುತ್ತಿರುತ್ತೀರಿ. ಬೆಂಗಳೂರ್ ಏರ್ ಕಂಡಿಷನ್ ಸಿಟಿ. ಬೆಂಗಳೂರು International City. Garden City ಎಂದು ಎಷ್ಟು ವರ್ಣನೆ ಮಾಡುತ್ತಾರೆ. ಇಲ್ಲಿನ Airport ಗೆ ಹೋದರೆ ದೇವರೇ ಕಾಪಾಡಬೇಕು. ಆ ಭಗವಂತನೇ ನೋಡಬೇಕು. ಇವೆಲ್ಲಾ ಮಾಲುಗಳನ್ನು ತುಂಬುವುದಕ್ಕಾಗಿ first class ಗೋಡೌನ್ ಕಟ್ಟಿದ್ದಾರೆ. ನಮ್ಮನ್ನೂ ತೆಗೆದುಕೊಂಡು ಹೋಗಿ ಡಂಪ್ ಮಾಡುತ್ತಾರೆ. ನೀವು ಅಲ್ಲಿಂದ ಇನ್ನು travel ಮಾಡಿಲ್ಲವೆಂದು ಕಾಣಿಸುತ್ತದೆ. ನೀವು ಒಂದು ಸಾರಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಹೈದರಾಬಾದ್‌ನಲ್ಲಿ ಏನು treatment ಇದೆ, ಇಲ್ಲಿ ಏನು treatment ಇದೆ ಎಂದು ಗೊತ್ತಾಗುತ್ತದೆ. ಮನುಷ್ಯರ ತರಹ ಟ್ರೀಟ್‌ಮೆಂಟ್ ಮಾಡುವುದಿಲ್ಲ. ಈ ಪರಿಸ್ಥಿತಿ ಇಲ್ಲಿ ಇದ್ದಾಗ ಯಾರಿಗೇನು ಮರ್ಯಾದೆ ಇಲ್ಲ. ತಾವು ಏನಾದರೂ ಮಾಡಿ

House Committee ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಅವರು adjournment Motion move ಮಾಡಿ preliminary submission ಮಾಡಿದ್ದಾರೆ. ನೀವು ಚರ್ಚೆಗೆ ಅವಕಾಶ ಕೊಟ್ಟು ಬಿಟ್ಟಿದ್ದೀರಿ. ನಿಯಮ 69 ಕ್ಕೆ convert ಮಾಡಿದರೆ, ಎಲ್ಲರೂ discussion ನಲ್ಲಿ participate ಮಾಡಬಹುದು. ದೀರ್ಘವಾಗಿ ಚರ್ಚೆ ಮಾಡಬಹುದು. ಅವರೂ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ನೀವು ಇದನ್ನು convert ಮಾಡುವುದು ಬಹಳ ಒಳ್ಳೆಯದು.

ಅಧ್ಯಕ್ಷರು:- convert ಮಾಡಲಿಕ್ಕೆ ನಮ್ಮದೇನೂ ತೊಂದರೆ ಇಲ್ಲ. ಈಗಾಗಲೇ ಸಾಕಷ್ಟು ವಿಚಾರಗಳನ್ನು ಮಾನ್ಯ ಡಿ.ಕೆ.ಶಿವಕುಮಾರ್‌ರವರು ಹೇಳಿದ್ದಾರೆ. ಅವರು ಉತ್ತರ ಹೇಳುವುದಕ್ಕೂ ನಿಂತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಬಹಳ ಜನ ಅದರಲ್ಲಿ ಸಹಿ ಹಾಕಿದ್ದಾರೆ. If it is converted under Rule 69 ಬಹಳ ಜನ participate ಮಾಡಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ.ಜನಾರ್ಧನ ರೆಡ್ಡಿ(ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಬಹಳ ಅದ್ಭುತವಾಗಿ ನಿಜವಾದ ಸತ್ಯಾಂಶ ಏನಿದೆ ಅದನ್ನು ಹೇಳಿದ್ದಾರೆ. ಮನುಷ್ಯನ ಹುಟ್ಟು ಸಾವು ನಡುವೆ ನಾವು ಬದುಕಿರುವಂತಹ ಸಮಯದಲ್ಲಿ ಅದ್ಭುತವಾದ ಕೆಲಸಗಳನ್ನು ಮಾಡಬೇಕು. ಅದು ಇತಿಹಾಸದಲ್ಲಿ ಉಳಿಯಬೇಕೆನ್ನುವಂತಹ ಮಾತು ಅವರು ಏನು ಹೇಳಿದ್ದಾರೆ, ಈ ಸಂದರ್ಭದಲ್ಲಿ ನಮ್ಮ ನಿತ್ಯೋತ್ಸವ ಕವಿ ನಿಸಾರ್ ಅಹಮದ್‌ರವರು ಹೇಳಿರುವಂತಹ ಕವನದ ಎರಡೇ ವಾಕ್ಯಗಳನ್ನು ಇಲ್ಲಿ ನಾನು ಹೇಳುತ್ತಿದ್ದೇನೆ.

"ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ ತಾಯಿ ನಿತ್ಯೋತ್ಸವ'

ಕನ್ನಡ ತಾಯಿ ಭುವನೇಶ್ವರಿಗೆ ನಿತ್ಯೋತ್ಸವ ಆಗಬೇಕೆಂದು ಅವರು ಕನಸು ಕಂಡಿದ್ದರು ಆ ನಿತ್ಯೋತ್ಸವ ಮಾಡುವುದಕ್ಕೆ ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ತಾಯಿ ಭುವನೇಶ್ವರಿಗೆ ಒಳ್ಳೊಳ್ಳೆಯ ಕೆಲಸಗಳನ್ನು

ಮಾಡುವುದರ ಮೂಲಕ ನಿತ್ಯೋತ್ಸವ ಮಾಡಲಿಕ್ಕೆ ಸಿದ್ಧರಾಗಿದ್ದಾರೆ. ಅದೇ ಹಾಡಿನಲ್ಲಿ ಇನ್ನೊಂದು ಲೈನ್ ಬರುತ್ತದೆ.

"ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ'

ಹಾಗಾಗಿ ಇವತ್ತು ಶಾಸನಗಳು ಎಂದರೆ ನಮ್ಮ ಹಂಪಿ ಇರಬಹುದು, ಬಾದಾಮಿ ಇರಬಹುದು, ಬೇಲೂರು ಇರಬಹುದು, ಇಂತಹ ಐತಿಹಾಸಿಕ ಸ್ಥಳಗಳು ಏನಿವೆ ಆ ರೀತಿಯಲ್ಲಿ ನಮ್ಮ ಬೆಂಗಳೂರು International Aitport ಇರಬೇಕಾಗುತ್ತದೆ ಎನ್ನುವುದನ್ನು ನಾನು ಮೂಲಭೂತ ಸೌಕರ್ಯ ಮಂತ್ರಿಯಾಗಿ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಮತ್ತು ಹಿರಿಯರಾದ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿ ಯವರು ಏನು ಹೇಳಿದ್ದಾರೆ, ಈ Airport ಗೆ ಸಂಬಂಧಪಟ್ಟ ವಿಷಯದಲ್ಲಿ ಸನ್ಮಾನ್ಯ ರೇವಣ್ಣನವರು ಕೂಡ ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದರು. ಇವತ್ತು ಮಾನ್ಯ ಡಿ.ಕೆ.ಶಿವಕುಮಾರ್‌ರವರು ಬಹಳ ಸುದೀರ್ಘವಾಗಿ ಕೆಲವೊಂದು, ವಿಷಯಗಳನ್ನು ಹೇಳಿದ್ದಾರೆ. ನಾನು ಒಬ್ಬ ಮಂತ್ರಿಯಾಗಿದ್ದರೂ ಕೂಡ ನಮ್ಮ ಮನಃಸ್ಸಾಕ್ಷಿಯಾಗಿ ನಮ್ಮ Bangalore International Airport ಅನ್ನು ನೋಡಿದರೆ, ಬಹಳ ದುಃಖಕರವಾದ ವಿಷಯವಿದೆ. ಇದು ಬಹಳ ಗಂಭಿರವಾದ ವಿಷಯ. ತಾವು ಅಧ್ಯಕ್ಷರೆ, ಇದನ್ನು ಯಾವುದಾದರೂ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡುವುದಾದರೆ, ಇಡೀ ನಮ್ಮ ಸದನದಲ್ಲಿರುವಂತಹ ಸದಸ್ಯರುಗಳು ಎಲ್ಲರೂ ಕೂಡ ಇದರ ಬಗ್ಗೆ ಚರ್ಚೆ ಮಾಡಿ ಒಳ್ಳೆಯ ನಿರ್ಣಯ ತೆಗೆದುಕೊಳ್ಳುವಂತಹ ವಿಷಯ ಇದೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಮಾತನಾಡಿದ್ದು ನಿಜವಾಗಿಯೂ ಬಹಳ ಅರ್ಥಗರ್ಭಿತವಾಗಿದೆ. 'ಬೆತ್ತಲೆಯೇ ನೀ ಬಂದೆ, ಬೆತ್ತಲೆಯೇ ನೀ ಹೋದೆ, ವಸ್ತ್ರವೇಶಗಳೆಲ್ಲಾ ನಾಲ್ಕು ದಿನ, ಚಟ್ಟಕ್ಕೆ ನಿನೇರುವ ಮುನ್ನ ಕಿತ್ತೆಸೆಯುವೆ ಕಂತೆಗಳ ಮರುಳ ಮುನಿಯ' ಎಂದು ಡಿ.ವಿ.ಜಿ.ಯವರು ಹೇಳಿದ್ದಾರೆ. 'ಆಯಂ ವಿತ್ತಂ ಕರ್ಮಂಚಾ' ಆಯಸ್ಸು ಎನ್ನುವುದು ಯಾರ ಕೈಯಲ್ಲೂ ಇಲ್ಲ. ಅರಸನಾಗಲಿ, ಧನಿಕನಾಗಲಿ, ತಿರುಕನಾಗಲಿ, ನಾನಾಗಲಿ, ನೀವಾಗಲಿ, ಎಲ್ಲರೂ ಹೋಗಲೇಬೇಕು. ಹೋಗುವ ಮೊದಲು ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಬೇಕು, ಎನ್ನತಕ್ಕಂತಹ ಮಾತು ಅರ್ಥಪೂರ್ಣವಾಗಿದೆ. ಅರ್ಥಗರ್ಭಿತವಾಗಿದೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರಿಗೆ ಜಯವಾಗಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಪಾಪ ಶಂಕರಲಿಂಗೇಗೌಡರಿಗೆ ಒಳ್ಳೆಯದು ಮಾಡತಕ್ಕಂತಹ ಅವಕಾಶ ಮಾನ್ಯ ಯಡಿಯೂರಪ್ಪನವರು ಕೊಡಲಿಲ್ಲ.

ಅಧ್ಯಕ್ಷರು: ಹೊಸ ವಿಧಾನಸಭೆಗೆ ಬಂದ ಮೇಲೆ ಪ್ರಥಮ ಬಾರಿ ಅವರು ಬಾಯಿ ಬಿಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಹಳ ದಿವಸಗಳಿಂದ ಮುನಿಸಿಕೊಂಡಿದ್ದಾರೆ, ಅವರಿಗೆ ಅವಕಾಶವೇ ಸಿಗಲಿಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮುನಿಸಿಕೊಂಡಿಲ್ಲ. ಆಯಂ ವಿತ್ತಂ ಕರ್ಮಾಂಚಾ. ಆಯಸ್ಸು, ವಿದ್ಯೆ, ಕೆಲಸ, ಹಣ, ಅಧಿಕಾರ ಇದೂ ಕೂಡ ತಾಯಿಯ ಗರ್ಭದಿಂದಲೇ ಬರುತ್ತದೆ. ಯಾರ್‍ಯಾರ ಗರ್ಭದಲ್ಲಿ ಏನೇನು ಬೇಕೋ ಬರೆದು ಬಿಟ್ಟಿದ್ದಾನೆ. ಅವರ ಪಾಡಿಗೆ ಅವರು ಮಾಡಿಕೊಂಡು ಹೋಗಲಿ, ನಮ್ಮ ಪಾಡಿಗೆ ನಾವು ಇರುತ್ತೇವೆ. ಯೋಗಿ ತಂದದ್ದು ಯೋಗಿಗೆ, ಜೋಗಿ ತಂದದ್ದು ಜೋಗಿಗೆ, ನಾ ತಂದದ್ದು ನನಗೆ, ನೀ ತಂದದ್ದು ನಿನಗೆ.

ಅಧ್ಯಕ್ಷರು: ಎಲ್ಲದಕ್ಕೂ ರೆಡಿ ಆಗಿಬಿಟ್ಟಿದ್ದಾರೆ ಅವರು ಈಗ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಶಂಕರಲಿಂಗೇಗೌಡರೇ, ನೀವೂ ನಾವೂ ಮಧ್ಯಾಹ್ನ ಕೂಡಿ ಹೋದೆವು. ವಿಧಾನಸೌಧದ ಎದುರಿಗೆ ನೀವೂ ನಾವೂ ಕೂಡಿ ಹೋಗಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಶಂಕರಲಿಂಗೇಗೌಡರೆ, ಇವೊತ್ತು ಮಧ್ಯಾಹ್ನ ನಾವು ಮತ್ತು ನೀವು ಜೊತೆಯಲ್ಲಿಯೇ ಹೋದೆವಲ್ಲಾ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಜೊತೆಯಲ್ಲಿ ಹೋದೆವೆಷ್ಟೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮ್ಮ ಜೊತೆಯಲ್ಲಿಯೇ ಬಂದರು. ಪಾಪ, ಆಗ ನಮ್ಮ ಜೊತೆ ಅವರು ತಮ್ಮ ನೋವನ್ನು ತೋಡಿಕೊಂಡರು. ನಾನೂ ಕೂಡ ಸಮಾಧಾನ ಮಾಡಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನಾನು ನೋವನ್ನು ತೋಡಿಕೊಳ್ಳಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹೀಗೆ ಸನ್ಯಾಸಾಶ್ರಮಕ್ಕೆ ಹೋದರೆ ಹೇಗೆ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಕುಮಾರಸ್ವಾಮಿಯವರು ಮಂತ್ರಿಗಳಾಗಿದ್ದಾಗಲೇ ನಾನು ಹೇಳಿದ್ದೆ. ಆ ಟೈಂನಲ್ಲೇ ಹೇಳಿದ್ದೆ. ಅವರೂ ಹೇಳಿದ್ದರು. ನಾನು ನೋವನ್ನು ಯಾರ ಜೊತೆಯೂ ತೋಡಿಕೊಂಡಿಲ್ಲ. ಪಾಲಿಗೆ ಬಂದದ್ದು ಭಾಗ್ಯವಷ್ಟೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆ ರೀತಿ ಹೇಳಿದರೆ ನಮಗೆ ಮುಂದೆ ಬರುವ ಛಾನ್ಸ್ ಕೂಡ ಹೋಗುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನಾನು ನಾಲ್ಕು ಬಾರಿ ಗೆದ್ದುಬಂದಿದ್ದೇನಲ್ಲ. ನನಗೆ ಯೋಗ್ಯತೆ ಇದೆಯೋ ಇಲ್ಲವೋ ಎಂಬುದು ಅದರಲ್ಲಿಯೇ ಗೊತ್ತಾಗುತ್ತದೆ.

ಶ್ರೀ ಸಿ.ಟಿ.ರವಿ:- ಗೌಡರೆ, ಅಸಹಾಯಕರ ಮುಂದೆ ಹೇಳುವುದರಿಂದ ಏನಾದರೂ ಲಾಭವಾಗುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ facts ಅನ್ನು ಸವಿಸ್ತಾರವಾಗಿ ಶಿವಕುಮಾರ್‌ರವರು ಹೇಳಿದ್ದಾರೆ. ಈ ನಿಲುವಳಿ ಸೂಚನೆಯನ್ನು ತಾವು ಆಗಲೇ ತಳ್ಳಿ ಹಾಕಿ ಪ್ರಶ್ನೋತ್ತರ ಆದಮೇಲೆ ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿದಿರಿ. ಈಗಾಗಲೇ ಪ್ರಶ್ನೋತ್ತರ ಕೂಡ ಮುಗಿದಿದೆ. ವಿಶೇಷವಾಗಿ ಪದ್ಮಪ್ರಿಯ ಕೇಸ್ ಮೇಲೆ ಚರ್ಚೆ ಮಾಡುವುದಿತ್ತು. ಅದನ್ನು ಹೇಳಬೇಕೆಂದಿದ್ದೆ. ಆದರೆ ಅದಕ್ಕೂ ಮೊದಲೇ ಇದು ಬಂತು. ಆಮೇಲೆ ವಿಶ್ವವಿದ್ಯಾಲಯದ್ದೂ ಕೂಡ ಚರ್ಚೆಗೆ ಬರಬೇಕಾದ್ದು ಇದೆ. ಹೀಗೆ ಬಹಳ ಮಹತ್ವದ ವಿಷಯಗಳಿವೆ. ಆದರೆ ಈ ಮಧ್ಯೆ International Airport ವಿಷಯ ಕೂಡ ಬಂದಿದೆ. ನಿಮಗೂ ಕೂಡ ಎಲ್ಲರಿಗೂ ಗೊತ್ತಿದೆ, ಅನೇಕ ವರ್ಷದಿಂದ ಈ International Airport ಯಾವ ರೀತಿಯಾಗಿ ಅಸ್ತಿತ್ವಕ್ಕೆ ಬಂತು, ಯಾವ ರೀತಿಯಾಗಿ ಅನುಮತಿ ನೀಡಿತ್ತು ಎಂಬ ಬಗ್ಗೆ ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಆದರೆ ಅಸ್ತಿತ್ವಕ್ಕೆ ಬಂದ ಮೇಲೆ ಇವೊತ್ತು ಸೀಮನ್ಸ್, ಇರಬಹುದು ಝೂರಿಚ್ ಏರ್ಪೋರ್ಟ್ ಇರಬಹುದು, ಆಮೇಲೆ ಎಲ್ & ಟಿ ಇರಬಹುದು. ಈ ಮೂರು ಕಾಂಟ್ರ್ಯಾಕ್ಟರ್‌ಗಳು ಸೇರಿ, ಇವರಲ್ಲಿ ಒಬ್ಬರು construction ಮಾಡುವವರು, ಇನ್ನೊಬ್ಬರು ಝೂರಿಚ್ Airport experts ನವರು ಹಾಗೂ ಇನ್ನೊಬ್ಬರು ಸೀಮನ್ಸ್‌ನವರು ಮೆಶನರಿ ಹಾಗೂ ಮೆಕ್ಯಾನಿಕ್ ಬಗ್ಗೆ experts ಇರತಕ್ಕಂಥವರು. ಈ ಮೂರು ಸಂಸ್ಥೆಗಳು ಸೇರಿ ಅಂತಿಮವಾಗಿ ಅವರಿಗೇ ಇದನ್ನು ಕೊಡಬೇಕೆಂದು ಹೇಳಿ ಹಿಂದೆ ಇದ್ದ ಎರಡ್ಮೂರು ಸರ್ಕಾರಗಳು ಪ್ರಯತ್ನ ಪಟ್ಟು ಕೊನೆಗೆ ಏನೋ ಇವರು ಕಡಿದು ಕಟ್ಟೆ ಹಾಕುತ್ತಾರೆಂದು ತಿಳಿದು ಅವರಿಗೇ ಕೊಡಲಾಯಿತು. ಆದರೆ ಅಲ್ಲಿ ಈಗಾಗಲೇ ನಮ್ಮ ನಾಗಮಾರಪಲ್ಲಿಯವರು ಹೇಳಿದ ಹಾಗೆ ಮತ್ತು ಶಿವಕುಮಾರ್‌ರವರು ಹೇಳಿದ ಹಾಗೆ ನೀವು ವ್ಯವಸ್ಥೆ ನೋಡಬೇಕು. ಅದು ಒಂದು as good as warehouse. Godown ಇದ್ದ ಹಾಗೆ ಇದೆ. ನಾನು ಕೂಡ ಯಾವಾಗಲೂ ಹೈದ್ರಾಬಾದ್‌ಗೆ ಹೋಗುತ್ತೇನೆ, ಬರುತ್ತೇನೆ. every eight days, fifteen days ಪ್ರತಿಯೊಂದು ಸಲ ಹೋಗುತ್ತಿದ್ದೇವೆ, ಬರುತ್ತಿದ್ದೇವೆ. ಆದರೆ ಅವರು ಅಲ್ಲಿ create ಮಾಡಿರತಕ್ಕಂಥ facilities ಮತ್ತು ಇವರು ಕೊಟ್ಟಂಥ facilities ಹೋಲಿಸಿದರೆ ನೂರು ಪಟ್ಟು ಮೇಲೆ ನಮ್ಮ ಹಳೆಯ

Airport ಚೆನ್ನಾಗಿತ್ತು. ಈಗ ಅವರು ಹೇಳಿದಂತೆ ಅಲ್ಲಿ ರೆಸ್ಟೋರೆಂಟ್, ಆಮೇಲೆ ಕೆಲವು ಅಂಗಡಿಗಳು, ಹೀಗೆ ಇಂಥವು ಬಿಟ್ಟರೆ ಬೇರೆ ಯಾವ facilities ಕೂಡ International Airport ಗೆ ಕೊಡಬೇಕಾದಂಥವುಗಳು ಇಲ್ಲ, domestic passengers ಗೂ facilities ಇಲ್ಲ. ನಾವು ಅಲ್ಲಿ ಒಂದು ಕಡೆ ನಡೆದುಕೊಂಡು ಎಲ್ಲಿಯವರೆವಿಗೂ ಹೋಗಬೇಕೆಂದರೆ ಸುಮಾರು ಮೂರ್‍ನಾಲ್ಕು ಫರ್ಲಾಂಗ್‌ಗಳಷ್ಟು ನಡೆದುಕೊಂಡು ಹೋಗಿ ತದನಂತರ ಲಿಫ್ಟ್ ಹತ್ತಿ. ಆಮೇಲೆ ಪುನಃ ಇಳಿದು ಬಸ್‌ನಲ್ಲಿ ಹೋಗಿ ಆಮೇಲೆ ಪುನಃ ವಿಮಾನವನ್ನು ಹತ್ತತಕ್ಕಂಥ ವ್ಯವಸ್ಥೆ ಆಗಿದೆ. ಇಷ್ಟೊಂದು ಅವ್ಯವಸ್ಥೆಯನ್ನು ನಾವು ಎಂದೂ ಕೂಡ ಕಂಡಿಲ್ಲ. ನೀವು ಬೇಕಾದರೆ ಅಲ್ಲಿ ನೋಡಿ. Airport enter ಆಗಬೇಕಾದರೆ ಎಲ್ಲ ಕಡೆ ಗಲಿಜೋ ಗಲೀಜು, ಮಣ್ಣೋ ಮಣ್ಣು. ಅಂಥ International Airport ನಲ್ಲಿ entrance ನಲ್ಲಿಯೇ ಈ ರೀತಿ ಇದೆ. ಅದೇ ನೀವು ಹೈದ್ರಾಬಾದ್ Airport ಅಥವಾ ಬೇರೆ International Airport ನಲ್ಲಿಯೇ ಎಷ್ಟು clean ಮತ್ತು neat ಆಗಿ ಇರುತ್ತದೆ. ಆದರೆ ಇಲ್ಲಿ ಯಾವುದೂ ಇಲ್ಲ. ಇಲ್ಲಿ ವಿ.ಐ.ಪಿ. ಲಾಂಜ್ ಇದೆ. Central Government ನವರು ಯಾರಾದರೂ ಬರುತ್ತಾರೆ ಅಥವಾ ಬೇರೆ ಯಾರಾದರೂ ವಿ.ಐ.ಪಿ.ಗಳು ಬರುತ್ತಾರೆ. ಈ ವಿ.ಐ.ಪಿ. ಲಾಂಜ್ ಇಲ್ಲಿ ಕೊನೆಯಲ್ಲಿ ಮೂಲೆಯಲ್ಲಿದೆ. ಅಲ್ಲಿಗೆ ನೀವು ಹೋಗಬೇಕಾದರೆ ನಿಮಗೆ ಕಾರ್ ಬೇಕಾಗುತ್ತದೆ. ನೇರವಾಗಿ ಯಾರಿಗೆ ಕಾರ್ ಫೆಸಿಲಿಟಿ ಇದೆ, ಅಂದರೆ ಪ್ಲೈಟ್ ಇಳಿದ ತಕ್ಷಣ ಅವರು ಕುಳಿತು ಹೋಗತಕ್ಕಂಥವರಿದ್ದರೆ ಅವರಿಗೆ, ಅಥವಾ ವಿ.ಐ.ಪಿ. ಲಾಂಜ್‌ನಿಂದ ವಿಮಾನದವರೆಗೆ ಕಾರ್‌ನಲ್ಲಿ ಹೋಗತಕ್ಕಂಥವರಿಗೆ ಆ ವಿ.ಐ.ಪಿ. ಲಾಂಜ್ ಇರುವುದು. ಆದರೆ ಬೇರೆ ಜನರಿಗೆ ವಿ.ಐ.ಪಿ. ಲಾಂಜ್ ಇಲ್ಲ ಅಥವಾ ಯಾರು ನಮ್ಮಂಥವರು ಸ್ಟೇಟ್‌ನವರು, ಪರ್ಟಿಕ್ಯುಲರ್‌ಲಿ, ಸ್ಟೇಟ್ ಗೆಸ್ಟ್ಸ್ ಅಥವಾ ಸ್ಟೇಟ್ ಇಂಪಾರ್ಟೆಂಟ್ ಲೀಡರ್ಸ್ ಹೊರಗಿನಿಂದ ಬಂದಂಥವರು except union government ನಿಂದ ಯಾರಾದರೂ ದೊಡ್ಡ ದೊಡ್ಡವರು protocolನವರು ಬರುತ್ತಾರೆ, ಅವರನ್ನು ಕರೆದುಕೊಂಡು ಹೋಗುತ್ತಾರೆ ಮತ್ತೆ ಅಲ್ಲಿಗೆ ಬಿಡುತ್ತಾರೆ. ಆದರೆ Arrival ಕಡೆಯಲ್ಲಿಯೂ ಕೂಡ ವಿ.ಐ.ಪಿ. ಲಾಂಜ್ ಇಲ್ಲ ಅಥವಾ departure ನಲ್ಲಿಯೂ ಕೂಡ ಇಲ್ಲ. ಬೇರೆ ಕಾಮನ್ ಫೆಸಿಲಿಟೀಸ್ ಕೂಡ ಸರಿಯಾಗಿಲ್ಲ. ರೀಸಸ್‌ಗೆ ಹೋಗತಕ್ಕಂಥದ್ದಕ್ಕೆ ಅಥವಾ ಯಾರಾದರೂ ಗೆಸ್ಟ್‌ಗಳು ಬಂದರೆ ಅವರು atleast ಒಂದು ಕಡೆ ಕೂರತಕ್ಕಂಥದ್ದಕ್ಕೂ ಕೂಡ ಒಂದು ಫೆಸಿಲಿಟೀಸ್ ಕೂಡ ಅಲ್ಲಿ ಸರಿಯಾಗಿಲ್ಲ. ಅಗ್ರಿಮೆಂಟ್‌ನಲ್ಲಿ ಇರುವುದನ್ನು ಈಗಾಗಲೇ ನಾನು ನೋಡಿದ್ದೇನೆ. ಯಾವ ರೀತಿಯಾಗಿ ಅವರು ನಡೆದುಕೊಳ್ಳಬೇಕು, ಯಾವ ರೀತಿಯಾಗಿ ಫೆಸಿಲಿಟೀಸ್ ಕೊಡಬೇಕು, ಇವೆಲ್ಲದರ

ಬಗ್ಗೆಯೂ ಕೂಡ ಅಗ್ರಿಮೆಂಟ್‌ನಲ್ಲಿದೆ. ಆ ಕಂಡೀಶನ್‌ಗಳನ್ನೇ ಇವರು violate ಮಾಡಿದರೆ naturally ಆ ಅಗ್ರಿಮೆಂಟ್ ಅನ್ನು ಮುರಿದು ಹೊಸ ಅಗ್ರಿಮೆಂಟ್ ಮಾಡುವುದಕ್ಕೆ ಅಥವಾ ಬೇರೆಯವರಿಗೆ ಕೊಡುವುದಕ್ಕೂ ಕೂಡ ಅಥವಾ Government of India ದವರೇ ಸ್ವಾಧೀನಪಡಿಸಿಕೊಳ್ಳಬಹುದು. ಈ ರೀತಿ ಮಾಡಿದರೆ ತಪ್ಪಾಗುವುದಿಲ್ಲ. ಅದಕ್ಕೆ ಅದೇನೆ ಇರಲಿ. ಮೆರಿಟ್ ಅಥವಾ ಡೀ-ಮೆರಿಟ್ ಬಗ್ಗೆ ಆಮೇಲೆ ಯೋಚನೆ ಮಾಡೋಣ. ಈಗ ತಕ್ಷಣ ಈ ವಿಷಯದ ಮೇಲೆ ಚರ್ಚೆಗಾದರೂ ಒಪ್ಪಿ. ಇದು ಒಂದು ವಿಚಾರ. ಅಥವಾ without discussion, refer it to the House Committee. House Committee ಒಂದು constitute ಮಾಡಿ. Let us see, we will examine, Law department ನವರು ಇದ್ದಾರೆ, ನಾವು ಇದ್ದೇವೆ, ಎಲ್ಲಾ ಸದನದ ಅನೇಕ ಸದಸ್ಯರುಗಳಿರುತ್ತಾರೆ, ಸಲಹೆಗಳನ್ನು ಒಂದು ರಿಪೋರ್ಟ್ ಸಬ್‌ಮಿಟ್ ಮಾಡಿದಂತಾಗುತ್ತದೆ. ಆ ರಿಪೋರ್ಟ್ ಮೇಲೆ ಮುಂದಿನ ಕ್ರಮವನ್ನು ಜರುಗಿಸಲು ಅನುಕೂಲವಾಗುತ್ತದೆ. ಅದನ್ನು ಮಾಡದೇ ಸುಮ್ಮನೆ ಇಲ್ಲಿ ಚರ್ಚೆ ಮಾಡಿಕೊಂಡು ಇದನ್ನು ಇಲ್ಲಿಗೇ ಬಿಟ್ಟರೆ ಇದರಿಂದ ಏನಾಗುತ್ತದೆಂದು ಹೇಳುತ್ತೇನೆ ಅಧ್ಯಕ್ಷರೆ. ಸುಮ್ಮನೆ ಕೆಲವು ಸಲ ಇಲ್ಲಿ ಎತ್ತುತ್ತೇವೆ, ಎತ್ತಿದ ಮೇಲೆ ಅವು ಅಲ್ಲಿಗೇ ಬಿಟ್ಟುಹೋಗುತ್ತವೆ, ಮತ್ತೆ ಅವರು ಯಾರಾದರೂ important ಜನ influence ಮಾಡುವುದಕ್ಕೆ ಬರುತ್ತಾರೆ. ಆಗ ಇದು ಅರ್ಧಕ್ಕೇ ಬಿದ್ದರೆ ಅನೇಕ ಜನ ಇದರ ಹೆಸರಿನಲ್ಲಿ ವ್ಯವಹಾರ ಮಾಡತಕ್ಕಂಥವರು ಇರುತ್ತಾರೆ. ಅದನ್ನು ತಪ್ಪಿಸಬೇಕೆಂದರೆ ತಕ್ಷಣ ನೀವು ಹೌಸ್ ಕಮಿಟಿ ಮಾಡಿ, ಅದರ ರಿಪೋರ್ಟ್ ತರಿಸಿ ಮುಂದಿನ ಕ್ರಮವನ್ನು ಏನು ತೆಗೆದುಕೊಳ್ಳಬೇಕು, in the interest of the state and public interest ಅದನ್ನು ಮಾಡಬೇಕು, ಮತ್ತು International Airport ಎನ್ನುವ ಹೆಸರನ್ನೇ ತೆಗೆದುಹಾಕಬೇಕು. ಅದು ಸುಮ್ಮನೆ ಬೆಂಗಳೂರಿಗೆ ಬೇಕಾದರೆ ಅದು ಸೆಕೆಂಡ್ ಏರ್‌ಪೋರ್ಟ್ ಇದೆ ಎಂದರೆ ಅಥವಾ ಮೂರನೇ ಏರ್‌ಪೋರ್ಟ್ ಇದೆ ಎಂದು ಹೇಳಬಹುದೇನೋ. ಏಕೆಂದರೆ International Airportನ ಯಾವ ಗುಣಮಟ್ಟವೂ ಅಲ್ಲಿ ಇಲ್ಲ. ಇನ್ನು ಆ ಏರ್‌ಪೋರ್ಟ್‌ಗೆ ಹೋಗಬೇಕಾದ ರಸ್ತೆಯಲ್ಲಿ accidents ಗಳು ತುಂಬಾ ಆಗುತ್ತಿವೆ. Every day minimum three to four accidents ಆಗುತ್ತಿವೆ. ಆಮೇಲೆ ನಮ್ಮ ಗುರುಪಾದಪ್ಪನವರು ಹೇಳಿದಂತೆ ಟ್ಯಾಕ್ಸಿಗೆ first preference ಕೊಡುತ್ತಾರೆ. Government car second line ನಲ್ಲಿ ಬರಬೇಕು. ಏಕೆಂದರೆ ಟ್ಯಾಕ್ಸಿನವರು paid, ಅದಕ್ಕಾಗಿ ಯಾವುವು paid taxi ಗಳಿವೆ ಅವುಗಳಿಗೆ ನಾವು first preference ಕೊಡುತ್ತೇವೆನ್ನುತ್ತಾರೆ. ಬೇರೆಯವರು government ನದ್ದಾದರೂ ಇರಬಹುದು ಅಥವಾ ಬೇರೆ ಏನೇ ಆಗಿರಬಹುದು. ಇಲ್ಲಿ ಪ್ರೈವೇಟ್

ಏಜೆನ್ಸಿ ಇದೆಯಾದ ಕಾರಣ ನಮ್ಮ ಪ್ರಿಫರೆನ್ಸ್ ಪ್ರಕಾರ ನಾವು ಪ್ಯಾಸೆಂಜರ್ಸ್‌ಗೆ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿ ಇವೊತ್ತಿನ ದಿವಸ ಕಂಪ್ಲೀಟ್ ಅಲ್ಲಿ ಅವ್ಯವಸ್ಥೆಯಾಗಿದೆ. ನಾವು ಒಂದೇ ರೀತಿ ಎಲ್ಲರನ್ನೂ ಟ್ರೀಟ್ ಮಾಡುವುದಕ್ಕೆ ಆಗುವುದಿಲ್ಲ. ಆ ಮಾತು ಬೇರೆ. ಆದರೆ at least state guests, ಎಂ.ಎಲ್.ಎ. ಗಳಿಗೆ, ಎಂ.ಪಿ.ಗಳಿಗೆ, ಛೇರ್‌ಮನ್‌ಗಳಿಗೆ, ಮಂತ್ರಿಗಳಿಗೆ, ವಿ.ಐ.ಪಿ.ಗಳಿಗೆ ಹೀಗೆ ಇನ್ನೂ ಅನೇಕ ಮುಖ್ಯವಾದಂಥ ಹೊರಗಿನ ಜನರು ಏನು ಬರುತ್ತಾರೆ ಅವರನ್ನೂ ಕೂಡ ನಾವು state guest ಅಂತ ಹೇಳುತ್ತೇವಲ್ಲಾ, ಇವರುಗಳಿಗೆಲ್ಲಾ ಯಾವ facilities ಕೂಡ ಅಲ್ಲಿ ಇಲ್ಲ. ಇವೊತ್ತು ನಿಜವಾಗಿಯೂ ನನಗನ್ನಿಸಿದ ಮಟ್ಟಿಗೆ ಅವರು ಕೊನೆಗೆ ಅಂತಿಮವಾಗಿ ಈ ನಾಲ್ಕೈದು ಸಾವಿರ ಎಕರೆಗಳಲ್ಲಿ ಎಸ್ಟೇಟ್ ಏಜೆನ್ಸಿ ಮಾಡಿಕೊಂಡು ಅವರಿಗೆ 20 ಎಕರೆ, ಇವರಿಗೆ 30 ಎಕರೆ ಕೊಟ್ಟು ಕೋಟ್ಯಾಂತರ ರೂಪಾಯಿಗಳನ್ನು ಅದರಲ್ಲಿಯೇ ದುಡ್ಡು ಮಾಡಿಕೊಳ್ಳುವುದಕ್ಕೆ ಹೊರಟಂತೆ ಆಗಿದೆ. ನಮ್ಮ ಜಮೀನು, ನಮ್ಮ ದುಡ್ಡು, ನಮ್ಮ ಪ್ರಯತ್ನ ಎಲ್ಲಾ ಫೆಸಿಲಿಟೀಸ್ ಅವರಿಗೆ ಕೊಟ್ಟು ಇವೊತ್ತಿನ ದಿವಸ ಅವರಿಗೆ ಹಣ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಹೆಚ್ಚೂ ಕಡಿಮೆ ಇದು ಒಂದು ನೈಸ್ ಕಂಪನಿ ಇದ್ದಂತೆಯೇ. ಅದಕ್ಕಾಗಿ ನೀವು ಒಂದು ಕಮಿಟಿ ಕಾನ್ಸ್‌ಟಿಟ್ಯೂಟ್ ಮಾಡಿ. ಇಲ್ಲಿ ತಕ್ಷಣ ಚರ್ಚೆಗೆ ಅವಶ್ಯಕತೆ ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಮಾನ್ಯ ಅಧ್ಯಕ್ಷರೆ, ಇಲ್ಲಿಯೇ ಬೇಕಾದರೆ ಚರ್ಚೆ ಮಾಡಲು ಅವಕಾಶ ಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹೌಸ್ ಕಮಿಟಿ ಮುಂದೆಯೇ ಹೇಳಬೇಕಾದಂಥದ್ದನ್ನು ಹೇಳಬೇಕಾಗುತ್ತದೆ. ಇಲ್ಲಿ ಚರ್ಚೆ ಮಾಡಿ publicityಗಿಂತಲೂ if you are interested to solve this problem, tackle this problem, go and submit all your views before the committee and that will solve all our problems. ಅದನ್ನು ಬಿಟ್ಟು ಇಲ್ಲಿ ಕೇವಲ ಚರ್ಚೆ ಮಾಡಿ ಇಲ್ಲಿಗೇ ಬಿಟ್ಟರೆ ಹೇಗೆ. ಏಕೆಂದರೆ ಇದರಲ್ಲಿ five agencies are involve. ಸೀಮನ್ಸ್ ಇದೆ, ಝೂರಿಚ್ ಇದೆ, ಎಲ್ & ಟಿ ಇದೆ, Government of India ಇದೆ, Government of Karnataka ಇದೆ. ಇದರೊಳಗೆ 5 ಏಜೆನ್ಸಿಗಳಿವೆ. ಅಷ್ಟು ಸುಲಭವೂ ಅಲ್ಲ. ಅದಕ್ಕಾಗಿ ನಾವು study ಮಾಡುವುದಕ್ಕೂ ಕೂಡ ಅವಕಾಶವಾಗುತ್ತದೆ ಮತ್ತು ಎಲ್ಲರಿಂದಲೂ ಕೂಡ hearing ತೆಗೆದುಕೊಂಡಂತಾಗುತ್ತದೆ. ಇದಲ್ಲದೇ ಏರ್‌ಪೋರ್ಟ್‌ನಲ್ಲಿ ಏನು facilities ಇದೆಯೋ ಅದನ್ನೂ ನೋಡಿದಂತಾಗುತ್ತದೆ. ಇವೆಲ್ಲವೂ ಕೂಡ ಆಗುತ್ತದೆಯಾದ ಕಾರಣ ತಕ್ಷಣ ನೀವು ಇದಕ್ಕೊಂದು ಹೌಸ್ ಕಮಿಟಿ ಮಾಡಿ. ಏಕೆಂದರೆ ಇದರಿಂದ ಮುಂದಿನ ಕ್ರಮಕ್ಕೆ ಸುಲಭವಾಗುತ್ತದೆ. ತಕ್ಷಣ ಇದಕ್ಕೆ ಒಂದು House Committee

ಮಾಡಿ, ಮುಂದಿನ ಕ್ರಮಕ್ಕೆ ಸುಲಭವಾಗುತ್ತದೆ. ಕೇವಲ discussion ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಆದುದರಿಂದ ದಯವಿಟ್ಟು ತಾವು ಇದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು:- ಸರ್ಕಾರದಿಂದ ಏನು ಉತ್ತರ ಹೇಳುತ್ತಾರೆ ಹೇಳಲಿ. ಅವರು ಉತ್ತರ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೇ, ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ಈಗಾಗಲೇ ಮಾನ್ಯ ಶಿವಕುಮಾರ್ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಕೆಲವು ವಿಚಾರಗಳನ್ನು ಬಹಳ ಸ್ಪಷ್ಟವಾಗಿ ಇವತ್ತು ಅದು ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಆಗಿಲ್ಲವೆನ್ನುವುದನ್ನು ಹೇಳಿದ್ದಾರೆ. ಬಹಳ ದಿನಗಳಿಂದ ಬೆಂಗಳೂರು ನಗರದಲ್ಲಿ ಒಂದು ಅಂತರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಬೇಕು ಎಂದು ಹೇಳಿ, ಬಹಳ ಹಣದ ಸಹಾಯ, ಜಮೀನು, ತೆರಿಗೆ ವಿನಾಯಿತಿ ಈ ರೀತಿ ಎಲ್ಲಾ ಸವಲತ್ತುಗಳನ್ನು ಕೊಟ್ಟಿದ್ದಾರೆ. ದೇವನಹಳ್ಳಿಯ ಹತ್ತಿರ ಜಮೀನಿನ ಬೆಲೆ 2-3 ಕೋಟಿ ರೂಪಾಯಿ ಆಗಿದೆ. ಈಗ 5 ಕೋಟಿ ರೂಪಾಯಿ ಇರಬೇಕು. ಈಗ ಅದರ ಬೆಲೆ ಮೂರರಿಂದ ಐದು ಕೋಟಿ ರೂಪಾಯಿ. ನಾವು 4,000 ಎಕರೆಗಿಂತ ಜಾಸ್ತಿ ಕೊಟ್ಟಿದ್ದೇವೆ. 350 ಕೋಟಿ ರೂಪಾಯಿಗಳನ್ನು 20 ವರ್ಷಗಳ ಕಾಲ ಬಡ್ಡಿ ಇಲ್ಲದೆ ಕಂತುಗಳ ರೂಪದಲ್ಲಿ ಅವರಿಗೆ ಸಾಲ ಕೊಟ್ಟಿದೆ. 84 ಕೋಟಿ ರೂಪಾಯಿ equity ಬೇರೆ ಕೊಟ್ಟಿದೆ. ಎಲ್ಲವನ್ನೂ ರಾಜ್ಯ ಸರ್ಕಾರ ಕೊಟ್ಟು ಅದರ ಜೊತೆಗೆ ತೆರಿಗೆ ವಿನಾಯಿತಿಯನ್ನೂ ಕೊಟ್ಟಿದೆ. ಅವರು ಕೊಂಡುಕೊಳ್ಳತಕ್ಕಂಥ ಪದಾರ್ಥಗಳೇನಿವೆ ಅವೆಲ್ಲವುಗಳ ಮೇಲೆ salex tax ವಿನಾಯಿತಿ ಕೊಟ್ಟಿದೆ. ಅವರು ತೆರಿಗೆಯನ್ನೇ ಕೊಡುವ ಹಾಗಿಲ್ಲ. ಇಷ್ಟು ಸವಲತ್ತುಗಳನ್ನು ಅವರಿಗೆ ಕೊಟ್ಟಿದ್ದೇವೆ. ನಾನು ಒಂದೇ ಒಂದು ಸಾರಿ ಮೊನ್ನೆ ಆ airportಗೆ ಹೋಗಿರುವುದು. ಅದು ನಮ್ಮ HAL Airportನಷ್ಟು ಚೆನ್ನಾಗಿಲ್ಲ. ನಾವು ಅಲ್ಲಿ ಹೋದರೆ loungeನಲ್ಲಾದರೂ ಕರೆದುಕೊಂಡು ಹೋಗಿ ಕೂರಿಸುತ್ತಾರೆ. ನಾವು ಈ airportಗೆ ಹೋದರೆ ಕ್ಯಾರೆ ಎನ್ನುವವರೂ ಇಲ್ಲ. ಅಲ್ಲಿ Urinals ಇಲ್ಲ. ನಮ್ಮ ಕಾರ್‌ನ್ನು ಅವನ್ಯಾರೋ ಅಡ್ಡ ತಡೆದುಬಿಟ್ಟ. ನಾನು Ex-Minister ಕಣಪ್ಪಾ, ಈಗ Sitting MLA ಎಂದು ಹೇಳಿದರೂ ಬಿಡದೇ, ಇಲ್ಲ ಸರ್, ಆ ಕಡೆ ಹೋಗಬೇಕೆಂದು ಹೇಳಿದ. ಟ್ಯಾಕ್ಸಿಗಳನ್ನೆಲ್ಲ ಒಳಗಡೆ ಬಿಡುತ್ತಿದ್ದಾನೆ. ನಮ್ಮನ್ನು ಈ ಕಡೆ ಕಳುಹಿಸಿದ. ಟ್ಯಾಕ್ಸಿಗಳನ್ನು ಆ ಕಡೆ ಬಿಡುತ್ತಾರೆ, ನಮ್ಮ ಕಾರ್ ಈ ಕಡೆ ಕಳುಹಿಸುತ್ತಾರೆ, ಇದು ಯಾವ ರೀತಿ ಎಂದು ನನಗೆ ಗೊತ್ತಾಗಲಿಲ್ಲ. ಆದರೆ ಏನು ಮಾಡುವುದು? ಅಲ್ಲಿ security ಯಾರ್ಯಾರನ್ನೋ ಹಾಕಿಕೊಂಡಿದ್ದಾರೆ. ಯಾರ ಜೊತೆ ಗಲಾಟೆ ಮಾಡುವುದು. ಅಲ್ಲಿ ಏನೇನೂ facilities ಇಲ್ಲ. ಮಾನ್ಯ ಶಿವಕುಮಾರ್‌ರವರು ಹೇಳಿದರಲ್ಲ, ನಮ್ಮ HAL Airport

ನಲ್ಲಿ seating arrangements ಎಷ್ಟಿದ್ದವು. ಅದು Domestic Airport. ನಾನು ಮಲೇಷಿಯಾದ airport ನೋಡಿದ್ದೇನೆ. ನಾನು ಮಲೇಷಿಯಾಗೆ ಹೋಗಿದ್ದಾಗ ಅದು ಆಗತಾನೇ ಹೊಸದಾಗಿ ಕಟ್ಟಿದ್ದರು. ನಾನು ಮಲೇಷಿಯಾ airport ನೋಡಿದೆ. ಆ ಮಲೇಷಿಯಾದ airportಗೂ ಈ airportಗೂ compare ಮಾಡಿದರೆ, ಇದೊಂದು ನಮ್ಮ bus standಗಿಂತ ಕಡಿಮೆ ಇದೆ. 1300 ಕೋಟಿ ರೂಪಾಯಿಗಳ project ಎಂದು ಹೇಳಿಕೊಂಡು, ಅವರು ಬ್ಯಾಂಕ್‌ನಲ್ಲಿ ಎಲ್ಲ ಸಾಲ ತೆಗೆದುಕೊಳ್ಳುವುದಕ್ಕೆ... ನಮ್ಮ ದೊಡ್ಡ ಬಸ್ ಸ್ಟಾಂಡ್‌ಗಳಿವೆಯಲ್ಲ, ಆ ರೀತಿ ಇದೆ. ನಾನು ಮೊನ್ನೆ ಮಾಲ್ಡೀವ್ಸ್‌ಗೆ ಹೋಗಿದ್ದೆ. ಆ ಮಾಲ್ಡೀವ್ಸ್‌ನಲ್ಲಿ ಒಂದು ಸಣ್ಣ airport ಇದೆ. ಅದೂ ಕೂಡ International Airport. ಆದರೆ ಈ International Airport ಮಾಲ್ಡೀವ್ಸ್ airport ಅಲ್ಲ ಅಥವಾ Mauritius airport ಅಲ್ಲ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿರತಕ್ಕಂಥ ಯಾವುದೇ airport ಗಿಂತ ಕಡಿಮೆ ಇರಬಾರದು ಎಂಬುದು ಉದ್ದೇಶವಾಗಿತ್ತು. ಆ ರೀತಿ ಏನೇನೂ ಇಲ್ಲ. ಅದು ಹೋಗಲಿ, ನಾನು ಹೈದರಾಬಾದ್ ನೋಡಿಲ್ಲ. ನಾನು ಹೈದರಾಬಾದ್‌ಗೆ ಹೋಗಿಲ್ಲ. ಅಲ್ಲಿಗೆ ಹೋದ ಬಹಳ ಜನ ಚೆನ್ನಾಗಿದೆ ಎಂದು ಹೇಳುತ್ತಿದ್ದರು. ನನ್ನನ್ನು ಯಾರೋ ಒಬ್ಬರು ಈ airport ಹೇಗಿದೆ ಎಂದು ಕೇಳಿದರು. HAL Airport ಇದಕ್ಕಿಂತ ಚೆನ್ನಾಗಿದೆ ಎಂದು ನಾನು ಹೇಳಿದೆ. ಇಲ್ಲಿ ಏನು ಇಷ್ಟೊಂದು ಕೆಟ್ಟದಾಗಿದೆ. ಇಲ್ಲಿ ಯಾವ facilities ಇಲ್ಲ. Agreement ಏನು? What are the terms and conditions of the agreement?. ಆ agreementನ terms and conditions ಅವರು fulfill ಮಾಡಿದ್ದಾರ? ಮಾಡದೇ ಇದ್ದ ಮೇಲೆ it is a violation of the terms and conditions of the agreement entered into between Government of Karnataka, Government of India and the agencies. ಈ ಯಾರು ಮೂರು ಜನ ಏಜೆನ್ಸಿಯವರು ಸೇರಿಕೊಂಡಿದ್ದಾರಲ್ಲಾ, ಝುರಿಚ್‌ನವರು, ಸೀಮನ್ಸ್‌ನವರು, ಎಲ್ & ಟಿ ಯವರು ಇವರೆಲ್ಲ ಎಷ್ಟು ಲಾಭ ಹೊಡೆಯಬೇಕೋ ಅಷ್ಟು ಲಾಭ ಹೊಡೆಯುವುದಕ್ಕೆ ಸೇರಿಕೊಂಡ ಹಾಗೆ ಕಾಣಿಸುತ್ತದೆ. ನಾವು ಅವರಿಗೆ ಕೊಟ್ಟುಬಿಟ್ಟು ಏನು ಮಾಡ್ತಿಬಿಟ್ಟಿದ್ದೇವೆ ಎಂದರೆ Boot enter ಆಗಿಬಿಟ್ಟಿದ್ದೇವೆ. ಅವರೇ build ಮಾಡುವುದು, operate ಮಾಡುವುದು, manage ಮಾಡುವುದನ್ನು 30 ವರ್ಷದ ವರೆಗೆ ಅವರಿಗೆ ಕೊಟ್ಟುಬಿಟ್ಟು ಅನಂತರ 30 ವರ್ಷ, 30 ವರ್ಷ+30 ವರ್ಷ, 60 ವರ್ಷಗಳು, ಆ ರೀತಿ ಮಾಡಿಬಿಟ್ಟರೆ...

ಶ್ರೀ ಎಂ.ಶ್ರೀನಿವಾಸ್ ಪ್ರಸಾದ್:- ಇದನ್ನು ಐದು ಏಜೆನ್ಸೀಸ್ ಸೇರಿಕೊಂಡು ಚರ್ಚೆ ಮಾಡಿ ಮಾಡಿದ್ದಾರಲ್ಲ ಅದರ main plan and design, are you going to change it? ಈಗ ನೀವು ಮೂಲಭೂತ ಸೌಲಭ್ಯಗಳನ್ನು ಮಾತ್ರ ಕೊಡಲು ಸಾಧ್ಯ.

ಶ್ರೀ ಸಿದ್ಧರಾಮಯ್ಯ:- ಮಾಡಬಹುದು. ಈಗ set right ಮಾಡುತ್ತಾರಲ್ಲಾ.

ಶ್ರೀ ಎಂ.ಶ್ರೀನಿವಾಸ್ ಪ್ರಸಾದ್:- ನೀವು main plan and design ಇಟ್ಟುಕೊಂಡು ಏನು ಮಾಡುತ್ತಿದ್ದೀರಿ? ಈ ಐದು ಏಜೆನ್ಸಿಗಳೂ ವರ್ಷಗಟ್ಟಲೆ ಚರ್ಚೆ ಮಾಡಿ, ಅದಕ್ಕೆಲ್ಲ finance ಮಾಡಿ, ಇದೆಲ್ಲಾ ಆದಮೇಲೆ ಇವತ್ತು ಮಾತನಾಡುತ್ತಿದ್ದೀರಲ್ಲ ಯಾವರೀತಿ ಈಗ ನೀವು ಮಾಡುವುದಕ್ಕೆ ಸಾಧ್ಯ? ನೀವು ಹೇಳಿದ್ದು ಸರಿ. VIP lounge ಕೊಡಬಹುದು, toilets ಕೊಡಬಹುದು, ಮತ್ತೊಂದು ಕೊಡಬಹುದು. ಮಾಡಬಹುದೇ ನೀವು ಅದನ್ನು ಸದನ ಸಮಿತಿಗೆ ಕೊಡಬಹುದು ಎಂಬು ಹೇಳುವುದನ್ನು ಹೊರತು ಮುಖ್ಯವಾಗಿ plan ಏನು change ಮಾಡುತ್ತೀರಿ?

ಶ್ರೀ ಡಿ.ಕೆ.ಶಿವಕುಮಾರ್:- ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ airport ಬಗ್ಗೆ ಕ್ಯಾಬಿನೆಟ್‌ನಲ್ಲಿ ತಂದಂಥ ಸಂದರ್ಭದಲ್ಲಿ, ಇದು ಗುಪ್ತವಾದ ವಿಷಯ, ಇದನ್ನು ಬಹಿರಂಗ ಮಾಡದೇ ವಿಧಿ ಇಲ್ಲ. ಕ್ಯಾಬಿನೆಟ್‌ಗೆ ತಂದಂತಹ ಸಂದರ್ಭದಲ್ಲಿ...

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಡಿ.ಕೆ.ಶಿವಕುಮಾರ್‌ರವರು ತಮ್ಮ ಮನವಿಯನ್ನು ಹೇಳಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಹೇಳಿದ್ದಾರೆ ಮತ್ತು ಬಹಳಷ್ಟು ಜನ ಹೇಳಿದ್ದಾರೆ. ಸರ್ಕಾರವೂ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಿದ್ಧವಿದೆ ಎಂದು ನಾನು ಈಗಾಗಲೇ ಹೇಳಿದ್ದೇವೆ. ತಾವು ಅದನ್ನು ಯಾವ ನಿಯಮದಡಿ ಚರ್ಚೆಗೆ ಅವಕಾಶಕೊಡುತ್ತೀರೋ ನೀವು ಮಾಡಿಕೊಳ್ಳಿ. ಮಾನ್ಯ ಡಿ.ಕೆ.ಶಿವಕುಮಾರ್‌ರವರು ಹೇಳಿದ್ದಾರೆ, ಅದರಲ್ಲಿ ಭೂತ್‌ಗಳಿವೆ, ಅದು ಇದೆ, ಇದು ಇದೆ, ಕೊನೆಗೆ ಯಾವುದೇ ಸರ್ಕಾರ ಇದ್ದರೂ ನಾವು ಸರಿ ಎಂದು ಸವಾಲ್ ಹಾಕಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್:- ಸವಾಲ್ ಅಲ್ಲ.

ಶ್ರೀ ಆರ್.ಅಶೋಕ್:- ಇನ್ನೂ ಅವರ ಹತ್ತಿರ ಏನೇನು ದಾಖಲೆಗಳು agreementಗಳು ಏನೇನು ಇವೆ ಎಂದು ಹೇಳುತ್ತಾರೆ. ಅದರ ವಿವರ ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ನಾನು ಇನ್ನೂ ಪೂರ್ತಿ presentation ಮಾಡಿಲ್ಲ, ನನ್ನ ಹತ್ತಿರ ವಿವರ ಇದೆ ಎಂದು ಹೇಳುತ್ತಾರೆ. ಆ ವಿವರ ಏನೇನಿದೆ ಅವನ್ನು ಸದನದ ಮುಂದೆ ಇಡಲಿ. ಈ ವಿಚಾರದ ಬಗ್ಗೆ ಬೇರೆ ಬೇರೆಯವರೆಲ್ಲ ಮಾತನಾಡುವವರಿದ್ದಾರೆ: ಜನತಾದಳದವರಿದ್ದಾರೆ, ಬಿಜೆಪಿಯವರಿದ್ದಾರೆ. ಕಾಂಗ್ರೆಸ್‌ನವರಿದ್ದಾರೆ. ಅವರೆಲ್ಲ ಮಾತನಾಡಲಿ.

ಅಧ್ಯಕ್ಷರು:- ತಾವೇನು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೀರಿ...

(ಗೊಂದಲ)

ಶ್ರೀ ಆರ್.ಅಶೋಕ್:- ಅವರಿನ್ನೂ presentationನ್ನೇ ಮಾಡಲಿಲ್ಲ. ಆಗಲೇ ಸದನ ಸಮಿತಿಯನ್ನು ಮಾಡಿ ಎಂದು ಹೇಳಿದರೆ ಏನು ಅರ್ಥ?

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಈ planನ್ನು ನಮ್ಮ cabinet meetingನಲ್ಲಿ ತೋರಿಸಿದರು.

ಶ್ರೀ ಆರ್.ಅಶೋಕ್:- ಈಗಾಗಲೇ ಒಂದು ಬಾರಿ ಅವರು ಮಾತನಾಡಿದ್ದಾರೆ. ಸರ್ಕಾರ ಸಿದ್ಧವಿದ್ದೇವೆ ಎಂದು ಹೇಳಿದರೂ ಅವರು ಚರ್ಚೆಗೆ ಸಿದ್ಧರಿಲ್ಲ.

ಅಧ್ಯಕ್ಷರು:- ಇದನ್ನು ಚರ್ಚೆ ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ ಎಂದು ಸರ್ಕಾರದವರು ಹೇಳಿದ್ದಾರೆ. ಚರ್ಚೆ ಮಾಡುವುದಕ್ಕೆ ಅವರೂ ಒಪ್ಪಿಕೊಂಡಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಅವರು cabinetನಲ್ಲಿ ಏನಾಯಿತು ಎಂದು ಹೇಳಿದ್ದಾರೆ. ನೀವು ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವು cabinetನಲ್ಲಿ ಆಗಿದ್ದನ್ನೆಲ್ಲಾ ಇಲ್ಲಿ ಹೇಳುತ್ತೀರಾ?

ಶ್ರೀ ಬಸವರಾಜ ಬೊಮ್ಮಾಯಿ:- ಅವರೇ ಅದನ್ನು ಒಪ್ಪಿಕೊಂಡಿದ್ದಾರೆ. ನಾನು ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರೇ ಹೇಳುತ್ತೇನೆಂದು ಹೇಳಿದರೂ ನೀವು ಹೇಳಿಕೊಡಬಾರದು. ನಾಳೆ ನಿಮ್ಮ Cabinet ನಲ್ಲಿ ಆಗಿದ್ದನ್ನು ಇಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಬಸವರಾಜ ಬೊಮ್ಮಾಯಿ: ಅವರಿಗಾಗಿಯೇ ಹೇಳಿದರು. ನಾವೇನು ಕೇಳಿದೆವಾ? ಅವರೇ ನಾನು ಹೇಳುತ್ತೇನೆಂದು ಹೇಳಿದರೆ ನೀವು ಏಕೆ ನಿರ್ಬಂಧ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರು ಹೇಳುತ್ತೇನೆಂದು ಹೇಳಿದರೂ, ನೀವು ಅವರಿಗಿಂತ ಬುದ್ಧಿವಂತರಿದ್ದೀರ ಎಂದು ಹೇಳುತ್ತಿದ್ದೇವೆ, ಅದಕ್ಕೆ ನೀವು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ:- ಅವರಿಗಿಂತ ಬುದ್ಧಿವಂತರು ಎಂದು ಅಲ್ಲ, ಸತ್ಯ ಬರುವ ಹಾಗೆ ಏನಾದರೂ ಹೇಳುವುದಕ್ಕೆ ಸಾಧ್ಯವಿದ್ದರೆ ಹೇಳಲಿ ನೋಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಕಮಿಟಿಯೇ ಆದ ಮೇಲೆ ಎಲ್ಲವೂ ಹೊರಗೆ ಬರುತ್ತದೆ. ಅದಕ್ಕೆ ಅವರೇ ಅಧ್ಯಕ್ಷರಾಗಲಿ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ ನಿಮ್ಮ ಅಧ್ಯಕ್ಷತೆಯಲ್ಲೇ ಒಂದು ಕಮಿಟಿ ಮಾಡಿ. ಚರ್ಚೆ ಬೇಡವೇ ಬೇಡ.

ಶ್ರೀ ಬಸವರಾಜ ಬೊಮ್ಮಾಯಿ: ನಮ್ಮ ಕಡೆಯವರೆಲ್ಲರೂ ಮಾತನಾಡಬೇಕಲ್ಲ. ಅವರ ಹತ್ತಿರ ಕೂಡ ಅದರ ಬಗ್ಗೆ ಮಾಹಿತಿ ಇದೆ. ಕೇವಲ ನೀವಷ್ಟೇ ಮಾತನಾಡಿದರೆ ಹೇಗೆ? ನಮ್ಮ ಸದಸ್ಯರು ಮಾತನಾಡಬೇಕೆಂದಿದ್ದಾರೆ, ಜೆಡಿಎಸ್‌ನವರು ಮಾತನಾಡಬೇಕೆಂದಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಆಯಿತು ನೀವು ಮಾತನಾಡಿ. ನಮ್ಮ submission ಇದು. It is our submission. ನಾವು detailಗೆ ಹೋಗುವುದಕ್ಕೆ ಹೋಗುವುದಿಲ್ಲ. Detail ಆಗಿ ಚರ್ಚೆ ಮಾಡಬೇಕೆಂದರೆ ನಾವೆಲ್ಲ ಕುಳಿತುಕೊಂಡು ಚರ್ಚೆ ಮಾಡೋಣ. Before that ಇದನ್ನು House Committee ಗೆ refer ಮಾಡುವುದಕ್ಕೆ ಯೋಗ್ಯವಾದಂತಹ ಕೇಸ್ ಇದೆ. ಆದ್ದರಿಂದ ನಾವು ಎಲ್ಲವನ್ನೂ ಎಳೆ ಎಳೆಯಾಗಿ ಹೇಳಿಕೊಂಡು ಕುಳಿತು ಮಾಡುವುದಕ್ಕಿಂತ ಸರ್ಕಾರ ಒಪ್ಪಿಕೊಂಡರೆ ನಿಮ್ಮ ಅಧ್ಯಕ್ಷತೆಯಲ್ಲೇ ಒಂದು ಕಮಿಟಿಯಾಗಲಿ, ಕಮಿಟಿ ಅದನ್ನೆಲ್ಲ ನೋಡಿಕೊಂಡು ಬರಲಿ. Agreement terms and conditions violation ಆಗಿದೆಯೇ ಇಲ್ಲವೇ? plan approve ಆಗಿದೆಯೋ ಇಲ್ಲವೋ, design ಎಲ್ಲಾ ಆಗಿದೆಯೋ ಇಲ್ಲವೋ? ಇವೆಲ್ಲವೂ ಕೂಡ ಸಂಪೂರ್ಣವಾಗಿ ಕೂಲಂಕುಷವಾಗಿ ಚರ್ಚೆ ಮಾಡಿ upgrade ಮಾಡಬಹುದು. ಈಗ ಯಾವ ರೀತಿಯಾಗಿ upgrade ಮಾಡುವುದಕ್ಕೆ ಸಾಧ್ಯವಾಗುತ್ತದೆ? International Standard ಮಟ್ಟಕ್ಕೆ ತರಲು ಹೇಗೆ ಮಾಡಬೇಕಾಗುತ್ತದೆ? ಇವೆಲ್ಲವನ್ನು ಮಾಡಲು ಸಾಧ್ಯವಾಗುತ್ತದೆ. ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟರೆ ಸರ್ಕಾರಕ್ಕೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ವರದಿ ನೀಡಲು ಒಂದು ಸಮಿತಿಯನ್ನು ಮಾಡಲು ಒಪ್ಪಿಕೊಳ್ಳಿ. ಇದು ಮಾಡಿದರೆ ಬಹಳ ಒಳ್ಳೆಯದು ಎಂದು ಅನ್ನಿಸುತ್ತದೆ.

ಅಧ್ಯಕ್ಷರು:- ಇವತ್ತು ಮಾನ್ಯ ಡಿ.ಕೆ.ಶಿವಕುಮಾರ್‌ರವರು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರುಗಳು ಏನು ನಿಲುವಳಿ ಸೂಚನೆಯ ರೂಪದಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದರು ಅದರ ಬಗ್ಗೆ ಆಡಳಿತ ಪಕ್ಷದ ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಆಸಕ್ತಿಯನ್ನು ಹೊಂದಿದ್ದಾರೆ. ಆದ್ದರಿಂದ ಇದರ ಬಗ್ಗೆ ತಾವೇನು ಪ್ರಾಥಮಿಕ ಹಂತದಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ಇನ್ನು ಹೆಚ್ಚಿನ ರೀತಿಯಲ್ಲಿ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಎಲ್ಲಾ ಗೌರವಾನ್ವಿತ ಸದಸ್ಯರು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ನಿಲುವಳಿ ಸೂಚನೆಯನ್ನು ಆ ರೂಪದಲ್ಲಿ ತಿರಸ್ಕರಿಸಿ ಇದನ್ನು ನಿಯಮ 69ಕ್ಕೆ convert ಮಾಡಿ ಚರ್ಚೆಗೆ ಅನುಮತಿ ಕೊಡುತ್ತಿದ್ದೇನೆ. ಇನ್ನೂ ಎರಡು ಮೂರು ವಿಷಯ ಇಂದು ನಿಯಮ 69ರ ಅಡಿಯಲ್ಲಿ ಇದೆ. ಈಗ ನಾವು ಅಜೆಂಡಾ ಪ್ರಕಾರ ಬಂದುಬಿಡೋಣ.

ಡಾ:ಶರಣಪ್ರಕಾಶ ಪಾಟೀಲ್:- ನನ್ನದೂ ಇದರಲ್ಲಿ ಇದೆ. ನನ್ನದು 5 ದಿವಸಗಳಿಂದ ಇದರಲ್ಲಿ ಬರುತ್ತಿದೆ.

ಅಧ್ಯಕ್ಷರು:- ನಿಮ್ಮದೂ ಇದರಲ್ಲಿ ಇದೆ. ಎಲ್ಲವನ್ನೂ ತೆಗೆದುಕೊಳ್ಳುತ್ತೇನೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ. ಸಂಜೆಯವರೆಗೆ ಕಲಾಪ ಮಾಡೋಣ. ನಾನು ರಾತ್ರಿ 9 ಗಂಟೆಯವರೆಗೆ ಕೂರಲು ತಯಾರಿದ್ದೇನೆ. ತಾಳ್ಮೆ ತೆಗೆದುಕೊಳ್ಳಿ, ನಾನು ಹಿಯರಿಂಗ್ ಮಾಡಲು ತಯಾರಿದ್ದೇನೆ.

ಡಾ:ಶರಣಪ್ರಕಾಶ ಪಾಟೀಲ್:- ನನ್ನದು 5 ದಿವಸಗಳಿಂದ ಇದೆ. ಸೀನಿಯಾರಿಟಿ ಇದೆ.

ಅಧ್ಯಕ್ಷರು:- ನಿಮ್ಮದೂ ಇಂದು ಇದೆ. ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಜನಾರ್ಧನ ರೆಡ್ಡಿಯವರೇ, ಯಾವುದರ ಬಗ್ಗೆ ಹೇಳುತ್ತೀರಿ Air port ಬಗ್ಗೆ...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದು ಏನೆಂದರೆ hit and run, ಅವರಿಗೆ ಬೇಕಾಗಿರುವುದನ್ನು ಹೇಳುವುದು, ಬೇಕಾಗಿಲ್ಲದೆ ಇರುವುದನ್ನು ಬಿಡುವುದು.

ಅಧ್ಯಕ್ಷರು:- ನನ್ನ ಪ್ರಕಾರ ಈ subject close ಆಗಿದೆ. ಮುಂದಿನ proceedings ಮಾಡುವುದಕ್ಕೆ ಸಹಕಾರ ಕೊಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ಈ ರೀತಿ ಮಾಡಿದ್ದರೆ ಏನು ಮಾಡಬೇಕು? ಸದನ orderನಲ್ಲಿ ಇಲ್ಲವೆಂದರೆ ಏನು ಮಾಡಬೇಕು? ಈ ರೀತಿ ನಿಂತುಬಿಟ್ಟು House orderನಲ್ಲಿ ಇಲ್ಲವೆಂದು ನೀವೇ ಹೇಳಿಬಿಟ್ಟರೆ ಏನು ಮಾಡುವುದು?

ಶ್ರೀ ಜನಾರ್ಧನ ರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು Bangalore International Airport ಬಗ್ಗೆ ಗಂಭೀರವಾದಂತಹ ವಿಷಯ ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಅವರು ಸದನ ಸಮಿತಿಯನ್ನು ಏನು ಮಾಡಬೇಕೆಂದು ಹೇಳಿದ್ದಾರೆ, ಸದನ ಸಮಿತಿಯನ್ನು ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಈಗಾಗಲೇ ಅನುಮತಿಯನ್ನು ಕೊಟ್ಟಿದ್ದಾರೆ. ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ನಾವು ಒಪ್ಪಿಕೊಂಡು ಅನುಮತಿಯನ್ನು ಕೊಡುತ್ತೇವೆ.

ಅಧ್ಯಕ್ಷರು: ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದರು, ಅದಕ್ಕೆ ಸರ್ಕಾರದ ಪರವಾಗಿ ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದನ್ನು ನಾವು constitute ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು: ನೋಡಿ, ನಾನು ಮತ್ತೊಮ್ಮೆ request ಮಾಡುತ್ತೇನೆ, ತಾವು ತಮ್ಮ ಸ್ಥಾನಕ್ಕೆ ಹೋಗಿ. ಅವರಿಗೆ ನಾನೇನು ಒತ್ತಾಯ ಮಾಡಿಲ್ಲ. ಅವರೇ ಮಾಡಿದ್ದಾರೆ. ಅವರನ್ನು convince ಮಾಡಿ, ಇದು ಸರ್ಕಾರಕ್ಕೆ ಬಿಟ್ಟಿದ್ದು, ಸರ್ಕಾರದವರು, oppositionನವರು ಇದ್ದೀರಿ, ನಾನು decision ತೆಗೆದುಕೊಳ್ಳುವುದಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- House is not in order, How can you debate...

ಅಧ್ಯಕ್ಷರು: ಈ ವಿಷಯವನ್ನು ಈಗ close ಮಾಡಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಇನ್ನು proceedings ಬಹಳ ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- No, this is...

ಅಧ್ಯಕ್ಷರು:- Calling attention ಸಲುವಾಗಿ ಎಲ್ಲಾ ಶಾಸಕರು wait ಮಾಡುತ್ತಿದ್ದಾರೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ನಿಮ್ಮದು ಸಹ ಸಾಕಷ್ಟು calling attentions ಇವೆ, ದಯವಿಟ್ಟು proceedings ನಡೆಸುವುದಕ್ಕೆ ಅವಕಾಶ ಕೊಡಿ. ಕೊನೆಯದಾಗಿ ನಾನು request ಮಾಡುತ್ತಿದ್ದೇನೆ, ನಿಮ್ಮ ಸ್ಥಾನಕ್ಕೆ ಹೋಗಿ. ಈಗ ಸದನವನ್ನು 10 ನಿಮಿಷದವರೆಗೆ ಮುಂದಕ್ಕೆ ಹಾಕಿದ್ದೇನೆ.

(ಸದನದ ಕಲಾಪವು 6 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 10 ನಿಮಿಷದ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

8.ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಮನಗರ ಜಿಲ್ಲೆಗೆ ಮಂಜೂರಾಗಿದ್ದ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಬೇರೆಡೆಗೆ ಸ್ಥಳಾಂತರಿಸಲು ಹಾಗೂ ಕ್ಯಾಂಪಸ್ ಮತ್ತು ಹಣಕಾಸು ವಿಷಯದಲ್ಲಿ ಹಗರಣ ನಡೆದಿದೆ ಎಂದು ಮುಖ್ಯಮಂತ್ರಿಯವರು ನೀಡಿರುವ ಹೇಳಿಕೆಗಳಿಂದ ಉಂಟಾಗಿರುವ ಗೊಂದಲದ ಬಗ್ಗೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ವಿಚಾರದಲ್ಲಿ ನಾನು ಮತ್ತು ನಮ್ಮ ಸಹೋದ್ಯೋಗಿಗಳು ಏನು ನಿಲುವಳಿ ಸೂಚನೆಯನ್ನು ತಂದಿದ್ದೆವು ಆ ಸಂದರ್ಭದಲ್ಲಿ ತಾವು ಈ ದಿವಸ ಈ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿ ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ಮೊದಲನೆಯದಾಗಿ ತಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಬಗ್ಗೆ 1996ನೇ ಇಸವಿಯಲ್ಲಿ

ಪ್ರಾರಂಭ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಪ್ರಾರಂಭವಾಗಿ ಇದುವರೆಗೆ ಈ ವಿಶ್ವವಿದ್ಯಾಲಯ ಯಶಸ್ವಿಯಾಗಿ ಕೆಲಸ ನಿರ್ವಹಿಸುವುದಕ್ಕೆ ಹಲವಾರು ರೀತಿ ತೊಂದರೆಗಳು ಏನು ಬಂದಿದೆ, ಈ ವಿಶ್ವವಿದ್ಯಾನಿಲಯವನ್ನು 1996ನೇ ಇಸವಿಯಲ್ಲಿ ಪ್ರಾರಂಭ ಮಾಡಬೇಕೆಂದು ಅಂದು ನಿರ್ಧಾರ ಮಾಡಿದಾಗ ಮೊದಲು ಮೈಸೂರಿನಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿ ಅಲ್ಲೂ ಸಾಧ್ಯವಾಗದೇ ಬೆಂಗಳೂರು ನಗರದಲ್ಲಿ ಮಾಡಬೇಕೆಂದು ನಿರ್ಣಯವನ್ನು ಏನು ಮಾಡಿದರು, ಬೆಂಗಳೂರು ನಗರದಲ್ಲಿ ಈ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳನ್ನು ಪ್ರಾರಂಭ ಮಾಡತಕ್ಕ ಹಂತದಲ್ಲಿ ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಏನು ರಾಮನಗರದಲ್ಲಿ ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಪುನಃ ನಿರ್ಧಾರ ಮಾಡತಕ್ಕ ಒಂದು ತೀರ್ಮಾನವನ್ನು ಈ ಹೌಸ್‌ನಲ್ಲಿ ಮಾಡಿದ್ದೇವೆ, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನಲ್ಲೂ ಏನು ತೀರ್ಮಾನ ಮಾಡಿದರು, ಅದಕ್ಕೆ ಮೂಲ ಕಾರಣ ಏನು ಈ ಮಹಾವಿದ್ಯಾನಿಲಯ ಬೆಂಗಳೂರಿನ ಜಯನಗರದ ಎರಡು ಎಕರೆ ಜಮೀನಿನಲ್ಲಿ ಕಾರ್ಯಚಟುವಟಿಕೆ ಆಗುತ್ತಿತ್ತು. ಇದನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಸರ್ಕಾರ, ಸಮ್ಮಿಶ್ರ ಸರ್ಕಾರವನ್ನು ನಡೆಸತಕ್ಕ ಸಂದರ್ಭದಲ್ಲಿ ಮಾಗಡಿ ರಸ್ತೆಯಲ್ಲಿರತಕ್ಕ ಬೆಗ್ಗರ್ಸ್ ಕಾಲೋನಿಯಲ್ಲಿರತಕ್ಕ ಜಾಗವನ್ನು ಕೇಳಿ ವಿಶ್ವವಿದ್ಯಾನಿಲಯದಿಂದ ಏನು ಮನವಿಯನ್ನು ಸಲ್ಲಿಸಿದರು, ಇವೆಲ್ಲಾ ಒಂದು ಇತಿಹಾಸ. ಇದರ ಆಧಾರದ ಮೇಲೆ ರಾಮನಗರದಲ್ಲಿ, ಬೆಂಗಳೂರಿನ ಒತ್ತಡದ ಸಂದರ್ಭದಲ್ಲಿ ರಾಮನಗರ ಜಿಲ್ಲೆಯಾಗಿ ಏನು ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಹೊಸದಾಗಿ ಜಿಲ್ಲೆಯಾಗಿ ತಾವೇ ಕಂದಾಯ ಸಚಿವರಾಗಿ ಮಾಡತಕ್ಕ ನಿರ್ಧಾರ ಮಾಡಿದಂಥ ಸನ್ನಿವೇಶದಲ್ಲಿ ರಾಮನಗರದಲ್ಲಿ ಹಲವಾರು ಜಿಲ್ಲಾ ಆಡಳಿತವನ್ನು ನಡೆಸತಕ್ಕದಕ್ಕೆ ಕಛೇರಿಗೆ ಶಂಕುಸ್ಥಾಪನೆ ನಿರ್ವಹಿಸತಕ್ಕ ಸಂದರ್ಭದಲ್ಲಿ ಈ ಒಂದು ವಿಶ್ವವಿದ್ಯಾನಿಲಯವನ್ನು ಅಲ್ಲಿ ಪ್ರಾರಂಭ ಮಾಡತಕ್ಕದ್ದು ಅದರ ಜೊತೆಗೆ ಹೈಟೆಕ್ ಆಸ್ಪತ್ರೆ ಮತ್ತು ನರ್ಸಿಂಗ್ ಕಾಲೇಜುಗಳು ಇರಬಹುದು, ಹೀಗೆ ನಾವು ಏನು ಒಂದು ತೀರ್ಮಾನಕ್ಕೆ ಬಂದಿದ್ದೆವು, ಕಳೆದ ಬಜೆಟ್‌ನಲ್ಲಿ ಅಂದಿನ ಉಪಮುಖ್ಯಮಂತ್ರಿಯಾಗಿದ್ದ ಇಂದಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು 2007-08ನೇ ಸಾಲಿನ ಆಯವ್ಯಯವನ್ನು ಸದನದಲ್ಲಿ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಬಜೆಟ್‌ನಲ್ಲೂ ಹೇಳಿದ್ದಾರೆ. ನಮ್ಮ ಸರ್ಕಾರ ರಾಮನಗರವನ್ನು ಆರೋಗ್ಯ ನಗರವನ್ನಾಗಿ ಅಭಿವೃದ್ಧಿಪಡಿಸಲು ಯೋಚಿಸಿದ್ದೇವೆ. ಅಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಯೋಜಿಸಿರುವುದಾಗಿ, ವೈದ್ಯಕೀಯ ಕಾಲೇಜು, ಉನ್ನತಮಟ್ಟದ ಆಸ್ಪತ್ರೆ ಇತ್ಯಾದಿಗಳನ್ನು ನಿರ್ಮಾಣ ಮಾಡಲಾಗುವುದು. ಈ ಉದ್ದೇಶಕ್ಕಾಗಿ 284 ಕೋಟಿ ರೂಪಾಯಿ ವೆಚ್ಚವಾಗುತ್ತದೆಂದು ಅಂದಾಜು ಮಾಡಲಾಗಿದೆ. ಆರೋಗ್ಯ ವಿಶ್ವವಿದ್ಯಾನಿಲಯವು 150 ಕೋಟಿ ರೂಪಾಯಿಗಳನ್ನು ನೀಡಲಿದೆ ಮತ್ತು ನಮ್ಮ ಸರ್ಕಾರ ಮುಂದಿನ ಮೂರು

ವರ್ಷಗಳ ಅವಧಿಗೆ 133 ಕೋಟಿ ಒದಗಿಸಲಿದೆಯೆಂದು ಘೋಷಣೆ ಮಾಡಿರುತ್ತಾರೆ. ಅಲ್ಲದೆ ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 43 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿರುವುದಾಗಿ ಅವರು ಘೋಷಣೆ ಮಾಡಿದ್ದಾರೆ. ಇದು ಆದನಂತರ, ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಚಿವ ಸಂಪುಟದ ಅನುಮತಿಯನ್ನು ಪಡೆದು ಸೂಕ್ತ ಸರ್ಕಾರಿ ಆದೇಶಗಳನ್ನೇನು ಹೊರಡಿಸಿದ್ದೇವೆ. ವಿಶ್ವವಿದ್ಯಾನಿಲಯ ಕ್ಯಾಂಪಸ್ ಸ್ಥಳಾಂತರ ಮಾಡುವುದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ. ಈ ಎಲ್ಲಾ ಪ್ರಕ್ರಿಯೆಗಳ ನಂತರ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ತನ್ನ ಅಧಿನಿಯಮ 1994ರ 3ನೇ ಪ್ರಕರಣದ (4)ನೇ ಉಪ ಪ್ರಕರಣಕ್ಕೆ ತಿದ್ದುಪಡಿ ಮಾಡಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಿಗಳ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಇರತಕ್ಕದ್ದು ಎನ್ನುವುದಕ್ಕೆ ಬದಲಾಗಿ ರಾಮನಗರದಲ್ಲಿ ಇರತಕ್ಕದ್ದು ಎಂದು ಬದಲಾವಣೆ ಮಾಡಿ ದಿನಾಂಕ 10.08.2007 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಶ್ರೀ ಮಾಲೀಕಯ್ಯ ಗುತ್ತೇದಾರ್:- ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಗೆ ಕೊಟ್ಟು ಒಂದು ವಾರದಿಂದ ಕಾಯುತ್ತಿದ್ದೇವೆ.

ಅಧ್ಯಕ್ಷರು:- ಆಗಲಿ, ಇದು ಆದಮೇಲೆ ಕೊಡುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್:- ತೆಗೆದುಕೊಳ್ಳಿ. 9 ಗಂಟೆಯಾದರು ನಾವು ಇರುತ್ತೇವೆ. ನಾವು ಒಂದು ವಾರದಿಂದ ಇದ್ದೇವೆ. ಬಹಳ ಮಹತ್ವವಾದ ವಿಚಾರ. ಇದನ್ನು ಮುಗಿಸಿ ತೆಗೆದುಕೊಳ್ಳಿ. ನಾವು ಒಂದು ವಾರದಿಂದ ಇದನ್ನು ಹಾಕಿ ಕಾಯುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ:- ಸದನವನ್ನು ನಾಳೆಗೂ ಮುಂದುವರೆಸಿದರೆ ಒಳ್ಳೆಯದಾಗುತ್ತದೆ. ನಾಳೆ ಹೇಗೂ ಶುಕ್ರವಾರ.

ಶ್ರೀ ಹೆಚ್.ಡಿ.ರೇವಣ್ಣ:- ಒಂದು ದಿವಸ ಸದನವನ್ನು ಮುಂದೂಡಿ. ನಾಳೆ ಗಮನಸೆಳೆಯುವ ವಿಚಾರವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:- ಶಾಸಕರು ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಲು...

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ:- ತಮಗೆ ಗೊತ್ತಿರುವಂತೆ ಯಾವ ಶಾಸಕರೂ ತಮ್ಮ ಸಮಯವನ್ನು ವೇಸ್ಟ್ ಮಾಡುತ್ತಿಲ್ಲ. ಸಮಸ್ಯೆಗೆ ಎಲ್ಲರೂ ಚೆನ್ನಾಗಿ ಮಾತನಾಡುತ್ತಿದ್ದಾರೆ. ಪ್ರತಿಯೊಂದು ವಿಚಾರವನ್ನು ಸದನದ ಮುಂದಿಡುತ್ತಿದ್ದಾರೆ. ಎಲ್ಲಾ ಸ್ಮೂತ್ ಆಗಿ ನಡೆಯುತ್ತಿದೆ. ಆದ್ದರಿಂದ ಒಂದು ದಿವಸ ಸದನವನ್ನು ಇಡಿ. ಬಾಕಿ ಇರುವ ಎಲ್ಲರೂ ಪೂರ್ಣ ಮಾಡುತ್ತಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನಾಳೆ ಭೀಮನ ಅಮವಾಸ್ಯೆ! ಹಬ್ಬ ಇದೆ.

(ಗೊಂದಲ)

ಶ್ರೀ ಡಿ.ಎಸ್.ಜೀವರಾಜ್:- ಮಾನ್ಯ ಅಧ್ಯಕ್ಷರೆ, ಎಲ್ಲ ಶಾಸಕರುಗಳಿಗೆ ನಾಳೆ ಅವರವರ ಊರಿನಲ್ಲಿ ಕಾರ್ಯಕ್ರಮವಿದೆ. ಇಲ್ಲಿ Bill pass ಆಗುವುದಕ್ಕೆ ಕಾಯುತ್ತಿದ್ದಾರೆ. ಆ ಕಡೆಯ ಶಾಸಕರುಗಳಿಗೂ ಸಮಸ್ಯೆ ಇದೆ. ನಾಳೆ ನಡೆಸುತ್ತೇವೆ ಎಂದರೆ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- B.A.C.ನಲ್ಲಿ ತೀರ್ಮಾನವಾದ ಹಾಗೆ ಎಲ್ಲವೂ ನಡೆಯುತ್ತಿಲ್ಲ. ಮುಂದಿನ ತಿಂಗಳು 8ನೇ ತಾರೀಖಿನವರೆಗೆ ಇದ್ದುದನ್ನು ಇವತ್ತು ಕೊನೆ ಎಂದು ಮಾಡಲಾಯಿತು. ಅದನ್ನು ಒಂದು ದಿವಸ extend ಮಾಡಿದರೆ ಏನೂ ತೊಂದರೆಯಾಗುವುದಿಲ್ಲ.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್:- ಅಜೆಂಡಾ ಪ್ರಕಾರ ಹೋಗಿದ್ದರೆ ನಮ್ಮ ಅಭ್ಯಂತರವಿರಲಿಲ್ಲ. ನಮಗೆ ಅವಕಾಶ ಕೊಡಿ, ಇಲ್ಲದಿದ್ದರೆ ಆಗುವುದಿಲ್ಲ.

ಅಧ್ಯಕ್ಷರು:- ನಾನು ಎಲ್ಲರ ಅಭಿಪ್ರಾಯಗಳನ್ನೂ ಕೇಳುತ್ತೇನೆ. ಏಕೆಂದರೆ, ಕೆಲವು ಶಾಸಕರು ಪ್ರೋಗ್ರಾಂ ಹಾಕಿಕೊಂಡುಬಿಟ್ಟಿದ್ದಾರೆ. ನಾವು ಒಂದೆರಡು ದಿವಸ ಮುಂಚೆಯೇ ನಿರ್ಣಯ ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು.

ಶ್ರೀ ಸಿದ್ದರಾಮಯ್ಯ:- ಮತ್ತೆ ನಾವು ಅಕ್ಟೋಬರ್‌ಗೋ, ಸೆಪ್ಟೆಂಬರ್‌ಗೋ ಅಥವಾ ಯಾವಾಗ ಸಭೆ ಸೇರುತ್ತೇವೆಂದು ಗೊತ್ತಿಲ್ಲ. ದಯಮಾಡಿ ಇನ್ನೊಂದು ದಿನ extend ಮಾಡಿ.

ಅಧ್ಯಕ್ಷರು:- ಸರ್ಕಾರವನ್ನು ಕೇಳೋಣ.

ಶ್ರೀ ಸಿದ್ದರಾಮಯ್ಯ:- ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. 8ನೇ ತಾರೀಖಿನವರೆಗೇ ಒಪ್ಪಿಕೊಂಡಿದ್ದರು. ನೀವು ಮಲೇಷಿಯಾಗೆ ಹೋಗುತ್ತೀರಿ ಎಂದು ಕಡಿಮೆ ಮಾಡಲಾಯಿತು.

ಅಧ್ಯಕ್ಷರು:- ಎಲ್ಲರ ಅಭಿಪ್ರಾಯವನ್ನು ಕೇಳಿ ಸರ್ಕಾರವನ್ನು ಕೇಳೋಣ. ಎಲ್ಲರೂ ಯಾವ ರೀತಿ ಹೇಳುತ್ತಾರೊ ನೋಡಿಕೊಂಡು ಮಾಡೋಣ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಬಿ.ಜೆ.ಪಿ.ಸರ್ಕಾರ ಈಗ ಚೆನ್ನಾಗಿ ನಡೆಯುತ್ತಿದೆ. ನಾಳೆ ಮಾಡಿದರೆ ಗ್ರಹಣ ಹಿಡಿದುಕೊಂಡು ಬಿಡುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇವತ್ತು 7 ಗಂಟೆಯವರೆಗೆ ನಡೆಸಿ, ನಾಳೆಯೂ ಮುಂದುವರೆಸಿ.

ಅಧ್ಯಕ್ಷರು:- ಈಗ ನಾನು ನಿಮ್ಮನ್ನು ಮತ್ತು ಆ ಕಡೆಯ ಕೆಲವು leadersಅನ್ನು ಕರೆಯುತ್ತೇನೆ. Decision ತೆಗೆದುಕೊಳ್ಳೋಣ. ಈಗ ಚರ್ಚೆ ನಡೆಯಲಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುತ್ತೇನೆ. ಈ ಒಂದು ವಿಶ್ವವಿದ್ಯಾನಿಲಯದ ವಿಷಯದಲ್ಲಿ

1996ನೇ ಇಸವಿಯಲ್ಲಿ ತೆಗೆದುಕೊಂಡಿರತಕ್ಕ ನಿರ್ಧಾರ, ಇಲ್ಲಿಯವರೆಗೆ ಈ ವಿಶ್ವವಿದ್ಯಾನಿಲಯಕ್ಕೆ ಯಾವ ಒಂದು ಸೌಲಭ್ಯಗಳನ್ನು ಕಲ್ಪಿಸಬೇಕಾಗಿತ್ತು. ಈ ಸೌಲಭ್ಯಗಳನ್ನು ಕೊಡುವಲ್ಲಿ ಕೆಲವು ತೊಂದರೆಗಳು, ಅದು ಭೂಮಿಯ ತೊಂದರೆ ಇರಬಹುದು, ಅಥವಾ ಇಲ್ಲಿಯವರೆಗೆ ಬೇರೆ ಬೇರೆ ರೀತಿಯ ತೊಂದರೆಗಳಾಗಿ ಕನಿಷ್ಠ ಈಗಲಾದರೂ ಇದು ಕಾರ್ಯರೂಪಕ್ಕೆ ಬರುತ್ತದೆ ಎನ್ನುವ ಸಂದರ್ಭದಲ್ಲಿ ಮತ್ತೊಮ್ಮೆ ಸಾರ್ವಜನಿಕರಲ್ಲಿ ಒಂದು ರೀತಿಯ ಗೊಂದಲ ಮೂಡಿದೆ. ಇದು ಮತ್ತೆ ಅಲ್ಲಿಂದ ಹಿಂದೆ ಹೋಗತಕ್ಕಂಥಾದ್ದು, ಸಾರ್ವಜನಿಕವಾಗಿ ಬಹಳ ಪ್ರಮುಖವಾಗಿರತಕ್ಕಂಥ ವಿಷಯವಾಗಿರುವುದರಿಂದ ನಾನು ಸದಸ್ಯರಲ್ಲಿ ಮನವಿ ಮಾಡುತ್ತೇನೆ, ದಯವಿಟ್ಟು ಸಹಕರಿಸಿ, ನಾನು ಇದನ್ನು ಇನ್ನೊಂದು ಅರ್ಧ ಅಥವಾ ಮುಕ್ಕಾಲು ಗಂಟೆಯಲ್ಲಿ ಮುಗಿಸಿಬಿಡುತ್ತೇನೆ. ಜಾಸ್ತಿ ಎಳೆಯುವುದಕ್ಕೆ ಹೋಗುವುದಿಲ್ಲ ಮತ್ತು ಇನ್ಯಾರೂ ಮಾತನಾಡುವುದಿಲ್ಲ, ನಾನೇ ಎಲ್ಲ ವಿಷಯಗಳನ್ನು ಹೇಳುತ್ತೇನೆ. 2007ರ ಫೆಬ್ರವರಿ 15ನೇ ತಾರೀಖು ಈ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಕಟ್ಟಡದ ಕೆಲಸ ಮತ್ತು ಭೂಮಿಯ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಒಂದು ಸಭೆಯನ್ನು ಕರೆದು, ಆ ಸಭೆಯಲ್ಲಿ ಹಲವಾರು ವಿಷಯಗಳನ್ನು ತೀರ್ಮಾನ ಮಾಡಿದೆವು. 15-02-2007ರಲ್ಲಿ ಅಂತಿಮವಾಗಿ ಆ ಸಭೆಯಲ್ಲಿ ತೆಗೆದುಕೊಂಡಂಥ ನಿರ್ಧಾರವೆಂದರೆ, "ರಾಮನಗರ ತಾಲ್ಲೂಕು ಕಸಬಾ ಹೋಬಳಿ, ಅರ್ಚಕರಹಳ್ಳಿ ಗ್ರಾಮದಲ್ಲಿ ಗುರುತಿಸಲಾಗಿರುವ 150 ಎಕರೆ ಖಾಸಗಿ ಜಮೀನು ಹಾಗೂ 70 ಎಕರೆ ಸರ್ಕಾರಿ ಜಮೀನನ್ನು ಉಪಯೋಗಿಸಿಕೊಂಡು ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು, ನರ್ಸಿಂಗ್ ಕಾಲೇಜು, ಫಾರ್ಮಸಿ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಇತರ ಪೂರಕ ಸಂಸ್ಥೆಗಳನ್ನು ನಿರ್ಮಾಣ ಮಾಡುವುದು." ಯಾವ ಒಂದು ಭೂಮಿಯಲ್ಲಿ ನಾವು ಈ ಒಂದು ಕೆಲಸಕ್ಕೆ ಅನುಮತಿಯನ್ನು ಕೊಡಬೇಕೆಂದಿದ್ದೆವೋ, ಆ ಸಂದರ್ಭದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಇದೇ ಜಾಗದಲ್ಲಿ ವಸತಿ ಬಡಾವಣೆಯನ್ನು ನಿರ್ಮಿಸಬೇಕೆಂದು ತೀರ್ಮಾನವನ್ನು ಮಾಡಿದ್ದರು. ಆದ್ದರಿಂದ ಆವತ್ತು ಗೃಹ ಮಂಡಳಿಯ ಅಧಿಕಾರಿಗಳನ್ನೂ ಆ ಸಭೆಗೆ ಕರೆದು, ಗೃಹ ಮಂಡಳಿಯವರು ಹೊರಡಿಸಿದ್ದ ಅಧಿಸೂಚನೆಯನ್ನು ರದ್ದು ಪಡಿಸಲು ಆದೇಶ ಮಾಡಿ, ಆವತ್ತಿನ ದಿನವೇ, "ಸದರಿ ಜಮೀನನ್ನು ಮೇಲ್ಕಂಡ ಉದ್ದೇಶಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಖಾಂತರ ಹೊಸದಾಗಿ ಭೂಸ್ವಾಧೀನ ಪಡಿಸಲು ಪ್ರಕ್ರಿಯೆಯನ್ನು ಕೂಡಲೇ ಕೈಗೊಳ್ಳುವುದು ಹಾಗೂ ಭೂಸ್ವಾಧೀನಕ್ಕೆ ತಗಲುವ ವೆಚ್ಚವನ್ನು 2006-07 ಮತ್ತು 2007-08ರ ಆಯವ್ಯಯದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನದ ಮೂಲಕ ವೈದ್ಯಕೀಯ ಶಿಕ್ಷಣ ಇಲಾಖೆಯು ಒದಗಿಸುವುದು ಮತ್ತು ವೈದ್ಯಕೀಯ ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು ಹೀಗೆ ಹಲವಾರು ಪೂರಕ ಸಂಸ್ಥೆಗಳ ಕಟ್ಟಡಗಳ

ನಿರ್ಮಾಣ. ಕಾರ್ಯವನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ಠೇವಣಿ ಕೊಡುಗೆಯ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ಹಾಗೂ ಈ ಕಾಮಗಾರಿಗೆ ಅಗತ್ಯವಾದ ನಕ್ಷೆ, ಅಂದಾಜು ಪಟ್ಟಿಗಳನ್ನು ಕೂಡಲೇ ಸಿದ್ಧಪಡಿಸಿ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು. ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಸದರಿ ಉದ್ದೇಶಕ್ಕಾಗಿ ಲಭ್ಯವಿರುವ 120 ಕೋಟಿ ರೂ.ಗಳನ್ನು ಉಪಯೋಗಿಸಿಕೊಳ್ಳುವುದು ಮತ್ತು ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಪಡೆಯಲು ಸರ್ಕಾರದ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಇವರು ಸೂಕ್ತ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡುವುದು, ಅವಶ್ಯ ಕಟ್ಟಡಗಳ ನಿರ್ಮಾಣಕ್ಕಾಗಿ ಬೇಕಾಗುವ ಮೂರನೇ ಒಂದಂಶದ ಅನುದಾನವನ್ನು ರಾಜೀವ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆಗೆ ಒದಗಿಸಿಕೊಟ್ಟು ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುವು ಮಾಡಿಕೊಡುವುದು. ಮೇಲೆ ಕ್ರಮ ಸಂಖ್ಯೆ 1 ರಿಂದ 4 ರವರೆಗಿನ ಅಂಶಗಳ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆಯು ಆರ್ಥಿಕ ಇಲಾಖೆ ಹಾಗೂ ಸಂಬಂಧಪಟ್ಟ ಇತರ ಇಲಾಖೆಗಳ ಸಹಮತಿ ಪಡೆದು ಒಂದು ಸಮಗ್ರವಾದ ಪ್ರಸ್ತಾವನೆಯನ್ನು ಮುಂದಿನ ಸಚಿವ ಸಂಪುಟದ ಸಭೆಯ ಪರಿಗಣನೆಗೆ ಮಂಡಿಸುವುದು." ಈ ಒಂದು ತೀರ್ಮಾನವನ್ನು 15-02-2007ರಲ್ಲಿ ಮಾಡುತ್ತೇವೆ. ಅದಾದ ನಂತರ ದಿನಾಂಕ 2-03-2007ರಂದು ನಡೆದ ಸಭೆಯಲ್ಲಿ, ಈ ಒಂದು ಕ್ಯಾಂಪಸ್‌ಅನ್ನು ಸ್ಥಾಪಿಸತಕ್ಕಂಥ ವಿಷಯದಲ್ಲಿ ಲೋಕೋಪಯೋಗಿ ಸಚಿವರು, ಹಣಕಾಸು ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳವರು ಹಾಗೂ ಕಾರ್ಯದರ್ಶಿಯವರು ಮತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಕುಲಪತಿಯವರು ಇವರೆಲ್ಲಾ ಭಾಗವಹಿಸಿದ್ದರು. "ಅರ್ಚಕರಹಳ್ಳಿಯಲ್ಲಿರತಕ್ಕಂಥ 250 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸುವಂತೆ ಮತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಕ್ಯಾಂಪಸ್ ಮತ್ತು ಇತರೆ ಪೂರಕ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ ವಿವರವಾದ ಸರ್ವೆ ಮಾಡಿ, ನಕ್ಷೆ, ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ, ಟೆಂಡರ್ ಕರೆಯುವಂತೆ ಸಭೆಯಲ್ಲಿ ಸೂಚಿಸಲಾಯಿತು". ಆವತ್ತಿನ ಸಭೆಯಲ್ಲಿ ಏನು ತೀರ್ಮಾನ ಮಾಡಿದರು ಅದರ ಆಧಾರದ ಮೇಲೆ, "ಆವತ್ತು K.I.A.D.B.ವತಿಯಿಂದ ಅಧಿಸೂಚನೆ ಹೊರಡಿಸಲಾಗಿದ್ದು, ಈ ಜಮೀನನ್ನು ಕೂಡಲೇ ಸ್ವಾಧೀನಪಡಿಸಿಕೊಂಡು ವೈದ್ಯಕೀಯ ಶಿಕ್ಷಣ ಇಲಾಖೆಯ ವಶಕ್ಕೆ ನೀಡುವಂತೆ K.I.A.D.B.ಯ ಅಧಿಕಾರಿಗಳಿಗೆ ಸೂಚಿಸಲಾಯಿತು. ನಂತರ ಮಾತನಾಡಿದ ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ರಾಮನಗರ ತಾಲ್ಲೂಕಿನ ಅರ್ಚರಕರಹಳ್ಳಿ ಗ್ರಾಮದಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಕ್ಯಾಂಪಸ್ಸು ಮತ್ತು..." ಇದನ್ನೆಲ್ಲ ನಾನು ಮತ್ತೆ ಓದಲಿಕ್ಕೆ ಹೋಗುವುದಿಲ್ಲ. "...ದಿನಾಂಕ

5–3–2007ರಂದು ಹೊರಡಿಸಿ, ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಸಿಂಡಿಕೇಟ್ ಮತ್ತು ಫೈನ್ಯಾನ್ಸ್ ಸಮಿತಿಗಳಿಂದ ನಿರ್ಣಯ ತೆಗೆದುಕೊಳ್ಳುವಂತೆ ನಿರ್ದೇಶನ ನೀಡುವುದಾಗಿ ಸಭೆಗೆ ತಿಳಿಸಿದರು. ಮೇಲ್ಕಂಡ ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಕ್ಯಾಂಪಸ್ಸು, ಸರ್ಕಾರಿ ವೈದ್ಯಕೀಯ ಕಾಲೇಜು, ಹೈಟೆಕ್ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಯನ್ನು 2007–08ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಈ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿ ಕೂಡಲೇ ಸರ್ಕಾರಿ ಆದೇಶ ಹೊರಡಿಸಲು ಹಾಗೂ ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಮತ್ತು ಫೈನ್ಯಾನ್ಸ್ ಸಮಿತಿಗಳ ಅನುಮತಿಯನ್ನು ಪಡೆದುಕೊಳ್ಳುವಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಮೈಸೂರು ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು, ನರ್ಸಿಂಗ್ ಕಾಲೇಜು, ಫಾರ್ಮಸಿ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಇತರ ಪೂರಕ ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ಠೇವಣಿ ಕೊಡುಗೆ ಕಾಮಗಾರಿಯಾಗಿ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಸದರಿ ಉದ್ದೇಶಕ್ಕಾಗಿ ಲಭ್ಯವಿರುವ 120 ಕೋಟಿ ರೂ.ಗಳನ್ನು ಉಪಯೋಗಿಸಿಕೊಳ್ಳುವುದು ಮತ್ತು ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಪಡೆಯಲು ಸರ್ಕಾರದ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಸೂಕ್ತ ಪ್ರಸ್ತಾನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಡುವುದು. ಅವಶ್ಯ ಕಟ್ಟಡಗಳ ನಿರ್ಮಾಣಕ್ಕೆ ಬೇಕಾಗುವ ಮೂರನೇ ಒಂದಂಶದ ಅನುದಾನವನ್ನು ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆಗೆ ಒದಗಿಸಿಕೊಟ್ಟು ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುವು ಮಾಡಿಕೊಡುವುದು. ಲೋಕೋಪಯೋಗಿ ಇಲಾಖೆಯು ರಾಮನಗರ ತಾಲ್ಲೂಕು ವ್ಯಾಪ್ತಿಯಲ್ಲಿನ ಅರ್ಚಕರಹಳ್ಳಿ ವ್ಯಾಪ್ತಿಯಲ್ಲಿರುವ ಸುಮಾರು 250 ಎಕರೆ ಪ್ರದೇಶದಲ್ಲಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಯೋಜಿತ ಜಮೀನನ್ನು ವಿವರವಾದ ಸರ್ವೆ ಮಾಡಿ, ನಕ್ಷೆ, ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಕೂಡಲೆ ಟೆಂಡರ್ ಕರೆಯಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು." ಆ ಸಂದರ್ಭದಲ್ಲಿ ಮುಖ್ಯ ವಾಸ್ತು ಶಿಲ್ಪಿಯವರು ಆ ಒಂದು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಗೆ ಎಲ್ಲ ವಿವರ ನೀಡಿ, ಇವತ್ತು ಮುಖ್ಯ ವಾಸ್ತು ಶಿಲ್ಪಿಯವರು ಕರ್ನಾಟಕದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಬೇಕಾದಂಥ ಸಂದರ್ಭದಲ್ಲಿ ಅವರಿಗೆ ಕಾಲದ ಅಭಾವ ಆಗಬಹುದು. ಆದ್ದರಿಂದ ಅಂಥ ಸಂದರ್ಭದಲ್ಲಿ ಬೇರೆ ಪರಿಣಿತ architect ಗಳ ಸೇವೆಯನ್ನು ಇದಕ್ಕೆ ಪಡೆದುಕೊಳ್ಳತಕ್ಕಂಥಾದ್ದಕ್ಕೂ ಆವತ್ತಿನ

ಸಭೆಯಲ್ಲಿ ಸೂಚಿಸಲಾಗಿದೆ. ಇದಾದ ನಂತರ, ದಿ:12-03-2007ರಂದು ಅಂದಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ KIADB ವತಿಯಿಂದ 247.20 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿರುವುದಾಗಿ ಸಭೆಯಲ್ಲಿ ಹಾಜರಿದ್ದ KIADB ಅಧಿಕಾರಿಗಳು ತಿಳಿಸಿದರು ಮತ್ತು ಸಂಬಂಧಿಸಿದ ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸಲು ಅನುಕೂಲವಾಗುವಂತೆ ದಿನಾಂಕ:15-03-2007ರಂದು 45 ದಿವಸಗಳ ಕಾಲಾವಕಾಶವನ್ನು ಒದಗಿಸಿ ಟೆಂಡರ್ ಕರೆಯಲು ಲೋಕೋಪಯೋಗಿ ಇಲಾಖೆಯು ಸಹಮತಿ ನೀಡುವಂತೆ - ಕಾರ್ಯದರ್ಶಿಯವರು, ವೈದ್ಯಕೀಯ ಶಿಕ್ಷಣ ಇಲಾಖೆ, ಇವರಿಗೆ ಸೂಚಿಸಲಾಯಿತು. ಅಲ್ಲದೆ, ರಾಜೀವ್‌ಗಾಂಧಿ campus ಪೂರಕ ಕಟ್ಟಡಗಳನ್ನು ನಿರ್ಮಾಣ ಮಾಡುವ ಸಲುವಾಗಿ ಈ ಕೆಳಕಂಡಂತೆ ಹಣ ಭರಿಸಲು ಆದೇಶಿಸಲಾಯಿತು. 2007-08ರ ಆರ್ಥಿಕ ವರ್ಷದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ 100 ಕೋಟಿ ರೂಪಾಯಿಗಳನ್ನು ತೊಡಗಿಸುವಂಥದ್ದು, ಕೇಂದ್ರದಿಂದ ಅಧಿಕ ಸಹಾಯ ರೂಪದಲ್ಲಿ ಬರತಕ್ಕಂಥ 80 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡತಕ್ಕಂಥದ್ದು, ರಾಜ್ಯ ಸರ್ಕಾರದ ಆಯವ್ಯಯದಿಂದ 50 ಕೋಟಿ ರೂಪಾಯಿಗಳನ್ನು ರಾಜೀವಗಾಂಧಿ ವಿಶ್ವವಿದ್ಯಾನಿಲಯದಿಂದ ತೊಡಗಿಸತಕ್ಕಂಥದ್ದು ಮತ್ತು ರಾಜ್ಯ ಸರ್ಕಾರದಿಂದ 55 ಕೋಟಿ ರೂಪಾಯಿಗಳನ್ನು ತೊಡಗಿಸತಕ್ಕಂಥದ್ದಕ್ಕೆ ದಿ:15.03.2007ರಲ್ಲಿ ತೀರ್ಮಾನ ಮಾಡಿದ್ದೇವೆ. ಮೇಲ್ಕಂಡ ಸಭೆಯ ತೀರ್ಮಾನದನ್ವಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರು ದಿನಾಂಕ:15.03.2007ರ ತಮ್ಮ ಪತ್ರದಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ campus ಕಾಮಗಾರಿಯನ್ನು ಆದಷ್ಟು ಬೇಗನೆ ಕೈಗೊಳ್ಳುವ ಸಲುವಾಗಿ ಅಲ್ಪಾವಧಿ ಟೆಂಡರ್ ಕರೆದು ಕ್ರಮ ಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರಿಗೆ ಸೂಚಿಸಿರುತ್ತಾರೆ. ಏಕೆಂದರೆ, ದಿ:12.03.2007ರಂದು ಆರೋಗ್ಯ ಸಚಿವರು ಮತ್ತು ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಇಬ್ಬರೂ ಲೋಕೋಪಯೋಗಿ ಇಲಾಖೆಗೆ ಅನುಮತಿಯನ್ನು ಸೂಚಿಸಿ ಅವರೇ ಸಹಮತಿಯನ್ನು ವ್ಯಕ್ತಪಡಿಸಿ ಈ ಪ್ರಕ್ರಿಯೆಯನ್ನು ಮುಂದುವರಿಸುವುದಕ್ಕೆ direction, ಸೂಚನೆಯನ್ನು ಕೊಟ್ಟಿದ್ದಾರೆ. ಇದಾದ ನಂತರ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಮಾತನಾಡುತ್ತಾ, ಯಾವುದೇ ರೀತಿಯ ತೀರ್ಮಾನಗಳು ಸರ್ಕಾರದಿಂದ ಆಗದೆ, ಸರ್ಕಾರದಿಂದ ಯಾವುದೇ ರೀತಿಯ ಆದೇಶಗಳಿಲ್ಲದೆ ಟೆಂಡರ್ ಕರೆದು ಈ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆನ್ನುವ ವಿಷಯವನ್ನು ಹೇಳಿದ್ದಾರೆ. ಕಟ್ಟಡ ನಿರ್ಮಾಣ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಇಲ್ಲದೆ ದಿನಾಂಕ:15.03.2007ರಂದು ಕಾಮಗಾರಿಗೆ ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ ಎಂದು ನಿನ್ನೆ ಉತ್ತರ ಕೊಟ್ಟಿದ್ದಾರೆ. ಆದರೆ,

ಸಭೆಯಲ್ಲಿ ಆರೋಗ್ಯ ಇಲಾಖೆಯ ಸಚಿವರೇ ಇದಕ್ಕೇನು ಸೂಚನೆ ಕೊಟ್ಟಿದ್ದಾರೆ, ಸಹಮತವನ್ನು ವ್ಯಕ್ತಪಡಿಸಿದ್ದಾರೆ, ಇದೆಲ್ಲ ಸರ್ಕಾರದ ಆರ್ಥಿಕ ಇಲಾಖೆಯಿಂದಲೂ ಅನುಮತಿ ಪಡೆದು ಈ tender ಪ್ರಕ್ರಿಯೆ ಮಾಡಿರುವುದು ಎನ್ನುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ನಂತರ, ಭೂ ಸ್ವಾಧೀನದ ವಿಷಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು- KIADB ಯಿಂದ ಯಾವುದೇ ರೀತಿಯ ಭೂ ಸ್ವಾಧೀನ ಅಧಿಸೂಚನೆ ಹೊರಡಿಸದೆ ಕೆಲಸ ಮಾಡಲಿಕ್ಕೆ tender ಕರೆಯಲಿಕ್ಕೆ ಹೋದರೆಂದು ಹೇಳಿದ್ದಾರೆ. ಆದರೆ, ಸರ್ಕಾರದ ತಿರ್ಮಾನದಂತೆ ಈ ಉದ್ದೇಶಕ್ಕಾಗಿ ಅರ್ಚಕರಹಳ್ಳಿ ಗ್ರಾಮದ ಜಮೀನಿನ ಪೈಕಿ 60.18 ಎಕರೆ ಸರ್ಕಾರಿ ಖರಾಬ್ ಜಮೀನು, 187.02 ಎಕರೆ ಖಾಸಗಿ ಜಮೀನು ಒಳಗೊಂಡಂತೆ ಒಟ್ಟು 247 ಎಕರೆ ಜಮೀನನ್ನು KIADB ಮೂಲಕ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯು ಕಳುಹಿಸಿದ ಪ್ರಸ್ತಾವನೆಯ ಮೇರೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ರಾಜ್ಯ ಪತ್ರದಲ್ಲಿ ದಿ:27/02/07ರಂದು KIADB ಯ ಕಾಯ್ದೆಯ ವಿಧಿ 28(1)ರನ್ವಯ preliminary ಅಧಿಸೂಚನೆ ಹೊರಡಿಸಿದೆ. ಸದರಿ ಭೂಸ್ವಧೀನಕ್ಕಾಗಿ ಸುಮಾರು 50 ಕೋ.ರೂ.ಗಳು ಅವಶ್ಯವೆಂದು ಅಂದಾಜಿಸಿತ್ತು. ಅಲ್ಲದೆ, ಭೂಸ್ವಾಧೀನಕ್ಕಾಗಿ ಬೇಕಾಗುವ ವೆಚ್ಚವನ್ನು ಭರಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯು ಹಣಕಾಸು ಇಲಾಖೆಗೆ ದಿ:26/04/07ರಂದು ಕಳುಹಿಸಿದ ಪ್ರಸ್ತಾವನೆಗೆ ಸಹಮತಿಯನ್ನು ಸಹ ನೀಡಿದೆ. ತದನಂತರ, ವೈದ್ಯಕೀಯ ಶಿಕ್ಷಣ ಇಲಾಖೆಯು ದಿ:9/07/07ರಂದು 5 ಕೋ.ರೂ.ಗಳನ್ನು KIADB ಗೆ ಬಿಡುಗಡೆ ಮಾಡಿದೆ. ತದನಂತರ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾಯ್ದೆಯನ್ವಯ 28(4)ರ ಮೇರೆಗೆ 216 ಎಕರೆ 28 ಗುಂಟೆ ಜಮೀನನ್ನು KIADB ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ದಿ:18/06/07ರಂದು ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ, ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. KIADB ಕಾಯ್ದೆ ವಿಧಿ 28(4)ರಲ್ಲಿ ತಿಳಿಸಿರುವಂತೆ ಭೂಸ್ವಾಧೀನದ ಅಂತಿಮ ಅಧಿಸೂಚನೆ ಪ್ರಕಟಣೆ ಹೊರಡಿಸಿದ ನಂತರ ಸದರಿ ಭೂ ಪ್ರದೇಶವು ಯಾವುದೇ ಋಣಭಾರವಿಲ್ಲದೆ ಸರ್ಕಾರಿ ಸ್ವತ್ತೆಂದು ಪರಿಗಣಿಸತಕ್ಕದ್ದೆಂದು ಕಾಯ್ದೆ 28(5)ರಲ್ಲಿ ಪ್ರಸ್ತಾಪಿಸಲಾಗಿದೆ. ಸದರಿ ಕ್ಯಾಂಪಸ್ ನಿರ್ಮಾಣಕ್ಕಾಗಿ ಒಟ್ಟು 216 ಎಕರೆ 26 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಈ ಬಾಬ್ತು ಭೂ ಪರಿಹಾರಕ್ಕಾಗಿ ಸರ್ಕಾರದಿಂದ 9.63 ಕೋಟಿ ರೂ.ಗಳು ಬಿಡುಗಡೆಯಾಗಿರುವುದಾಗಿ KIADB ಯ ವಿಶೇಷ ಭೂ ಸ್ವಾಧೀನಾಧಿಕಾರಿ ದಿ:16/05/08ರ ಪತ್ರದಲ್ಲಿ ತಿಳಿಸಿರುತ್ತಾರೆ ಹಾಗೂ ಈ ಪೈಕಿ 6 ಕೋಟಿ 1 ಲಕ್ಷದ 62 ಸಾವಿರ ರೂಪಾಯಿಗಳ ಭೂ ಪರಿಹಾರ ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ಇವೆಲ್ಲ Annexure ನಲ್ಲಿದೆ. ಸರ್ಕಾರಿ ಆದೇಶಗಳೆಲ್ಲ ಇವೆ. ನಂತರ, 216.24 ಎಕರೆ ಪೈಕಿ ಮೂರನೇ ಒಂದು ಭಾಗ

ಎಂದರೆ 71 ಎಕರೆ 15 ಗುಂಟೆ ಜಮೀನನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪಿಸುವ ಸಲುವಾಗಿ ವಿಶ್ವವಿದ್ಯಾನಿಲಯ ಕುಲಸಚಿವರಿಗೆ ಹಸ್ತಾಂತರಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಯು ದಿ:18/08/07ರಂದು ಸರ್ಕಾರಿ ಆದೇಶ ಹೊರಡಿಸಿದ್ದಾರೆ. 216.24 ಎಕರೆ, ಪೈಕಿ ಉಳಿದ ಮೂರನೇ ಎರಡು ಭಾಗ ಎಂದರೆ 145 ಎಕರೆ 09 ಗುಂಟೆ ಜಮೀನಿದ್ದು, ಅದರಲ್ಲಿ 29 ಎಕರೆ 4 ಗುಂಟೆ ಸರ್ಕಾರಿ ಜಮೀನು ಆಗಿದೆ. ವೈದ್ಯಕೀಯ ಮಹಾ ವಿದ್ಯಾಲಯ, Pharmacy College, ದಂತ ವೈದ್ಯ ಕಾಲೇಜು, Super Specialty Hospital ಇತ್ಯಾದಿಗಳನ್ನು ಸ್ಥಾಪಿಸುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಹಸ್ತಾಂತರಿಸಲು ಆದೇಶಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಯು ದಿ:18/08/2007ರಂದು ಆದೇಶ ಹೊರಡಿಸಿದೆ. ಅದಾದನಂತರ; ದಿ:11/09/2007ರಂದು KIADB ಯ ಸದರಿ 245 ಎಕರೆ 09 ಗುಂಟೆ ಜಮೀನನ್ನು KIADB ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆಯವರಿಗೆ free from all encumbrances ಎನ್ನತಕ್ಕಂಥ ಒಂದು ನೋಟ್ ಅನ್ನು ಹಾಕಿ ವೈದ್ಯಕೀಯ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. ವಿಶ್ವವಿದ್ಯಾನಿಲಯ ಕ್ಯಾಂಪಸ್ ನಿರ್ಮಾಣ ಕೈಗೊಳ್ಳುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆ ನಂತರ 145 ಎಕರೆ ಭೂಮಿಯನ್ನು ದಿ:13/09/07ರಂದು ಲೋಕೋಪಯೋಗಿ ಇಲಾಖೆಗೆ ಋಣಮುಕ್ತವಾಗಿ ಹಸ್ತಾಂತರಿಸಿದೆ. 11ನೇ ತಾರೀಖು KIADB ಯಿಂದ ವೈದ್ಯಕೀಯ ಇಲಾಖೆಗೆ transfer ಮಾಡುತ್ತಾರೆ. 13ನೇ ತಾರೀಖು ವೈದ್ಯಕೀಯ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ transfer ಮಾಡಿದ್ದಾರೆ. ಈ ರೀತಿ ಋಣಮುಕ್ತವಾಗಿ ಭೂಸ್ವಾಧೀನ ಮಾಡಿದ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದ ವೈದ್ಯಕೀಯ ಶಿಕ್ಷಣ ಇಲಾಖೆಯು High Court ನಲ್ಲಿ ಭೂ ಮಾಲೀಕರು ಹೂಡಿರುವ ದಾವೆಯ ಬಗ್ಗೆಯಾಗಲಿ, ಮರ ಗಿಡಗಳನ್ನು ಕಡಿಯಬಾರದೆಂಬ ಬಗ್ಗೆ ನೀಡಿರುವ ಸೂಚನೆಯಾಗಿರಲಿ ಅಥವಾ ಈ ಬಗ್ಗೆ ನಡೆದಿರುವ ಪತ್ರ ವ್ಯವಹಾರಗಳ ಬಗ್ಗೆಯಾಗಲಿ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಾಗಲಿ, ಪ್ರಧಾನ ಕಾರ್ಯದರ್ಶಿ, ಆರೋಗ್ಯ ಹಾಗು ಕುಟುಂಬ ಕಲ್ಯಾಣ ಇಲಾಖೆಯವರಾಗಲಿ, ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆಯವರಾಗಲಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, KIADB ಅವರಾಗಲಿ ಮತ್ತು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ್‍ಯಾರೂ ಇಷ್ಟೆಲ್ಲಾ ಆದ ಮೇಲೂ ಲೋಕೋಪಯೋಗಿ ಇಲಾಖೆಯ ಗಮನಕ್ಕೆ Court ನಲ್ಲಿ ಈ ವ್ಯಾಜ್ಯವಿದೆ ಎನ್ನತಕ್ಕಂಥ ವಿಷಯವನ್ನು ತಂದಿಲ್ಲ. ಆದರೆ, Court ನವರು ಭೂಮಿಯ ವಿಚಾರದಲ್ಲಿ stay ಕೊಟ್ಟಿಲ್ಲ. Court ನವರು ಮರಗಿಡಗಳನ್ನು ಕಟ್

ಮಾಡಬಾರದೆಂದು stay ಕೊಟ್ಟಿದ್ದಾರೆ. ಕೆಲಸ ಮಾಡಬೇಡಿ ಎಂದು ಅವರಿಗೆ stay ಕೊಟ್ಟಿಲ್ಲ. ನಂತರ, ದಿ:17/08/07ರಂದು ಗುತ್ತಿಗೆದಾರರಿಗೆ ಶೇ.10ರಷ್ಟು ಮುಂಗಡ ಹಣವನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿಯೂ ವೈದ್ಯಕೀಯ ಇಲಾಖೆಯು ರೈತರು High Court ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿಗಳ ಬಗ್ಗೆ ಲೋಕೋಪಯೋಗಿ ಇಲಾಖೆಯ ಗಮನಕ್ಕೆ ತಂದಿಲ್ಲ. ಇದನ್ನೆಲ್ಲ ಬಹುಶಃ ವೈದ್ಯಕೀಯ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿ ಹೇಳಿರಬಹುದೆಂದು ತೊರುತ್ತದೆ. ದಿ:18/08/07ರಂದು ವೈದ್ಯಕೀಯ ಶಿಕ್ಷಣ ಇಲಾಖೆಯು ಹೊರಡಿಸಿರುವ ಸರ್ಕಾರಿ ಆದೇಶ ಸಂ:ಆಕುಕ/196/ಎಂಪಿಎಸ್,2006ರ ಅನ್ವಯ ಭೂ ಸ್ವಾಧೀನಪಡಿಸಿಕೊಂಡಿರುವ ಒಟ್ಟು 216.24 ಎಕರೆ ಜಮೀನಿನ ಪೈಕಿ ಮೂರನೇ ಒಂದು ಭಾಗದಷ್ಟು ಜಮೀನು ಅಂದರೆ 71 ಎಕರೆ 15 ಗುಂಟೆ ಜಮೀನನ್ನು ಕುಲ ಸಚಿವರು, ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಇವರಿಗೆ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಸ್ಥಾಪನೆಗೆ ಹಸ್ತಾಂತರಿಸಿ, ಉಳಿದ 145.09 ಎಕರೆ ಜಮೀನನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಋಣಮುಕ್ತವಾಗಿ ಹಸ್ತಾಂತರಿಸಿ, ಆದೇಶಿಸಿದೆ. ಸದರಿ ಆದೇಶದಲ್ಲಿ ಸಹ High Court ನಲ್ಲಿ ದಾವೆ ಇರುವ ವಿಚಾರವನ್ನು ಉಲ್ಲೇಖಿಸಿರುವುದಿಲ್ಲ ಹಾಗೂ ಲೋಕೋಪಯೋಗಿ ಇಲಾಖೆಯ ಗಮನಕ್ಕೂ ತಂದಿರುವುದಿಲ್ಲ. High Court ನಲ್ಲಿ ವ್ಯಾಜ್ಯ ಹೂಡಿರುವ ಬಗ್ಗೆ ಮಾಹಿತಿಯು ಸಂಬಂಧಿಸಿದ ಇಲಾಖೆಗಳಿಂದ ಯಾವುದೇ ಹಂತದಲ್ಲಿಯೂ ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಅಲ್ಲದೆ, ದಿ:11/09/2007ರಂದು KIADB ಯು ವೈದ್ಯಕೀಯ ಶಿಕ್ಷಣ ಇಲಾಖೆಗೆ 145.09 ಎಕರೆ ಜಮೀನನ್ನು ಹಸ್ತಾಂತರಿಸಿದೆ. ತದನಂತರ, ಈ ಜಮೀನನ್ನು Assistant Engineer, ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇಂದಿನ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮೊನ್ನೆ ಹೇಳಿಕೆ ಕೊಟ್ಟಿದ್ದಾರೆ. ನಂತರ, 33.37 ಕೋ.ರೂ.ಗಳನ್ನು ಬಡ್ಡಿರಹಿತ ಸಂಗ್ರಹಣ ಮುಂಗಡವಾಗಿ ನೀಡಿರುವ ಬಗ್ಗೆ ಹೇಳುತ್ತೇನೆ. ಅಂದಿನ ಹಣಕಾಸು ಸಚಿವರು ಮಂಡಿಸಿದ 2007-08ರ ಆಯವ್ಯಯದಲ್ಲಿ Ramnagar Health City ಶೀರ್ಷಿಕೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ 43 ಮೂರು ಕೋಟಿ.ರೂ.ಗಳ ಪ್ರಸ್ತಾವನೆಯನ್ನು ಅನುಮೊದನೆಗಾಗಿ ಕಾರ್ಯದರ್ಶಿಯವರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರಿಗೆ ತಿಳಿಸಿದ್ದಾರೆ. ರಾಮನಗರವನ್ನು ಆರೋಗ್ಯ ನಗರವನ್ನಾಗಿ ಅಭಿವೃದ್ಧಿಪಡಿಸಲು ಹಣಕಾಸು ಇಲಾಖೆಯು ತನ್ನ ಸಹಮತಿಯನ್ನು ಸಂ:898/ವೆಚ್ಚ 5,2007, ದಿ:08/05/07ರಂದು ಕೋಟಿ ರೂ.ಗಳನ್ನು ಒದಗಿಸಿದೆ. ದಿ:14/05/07ರಂದು ಜರುಗಿದ ಸಚಿವ ಸಂಪುಟ ಸಭೆಯು ರಾಮನಗರದಲ್ಲಿ ವಿಶ್ವವಿದ್ಯಾನಿಲಯ, ಆರೋಗ್ಯ ಕ್ಯಾಂಪಸ್ ಮತ್ತು ಇತರೆ ಪೂರಕ ಕಟ್ಟಡಗಳ ನಿರ್ಮಾಣಕ್ಕಾಗಿ 310 ಕೋ.ರೂ.ಗಳ ಅಂದಾಜು ಪ್ರಸ್ತಾವನೆಗೆ

ಆಡಳಿತಾತ್ಮಕ ಅನುಮೋದನೆ ನೀಡಿದೆ. ಅದರಂತೆ, ವೈದ್ಯಕೀಯ ಶಿಕ್ಷಣ ಇಲಾಖೆಯು 310 ಕೋ.ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಸರ್ಕಾರಿ ಆದೇಶ ಹೊರಡಿಸಿದೆ. ದಿ:16/04/07ರಂದು ಟೆಂಡರ್ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು. ಅಧ್ಯಕ್ಷರೆ, ನಾನು ಇದನ್ನು detail ಆಗಿ ಹೇಳಲಿಕ್ಕೆ ಹೋಗುವುದಿಲ್ಲ. Notification for land acquisition, 216 ಎಕರೆ 24 ಗುಂಟೆ was issued by KIADB on 27/02/2007. Notice inviting tenders published in paper was issued by PWD on 15/03/07. Tender submitted by Constractors on 04/06/07. Number of Contractors participated and quoted value M/S L & T 377 crores. M/S NCCL ನವರು 318 ಕೋ.ರೂ.ಗಳಿಗೆ ಬಿಡ್ ಮಾಡಿದ್ದಾರೆ. M/S IVRCL ರವರು 369 ಕೋ.ರೂ.ಗಳಿಗೆ ಬಿಡ್ ಮಾಡಿದ್ದಾರೆ. Work order was issued for lowest bidder M/S NCCL quoted value Rs.358 crores was reduced to 333 crores after negotiations and was awarded that is on 25/06/07. Agreement entered with the NCCL No.16 to 2007 and 2008 by PWD that is on 25/06/07. Total land acquired by KIADB is 216 acres. 216 ಎಕರೆಯನ್ನು ದಿ:23/07/07ರಲ್ಲಿ acquire ಮಾಡಿಕೊಂಡಿದ್ದಾರೆ. Mobilization advance ಅನ್ನು ಅವರು ಕೊಟ್ಟಿರುವುದು 29ನೇ ತಾರೀಖು. ಆದರೆ, ಇದರಲ್ಲಿ ಯಾವ ತರಾತುರಿಯನ್ನೂ ತೋರಿಸಿಲ್ಲ. ಆದರೆ, ಏನಾಗಿದೆ ಎಂದರೆ, ಅಷ್ಟರೊಳಗೆ ಸರ್ಕಾರ ಹೋಯಿತು. ಸರ್ಕಾರ ಹೊದ ನಂತರ, ಈ process ನಡೆಯುತ್ತಿದ್ದಾಗ ಈ ಸದನದಲ್ಲಿಯೇ ಮಾಧುಸ್ವಾಮಿಯವರು, ಅವರೆಲ್ಲ ಚರ್ಚೆ ಮಾಡುತ್ತಿದ್ದರು. ಅವರು ಇಲ್ಲಿ ಆ ಸಂದರ್ಭದಲ್ಲಿ, ಯಾವುದೋ ಒಂದು ಸಮಾಜ ಜಮೀನು ಕಳೆದುಕೊಳ್ಳುವ ರೀತಿಯಲ್ಲಿ ತೀರ್ಮಾನ ಮಾಡಲಿಕ್ಕೆ ಹೊರಟಿದ್ದೀರಿ ಎಂದು ಹೇಳಿದ್ದಾರೆ. ನಾನು ಆಗಲೂ ಹೇಳಿದೆ. ರಾಜಕೀಯಕ್ಕಾಗಿ ಕೆಲವರು ಈ ರೀತಿಯ ಕೆಟ್ಟ ಅಭಿಪ್ರಾಯ ಮೂಡಿಸಲಿಕ್ಕೆ ಹೊರಟಿದ್ದಾರೆಂದು ಹೇಳಿದ್ದೆ. Court ಗೆ ಹೋದವರು ಯಾರು? 176 ಎಕರೆ ಜಮೀನಿದ್ದಂಥ 80 ಜನರಲ್ಲಿ ಈಗಾಗಲೇ 30–35 ಜನರು ಹಣ ಪಡೆದಿದ್ದಾರೆ. ಈಗಾಗಲೇ ಹಣ ಅವರಿಗೆ ಸಂದಾಯವಾಗಿದೆ. ಕೆಲವರೆಲ್ಲ ಹಣ ಪಡೆಯಲಿಕ್ಕೆ ಹೋದರೆ, KIADB ಯಲ್ಲಿ ಹಣ ಕೊಡುವ ವಿಷಯದಲ್ಲಿ ಅವರಿಗೆ ನಿರಾಶೆ ಮಾಡಿ ಕಳುಹಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ರೈತರ್‍ಯಾರೂ Court ಗೆ ಹೋಗಿಲ್ಲ. ಸೋಮಶೇಖರ್ ಎನ್ನುವವರು Real Estate ಮಾಲೀಕರಾಗಿದ್ದು, ಇವರು ಬೆಂಗಳೂರಿನಲ್ಲಿ ವಾಸವಾಗಿದ್ದು ಇವರು Court ಗೆ ಹೋಗಿದ್ದಾರೆ. ಮುಖಂಡಯ್ಯ ಎನ್ನುವವರು ಬೆಂಗಳೂರಿನಲ್ಲಿ ವ್ಯಾಪಾರಸ್ಥರಾಗಿದ್ದು ಅವರು Court ಗೆ ಹೋದವರಾಗಿದ್ದಾರೆ. ವೀರಣ್ಣ, Depot Manager ಆಗಿ ಕೆಲಸ ಮಾಡುತ್ತಿದ್ದು, ಅವರ

ಕಡೆಯಿಂದ ಒಬ್ಬರು Court ಗೆ ಹೋಗಿದ್ದಾರೆ. ಮುಕ್ತಾಯಮ್ಮ ಎನ್ನುವವರ ಇಬ್ಬರ ಮಕ್ಕಳು ಇಬ್ಬರೂ Engineers ಆಗಿದ್ದು, ಅವರೂ ಬೆಂಗಳೂರಿನಲ್ಲಿದ್ದಾರೆ. ಅವರು Court ಗೆ ಹೋಗಿದ್ದಾರೆ. ಮೋಹನ್‌ದಾಸ್, ವ್ಯಾಪಾರಸ್ಥರಾಗಿದ್ದು ಇವರು ಚನ್ನಪಟ್ಟಣದವರಾಗಿದ್ದು, ಅವರು Court ಗೆ ಹೋಗಿದ್ದಾರೆ. ರೈತರಿಂದ ಯಾವುದೇ ರೀತಿ ವಿರೋಧ ಆ ಯೋಜನೆಯನ್ನು ತರುವುದಕ್ಕೆ ಇರಲಿಲ್ಲ. ನಿನ್ನೆ ಮುಖ್ಯಮಂತ್ರಿಯವರು ಇಲ್ಲಿ ಹೇಳಿದರು. ಇವತ್ತು land ಅನ್ನು acquire ಮಾಡುವುದು, land ಅನ್ನು acquire ಮಾಡಿ ಕೊಡುವ ಜವಾಬ್ದಾರಿ ಇದ್ದದ್ದು KIADB ಗೆ. PWD, Work Nodle Agnecy ಅಷ್ಟೇ. Land ಗೂ PWD ಯವರಿಗೂ ಸಂಬಂಧವಿಲ್ಲ. KIADB ಯವರು land ಅನ್ನು PWD ಗೆ ಕೊಟ್ಟ ನಂತರ, hand over ಮಾಡಿದ ನಂತರ, possession of the above land has been handed over free from all encumbrances ಎನ್ನುವ ನೋಟ್ ಅನ್ನು KIADB ಯವರು ವೈದ್ಯಕೀಯ ಇಲಾಖೆಗೆ ಕೊಟ್ಟಿದ್ದಾರೆ. ಅಲ್ಲಿಂದ ಅವರು PWD ಗೆ transfer ಮಾಡಿದ್ದಾರೆ. ಆ ಸಂದರ್ಭದಲ್ಲಿ ಆ land ಬಗ್ಗೆ ಯಾವುದೇ ರೀತಿಯ dispute ಇದೆ ಎನ್ನುವುದಾಗಲಿ ಅಥವಾ ಬೇರೆ ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲವೆನ್ನುವುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳುವುದೇನೆಂದರೆ, ನಿನ್ನೆ ಬಜೆಟ್ ಮೇಲಿನ ಉತ್ತರ ಕೊಡುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಸದನದ ಎಲ್ಲರ ಸಹಕಾರ ಬೇಕೆಂದು ಪದೇ ಪದೇ ಬಹುಶಃ ಅವರು ನೂರು ಬಾರಿ ಹೇಳಿರಬಹುದು ಮತ್ತು ನಾನು ಯಾವುದೇ ರೀತಿಯ ರಾಗ, ದ್ವೇಷ ಇಲ್ಲದಿರುವ ಸರ್ಕಾರವನ್ನು ಕೊಡಬೇಕೆಂದಿದ್ದೇನೆ, ನನ್ನ ಮೂಲ ಮಂತ್ರ ಅಭಿವೃದ್ಧಿ ಎನ್ನುವುದನ್ನು ಹೇಳಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ದಿವಸದಿಂದಲೂ ಇದನ್ನೇ ಹೇಳುತ್ತಿದ್ದಾರೆ. ದ್ವೇಷದ ರಾಜಕೀಯ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. PWD ಗೆ ಸೇರಿರುವ ಇಬ್ಬರು ಅಧಿಕಾರಿಗಳನ್ನು ನೀವೇನು Suspend ಮಾಡಿದ್ದೀರಿ, ಅದರ ಬಗ್ಗೆ ನಾನು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಯಾವುದೇ ರೀತಿಯ ತಪ್ಪುಗಳನ್ನು ಮಾಡಿಲ್ಲ. ಆದರೂ ಆ ಇಬ್ಬರು ಅಧಿಕಾರಿಗಳನ್ನು suspend ಮಾಡಿದ್ದೀರಿ. ನೀವು ಆ ರೀತಿ suspend ಮಾಡಬೇಕಾಗಿರುವುದಲ್ಲ. KIADB ಯಲ್ಲಾಗಿರುವ ತಪ್ಪಿನ ಬಗ್ಗೆ ಸರ್ಕಾರ ಯಾವುದೇ ರೀತಿಯ ಗಮನ ಕೊಡದೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು suspend ಮಾಡಿರುವುದು ಎಲ್ಲೋ ಒಂದು ಕಡೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ಅವರು ಕೆಲಸ ಮಾಡುವುದರಲ್ಲಿ ಮಾನಸಿಕ ಸ್ಥೈರ್ಯ ಕುಂದಿಸುವ ಕೆಲಸ ಆಗಿದೆ. Enquiry ಮಾಡಬೇಕೆಂದು ನೀವು ನಿನ್ನೆ

ತೀರ್ಮಾನ ಮಾಡಿದ್ದೀರಿ. ರೇವಣ್ಣನವರು ಕೇಳಿದ್ದರು ಅದಕ್ಕೋಸ್ಕರವಾಗಿ ಮುಖ್ಯ ಕಾರ್ಯದರ್ಶಿ ಮಟ್ಟದ ನಿವೃತ್ತ IAS ಅಧಿಕಾರಿಯಿಂದ ತನಿಖೆ ನಡೆಸುತ್ತೇವೆಂದು ನೀವು ನಿನ್ನೆ ತೀರ್ಮಾನ ಮಾಡಿದಿರಿ. ಇದರಲ್ಲೇನಾದರೂ ಅವ್ಯವಹಾರವಾಗಿದೆಯೇ? ಇದರಲ್ಲಿ ಯಾವುದೇ ರೀತಿಯ ಅವ್ಯವಹಾರವಾಗಿರುವುದಿಲ್ಲ. ಆಮೇಲೆ, ನಿನ್ನೆ ಮುಖ್ಯಮಂತ್ರಿಯವರು ಮಾತನಾಡುವ ಸಂದರ್ಭದಲ್ಲಿ ಯಾವುದೋ ಒಬ್ಬ ವ್ಯಕ್ತಿಗೆ 33 ಕೋ.ರೂ.ಗಳನ್ನು ಕೊಟ್ಟಿದೆ ಎಂದು ಹೇಳಿದ್ದೀರಿ. ಸರ್ಕಾರದ ಕ್ಯಾಬಿನೆಟ್‌ನಲ್ಲಿ discision ತೆಗೆದುಕೊಂಡು ಎರಡೂವರೆ ಕೋಟಿ ರೂಪಾಯಿಗಳವರೆಗೆ ಬಿಡುಗಡೆ ಮಾಡಬೇಕೆಂದರೆ Secretary Level ನಲ್ಲಿ ಮಾಡುತ್ತಾರೆಂದು ತೋರುತ್ತದೆ. Principal Secretary, PWD ಯವರು ಮಾಡುತ್ತಾರೆಂದು ತೋರುತ್ತದೆ. ಎರಡೂವರೆ ಕೋಟಿ ರೂಪಾಯಿಗಳವರೆಗೆ Finance Department ನಲ್ಲಿಯ Secretary/Principal Secretary ಯವರು ಬಿಡುಗಡೆ ಮಾಡಲು ಅವಕಾಶವಿದೆ. 5 ಕೋಟಿಗಿಂತ ಮೇಲ್ಪಟ್ಟ ಹಣ ಬಿಡುಗಡೆ ಮಾಡಬೇಕಾದರೆ, ಅದನ್ನು ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ ಇಡಬೇಕು. ಹಣವನ್ನು Finance Department ನಿಂದ ಏನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಕ್ಯಾಬಿನೆಟ್‌ನಿಂದಲೇ decision ಆಗಿ ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ಆರ್ಥಿಕ ಇಲಾಖೆಗೆ ಸರ್ಕಾರದ ಆದೇಶ ಹೊರಡಿಸಿದ್ದಾರೆ ಅದನ್ನು ದಿ:16/08/07ರಲ್ಲಿ ಟಿಪ್ಪಣಿಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ. ನಾನು ಇವೆಲ್ಲ detail ಆಗಿ ಓದುವುದಕ್ಕೆ ಹೋಗುವುದಿಲ್ಲ. ಇವೆಲ್ಲ
mobilization advances ಕೊಡುವುದಕ್ಕೆ ಕ್ಯಾಬಿನೆಟ್‌ನಲ್ಲಿಯೇ ತೀರ್ಮಾನ ಮಾಡಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಸರ್ಕಾರ ಹೋದ ನಂತರ ಆ ಕೆಲಸವನ್ನು ಮುಂದುವರಿಸುವುದಕ್ಕೆ ಒಬ್ಬ ಗುತ್ತಿಗೆದಾರರು ಆ ಸ್ಥಳಕ್ಕೆ ಹೋದಾಗ ಅಲ್ಲಿಯ ರೈತರು ಅವರಿಗೆ, ನಮಗೆ ಸಂಪೂರ್ಣವಾಗಿ ಹಣ ಕೊಟ್ಟಿಲ್ಲ, ಬಿಡುಗಡೆಯಾಗಿಲ್ಲ, ಹಣ ಕೊಟ್ಟ ನಂತರ ನೀವು ಕೆಲಸ ಮಾಡಿ ಎಂದು ಹೇಳಿದ್ದಾರೆ. ಅವರು 3–4 ಬಾರಿ ಅಲ್ಲಿ ಕೆಲಸ ಮಾಡಲು ಹೋಗಿ ಅಲ್ಲಿಯ ರೈತರಿಗೆ ಹಣ ಕೊಡದಿರುವ ಕಾರಣ ಅವರು ಕೆಲಸ ಮಾಡಲಿಕ್ಕೆ ಅವಕಾಶವಾಗಲಿಲ್ಲ. ನಂತರ, ಅವರು ಯಾರೋ ಒಬ್ಬರು ಗುತ್ತಿಗೆದಾರರಲ್ಲ. ಆ ಗುತ್ತಿಗೆದಾರ, ಕರ್ನಾಟಕದ ರಾಜ್ಯದಲ್ಲಿ 1000 ಕೋ.ರೂ.ಗೂ ಮಿಗಿಲಾಗಿ ಕೆಲಸವನ್ನೇನು ಮಾಡಿದ್ದಾರೆ, ಮೈಸೂರು–ಬೆಂಗಳೂರು ಕಾರಿಡಾರ್ ರಸ್ತೆಯ ಕೆಲಸದ ಗುರಿಯನ್ನು ಕೊಟ್ಟಿದ್ದನ್ನು ನಿಗದಿತ ಅವಧಿಯಲ್ಲಿ ಗುಣಾತ್ಮಕ ರೀತಿಯಲ್ಲಿ ಕೆಲಸ ಮಾಡಿದ್ದಾರೆ, ಅವರ ಯಾವುದೇ ರೀತಿಯ black mark ಗಳಿಲ್ಲ. ಮೈಸೂರು ಬೆಂಗಳೂರು ಕಾರಿಡಾರ್ ರಸ್ತೆಯನ್ನು ಅವರಿಗೇನು ನಿಗದಿತ ಸಮಯದ ಗುರಿ ಕೊಟ್ಟಿತ್ತು ಅದು ಗುಣಾತ್ಮಕ ರೀತಿಯಲ್ಲಿ ಕೆಲಸ ಮಾಡಿದ್ದಾರೆ ಆ ಗುತ್ತಿಗೆದಾರನ ಬಗ್ಗೆ, ಈ ಸರ್ಕಾರ ಬಂದ ನಂತರ ತಾವು ಎಲ್ಲೋ ಒಂದು ಕಡೆಗೆ, ಈ

ಯೋಜನೆಯಲ್ಲಿ ಆಗಬಾರದಂಥ ಅವ್ಯವಹಾರಗಳು ಆಗಿವೆ ಎನ್ನುವ ರೀತಿಯಲ್ಲಿ ಜನಗಳಿಗೆ ಅನುಮಾನ ಬರುವ ರೀತಿ ಈ ವಿಷಯ ಸಾರ್ವಜನಿಕವಾಗಿ ಪ್ರಸ್ತಾಪಿಸುತ್ತಿದ್ದೀರಿ. ಒಂದು ಕಡೆ ಸರ್ಕಾರ ಬಂದ ಹೊಸದರಲ್ಲಿ ರಾಮನಗರದಿಂದ ಬೇರೆ ಕಡೆಗೆ ಸ್ಥಳಾಂತರಿಸುತ್ತೇವೆ ಎನ್ನುವುದು, ಮತ್ತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು, ರಾಜೀವ ಗಾಂಧಿ ಯೂನಿವರ್ಸಿಟಿಯನ್ನು ಬಳ್ಳಾರಿಯಲ್ಲಿ ಸ್ಥಾಪಿಸುವುದಕ್ಕೆ ಮುಖ್ಯ ಮಂತ್ರಿಗಳನ್ನು ಒಪಿಸುತ್ತೇನೆಂದು ಬಳ್ಳಾರಿಯಲ್ಲಿ ಹೇಳಿಕೆ ಕೊಡುವುದು, ಈ ರೀತಿಯ ಹೇಳಿಕೆಗಳಿಂದ ಈಗಾಗಲೇ ನಾವೇನು ಹತ್ತು ವರ್ಷಗಳನ್ನು ಏನು ಸವೆಸಿದ್ದೇವೆ, ಇವತ್ತೇನು 333 ಕೋಟಿಯ ಕಾಮಗಾರಿಯನ್ನು ಆ ಗುತ್ತಿಗೆದಾರನಿಗೆ ಅವಾರ್ಡ್ ಮಾಡಿದ್ದೀರಿ, ಇನ್ನು ಆರು ತಿಂಗಳು ಒಂದು ವರ್ಷ ಮುಂದಕ್ಕೆ ಹಾಕಿದರೆ ಏನಾಗಬಹುದು? ಇವತ್ತು 333 ಕೋಟಿಗಳ ವೆಚ್ಚ 500 ಕೋಟಿಗೋ 550 ಕೋಟಿಗೋ ಹೋಗುತ್ತದೆ. ಇದರಿಂದ ಯಾರಿಗೆ ನಷ್ಟವಾಗುತ್ತದೆ? ಇಲ್ಲಿ 33 ಕೋಟಿ ಮೊಬಲೈಜೇಷನ್ ಫಂಡ್ಸ್ ಕೊಟ್ಟಿದ್ದೀರಿ, ಇದೇನು ವಿಶೇಷವಾದ ಪ್ರಕರಣವೆಂದು ಕೊಟ್ಟಿರುವುದಲ್ಲ. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಈ ರೀತಿಯ ಮೊಬಲೈಜೇಷನ್ ಫಂಡ್ಸ್ ಕೊಟ್ಟಿರುವ ಹಲವಾರು ಘಟನೆಗಳಿವೆ. ಜೊತೆಗೆ ನೀವೇನು ಮೊಬಲೈಜೇಷನ್ ಫಂಡ್ಸ್ 33 ಕೋಟಿ ಹಣ ಕೊಟ್ಟಿದ್ದೀರಿ, ಇದಕ್ಕೆ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡು ಅದರ ಆಧಾರದ ಮೇಲೆ ಕೊಟ್ಟಿದ್ದೀರಿ. ಅವರೇನು ಸಣ್ಣ ಪುಟ್ಟ ಗುತ್ತಿಗೆದಾರರಲ್ಲ. ಇದು ಆ ಭೂಮಿಯ ತೊಂದರೆಯಿಂದ ಕೆಲಸ ಮಾಡಲಿಕ್ಕೆ ತೊಂದರೆಯಾಯಿತು, ಇಲ್ಲಿ ಸಂಪೂರ್ಣವಾಗಿ ಹಣ ಕೊಡದೆ ತೊಂದರೆಯಾಯಿತು. ನಮ್ಮ ಕಾಲದಲ್ಲಿ KIADB ಅಧಿಕಾರಿಗಳಿಗೆ ಸೂಚನೆ ಕೊಟ್ಟೆವು. ಇವತ್ತೇನು ಅಲ್ಲಿ KIADB ನಲ್ಲಿ ಹಣ ಇದೆ, ಸಧ್ಯಕ್ಕೆ ತಾತ್ಕಾಲಿಕವಾಗಿ ಹಣ ಕೊಟ್ಟು ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಹಣ ಪಡೆದರಾಯಿತು, ಈಗ ಕೆಲಸ ನಿಲ್ಲಿಸುವುದು ಬೇಡ ಇದರಿಂದ ಅನಾವಶ್ಯಕವಾಗಿ ವೆಚ್ಚ ಹೆಚ್ಚಾಗುವುದಕ್ಕೆ ಅವಕಾಶ ಕೊಡುವುದು ಬೇಡ ಎನ್ನುವ ದೃಷ್ಟಿಯಿಂದ ಆ ಸಂದರ್ಭದಲ್ಲಿ ಹೇಳಿದೆವು. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರಗಳಿಗೆ ಅಸ್ಪದ ಕೊಟ್ಟಿಲ್ಲ. - ಇದರಲ್ಲಿ ಯಾವುದೇ ಇಲಾಖೆಯ ಅಧಿಕಾರಿಗಳು ಯಾರು ದುಡ್ಡು ಹೊಡೆಯುವುದಕ್ಕೆ ಮತ್ತೊಂದಕ್ಕೆ ಹೋಗಿರತಕ್ಕಂಥದ್ದಲ್ಲ. ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಇಲ್ಲಿ ಇದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ನಾನು ಇಲ್ಲಿರತಕ್ಕಂಥ ಎಲ್ಲಾ ಕಡತಗಳನ್ನು ಇಲ್ಲಿಂದಲೇ ತಮಗೆ ಕಳುಹಿಸಿ ಬಿಡುತ್ತೇನೆ. ಸರಕಾರದ ಆದೇಶಗಳು ಯಾವ್ಯಾವ ದಿನಾಂಕಗಳಲ್ಲಿ ಆಗಿದೆ, ಸಭೆಗಳು ಯಾವ ರೀತಿ ಮಾಡಿದ್ದೇವೆ, ಇದರ ಬಗ್ಗೆ ಸಂಪೂರ್ಣ ಮಾಹಿತಿ ನಿಮ್ಮ ಕಡೆಗೆ ತಲುಪಿಸುತ್ತೇವೆ. ಈಗಾಗಲೇ ನಿವೃತ್ತ IAS ಅಧಿಕಾರಿಯಿಂದ ಇದರ ಬಗ್ಗೆ ತನಿಖೆ ನಡೆಸುತ್ತೇವೆಂದು ಹೇಳಿದ್ದೀರಿ. ತನಿಖೆ ನಡೆಸಿ ತೊಂದರೆಯಿಲ್ಲ. ಇದಕ್ಕೆ ಯಾವ ರೀತಿಯಿಂದಲೂ ನಮ್ಮ ಅಭ್ಯಂತರವಿಲ್ಲ. ಇಲ್ಲಾಂದ್ರೆ ಇದಕ್ಕೆ ಸದನ ಸಮಿತಿ ರಚಿಸುತ್ತೀರಾ? ಸಂಪೂರ್ಣವಾದ

ವ್ಯವಹಾರಗಳೇನು ಆಗಿವೆ, ಇಲ್ಲಿರುವ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಿ, ಯಾವ್ಯಾವ ರೀತಿ ತೀರ್ಮಾನಗಳು ಆಗಿವೆ, ಇದರಲ್ಲಿ ಯಾವುದೇ ರೀತಿಯ ತಪ್ಪುಗಳು ಎಸಗಿದ್ದರೆ, ಅಂದಿನ ಮುಖ್ಯಮಂತ್ರಿಯಾಗಿ ನಾನು ನಿರ್ಧರಿಸಿದ್ದೆ, ಉಪ ಮುಖ್ಯಮಂತ್ರಿಯಾಗಿ ಇವತ್ತಿನ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದವರು ತೀರ್ಮಾನಿಸಿದ್ದಾರೆ. ಲೋಕೋಪಯೋಗಿ ಸಚಿವರಾಗಿದ್ದ ಮಾನ್ಯ ರೇವಣ್ಣನವರು ಮಾಡಿದ್ದಾರೆ. ಈ ತೀರ್ಮಾನಕ್ಕೆ ಎಲ್ಲಾದರೂ ಒಂದು ಕಡೆ ಅನುಮಾನಕ್ಕೆ ಆಸ್ಪದವಾಗುವ ರೀತಿಯಲ್ಲಿ, ಇಲ್ಲಾ ಸರ್ಕಾರಕ್ಕೆ ಯಾವ ರೀತಿಯಲ್ಲಾದರೂ ನಷ್ಟವನ್ನುಂಟು ಮಾಡುವ ರೀತಿಯಲ್ಲಿ ತೀರ್ಮಾನಗಳಾಗಿದ್ದರೆ, ನೀವು ಸದನ ಸಮಿತಿ ರಚಿಸಿ, ಸದನ ಸಮಿತಿ ತೀರ್ಮಾನ ಕೊಡುತ್ತದೆ, ಸದನ ಸಮಿತಿ ಕೊಡುವ ತೀರ್ಮಾನಕ್ಕೆ ನಾನು ತಲೆ ಬಾಗಲಿಕ್ಕೆ ಸಿದ್ಧನಿದ್ದೇನೆ. ನಮ್ಮ ಉದ್ದೇಶ ಏನಿತ್ತು ಎಂದರೆ, ಹತ್ತು ವರ್ಷಗಳ ಕಾಲ ಈ ಒಂದು ವಿಶ್ವವಿದ್ಯಾನಿಲಯದ ಸೌಲಭ್ಯವನ್ನು ಕೊಡುವುದರಲ್ಲಿ ಕಾಲವನ್ನು ಏನು ಕಳೆದಿದ್ದೇವೆ, ಇವತ್ತು ಮತ್ತೆ ಕೆಲಸ ನಿಲ್ಲಿಸುವುದಕ್ಕೆ ನೀವು ಆಸ್ಪದ ಕೊಡುವ ಮೂಲಕ ಈಗಾಗಲೇ ಕೇಂದ್ರ ಸರ್ಕಾರದಿಂದ 80 ಕೋಟಿ ಹಣ ತರುವುದಕ್ಕೆ ಪ್ರಯತ್ನ ಪಟ್ಟು ಆ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ, ಆ ಹಣ ಮತ್ತೆ ವಾಪಸ್ ಕೇಂದ್ರ ಸರ್ಕಾರಕ್ಕೆ ಹೋಗುವುದು ಬೇಡ. ಇವತ್ತು ಪ್ರತಿಯೊಂದು ಕೆಲಸಕ್ಕೆ ನಾವು ಹಣದ ಕೊರತೆಯನ್ನು ಕಾಣುತ್ತಿದ್ದೇವೆ. ರಾಜ್ಯಪಾಲರ ಆಡಳಿತ ಇದ್ದಂಥ ಕಾಲದಲ್ಲಿ 43 ಕೋಟಿ ರೂಪಾಯಿಗಳನ್ನು ಈ ವರ್ಷಕ್ಕೆ ಬಜೆಟ್‌ನಲ್ಲಿ ಏನು ಹಣ ಇಟ್ಟಿದ್ದಾರೆ, ಅಂದಿನ ಉಪ ಮುಖ್ಯಮಂತ್ರಿಗಳಾಗಿದ್ದವರೇ ಕಳೆದ ಬಜೆಟ್‌ನಲ್ಲಿ 43 ಕೋಟಿ ಹಣವನ್ನು ಇಟ್ಟಿದ್ದರು. ಈ ಹಣ ಖರ್ಚು ಮಾಡುವುದಕ್ಕೆ ಈ ಕೆಲಸ ನಿಲ್ಲಿಸುವ ಮೂಲಕ ಪುನಃ ಇನ್ನೊಂದು ಹೊಸದಾಗಿ ಪ್ರೋಸೆಸ್‌ನ್ನು ಪ್ರಾರಂಭಿಸುವ ಮೂಲಕ, ಆ ದಿವಸ ಒಂದು ಟನ್ ಸ್ಟೀಲ್‌ಗೆ 32 ಸಾವಿರ ಬೆಲೆ ಏನು ಇತ್ತು ಇವತ್ತೇನು 50, 52 ಸಾವಿರ ರೂಪಾಯಿ ಆಗಿದೆ. ಹೀಗಾಗಿ ಈ ಕಾಮಗಾರಿಗಳ ವೆಚ್ಚಕ್ಕೆ ಹೆಚ್ಚಿನ ರೀತಿಯಲ್ಲಿ, ನಾವೆಲ್ಲ ಪಾಲುದಾರರಾಗಬೇಕಾಗುತ್ತದೆ. ಆ ದೃಷ್ಟಿಯಿಂದ ನೀವು ಯಾವುದೇ ರೀತಿಯಲ್ಲಿ ತನಿಖೆ ಮಾಡಿ. ಆದರೆ, ಕೆಲಸ ನಿಲ್ಲಿಸುವುದಕ್ಕೆ ದಯವಿಟ್ಟು ಆಸ್ಪದ ಕೊಡಬೇಡಿ. ಆ ಭಾಗದ ಜನರಲ್ಲಿ ಎಲ್ಲೋ ಒಂದು ಕಡೆ ಯಾವುದೋ ಒಂದು ಗುರಿಯನ್ನಿಟ್ಟುಕೊಂಡು ಈ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆನ್ನುವ ಅನುಮಾನಗಳಾಗಲಿ ಆ ಭಾಗದ ಜನರಿಗೆ ಆಕ್ರೋಶ ಬರುವುದಕ್ಕೆ ಅವಕಾಶ ಕೊಡಬಾರದು ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ. ನನಗೆ ಬಂದಂಥ ಮಾಹಿತಿ ಪ್ರಕಾರ ನಿನ್ನೆ ಈಗಾಗಲೇ ಹೈಕೋರ್ಟಿನಲ್ಲಿದ್ದಂಥ ಸ್ಟೇ ಏನು ಇದೆ ಅದು ಸಂಪೂರ್ಣ ವೆಕೇಟ್ ಆಗಿದೆ, ಕೆಲಸ ಪ್ರಾರಂಭೀಸುವುದಕ್ಕೆ ಯಾವುದೇ ರೀತಿಯ ತಡೆಗಳಿಲ್ಲ, ಈ ಕೆಲಸ ಪ್ರಾರಂಭೀಸುವುದಕ್ಕೆ ಚಾಲನೆ ಕೊಡಿ. ಯಾವ ದಿನದಿಂದ ಕೆಲಸ ಪ್ರಾರಂಭವಾಗುತ್ತದೆ? ಅದಕ್ಕೆ ಸರಕಾರ ಸರಿಯಾದ ನಿಖರವಾದ ಉತ್ತರವನ್ನು ಸದನದ ಮುಂದೆ ಇಡಬೇಕು, ನೀವೇನು ತನಿಖೆಯನ್ನು ನಿವೃತ್ತ IAS

ಅಧಿಕಾರಿಗಳಿಂದ ಮಾಡಿಸುತ್ತೀರಿ, ಇನ್ನೊಂದು ಬೇಕಾದರೆ ಸದನದ ಸಮಿತಿ ರಚಿಸಿ. ಮತ್ತೆ ಇನ್ನು ಯಾವುದಾದರೂ ರೀತಿಯಲ್ಲಿ ತನಿಖೆ ಮಾಡಬೇಕೆ? ಅದಕ್ಕೂ ನಾವು ತಯಾರಿದ್ದೇವೆ. ಆದುದರಿಂದ, ಈ ವಿಷಯದಲ್ಲಿ ಸಾರ್ವಜನಿಕವಾಗಿ ಏನೋ ಒಂದು ಕೆಟ್ಟ ತೀರ್ಮಾನಗಳನ್ನು ಮಾಡಿದ್ದೇವೆ ಎನ್ನುವ ಅನುಮಾನಗಳು ಬರಬಾರದು ಎಂದು ನಾನು ಈ ಸದನದ ಮುಂದೆ ಸರಕಾರದ ಗಮನಕ್ಕೆ ತರಲಿಕ್ಕೆ ಬಯಸಿ, ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ, ಈಗಾಗಲೇ ಹಲವಾರು ಸದಸ್ಯರುಗಳು ಅವರವರ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಅವರ ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ಗಮನ ಸೆಳೆದಿದ್ದಾರೆ. ಆ ದೃಷ್ಟಿಯಿಂದ ಇಲ್ಲಿರತಕ್ಕಂಥ ಎಲ್ಲಾ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಬಾರದು ಎನ್ನುವ ನಿರ್ಧಾರಕ್ಕೆ ಬಂದು, ಏಕೆಂದರೆ ಈ ದಿವಸ ಸದನ ಮುಗಿಯಬಹುದು. ಆ ದೃಷಿಯಿಂದ ಇವತ್ತು ಅಧ್ಯಕ್ಷರು ಈ ವಿಷಯ ಪ್ರಸ್ತಾಪಿಸಲಿಕ್ಕೆ ನನಗೇನು ಅವಕಾಶ ಕೊಟ್ಟರು ಅದನ್ನು ದುರುಪಯೋಗಪಡಿಸಿಕೊಳ್ಳಬಾರದು ಎನ್ನುವ ದೃಷ್ಟಿಯಿಂದ ನಾನು ಕಟ್‌ಶಾರ್ಟ್ ಮಾಡಿದ್ದೇನೆ. ಕೆಲಸ ಯಾವಾಗ ಪ್ರಾರಂಭಿಸುತ್ತೀರಿ ಎನ್ನುವುದನ್ನು ನಿಖರವಾಗಿ ಹೇಳಬೇಕು. ಆ ಅಧಿಕಾರಿಗಳು ಏನು ತಪ್ಪು ಮಾಡಿಲ್ಲ. ಮಾಹಿತಿಗಳ ಪ್ರಕಾರ ಹೇಳುವುದಾದರೆ, ಇವತ್ತು ಅನ್ಯಾಯವಾಗಿ ನಿರಪರಾಧಿ ಅಧಿಕಾರಿಗಳಿಗೆ ಸಸ್‌ಪೆನ್ಸ್‌ನ್ ಏನು ಮಾಡಿದ್ದೀರಿ, ಅದನ್ನೆ ಇವತ್ತು ರೀವೋಕ್ ಮಾಡುವುದಕ್ಕೆ ಸದನದಲ್ಲಿ ನಮ್ಮ ಬೇಡಿಕೆಯನ್ನು ತಾವು ಗಮನಿಸಬೇಕೆಂದು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನಕ್ಕೆ ತಂದು ನನ್ನ ಮಾತು ಮುಗಿಸುತ್ತೇನೆ. ಅಧ್ಯಕ್ಷರೆ ನಿಮಗೆ ನನ್ನ ವಂದನೆಗಳು.

ಶ್ರೀ ಡಿ.ಕೆ.ಶಿವಕುಮಾರ್(ಕನಕಪುರ):- ನಾನು ರಾಜೀವ್‌ಗಾಂಧಿ ಯೂನಿವರ್ಸಿಟಿಯಲ್ಲಿ ಸೆನೆಟ್ ಮೆಂಬರ್ ಆಗಿದ್ದವನು. ಒಂದು ಎರಡು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ. ಸರಕಾರ ಬಂದ ತಕ್ಷಣ ನಮ್ಮ ರಾಮಚಂದ್ರೇಗೌಡರು ಏಕೋ ಟ್ರ್ಯಾಕನ್ನೆ ಚೇಂಜ್ ಮಾಡುತ್ತಿದ್ದಾರೆ. ಈ ಸಂಸ್ಥೆಗೆ ನಾವು ಗೌರವ ಕೊಡಬೇಕು. ಅವರು ಅಲ್ಲಿ ಕುಳಿತುಕೊಳ್ಳಬಹುದು, ನಾವು ಇಲ್ಲಿ ಕುಳಿತುಕೊಳ್ಳಬಹುದು. ಇನ್ನೊಬ್ಬರು ಮತ್ತೊಬ್ಬರು ಕುಳಿತುಕೊಳ್ಳಬಹುದು, ಇದೆಲ್ಲಾ ಬದಲಾವಣೆಯಾಗುತ್ತದೆ. ಆದರೆ, ಸರಕಾರ ಬಂದಂಥ ಸಂದರ್ಭದಲ್ಲಿ, ಕೆಲ ಸರ್ಕಾರಗಳು ತೀರ್ಮಾನ ಮಾಡಿದಾಗ ಒಬ್ಬರ ಕಾಲದಲ್ಲಿ ಆಗಿರುವ ತೀರ್ಮಾನವನ್ನು ಬದಲಾಯಿಸುವುದಿದೆಯಲ್ಲ ಅದು ಆ ಸಂಸ್ಥೆಗೆ ಪ್ರಜಾಪ್ರಭುತ್ವಕ್ಕೆ ದೊಡ್ಡ ಅವಮಾನ. ಹಿಂದೆ ಬೆಂಗಳೂರಿನಲ್ಲಿ ರಾಜೀವ ಗಾಂಧಿ ಯೂನಿವರ್ಸಿಟಿ ಆಗಬೇಕೆಂದು act ಆಗಿತ್ತು. ಇದು ರಾಮನಗರಕ್ಕೆ ಏತಕ್ಕೆ ಹೋಯಿತು? ರಾಮನಗರಕ್ಕೆ ಹೋಗಬೇಕಾದರೆ, ತಮ್ಮ ಸರ್ಕಾರಕ್ಕೆ ಹಿಂದೆ ಇದ್ದ ಸರ್ಕಾರಕ್ಕೆ ಇವತ್ತಿನ ಸರಕಾರಕ್ಕೆ ನಿಮಗೆ ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ನಾನು ಹೆಚ್ಚಿನ ಶಕ್ತಿಕೊಡುತ್ತೇನೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಎಸ್.ಎಂ.ಕೃಷ್ಣ ರವರು ಆ ವರದಿಯನ್ನು

ತಂದರು. ಕುಮಾರಸ್ವಾಮಿಯವರು ಕೂಡ ಆ ವರದಿಗೆ ಶಕ್ತಿ ಕೊಡಬೇಕೆಂದರು. ರಾಮನಗರ ಜಿಲ್ಲೆ ಪ್ರಾರಂಭಿಸಿದ ಮೇಲೆ ಎರಡು ತಾಲ್ಲೂಕುಗಳು, ಒಂದು ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳು ಇವೆರಡು ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿವೆ. ಕರ್ನಾಟಕ ಓಪನ್ ಯೂನಿವರ್ಸಿಟಿ ಮೈಸೂರಿನಲ್ಲಿದೆ, ಅಗ್ರೀಕಲ್ಚರ್ ಯೂನಿವರ್ಸಿಟಿ ಧಾರವಾಡದಲ್ಲಿದೆ, ಹಿಂದೆ ನಾವು ಹೆಣ್ಣು ಮಕ್ಕಳ ಯೂನಿವರ್ಸಿಟಿಯನ್ನು ಬಿಜಾಪುರದಲ್ಲಿ ಮಾಡಿದ್ದೇವೆ. ಈಗ ತಾವು ಬಜೆಟ್‌ನಲ್ಲಿ, ತೋಟಗಾರಿಕೆ ಯೂನಿವರ್ಸಿಟಿಯನ್ನು ಬಾಗಲಕೋಟೆಯಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ, ಟೆಕ್ನಿಕಲ್ ಯೂನಿವರ್ಸಿಟಿ ಬೆಳಗಾಂ ನಲ್ಲಿ, ಕನ್ನಡ ಯೂನಿವರ್ಸಿಟಿ ಶಿವಮೊಗ್ಗದಲ್ಲಿ, ವೆಟನರಿ ಯೂನಿವರ್ಸಿಟಿ ಬೀದರ್‌ನಲ್ಲಿ, ತುಮಕೂರು ಹಾಗೂ ಮೈಸೂರುಗಳಲ್ಲಿ ರೆಗ್ಯೂಲರ್ ಯೂನಿವರ್ಸಿಟಿಗಳು ಪ್ರಾರಂಭವಾಗಿವೆ. ಹೀಗೆ ಎಲ್ಲಾ ಕಡೆ ಷೇರು ಆಗಬೇಕೆನ್ನುವ ದೃಷ್ಟಿಯಿಂದ, ಇದು ಹಿಂದುಳಿದ ತಾಲ್ಲೂಕುಗಳಾಗಿ ಸೇರಿದ್ದರಿಂದ ಹೊಸ ಜಿಲ್ಲೆಯಾಗಿದ್ದರಿಂದ ರಾಮನಗರದಲ್ಲಿ ಆಗಬೇಕೆಂದು ನಾನು ಕೂಡ ಯೂನಿವರ್ಸಿಟಿಯಲ್ಲಿ ಒಂದು ನಿರ್ಣಯ ಮಾಡಿಸಿದೆ. ಇಲ್ಲಿ ಆಗಬಾರದು ಏಕೆಂದರೆ, ನಾನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ನಮ್ಮ ಸರ್ಕಾರ ಇದ್ದಾಗ ಕೆಂಗೇರಿಯಲ್ಲಿ ಸುಮಾರು 70 ಎಕರೆ ಜಮೀನು, 57 ಎಕರೆ ಜಮಿನು ನಾವು ಕೊಟ್ಟಿದ್ದೆವು. ಅವರಿಗೆ ಜಮೀನನ್ನು ಹ್ಯಾಂಡ್ ಓವರ್ ಮಾಡಿದ್ದೆವು. ಬೇರೆ ಬೇರೆ ವಿಚಾರಗಳು ಇದ್ದಂಥ ಸಂದರ್ಭದಲ್ಲಿ ಕೊನೆಗೆ ಇಲ್ಲಿ ಆಗಿದೆ. ನಮ್ಮ ಕ್ಷೇತ್ರದಲ್ಲಿಯೇ ಆಗಬೇಕೆಂಬುದು ಮುಖ್ಯಮಂತ್ರಿಯವರದು ಆಗಿರುತ್ತದೆ. ಇದು quite natural ರಾಮನಗರದಲ್ಲಿಯೇ ಆಗಬೇಕೆಂಬ ಮಾನ್ಯ ಆಚಾರ್ಯರವರೂ ಕೂಡ ಈ ಅಸೆಂಬ್ಲಿಯಲ್ಲಿ ಬಿಲ್ ತೆಗೆದುಕೊಂಡು ಬಂದರು. A bill has been passed here. ಇಲ್ಲಿ ಬಿಲ್ ಪಾಸ್ ಮಾಡಿದ ನಂತರ ಕೊನೆಗೆ ಅದು ರಾಮನಗರಕ್ಕೆ ಶಿಫ್ಟ್ ಆಯಿತು. ನಮಗೆ ಒಪ್ಪಿಗೆ ಇದೆಯೋ ಅಥವಾ ಇಲ್ಲವೋ ಅದು ಬೇರೆ, ಏಕೆಂದರೆ, ರಾಜಕಾರಣದಲ್ಲಿ ಬೇಕಾದಷ್ಟು ಡಿಫರೆನ್ಸ್ ಇರುತ್ತದೆ. ಆದರೆ, ಇದೊಂದು ಒಳ್ಳೆಯ ಕೆಲಸವಾಗಿರುವುದರಿಂದ ನಾವು ಇದಕ್ಕೆ ಒಪ್ಪಿದೆವು. ಗುತ್ತಿಗೆದಾರರ ಬಗ್ಗೆ ಮತ್ತು ದುಡ್ಡು, ಡೆಫಾಸಿಟ್ ಕೊಟ್ಟಿರತಕ್ಕಂಥದ್ದರ ಬಗ್ಗೆ ಮತ್ತೊಂದು ಕಡೆ ಚರ್ಚೆ ಮಾಡಿ. ಆದರೆ, ಮೂಲಭೂತವಾಗಿ ನೀವು ಬುಡಕ್ಕೆ ಕೈ ಹಾಕುವುದಕ್ಕೆ ಹೋಗಿರತಕ್ಕಂಥದ್ದು ಬಹಳ ದೊಡ್ಡ ಆಘಾತವನ್ನು ಉಂಟು ಮಾಡುತ್ತದೆ. ಇದನ್ನು ಶಿಫ್ಟ್ ಮಾಡುವುದಕ್ಕೆ ಚಿಂತೆ ಮಾಡಿದರೆ ರಾಮನಗರ ಜಿಲ್ಲೆಯಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇರತಕ್ಕಂಥ ಜನರ್‍ಯಾರು ನಿಮ್ಮನ್ನು ಕ್ಷಮಿಸುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಶಿಫ್ಟ್ ಮಾಡುವುದಿಲ್ಲವೆಂದು ಈಗಾಗಲೇ ಹೇಳಲಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್:- ಶಿಫ್ಟ್ ಮಾಡುವುದಕ್ಕೆ ಚಿಂತನೆ ನಡೆದಿತ್ತಲ್ಲವೆ? ಆಯಿತು. ನೀವು ಶಿಫ್ಟ್ ಮಾಡುವುದಿಲ್ಲವೆಂದರೆ...

(ಗೊಂದಲ)

ಉಪಾಧ್ಯಕ್ಷರು:- ಈಗ ಮಾನ್ಯ ಲೋಕೋಪಯೋಗಿ ಸಚಿವರು ಉತ್ತರ ಕೊಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬಹಳ ದೀರ್ಘವಾಗಿ ಮತ್ತು ಆಳವಾಗಿ ಅಭ್ಯಾಸ ಮಾಡಿಕೊಂಡು ಮಾಜಿ ಮುಖ್ಯಮಂತ್ರಿಗಳು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಇವರೂ ಕೂಡ ಅದಕ್ಕೆ ವಿರೋಧ ಇದೆ ಹೇಳಿದರು. ಆದರೆ, ultimately ಅವರ ಜಿಲ್ಲೆಗೆ ಆಗಬೇಕಾಗಿದೆ. ಈಗ ಅವರು ಅದೇ ಜಿಲ್ಲೆ ಮತ್ತು ಇವರೂ ಕೂಡ ಅದೇ ಜಿಲ್ಲೆಯವರಾಗಿದ್ದಾರೆ. ನಮ್ಮಲ್ಲಿ ಉರ್ದುವಿನಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, "ತೇರಾಬಿ ಮೇರಾ, ಮೇರಾಬಿ ಮೇರಾಚ್ ಹೈ' ಎಂದು ಹೇಳುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಹೈಕೋರ್ಟ್‌ನಿಂದ ಕೂಡ ಒಂದು ತೀರ್ಮಾನ ಬಂದಿದೆ. ಲ್ಯಾಂಡ್ ಅಕ್ವಿಜೇಷನ್‌ಗೆ ಏನು ತಕರಾರು ಇಲ್ಲ. Whatever the Government has taken the decision it is right ಎಂದು ಹೇಳಲಾಗಿದೆ. ಆದ್ದರಿಂದ, ತಾವು ದಯವಿಟ್ಟು ರೆಸ್ಟೋರ್ ಮಾಡಿ ಆದಷ್ಟು ಬೇಗ ತಮ್ಮ ಮುಖಂಡತ್ವದಲ್ಲಿ ಇಬ್ಬರೂ ಸೇರಿ ಕೆಲಸ ಪ್ರಾರಂಭ ಮಾಡಿ. ಮತ್ತೆ ನಾವಿಬ್ಬರು ಮತ್ತು ಆ ಜಿಲ್ಲೆಯವರೆಲ್ಲ ಬಂದು ತಮಗೆ ಜೈಕಾರ ಹಾಗೂ ಹಾರ ಹಾಕಿ ಸ್ವಾಗತ ಮಾಡುತ್ತೇವೆ. ಆದಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡಿಸುವಂಥ ಕೆಲಸವನ್ನು ತಾವು ಪ್ರಾರಂಭ ಮಾಡಬೇಕು. ರಾಜಕಾರಣದಲ್ಲಿ ಅವೆಲ್ಲಾ ಇದ್ದೇ ಇರುತ್ತದೆ. ಅದನ್ನು ನೀವು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನಾವು ನಿಲ್ಲಿಸಬೇಕೆಂದರೆ ಅದು ಆಗದೇ ಇರತಕ್ಕಂಥ ವಿಚಾರ. ಅದು ರಾಜಕಾರಣವಾಗಿರುತ್ತದೆ. ತಾವು ದಯವಿಟ್ಟು ಆದಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡಿಸಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಅಲ್ಲಿಂದ ಬೇರೆ ಕಡೆಗೆ ಶಿಫ್ಟ್ ಮಾಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಡಾ:ಹೆಚ್.ಸಿ.ಮಹದೇವಪ್ಪ (ಟೀನರಸಿಪುರ):- ಮಾನ್ಯ ಅಧ್ಯಕ್ಷರೆ, 1996ನೇ ಇಸವಿಯಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪನೆ ಆದಾಗ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದರು. ಅವರ ಸಚಿವ ಸಂಪುಟದಲ್ಲಿ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯಾಗಿದ್ದೆ. ಆ ಸಂದರ್ಭದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಅನೇಕ ಆರೋಗ್ಯ ಚಟುವಟಿಕೆಗಳಿಗೆ ಭಾಗಿಯಾಗಿರತಕ್ಕಂಥ ಹೆಲ್ತ್ ಅಂಡ್ ಪ್ಯಾರಾಮೆಡಿಕಲ್ ಕಾರ್ಯಕ್ರಮಗಳು ರಾಜ್ಯಾದ್ಯಂತ ಹೆಚ್ಚಾಗಿ ಆಗುತ್ತಿದ್ದವು. ಇದನ್ನು ಮನಗೊಂಡು ಅಂದಿನ ಸರ್ಕಾರದಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾಗ ಮತ್ತು ಸನ್ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ ಒಂದು ತೀರ್ಮಾನ ಮಾಡಿದ್ದೆವು. ಬೇರೆ ಬೇರೆ ವಿಶ್ವ ವಿದ್ಯಾಲಯಗಳಲ್ಲಿ ಆರೋಗ್ಯ ವಿದ್ಯಾ ಇಲಾಖೆಗಳು ಸೇರಿ ಹೋಗುವುದಕ್ಕಿಂಥ ಹೆಚ್ಚಾಗಿ

ಆರೋಗ್ಯ ವಿಭಾಗಕ್ಕೆ ಅದನ್ನು ಸ್ಟ್ರೀಮ್‌ಲೈನ್, ರೆಗ್ಯುಲೇಟ್ ಮಾಡುವುದಕ್ಕೆ ಮತ್ತು ಅದನ್ನು ಅಪ್‌ಡೇಟ್ ಮಾಡುವುದಕ್ಕೆ ಅವಕಾಶ ಆಗಲೆಂದು 1996ನೇ ಇಸವಿಯಲ್ಲಿ ಆರೋಗ್ಯ ವಿಶ್ವ ವಿದ್ಯಾಲಯವನ್ನು ಪ್ರತ್ಯೇಕವಾಗಿ ಮಾಡಿ ಎಲ್ಲಾ ಆರೋಗ್ಯ ಚಟುವಟಿಕೆಗಳನ್ನು ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಕಾಪಾಡಿಕೊಳ್ಳುವುದಕ್ಕೋಸ್ಕರ 1996ರಲ್ಲಿ ಒಂದು ವಿಶ್ವ ವಿದ್ಯಾನಿಲಯ ಸ್ಥಾಪನೆ ಆಯಿತು. ಆಗ ಸ್ಥಾಪನೆಯಾದಂಥ ಸಂದರ್ಭದಲ್ಲಿ ಈ ವಿಶ್ವ ವಿದ್ಯಾಲಯ ಮೈಸೂರಿನಲ್ಲಿರಬೇಕೆಂದು ತೀರ್ಮಾನವಾಗಿತ್ತು. ಕಾರಣಾಂತರಗಳಿಂದ ಅದು ಬೆಂಗಳೂರಿನಲ್ಲಿ ಇರಲೆಂದು ತೀರ್ಮಾನವಾಗಿತ್ತು. ಏಕೆಂದರೆ, ಉತ್ತರ ಭಾಗದ ಜನರು ಅಲ್ಲಿಂದ ಇಲ್ಲಿಗೆ ಬಂದು ಇಲ್ಲಿಂದ ಮತ್ತೆ ಮೈಸೂರಿಗೆ ಹೋಗುವುದಕ್ಕೆ ಅನಾನುಕೂಲವಾಗುತ್ತದೆಂದು ಮೈಸೂರಿನಲ್ಲಿ ಪ್ರಾರಂಭ ಮಾಡಬೇಕೆಂದು ಇದ್ದರೂ ಕೂಡ ಮೈಸೂರಿನಿಂದ ಬೆಂಗಳೂರಿನಲ್ಲಿಯೇ ಆಗಬೇಕೆಂದು ಆ ದಿವಸ ಸಚಿವಸಂಪುಟದಲ್ಲಿ ತೀರ್ಮಾನವಾಯಿತು. ಆನಂತರವಾದಂಥ ಬೆಳವಣಿಗೆ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳು ಎಲ್ಲಾ ವಿವರಣೆಯನ್ನು ಕೊಟ್ಟಿದ್ದಾರೆ. ಸಚಿವ ಸಂಪುಟದಲ್ಲಿ ಒಂದು ತೀರ್ಮಾನವಾದಂಥ ಸಂದರ್ಭದಲ್ಲಿ ರಾಜ್ಯದ ಒಟ್ಟಾರೆ ಅಭಿವೃದ್ಧಿ ಮತ್ತು ಹಿತವನ್ನು ಗಮನಕ್ಕೆ ತೆಗೆದುಕೊಂಡಾಗ ಅದು ಯಾವುದೇ ಪಕ್ಷದ ಸರ್ಕಾರ ಇರಲಿ ಒಂದು ಸರ್ಕಾರ ಮಾಡಿದರೆ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿರುವಂಥದ್ದನ್ನು ಮತ್ತೆ ಪದೇಪದೇ ಬದಲಾವಣೆ ಮಾಡದೆ ಸರ್ಕಾರಗಳು ಈ ರೀತಿಯ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತವಾಂಥ ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಪದೇಪದೇ ಅದನ್ನು ಬದಲಾವಣೆ ಮಾಡುವುದಕ್ಕೆ ಕೈ ಹಾಕದೇ...

ಅಧ್ಯಕ್ಷರು:- ಬದಲಾವಣೆ ಮಾಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಡಾ:ಹೆಚ್.ಸಿ.ಮಹದೇವಪ್ಪ:- ಈಗಾಗಲೇ ಈ ಮನೆಯಲ್ಲಿ ಒಂದು ನಿರ್ಣಯ ಮಾಡಿರುವಂಥದ್ದಕ್ಕೆ ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಆ ವಿಶ್ವ ವಿದ್ಯಾಲಯ ಸ್ಥಾಪನೆಯಾಗುವುದಕ್ಕೆ ನಾವು ಕಾರಣೀಭೂತರು ಮತ್ತೆ ಅದನ್ನು ಸದುದ್ದೇಶದಿಂದ ಮಾಡಲಾಗಿತ್ತು. ಈ ಊರಿಗೆ ಅವರಿಗೆ ಬೇಕೆಂದು ಮತ್ತು ಇಲ್ಲಿ ರಾಜಕೀಯ ಮಾಡಬೇಕೆಂದು ಅಥವಾ ಅಲ್ಲಿ ಎಸ್ಟೇಟ್ ಹಿಡಿಯಬೇಕೆಂಬ ಯಾವ ಉದ್ದೇಶವೂ ಕೂಡ ಆಗ ಇರಲಿಲ್ಲ. ಆದ್ದರಿಂದ, ಇಂಥ ಒಂದು ಸಂಗತಿಗಳಿಗೆ ಅವಕಾಶ ಕೊಡಬಾರದು. ಸಚಿವ ಸಂಪುಟದ ತೀರ್ಮಾನ ಯಾವತ್ತೂ ಕೂಡ overall interst of the State ಆಗಿರುತ್ತದೆ. ಆದ್ದರಿಂದ, ಇದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ರೇಣುಕಾಚಾರ್ಯ(ಹೊನ್ನಾಳಿ):- ಮಾನ್ಯ ಅಧ್ಯಕ್ಷರೆ, ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಹೊಸ ರಾಜ್ಯದ ವಿದ್ಯಾರ್ಥಿಗಳು ಇವತ್ತು ಬೆಂಗಳೂರಿನಲ್ಲಿರತಕ್ಕಂಥ ರಾಜೀವ್ ಗಾಂಧಿ ವಿಶ್ವ ವಿದ್ಯಾನಿಲಯವನ್ನು ದಿಢೀರನೆ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಕುಮಾರ ಸ್ವಾಮಿಯವರು ನಿರ್ಧಾರ ತೆಗೆದುಕೊಂಡು ಬದಲಾವಣೆ ಮಾಡಿದರು. ಇವತ್ತಿನದಿವಸ ಹತ್ತಾರು ವಿದ್ಯಾ ಸಂಸ್ಥೆಗಳನ್ನು ನಾವೂ ಸಹ ನಡೆಸುತ್ತೇವೆ. ಬೆಂಗಳೂರಿಗೆ ಬರಬೇಕೆಂದು ವಿದ್ಯಾರ್ಥಿಗಳು ನಮ್ಮ ಹತ್ತಿರ ಬಂದು ಕಣ್ಣೀರು ಹಾಕುತ್ತಿದ್ದಾರೆ. ಮತ್ತೆ ಈಗ ರಾಮನಗರಕ್ಕೆ ಹೋಗಬೇಕಾಗುತ್ತದೆ. ಇದು ಯಾವ ನ್ಯಾಯ? ಮಾನ್ಯ ಮಹದೇವಪ್ಪನವರು ಹೇಳಿದ ಹಾಗೆ 1996ರಲ್ಲಿ ಯಾವ ಉದ್ದೇಶದಿಂದ ರಾಜೀವ್ ಗಾಂಧಿ ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿತ್ತೆಂದು ಹೇಳಿದರು. ಆದ್ದರಿಂದ, ನಾನು ಕೇಳುವುದೇನೆಂದರೆ, ಇದು ಬೆಂಗಳೂರಿನಲ್ಲಿಯೇ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ರಾಜಕೀಯ ಉದ್ದೇಶಕ್ಕೋಸ್ಕರ ಮಾಡುವುದು ಬೇಡ. ಯಾವುದೋ ಬಂದರೂ ಅವುಗಳನ್ನು ಹಾಸನ, ಹೊಳೆನರಸೀಪುರ, ರಾಮನಗರದಲ್ಲಿ ಮಾಡುವಂಥದ್ದು ಆಗಬಾರದು. ಇದರಿಂದ ಇಡೀ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್:- ರಾಮನಗರಕ್ಕೆ ಹೋಗಬೇಕೆಂದು ನೀವೇ ಪಾಸ್ ಮಾಡಿದ್ದೀರಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಎಲ್ಲಾ ವಿಶ್ವ ವಿದ್ಯಾನಿಲಯಗಳನ್ನು ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿಯೇ ಹಾಕಿ ನಮ್ಮದೇನು ತಕರಾರು ಇಲ್ಲ.

ಅಧ್ಯಕ್ಷರು:- ಮಾನ್ಯ ರೇಣುಕಾಚಾರ್ಯರೆ ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರೇಣುಕಾಚಾರ್ಯ:- ಅದು ಬೆಂಗಳೂರಿನಲ್ಲಿಯೇ ಆಗಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಎಲ್ಲಾ ವಿಶ್ವ ವಿದ್ಯಾಲಯಗಳನ್ನು ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿಯೆ ಹಾಕಿ ನಮ್ಮದೇನು ತಕರಾರು ಇಲ್ಲ. ಒಂದು ಬೆಳಗಾಂ, ಶಿವಮೊಗ್ಗ ಇನ್ನೊಂದನ್ನು ಹಾಸನ ಮತ್ತು ರಾಮನಗರಕ್ಕೆ ಕೊಟ್ಟರೆ ತೊಂದರೆಯಾಗುತ್ತದೆಯೇ?

ಶ್ರೀ ರೇಣುಕಾಚಾರ್ಯ:- ರಾಜ್ಯದ ಬೇರೆ ಕಡೆಯಿಂದ ಬೆಂಗಳೂರಿಗೆ ಬಂದು ಮತ್ತೆ ರಾಮನಗರಕ್ಕೆ ಹೋಗಬೇಕಾಗುತ್ತದೆ. ಯಾವ ಉದ್ದೇಶದಿಂದ ಮೈಸೂರಿನಲ್ಲಿ ಮಾಡಬೇಕೆಂದು ತೀರ್ಮಾನವಾಗಿದ್ದರೂ ಸಹ ಮೈಸೂರಿನಲ್ಲಿ ಏಕೆ ಆಗಲಿಲ್ಲ? ರಾಜ್ಯದ ಎಲ್ಲಾ ಕಡೆಯಿಂದ ಬರತಕ್ಕಂಥ ವಿದ್ಯಾರ್ಥಿಗಳು ಬೆಂಗಳೂರಿಗೆ ಬರುವುದಕ್ಕೆ ಅನುಕೂಲವಾಗುತ್ತದೆಂದು ಇಲ್ಲಿ ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪಕ್ಷದ ಸಭೆಗೆ ಹೋದಾಗ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದರೆ ಗೊತ್ತಾಗುತ್ತದೆ. ಅವರೆಲ್ಲರೂ ಕೂಡ ಇದರಲ್ಲಿ ಭಾಗಿಗಳಾಗಿದ್ದಾರೆ.

ಶ್ರೀ ರೇಣುಕಾಚಾರ್ಯ:- ಅಲ್ಲಿ ಕಟ್ಟಡ ಇರುವುದರಿಂದ ಅಲ್ಲಿಯೇ ಮಾಡಬೇಕೆಂದು ಈ ಸದನದ ಮುಖಾಂತರ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಆಯಿತು, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ಈಗಾಗಲೇ ಮಾನ್ಯ ಕುಮಾರ ಸ್ವಾಮಿಯವರು ಡಿಟೇಲ್ ಆಗಿ ಮಾತನಾಡಿದ್ದಾರೆ. ಆದ್ದರಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರ ಸ್ವಾಮಿಯವರ ನೇತೃತ್ವದಲ್ಲಿ ನಾನು ಮತ್ತು ಮಾನ್ಯ ಬಾಲಕೃಷ್ಣ ಹಾಗೂ ಸುಮಾರು 16 ಜನ ಸದಸ್ಯರು ಸಹಿ ಮಾಡಿ ನಿಲುವಳಿ ಸೂಚನೆ ಮೇರೆಗೆ ಚರ್ಚೆ ಮಾಡಲು ಅವಕಾಶ ಕೇಳಲಾಗಿತ್ತು. ಅದನ್ನು ತಾವು ನಿಯಮಾವಳಿ 69ಕ್ಕೆ ತಾವು ಕನ್ವರ್ಟ್ ಮಾಡಿದ್ದೀರಿ. ಈ ವಿಷಯದ ಬಗ್ಗೆ ನಾವು ಪ್ರಸ್ತಾವನೆಯನ್ನು ಮಾಡುವುದಕ್ಕಿಂತ ಮುಂಚಿತವಾಗಿಯೇ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ತನಿಖೆ ಮಾಡುವುದಕ್ಕೆ ನಾನೇನು ಬೇಡವೆಂದು ಹೇಳುವುದಿಲ್ಲ. ಆದರೆ, ಈ ಹೇಳಿಕೆಯನ್ನು ಮಾತನಾಡುವುದಕ್ಕಿಂತ ಮುಂಚಿತವಾಗಿ ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಕುಮಾರ ಸ್ವಾಮಿಯವರು ಇದರ ಬಗ್ಗೆ ಎಲ್ಲಾ ಹೇಳಿದ್ದಾರೆ. 15ನೇ ಮಾರ್ಚ್‌ನಲ್ಲಿ ಟೆಂಡರ್‌ನ್ನು ಕರೆದಿದ್ದಾರೆ. ಆಗ ಇದ್ದಂಥ ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್‌ರವರು ದಿನಾಂಕ 12.03.2007ರಲ್ಲಿ ಟೆಂಡರ್ ಕರೆಯುವುದಕ್ಕೆ ಅನುಮತಿಯನ್ನು ಕೊಟ್ಟಿದ್ದರು ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮತ್ತೆ 27ನೇ ಫೆಬ್ರವರಿಯಲ್ಲಿ 4(1) ನೋಟಿಫಿಕೇಷನ್ ಆಗಿದೆ. ಹಿಂದೆ ಕೈಗಾರಿಕಾ ಮಿನಿಸ್ಟರ್ ಆಗಿದ್ದಂಥ ನನ್ನ ಗುರುಗಳು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ಅವರೇ ನಿಂತು ಇದಕ್ಕೆ ಸಂಬಂಧಪಟ್ಟಂತೆ ಎಲ್ಲವನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಇದಕ್ಕೆ ಸಂಬಂಧಪಟ್ಟಂತೆ ತನಿಖೆ ಅಥವಾ ಸದನ ಸಮಿತಿಯಿಂದಾದರೂ ಮಾಡಿ ನಮ್ಮದೇನು ಅಭ್ಯಂತರವಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಂತ್ರಿಗಳು ಮತ್ತು ಮಾನ್ಯ ಉದಾಸಿಯವರು ಹಾಗೂ ಮಾನ್ಯ ರಾಮಚಂದ್ರೇಗೌಡರು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಮಾನ್ಯ ಅಬಕಾರಿ ಸಚಿವರು):- ಮಾನ್ಯ ಅಧ್ಯಕ್ಷರೆ, ರಾಮನಗರದಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಯಾರದೂ ತಕರಾರು ಇಲ್ಲ.

ಶ್ರೀ ಸಿದ್ದರಾಮಯ್ಯ:- ನಮ್ಮದು ಇತ್ತು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ತಾವು ಸೀನಿಯರ್ ಲೀಡರ್ ಚಕಾರ ಎತ್ತಲಿಲ್ಲ. ಈಗ ನಾನು ಹೇಳುವಾಗ ತಕರಾರು ಇತ್ತು ಎಂದು ಹೇಳುತ್ತೀರಿ. ತಾವು ಸ್ವಲ್ಪವೂ ಇದರ ಬಗ್ಗೆ ಇಲ್ಲಿಯವರೆಗೆ ಮಾತನಾಡಿಲ್ಲ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣವನ್ನು ಹೇಳಿದ್ದಾರೆ. ಅಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದಕ್ಕೆ 100 ಕ್ಕೆ 100 ಭಾಗ ಸರ್ಕಾರ ಬದ್ಧವಾಗಿದೆ. ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಅದರ ನ್ಯೂನ್ಯತೆಗಳು ಏನಿವೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳುತ್ತಾರೆ. ಮಿಕ್ಕಿದ ವಿಚಾರಗಳನ್ನು ತಾವೆಲ್ಲಾ ಏನು ಹೇಳಿದ್ದೀರಿ, ಮಾನ್ಯ ರೇವಣ್ಣನವರಿಗೆ, ಕುಮಾರಸ್ವಾಮಿಯವರಿಗೆ ತಿಳಿಯದೇ ಇರುವಂಥ ವಿಚಾರ ಏನು ಇಲ್ಲ. ಅದಕ್ಕಿಂತ ಜಾಸ್ತಿ ನನಗೆ ಏನೂ ಗೊತ್ತಿಲ್ಲ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ ಮಾನ್ಯ ಕುಮಾರಸ್ವಾಮಿಯವರು, ರೇವಣ್ಣನವರು, ಡಿ.ಕೆ.ಶಿವಕುಮಾರ್‌ರವರು ಸವಿವರವಾಗಿ ಮಾತನಾಡಿದ್ದಾರೆ. ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಪ್ರಾರಂಭ ಆಗಬೇಕಾಗಿದ್ದನ್ನು ರಾಜ್ಯ ಸರ್ಕಾರ ತಡೆಹಿಡಿಯುತ್ತದೆ ಎನ್ನುವ ಭಾವನೆಯನ್ನು ಕೆಲವು ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಇಲ್ಲಿ ಪ್ರಶ್ನೆ ಬಂದಿರುವುದು, ಅಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಆಗುವುದಕ್ಕೆ ಆಕ್ಷೇಪ ಯಾರದ್ದು ಇಲ್ಲ. ನಮ್ಮ ಸರ್ಕಾರದ್ದು ಆಕ್ಷೇಪ ಇಲ್ಲವೆನ್ನುವುದನ್ನು ಇಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಪ್ರಶ್ನೆ ಏನು ಇದೆ ಎನ್ನುವುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಾಗಿದೆ. ಇಲ್ಲಿಯವರೆಗೆ ಮಾತನಾಡುತ್ತಿರಬೇಕಾದರೆ ಎಲ್ಲ ವಿವರಗಳನ್ನು ಹೇಳುತ್ತಿರಬೇಕಾದರೆ ಸನ್ಮಾನ್ಯ ಕುಮಾರಸ್ವಾಮಿಯವರು ಏನು ಹೇಳಿದರು, ಜಮೀನು ಸ್ವಾಧೀನ ಪಡಿಸಿಕೊಂಡು ಈ ಕೆಲಸವನ್ನು ಪ್ರಾರಂಭ ಮಾಡುವುದನ್ನು ನಾವು ಮಾಡಿದ್ದೇವೆ ಎನ್ನುವ ಮಾತುಗಳನ್ನು ಅವರು ಹೇಳಿದ್ದಾರೆ. ಮೊದಲನೇ ಆತಂಕ ಇರುವುದು ಇಲ್ಲಿಯೆ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ದಿನಾಂಕ 27-2-2007 ರಂದು 28(1)ರ ಪ್ರಕಾರ notification ಆಗುತ್ತದೆ. Final notification ಆಗಿದೆ. ದಿನಾಂಕ: 23-07-2007ರಂದು 28(8) ರ ಅಡಿಯಲ್ಲಿ Final notification ಆಗುತ್ತದೆ. Final notification ಆಗುವುದಕ್ಕಿಂತ ಪೂರ್ವದಲ್ಲಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಬರುವುದಿಲ್ಲವೆನ್ನುವುದು ಸಾಮಾನ್ಯವಾದ ನಿಯಮ. Notification ಆದರೆ allenation ಗೆ ಅವರಿಗೆ ಅವಕಾಶವಿಲ್ಲವೆನ್ನುವ ಒಂದು ಮಾತನ್ನು ಬಿಟ್ಟರೆ ಬೇರೇನೂ ಇಲ್ಲ, finle ನಲ್ಲಿ ಇದೆ, ಅದನ್ನು ಓದುತ್ತೇನೆ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:- ಏನು ತಗಲು ಹಾಕುವುದು...ನಿಮ್ಮಷ್ಟು ಬುದ್ಧಿವಂತ ಎಂದು ನಾನು ಎಲ್ಲೂ ಹೇಳಿಕೊಂಡಿಲ್ಲ ಒಂದು ನಿಮಿಷ. yield ಆಗಿ 28(5) ಏನು ಹೇಳುತ್ತದೆ ಎನ್ನುವುದಕ್ಕಿಂತ 28(8) ಏನು ಹೇಳುತ್ತದೆ ಎನ್ನುವುದರ ಬಗ್ಗೆ ನೋಡಿಕೊಂಡು ಬಿಡಿ. "Where the land has been acquired for the Board, the State Government may after it has been taken possession of the land, may transfer the land to the Board for the purpose for which the land has been acquired" ಎಂದು ಇದೆ. ಹೀಗೆ ಇರಬೇಕಾದಾಗ 28(1) ರಿಂದ ಹಿಡಿದು 28(8) ರವರೆಗೆ ಎಲ್ಲಾ proceedings ನಡೆದಾಗಲೂ ಕೂಡ ಜಮೀನನ್ನು ಪರಭಾರೆ ಮಾಡಲಿಕ್ಕೆ ಅವಕಾಶವಿಲ್ಲ ಎನ್ನುವುದು ಸ್ಪಷ್ಟ ಎನ್ನುವುದು ನನಗೆ ಗೊತ್ತು. 28(8) ಯಾವಾಗ ಆಗಿದೆ ತಮ್ಮ ಗಮನಕ್ಕೆ ನಾನು ತರಲಿಕ್ಕೆ ಇಚ್ಛಿಪಡುತ್ತೇನೆ. ದಿನಾಂಕ 23-07-2007 ರಂದು final notification ಆಗಿದೆ. 25-02-2007 ರಲ್ಲಿ ನೀವು ಭೂಸ್ವಾಧೀನಕ್ಕಾಗಿ ಒಂದು ಆಜ್ಞೆಯನ್ನು ಮಾಡಿದರೆ ತಾವು ಟೆಂಡರ್ ಕರೆದಿರುವುದು ಯಾವಾಗ? ದಿ:15-03-2007 ರಂದು. 15-03-2007ರಲ್ಲಿ ನೀವು ಟೆಂಡರ್‌ನ್ನು ಕರೆಯಬೇಕಾದಾಗ ಭೂಸ್ವಾಧೀನ ನಿಮ್ಮ ಹತ್ತಿರ ಇಲ್ಲ ಅದರ ಜೊತೆಗೆ ಪ್ರಸ್ತುತ ಯೋಜನೆಗೆ ಬೇಕಾಗಿರುವಂಥಾದ್ದರಲ್ಲಿ ಆಡಳಿತಾತ್ಮಕ ಜಮೀನು ಲಭ್ಯತೆ ಜೊತೆಗೆ ನಮ್ಮ plan estimate ಮಂಜೂರಾತಿ ಆಗಬೇಕಾದಾಗ ಆ ಭೂಮಿ ಸ್ವಾಧೀನವಿಲ್ಲದೆ plan estimate ಮಾಡುವುದಕ್ಕೆ ಸಾಧ್ಯತೆ ಆಗುವುದಿಲ್ಲ ಎನ್ನುವುದನ್ನು ಎಲ್ಲಾ ಅಧಿಕಾರಿಗಳು ಅವರ ಗಮನಕ್ಕೆ ತರುವ ಕೆಲಸವನ್ನು ಮಾಡಿದ್ದಾರೆ. ಆದರೆ ಇದನ್ನು 3-05-2007 ರಂದು ಕಾರ್ಯಪಾಲಕ ಅಭಿಯಂತರರ ಶಿಫಾರಸ್ಸಿನ ಮೇರೆಗೆ ಮೂರು bid documentsನ್ನು ಖರೀದಿಸುವುದರ ಕೋರಿಕೆಯ ಮೇರೆಗೆ ಇದನ್ನು ಪ್ರಾರಂಭ ಮಾಡುತ್ತಾರೆ. ಈ ಬಿಡ್ ತೆಗೆಯುವಂಥ ಕೆಲಸವನ್ನು 15-03-2007 ರಂದು ಮಾಡಿದಾಗ ಬಿಡ್ ಡಾಕ್ಯುಮೆಂಟ್‌ನಲ್ಲಿ ಅದನ್ನು specific ಆಗ ಹೇಳಬೇಕಾಗಿತ್ತು. ಇದರಲ್ಲಿ ಪಾಲುದಾರರಾಗಬೇಕಾದಂಥವರಿಗೆ mobilization advance ನ್ನು ನಾವು ಕೊಡುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಅದರಲ್ಲಿ ಹೇಳಬೇಕಾಗಿತ್ತು. ಹೇಳದೇ ಇರುವುದರಿಂದ ಇದು ಏನಾಗುತ್ತದೆಂದರೆ ಆಡಳಿತಾತ್ಮಕ ಅನುಮತಿ ಇಲ್ಲ ಮತ್ತು ತಾಂತ್ರಿಕ ಅನುಮತಿಯನ್ನು ಪಡೆಯದೇ ಟೆಂಡರ್ ಕರೆಯುವಂಥ ಕೆಲಸ ಪ್ರಾರಂಭವಾಗಿದೆ. ತಮಗೆ ಗೊತ್ತಿರಲಿ ಎಂದು ನಾನು ಇಲ್ಲಿ ಹೇಳುತ್ತೇನೆ. 14-05-2007 ರಂದು ಆಡಳಿತಾತ್ಮಕ ಮಂಜೂರಾತಿ ಇಲ್ಲಿ ಆಗುತ್ತದೆ. ಅದರ ನಂತರ 2-06-2007 ರಂದು ತಾಂತ್ರಿಕ ಮಂಜುರಾತಿ ಆಗುತ್ತದೆ. 3ನೇ ತಿಂಗಳಲ್ಲಿ ಟೆಂಡರ್‌ನ್ನು ಕರೆಯುತ್ತಾರೆ. ಇಲ್ಲಿ ಏನಾಗಿದೆ ಎಂದರೆ ಕೇವಲ drawing ಮೇಲೆ plan estimate ಮಾಡಿದ್ದಾರೆ ಎನ್ನುವುಧಕ್ಕೆ ಭೂಸ್ವಾಧೀನವಿಲ್ಲ ಎನ್ನುವುದನ್ನು ನಾವು ಹೇಳಬೇಕಾಗಿಲ್ಲ ಇವತ್ತು ಏನು ರಾಮನಗರದ

ನ್ಯಾಯಾಲಯದಲ್ಲಿ ದಾವಾ ಮಾಡಿರುವಂಥ ವ್ಯಕ್ತಿಗಳು ಏನಿದ್ದಾರೆ, ಆ ವ್ಯಕ್ತಿಗಳು ಹೇಳಿದ್ದಾರೆ. ನಾಗಾರ್ಜುನ ಕನ್‌ಸ್ಟ್ರಕ್ಷನ್‌ದವರು ಕೂಡ ಅದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಮಧ್ಯದಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಏನೆಂದು ಪತ್ರವನ್ನು ಬರೆದಿದ್ದಾರೆಂದರೆ, 10ನೇ ಅಕ್ಟೋಬರ್ 2007 ಕ್ಕೆ ನಾಗಾರ್ಜುನ ಕನ್‌ಸ್ಟ್ರಕ್ಷನ್‌ದವರು ಒಂದು ಪತ್ರವನ್ನು ಬರೆದಿದ್ದಾರೆ.– "We have received the advance copy of the revised master plan of 9.10.2007 from PWD, Sub-division for the planning purpose. While studying the said master plan following discrepancies are observed in the operating building. The Medical College is located in the open hilly terrain. It is to be relocated....." ಹೀಗೆ ಎಲ್ಲಾ ಹೇಳಿ ನಮ್ಮ ಕಬ್ಜಾದಲ್ಲಿ ಜಮೀನು ಇಲ್ಲವೆನ್ನುವುದನ್ನು ಸ್ಪಷ್ಟವಾಗಿ ಲಭ್ಯವಾಗಿಲ್ಲವೆನ್ನುವುದನ್ನು ಅವರು ಹೇಳುತ್ತಾರೆ. ಹೀಗೆಲ್ಲಾ ಇರಬೇಕಾದರೆ ಯಾವ ಕಾರಣಕ್ಕಾಗಿ 330 ಕೋಟಿ ರೂ.ಗಳ ಟೆಂಡರ್ ಕರೆದಿರುವಂಥವರಿಗೆ 33 ಕೋಟಿ ರೂ.ಗಳಷ್ಟು ಹಣವನ್ನು ಅಡ್ವಾನ್ಸ್ ಆಗಿ ಕೊಟ್ಟಿರಿ? ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಏಕೆ advance ಹಣವನ್ನು ಕೊಟ್ಟಿರಿ ಎನ್ನುವುದಕ್ಕೆ ಏನು ಅರ್ಥ ಹೇಳಬೇಕು. 33 ಕೋಟಿ ರೂ.ಗಳಿಗೆ 9 ತಿಂಗಳಿಗೆ 2 ಕೋಟಿ 80 ಲಕ್ಷ ರೂ.ಗಳ ಬಡ್ಡಿಯಾಗುತ್ತದೆ ತೆರಿಗೆದಾರರ ಹಣ ಸೋರಿಕೆಯಾಯಿತು ಎನ್ನುವ ಆಪಾದನೆಗೆ ಗುರಿಯಾಗಬೇಕಾದ ಪರಿಸ್ಥಿತಿ ಸ್ವಾಭಾವಿಕವಾಗಿ ಎಲ್ಲರಿಗೂ ಬರುತ್ತದೆ ಇದು ಸರ್ಕಾರದ್ದು. ಇದನ್ನು ಅಧಿಕಾರಿಗಳು ಮಾಡಿರಬಹುದು. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಶಾಮಿಲಾಗಿ ಇದನ್ನು ಮಾಡಿರಬಹುದು. ಬೇರೆ ಯಾರ ಪ್ರಭಾವ ಇದೆ ಎಂದು ನಾನು ಎಲ್ಲಿಯೂ ವಾದ ಮಾಡುತ್ತಿಲ್ಲ. ಇದು ಯಾರಿಂದ ಆಗಿದೆ ಎನ್ನುವುದನ್ನು ವಿಚಾರಣೆ ಮಾಡಿದರೆ ಬರುತ್ತದೆ ಎನ್ನುವ ಉದ್ದೇಶದಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿರಬಹುದು ಹೊರತು ಸನ್ಮಾನ್ಯ ಮುಖ್ಯಮಂತ್ರಿಗಳು ರಾಮನಗರದಲ್ಲಿರುವ ಕಟ್ಟಡದ ಕಾಮಗಾರಿಯನ್ನು ನಿಲ್ಲಿಸುತ್ತೇವೆಂದು ಎಲ್ಲಿಯೂ ಹೇಳಿಲ್ಲವಲ್ಲ. ಹೀಗೆಲ್ಲಾ ಇರಬೇಕಾದರೆ ಇದರ ಬಗ್ಗೆ ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದನ್ನೆ ನಾವು ಭಾರಿ ತಪ್ಪು ಮಾಡಿದ್ದೇವೆ ಎನ್ನುವುದನ್ನು ವ್ಯಕ್ತ ಮಾಡುವ ಅವಶ್ಯಕತೆ ಇಲ್ಲವೆನ್ನುವುದನ್ನು ನಾನು ಭಾವಿಸಿಕೊಂಡಿದ್ದೇನೆ. ಪ್ರಮುಖವಾಗಿ ನಾನು ಇಲ್ಲಿ ಹೇಳುತ್ತೇನೆ. 3–05–2007 ರಂದು ಕಾರ್ಯಪಾಲಕ ಅಭಿಯಂತರರ ಶಿಫಾರಸ್ಸಿನ ಮೇರೆಗೆ ಮೂರು bid documentsನ್ನು ಖರೀದಿಸುವ ಕೋರಿಕೆಯ ಮೇರೆಗೆ ಬಡ್ಡಿರಹಿತ ಮುಂಗಡ ಹಣವನ್ನು ಕೊಡುವುದರ ಮೂಲಕ ಸರಿಯಾಗಿ ಪರಿಶೀಲಿಸದೇ ಶೇಕಡ 15 ರಷ್ಟು ಬಡ್ಡಿರಹಿತ ಮುಂಗಡ ಹಣವನ್ನು ಕೊಡಲು ದಿನಾಂಕ 11–05–2007 ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅಂದಾಜು ಸವಿವರವಾದ drawings, structural designs, ಮಣ್ಣು ತಪಾಸಣೆ ಇನ್ನಿತರ ಕಾಗದ ಪತ್ರಗಳಿಗೆ ಕೇವಲ 14–05–2007 ರ ಆಡಳಿತಾತ್ಮಕ ಮಂಜೂರಾತಿ

ಆದೇಶ ಅಧೀಕ್ಷಕ ಅಭಿಯಂತರರು ಬೆಂಗಳೂರು ಇವರು 23-05-2007 ರ ಪತ್ರದ ಆಧಾರದ ಮೇಲೆ ಹಾಗೂ 02-06-2007 ರಂದು 310 ಕೋಟಿ ರೂ.ಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದಾರೆ. Plan estimate ಮಾಡುವಾಗ ಇದರಲ್ಲಿ nexus ಇದೆ ಎನ್ನವುದು ಕಂಡು ಬರುತ್ತದೆ. ಇವರಿಗೆ ಪ್ರಸ್ತುತ ಯೋಜನೆಗೆ ಬೇಕಾಗಿರುವ ಜಮೀನಿನ ಲಭ್ಯತೆ ಹಾಗೂ ಸಂಬಂಧಪಟ್ಟಂಥ ತಾಂತ್ರಿಕತೆಯನ್ನು ಪಡೆಯದೆ 15-03-2007 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ ಎರಡೂವರೆ ತಿಂಗಳ ನಂತರ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದು, ತಾಂತ್ರಿಕ ಮಂಜೂರಾತಿ ಇಲ್ಲದೆ ಕಾರ್ಯಪಾಲಕ ಅಭಿಯಂತರರು ಹೊರಡಿಸಿರುವ ಅಧಿಸೂಚನೆ ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮಕ್ಕೆ ವಿರುದ್ಧವಾಗಿದ್ದರೂ ತಮ್ಮ ಅಧೀನ ಅಧಿಕಾರಿಗಳ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಥವಾ ಆಕ್ಷೇಪಣೆಗಳನ್ನು ಮಾಡಿರುವುದಿಲ್ಲ. ಮುಖ್ಯ ಅಭಿಯಂತರರಾಗಿ ಕೆಳ ಮಟ್ಟದ ಅಧಿಕಾರಿಗಳ ಅಕ್ರಮವನ್ನು ಸರಿಪಡಿಸುವ ಬದಲು ಸವಿವರವಾದ ಅಂದಾಜು ಇಲ್ಲದೇ ತಾಂತ್ರಿಕ ಮಂಜುರಾತಿಯನ್ನು ನೀಡಿ ಹಾಗೂ ಶೇಕಡಾ 15 ರ ಮುಂಗಡ ಹಣವನ್ನು ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕೆಳಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿದ್ದಾರೆನ್ನುವುದು ಸ್ಪಷ್ಟವಾಗಿ ಗಮನಕ್ಕೆ ಬಂದಿದೆ. ಆಡಳಿತಾತ್ಮಕ ಹಾಗೂ ತಾಂತ್ರಿಕವಾಗಿ ಇಲಾಖೆಯ ಮುಖ್ಯಸ್ಥರಾಗಿ ಮುಖ್ಯ ಅಭಿಯಂತರರು ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮದ ಅನ್ವಯ ಲೋಕೋಪಯೋಗಿ ಇಲಾಖೆಯ ಸಂಹಿತೆಯ ಅನುಸಾರ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾಗಿದ್ದಾರೆ. ಸರ್ಕಾರದ ಹಣ ಎಲ್ಲಿ ಉಪಯೋಗವಾಗುತ್ತದೆ ಅಲ್ಲಿಗೆ ಖರ್ಚು ಮಾಡಬೇಕಾದ ನಿಯಮ ಇರುವಾಗ ಇವರು ಜಮೀನಿನ ಕಬ್ಜಾ ಮತ್ತು ತಾಂತ್ರಿಕ ವಿವರ ಇಲ್ಲದೇ ಹಾಗೂ ಗುತ್ತಿಗೆದಾರರು ಈ ಸ್ಥಳದಲ್ಲಿ ಕಾಮಗಾರಿಯನ್ನು ಕೈಗೊಳ್ಳಬಹುದೇ ಅಥವಾ ಹೇಗೆ ಎಂಬುದನ್ನು ಮೌಲ್ಯ ಮಾಪನ ಇಲ್ಲದೇ ಗುತ್ತಿಗೆದಾರರ ಪರವಾಗಿ ಸರ್ಕಾರಕ್ಕೆ ಅವರು ಮುಂಗಡ ಹಣವನ್ನು ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಈ ಬೃಹತ್ ಯೋಜನೆಗೆ 310 ಕೋಟಿ ರೂ.ಗಳಿಗೆ ತಾಂತ್ರಿಕ ಅನುಮೋದನೆಯನ್ನು ನೀಡುವಾಗ ಈ 310 ಕೋಟಿ ರೂ.ಗಳಿಗೆ how they have arrived ಏಕೆ ಬೇಕು? ಜಾಗವೇ ಇಲ್ಲದೆ ಮಾಡುವುದಕ್ಕೆ ಹೇಗೆ ಸಾಧ್ಯ? ಇದರಲ್ಲಿ ಅವರು ಏನು ಹೇಳುತ್ತಾರೆಂದರೆ encumbrance free land ಕೊಟ್ಟಿದ್ದರೆಂದು ಹೇಳುತ್ತಿದ್ದಾರೆ. ಆದರೆ, ಕೊಟ್ಟಿರುವ ದಾಖಲೆಗಳಲ್ಲಿ ಸರ್ವೆ ನಂ.13 ಮತ್ತು 14ರ ಮೇಲೆ ನ್ಯಾಯಾಲಯದಲ್ಲಿ stay order ಇದೆ. Cutting the tree ಎಂದರೆ, ಗಿಡಗಳನ್ನು ಕಡಿಯಬಾರದೆಂಬ stay ಇದ್ದರೆ, ಇದು ಕೋರ್ಟ್ ಆರ್ಡರ್. ಕೋರ್ಟ್ ಆರ್ಡರ್‌ಗೆ ನಾವು ಗೌರವ ಕೊಡಬೇಕಲ್ಲವೆ? ಅಲ್ಲಿ ಗಿಡಗಳಿಲ್ಲ ಎನ್ನುವುದಾಗಲಿ, ಮತ್ತೊಂದು ಇಲ್ಲ ಎನ್ನುವುದಾಗಲಿ.....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಸಿ.ಬಾಲಕೃಷ್ಣರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು:– ಅವರು ಮೊದಲು ಉತ್ತರವನ್ನು complete ಮಾಡಲಿ. ಆಮೇಲೆ ನೀವು ಹೇಳುವಿರಂತೆ.

ಶ್ರೀ ಸಿ.ಎಂ.ಉದಾಸಿ:– ಕಬ್ಜಾ ಇಲ್ಲದ ಭೂಮಿಗೆ ನೀವು ಮಾಡುವುದೇನಿದೆ? ಸ್ವತಃ ಕಂಟ್ರಾಕ್ಟರ್ ಏನು ಹೇಳುತ್ತಾರೆಂದರೆ, "The animal house and the boy's hostel are located at the existing rocks, which is already excavated about 44 mtrs. Below ground level are to be reallocated, peripheral road on the west side to be located, existing Manchanabele canal needs to be realigned..... ಇದನ್ನೆಲ್ಲಾ ಹೇಳಿ ಅಲ್ಲಿ ಏನೂ ಮಾಡಲು ಸಾಧ್ಯವಿಲ್ಲವೆಂದು ಅವರೇ ಹೇಳಿಕೊಂಡಿದ್ದಾರೆ. ನ್ಯಾಯಾಲಯದಲ್ಲಿ ಹೇಳುವುದನ್ನು ಅವರೇ ಹೇಳಿಕೊಂಡಿರುವಾಗ ಇಲ್ಲಿ ಪ್ರಸ್ತಾಪವಾಗುತ್ತಿರುವ ಮಾತುಗಳನ್ನು ಕೇಳಿದೆ. ಈಗ ನಾನು ಹೇಳುವುದಿಷ್ಟೇ ಇವತ್ತಿನ Executive Engineerರವರು ಏನು ಹೇಳಿದ್ದಾರೆಂದರೆ, The SPC of Sail has not been ascertained so far. 29.07.2008ಕ್ಕೆ ಏನು ಹೇಳುತ್ತಾರೆಂದರೆ: "The SPC of SAIL has not been ascertained so far. Therefore, the structural design for 26 buildings has not been approved so far" ಎಂದು ಇವತ್ತೂ ಸಹ ಅವರು ಈ ಮಾತನ್ನು ಹೇಳುತ್ತಾರೆ. ಇದೆಲ್ಲಾ ಇರಬೇಕಾದರೆ, ಇದರಲ್ಲಿ 33 ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ಕೊಟ್ಟಿದ್ದು, ಮತ್ತು ತಾಂತ್ರಿಕ, ಆಡಳಿತಾತ್ಮಕ ಅನುಮೋದನೆ ಇಲ್ಲದೆ ಟೆಂಡರ್ ಕರೆದಿದ್ದು, ಇದರಲ್ಲಿ ಅಧಿಕಾರಿಗಳಾಗಲಿ, ಗುತ್ತಿಗೆದಾರರಾಗಲಿ, ಮತ್ತೆ ಯಾರಾದರೂ ಶಾಮೀಲಾಗಿದ್ದರೆ ಅದರ ವಿಚಾರಣೆ ನಡೆಯಬೇಕೆಂಬ ಉದ್ದೇಶದಿಂದ ನಿನ್ನೆ ಮುಖ್ಯಮಂತ್ರಿಗಳು ಹೇಳಿದ್ದಾರೆಯೇ ಹೊರತು ಯಾರನ್ನೂ ದುರುದ್ದೇಶದಿಂದ, ವಿಶ್ವವಿದ್ಯಾನಿಲಯವನ್ನು ಅಲ್ಲಿಂದ ಬೇರೆಡೆಗೆ ವರ್ಗಾವಣೆ ಮಾಡುತ್ತೇವೆಂಬ ಬೇರಾವುದೇ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಹೀಗೆಲ್ಲಾ ಇರಬೇಕಾದರೆ ಇದನ್ನು ವಿಚಾರಣೆ ಮಾಡಬೇಕಾದರೆ, ಶೀಘ್ರಗತಿಯಲ್ಲಿ ವಿಚಾರಣೆ ಮಾಡಿ, ಇದಕ್ಕೆ ಮತ್ತೆ ಅವಶ್ಯವಿದ್ದರೆ, ಟೆಂಡರ್ ಕರೆದು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ವಿಚಾರಣೆ ಮಾಡಬೇಕಾದ ಸಂದರ್ಭದಲ್ಲಿ ಇದಕ್ಕೆ ಯಾರ್‍ಯಾರು ಕಾರಣ, 33 ಕೋಟಿ ರೂಪಾಯಿಗಳ ಅಡ್ವಾನ್ಸ್ ಕೊಡುವುದಕ್ಕೆ ಯಾರ್‍ಯಾರು ಕಾರಣರಾಗಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಇದೇ condition ಹಾಕಿ ಕೊಡುವುದಾದರೆ, ಮತ್ತೆ ಎಷ್ಟು ಗುತ್ತಿಗೆದಾರರು ಭಾಗಿಯಾಗುತ್ತಾರೆಂದು ಹೇಳಲು ಸಾಧ್ಯವಿಲ್ಲ. ಈ condition ಮೊದಲೇ ಹಾಕಿದ್ದರೆ ರಾಜ್ಯಾದ್ಯಂತ ಬೇಕಾದಷ್ಟು ಜನರು ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ಮಾಡುವಂತಹ ವ್ಯಕ್ತಿಗೆ ಶೇಕಡ 15ರಷ್ಟು ಅಡ್ವಾನ್ಸ್ ಕೊಡುವಂತಹ ಅವಶ್ಯಕತೆ ಏಕೆ?

ಇದಕ್ಕೆ ಸಾಮಾನ್ಯ ಕಂಟ್ರಾಕ್ಟರ್ ಬರಬಹುದಿತ್ತು. ಇದನ್ನು ಕೊಡುತ್ತಾರೆಂದಿದ್ದರೆ ಇದರಲ್ಲಿ ಬೇಕಾದಷ್ಟು ಜನರು ಭಾಗಿಯಾಗುತ್ತಿದ್ದರು. ಇವರಿಗೇ ಈ ಅಡ್ವಾನ್ಸ್ ಕೊಡುವಂಥಾದ್ದೇನಿತ್ತು? ಇದನ್ನೆಲ್ಲಾ ನೋಡಿದಾಗ ಇದರಲ್ಲಿ ಏನೋ ಗೋಲ್‌ಮಾಲ್ ನಡೆದಿದೆ ಎನ್ನುವಂತಹ ಅನುಮಾನಗಳು ನಮ್ಮನ್ನು ಕಾಡುತ್ತಿರುವುದರಿಂದ ವಿಚಾರಣೆ ಮಾಡುವುದಕ್ಕೆ ನೀವ್ಯಾರೂ ಅನ್ಯಥಾ ಭಾವಿಸಬಾರದು. ಆಡಳಿತ ಮಾಡಬೇಕಾದ ಸಂದರ್ಭದಲ್ಲಿ ನಮ್ಮ ಕೆಳಗಿನ ಅಧಿಕಾರಿಗಳಾಗಲಿ, ನಮ್ಮವರ ಮೇಲೆ ಯಾರಾದರೂ ಪ್ರಭಾವ ಬೀರಿದ್ದರೆ ನಾವು ಅಂಜಬೇಕೇ ಹೊರತು ಇಲ್ಲದಿದ್ದರೆ ಅಂಜಬಾರದು ಎಂಬುದನ್ನು ಇಲ್ಲಿ ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ಮತ್ತು ಯಾವುದೇ ಕಾರಣಕ್ಕೂ ಸಹ ಇದನ್ನು ಮುಂದೆ ತೆಗೆದುಕೊಂಡು ಹೋಗಬೇಕೆನ್ನುವಂತಹ ವಿಚಾರ ಸರ್ಕಾರಕ್ಕಿಲ್ಲ. ನ್ಯಾಯಾಲಯದಲ್ಲಿ ಅವರು ಬರೆದಿದ್ದನ್ನು ನೀವು ನೋಡಿದಿರಿ. ನ್ಯಾಯಾಲಯದಲ್ಲಿ ಅವರು ಹೇಳಿದ್ದಾರೆ. ರಾಮನಗರದ ನ್ಯಾಯಾಲಯದಲ್ಲಿ ಮೊನ್ನೆ ಅವರು ಏನು ಒಂದು ಅರ್ಜಿ ಹಾಕಿದ್ದಾರೆ....

ಶ್ರೀ ಹೆಚ್.ಡಿ.ರೇವಣ್ಣ:- ಅದು ಯಾವ ದಿನಾಂಕ ಎಂಬುದನ್ನು ಹೇಳಿ.

ಶ್ರೀ ಸಿ.ಎಂ.ಉದಾಸಿ:- 24.09.2007ಕ್ಕೆ ಅವರು ಏನು ಹೇಳುತ್ತಾರೆಂದರೆ, for the terms of the agreement and work order the plaintiff/contractor, the defendant No.9, to obtain a mark out of the land in question. But till October-2007 the plaintiff did not receive any communication from the defendant No.9 in that regard. The defendant No.9 ಅಂದರೆ, the Executive Engineer. ಅವರು ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿರಬೇಕಾದರೆ, ನಮ್ಮಿಂದ ಹರಕತ್ತಾಗಿದೆ ಎಂಬ ಪ್ರಶ್ನೆಗಿಂತಲೂ ಹೆಚ್ಚಾಗಿ land acquistion ಮಾಡಿ ಅದನ್ನು possessionಗೆ ಕೊಡಬೇಕಾದರೆ ವಿಳಂಬವಾಗಿದ್ದು ಮತ್ತು land ಇಲ್ಲದೆ ಟೆಂಡರ್ ಕರೆದ ಮೂರು ತಿಂಗಳ ನಂತರ ಇವತ್ತು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಕೊಡುವುದಾದರೆ ಇದರ ಹಿಂದೆ ಏನೇನು ಇರಬಹುದು ಎಂಬ ಅನುಮಾನ. ಕೇವಲ ಡ್ರಾಯಿಂಗ್ ಮೇಲೆ plan estimate ಮಾಡಿರಬೇಕೆಂಬ ಅನುಮಾನ ನಮ್ಮನ್ನು ಕಾಡುತ್ತಿದೆ. ಈ ಕಾರಣದಿಂದ 33 ಕೋಟಿ ರೂಪಾಯಿಗಳ ಅಡ್ವಾನ್ಸ್ ಕೊಟ್ಟಿದ್ದು ಸಹ ಕಾನೂನುಬಾಹಿರವಾಗಿರುವುದರಿಂದ Karnataka Transparency Act ಪ್ರಕಾರ ಇದೂ ಒಂದು ಲೋಪವೇ ಆಗಿದೆ. ಇದಕ್ಕೆ ಏನು ಕಾರಣ ಹೇಳಿದರು? ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿದ್ದೀರಿ, ಟೆಂಡರ್‌ದಾರರು ಮೂರು ಮಂದಿ ಇದ್ದಾರೆಂದು ಹೇಳಿದ್ದಾರೆ. ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿದ್ದಾರೆಂದು ಹೇಳಿರುವಾಗ, ಅದನ್ನು ಕ್ಯಾಬಿನೆಟ್‌ಗೆ ತರಬೇಕಾದ ಸಂದರ್ಭದಲ್ಲಿ ಆತ ಮೊದಲು ಅಡ್ವಾನ್ಸ್ ಕೊಡಬೇಕೆಂದು ಎಲ್ಲಿಯೂ ಕೇಳಿಯೇ ಇಲ್ಲ. ಗುತ್ತಿಗೆದಾರರು ಮೊದಲು ಕೇಳಿಲ್ಲ. ಟೆಂಡರ್ ಕಂಡಿಷನ್‌ನಲ್ಲಿ ಇಲ್ಲದೇ ಇರುವುದನ್ನು ನಂತರ ತರುವ

ಅವಶ್ಯಕತೆಯಾದರೂ ಏನಿತ್ತು? ಮೊದಲು ಆತ ಕೇಳಿಯೇ ಇಲ್ಲವಲ್ಲ. ಟೆಂಡರ್ ಹಾಕಿದ ಮೇಲೆ ಅದು accept ಆದ ನಂತರ ಕೇಳುವುದಕ್ಕೆ ಪ್ರಾರಂಭಿಸುತ್ತಾನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಇದರ details ಅಷ್ಟೇನೂ ನಾನು ಓದಲಿಲ್ಲ. ಆದರೆ, ಕೆಲವು ಕಾಗದ ಪತ್ರಗಳನ್ನು ನಾನು ಮುಂಜಾನೆ ನೋಡಿದೆ. ಅವರು ಈಗಾಗಲೇ ಹೇಳಿದರು. ಕ್ಯಾಬಿನೆಟ್ ಸೆಕ್ರಟೇರಿಯಟ್‌ನ Business Transaction Rules ಪ್ರಕಾರ 5 ಕೋಟಿಗಿಂತಲೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕಾದರೆ, ಮಂಜೂರು ಮಾಡಬೇಕಾದರೆ, ಅದು ಕ್ಯಾಬಿನೆಟ್ ಅಪ್ರೂವಲ್ ಇಲ್ಲದೇ ಆಗುವುದಿಲ್ಲ. 33 ಕೋಟಿ ರೂ.ಮತ್ತು ನಿಮ್ಮ ಅಪ್ರೂವಲ್ ಇಲ್ಲದೆ ಬಿಡುಗಡೆಯಾಗುವುದಿಲ್ಲ. ಒಂದು ವೇಳೆ ಅಧಿಕಾರಿಗಳ ಲೋಪ-ದೋಷಗಳಿದ್ದರೆ ಅವರ ಇತಿಮಿತಿಯಲ್ಲಿ ಕೋಟಿಯೋ, 50 ಲಕ್ಷವೋ ಅವರಿಗೆ ಏನು financial powers ಕೊಡುತ್ತೀರೋ, ಅದನ್ನು ಒಪ್ಪಿಕೊಳ್ಳಬಹುದು. ಆದರೆ, 33 ಕೋಟಿ ಬಿಡುಗಡೆಯಾಗಬೇಕಿದ್ದರೆ, ಕ್ಯಾಬಿನೆಟ್ ಅಪ್ರೂವಲ್ ಇಲ್ಲದೆ, Finance Minister ಅವರ ಅಪ್ರೂವಲ್ ಇಲ್ಲದೆ ಅಥವಾ Finance Secretary ರುಜು ಇಲ್ಲದೇ ಹೇಗಾಯಿತು? ಅಂದರೆ, ಆಗ ನೀವಿಬ್ಬರೂ ಚೆನ್ನಾಗಿದ್ದಿರಿ. ಯಾರ‍್ಯಾರು? ರೇವಣ್ಣನವರು ಮತ್ತು ನೀವು. ಮಾಡಿಕೊಂಡುಬಿಟ್ಟಿರಿ. ಈಗ ನಮ್ಮ ಮುಂದೆ ಬಂದು ನೀನು ಹಾಗೆ ಮಾಡಿದ್ದೀಯಾ, ಇದು ಹಾಗಿದೆ, ಇದು ಹೀಗೆದೆ ಎಂದರೆ ನಾವೇನು ಹೇಳಬೇಕು? ಇದಕ್ಕೆ ಇಬ್ಬರೂ ಹೊಣೆಗಾರರೇ. ಇದು ಮೊದಲನೆಯದು. ಎರಡನೆಯದು, ಕೇಳುತ್ತೇನೆ. Land approval ಆಗಲಾರದೆ ಇದನ್ನು ಕೊಟ್ಟರು. Mobilize ಮಾಡತಕ್ಕಂಥ amount ಅನ್ನು ಗುತ್ತಿಗೆದಾರರು ಕೇಳಲೇ ಇಲ್ಲ, ಅದನ್ನೂ ಇವರು ಕೊಟ್ಟರು. ಇವೆಲ್ಲವನ್ನೂ ಕೊಡಬೇಕೆಂದರೆ, ನೀವೆಲ್ಲರೂ ಪರಸ್ಪರ ಮಾತನಾಡದೆ ಕೊಡಲು ಸಾಧ್ಯವೇ ಇಲ್ಲ. ಅನಂತರ, ಮೂರನೆಯದಾಗಿ, land ಎಲ್ಲಾ acquire ಆಗಿ ಕೇವಲ a part of land ಮಾತ್ರ KIADBಯಿಂದ ಆಗಬೇಕು ಎನ್ನುವಂಥಾದ್ದು. ಅದರೊಳಗೆ ನಾನು ನೋಡಿದೆ. ಮತ್ತು ಅಷ್ಟು portion ಅಂದರೆ, ಅದು 40 ಎಕರೆ ಇರಬಹುದು, 30 ಎಕರೆ ಇರಬಹುದು. out of hundreds of acre, a portion of land ಮಾತ್ರ ಆಗಿಲ್ಲ. ಉಳಿದದ್ದೆಲ್ಲವನ್ನೂ ಕೊಟ್ಟಿದ್ದಾರೆ ಎನ್ನುವುದು ಆಯಿತು. ನೀವು ಹೇಳಿದ್ದನ್ನೇ ನಾನೂ ಹೇಳಿದ್ದೇನೆ. ಅಭ್ಯಾಸ ಮಾಡಿಲ್ಲವೆಂದು ಅದಕ್ಕೋಸ್ಕರವೇ ನಾನು ಹೇಳಿದೆ. ಅವರು ತೋರಿಸಿದ್ದು, ಮತ್ತು ನೀವು ಹೇಳಿದ್ದನ್ನು ಕೇಳಿದ್ದೇನೆ ಅಷ್ಟೆ. ಅದಕ್ಕೆ ನಾನು ಕೇಳುವುದೇನೆಂದರೆ, ಇಷ್ಟೆಲ್ಲಾ ಆದಮೇಲೂ Finance Departmentನವರು ಇದನ್ನು ತಿಳಿದುಕೊಳ್ಳದೆ ದುಡ್ಡು ಏಕೆ ರಿಲೀಸ್ ಮಾಡಿದರು? ಅಧ್ಯಕ್ಷರೆ, ಇದು ಯಾವಾಗಲೂ ಏನಾಗುತ್ತದೆಂದರೆ, ಹೀಗೆ ಬೇಕಾದವರು ಯಾವಾಗ ಬೇಕೋ ಆಗ ರಿಲೀಸ್ ಮಾಡುವುದು, ಕೆಲವು ಸಲ

ಏನೆಂದರೆ, ಹಣವನ್ನು ರಿಲೀಸ್ ಮಾಡುವಾಗ ನಮಗೆಲ್ಲರಿಗೂ ಪುಸ್ತಕದಲ್ಲಿ 5 ಕೋಟಿ, 10 ಕೋಟಿ, 20 ಕೋಟಿ ತೋರಿಸುವುದು. ಈಗ ಉದಾಸಿಯವರಿಗೆ, ರೇವಣ್ಣನವರಿಗೆ ಬೇಕಾಯಿತೆಂದರೆ, ಒಂದೇ ಕೋಟಿ ತೋರಿಸುವುದು. 1 ಕೋಟಿ ತೋರಿಸಿ 10 ಕೋಟಿ ಖರ್ಚು ಮಾಡುವುದು! ಆದರೆ, 100 ಕೋಟಿ ತೋರಿಸಿದಲ್ಲಿ ಎರಡೇ ಕೋಟಿ ಖರ್ಚು ಮಾಡುವುದು! ಇಲ್ಲಿಂದ ಎಲ್ಲವನ್ನೂ ಒಯ್ದು transfer ಮಾಡುವುದು. ಅದಕ್ಕೋಸ್ಕರ, ದಯವಿಟ್ಟು ನೀವು ಅದನ್ನು ಹೇಳಿಕೊಂಡು ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಡಿ. ನೀವು ಏನು ತಪ್ಪು ಮಾಡಿದ್ದೀರಿ, ಅದನ್ನೂ ಕೂಡ ಒಪ್ಪಿಕೊಳ್ಳಿ. ಇದು ನಿಮ್ಮಿಂದಲೂ ತಪ್ಪಾಗಿದೆ, ಲೋಪವಾಗಿದೆ, 5 ಕೋಟಿಗಳಿಗೆ ಮಾತ್ರ ನಿಮಗೆ ಅಧಿಕಾರವಿದ್ದರೂ 33 ಕೋಟಿ ನಿಮ್ಮ ಇಲಾಖೆಯ ಅನುಮತಿಯಿಂದ, ನಿಮ್ಮ signatureನಿಂದಲೇ ಹೋಗಿದೆ ಎನ್ನುವುದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಸಿ.ಎಂ.ಉದಾಸಿ:- ಸನ್ಮಾನ್ಯ ಸಭಾಧ್ಯಕ್ಷರೆ, ಇದು ಕ್ಯಾಬಿನೆಟ್‌ಗೆ ಬಂದು ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇದು ಕ್ಯಾಬಿನೆಟ್ ಮುಂದೆ ಬಂದು ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ ಎನ್ನುವುದಕ್ಕೆ ನನ್ನದು ಎರಡು ಮಾತಿಲ್ಲ. ಪ್ರಶ್ನೆ ಏನು ಇದೆ ಎಂದರೆ ಈಗ ತಾಂತ್ರಿಕ ಒಪ್ಪಿಗೆ ಇಲ್ಲದೆಯೇ Financial approval ಆಗದೆಯೇ ಇದರ ಟೆಂಡರ್ ಕರೆದಿದ್ದು ಮೊದಲನೆಯ ತಪ್ಪು. ಇದರ ಜೊತೆಗೆ 5 ಕೋಟಿ ಮೇಲೆ ಟೆಂಡರ್ ಕೊಡಬೇಕಾದರೆ ಕ್ಯಾಬಿನೇಟ್ ಅಪ್ರೂವಲ್ ತೆಗೆದುಕೊಂಡು ಮಾಡಬೇಕಾಗಿತ್ತು. ಆದರೂ ಇದನ್ನು ಮಾಡಿದ್ದಾರೆಂದರೆ ಆ ಟೆಂಡರ್ documents ಬಗ್ಗೆಯೇ disputed point ಬಂದ ಮೇಲೆ, ಅದು ನಮ್ಮ ಗಮನಕ್ಕೆ ಬಂದ ಮೇಲೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಡಿ ಎಂದರೆ ಯಾವ ರೀತಿಯಾಗಿ ವಾದ ಮಾಡುತ್ತೀರೊ ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು Secretariat Transaction Rules ಓದಲಾರದಯೆ ಅಪ್ರೂವ್ ಹೇಗೆ ಮಾಡುತ್ತೀರಿ? ನಿಮ್ಮ Secretariat Transaction Rules ಪ್ರಕಾರ...

ಶ್ರೀ ಸಿ.ಎಂ.ಉದಾಸಿ:- ತಪ್ಪು ಮಾಹಿತಿ ಕೊಟ್ಟಿರುವುದನ್ನು ಈಗ ಓದಲು ಪ್ರಾರಂಭ ಮಾಡುತ್ತಿದ್ದೇನೆ. ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂಬುದು ಗೊತ್ತಾಗಿದೆಯೆಂದು ಅದನ್ನು ಈಗ ಓದುತ್ತಿದ್ದೇನೆ.

ಡಾ:ಹೆಚ್.ಸಿ.ಮಹದೇವಪ್ಪ:- ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಗುತ್ತಿಗೆದಾರ ನನಗೆ negotiation ನಲ್ಲಿ ಮುಂಗಡವಾಗಿ ಹಣ ಕೊಡಿ ಎಂದು ಕೇಳಿಲ್ಲ. ಬಡ್ಡಿಯನ್ನೂ ಹಾಕಿಲ್ಲ. ಇವರು 33 ಕೋಟಿ ಕೊಡಬೇಕಾಗಿದ್ದರೆ ಹಣಕಾಸು ಇಲಾಖೆ ಏನು ಮಾಡುತ್ತಿತ್ತು? ಇವೆಲ್ಲವನ್ನು ಹಣಕಾಸು ಇಲಾಖೆಯವರು ನೋಡದೇ ಏನು ಮಾಡುತ್ತಿದ್ದರು?

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಲೋಕೋಪಯೋಗಿ ಸಚಿವರು ಸಭೆಗೆ ಸರಿಯಾದ ವಿಷಯವನ್ನು ಹೇಳಬೇಕು. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವು Medical Education Departmentಗೆ ಸಂಬಂಧಿಸಿದ್ದು. ತಮ್ಮ ಮುಖ್ಯಮಂತ್ರಿಯವರು ನಿನ್ನೆ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. 15.03.2007ರಲ್ಲಿ ಕಾಮಗಾರಿ ಟೆಂಡರ್ ಅಧಿಸೂಚನೆ ಆಡಳಿತಾತ್ಮಕ ಅನುಮೋದನೆ ಇಲ್ಲದೆಯೆ ಕೊಟ್ಟಿದ್ದಾರೆ ಎಂದು ನಿನ್ನೆ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ಸೀಮಿತವಾಗಿ ತಾವು ಹೇಳಿದ್ದೀರಿ, ಅದನ್ನು ಒಪ್ಪಿಕೊಳ್ಳುತ್ತೇನೆ. 12.03.2007 ರ ಮೆಡಿಕಲ್ ಎಜ್ಯುಕೇಷನ್ ಕಾರ್ಯದರ್ಶಿಯವರ ಪತ್ರವನ್ನು ಓದುತ್ತೇನೆ. 1457/2007. 12.03.2007 ರ ಪತ್ರವನ್ನು ಲಗತ್ತಿಸಿದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನ. ಬೇಕಾದರೆ ನಿಮಗೆ ಅದರ ಪ್ರತಿಯನ್ನು ಕಳುಹಿಸಿಕೊಡುತ್ತೇನೆ. 12.03.2007 ರಲ್ಲಿ ಆರೋಗ್ಯ ಇಲಾಖೆಯ ಮೆಡಿಕಲ್ ಎಜ್ಯುಕೇಷನ್ ಕಾರ್ಯದರ್ಶಿಯವರು ಈ ಟೆಂಡರ್ ಕರೆಯಲು ಅನುಮತಿ ಕೊಟ್ಟಿರುವುದನ್ನು ಮೊದಲು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಪ್ರತಿಯನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಬೇಕಾದರೆ ನಿಮ್ಮ ಕಾರ್ಯದರ್ಶಿಯವರಿಂದ ಅದನ್ನು ತರಿಸಿಕೊಳ್ಳಿ. 15.03.2007ರಲ್ಲಿ P.W.D. ಕಾರ್ಯದರ್ಶಿಯವರು ಕೊಟ್ಟಿರುವ ಪತ್ರ ಇದೆ. ಮುಖ್ಯ ಇಂಜಿನಿಯರ್ ರವರಿಗೆ ಈ ರೀತಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ 100 ಕೋಟಿ 2007 ರಲ್ಲಿ 2008 ರಲ್ಲಿ 20 ಕೋಟಿ ಆರ್ಥಿಕ ಸಹಾಯ ನಿರೀಕ್ಷಿಸಿ ಕೇಂದ್ರದಿಂದ, ರಾಜ್ಯ ಸರ್ಕಾರದಿಂದ 55 ಕೋಟಿ 2007-2008ರಲ್ಲಿ, ಈ ರೀತಿ ದುಡ್ಡು ಇದೆ ಟೆಂಡರ್ ಕರಿಯಪ್ಪ ಎಂದು P.W.D ಕಾರ್ಯದರ್ಶಿ, 69, ಲೋಕೋಪಯೋಗಿ ಇಲಾಖೆ, ಇಪಿಎ:2007, ದಿನಾಂಕ:15.03.2007. ದಯಮಾಡಿ ನೀವು ಇದನ್ನು ನೋಟ್ ಮಾಡಿಕೊಳ್ಳಿ, ತಾವು ತಾಳ್ಮೆಯಿಂದಿರಿ. ನೀವು ಎರಡು ಸಲ ಲೋಕೋಪಯೋಗಿ ಸಚಿವರಾಗಿದ್ದರು. ಇದರ ಪ್ರತಿಯನ್ನು ನಿಮಗೆ ಕಳುಹಿಸುತ್ತೇನೆ. ನೋಟ್ ಮಾಡಿಕೊಳ್ಳಿ. 12.03.2007 ರಲ್ಲಿ ಮೆಡಿಕಲ್ ಎಜ್ಯುಕೇಷನ್ ಕಾರ್ಯದರ್ಶಿಯವರು ಮೆಡಿಕಲ್ ಎಜ್ಯುಕೇಷನ್ ಸಚಿವರ ಅನುಮತಿಯನ್ನು ತೆಗೆದುಕೊಂಡು ಪತ್ರವನ್ನು ಕೊಟ್ಟಿದ್ದಾರೆ. ಬೇಕಾದರೆ ಫೈಲ್ ತೆಗೆದುಕೊಂಡು ಬಂದು ಇಡಿ. ಎರಡನೆಯದ್ದು, 15.03.2007ರಂದು ಟೆಂಡರ್ ಕರೆದು ನೋಟಿಫಿಕೇಷನ್ ಹಾಕಿದ್ದಾರಲ್ಲ, 15.03.2007ರಲ್ಲಿ ಟೆಂಡರ್ ಹಾಕಿದ್ದಾರೆ. ಟೆಂಡರ್ ಹಾಕಿದಾಗ ಯಾರೂ Mobilization advanceನ್ನು ಹೇಳುವುದಿಲ್ಲ. ಆದರೆ, ಟೆಂಡರ್ booklet ಕೊಡುತ್ತಾರಲ್ಲ ಆ bookletನಲ್ಲಿ ಇದು ಇದೆಯೋ ಇಲ್ಲವೋ ಎನ್ನುವುದನ್ನು ಸಭೆಯ ಮುಂದಿಡಿ. 15.03.2007ರಲ್ಲಿ ಟೆಂಡರ್ bookletನಲ್ಲಿರುವ ಕಂಡೀಷನ್ ಇದೆಯಲ್ಲ ಆ ಟೆಂಡರ್ bookletನ್ನು ನಾಲ್ಕು ಜನ ಗುತ್ತಿಗೆದಾರರಿಗೆ ಕೊಡುತ್ತೀರಲ್ಲ ಅದರಲ್ಲಿ 33 ಕೋಟಿ advance ಗೆ include ಆಗಿತ್ತೋ ಇಲ್ಲವೋ

ಎಂಬುದನ್ನು ಸಭೆಯ ಮುಂದೆ ಟೆಂಡರ್ booklet ನ್ನು ಇಡಿ. ಇಲ್ಲ ಎಂದರೆ ನೀವು ಏನು ಹೇಳಿದರು ಭಾಗಿಯಾಗುತ್ತೇನೆ. ಸಭೆಯನ್ನು ತಪ್ಪುದಾರಿಗೆ ಎಳೆಯಬಾರದು.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನೀವು ಹೇಳುವುದು ಅವರು ಹೇಳುವುದು dispute ಮಾಡುತ್ತಿದ್ದೀರಿ. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಇಲ್ಲಿ ಇಟ್ಟುಬಿಡಿ ನೋಡೋಣ. ನಮಗೂ ಗೊತ್ತಾಗಲಿ, ಯಾರ್‍ಯಾರು ಏನೇನು ಹೊಡೆದಿದ್ದಾರೆ ಎಂಬುದು ಗೊತ್ತಾಗಲಿ.

ಶ್ರೀ ಸಿ.ಎಂ.ಉದಾಸಿ:– ಇದರ ಅವಶ್ಯಕತೆ ಇಲ್ಲ.

ಶ್ರೀ ಸಿದ್ದರಾಮಯ್ಯ:– Let us examine the documents. Place all the documents before the House. We will go through the documents.

ಶ್ರೀ ಹೆಚ್.ಡಿ.ರೇವಣ್ಣ:– ಅದು ಸರಿ. ಇದರ ಬಗ್ಗೆ ಸದನದ ಸಮಿತಿ ಮಾಡಿ.

ಶ್ರೀ ಸಿದ್ದರಾಮಯ್ಯ:– We will find out. ಯಾರು, ಏನೇನಾಗಿದೆ, ಅಧಿಕಾರಿಗಳು ಯಾರು, ಅವರು ನೀವು ಏನೇನು ಎಂಬುದೆಲ್ಲ ಹೊರಕ್ಕೆ ಬರಲಿ. ದಯವಿಟ್ಟು ಅದನ್ನು ಮಾಡಿ You please come out ಇವರು ಕ್ಯಾಬಿನೇಟ್ ಮುಂದೆ ಬಂದಿದೆಯೆಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಇವತ್ತಿನ ಮುಖ್ಯಮಂತ್ರಿಯವರು ಅವತ್ತಿನ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು. ಅವರು ಹಣವನ್ನು ಬಿಡುಗಡೆ ಮಾಡಿದ್ದಾರೆ.

ಶ್ರೀ ಸಿ.ಎಂ.ಉದಾಸಿ:– ಅವರು ಇದ್ದಾಗ ಬಿಡುಗಡೆ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ:– ಇನ್ನು ಯಾರು ಇದ್ದಾಗ ಬಿಡುಗಡೆ ಮಾಡಿದರು?

ಶ್ರೀ ಸಿ.ಎಂ.ಉದಾಸಿ:– ಬಿಡುಗಡೆಯದ್ದು ಬೇರೆ ವಿಚಾರ. ಹಣ ಬಿಡುಗಡೆಯಾಗಿದ್ದು 24.09.2007ಕ್ಕೆ

(ಗೊಂದಲ)

ಅಧ್ಯಕ್ಷರು:– ಒಬ್ಬರು ಮಾತನಾಡಿ.

ಹೆಚ್.ಸಿ.ಬಾಲಕೃಷ್ಣ:– ಇವೆಲ್ಲಾ ಚರ್ಚೆ ಬೇಡ. ಇದರ ಬಗ್ಗೆ ಸದನದ ಸಮಿತಿ ಆಗಲಿ. ಯಾರ್‍ಯಾರು ಏನೇನು ಮಾಡಿದ್ದಾರೆ ಏನೇನಾಯಿತು ಎಂಬುದು ಎಲ್ಲರಿಗೂ ಗೊತ್ತಾಗಲಿ.

ಶ್ರೀ ಸಿ.ಎಂ.ಉದಾಸಿ:– ವಿಚಾರಣೆ ಮಾಡುತ್ತೇವೆಂದರೆ ನೀವೇ ಬೇಡವೆಂದು ಹೇಳುತ್ತೀರಲ್ಲ?

(ಗೊಂದಲ)

24.09.2007 ರಂದು ಮುಂಗಡ ಹಣವನ್ನು ನೀಡಿರುವುದು. 5.10.2007ಕ್ಕೆ Government dissolve ಆಗಿದ್ದು. ಸರ್ಕಾರ ಬೀಳುವ 11 ದಿವಸ ಮೊದಲು ಇದು ಆಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇವೆಲ್ಲಾ ಈ ರೀತಿ ಇರಬೇಕಾದರೆ ಇದರ ಬಗ್ಗೆ ವಿಚಾರಣೆಗೆ ನಿವೃತ್ತ ಅಧಿಕಾರಿಗಳನ್ನು

ನೇಮಿಸುತ್ತೇವೆಂದರೆ ಏಕೆ ಆಕ್ಷೇಪ ಮಾಡಬೇಕು. ನಿಮಗೆ ಅಷ್ಟೊಂದು ಭರವಸೆ ಇದ್ದರೆ ಏಕೆ ಆಕ್ಷೇಪ ಮಾಡುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಬೇಕಾದರೆ ವಿಚಾರಣೆ ಮಾಡಿ ಒಂದು ತಿಂಗಳಿನಲ್ಲಿ ವರದಿ ಕೊಡಿ ಎಂದು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅದರ ದಾಖಲಾತಿಗಳನ್ನೆಲ್ಲ ಒಂದು ಸಲ ಇಟ್ಟುಬಿಡಿ. ನಾವೂ ಅದನ್ನು ನೋಡುತ್ತೇವೆ. ಅದು 5.10.2007ರಲ್ಲಿ ಆಯಿತೇ, 3.10.2007ರಲ್ಲಿ ಆಯಿತೇ, ನೀವು withdraw ಮಾಡಿಕೊಂಡ ಮೇಲೆ ಆಯಿತೇ? ಆಮೇಲೆ ಆಯಿತೆ ಎಲ್ಲವನ್ನು ಸ್ವಲ್ಪ ನೋಡೋಣ. ಯಾರ್ಯಾರು ಇದ್ದಾರೆ, ರೇವಣ್ಣನವರದ್ದು ತಪ್ಪೋ, ಇವರದ್ದು ತಪ್ಪೋ, ನಿಮ್ಮದು ತಪ್ಪೋ ಎಂಬುದನ್ನು ನೋಡೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಚಿವರು 24.09.2007ರಂದು ಮುಂಗಡ ಹಣ ಬಿಡುಗಡೆಯಾಯಿತು ಎಂದು ಹೇಳುತ್ತಿದ್ದಾರೆ. ಹಣಕಾಸು ಇಲಾಖೆಯಿಂದ ಸಹಮತಿ ಪಡೆದು ಸನ್ಮಾನ್ಯ ಇವತ್ತಿನ ಮುಖ್ಯಮಂತ್ರಿಯವರು ಅಂದು ಹಣಕಾಸು ಸಚಿವರಾಗಿದ್ದರು, ಅವರೇ ಅದಕ್ಕೆ ಅನುಮತಿ ಕೊಟ್ಟಿದ್ದಾರೆ. ಬೇಕಾದರೆ ಕಡತವನ್ನು ಸದನಕ್ಕೆ ತರಿಸಿ. 16.08.2007 ರಲ್ಲಿ ಸಂಖ್ಯೆ:1623, ವೆಚ್ಚ–3, ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಗೆ 18.07.2007ನೇ ಇಸವಿಯಲ್ಲಿ ಆಗಿದೆ. ಬೇಕಾದರೆ ಇದನ್ನು ಕಳುಹಿಸಿಕೊಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರೇ ಅಂದು ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರಾಗಿದ್ದರು. ಆದೇಶದ ಪ್ರತಿ ಕಳುಹಿಸಿಕೊಡುತ್ತೇನೆ. ಅವರು ಉಪಮುಖ್ಯಮಂತ್ರಿಯಾಗಿದ್ದ ಕಾಲದಲ್ಲೇ ಹಣ ಬಿಡುಗಡೆಯಾಗಿದೆ. ಆರೋಗ್ಯ ಇಲಾಖೆಯ ಆದೇಶದ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಿಮ್ಮ ಪ್ರಧಾನ ಕಾರ್ಯದರ್ಶಿಯವರ ಮಾತನ್ನು ಕೇಳಿ ಅರ್ಥಂಬರ್ಥ ಹೇಳಲು ಹೋಗಬೇಡಿ. ಪೂರ್ತಿ ಓದಿಕೊಂಡು ಬನ್ನಿ. ಇದರ ಪ್ರತಿ ಇದ್ದರೆ ತೆಗೆದುಕೊಳ್ಳಿ. ಆದ್ದರಿಂದ ಇದರ ಬಗ್ಗೆ ಸದನದ ಸಮಿತಿ ಮಾಡಿ. ಇದರಲ್ಲಿ ಐದು ಜನ ಸಚಿವರುಗಳು involve ಆಗಿದ್ದಾರೆ. ಮುಖ್ಯಮಂತ್ರಿಗಳು, ಲೋಕೋಪಯೋಗಿ ಸಚಿವರು, ಹಣಕಾಸು ಸಚಿವರು, ಕೈಗಾರಿಕಾ ಸಚಿವರು ಈ ರೀತಿ ಐದು ಜನ ಸಚಿವರು ಇದರಲ್ಲಿ involve ಆಗಿದ್ದಾರೆ. ಅಧಿಕಾರಿಗಳ ಕೈಯಲ್ಲಿ ಮಾಡಲು ಆಗದಿದ್ದರೆ ಸಧನದ ಸಮಿತಿ ಮಾಡಿ. ಅದೇನು findings ಬರಲಿ.

ಅಧ್ಯಕ್ಷರು:– ರೇವಣ್ಣನವರೆ ಇದನ್ನು ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:–..... ಅದು ಈಗ ಈಚೆಗೆ ಬರಲಿ. 2 ಕೋಟಿ 9 ಲಕ್ಷ ರೂ.ಗಳೆಂದು ಹೇಳುತ್ತಿದ್ದೀರಲ್ಲಾ, ನೀವು 9 ತಿಂಗಳಿನಿಂದ ಏನು ಮಾಡುತ್ತಿದ್ದೀರಿ?

(ಗೊಂದಲ)

.... ಈ ಬಗ್ಗೆ ಸದನ ಸಮಿತಿ ಮಾಡಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ರೇವಣ್ಣನವರೆ, ದಯವಿಟ್ಟು ಕುಳಿತುಕೊಳ್ಳಿ. ಈ ವಿಷಯದ ಚರ್ಚೆಯನ್ನು ಇಲ್ಲಿಗೇ ಮುಗಿಸೋಣ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಈ ಕಡೆಗೆ ಮತ್ತು ಆ ಕಡೆಗೆ, ಎರಡೂ ಕಡೆ ಗೋಲ್‌ಮಾಲ್ ನಡೆದಂತೆ ಕಾಣುತ್ತದೆ. ಅವರೂ ಹೊಡೆದಿದ್ದಾರೆ, ಇವರೂ ಹೊಡೆದಿದ್ದಾರೆ; ಇಬ್ಬರೂ ಹೊಡೆದಿದ್ದಾರೆ.

(ಗೊಂದಲ)

ಅಧ್ಯಕ್ಷರು:– Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸದನ ಸಮಿತಿ ಮಾಡಿ. ಯಾರ್‍ಯಾರು ಎಷ್ಟೆಷ್ಟು ಹಂಚಿಕೊಂಡರು ಎಂಬುದು ಹೊರಗಡೆ ಬರಲಿ.

(ಗೊಂದಲ)

ಅಧ್ಯಕ್ಷರು:– Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, ಈ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ statement ವೊಂದನ್ನು ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವುದರಿಂದ, ಇದರ ಬಗ್ಗೆ ತನಿಖೆಗೆ ಸರ್ಕಾರ ಒಪ್ಪಿರುವುದರಿಂದ, ಇದರಲ್ಲಿ ಬೇರೆ ಇನ್ನೇನೂ ಪ್ರಶ್ನೆಯೇ ಇಲ್ಲ. ಆದ್ದರಿಂದ......

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು, ಮುಖ್ಯಮಂತ್ರಿಗಳು ಎಲ್ಲರೂ ಇರುವುದರಿಂದ ನಿವೃತ್ತ ಅಧಿಕಾರಿಗಳಿಂದ ತನಿಖೆ ಮಾಡಿಸುವುದು ಬೇಡ. ಸದನಕ್ಕೆ ಗೊತ್ತಾಗಲಿ, ಸದನ ಸಮಿತಿ ಮಾಡಿ. ಸದನದಲ್ಲಿ ಈ ಬಗ್ಗೆ ತೀರ್ಮಾನವಾಗಲಿ....

(ಗೊಂದಲ)

ಇದರಲ್ಲಿ ಮುಖ್ಯಮಂತ್ರಿಗಳಿದ್ದಾರೆ, Health Minister ಇದ್ದಾರೆ, ಮಾಜಿ ಮುಖ್ಯಮಂತ್ರಿಗಳಿದ್ದಾರೆ, ಮಾಜಿ ಲೋಕೋಪಯೋಗಿ ಸಚಿವರು ಇದ್ದಾರೆ. ಎಲ್ಲರೂ....

(ಗೊಂದಲ)

ಅಧ್ಯಕ್ಷರು:- Please, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಒಂದು ಒಳ್ಳೆಯ point ಅನ್ನು ಹೇಳಿದ್ದಾರೆ....

ಅಧ್ಯಕ್ಷರು:- ಈಗ ಇದರ ಬಗ್ಗೆ ಈಗಾಗಲೇ ಚರ್ಚೆ ಸಾಕಷ್ಟು ಆಗಿದೆ. ಇದನ್ನು ಇಲ್ಲಿಗೇ ಮುಗಿಸೋಣ. ಇನ್ನೂ ಚರ್ಚಿಸಬೇಕಾಗಿರುವ ವಿಷಯ ಬಹಳಷ್ಟು ಇದೆ. ನಿಯಮ 69ರ ಅಡಿಯಲ್ಲಿ ಇನ್ನೂ ಮೂರು ವಿಷಯಗಳನ್ನು ಚರ್ಚಿಸಬೇಕಾಗಿದೆ, Calling Attentions ಕೂಡ ಇವೆ. ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಅದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದೀರಿ.

(ಗೊಂದಲ)

ಏನಾದರೂ ಮಾತನಾಡುವುದಾದರೆ ಒಬ್ಬೊಬ್ಬರೇ ಮಾತನಾಡಿ. ಎಲ್ಲರೂ ಹೀಗೆ ಒಟ್ಟಿಗೇ ಎದ್ದು ನಿಂತು ಮಾತನಾಡಿದರೆ ಹೇಗೆ? Please, ಎಲ್ಲರೂ ಕುಳಿತುಕೊಳ್ಳಿ. ಯಾರಾದರೂ ಒಬ್ಬರು ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನಾನೊಂದು submission ಮಾಡಬಯಸುತ್ತೇನೆ. ಇಲ್ಲೊಂದು ಸರ್ಕಾರಿ ಆದೇಶವಿದೆ. ಇಷ್ಟು ಹೊತ್ತು ಮಾನ್ಯ ಮಂತ್ರಿಗಳು ನೀಡಿರುವ ಹೇಳಿಕೆಯನ್ನು ನಾವು ನೋಡುತ್ತಿದ್ದೇವೆ. ನಾವು possession hand over ಮಾಡಿಲ್ಲ, mobilisation advance ಅನ್ನು ಕೊಡುವುದಕ್ಕೋಸ್ಕರ ಇವತ್ತು ಟೆಂಡರ್‌ನಲ್ಲಿ specification ಇರಲಿಲ್ಲ, ಇವತ್ತು ಅದಕ್ಕೋಸ್ಕರವಾಗಿ ಅಧಿಕಾರಿಗಳನ್ನು suspend ಮಾಡಿದ್ದೇವೆ, enquiry ಮಾಡುತ್ತಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಮಾನ್ಯ ರೇವಣ್ಣನವರು ಕೋಟ್ ಮಾಡಿದ Government Order ಅನ್ನು ನಾವು ಈಗ ನೋಡಿದೆವು. ಸರ್ಕಾರದಿಂದಲೇ ಈ ಆದೇಶ issue ಆಗಿದೆ. "ಶೇಕಡ 10 ರಷ್ಟು ಮುಂಗಡ mobilisation advance 33.37 ಕೋಟಿ ರೂ.ಗಳನ್ನು 2007-08ನೇ ಸಾಲಿನ ಲೆಕ್ಕ ಶೀರ್ಷಿಕೆ so and so..." ಅದಕ್ಕೆ ಸರ್ಕಾರ ಬಿಡುಗಡೆ ಮಾಡಿದೆ ಎಂದು ಆದೇಶದಲ್ಲಿದೆ. ಅದಕ್ಕೆ 'ಈ.ಪಾಪಣ್ಣ, ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ' ಇವರು ಸಹಿ ಮಾಡಿದ್ದಾರೆ. ಈ ಆದೇಶ 17.08.2007ರಲ್ಲಿ ಹೊರಡಿಸಲಾಗಿದೆ.

ಸರ್ಕಾರಿ ಆದೇಶ issue ಆದ ಮೇಲೆ, ಕೆಳಗಿರತಕ್ಕವರು ಅದನ್ನು implement ಮಾಡಿದರೆ, ಅದು ತಪ್ಪಾಗುತ್ತದೆಯೇ? ಇದಕ್ಕೆ ಸರ್ಕಾರವೇ ಆದೇಶ ಮಾಡಿದೆ. ಇದಕ್ಕೆ ಹಣಕಾಸಿನ ಸಚಿವರ ಒಪ್ಪಿಗೆ ಇಲ್ಲದಿರುವುದಕ್ಕೆ ಸಾಧ್ಯವೇ ಇಲ್ಲ. ಇದರಲ್ಲಿ ಎಲ್ಲೋ ಒಂದು ಕಡೆ ಲೋಪ ಇದೆ, ಅದನ್ನು ಎಲ್ಲೋ ಒಂದು ಕಡೆಗೆ ತೋರಿಸತಕ್ಕಂಥ ಕೆಲಸವಾಗಿದೆ. 'ಬೆಟ್ಟ ಅಗೆದು ಗೊಣ್ಣೆ ಹುಳ ಹಿಡಿದರು' ಎನ್ನುವ ರೀತಿಯಲ್ಲಿ ಮಾಡತಕ್ಕದ್ದು ಸರಿಯಲ್ಲ. ದಯಮಾಡಿ ಈಗ records ಅನ್ನು ತರಿಸಿ. ಇದನ್ನು ಒಬ್ಬ IAS Officer enquiry ಗೆ ಕೊಟ್ಟರೆ. ಆತ ಒಬ್ಬ ಅಧಿಕಾರಿಯನ್ನು suspend ಮಾಡಿದ್ದು ಸರಿಯೋ ತಪ್ಪೋ ಎಂದು ಹೇಳುವುದಕ್ಕೆ 4 ತಿಂಗಳು ತೆಗೆದುಕೊಳ್ಳುತ್ತಾನೆ, ಅದು ಬೇಡ. ದಯಮಾಡಿ ಮಾನ್ಯ ಸ್ಪೀಕರ್‌ರವರು ತಮ್ಮ ಛೇಂಬರ್‌ಗೆ recordsನ್ನು ತರಿಸಲಿ. ಬಹುಶಃ ಇದು ಯಾರಿಗೂ ಗೊತ್ತಿಲ್ಲದೆ ಇರತಕ್ಕದ್ದೇನಲ್ಲ. ಎಲ್ಲರಿಗೂ records ಗೊತ್ತಾಗುತ್ತದೆ. ಹಣಕಾಸಿನ ಇಲಾಖೆಯದೇ ತಪ್ಪು. ಈಗಿನ ಮುಖ್ಯಮಂತ್ರಿಗಳೇ ಆಗ ಹಣಕಾಸಿನ ಮಂತ್ರಿಗಳಾಗಿದ್ದರು. ಇದರಲ್ಲಿ ಯಾರ್‍ಯಾರು ಪಾಲುದಾರರಾಗಿದ್ದಾರೆ, ಲೋಪ ಯಾರಿಂದ ಆಗಿದೆ ಎನ್ನುವ ಸತ್ಯಾಂಶ ಈ ಸಭೆಗೆ ಗೊತ್ತಾಗಲಿ. ದಯಮಾಡಿ ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ತಮ್ಮ ಛೇಂಬರ್‌ಗೆ ತರಿಸಿ, ತೀರ್ಮಾನ ಮಾಡತಕ್ಕದ್ದು ಒಳ್ಳೆಯದು. ಇವತ್ತು ಬೆಳಿಗ್ಗೆ ಪೇಪರ್‌ನಲ್ಲಿ ನೋಡಿದೆವು. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ land acquistion ಅನ್ನು High Court upheld ಮಾಡಿದೆ. ಆದ್ದರಿಂದ, ಇದರ ಬಗ್ಗೆ ಇನ್ನಷ್ಟು ವಿಳಂಬ ಮಾಡದೆ, ಆದಷ್ಟು ಶೀಘ್ರವಾಗಿ ಇದರ ಕೆಲಸ ಮಾಡಲಿಕ್ಕೆ ಸಹಾಯವಾಗುವಂತೆ ಮಾಡಬೇಕು. Enquiry ಎಂದು ಇನ್ನೊಂದು ಆರು ತಿಂಗಳೋ, ವರ್ಷವೋ ಮಾಡುವುದರಿಂದ ಖಂಡಿತ ವಿಶ್ವವಿದ್ಯಾನಿಲಯಕ್ಕೆ ದೊಡ್ಡ ಪೆಟ್ಟು ಬೀಳುತ್ತದೆ. ಮಾನ್ಯ ಬಚ್ಚೇಗೌಡರೆ, ದಯಮಾಡಿ ತಾವು ಅರ್ಥ ಮಾಡಿಕೊಳ್ಳಿ, ಒಬ್ಬ IAS Officerಗೆ ನೀವು terms of reference ಏನೆಂದು ಕೊಡುತ್ತಿರಿ. ನೀವು ಕೊಡತಕ್ಕದ್ದು ನಮಗೆ ಗೊತ್ತಾಗುವುದಿಲ್ಲ. ಅಧಿಕಾರಿ ಯಾರೂ ಒಬ್ಬರನ್ನು suspend ಮಾಡಿದ್ದೇವೆ, ಅದು ಸರಿಯೋ? ಅಲ್ಲವೋ? ಎಂದು ನೀವು ವರದಿ ಕೇಳುತ್ತೀರಿ. ಇದರಲ್ಲಿರುವ ಪ್ರಶ್ನೆ ಅದಲ್ಲ. ಇದರಲ್ಲಿ involve ಆಗಿರತಕ್ಕವರು ಅಧಿಕಾರಿಗಳಲ್ಲ. ಇದರಲ್ಲಿ ಸರ್ಕಾರ ಮತ್ತು ಸರ್ಕಾರದ ಮಂತ್ರಿಗಳು ಬಿಟ್ಟರೆ ಬೇರೆ ಯಾರು ಇಲ್ಲ. ಇದನ್ನು ಏಕೆ ಇಟ್ಟುಕೊಂಡು ಚರ್ಚೆ ಮಾಡುತ್ತೀರಿ? ದಯಮಾಡಿ ಕಡತಗಳನ್ನು ತರಿಸಿ, ಆಗ ಸತ್ಯಾಂಶ ಗೊತ್ತಾಗುತ್ತದೆ. ಮಾನ್ಯ ಕಟ್ಟಾರವರೆ, ನೀವು 2007ರಲ್ಲಿ ನೀವು ಇರಲಿಲ್ಲವೆಂದು ಹೇಳುವುದಾದರೆ, ನೀವ್ಯಾಕೆ ಚಿಂತೆ ಮಾಡುತ್ತೀರಿ? ವಿಶ್ವವಿದ್ಯಾನಿಲಯ ಆಗಬೇಕೋ? ಬೇಡವೋ? ಬೇಗ ವಿಶ್ವವಿದ್ಯಾನಿಲಯ ಪ್ರಾರಂಭವಾಗಬೇಕೋ ಬೇಡವೋ? ದಯಮಾಡಿ records ತರಿಸಿ ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ಒಬ್ಬೊಬ್ಬರೇ ಮಾತನಾಡಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೆ, ಒಬ್ಬ ಅಧಿಕಾರಿ ತಪ್ಪು ಮಾಹಿತಿಯನ್ನು ಕೊಟ್ಟಾಗ.....

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ದಯಮಾಡಿ ಮಾನ್ಯ ಸಚಿವರು ಯೀಲ್ಡ್ ಆಗಬೇಕು.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:- ...... ಇದು ತಪ್ಪಲ್ಲವೇ?......

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ...... ಸರ್ಕಾರಿ ಆದೇಶ ಯಾರದು? ಹಣ ಬಿಡುಗಡೆ ಮಾಡಿದ್ದಾರೆ ಎನ್ನುವ ಕಾರಣಕ್ಕೋಸ್ಕರ ನೀವು ಅಧಿಕಾರಿಗಳ ವಿರುದ್ಧ action ತೆಗೆದುಕೊಳ್ಳುವುದಾದರೆ ಹೇಗೆ? ಸರ್ಕಾರಿ ಆದೇಶವನ್ನು ಮಂತ್ರಿಗಳು ಮಾಡಿ, ಅಧಿಕಾರಿಗಳನ್ನು suspend ಮಾಡಿರುವುದು ಯಾವ ನ್ಯಾಯ ಇದು?...

(ಗೊಂದಲ)

ಅಧ್ಯಕ್ಷರು:- ಎಲ್ಲರೂ ಈ ರೀತಿಯಾಗಿ ಒಟ್ಟಿಗೇ ಮಾತನಾಡಿದರೆ, ಯಾವುದೂ ಕೂಡ record ಗೆ ಹೋಗುವುದಿಲ್ಲ. ಹೀಗೆ ಪರಸ್ಪರ ನೀವು ಮಾತನಾಡುವುದಾದರೆ, ಯಾವುದೂ record ಗೆ ಹೋಗುವುದಿಲ್ಲ. ಯಾರಾದರೂ ಒಬ್ಬರೇ ಮಾತನಾಡಿ. ಯಾರಾದರೂ ಒಬ್ಬರು ಯೀಲ್ಡ್ ಆಗಿ. ಎಲ್ಲರೂ ಮಾತನಾಡುವುದಾದರೆ, ಏನು ತಿಳಿಯುತ್ತದೆ? ಎಲ್ಲರೂ ಮಾತನಾಡುವಂತಹ ಅವಶ್ಯಕತೆ ಇಲ್ಲ. Please, ಒಬ್ಬರು ಮಾತ್ರ ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- .... xxx xxx xxx xxx

(ಗೊಂದಲ)

ಅಧ್ಯಕ್ಷರು:- ಮಾನ್ಯ ಜಯಚಂದ್ರರವರೆ, ನೀವೇನೋ ಹೊಸದಾಗಿ ಹೇಳಲಿಕ್ಕೆ ಹೊರಟಿದ್ದೀರಿ. ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ನೋಟಿಸ್ ಕೊಟ್ಟಾಗ, ಅವರು ಆ ವಿಷಯವನ್ನು ತಮ್ಮ ನೋಟಿಸ್‌ನಲ್ಲಿ ಹೇಳಿದ್ದಾರೆಯೇ? ಮಂತ್ರಿಗಳ ಬಗ್ಗೆ ಅದರಲ್ಲಿ ಏನಾದರೂ ಇದೆಯೇ? 'ಮಂತ್ರಿಗಳು involve ಆಗಿದ್ದಾರೆ' ಎಂದು ನೀವೇನು ಈಗ ಹೇಳುತ್ತಿದ್ದೀರಿ. ಆ ಬಗ್ಗೆ ಪ್ರಸ್ತಾಪಿಸಲು ಹೊಸದಾಗಿ ನೀವೇನಾದರೂ ನೋಟಿಸ್ ಕೊಟ್ಟಿದ್ದೀರಾ? ಅದರಲ್ಲಿ ನೀವು specific allegation ಏನಾದರೂ ಮಾಡಿದ್ದೀರಾ? ಅವರು ಕೊಟ್ಟಿರುವ ನಿಲುವಳಿ

ಸೂಚನೆಯಲ್ಲಿ 'ಮಂತ್ರಿಗಳು involve ಆಗಿದ್ದಾರೆ' ಎಂದು ಅವರೇನಾದರೂ ಹೇಳಿದ್ದಾರೆಯೇ? ಮಾನ್ಯ ಸಭಾಧ್ಯಕ್ಷರ ಆದೇಶದ ಪ್ರಕಾರ ಕಡತದಿಂದ ತೆಗೆದುಹಾಕಲಾಗಿದೆ. ಸುಮ್ಮನೆ ಹಾಗೆ ಮಾತನಾಡುತ್ತಾ ಹೋದರೆ ಏನಾಗುತ್ತದೆ? ಆ ಪ್ರಸ್ತಾಪ ಅವರ ನಿಲುವಳಿಸೂಚನೆಯಲ್ಲಿ ಬರಬೇಕು. (ಗೊಂದಲ) ಯಾರಾದರು ಮಂತ್ರಿಗಳು involve ಆಗಿದ್ದಾರೆಂದು ನೀವು ಆಪಾದನೆ ಮಾಡುವುದಾದರೆ specific notice ಕೊಡಿ. ಜಯಚಂದ್ರರವರೆ, ಮಂತ್ರಿಗಳು involve ಆಗಿದ್ದಾರೆಂದು ನೀವು ಆಪಾದನೆ ಮಾಡುತ್ತಿದ್ದಿರಿ, ಮಾಡುವಾಗ specific notice ಕೊಡಿ, interpretation ಮಾಡುವುದು ಬೇಡ, ನೀವು specific ಆಗಿ notice ಕೊಡಿ. ಯಾರೋ ಮಂತ್ರಿಗಳು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆಂದರೆ, ನೀವು notice ಕೊಡಿ.(ಗೊಂದಲ)

ಶ್ರೀ ಆರ್.ಅಶೋಕ್(ಸಾರಿಗೆ ಸಚಿವರು):- ಅವರು(ಜಯಚಂದ್ರ) ಮಾತನಾಡುವಾಗ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಸೇರಿದ್ದಾರೆಂದು ಹೇಳಿದ್ದಾರೆ, ದಯವಿಟ್ಟು ಅದನ್ನು ಕಡತದಿಂದ ತೆಗೆಸಿ ಹಾಕುವುದು.

(ಗೊಂದಲ)

ಅಧ್ಯಕ್ಷರು:- ಎಲ್ಲರು ಮಾತನಾಡುವಂತಿಲ್ಲ ಒಬ್ಬರು ಮಾತನಾಡುವುದು, ನೀವು ಇಲ್ಲಿ ಮಾತನಾಡುವುದು ಯಾವುದೂ ದಾಖಲೆಗೆ ಹೋಗುವುದಿಲ್ಲ. ನಿಲುವಳಿ ಸೂಚನೆಯನ್ನು ಕೊಟ್ಟವರು ಅವರು. ಜಯಚಂದ್ರರವರು ಈಗ ಮಂತ್ರಿಗಳ ಇನ್ವಾಲ್ವ್‌ಮೆಂಟ್ ಇದೆ ಎಂದು ಹೇಳಿದರು, ಇಲ್ಲಿ ರೂಲ್ಸ್ ಪ್ರಕಾರ ಏನಿದೆ ಎಂದರೆ, "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply;"

ಶ್ರೀ ಸಿದ್ದರಾಮಯ್ಯ:- ಯಾರ ಮೇಲೋ ಅಲಿಗೇಷನ್ ಮಾಡಿಲ್ಲ, ಏನು ಹೇಳಿದರೆಂದು ನಿಮಗೆ ಹೇಳಿಬಿಡುತ್ತೇನೆ.

(ಗೊಂದಲ)

ಅಧ್ಯಕ್ಷರು:- ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆಂದು ಹೇಳಿದರು, subject change ಆಯಿತು, ಇಲ್ಲಿ ಅಧಿಕಾರಿಗಳು ಪಾರಾಗಿಬಿಟ್ಟರು, ಇಲ್ಲಿ ಏನಾಗುತ್ತದೆ ನೋಡಿ, ಅವರು ನಿಲುವಳಿ ಸೂಚನೆಯ ಮೇಲೆ ಯಾವ ಮಂತ್ರಿಗಳ ಮೇಲು ಅಲಿಗೇಷನ್ ಮಾಡಿಲ್ಲ, ನೀವು ಅಧಿಕಾರಿಗಳ ಇನ್ವಾಲ್ವ್‌ಮೆಂಟ್ ಇಲ್ಲವೆಂದು ತಾವು ಹೇಳುತ್ತೀರಿ, ಈಗ ಮಂತ್ರಿಗಳ ಮೇಲೆ ಹೋಯಿತು. ಮಂತ್ರಿಗಳನ್ನು ಇನ್ವಾಲ್ವ್ ಮಾಡಿ, ಆದರೆ ನಮಗೆ specific notice ಕೊಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಸರ್ಕಾರಿ ಆದೇಶವಾಗಬೇಕಾದರೆ ಮಂತ್ರಿಗಳ ಸಹಿ ಆಗಿರಲೇಬೇಕು, ಆಗಿದ್ದ ಮಂತ್ರಿಗಳ್ಯಾರು?

ಅಧ್ಯಕ್ಷರು: ಆಗಿದ್ದರೆ ಹೇಳಿ, ಅವರ involvement ಇದೆ ಎಂದು ನೋಟಿಸ್ ಕೊಡಿ, ನೇರವಾಗಿ ಅಲಿಗೇಷನ್ ಮಾಡಿಬಿಡುವುದೇ

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):- ಪ್ರಶ್ನೆ ಇರುವುದಿಷ್ಟೆ, ನಾವು ಯಾರ ವಿರುದ್ಧವಾಗಿ ನಿರ್ದಿಷ್ಟವಾಗಿ ಆಪಾದನೆ ಮಾಡಬೇಕಾದರೂ ನೋಟೀಸ್ ಕೊಡಬೇಕು, ಹೌದಾ? ಅದು defamatory ಇರಬಾರದು, ಆಮೇಲೆ ಅಲಿಗೇಷನ್ ಮಾಡಬೇಕಾದರೆ ನೋಟೀಸ್ ಕೊಡಬೇಕು. ಆದರೆ ಅವರು ಇಲ್ಲಿ ಹೇಳುವುದೇನೆಂದರೆ, ಯಾವುದೇ ಒಂದು ಸರ್ಕಾರಿ ಆದೇಶ ಹೊರಬರಬೇಕಾದರೆ, G.O issue ಆಗಬೇಕಾಗಿದ್ದರೆ, ಆ ಫೈಲ್‌ನಲ್ಲಿ ಸಂಬಂಧಪಟ್ಟಂಥ Medical Education Secretary, Medical Education Minister, Finance Secretary, Finance Minister ಇಷ್ಟೆಲ್ಲಾ ನೋಡಿದ ಮೇಲೆ ಕ್ಯಾಬಿನೆಟ್‌ಗೆ ಬರುತ್ತದೆ. ಅಂತಿಮವಾಗಿ ಕ್ಯಾಬಿನೆಟ್ ಅಪ್ರೂವಲ್ ಆದ ಮೇಲೆ 2-3 ದಿವಸ ಇಟ್ಟಿಕೊಂಡು, ತದ ನಂತರ ಪುನಃ cabinest secretary ಯವರು ಸಂಬಂಧಪಟ್ಟ ಇಲಾಖೆಗೆ ವಾಪಸ್ ಕಳುಹಿಸಿ ಆಮೇಲೆ ಈ ಜಿಓ ಹೊರಡಿಸಲಾಗುತ್ತದೆ. ಅದಕ್ಕಾಗಿ ಇಲ್ಲಿ ಅವರದು ಪ್ರಶ್ನೆ ಇಷ್ಟೆ. ಈ ಸರ್ಕಾರಿ ಆದೇಶವಾಗಬೇಕಾದರೆ ಸಂಬಂಧಪಟ್ಟಂಥ ಮಂತ್ರಿಗಳು ಸಹಿ ಮಾಡದೆ ಆರ್ಡರ್ issue ಮಾಡುವುದಿಲ್ಲ ಅವರ್ಯಾರು? Medical Education Minister ಯಾರು? Finance Minister ಯಾರು?

(ಗೊಂದಲ)

ಅಧ್ಯಕ್ಷರು:- ಜಯಚಂದ್ರರವರು ಆ ರೀತಿ ಹೇಳಲಿಲ್ಲ, ಇದರಲ್ಲಿ ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆ, ಅಧಿಕಾರಿಗಳು ಯಾರದು ಜವಾಬ್ದಾರಿ ಇಲ್ಲ, ಮಂತ್ರಿಗಳು ಇನ್ವಾಲ್ವ್ ಇದ್ದಾರೆಂದು ಅವರು ಹೇಳಿದರು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ(ಇಂಧನ ಸಚಿವರು):- ವಿರೋಧಪಕ್ಷದ ನಾಯಕರೆ, ನೀವು ಹೇಳಿದ್ದು ಬೇರೆ, ಅವರು ಹೇಳಿದ್ದು ಬೇರೆ, ಅವರು ನೇರವಾಗಿ ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆಂದು ಹೇಳಿದರು, ನೀವು ಹೇಳಿದ್ದಕ್ಕು ಅವರು ಹೇಳಿದ್ದಕ್ಕು ಭಾರಿ ವ್ಯತ್ಯಾಸವಿದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- Revanna has got that order with consent of all these people.

ಶ್ರೀ ಬಸವರಾಜ ಬೊಮ್ಮಾಯಿ:- ಸನ್ಮಾನ್ಯ ಅಧ್ಯಕ್ಷರೆ, ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಬಗ್ಗೆ ಬಹಳ ದೊಡ್ಡದಾಗಿ ಚರ್ಚೆಯಾಗುತ್ತಿದೆ

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ಅಧ್ಯಕ್ಷರೆ, ನಾವು ಜಲಸಂಪನ್ಮೂಲ ಸಚಿವರಿಗೆ ಪ್ರಶ್ನೆ ಹಾಕಿಲ್ಲ, ನಾನು ನಿಲುವಳಿ ಸೂಚನೆಗೆ ಸಹಿ ಹಾಕಿದ್ದೇನೆ, ನಾನು ಹೇಳಬೇಕಲ್ಲವೇ? ನನಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಸದಸ್ಯರಾದ ಜಯಚಂದ್ರರವರು, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆಂದು ಹೇಳಿರುವುದನ್ನು ಕಡತದಿಂದ ಮೊದಲು ತೆಗೆಸಬೇಕು, ಅವರು ಮಾತಿನ ಭರದಲ್ಲಿ ಅದನ್ನು ಹೇಳಿದ್ದಾರೆ.

ಶ್ರೀ ಆರ್.ಅಶೋಕ್:- ಮುಖ್ಯಮಂತ್ರಿಗಳು ಹಾಗು ಮಂತ್ರಿಗಳ ಮೇಲೆ ಹೇಳಿರುವುದನ್ನು ಕಡತದಿಂದ ತೆಗೆಸಬೇಕು, ಅದು ತಪ್ಪು, ಅವರು ನೋಟಿಸ ಕೊಡದೆ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಓಕೆ, ಅದನ್ನು ತೆಗೆಸುತ್ತೇನೆ.

(ಗೊಂದಲ)

ರೇವಣ್ಣನವರು ಮಾತನಾಡಿದ ಮೇಲೆ ಈ ವಿಷಯ ಕ್ಲೋಸ್, ಇದಕ್ಕೆ ಎಷ್ಟು ಟೈಂ ಕೊಡಬೇಕು, ಎಲ್ಲಿಯವರೆಗೆ ಟೈಂ ಕೊಡೋಣ. ಅವರ ವಿಷಯವನ್ನು ಹೇಳಿದರು, ಉತ್ತರವನ್ನು ಕೊಟ್ಟರು, ನೀವು ಹೇಳಿದಿರಿ ಇದನ್ನು ಯಾವ ಎಂಡ್‌ಗೆ ತೆಗೆದುಕೊಂಡು ಹೋಗುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮುಖ್ಯಮಂತ್ರಿಗಳು ತನಿಖೆಗೆ ಆರ್ಡರ್ ಮಾಡಿದ್ದಾರೆ, ನೀವು ಈಗ ಆ ಎಲ್ಲಾ ದಾಖಲಾತಿಗಳನ್ನು ತರಿಸಿ ನೋಡುವುದಕ್ಕೆ ನಮಗೆ ಅವಕಾಶ ಕೊಟ್ಟುಬಿಟ್ಟರೆ, ನಾವು ಯಾರು ತಪ್ಪಿತಸ್ಥರೆಂಬುದನ್ನು ಪತ್ತೆಹಚ್ಚಬಹುದೊ? ಆಗ ಒಟ್ಟಿಗೆ ಇದ್ದರು ಏನೇನು ಮಾಡಿಕೊಂಡರೋ ಗೊತ್ತಿಲ್ಲ, ಈಗ ಬೇರೆ ಬೇರೆಯಾಗಿದ್ದಾರೆ. ನಾನು ಯಾರ ಹೆಸರನ್ನು ಹೇಳುವುದಿಲ್ಲ, ಏನಾಗಿದೆ ಎಂಬುದನ್ನು ಹೇಳಬೇಕಲ್ಲ? ಅವರೇ enquiry ಆಗಲಿ, enquiry ಆಗಲಿ ಎಂದು ಹೇಳುತ್ತಿದ್ದಾರಲ್ಲ, ಸದನ ಸಮಿತಿಯಾಗಲಿ, enquiry ಆಗಲಿ ಎಂದು ಹೇಳುತ್ತಿದ್ದಾರಲ್ಲ..

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:- ಗಂಡ-ಹೆಂಡತಿ ಸಂಸಾರಸ್ಥರಾಗಿದ್ದಾಗ ಏನು ಮಾಡಿದರೆಂಬುದು ನಮಗೆ ಗೊತ್ತು, ಈಗ ಡೈವರ್ಸ್ ಆಗಿದೆಯಲ್ಲ ಆ ಬಗ್ಗೆ

ಕೆದಕಿಕೊಂಡು ಹೋಗುವುದು ಸೂಕ್ತವಲ್ಲ, ಮಾಡಿಕೊಂಡು ಹೋದರೆ ಇಂಥ ನೂರಾರು ಹಗರಣಗಳು ಬಯಲಿಗೆ ಬರುತ್ತವೆ.

ಶ್ರೀ ಕೆ.ಎಸ್.ಈಶ್ವರಪ್ಪ:- ನಿನ್ನೆ, ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದನಂತರ ಮಾನ್ಯ ರೇವಣ್ಣ, ಮಾನ್ಯ ಕುಮಾರಸ್ವಾಮಿ ಎಲ್ಲರು ಹಿರಿಯರು, ಇಲ್ಲೆಲ್ಲಾ ಚರ್ಚೆ ಮಾಡಿದ್ದಾರೆ, ಅವಕಾಶ ಕೊಡಲಾಗಿದೆ. ಮುಖ್ಯಮಂತ್ರಿಗಳು, ಇದರ ಬಗ್ಗೆ ತನಿಖೆ ಮಾಡಲಾಗುವುದೆಂದು ತುಂಬಾ ಸ್ಪಷ್ಟವಾಗಿ ಘೋಷಣೆ ಮಾಡಿಯೂ ಆಗಿದೆ...

(ಗೊಂದಲ)

ಶ್ರೀ ಸಿದ್ದರಾಮಯ್ಯ:- House Committee ಆಗಲಿ

ಶ್ರೀ ಆರ್.ರೋಷನ್ ಬೇಗ್:- Officers ನಿಂದ ತನಿಖೆ ಮಾಡಿಸಿದರೆ impartial ಆಗಿ ಆಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ರಾಜೀವ್‌ಗಾಂಧಿ ಯೂನಿವರ್ಸಿಟಿ ಕಟ್ಟುವಂತಹ ಸಂದರ್ಭದಲ್ಲಿ ನಡೆದಿರುವುದು ಜನತೆಗೆ ಗೊತ್ತಿದೆ. ಯಾರು ಮುಖ್ಯಮಂತ್ರಿಯಾಗಿದ್ದರು, ಯಾರು ಉಪಮುಖ್ಯಮಂತ್ರಿಯಾಗಿದ್ದರು, ಯಾರು PWD Minister ಆಗಿದ್ದರು, ಯಾರು Finance Minister ಆಗಿದ್ದರು, ಎಂದು ಗೊತ್ತಿದೆ. ಈಗಾಗಲೇ ಕೆಲವು ದಾಖಲೆಗಳನ್ನು ಅಧಿಕೃತವಾಗಿ PWD Minister ಹೇಳಿದ್ದಾರೆ. ಅವರ ಕಡೆ ಏನು ದಾಖಲೆಗಳಿವೆ ಅದನ್ನು ಅವರು ಕೊಟ್ಟಿದ್ದಾರೆ. ಇವೆಲ್ಲವೂ ಸತ್ಯಾಂಶ ಬರಲಿ ಎಂದು ಸರ್ಕಾರ ತನಿಖೆಗೆ ಆದೇಶ ಮಾಡಿದೆ.

ಶ್ರೀ ಆರ್.ರೋಷನ್ ಬೇಗ್:- ಯಾರು ತನಿಖೆ ನಡೆಸುವುದು? Officers ಆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: House Committee ಮಾಡಿ enquiryಗೆ ಆರ್ಡರ್ ಮಾಡಿ. ನಿನ್ನೆ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿರಲಿಲ್ಲ. ಈಗ ಇದರ ಬಗ್ಗೆ ಬೆಳಕನ್ನು ಚೆಲ್ಲಿದ್ದೀರಿ, ಎರಡೂ ಕಡೆ ತಪ್ಪು ಆಗಿದೆ ಅನ್ನುವುದು ಗಮನಕ್ಕೆ ಬಂದಿದೆ ಇವಾಗ. ಸದನ ಸಮಿತಿಯನ್ನು ಮಾಡಿ. ಸತ್ಯ ಹೊರಗಡೆ ಬರಲಿ. ನೀವೇ enquiry ಗೆ ಆರ್ಡರ್ ಮಾಡಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ಸದನ ಸಮಿತಿ ಮಾಡಿ ಎಂದರೆ ಸದನ ಸಮಿತಿ ಮಾಡಬೇಕು. CBI enquiry ಎಂದರೆ CBI enquiry ಮಾಡಬೇಕು. ಸರ್ಕಾರ ಇವರ ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರಬೇಕು. ನೀವು ಹೇಳಿದ ಮಾತು ಕೇಳುವುದಿಲ್ಲ ನಾವು ತೀರ್ಮಾನ ಮಾಡಿದ್ದೇ ಮಾಡುವುದು.

ಶ್ರೀ ಸಿದ್ದರಾಮಯ್ಯ:- ನಾವು ಹೇಳುವುದು ನಾವು ಹೇಳುತ್ತೇವೆ. ನೀವು ಮಾಡುವುದು ನೀವು ಮಾಡುತ್ತೀರಿ. It is a different thing ಜನ ತೀರ್ಮಾನ ಮಾಡುತ್ತಾರೆ ultimately.

ಅಧ್ಯಕ್ಷರು:- ಒಬ್ಬರು ಯಾರಾದರೂ ಮಾತನಾಡಿ. ಎಲ್ಲರೂ ಮಾತನಾಡುವ ಹಾಗಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನೆನ್ನೆ ಈ ವಿಷಯ ಏನು ನಿಲುವಳಿ ಸೂಚನೆ ನಮ್ಮ ಸ್ನೇಹಿತರು ನಾವು ಎಲ್ಲ ಸೇರಿ ತಂದಿದ್ದೇವೆ. ನೆನ್ನೆ ಅವರು suo=motu ಡಿಸಿಷನ್ ತೆಗೆದುಕೊಂಡಿದ್ದಾರೆ. ಅಲ್ಲಿ ಹೇಳಿದ್ದಾರೆ ಮಾನ್ಯ ರೇವಣ್ಣನವರೇ ಕೇಳಿದ್ದಾರೆ ಅದಕ್ಕೋಸ್ಕರ ಒಬ್ಬ ನಿವೃತ್ತ IAS ಅಧಿಕಾರಿಯಿಂದ ತನಿಖೆ ನಡೆಸುತ್ತೇವೆ ಎಂದು ಹೇಳಿದರು. ನಿವೃತ್ತ IAS ಅಧಿಕಾರಿಯಿಂದ ತನಿಖೆ ಮಾಡಿಸಿ ಎಂದು ರೇವಣ್ಣನವರು ಏನು ಕೇಳಲಿಲ್ಲ. ಆ ಮೇಲೆ ನಂತರ ಸದಸ್ಯರುಗಳು ಅದು conclude ಆಗಲಿಲ್ಲ. ನಿನ್ನೆಯ ಚರ್ಚೆಯ ಕೊನೆಗೆ ಅಧ್ಯಕ್ಷರು ಇವತ್ತು ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ನಾಳೆ ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿದರು. ಅಧ್ಯಕ್ಷರು ಏನು ರೂಲಿಂಗ್ ಕೊಟ್ಟಿದ್ದಾರೆ, ಇವತ್ತು ಚರ್ಚೆಗೆ ಅನುವು ಮಾಡಿ ಕೊಟ್ಟಿದ್ದಾರೆ. ಅದರ ಮೇಲೆ ಚರ್ಚೆ ನಡೆಯಿತು. ಇವತ್ತು ಸದನ ಸಮಿತಿ ಮಾಡಲಿಕ್ಕೆ ಸರ್ಕಾರಕ್ಕೆ ಯಾತಕ್ಕೆ ಭಯ? ನಿಮಗೆ ವಿಷಯ ಗೊತ್ತಿಲ್ಲ ಕುಳಿತುಕೊಳ್ಳಿ. ವಿಷಯ ಗೊತ್ತಿಲ್ಲದೆ ಏಕೆ ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು:- ಸದಸ್ಯರು ಎಲ್ಲರೂ ಕುಳಿತುಕೊಳ್ಳಬೇಕು. ಪರಸ್ಪರ ಯಾರೂ ಮಾತನಾಡಿಕೊಳ್ಳಬಾರದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾವು ಯಾವ ಕಾರಣಕ್ಕೋಸ್ಕರ ಇವತ್ತು ಸದನ ಸಮಿತಿ ಮಾಡಿ ಎಂದು ತಮಗೆ ಮನವಿ ಮಾಡುತ್ತಿದ್ದೇವೆಂದರೆ, ಇದರಲ್ಲಿ ಯಾರು ಏನೂ ಗಾಬರಿ ಆಗಬೇಕಾಗಿಲ್ಲ. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರ ಆಗಿದೆ ಎಂದು ನಾನು ಇಲ್ಲಿ ಆಪಾದನೆ ಮಾಡುತ್ತಿಲ್ಲ. ಇಲ್ಲಿ ಕೆಲವು ಸರ್ಕಾರದ ನಿರ್ಧಾರಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಸಣ್ಣ ಪುಟ್ಟ ಲೋಪದೋಷಗಳು ಆಗಿರಬಹುದು. ತೀರ್ಮಾನಗಳು ಮಾಡತಕ್ಕಂಥದ್ದರಲ್ಲಿ ಆಗಿದ್ದರೆ ಇದನ್ನು ಅವ್ಯವಹಾರ ಎಂದು ಏಕೆ ಹೇಳುತ್ತೀರಿ?33 ಕೋಟಿ ರೂ. ಕೊಟ್ಟ ತಕ್ಷಣ ಯಾರೋ ಏನೋ ದುಡ್ಡು ತಿಂದಿದಾರೆ ಎಂದು ನಿಮ್ಮ ಅಭಿಪ್ರಾಯ ಇರಬಹುದು. ಅದಕ್ಕೋಸ್ಕರ ಒಬ್ಬ ನಿವೃತ್ತ IAS ಅಧಿಕಾರಿಯಿಂದ 4–5 ಇಲಾಖೆಗಳ ಮಂತ್ರಿಗಳು, ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಪ್ರಮುಖ ಇಲಾಖೆಗಳು ಏನಿವೆ, ಎಲ್ಲಾ ಕಾರ್ಯದರ್ಶಿಗಳ ತೀರ್ಮಾನಗಳಿವೆ ಏನು ಇದರಲ್ಲಿ ಇವೆ, ಒಬ್ಬ ನಿವೃತ್ತ IAS ಅಧಿಕಾರಿಯಿಂದ find ourt ಮಾಡುವುದಕ್ಕಾಗುವುದಿಲ್ಲ.

Engineer ಪ್ರಶ್ನೆ ಅಲ್ಲ. ಇದರಲ್ಲಿ ಮುಖ್ಯ ಮಂತ್ರಿ ಆಗಿ ನಾನು ಕೆಲಸ ಮಾಡಿದ್ದೇನೆ, ಮುಖ್ಯ ಮಂತ್ರಿಯಾಗಿ ಅಂದಿನ ಸಚಿವ ಸಂಪುಟದಲ್ಲಿ ಏನು ತೀರ್ಮಾನ ಮಾಡಿದ್ದೇವೆ, ಉಪ ಮುಖ್ಯಮಂತ್ರಿಗಳಾಗಿದ್ದ ಇವತ್ತಿನ ಮುಖ್ಯಮಂತ್ರಿಗಳಿದ್ದಾರೆ, ಲೋಕೋಪಯೋಗಿ ಸಚಿವರಿದ್ದಾರೆ, Medical Education Minister ಇದ್ದಾರೆ. ಇದೆಲ್ಲಾ ಒಬ್ಬ ಸಾಮಾನ್ಯ ನಿವೃತ್ತ IAS ಅಧಿಕಾರಿಯಿಂದ ಈ ವಿಷಯಗಳ ಬಗ್ಗೆ ನ್ಯಾಯವಾದ findings ಕೊಡುವುದಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಸದನದ ಎರಡೂ ಭಾಗದ ಸದಸ್ಯರುಗಳನ್ನು ಸದನ ಸಮಿತಿಯಲ್ಲಿ ತಾವು ಆಯ್ಕೆ ಮಾಡಿ ಇರತಕ್ಕಂತಹ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡತಕ್ಕಂಥದ್ದಕ್ಕೆ ಸದನದ ಮುಂದೆ ಇಡುವುದಕ್ಕೆ ಅನುವು ಮಾಡಿ ಕೊಟ್ಟಾಗ ಈ ರಾಜ್ಯದ ಜನತೆಗೆ ಸರಿಯಾದ ಸಂದೇಶ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು:- ಉದಾಸಿಯವರು ಹೇಳಲಿ. ಆ ಮೇಲೆ ನೀವು ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಉದಾಸಿಯವರು ಮಾತನಾಡಲಿ. ತದನಂತರ ರೇವಣ್ಣನವರಿಗೂ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ಕೊಡುತ್ತೇನೆ ಎಂದ್ದು ನಾನು ಹೇಳಿದೆನಲ್ಲ. ಉದಾಸಿಯವರೆ, ತಾವು ಈಗ ಮಾತನಾಡಿ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಮಗೆ ಪ್ರಶ್ನೆ ಏನು ಬಂದಿರುವುದೇನೆಂದರೆ, 337 ಕೋಟಿ ರೂಪಾಯಿಗಳಿಗೆ ಏನು ಟೆಂಡರ್ ಆಗಿದೆಯಲ್ಲಾ, ಪ್ಲಾನ್ ಎಸ್ಟಿಮೇಟ್ ಇಲ್ಲದೇ ಮತ್ತು ತಾಂತ್ರಿಕ ಅನುಮೋದನೆ ಇಲ್ಲದೆ ಮತ್ತು ಆಡಳಿತಾತ್ಮಕ ಅನುಮೋದನೆ ಇಲ್ಲದೇ, ಈ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಎರಡು ತಿಂಗಳ ನಂತರ ತೆರೆಯುತ್ತಾ ಇವೆ. ಈ ಸಂದರ್ಭದಲ್ಲಿ ಕೇವಲ ಡ್ರಾಯಿಂಗ್‌ನ ಮೇಲೆ ಟೆಂಡರ್‌ನ್ನು ಕರೆಯಬೇಕಾದಂಥ ಸಂದರ್ಭದಲ್ಲಿ ಪ್ಲಾನ್ ಎಸ್ಟಿಮೇಟ್ ಎಷ್ಟು ಮಾಡಿದ್ದಾರೆ ಎನ್ನುವಂಥ ಅನುಮಾನಗಳು ನಮಗೆ ಕಾಡುತ್ತಿವೆ. 330 ಕೋಟಿ ರೂಪಾಯಿಗಳಿಗೆ ಏನು ಟೆಂಡರ್ ಆಯಿತಲ್ಲಾ ಇದರಲ್ಲಿ ನಮಗೆ ಅನುಮಾನಗಳು ಅಡಗಿಕೊಂಡಿವೆ. ಇದಲ್ಲದೇ ಟೆಂಡರ್ ಕರೆಯಬೇಕಾದಂಥ ಸಂದರ್ಭದಲ್ಲಿ ಇವೊತ್ತು ಅವರಿಗೆ mobilization advance ಕೊಡುತ್ತೇವೆ ಎನ್ನುವಂಥಾದ್ದನ್ನು ಡಾಕ್ಯುಮೆಂಟ್ಸ್‌ನಲ್ಲಿ ಟೆಂಡರ್ ಕಂಡೀಶನ್ ಹಾಕಿಲ್ಲ ಎನ್ನುವುದೂ ಕೂಡ ಇರುವುದರಿಂದ, ಈ ಕಂಡೀಶನ್ ಇಟ್ಟಿದ್ದರೆ ಇನ್ನೂ ಅನೇಕ ಜನ ಇದರಲ್ಲಿ participation ಆಗುತ್ತಿದ್ದರು ಎನ್ನುವುದು ಎರಡನೆಯ ಮಾತು. ಆದರೆ ಮೊದಲೇ ಇದರಲ್ಲಿ ಅನುಮಾನ ಇರುವುದು ಏನೆಂದರೆ, ಈ ಟೆಂಡರ್ ಎಸ್ಟಿಮೇಟ್ ಬಗ್ಗೆಯೇ

ನಮಗೆ ಅನುಮಾನ ಇರುವುದರಿಂದ ಈ ಸಮಸ್ಯೆ ನಮ್ಮ ಎದುರುಗಡೆ ಬಂದಿದೆ ಎನ್ನುವುದು ಒಂದು ಮಾತು. ಇನ್ನು ಇವೊತ್ತು 33 ಕೋಟಿ ರೂಪಾಯಿಗಳನ್ನು ಜಮೀನನ್ನೇ ಸ್ವಾಧೀನಪಡಿಸಿಕೊಳ್ಳದೇ, ಭೂಮಿ ನಮ್ಮ ಕಬ್ಜಾದಲ್ಲಿ ಇಲ್ಲದೇ ಟೆಂಡರ್ ಕರೆದಿರುವಂಥ ವ್ಯವಸ್ಥೆ, ಅದಕ್ಕಾಗಿ ಭೂಮಿ ಯಾವಾಗ ಕಬ್ಜಾ ಪಡೆದರು ಎನ್ನುವುದನ್ನು ನಾವು 7 ನೇ ತಿಂಗಳಿನಲ್ಲಿ ಕಬ್ಜಾಗೆ ಬರುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವಂಥ ವ್ಯವಸ್ಥೆ ಮಾಡಿದ್ದೇನೆ. 9ನೇ ತಿಂಗಳಿನಲ್ಲಿ ಕೂಡ ಕಂಟ್ರ್ಯಾಕ್ಟರೇ ಬರೆಯುತ್ತಾನೆ. ಕಂಟ್ರ್ಯಾಕ್ಟರ್ ಬರೆದದ್ದನ್ನು ನಾನು ನಿಮಗೆ ಓದಿ ಹೇಳಿದೆ. ನಾವು ಬರೆದದ್ದಲ್ಲ. ಕಂಟ್ರ್ಯಾಕ್ಟರ್ ಅಲ್ಲಿ ಹೋದಾಗ ಆಗಿರುವಂಥ ಪರಿಸ್ಥಿತಿಯನ್ನು ನಾನು ಓದಿ ಹೇಳಿದೆ. ನಮಗೆ ಅಲ್ಲಿ ಭೂಮಿ ಲಭ್ಯವಿಲ್ಲವೆನ್ನುವುದನ್ನು ಕಂಟ್ರ್ಯಾಕ್ಟರ್ ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾನೆ. ಆ ವರದಿಯನ್ನು ಓದಿ ನಿಮಗೆ ಇದರಲ್ಲಿ 9ನೇ ತಿಂಗಳಿನಲ್ಲಿ ಏನಾಯಿತು ಎನ್ನುವುದನ್ನು ಓದಿ ಹೇಳುತ್ತಿದ್ದೇನೆ. ಹೀಗೆಲ್ಲಾ ಇರಬೇಕಾದರೆ 33 ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ಕೊಡುವ ಅವಶ್ಯಕತೆ ತರಾತುರಿ ಏನಿತ್ತು ಎನ್ನುವುದು ಸ್ವಾಭಾವಿಕವಾಗಿ ಅನುಮಾನ ಬರುತ್ತದೆ. ಇದಕ್ಕೆ ಶಿಫಾರಸ್ಸು ಮಾಡಿದಂಥ ಅಧಿಕಾರಿಗಳಾಗಲಿ, ಅವರು ಮಾಡಿರುವಂಥ ಲೋಪದೋಷಗಳಲ್ಲಾಗಲಿ, ಇದರಲ್ಲಿ ಇಲಾಖಾಧಿಕಾರಿಗಳು ಮತ್ತು ಗುತ್ತಿಗೆದಾರರ ಮಧ್ಯದಲ್ಲಿ nexus ಇರಬೇಕು ಎನ್ನುವ ಬಗ್ಗೆ ನಮಗೆ ಅನುಮಾನಗಳು ಕಾಡುತ್ತಿರುವುದರಿಂದ ಇದರ ಬಗ್ಗೆ ವಿಚಾರಣೆ ಆಗಬೇಕು ಎನ್ನುವ ಉದ್ದೇಶದಿಂದ ಮುಖ್ಯಮಂತ್ರಿಗಳು ಆದೇಶವನ್ನು ಮಾಡಿದ್ದಾರೆ. ಮುಖ್ಯಮಂತ್ರಿಗಳು ನಿನ್ನೆಯೇ ಆದೇಶವನ್ನು ಮಾಡಿರುವಾಗ ಇವೊತ್ತು ಮತ್ತೆ ನಾನು ಹೇಳುತ್ತಿದ್ದೇನೆ, ಮತ್ತೊಂದು ಸದನ ಸಮಿತಿ ಅವಶ್ಯಕತೆ ಇರುವುದಿಲ್ಲ. ಒಂದು ತಿಂಗಳಿನಲ್ಲಿ ವರದಿ ಕೊಡಬೇಕು. ಆ ವರದಿಯಲ್ಲಿ ಯಾರು ದಾರಿ ತಪ್ಪಿಸಿದರು ಎನ್ನುವುದೂ ಕೂಡ ಗೊತ್ತಾಗುತ್ತದೆ. ಯಾರು ಯಾರು ಇದರಲ್ಲಿ ಷಾಮೀಲಾಗಿದ್ದಾರೆ ಎನ್ನುವುದೂ ಕೂಡ ವ್ಯವಸ್ಥೆಯಲ್ಲಿ ಹೊರಗೆ ಬರುತ್ತದೆ. ಅದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಿ. ವಿಚಾರಣೆಯಾಗಲಿ ಎನ್ನುವುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ರೇವಣ್ಣನವರೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು:– ಸಿದ್ದು ಸವದಿಯವರೆ, ದಯವಿಟ್ಟು ತಾವು ಕುಳಿತುಕೊಳ್ಳಿ. ಅಶೋಕ್ ಪ್ಲೀಸ್ ಕುಳಿತುಕೊಳ್ಳಿ. ಸೋಮಶೇಖರ್ ರೆಡ್ಡಿಯವರೆ ಪ್ಲೀಸ್.

ಶ್ರೀ ಸೋಮಶೇಖರ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಪ್ರತಿ ಸಾರಿ ನೀವು ಅವರಿಗೇ ಮಾತನಾಡಲು ಅವಕಾಶ ಕೊಡುತ್ತೀರಿ. ನಮಗೆ ಅವಕಾಶವೇ ಕೊಡುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾಳೆಯೂ ಒಂದು ದಿವಸ ಸದನ ಕಲಾಪ ವಿಸ್ತರಣೆ ಮಾಡಿ ಅವರಿಗೆಲ್ಲಾ ಮಾತನಾಡಲು ಅವಕಾಶ ಕೊಡಿ

ಸಾರ್. ನಾವು ಇನ್ನೂ ಒಂದು ವಾರ ಕುಳಿತುಕೊಳ್ಳುತ್ತೇವೆ. ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:– ರೇವಣ್ಣನವರೆ ಈಗ ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಎರಡ್ಮೂರು ಆಪಾದನೆಗಳನ್ನು ಮಾಡಿದ್ದಾರೆ. ಎಸ್ಟಿಮೇಟ್ ಸರಿಯಿಲ್ಲವೆಂದು ಒಂದು ಅಪಾದನೆಯನ್ನು ಮಾಡಿದ್ದಾರೆ. ಆಮೇಲೆ ಲ್ಯಾಂಡೇ ಇರಲಿಲ್ಲವೆಂದು ಹೇಳುತ್ತಾರೆ. ಕೆ.ಐ.ಎ.ಡಿ.ಬಿ.ಯವರು ತಾನೆ ಭೂಮಿಯನ್ನು ಅಕ್ವೈರ್ ಮಾಡಿರುವುದು. ಕೆ.ಐ.ಎ.ಡಿ.ಬಿ.ಯವರು ಲ್ಯಾಂಡ್ ಅಕ್ವಿಸಿಶನ್‌ನಲ್ಲಿ ಫೋರ್ ಒನ್ ಮಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:– ಈಗಾಗಲೇ ಹೇಳಿದಿರಲ್ಲಾ.

ಶ್ರೀ ಹೆಚ್.ಡಿ.ರೇವಣ್ಣ:– ತಾವು ಒಂದು ನಿಮಿಷ ಸುಮ್ಮನಿರಿ ಸಾರ್. ಎರಡು ನಿಮಿಷ ನಾನು ಹೇಳುವವರೆಗೆ ಸುಮ್ಮನಿರಿ. ಸಾರ್ ನಿಮಗೆ ಡಾಕ್ಯುಮೆಂಟ್ಸ್‌ನ್ನು ಕೊಡುತ್ತೇನೆ. ನಾನು ನಿಮಗೆ ನಮ್ಮನ್ನೆಲ್ಲಾ ಬಲಿ ಹಾಕೋಕ್ಕೆ ಡಾಕ್ಯುಮೆಂಟ್ಸ್ ಕೊಡುತ್ತೇನೆ. ನೀವು ಸ್ವಲ್ಪ ತಾಳ್ಮೆಯಿಂದ ಇರಿ ಸಾರ್ ನೀವು. ನಮಗೆ ಬಲಿ ಹಾಕುವುದಕ್ಕೆ ಡಾಕ್ಯುಮೆಂಟ್ಸ್ ಕೊಡುತ್ತೇನೆ ನೀವು ಸುಮ್ಮನಿದ್ದರೆ. ಮಾನ್ಯ ಅಧ್ಯಕ್ಷರೆ, 27ನೇ ತಾರೀಖು ನೋಟಿಫಿಕೇಶನ್ ಅನ್ನು ಕೆ.ಐ.ಎ.ಡಿ.ಬಿ.ಯಿಂದ ಮಾಡಿದ್ದಾರೆ. ಯಾವುದು ಪ್ಲಾನ್ ಏನೂ ಇಲ್ಲದೇ ಮಾಡಿದ್ದಾರೆ ಎಂದು ಹೇಳಿದ್ದಾರೆ, ಒಪ್ಪಿಕೊಳ್ಳುತ್ತೇನೆ ಸಾರ್. ಕೆ.ಐ.ಎ.ಡಿ.ಬಿ.ಯಿಂದ 20 ಸಾವಿರ ಎಕರೆ ಜಮೀನು ಅಕ್ವೈರ್ ಮಾಡಿದ್ದಾರೆ ಫೋರ್ ಒನ್‌ನಲ್ಲಿ. 20 ಸಾವಿರ ಎಕರೆ ಜಮೀನು. ಕೇವಲ ಫೋರ್ ಒನ್.

ಅಧ್ಯಕ್ಷರು:– ರೇವಣ್ಣನವರೆ, ನೀವು ನೇರವಾಗಿ ಈ ಸಬಜೆಕ್ಟ್‌ಗೆ ಬನ್ನಿ. ಕೆ.ಐ.ಎ.ಡಿ.ಬಿ.ಯದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ:– ಕೆ.ಐ.ಎ.ಡಿ.ಬಿ.ವಿಷಯ ಹೇಳಬೇಕಾಗುತ್ತದೆ. 20 ಸಾವಿರ ಎಕರೆ ಜಮೀನು ಅಕ್ವೈರ್ ಮಾಡಿ, ಇದರಲ್ಲಿ ನಿಮ್ಮ ಉದ್ಯೋಗ ಮಿತ್ರದಲ್ಲಿ ಪ್ಲಾನ್ ಇಲ್ಲ, ಸೈಟ್ ಇಲ್ಲ, ನೂರು ನೂರು ಎಕರೆ ಜಮೀನನ್ನು, ಫೋರ್ ಒನ್ ಆದ ತಕ್ಷಣವೇ 20 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿ ಅಲಾಟ್ ಮಾಡಿದ್ದಾರೆ. ಅಲಾಟ್ ಫೈನಲ್, ಅದು 1 ಸಾವಿರ ಕೋಟಿ ರೂಪಾಯಿ ಮಾಡಿದ್ದಾರೆ. ಇದನ್ನೂ ಅದನ್ನೂ ಎರಡನ್ನೂ ಟ್ಯಾಲಿ ಮಾಡಿ ಎನ್‌ಕ್ವೈರಿ ಮಾಡುವುದಕ್ಕೆ ತಾಕತ್ತು ಇದೆಯೇ ಕೇಳಿ.

ಅಧ್ಯಕ್ಷರು:– ಅದು ಬಿಡಿ. ಆ ಸಬ್ಜೆಕ್ಟ್ ಬಗ್ಗೆ ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ರೇವಣ್ಣನವರೆ, ನೋಡಿ ಈ ರೀತಿ ಬೇರೆಯದ್ದಕ್ಕೆ ಕಂಪೇರ್ ಮಾಡಬೇಡಿ. ಆ ಸಬ್ಜೆಕ್ಟ್ ಮೇಲೆ ಮಾತನಾಡಲು ಬೇರೆ ರೂಪದಲ್ಲಿ ನೋಟಿಸ್ ಕೊಡಿ. ಅದನ್ನು ಬಿಟ್ಟು ನೀವು ಈ ರೀತಿ ವಾದ ಮಾಡಿದರೆ ಅರ್ಥವಿಲ್ಲ. ಆ ವಿಷಯದ ಮೇಲೆ ಮಾತನಾಡಲು ಬೇರೆ ನೋಟಿಸ್ ಕೊಡಿ.

(ಗೊಂದಲ)

ಅಧ್ಯಕ್ಷರು:- ಈಗ ಈ ಸಬ್ಜೆಕ್ಟ್ ಕ್ಲೋಸ್. ಈಗ ಈ ವಿಷಯದ ಮೇಲಿನ ಚರ್ಚೆ ಸಾಕು. ತಾವೂ ಕೂಡ ಹೇಳಿದ್ದೀರಿ. ಸರ್ಕಾರದವರು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಅವರು ಎನ್‌ಕ್ವೈರಿ ಕಮಿಶನ್ ಮಾಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈ ವಿಷಯದ ಮೇಲಿನ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಅವರಿಬ್ಬರ ದೃಷ್ಟಿಯಿಂದ ಇದು ಕ್ಲೋಸ್, ಓಪನ್ ಪ್ರಶ್ನೆಯಲ್ಲ.

ಅಧ್ಯಕ್ಷರು:- ಕ್ಲೋಸ್, ಓಪನ್ ಎಂಬ ಬಗ್ಗೆ ಅವರಿಬ್ಬರಿಗೆ ಬಿಟ್ಟಿದ್ದು. ಆದರೆ ನಾನು ಅಧ್ಯಕ್ಷನಾಗಿ ಸದನದಲ್ಲಿ ಇನ್ನೂ ಹಲವಾರು ವಿಷಯಗಳ ಬಗ್ಗೆ ನಡಾವಳಿ ನಡೆಯಲು ಅವಕಾಶ ಮಾಡಿಕೊಡಬೇಕು. ಈಗ ಈ ವಿಷಯಕ್ಕೆ ನಾನು ಚರ್ಚೆಗೆ ಅವಕಾಶ ಕೊಟ್ಟಿದ್ದೆ. ಈಗ ನಾನು ಕ್ಲೋಸ್ ಮಾಡಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಈ ವಿಷಯ ಈಗ ಈ ಸದನದ ಸ್ವತ್ತಾಗಿದೆ. ಈ ಸದನದ ಸ್ವತ್ತಾದ ಮೇಲೆ ಅದಕ್ಕೆ ಸಮಾಧಾನಕರವಾದಂಥ ಉತ್ತರ ಸಿಗಬೇಕು. ಈಗೇನಾಗಿದೆಯೆಂದರೆ,

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಮೇಲೂ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪ್ಲಿಸ್, ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು:- ಈ ವಿಷಯದ ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ. ಈಗ ಬೇರೆ ವಿಷಯಗಳ ಬಗ್ಗೆ ಚರ್ಚೆಯಾಗಬೇಕಿದೆ. ಇನ್ನೂ ಕಾಲಿಂಗ್ ಅಟೆನ್‌ಶನ್‌ಗಳಿವೆ. ಬಹಳಷ್ಟು ಸದಸ್ಯರು ನಮ್ಮ ಕಾಲಿಂಗ್ ಅಟೆನ್‌ಶನ್‌ಗಳು ಚರ್ಚೆಗೆ ಬರಲೇ ಇಲ್ಲವೆಂದು ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಅದಕ್ಕೂ ಮುಂಚೆ ಚರ್ಚೆಯಲ್ಲಿ ಭಾಗವಹಿಸಲು ಎಲ್ಲರಿಗೂ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು:- ರೂಲ್ 69ರ ಪ್ರಕಾರ ಎರಡು ತಾಸು ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೆ. ಆದರೆ ಈ ವಿಷಯದ ಮೇಲೆ ಮೂರು ತಾಸು ಚರ್ಚೆಯಾಗಿದೆ. ಇನ್ನೂ ಎಲ್ಲಿಯವರೆವಿಗೆ ಇದನ್ನು ತೆಗೆದುಕೊಂಡು ಹೋಗುವುದು. ಅವರು ಹೌಸ್ ಕಮಿಟಿಯಾಗಬೇಕೆನ್ನುತ್ತಾರೆ. ಇವರು ಆಗುವುದಿಲ್ಲವೆನ್ನುತ್ತಾರೆ. ಹೀಗಿದ್ದರೂ ಇದನ್ನು ಎಲ್ಲಿಯವರೆವಿಗೆ ತೆಗೆದುಕೊಂಡು ಹೊಗುವುದು. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಅನುಭವವಿದ್ದವರಿದ್ದೀರಿ. ಈ ವಿಷಯವನ್ನು ಎಲ್ಲಿಯವರೆವಿಗೆ

ತೆಗೆದುಕೊಂಡು ಹೋಗುತ್ತೀರಿ? ಒಂದು ವಿಚಾರಣೆ ಮಾಡಲು ನೇಮಕ ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಇವರು ಜಂಟಿ ಸದನ ಸಮಿತಿ ಮಾಡಬೇಕೆನ್ನುತ್ತಾರೆ, ಮಾಡುವುದಿಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಎರಡು ತಾಸು ಚರ್ಚೆಯಾಗಬೇಕಾದ ಕಡೆ ಮೂರು ತಾಸು ಚರ್ಚೆಯಾಗಿದೆ. ಆದರೂ ಈ ವಿಷಯದ ಬಗ್ಗೆ ಇನ್ನೂ ಎಲ್ಲಿಯವರೆವಿಗೆ ಚರ್ಚೆಗೆ ಅವಕಾಶ ಕೊಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಚರ್ಚೆಗೆ ಹೋಗುವುದಿಲ್ಲ. ನಾವು ನಿಮ್ಮಲ್ಲಿ ಅಪೀಲ್ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಿದ್ದಿರಿ. ತಾವು ಬೇರೆ ವಿಷಯ ತೆಗೆದುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಚರ್ಚೆ ಮಾಡಿದ ಮೇಲೆ ಒಂದು ನಿರ್ಣಯಕ್ಕೆ ಬರಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕರು ಅನುಮತಿ ಕೊಟ್ಟಿದ್ದಾರೆಯಾದ ಕಾರಣ ಅವರು ಮಾತನಾಡುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಎಲ್ಲಿ ಕೊಟ್ಟಿದ್ದಾರೆ? ಎಲ್ಲಿ ಕೊಟ್ಟಿದ್ದಾರೆ?

ಶ್ರೀ ಸಿದ್ದರಾಮಯ್ಯ:- ಅವರನ್ನು ನೀವು ಕೇಳಿ, ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅನುಮತಿ ಕೊಟ್ಟಿರುವುದರಿಂದ ಅವರು ಮಾತನಾಡುತ್ತಿದ್ದಾರೆ. ಹೀಗೆ ನೀವು ಮಧ್ಯೆ ಎದ್ದು ನಿಂತು ಮಾತನಾಡಿ ಡಿಸ್ಟರ್ಬ್ ಮಾಡಿದರೆ ಹೇಗೆ?

ಶ್ರೀ ಕೆ.ಎಸ್.ಈಶ್ವರಪ್ಪ:- ಅವರು ಅನುಮತಿ ಕೊಟ್ಟಿಲ್ಲ. ಇವರೇ ಎದ್ದು ನಿಂತು ಕೊಂಡು ಸುಮ್ಮನೆ ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನೀವು ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿಲ್ಲವೆ?

ಅಧ್ಯಕ್ಷರು:- ಆಯಿತು. ನೀವು ಈಗ ಕುಳಿತುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದೇವೆ. ನೀವು ಎಷ್ಟು ಹೊತ್ತಾದರೂ ಅವರಿಗೆ ಚರ್ಚೆಗೆ ಅವಕಾಶ ಕೊಡಿ. ನಾವು ತಲೆ ಹಾಕುವುದಿಲ್ಲ. ಸರ್ಕಾರದ ಉತ್ತರವನ್ನು ಈಗಾಗಲೇ ಕೊಟ್ಟಾಗಿದೆ. ಮಾನ್ಯ ಕುಮಾರಸ್ವಾಮಿಯವರು ನಿವೃತ್ತ ಅಧಿಕಾರಿಯಿಂದ ವಿಚಾರಣೆ ಏಕೆ ಎಂದು ಕೇಳಿದ್ದಾರೆ. ಅವರು ಹೇಳಿದ ಹಾಗೆ ನಾವು ಕೇಳುವುದಕ್ಕಾಗುವುದಿಲ್ಲ. ಹೌಸ್ ಕಮಿಟಿ ಮಾಡಿ, ಸಿ.ಬಿ.ಐ. ಕಮಿಟಿಗೆ ಕೊಡಿ ಎಂದು ಅವರು ಹೇಳಿದಂತೆಲ್ಲಾ ಕೇಳುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ತನಿಖೆಯನ್ನು ಈಗಿರುವಂಥ ಅಧಿಕಾರಿಗಳ ಮುಖಾಂತರ ಮಾಡಿದರೆ

ಅನುಮಾನ ಬರುತ್ತದೆ, ಸರಿಹೋಗುವುದಿಲ್ಲ. ಅದಕ್ಕೋಸ್ಕರ IAS ನಿವೃತ್ತ ಅಧಿಕಾರಿಗಳಿಂದ ಮಾಡಿಸುತ್ತೇವೆ ಎಂದರೆ ಮತ್ತೂ ಕೂಡ ನೀವು ಈ ರೀತಿ ಮಾಡುವುದಿಲ್ಲ. ಇನ್ನು ಮುಂದೆ ನೀವುಂಟು ಅವರುಂಟು, ನಾವಂತೂ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗ ನನ್ನ ಪ್ರಶ್ನೆ ಇಷ್ಟೆ...

ಅಧ್ಯಕ್ಷರು:- ಒಂದು ನಿಮಿಷ, ಇವರ ಮಾತು ಮುಗಿದತಕ್ಷಣ ನೀವು statement ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಈಗ ಇದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ತಮಗೆ ಗೊತ್ತಿದೆ, ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಆದರೆ ನಮ್ಮ ಮುಂದೆ ಈಗ ಇರತಕ್ಕಂಥ issue ಏನೆಂದರೆ, 350 ಕೋಟಿ ರೂಪಾಯಿ contract approval ಮತ್ತು 33 ಕೋಟಿ ರೂಪಾಯಿ mobilization ಮಾಡುವುದಕ್ಕೆ advance ಕೊಟ್ಟಿದೆ, ಇದು ಒಂದು ವಾದ ವಿವಾದ, allegation, counter allegation ನಡೆದಿದೆ. ಈ ಮಧ್ಯದಲ್ಲಿ ಅದು ಸರಿಯೋ ತಪ್ಪೋ ಎಂದು IAS officers ಅನ್ನು....

ಅಧ್ಯಕ್ಷರು:- Please ಕುಳಿತುಕೊಳ್ಳಿ, ಒಂದೆರಡು ನಿಮಿಷ ತಡೆಯಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- Retired IAS officerನಿಂದ enquiry ಸರಿ ಹೋಗುವುದಿಲ್ಲವೆನ್ನುವ ಮಾತು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಇರುವಂಥಾದ್ದು directlly file ಮೇಲೆ signature ಮಾಡಿದ್ದಕ್ಕಾಗಿ...

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರೇ, ಇದನ್ನೆಲ್ಲಾ ಅವರು ಹೇಳಿದರು. ಅದಕ್ಕೆ ನೀವು ಹೇಳಿದಿರಿ, ಅವರು ಹೇಳಿದರು, ಈಗ ಸರ್ಕಾರದವರು ತಯಾರಿಲ್ಲ. ಆದುದರಿಂದ ನೀವು ಪದೇ ಪದೇ ಅದನ್ನೇ ಕೇಳಬೇಡಿ. ಚರ್ಚೆಗೆ ಅವಕಾಶ ಕೊಡಬೇಕು ಎಂದು ಇದೆ, ನನ್ನ duty ನಾನು ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಇದಕ್ಕೆ ರೂಲ್ 69 ಪ್ರಕಾರ ಒಂದು ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಬೇಕು. ಈಗ ಮೂರು ಗಂಟೆ ಅವಕಾಶ ಕೊಟ್ಟಿದ್ದೇನೆ. ನಾನು ಮುಂದಿನ proceedings ನಡೆಸಬೇಕು. ಇನ್ನು Calling attention, Rule 69 ಮೇಲೆ ಮಾತನಾಡುವಂತಹ ವಿಚಾರ ಇವೆ. ನಾನು ಈ ವಿಚಾರವನ್ನು ಇಲ್ಲಿಗೆ close ಮಾಡಿದ್ದೇನೆ. ದಯವಿಟ್ಟು ಸಹಕರಿಸಿ. ಇದರ ಮೇಲೆ ಹೆಚ್ಚಿಗೆ ನಾನು ಮಾತನಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ತಾವು ಯೋಚನೆ ಮಾಡಿ. House Committee ಮಾಡಿ....

ಅಧ್ಯಕ್ಷರು:– ಈಗ ಜನಾರ್ಧನ ರೆಡ್ಡಿಯವರು ಇನ್ನೊಂದು subject ಬಗ್ಗೆ ಹೇಳುತ್ತಾರೆ. ಬಹುಶಃ ಅವರು ನಿಮ್ಮ subject ಬಗ್ಗೆ ಕಮಿಟಿ ಮಾಡುವುದಕ್ಕೆ ಒಪ್ಪಿಕೊಂಡ ಹಾಗೆ ಕಾಣುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– IAS officers ಹೇಗೆ ಮಾಡಬೇಕು?

ಅಧ್ಯಕ್ಷರು:– ಯಾರು ಅದನ್ನು ಒಪ್ಪಿಕೊಂಡಿದ್ದಾರೆ ಅವರನ್ನು ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವು ಮಾಡಿ ಸಾರ್, ಇದು ನಮ್ಮ appeal, House Committee ಮಾಡಿ, ನಿಮ್ಮ ಕೈಯಲ್ಲಿ ಇದೆ.

ಅಧ್ಯಕ್ಷರು:– ಈಗ ಸರ್ಕಾರದ ಉತ್ತರವನ್ನು ಕೇಳಿದಿರಿ, ಎಲ್ಲಾ ಆಗಿದೆ, ಈ ವಿಷಯದಲ್ಲಿ ನಾನು ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ವಿಷಯ ಹೊರಗೆ ಬರಬೇಕು ಎಂದರೆ ಗೊತ್ತಾಗಬೇಕಲ್ಲ.

ಅಧ್ಯಕ್ಷರು:– ಈ ವಿಷಯದಲ್ಲಿ ನಾನು ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಯಾರ್‍ಯಾರು signature ಮಾಡಿದ್ದಾರೆ, ಯಾರು ಇಲ್ಲ, ಯಾರ responsibility ಇತ್ತು? we have to see.

(ಗೊಂದಲ)

ಅಧ್ಯಕ್ಷರು:– ಇನ್ನು ಬೇರೆ ವಿಷಯಗಳು ಇವೆ, ದಯವಿಟ್ಟು ಅದಕ್ಕೆ ಅವಕಾಶ ಕೊಡಿ. ಇನ್ನು ಬೇರೆ ಬೇರೆ proceedings ನಡೆಸಬೇಕಾಗಿದೆ, ದಯವಿಟ್ಟು co-operation ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇಲ್ಲಿ document ಇಡುತ್ತಿದ್ದೇವೆ. ಇದರ ಮೇಲೆ ಸರ್ಕಾರಕ್ಕೆ ಮಾಡುವುದಕ್ಕೆ ಇವತ್ತು ಯೋಗ್ಯತೆ ಇಲ್ಲವೆಂದರೆ, ಏತಕ್ಕೆ ಈ document ಇಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಬೇರೆ ವಿಷಯ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಮಾನ ಮರ್ಯಾದೆ ಈ ಸರ್ಕಾರಕ್ಕೆ ಇದೆಯಾ?

ಅಧ್ಯಕ್ಷರು:– ಅವರು ತಯಾರಿಲ್ಲ, ನೀವು ಬೇಕೆಂದು ಹೇಳುತ್ತೀರಿ, ಇನ್ನು ಇದನ್ನು ಎಲ್ಲಿಯವರೆಗೆ ಎಳೆದುಕೊಂಡು ಹೋಗುವುದು?

(ಗೊಂದಲ)

(ಈ ಹಂತದಲ್ಲಿ JD(S) ಶಾಸಕರು ಧರಣಿ ಮಾಡಲು ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು:- ಈಗಾಗಲೇ ರೂಲ್ 69 ಮೇಲೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ. ಅದಕ್ಕೆ ಒಂದು ಗಂಟೆ ಕಾಲ ಅವಕಾಶ ಇದೆ, ಇಲ್ಲಿ ಮೂರು ಗಂಟೆಗಿಂತ ಹೆಚ್ಚಿಗೆ ಚರ್ಚೆ ಮಾಡಿದ್ದೀರಿ. ಅದಕ್ಕೆ ಈಗಾಗಲೇ ಸರ್ಕಾರ ಉತ್ತರ ಕೊಟ್ಟಿದೆ. ಸ್ಪಷ್ಟೀಕರಣ ಕೇಳಿದ್ದೀರಿ. ರೂಲ್ 71 ಪ್ರಕಾರ ಕೂಡ ಚರ್ಚೆ ಮಾಡುವುದಕ್ಕೆ ಏನು limitations ಇದೆ, ಅದರ ಪ್ರಕಾರ ಕೂಡ ನಾನು ಅವಕಾಶವನ್ನು ಕೊಟ್ಟಿದ್ದೇನೆ. ಆದುದರಿಂದ ಆ ಅವಧಿ ಮುಗಿದಿದೆ. ಮುಂದೆ ಇನ್ನು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹೋಗಿ ಮುಂದಿನ proceedings ನಡೆಯುವುದಕ್ಕೆ ಸಹಕಾರ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನೀವು ಬಹಳ rigid ಆಗುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:- ನಾನು rigid ಆಗಿಲ್ಲ.

ಶ್ರೀ ಸಿದ್ದರಾಮಯ್ಯ:- ಸರ್ಕಾರ ಮೊಂಡುತನ ತೋರಿಸುತ್ತದೆ ಎಂದು ನೀವು rigid ಆಗುವುದಕ್ಕಾಗುವುದಿಲ್ಲ.

ಅಧ್ಯಕ್ಷರು:- ನಾವೇನು rigid ಇಲ್ಲ, ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು, ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೇ, ಒಂದು ಮನವಿ, ಇದರಲ್ಲಿ ಏನಾಗಿದೆ ಎಂದರೆ, ಮಾನ್ಯ PWD Minister ಉದಾಸಿಯವರಿಂದ ಹೇಳಿಕೆ, ರೇವಣ್ಣನವರು ಮಾಡಿದಂತಹ ಹೇಳಿಕೆ, ಕುಮಾರಸ್ವಾಮಿಯವರು ಮಾಡಿದಂತಹ ಹೇಳಿಕೆ ಇವೆಲ್ಲವನ್ನು ನೋಡಿದರೆ Chief Minister meetingನಲ್ಲೆಲ್ಲಾ ಇದ್ದಾರೆ, ಅವರೂ ಕೂಡ sign ಮಾಡಿದ್ದಾರೆ. ಹಿಂದೆ ಇದ್ದಂತಹ Deputy C.M ಇದ್ದಾರೆ, ಅವರು sign ಮಾಡಿದ್ದಾರೆ. PWD Minister ಇದ್ದಾರೆ. Medical Education Minister ಇದ್ದಾರೆ.

ಅಧ್ಯಕ್ಷರು:- ನಾವು ಈ ವಿಷಯದಲ್ಲಿ ಚರ್ಚೆಯನ್ನು ಮುಗಿಸಿದ್ದೇನೆ. ಇದರ ಬಗ್ಗೆ ಇನ್ನು ಮುಂದೆ ಚರ್ಚೆಯಾದರೆ ದಾಖಲೆಯಲ್ಲಿ ಹೋಗುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ನೀವು recordಗೆ ಹೋಗುವುದಿಲ್ಲವೆಂದರೆ ನಾವು ಏಕೆ ಇಲ್ಲಿಗೆ ಬರಬೇಕು? ನಾವು ಏನು ವಿಷಯ ಎತ್ತುವ ಹಾಗೆ ಇಲ್ಲ, ಏನೂ ಚರ್ಚೆ ಮಾಡುವ ಹಾಗೆ ಇಲ್ಲ ಎಂದು order ಮಾಡಿಬಿಡಿ, ಇಲ್ಲಿಗೆ ಬರುವುದೇ ಬೇಡ. ಯಾವುದನ್ನು ಚರ್ಚೆ ಮಾಡಬಾರದು, ಯಾವುದನ್ನು ಹೇಳಬಾರದು, ಅನುಮಾನ ಬಂದರೂ ಕೂಡ ಈ ರಾಜ್ಯದ ಜನತೆಗೆ ಹೇಳಲೇಬಾರದು. ಸಾರ್ವಜನಿಕ ಹಣ ಯೂರು ಬೇಕಾದರೂ ಲೂಟಿ ಹೊಡೆಯಲಿ ಮಾತನಾಡಲೇಬಾರದು.

ಅಧ್ಯಕ್ಷರು:- ಈ ಬಗ್ಗೆ ಮೂರು ತಾಸು ಚರ್ಚೆಯಾಗಿದೆ. ಇನ್ನು ಚರ್ಚೆ ಮಾಡುತ್ತೇವೆ ಎಂದರೆ ನಾನು ನಿಮಗೆ ಏನು ಹೇಳಬೇಕು?

ಶ್ರೀ ಸಿದ್ದರಾಮಯ್ಯ:- ನಾನು ಏನು ಹೇಳುವುದೇನೆಂದರೆ, IAS officers ಕೈಯಲ್ಲಿ ಇದನ್ನು ತನಿಖೆ ಮಾಡುವುದಕ್ಕೆ ಆಗುವುದಿಲ್ಲ, ನಿಷ್ಪಕ್ಷಪಾತ ತನಿಖೆಯಾಗುವುದಿಲ್ಲ, ಸತ್ಯ ಹೊರಬರುವುದಿಲ್ಲ. ಅದಕ್ಕೋಸ್ಕರ ದಯಮಾಡಿ ನಿಮ್ಮ ಅಧಿಕಾರವನ್ನು ಉಪಯೋಗಿಸಿ ಸದನ ಸಮಿತಿ ಮಾಡಿ. ಸತ್ಯ ಹೊರಗಡೆ ಬರಲಿ. ಯಾರ್ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆಯಾಗಲಿ.

ಅಧ್ಯಕ್ಷರು:- ಬೇಡ, ಅಧಿಕಾರವನ್ನು ಯಾರಿಗೂ ಕೊಡುವುದು ಬೇಡ, ನೀವು ಇದ್ದೀರಿ, ಸರ್ಕಾರ ಇದೆ. ಇದರಲ್ಲಿ ಸಭಾಧ್ಯಕ್ಷರನ್ನು pictureಗೆ ತರುವುದಕ್ಕೆ ಹೋಗಬೇಡಿ. ಉತ್ತರ ಕೊಟ್ಟಿದ್ದಾರೆ, ಪದೇ ಪದೇ discuss ಮಾಡುವುದು ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- If everybody escapes....

ಅಧ್ಯಕ್ಷರು:- ಜನಾರ್ಧನ ರೆಡ್ಡಿಯವರು ಏನೋ ಹೇಳುತ್ತಾರೆ.

ಶ್ರೀ ಎಂ.ಶ್ರೀನಿವಾಸ ಪ್ರಸಾದ್:- ಸರ್ಕಾರ ಈ ರೀತಿಯಾಗಿ ಮೊಂಡುತನ ಮಾಡುತ್ತಿದ್ದರೆ, ನಾವು ಇನ್ನು ಸುಮ್ಮನೆ ಇರುವುದಕ್ಕಾಗುವುದಿಲ್ಲ. We also can't keep quite.

ಅಧ್ಯಕ್ಷರು:- ಜನಾರ್ಧನ ರೆಡ್ಡಿಯವರೇ, ಯಾವುದರ ಬಗ್ಗೆ ಹೇಳುತ್ತೀರಿ, Air port ಬಗ್ಗೆ...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದು ಏನೆಂದರೆ hit and run, ಅವರಿಗೆ ಬೇಕಾಗಿರುವುದನ್ನು ಹೇಳುವುದು, ಬೇಕಾಗಿಲ್ಲದೆ ಇರುವುದನ್ನು ಬಿಡುವುದು.

ಅಧ್ಯಕ್ಷರು:- ನನ್ನ ಪ್ರಕಾರ ಈ subject close ಆಗಿದೆ. ಮುಂದಿನ proceedings ಮಾಡುವುದಕ್ಕೆ ಸಹಕಾರ ಕೊಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ನೋಡಿ ಈ ರೀತಿ ಮಾಡಿದರೆ ಏನು ಮಾಡಬೇಕು? ಸದನ orderನಲ್ಲಿ ಇಲ್ಲವೆಂದರೆ ಏನು ಮಾಡಬೇಕು? ಈ ರೀತಿ ನಿಂತುಬಿಟ್ಟು House orderನಲ್ಲಿ ಇಲ್ಲವೆಂದು ನೀವೇ ಹೇಳಿಬಿಟ್ಟರೆ ಏನು ಮಾಡುವುದು?

ಶ್ರೀ ಜನಾರ್ಧನ ರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು Bangalore International Airport ಬಗ್ಗೆ ಗಂಭೀರವಾದಂತಹ ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಅವರು ಸದನ ಸಮಿತಿಯನ್ನು ಏನು ಮಾಡಬೇಕೆಂದು ಹೇಳಿದ್ದಾರೆ, ಸದನ ಸಮಿತಿಯನ್ನು ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಈಗಾಗಲೇ

ಅನುಮತಿಯನ್ನು ಕೊಟ್ಟಿದ್ದಾರೆ. ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ನಾವು ಒಪ್ಪಿಕೊಂಡು ಅನುಮತಿಯನ್ನು ಕೊಡುತ್ತೇವೆ.

ಅಧ್ಯಕ್ಷರು:- ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದರು, ಅದಕ್ಕೆ ಸರ್ಕಾರದ ಪರವಾಗಿ ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದನ್ನು ನಾವು constitute ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:- ನೋಡಿ, ನಾನು ಮತ್ತೊಮ್ಮೆ request ಮಾಡುತ್ತೇನೆ, ತಾವು ತಮ್ಮ ಸ್ಥಾನಕ್ಕೆ ಹೋಗಿ. ಅವರಿಗೆ ನಾನೇನು ಒತ್ತಾಯ ಮಾಡಿಲ್ಲ. ಅವರೇ ಮಾಡಿದ್ದಾರೆ. ಅವರನ್ನು convince ಮಾಡಿ, ಇದು ಸರ್ಕಾರಕ್ಕೆ ಬಿಟ್ಟಿದ್ದು. ಸರ್ಕಾರದವರು oppositionನವರು ಇದ್ದೀರಿ, ನಾನು decision ತೆಗೆದುಕೊಳ್ಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- House is not in order, How can you debate...

ಅಧ್ಯಕ್ಷರು: ಈ ವಿಷಯವನ್ನು ಈಗ close ಮಾಡಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಇನ್ನು proceedings ಬಹಳ ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: No, this is.....

ಅಧ್ಯಕ್ಷರು: Calling attention ಸಲುವಾಗಿ ಎಲ್ಲಾ ಶಾಸಕರು wait ಮಾಡುತ್ತಿದ್ದಾರೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ನಿಮ್ಮದು ಸಹ ಸಾಕಷ್ಟು Calling attentions ಇವೆ, ದಯವಿಟ್ಟು proceedings ನಡೆಸುವುದಕ್ಕೆ ಅವಕಾಶ ಕೊಡಿ. ಕೊನೆಯದಾಗಿ ನಾನು request ಮಾಡುತ್ತಿದ್ದೇನೆ, ನಿಮ್ಮ ಸ್ಥಾನಕ್ಕೆ ಹೋಗಿ. ಈಗ ಸದನವನ್ನು 10 ನಿಮಿಷದವರೆಗೆ ಮುಂದಕ್ಕೆ ಹಾಕಿದ್ದೇನೆ.

(ಸದನದ ಕಲಾಪವು 6 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 10 ನಿಮಿಷದ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

[ಸದನವು ಪುನಃ 8 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು, ಈ ಸಂದರ್ಭದಲ್ಲಿ ಜೆಡಿ[ಎಸ್]ನ ಸದಸ್ಯರು ಸದನದ ಬಾವಿಯಲ್ಲಿದ್ದರು]

ಅಧ್ಯಕ್ಷರು: ಒಂದು ಪ್ರಕಟಣೆ

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ದಿವಸ ನೀಡಿರುವ ಪತ್ರದಲ್ಲಿ ಕೋರಿರುವಂತೆ ಕೆಳಕಂಡ ಸದಸ್ಯರು ಕಾಂಗ್ರೆಸ್ ಶಾಸಕಾಂಗ ಪದಾಧಿಕಾರಿಗಳಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಶ್ರೀ ಟಿ.ಬಿ.ಜಯಚಂದ್ರರವರು ಉಪನಾಯಕರು, ಶ್ರೀ ಸಿ.ಎಸ್.ನಾಡಗೌಡರವರು,

ಶ್ರೀ ಅಭಯಚಂದ್ರ ಜೈನ್ ಅವರು ಮುಖ್ಯ ಸಚೇತಕರು. ಮತ್ತೆ ಇನ್ನೊಂದು ಪ್ರಕಟಣೆ ಇದೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ, ಒಂದು, 2008ನೇ ಸಾಲಿನ ಕರ್ನಾಟಕ ಧನವಿನಿಯೋಗ ಸಂಖ್ಯೆ:1 ವಿಧೇಯಕ, 2008 ನೇ ಸಾಲಿನ ಕರ್ನಾಟಕದ ಧನವಿನಿಯೋಗ ವಿಧೇಯಕ 2008ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕ, 2008ನೇ ಸಾಲಿನ ಕರ್ನಾಟಕ ಕಾನೂನು[ತಿದ್ದುಪಡಿ] ವಿಧೇಯಕ, 2008ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ [ತಿದ್ದುಪಡಿ] ವಿಧೇಯಕ, ಹಾಗು 2008ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ಸ್[ತಿದ್ದುಪಡಿ] ವಿಧೇಯಕಗಳಿಗೆ ವಿಧಾನಪರಿಷತ್ತು ಯಾವುದೇ ತಿದ್ದುಪಡಿಗಳಿಲ್ಲದೆ ತನ್ನ ಸಹಮತವನ್ನು ನೀಡಿರುವುದು ಎಂದು ತಿಳಿಸಿರುತ್ತಾರೆ.

[ಗೊಂದಲ]

ಈಗಾಗಲೇ ತಾವು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಬಗ್ಗೆ ತಾವೇನು ಧರಣಿಯನ್ನು ಕುಳಿತ್ತಿದ್ದಿರಿ, ಈ ವಿಷಯದ ಬಗ್ಗೆ ನಾನು ತಮ್ಮಲ್ಲಿ ಈಗಾಗಲೇ ವಿನಂತಿ ಮಾಡಿಕೊಂಡಿದ್ದನೆ. ಈ ವಿಷಯ ಚರ್ಚೆಯಾಗಿದೆ, ತಾವು ಮತ್ತು ಉದಾಸಿಯವರನ್ನು ಮತ್ತೊಮ್ಮೆ ಕರೆಯಿಸಿ ಹೇಳಿದ್ದೇನೆ, ಚರ್ಚೆಯಾಗಿದೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋದರೆ ಗಮನ ಸೆಳೆಯುವ ಸೂಚನೆ ಮತ್ತು ಇನ್ನಿತರ ವಿಷಯಗಳನ್ನು ತೆಗೆದುಕೊಳ್ಳಬಹುದು, ಉಳಿದ ವಿಷಯಗಳನ್ನು ತೆಗೆದುಕೊಳ್ಳಲು ನಾನು ತಯಾರಿದ್ದೇನೆ, ಧರಣಿಯನ್ನು ಮುಕ್ತಾಯ ಮಾಡಿ, ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಎಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

[ಈ ಸಂದರ್ಭದಲ್ಲಿ ಮಾನ್ಯ ಜೆಡಿ[ಎಸ್]ನಾಯಕರಾದ ಶ್ರೀ ಕುಮಾರಸ್ವಾಮಿಯವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಅನುಮಾನಾಸ್ಪದವಾಗಿದೆ ಎಂಬ ಪದವನ್ನು ಈ ಒಂದು ವಿಷಯದಲ್ಲಿ 10–12 ಸಾರಿ ಉಪಯೋಗ ಮಾಡಿದ್ದಾರೆ. ಆದುದರಿಂದ ಅವರು ಅನುಮಾನವಿದೆ ಎಂದು ಅವರೇನು ಹೇಳುತ್ತಿದ್ದಾರೆ, ಆ ದೃಷ್ಟಿಯಿಂದಲೆ ನಾವು ಸದನ ಸಮಿತಿ ಮಾಡಿ ಎಂದು ಹೇಳುತ್ತಿದ್ದೇವೆ. ಅವರು ಪದೇ ಪದೇ ಅನುಮಾನ ಎಂಬುವ ಪದವನ್ನು ಹೇಳಿದ್ದಾರೆ.

[ಗೊಂದಲ]

ಅಧ್ಯಕ್ಷರು: ನಾನು ಈಗಾಗಲೆ ಈ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ, ಮತ್ತೆ ಬೇರೆ ವಿಷಯ ಪ್ರಸ್ತಾಪ ಮಾಡುವಾಗ ತೆಗೆದುಕೊಳ್ಳೋಣ. ದಯವಿಟ್ಟು ತಮ್ಮ ಸ್ಥಾನಕ್ಕೆ ತೆರಳಿ ಉಳಿದ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ, ಈಗ ಆ ವಿಷಯ ಮುಗಿಯಿತು ನಾನು ಆ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

[ಈ ಸಂದರ್ಭದಲ್ಲಿ ಸದಸ್ಯರಾದ ಮಾನ್ಯ ಹೆಚ್.ಡಿ.ರೇವಣ್ಣನವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಠಡಿಗೆ ಲೋಕೋಪಯೋಗಿ ಮಂತ್ರಿಗಳನ್ನು ಕರೆಯಿಸಿದ್ದಿರಿ, ನಮ್ಮನ್ನೂ ಕರೆಯಿಸಿದ್ದಿರಿ, ಎಲ್ಲಾ ದಾಖಲೆಗಳನ್ನು ಅಲ್ಲಿ ಇಟ್ಟಿದ್ದೇವೆ, ಎಲ್ಲಾ ದಾಖಲೆಗಳನ್ನು ತೋರಿಸಿಕೊಟ್ಟಿದ್ದೇವೆ, ಇದರಲ್ಲಿ 5 ಜನ ಮಂತ್ರಿಗಳು involve ಆಗಿರುವುದರಿಂದ ಸದನ ಸಮಿತಿಯನ್ನು ರಚಿಸಬೇಕೆಂದು ನಿಮ್ಮ ಕೊಠಡಿಯಲ್ಲಿ ಲೋಕೋಪಯೋಗಿ ಮಂತ್ರಿಗಳಿಗೆ ದಾಖಲಾತಿ ಸಮೇತ ಕೊಟ್ಟಿದ್ದೇನೆ. ಅದಕ್ಕೆ ತಾವು ಸದನ ಸಮಿತಿ ರಚನೆಯನ್ನು ಪ್ರಕಟಿಸಬೇಕೆಂದು ಮಾಡಬೇಕೆಂದು ನಿಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ ಸ್ವಾಮಿ. ಏಕೆಂದರೆ, ಇದರಲ್ಲಿ 5 ಜನ ಮಂತ್ರಿಗಳು involve ಆಗಿರುವುದು ಒಬ್ಬರಲ್ಲ ಇಬ್ಬರಲ್ಲ. ಆದುದರಿಂದ 5 ಜನ ಮಂತ್ರಿಗಳಿಂದ ಹಿಡಿದು, ಅಧಿಕಾರಿಗಳಿಂದ ಹಿಡಿದು ತನಿಖೆಯಾಗಬೇಕಾಗಿದೆ.

[ಗೊಂದಲ]

ಅಧ್ಯಕ್ಷರು: ನಾನು ಈಗಾಗಲೇ ಈ ವಿಷಯದ ಬಗ್ಗೆ ರೂಲಿಂಗ್ ಅನ್ನು ಕೊಟ್ಟಿದ್ದೇನೆ, ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ, ಮತ್ತೆ ಪದೇ ಪದೇ ಅದೇ ವಿಷಯದ ಬಗ್ಗೆ ಚರ್ಚೆ ಮಾಡುವುದಾದರೆ ಯಾವುದೆ ಅರ್ಥವಿಲ್ಲ. ನೀವು ಉಳಿದ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಆಸಕ್ತಿ ತೋರಿಸಿದರೆ ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ, ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಬೆಳಿಗ್ಗಿನಿಂದ ಬಹಳಷ್ಟು ಜನರು Calling Attention ಬಗ್ಗೆ ಕಾಯುತ್ತಿದ್ದಾರೆ.

[ಗೊಂದಲ]

ಶ್ರೀ ಹೆಚ್.ಡಿ.ರೇವಣ್ಣ: ಸದನ ಸಮಿತಿಯನ್ನು ಮಾಡುವುದಕ್ಕೆ ಹೆದರಿಕೆ ಏಕೆ ಇದೆ, ಏತಕ್ಕೆ ಹೆದರಿಕೊಳ್ಳಬೇಕು?

[ಗೊಂದಲ]

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಮೇಲ್ಮನೆಯಲ್ಲಿ ಯಡಿಯೂರಪ್ಪನವರು ಸೈಕಲ್ ಬಗ್ಗೆ ಪ್ರಸ್ತಾವ ಬಂದಾಗ House Committee

ಮಾಡಲು ಒಪ್ಪಿಕೊಂಡಿದ್ದಾರೆ, ನೀವು ನೋಡಿ verify ಮಾಡಿ, ಇಲ್ಲಿ ಅವರು ಆರ್ಡರ್ ಯಾರು ಮಾಡಿದ್ದಾರೆ ಅವರೆ ಇವತ್ತಿನ ದಿವಸ ತನಿಖೆಯಾಗಲಿ ಎನ್ನುತ್ತಿದ್ದಾರೆ ಅದಕ್ಕೆ ನಿಮ್ಮ ಅಧ್ಯಕ್ಷತೆಯಲ್ಲೆ ಆಗಲಿ, ಬೇರೆಯವರು ಬೇಡ.

ಅಧ್ಯಕ್ಷರು: ಈ ವಿಷಯದ ಬಗ್ಗೆ further ಚರ್ಚೆ ಇಲ್ಲ, ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ಬಹಳ ಮಹತ್ವದ Calling Attentions ಇವೆ ತೆಗೆದುಕೊಳ್ಳೋಣ, ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

[ಗೊಂದಲ]

[ಈ ಸಂದರ್ಭದಲ್ಲಿ ಸದಸ್ಯರಾದ ಮಾನ್ಯ ಹೆಚ್.ಸಿ.ಬಾಲಕೃಷ್ಣರವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ನಮಗೆ ರೇವಣ್ಣನವರ ಮೇಲೆ ಅನುಮಾನವಿದ, ದಯಮಾಡಿ ಸದನ ಸಮಿತಿಯನ್ನು ರಚಿಸಿ. [ಗೊಂದಲ]

(ಗೊಂದಲ)

ಅಧ್ಯಕ್ಷರು: ಈಗ ಇದರ ಬಗ್ಗೆ ಸಾಕಷ್ಟು ವಿಷಯಗಳು ಚರ್ಚೆಯಾಗಿದೆ. ಇನ್ನು ಗಮನಸೆಳೆಯುವ ಸೂಚನೆ ಮುಖ್ಯವಾದ ಅನೇಕ ವಿಚಾರಗಳು ಇದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಉದಾಸಿಯವರು ಹೇಳಿದಂತೆ ನಮಗೆ ರೇವಣ್ಣನವರ ಮೇಲೆಯೇ ಅನುಮಾನ ಇದೆ! ಆದ್ದರಿಂದ ದಯಮಾಡಿ ಸದನದ ಸಮಿತಿ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ವಿಚಾರಣೆಗೆ ನಿವೃತ್ತ ಐ.ಎ.ಎಸ್. ಅಧಿಕಾರಿಯನ್ನು ನೇಮಕ ಮಾಡಿದ್ದೀರಿ. ಇದರಲ್ಲಿ ಮಾಜಿ ಮುಖ್ಯಮಂತ್ರಿ, ಮಾಜಿ ಲೋಕೋಪಯೋಗಿ ಸಚಿವರು, ಹಾಲಿ ಮುಖ್ಯಮಂತ್ರಿ, ಹಾಲಿ ಲೋಕೋಪಯೋಗಿ ಸಚಿವರು, ಹಾಲಿ ಗೃಹ ಸಚಿವರು ಇದ್ದಾರೆ. ಪಾಪ ನಿವೃತ್ತ ಐ.ಎ.ಎಸ್. ಅಧಿಕಾರಿ ಇವರನ್ನೆಲ್ಲ ಸಮನ್ ಮಾಡಿ ಕರೆದು statement ತೆಗೆದುಕೊಳ್ಳಲು ಆಗುತ್ತದೆಯೆ ನೀವೇ ಹೇಳಿ.

ಅಧ್ಯಕ್ಷರು: ನಿಲುವಳಿ ಸೂಚನೆಯಲ್ಲಿ ಹಾಲಿ ಮುಖ್ಯಮಂತ್ರಿ, ಮಂತ್ರಿ, ಮಾಜಿ ಮಂತ್ರಿ, ಮುಖ್ಯಮಂತ್ರಿ ಎಂಬ subject ಇಲ್ಲ. ಇದು ಯಾವುದೂ ಇಲ್ಲ. ಇದರಲ್ಲಿ ಯಾವುದೋ ಮಂತ್ರಿಗಳ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ ಪ್ರಸ್ತಾವ ಮಾಡಿರಲಿಲ್ಲ. ಅವರುಗಳು ಇದರಲ್ಲಿ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಇದು ಹತ್ತು ಜನರ ಹಣ. ಇದನ್ನು ಕಂಡುಹಿಡಿಯಬೇಕು.

(ಗೊಂದಲ)

ಅಧ್ಯಕ್ಷರು: ಮಾನ್ಯ ಪ್ರಕಾಶ್ ಹುಕ್ಕೇರಿಯವರೆ, ತಾವು ಗಮನಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡಿ. ಅದಕ್ಕೆ ಚಾಲು ಮಾಡಿ.

ಶ್ರೀ ಪ್ರಕಾಶ್ ಹುಕ್ಕೇರಿ: ಈ ರೀತಿಯಲ್ಲಿ ಹೇಗೆ ಪ್ರಸ್ತಾಪ ಮಾಡುವುದು?

(ಗೊಂದಲ)

ಅಧ್ಯಕ್ಷರು: ಈ ರೀತಿ ಧರಣಿ ಮಾಡಿದರೆ ಸದನವನ್ನು ಹೇಗೆ ನಡೆಸುವುದು? ಈ ರೀತಿ ಪರಸ್ಪರ ಚರ್ಚೆ ಮಾಡಿದರೆ, ಧರಣಿ ಮಾಡಿದರೆ ಸದನ ಮಾಡುವುದಕ್ಕೆ ಆಗುವುದಿಲ್ಲ. ನಾನು ತಾವು ಪ್ರಸ್ತಾಪ ಮಾಡಲು ಅವಕಾಶ ಕೊಡಲು ತಯಾರಿದ್ದೇನೆ. ಈ ವಿಚಾರವನ್ನು ಮುಕ್ತಾಯ ಮಾಡಿ ಎಂದು ಅವರಿಗೆ ಹೇಳುತ್ತಿದ್ದೇನೆ. ನೀವು ಗಮನಸೆಳೆಯುವ ಸೂಚನೆಯನ್ನು ಪ್ರಾರಂಭ ಮಾಡಿ. ಈ ರೀತಿ ಧರಣಿ ಮಾಡಿದರೆ ಸದನವನ್ನು ಹೇಗೆ ನಡೆಸಬೇಕು? ಪ್ರಕಾಶ್‌ಹುಕ್ಕೇರಿಯವರೆ ತಮಗೆ ನಾನು ಅವಕಾಶ ಕೊಡಲು ತಯಾರಿದ್ದೇನೆ. ಆದರೆ, ಅವರು ಧರಣಿ ಮುಗಿಸಬೇಕಲ್ಲ. ನೀವು ಗಮನಸೆಳೆಯುವ ಸೂಚನೆ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಾನು ಅವಕಾಶ ಕೊಡಲು ತಯಾರಿದ್ದೇನೆ.

(ಗೊಂದಲ)

ಅಧ್ಯಕ್ಷರು: ಈ ರೀತಿ ವಾತಾವರಣದಲ್ಲಿ ಸದನವನ್ನು ನಡೆಸಲು ಆಗುವುದಿಲ್ಲ. ಈಗ ಸದನವನ್ನು ಅನಿರ್ಧಿಷ್ಟಕಾಲದವರೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡಿತು)

ಅನುಬಂಧ – I

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(353)118
ಸದಸ್ಯರ ಹೆಸರು	:	ಶ್ರೀ ಅಪ್ಪಾಜಿ ಚೆನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)
ಉತ್ತರಿಸುವ ಸಚಿವರು	:	(ಶ್ರೀ ಗೂಳಿ ಹಟ್ಟಿ ಡಿ.ಶೇಖರ್) ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು

ಅ. ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು?

ರಾಜ್ಯದಲ್ಲಿ ಒಟ್ಟು 9 ಸಹಕಾರಿ ನೂಲಿನ ಗಿರಣಿಗಳು ಕಾರ್ಯ ನಿರ್ವಹಿಸುತ್ತಿವೆ.

ಆ. ಇವುಗಳಲ್ಲಿ ಎಷ್ಟು ಗಿರಣಿಗಳು ನಷ್ಟವನ್ನು ಅನುಭವಿಸುತ್ತಿವೆ? (ವಿವರಗಳನ್ನು ಒದಗಿಸುವುದು)

ಕೆಳಕಂಡ 9 ಗಿರಣಿಗಳು ನಷ್ಟವನ್ನು ಅನುಭವಿಸುತ್ತಿವೆ.

(ನಷ್ಟ)

(Rupees in Lakhs)

1.	ಬನಹಟ್ಟಿ ಸಹಕಾರಿ ನೂಲಿನ ಗಿರಣಿ ನಿಯಮಿತ, ಬನಹಟ್ಟಿ	242.50
2.	ಗದಗ ಸಹಕಾರಿ ನೂಲಿನ ಗಿರಣಿ ನಿಯಮಿತ, ಹುಲಕೋಟಿ	746.75
3.	ಫಾರ್ಮರ್ಸ್ ಸಹಕಾರಿ ನೂಲಿನ ಗಿರಣಿ ನಿಯಮಿತ, ಹುಲಕೋಟಿ	1659.60
4.	ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣಿಬೆನ್ನೂರು	4766.61
5.	ತುಂಗಭದ್ರಾ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣಿಬೆನ್ನೂರು	2387.88
6.	ಮಲಪ್ರಭಾ ಸಹಕಾರಿ ನೂಲಿನ ಗಿರಣಿ ನಿಯಮಿತ, ಸವದತ್ತಿ	3375.83
7.	ಬೆಳಗಾಂ ಸಹಕಾರಿ ಹತ್ತಿ ನೂಲಿನ ಗಿರಣಿ ನಿಯಮಿತ, ಬೆಳಗಾಂ	2103.93
8.	ಸೋಮೇಶ್ವರ ಸಹಕಾರಿ ನೂಲಿನ ಗಿರಣಿ ನಿಯಮಿತ, ಲಕ್ಷ್ಮೇಶ್ವರ	2749.72
9.	ಶ್ರೀ ವೆಂಕಟೇಶ ಸಹಕಾರಿ ನೂಲಿನ ಗಿರಣಿ ನಿಯಮಿತ, ಅಣ್ಣಿಗೇರಿ	3712.41

ಇ. ನಷ್ಟವನ್ನು ಅನುಭವಿಸುತ್ತಿರುವ ಗಿರಣಿಗಳ ಪುನಃಶ್ಚೇತನಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು?

1. ಗದಗ ಸಹಕಾರಿ ಹತ್ತಿ ನೂಲಿನ ಗಿರಣಿ ನಿಯಮಿತ, ಹುಲಕೋಟಿ, ಇದನ್ನು ರೂ. 920.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಆಧುನೀಕರಣಗೊಳಿಸಲಾಗಿದೆ.
2. ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ, ಈ ಗಿರಣಿಯ ಆಧುನೀಕರಣ ಯೋಜನೆಗಾಗಿ ರೂ. 13.00 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ ಮೊದಲನೇ ಕಂತಾಗಿ ರೂ. 3.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

3. ಫಾರ್ಮರ್ಸ್ ಸಹಕಾರಿ ನೂಲಿನ ಗಿರಣಿ, ಹುಲಕೋಟಿ, ಈ ಗಿರಣಿಯನ್ನು ರೂ. 1324.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ. ಈ ಪೈಕಿ ರೂ. 543.24 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಈ ರೀತಿ ನಷ್ಟವನ್ನು ಅನುಭವಿಸುತ್ತಿರುವ ಗಿರಣಿಗಳಿಂದ ವಾರ್ಷಿಕವಾಗಿ ಎಷ್ಟು ಮಾನವ ಶಕ್ತಿ ನಷ್ಟವಾಗಿದೆ?

ಗಿರಣಿಗಳು ನಷ್ಟ ಅನುಭವಿಸುತ್ತಿರುವುದರಿಂದ ವಾರ್ಷಿಕವಾಗಿ ಒಟ್ಟು 4,64,206 ಮಾನವ ದಿನಗಳು ನಷ್ಟವಾಗಿವೆ.

ಸದಸ್ಯರ ಹೆಸರು	:	ಡಾ:ಸುಧಾಕರ್ ಎಂ.ಸಿ. (ಚಿಂತಾಮಣಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(304)120
ಉತ್ತರಿಸುವ ಸಚಿವರು	:	(ಶ್ರೀ ಗೂಳಿಹಟ್ಟಿ ಡಿ.ಶೇಖರ್) ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು

ಅ) ಚಿಂತಾಮಣಿ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದ ಕತ್ತರಿಗುಪ್ಪೆ ಗ್ರಾಮ ಬಡ ನೇಕಾರರಿಗೆ ಈ ಹಿಂದೆ ವಸತಿ ಷೆಡ್ ನಿರ್ಮಾಣ ಮಾಡಲು ಮಂಜೂರಾದ ಹಣವನ್ನು ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ದುರುಪಯೋಗದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಚಿಂತಾಮಣಿ ತಾಲ್ಲೂಕು ಕತ್ತರಿಗುಪ್ಪೆ ಗ್ರಾಮದಲ್ಲಿರುವ ಹತ್ತಿ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಈ ಸಂಘಕ್ಕೆ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆಯಡಿ 2004-05 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ್ದ ರೂ.9.80 ಲಕ್ಷಗಳ ಅನುದಾನವನ್ನು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿದ್ದು, ಈ ಸಂಬಂಧ ಇವರ ಮೇಲೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಕೋಲಾರ ಜಿಲ್ಲಾ ಕಚೇರಿಯಿಂದ ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ ಇಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.153/04 ಹೂಡಲಾಗಿದ್ದು ಪ್ರಕರಣ ನ್ಯಾಯಾಲಯದಲ್ಲಿರುತ್ತದೆ.

ಸದಸ್ಯರ ಹೆಸರು	:	ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(357)122
ಉತ್ತರಿಸುವ ಸಚಿವರು	:	(ಶ್ರೀ ಗೂಳಿಹಟ್ಟಿ ಡಿ.ಶೇಖರ್) ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು

ಅ) ನಿವೇಶನ ರಹಿತ ಬಡ ನೇಕಾರ ಕುಟುಂಬಗಳಿಗೆ ನಿವೇಶನ ನೀಡಲು ಸರ್ಕಾರ ಯೋಚಿಸಿದೆಯೆ;

1. ನಿವೇಶನ ರಹಿತ ಬಡ ನೇಕಾರರಿಗೆ ಇಲಾಖೆಯ ಸಾಮಾನ್ಯ ಯೋಜನೆ ಕಾರ್ಯಕ್ರಮಗಳಡಿ ನಿವೇಶನ ನೀಡುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಆದಾಗ್ಯೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಚಾಲ್ತಿಯಲ್ಲಿರುವ ಬಡ ಕುಟುಂಬಗಳಿಗೆ ನಿವೇಶನ ನೀಡುವ ಯೋಜನೆಯಡಿ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗಳಿಂದ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಸ್ತಾವನೆ ಸಲ್ಲಿಸಿ ಬಡ ನೇಕಾರರ ಕುಟುಂಬಗಳಿಗೆ ನಿವೇಶನ ನೀಡಲಾಗುತ್ತದೆ.

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು;

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಸಹಾಯ ಪಡೆದು ನೇಕಾರರಿಗೆ ನಿವೇಶನ ನೀಡುವ ಯೋಜನೆಯನ್ನು 2005-06ನೇಸಾಲಿನಿಂದ ಜಾರಿಗೊಳಿಸಲಾಗುತ್ತಿದೆ

ಇ) ಹಾಗಿದ್ದಲ್ಲಿ, ಯಾವ ಅಳತೆಯ ನಿವೇಶನವನ್ನು ನೀಡಲು ಸರ್ಕಾರ ಆಲೋಚಿಸಿದೆ ಹಾಗೂ ನಿವೇಶನ ನೀಲಿನಕ್ಷೆ ಮತ್ತು ಪ್ರತಿ ನಿವೇಶನಕ್ಕೆ ತಗಲುವ ವೆಚ್ಚವೆಷ್ಟು;

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ನಿಯಮದಂತೆ ಗ್ರಾಮೀಣ ಪ್ರದೇಶದಲ್ಲಿ 30'x40' ಹಾಗೂ ನಗರ ಪ್ರದೇಶದಲ್ಲಿ ಕನಿಷ್ಟ 25' x30' ಮತ್ತು ಗರಿಷ್ಟ 33'x30' ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಪ್ರತಿ ಎಕರೆಗೆ ಗ್ರಾಮೀಣ ಪ್ರದೇಶಕ್ಕೆ ರೂ.50,000/- ಮತ್ತು ನಗರ ಪ್ರದೇಶಕ್ಕೆ ರೂ.1.00 ಲಕ್ಷ ಅನುದಾನವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಮಂಜೂರಾಗುತ್ತಿದ್ದು, ಹೆಚ್ಚಿನ ಮೊತ್ತವನ್ನು ಫಲಾನುಭವಿಗಳಿಂದ ಪಡೆದು ಪ್ರತಿ ಎಕರೆಗೆ 22 ರಿಂದ 25 ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲಾಗುತ್ತಿದೆ. ಅಂದಾಜು ಪ್ರತಿ ನಿವೇಶನಕ್ಕೆ ಗ್ರಾಮೀಣ ಪ್ರದೇಶದಲ್ಲಿ ರೂ.6,000/- ಹಾಗೂ ನಗರ ಪ್ರದೇಶದಲ್ಲಿ ರೂ.10,000/- ವೆಚ್ಚ ತಗಲುತ್ತದೆ.

ಈ) ಪ್ರಸಕ್ತ ವರ್ಷದಲ್ಲಿ ಸರ್ಕಾರ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಕುಟುಂಬಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಿದೆ?

ಪ್ರಸಕ್ತ ಸಾಲಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಾಯದಿಂದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಕೆಳಕಂಡಂತೆ 287 ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಲಾಗಿದೆ.

ಕ್ರ.ಸಂ.	ತಾಲ್ಲೂಕು	ನಿವೇಶನಗಳ ಸಂಖ್ಯೆ.
1.	ಬದಾಮಿ	115
2	ಹುನಗುಂದ	50
3	ಬೀಳಗಿ	56
4	ಜಮಖಂಡಿ	66
	ಒಟ್ಟು	**287**

ವಿಷಯ: ಬಿಜಾಪುರದಲ್ಲಿ ಆಹಾರ ಸಂಸ್ಕರಣಾ ಘಟಕದ ಸ್ಥಾಪನೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (361)124

2. ಸದಸ್ಯರ ಹೆಸರು : ಶ್ರೀ ಅಪ್ಪಾ ಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ)

3. ಉತ್ತರಿಸುವ ಸಚಿವರು : (ಶ್ರೀ ಮುರುಗೇಶ್ ಆರ್.ನಿರಾಣಿ)

: ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ. ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳಿವೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಹ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿದ ಆಹಾರ ಸಂಸ್ಕರಣಾ ಘಟಕಗಳು ಸ್ಥಾಪನೆಯಾಗಿರುತ್ತವೆ. ಇಂತಹ ಘಟಕಗಳು ಹೆಚ್ಚಾಗಿ ಬೆಂಗಳೂರು(ನಗರ), ಬೆಂಗಳೂರು(ಗ್ರಾಮಾಂತರ), ಮೈಸೂರು, ದಕ್ಷಿಣಕನ್ನಡ, ಕೋಲಾರ, ಬೆಳಗಾಂ, ಬಿಜಾಪುರ, ಹುಬ್ಬಳ್ಳಿ ಧಾರವಾಡ, ಶಿವಮೊಗ್ಗ, ಉತ್ತರ ಕನ್ನಡ, ಬಳ್ಳಾರಿ, ಕೊಪ್ಪಳ, ಚಿತ್ರದುರ್ಗ, ಹಾವೇರಿ, ಮತ್ತು ತುಮಕೂರು ಜಿಲ್ಲೆಗಳಲ್ಲೂ ಹೆಚ್ಚಾಗಿ ಇರುತ್ತವೆ.

ಆ. ಬಿಜಾಪುರ ಜಿಲ್ಲೆಯ ಆಹಾರಧಾನ್ಯಗಳನ್ನು ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ಮುಂಚೂಣಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ. ಈ ಭಾಗದ ರೈತರಿಗೆ ಅನುಕೂಲವಾಗುವಂತೆ ಬಿಜಾಪುರದಲ್ಲಿ ಆಹಾರ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೆ;

ಸರ್ಕಾರದ ವತಿಯಿಂದ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಇರುವುದಿಲ್ಲ. ಆದರೆ ಖಾಸಗಿ ವಲಯದಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ದಿಮೆದಾರರನ್ನು ಹುರಿದುಂಬಿಸಿ ಅವರಿಗೆ ಅವಶ್ಯವಿರುವ ರಿಯಾಯಿತಿ ಮತ್ತು ಉತ್ತೇಜನಗಳನ್ನು ಕಲ್ಪಿಸಲಾಗುವುದು.

ಈ. ಹಾಗಿದ್ದಲ್ಲಿ, ಹೊಸದಾಗಿ ಯಾವ ಯಾವ ಸ್ಥಳಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುವುದು ಹಾಗೂ ಅದಕ್ಕಾಗಿ ಹಾಕಿಕೊಂಡಿರುವ ಯೋಜನೆಗಳೇನು;

ಈ ದಿಸೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನಾ ಸಮಿತಿ ಸಭೆಯು 7 ಯೋಜನೆಗಳನ್ನು ಅನುಮೋದಿಸಿದ್ದು ಅವುಗಳು ಅನುಷ್ಠಾನ ಹಂತದಲ್ಲಿರುತ್ತವೆ. ಅವುಗಳಿಂದ 27,779 ಲಕ್ಷ ಬಂಡವಾಳ ಹೂಡಿಕೆಯಾಗಲಿದ್ದು 1457 ಜನರಿಗೆ ಉದ್ಯೋಗಾವಕಾಶ ಸಿಗಲಿದೆ. ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ 13 ಆಹಾರ ಸಂಸ್ಕರಣಾ ಘಟಕಗಳು ಪ್ರಾರಂಭವಾಗಲಿದ್ದು ಇದರಿಂದ 26627 ಲಕ್ಷ ಬಂಡವಾಳ ಹೂಡಿಕೆಯಾಗಲಿದ್ದು 3718 ಜನರಿಗೆ ಉದ್ಯೋಗಾವಕಾಶ ದೊರಕಿರುತ್ತದೆ.

ಉ. ಬಿಜಾಪುರದಲ್ಲಿ ಆಹಾರ ಸಂಸ್ಕರಣಾ ಘಟಕವನ್ನು ಯಾವಾಗ ಸ್ಥಾಪಿಸಲಾಗುವುದು?

ಅನುಷ್ಠಾನ ಹಂತದಲ್ಲಿರುವ ಕೈಗಾರಿಕೆಗಳು ಘಟಕವನ್ನು ಪ್ರಾರಂಭಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದು, ಈ ಕ್ರಮ ತೆಗೆದುಕೊಂಡ ನಂತರ ಉತ್ಪಾದನೆ ಪ್ರಾರಂಭಿಸುತ್ತವೆ.

ಕರ್ನಾಟಕ ಉದ್ಯೋಗ ಮಿತ್ರವು ಬೆಂಗಾವಲು ಸೇವೆಯನ್ನು ಒದಗಿಸುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (354)119
ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರ್ ರಾವ್ ನಾಡಗೌಡ
ಉತ್ತರಿಸಬೇಕಾದ ಸಚಿವರು : ಜಲಸಂಪನ್ಮೂಲ ಸಚಿವರು (ಶ್ರೀ ಬಸವರಾಜ್ ಬೊಮ್ಮಾಯಿ)

ಅ) ಭೀಮಾ ನದಿಗೆ ನಿರ್ಮಾಣಗೊಂಡಿರುವ ಬ್ಯಾರೇಜ್‌ಗಳು ಎಷ್ಟು;

ಕೃಷ್ಣಾ ಭಾಗ್ಯ ಜಲ ನಿಗಮದಡಿ ಭೀಮಾ ನದಿಗೆ ಅಡ್ಡಲಾಗಿ 5 ಬ್ಯಾರೇಜುಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಸಣ್ಣ ನೀರಾವರಿ ಇಲಾಖೆಯಿಂದ ಭೀಮಾ ನದಿಗೆ ಅಡ್ಡಲಾಗಿ ಇದುವರೆಗೆ ಬಿಜಾಪುರ ಜಿಲ್ಲೆಯಲ್ಲಿ 6 ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ 2 ಬ್ಯಾರೇಜ್‌ಗಳನ್ನು ನಿರ್ಮಿಸಲಾಗಿದೆ.

ಆ) ಇಂಡಿ ಬ್ರಾಂಚ್ ಕ್ಯಾನೆಲ್‌ನಿಂದ ಈ ಬ್ಯಾರೇಜುಗಳಿಗೆ ನೀರು ಹಾಯಿಸಲು ಸರ್ಕಾರ ಯೋಜಿಸಿದೆಯೇ;

ಇಲ್ಲ

ಇ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರದ ನಿಲುವೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(355)120**
ಸದಸ್ಯರ ಹೆಸರು	:	**ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರರಾವ್‌ನಾಡಗೌಡ.**
ಉತ್ತರಿಸುವ ಸಚಿವರು	:	**(ಶ್ರೀ ಬಸವರಾಜ್ ಬೊಮ್ಮಾಯಿ) ಜಲ ಸಂಪನ್ಮೂಲ ಸಚಿವರು**

ಅ) ಆಲಮಟ್ಟಿ ಎಡದಂಡೆ ಕಾಲುವೆಯ 18ನೇ ಮತ್ತು 21ನೇ ನೀರಿನ ವಿತರಣೆ ಕಾಲುವೆಯಿಂದ ರೈತರ ಜಮೀನುಗಳಿಗೆ ನೀರು ಪೂರೈಕೆ ಮಾಡುವ ಕಾರ್ಯವು ಯಶಸ್ವಿಯಾಗಿದೆಯೆ;

ಆಲಮಟ್ಟಿ ಎಡದಂಡೆ ಕಾಲುವೆಯ 18ನೇ ಮತ್ತು 21ನೇ ವಿತರಣಾ ಕಾಲುವೆಗಳಲ್ಲಿ 2004–05ನೇ ಸಾಲಿನಿಂದ ನೀರನ್ನು ಬಿಡಲಾಗುತ್ತಿದ್ದು, ನಿಗದಿತ ಪ್ರಮಾಣದಲ್ಲಿ ಕಾಲುವೆ ಕೊನೆಯ ಅಂಚಿನವರೆಗೂ ತಲುಪಿಸಲು ಸಾಧ್ಯವಾಗಿರುವುದಿಲ್ಲ.

ಆ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ ಕೆಳಕಂಡ ಕಾರಣಗಳಿಂದ ಕಾಲುವೆ ಕೊನೆಯ ಅಂಚಿನವರೆಗೂ ತಲುಪಿಸಲು ಸಾಧ್ಯವಾಗಿರುವುದಿಲ್ಲ.

1. ಮಳೆ ನೀರಿನ ಕೊರೆತದಿಂದ ಕಾಲುವೆಯಲ್ಲಿ ಅಲ್ಲಲ್ಲಿ ಹೂಳು ತುಂಬಿದ್ದರಿಂದ.
2. ರೈತರು ಅನಧಿಕೃತವಾಗಿ ಕಾಲುವೆಯ ಸೇವಾ ರಸ್ತೆಯನ್ನು ಒಡೆದು ನೀರನ್ನು ತಮ್ಮ ಹೊಲಗಳಿಗೆ ಹಾಯಿಸಿಕೊಂಡಿದ್ದರಿಂದ.

3. ಮೇಲ್ಭಾಗದ ರೈತರು ನೀರನ್ನು ಹೆಚ್ಚಿಗೆ ಬಳಸಿರುವುದರಿಂದ.

ಇ) 18ನೇ ಮತ್ತು 21ನೇ ನೀರಿನ ವಿತರಣಾ ಕಾಲುವೆಯಿಂದ ರೈತರ ಜಮೀನುಗಳಿಗೆ ನೀರನ್ನು ಸಮರ್ಪಕವಾಗಿ ವಿತರಣೆ ಮಾಡುವ ವ್ಯವಸ್ಥೆಯನ್ನು ಸರ್ಕಾರವು ಯಾವ ರೀತಿ ಕೈಗೊಳ್ಳಲಿದೆ ಹಾಗೂ ಎಷ್ಟು ದಿನಗಳೊಳಗಾಗಿ ಅನುಷ್ಠಾನಗೊಳಿಸಲಾಗುವುದು?

ಈ ಸಾಲಿನ ಕ್ಲೋಜರ್ ಅವಧಿಯಲ್ಲಿ ಕಾಲುವೆಗಳಲ್ಲಿ ತುಂಬಿದ್ದ ಹೂಳನ್ನು ತೆಗೆಸಲಾಗಿದ್ದು, ಅಲ್ಲಲ್ಲಿ ಹಾನಿಗೊಳಗಾದ ಸೇವಾ ರಸ್ತೆಯನ್ನು ಸಹ ದುರಸ್ತಿಗೊಳಿಸಲಾಗಿದೆ. ಮೇಲ್ಭಾಗದ ರೈತರಿಗೆ ಮನವರಿಕೆಯನ್ನು ಮಾಡಿ, 18ನೇ ಮತ್ತು 21ನೇ ಕಾಲುವೆಯ ಕೊನೆಯ ಅಂಚಿನವರೆಗೂ ನೀರನ್ನು ಇದೇ ಮುಂಗಾರು ಹಂಗಾಮಿಗೆ ಹರಿಸಲು ಕ್ರಮ ಜರುಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(356)121**
ವಿದಾನ ಸಭಾ ಸದಸ್ಯರ ಹೆಸರು	:	**ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರ್ ರಾವ್ ನಾಡಗೌಡ**
ಉತ್ತರಿಸುವ ಸಚಿವರು	:	**(ಶ್ರೀ ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು**

ಅ) ಆಲಮಟ್ಟಿಯಿಂದ ಮುದ್ದೇಬಿಹಾಳದವರೆಗೆ ಹಾಗೂ ಮುದ್ದೇಬಿಹಾಳದಿಂದ ನಾರಾಯಣಪುರದವರೆಗೆ ನೀರಾವರಿ ಇಲಾಖೆಗೆ ಸೇರಿದ ಮುಖ್ಯರಸ್ತೆಯು ಎರಡು ವರ್ಷಗಳಿಂದ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಗಿದ್ದಲ್ಲಿ, ಈವರೆವಿಗೂ ಇದನ್ನು ಸರಿಪಡಿಸಲು ಯಾವುದೇ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು;

ಆಲಮಟ್ಟಿ–ಮುದ್ದೇಬಿಹಾಳ ಹಾಗೂ ಮುದ್ದೇಬಿಹಾಳ–ನಾರಾಯಣಪುರ ರಸ್ತೆಗಳು ಮೂಲತಃ ಲೋಕೋಪಯೋಗಿ ಇಲಾಖೆಯ ಒಡೆತನಕ್ಕೆ ಸೇರಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯಲ್ಲಿ ಕಾಮಗಾರಿಗಳ ಸಮರ್ಪಕ ನಿರ್ವಹಣೆಗಾಗಿ ಸೂಕ್ತ ಸಂಚಾರ ವ್ಯವಸ್ಥೆ ಹೊಂದಬೇಕಾಗಿರುವ ದೃಷ್ಟಿಯಿಂದ ಸದರಿ ರಸ್ತೆಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಹಸ್ತಾಂತರಿಸಿಕೊಳ್ಳಲಾಗಿತ್ತು.

ದಿನಾಂಕ 28.12.2007 ರಂದು 72ನೇ ಕೃಭಾಜನಿನಿ ನಿರ್ದೇಶಕರ ಮಂಡಳಿ ಸಭೆಯಲ್ಲಿ ನಿಗಮದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಮಾತ್ರ ಇಲಾಖೆಗೆ ಕನಿಷ್ಟ ದುರಸ್ತಿ ವೆಚ್ಚದೊಂದಿಗೆ ಹಸ್ತಾಂತರಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಇ) ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ರೈತಾಪಿ ವರ್ಗಕ್ಕೆ ಆಗಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ಕಾಮಗಾರಿಯನ್ನು ಎಷ್ಟು ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು?

ಆಲಮಟ್ಟಿ-ಮುದ್ದೇಬಿಹಾಳ ರಸ್ತೆಯ ಕೆಲವು ಭಾಗಗಳಲ್ಲಿ ಗುಂಡಿಗಳು ಬಿದ್ದಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಸದರಿ ರಸ್ತೆಯ ಕನಿಷ್ಠ ದುರಸ್ತಿ ಕೈಗೆತ್ತಿಕೊಳ್ಳುವ ಅವಶ್ಯಕತೆಯನ್ನು ಮನಗಂಡು ರಸ್ತೆಯ ದುರಸ್ತಿಗಾಗಿ ರೂ.11.20 ಲಕ್ಷ ಮೊತ್ತದ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಜುಲೈ-2008ರಲ್ಲಿ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಮತ್ತು ದುರಸ್ತಿ ಕಾಮಗಾರಿಯನ್ನು 2 ತಿಂಗಳ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಮುದ್ದೇಬಿಹಾಳ-ನಾರಾಯಣಪುರ ರಸ್ತೆಯ ಕನಿಷ್ಠ ದುರಸ್ತಿಗಾಗಿ ಬೇಕಾಗುವ ಅಂದಾಜು ವೆಚ್ಚವನ್ನು ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದ್ದು, ಅಂದಾಜು ಪತ್ರಿಕೆ ತಯಾರಿಸಿಕೊಂಡು ನಿಗಮದಡಿ ಲಭ್ಯವಾಗಬಹುದಾದ ಅಗತ್ಯ ಅನುದಾನವನ್ನು ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(362)125**
ಸದಸ್ಯರ ಹೆಸರು	:	**ಶ್ರೀ ಅಪ್ಪಾಸಾಹೇಬ (ಅಪ್ಪು)ಮಲ್ಲಪ್ಪ ಪಟ್ಟಣಶೆಟ್ಟಿ**
ವಿಷಯ	:	**ಬಿಜಾಪುರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವುದು**
ಉತ್ತರಿಸುವವರು	:	**ಮಾನ್ಯ ಕಂದಾಯ ಸಚಿವರು(ಶ್ರೀ ಬಿ.ಕರುಣಾಕರ ರೆಡ್ಡಿ)**

1. ಬಿಜಾಪುರ ನಗರವು ಜಿಲ್ಲಾ ಕೇಂದ್ರವಾಗಿದ್ದು, ಸರ್ಕಾರಿ ಕಛೇರಿ, ಸಂಘ ಸಂಸ್ಥೆಗಳು ಖಾಸಗಿ ಕಟ್ಟಡಗಳಲ್ಲಿ ದುಬಾರಿ ಬಾಡಿಗೆ ನೀಡಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

2. ಹಾಗಿದ್ದಲ್ಲಿ, ಈ ಎಲ್ಲಾ ಸರ್ಕಾರಿ ಕಛೇರಿಗಳು ಒಂದೇ ಕಡೆ ಕಾರ್ಯ ನಿರ್ವಹಿಸುವಂತೆ ವಿಜಾಪುರದಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;

ಹೌದು.

3. ಹಾಗಿದ್ದಲ್ಲಿ, ಮಿನಿ ವಿಧಾನಸೌಧ ನಿರ್ಮಿಸಲು ಯಾವ ಸ್ಥಳ ಗುರುತಿಸಲಾಗಿದೆ;

ವಿಜಾಪುರ ತಾಲ್ಲೂಕಿನ ಮಹಾಲಬಗಾಯತ ಗ್ರಾಮದ ರಿ.ಸ.ನಂ.314ರಲ್ಲಿ 5 ಎಕರೆ ಜಮೀನನ್ನು ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದೆ.

4. ಈ ಯೋಜನೆಯು ಈಗ ಯಾವ ಹಂತದಲ್ಲಿದೆ;

ಸದರಿ ಸ್ಥಳದಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ವಹಿಸಲಾಗಿದ್ದು, ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿ ಪ್ರಸ್ತುತ ನೆಲ ಅಂತಸ್ತಿನ ಕಟ್ಟಡದ ಕೆಲಸವು ಪೂರ್ಣಗೊಂಡಿದ್ದು, ಶೇಕಡಾ 50ರಷ್ಟು ಸ್ಲಾಬ್ ಕೆಲಸ ಮುಕ್ತಾಯಗೊಂಡಿರುತ್ತದೆ. ಈ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

5. ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಸಂ.	:	**(391)127**
2. ಸದಸ್ಯರ ಹೆಸರು	:	**ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ**
3. ಉತ್ತರಿಸುವ ಸಚಿವರ ಹೆಸರು	:	**(ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು.**

ಅ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಬೆಣ್ಣೆಹಳ್ಳದ ಹೂಳನ್ನು ತೆಗೆಯಲಾಗಿದೆಯೇ;

ಇಲ್ಲ

ಆ ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

40 ಹೆಕ್ಟೇರ್‌ನಿಂದ 2000 ಹೆಕ್ಟೇರ್‌ವರೆಗಿನ ನೀರಾವರಿ ಅಚ್ಚುಕಟ್ಟು ಪ್ರದೇಶವನ್ನು ಸೃಜಿಸುವ ಕೆರೆ/ಬಾಂದಾರ/ಏತ ನೀರಾವರಿ ಯೋಜನೆ, ಮುಂತಾದ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಯು ಕೈಗೊಳ್ಳುತ್ತಿದೆ. ಹಳ್ಳಗಳಲ್ಲಿ ಹೂಳು ತೆಗೆಯುವಂತಹ ಕಾಮಗಾರಿಗಳನ್ನು ಕೈಗೊಳ್ಳುತ್ತಿಲ್ಲ. ಆದರೆ, ವಿಶೇಷ ಅನುದಾನ

ಲಭ್ಯವಾದಲ್ಲಿ ಮಾತ್ರ ಇಂತಹ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಇ ಸದರಿ ಹಳ್ಳದ ಸುಧಾರಣೆ ಮಾಡಿ, ಪ್ರಕೃತಿ ವಿಕೋಪದಿಂದ ಆಗುವ ಅನಾಹುತವನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

11ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರವಾಹ ನಿರ್ವಹಣೆ ಕಾರ್ಯಕ್ರಮದಡಿ ನದಿ ನಿರ್ವಹಣೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಯಡಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ನದಿ ಮತ್ತು ಹಳ್ಳದ ದಂಡಗಳನ್ನು ಹಾಗೂ ಕೃಷಿ ಭೂಮಿಗಳನ್ನು ರಕ್ಷಿಸುವ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಅನುಮೋದನೆ ದೊರೆತಲ್ಲಿ ಈ ಕಾಮಗಾರಿಗಳನ್ನು ಜಾರಿಗೊಳಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಸಂ.	:	**(302)128**
2. ಸದಸ್ಯರ ಹೆಸರು	:	ಡಾ: ಸುಧಾಕರ್ ಎಂ.ಸಿ.
3. ಉತ್ತರಿಸುವ ಸಚಿವರು	:	(ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ ಚಿಂತಾಮಣಿ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟವು ಸುಮಾರು 1000 ಅಡಿಗಳಿಗೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ ಹಾಗಿದ್ದಲ್ಲಿ, ಈ ಕುರಿತು ದೀರ್ಘಕಾಲದ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ;

ಸಣ್ಣ ನೀರಾವರಿ ಇಲಾಖೆಯು ನೇರವಾಗಿ ಅಂತರ್ಜಲ ಮಟ್ಟ ವೃದ್ಧಿಸುವ ಯೋಜನೆಗಳನ್ನು ಕೈಗೊಳ್ಳುವುದಿಲ್ಲ. ಆದರೆ, ಇಲಾಖೆಯು ಕೈಗೊಳ್ಳುವ ಯೋಜನೆಗಳಿಂದ ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಯಾಗುತ್ತದೆ.

ಇ ಮಳೆಗಾಲದಲ್ಲಿ ಹರಿಯುವ ನದಿಗಳ ಚೆಕ್ ಡ್ಯಾಂಗಳ ಅಳವಡಿಸುವುದರಿಂದ ಅಂತರ್ಜಲ ಮಟ್ಟವನ್ನು ವೃದ್ಧಿಸಲು ಹೆಚ್ಚು ಹೆಚ್ಚು ಚೆಕ್ ಡ್ಯಾಂಗಳನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು (ವಿವರ ನೀಡುವುದು)?

ಚಿಂತಾಮಣಿ ತಾಲ್ಲೂಕಿನಲ್ಲಿ ಬುರುಡುಗುಂಟೆ, ಹೊಸಹೂಡ್ಯ, ಅಪ್ಪಸಾನಹಳ್ಳಿ, ಗುಂಡ್ಲುಹಳ್ಳ ಹಾಗೂ ಮಿಂಡಿಗಲ್ ಹತ್ತಿರ ಪಿಕಪ್ ನಿರ್ಮಾಣ ಕಾಮಗಾರಿಯನ್ನು ಹಾಗೂ ಕ್ಯಾಸಗೆರೆ ಹತ್ತಿರ ಡೈಕ್ ನಿರ್ಮಾಣ ಕಾಮಗಾರಿಯನ್ನು ಈಗಾಗಲೇ ಕೈಗೊಂಡಿದ್ದು, ಇವುಗಳ ಪೈಕಿ ಬುರುಡುಗುಂಟೆ, ಹೊಸಹುಡ್ಯ, ಮಿಂಡಿಗಲ್ ಹತ್ತಿರ

ಪಿಕಪ್ ನಿರ್ಮಾಣ ಹಾಗೂ ಕ್ಯಾಸಗೆರೆ ಹತ್ತಿರ ಡೈಕ್ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಈ ಯೋಜನೆಗಳಿಂದ ಅಂತರ್ಜಲ ಅಭಿವೃದ್ಧಿಯಾಗುವುದು. 2008-09ನೇ ಸಾಲಿನಲ್ಲಿ ಇಲಾಖೆಗೆ ಲಭ್ಯವಾಗುವ ಅನುದಾನವನ್ನಾಧರಿಸಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಸದಸ್ಯರ ಹೆಸರು	:	ಡಾ:ಸುಧಾಕರ್ ಎಂ.ಸಿ. (ಚಿಂತಾಮಣಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(303)129
ಉತ್ತರಿಸುವ ಸಚಿವರು	:	ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು (ಶ್ರೀ ಗೂಳಿಹಟ್ಟಿ ಡಿ.ಶೇಖರ್)

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕತ್ತರಿಗುಪ್ಪೆ ಗ್ರಾಮ ಬಡ ನೇಕಾರರಿಗೆ ಅನ್ಯಾಯ, ಅವ್ಯವಹಾರ ನಡೆದಿರುವುದರ ಬಗ್ಗೆ ಸರ್ಕಾರಕ್ಕೆ ದೂರು ನೀಡಿರುವುದು ನಿಜವಲ್ಲವೇ;

ನಿಜ

ಆ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)

ಚಿಂತಾಮಣಿ ತಾಲ್ಲೂಕು ಕತ್ತರಿಗುಪ್ಪೆ ಗ್ರಾಮದಲ್ಲಿರುವ ಹತ್ತಿ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಈ ಸಂಘಕ್ಕೆ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆಯಡಿ 2004-05 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ್ದ ರೂ.9.80 ಲಕ್ಷಗಳ ಅನುದಾನವನ್ನು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ದೂರಿದ್ದು, ಈ ಸಂಬಂಧ ಇವರ ಮೇಲೆ ಕೈಮಗ್ಗ ಮತ್ತು ಜವಳಿ ಇಲಾಖೆಯು ಕೋಲಾರ ಜಿಲ್ಲಾ ಕಚೇರಿಯಿಂದ ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ ಇಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.153/04 ಹೂಡಲಾಗಿದ್ದು ಪ್ರಕರಣ ನ್ಯಾಯಾಲಯದಲ್ಲಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (306)132
ಸದಸ್ಯರ ಹೆಸರು : ಡಾ: ಸುಧಾಕರ್ ಎಂ.ಸಿ.
ಉತ್ತರಿಸುವವರು : (ಶ್ರೀ ಜಿ. ಕರುಣಾಕರ ರೆಡ್ಡಿ)
ಮಾನ್ಯ ಕಂದಾಯ ಸಚಿವರು.

ಅ) ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ, ಸೊಣ್ಣಶೆಟ್ಟಿಹಳ್ಳಿ ಗ್ರಾಮದ ಸ.ನಂ.49ರ ಕೆರೆ ಅಂಗಳದಲ್ಲಿ ಅನಧಿಕೃತವಾಗಿ ಒತ್ತುವರಿದಾರರನ್ನು ತೆರವುಗೊಳಿಸಿ ಸಾರ್ವಜನಿಕರ ಉದ್ದೇಶಕ್ಕಾಗಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆಯ ಅನ್ವಯ ಪ್ರಕರಣ ದಾಖಲು ಮಾಡಲಾಗಿದ್ದು, ಉಪ ವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುತ್ತದೆ. ಅಲ್ಲದೇ ಒತ್ತುವರಿ ತೆರವುಗೊಳಿಸಲು ನೀಡಿರುವ ನೋಟೀಸನ್ನು ಪ್ರಶ್ನಿಸಿ ಒತ್ತುವರಿದಾರರು ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಿದ್ದು ಸಿವಿಲ್ ನ್ಯಾಯಾಲಯದಲ್ಲಿ ಇನ್ನು ಬಾಕಿ ಇರುತ್ತವೆ.

ಇ) ಒತ್ತುವರಿದಾರರು ಈ ಅನಧಿಕೃತ ಒತ್ತುವರಿಯ ದಾಖಲೆಗಳನ್ನೇನಾದರು ಹೊಂದಿದ್ದಾರೆಯೇ; ಹಾಗಿದ್ದಲ್ಲಿ, ಅಂತಹ ದಾಖಲೆಗಳನ್ನು ಒದಗಿಸುವುದು;

ಮ್ಯೂಟೇಶನ್ ಮತ್ತು ಆರ್.ಟಿ.ಸಿ.ಗಳಲ್ಲಿ ಅಕ್ರಮವಾಗಿ ಒತ್ತುವರಿದಾರರ ಹೆಸರನ್ನು ನಮೂದಿಸಲಾಗಿರುತ್ತದೆ. ಅವುಗಳ ಪ್ರತಿಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ನಮೂನೆ - 12

ಗ್ರಾಮ ....

ಹೋಬಳಿ ....

ತಾಲ್ಲೂಕು :

84-183

78-79

49 5-6 9-4

58/3

58/2 0-18 0-25

58/4 1-1 2-0

62/2

2012

2013

2014

2015

Copy issued

1-7-78

Entries Tally

Mutation is Accepted

18/6/80

REVENUE INSPECTOR

Hobly..........

31 JULY 2008

295

ಖಾತೆ ದಾಖಲೆ ಪಟ್ಟಿ

ತಾಲ್ಲೂಕು : ಚಾಮರಾಜನಗರ

34-19 92-93	[illegible] S.S.R. No. 338/74-75 ದಿ: 13-4-7[illegible] ರಂತೆ	[illegible] 49 500 [illegible] 66 3-14 [illegible] 49 500 [illegible]	[illegible] 66 [illegible] 45 [illegible]

[illegible] 45 [illegible]
66 [illegible]
49 45 100

ತಹಶೀಲ್ದಾರ್
ಚಾಮರಾಜನಗರ
ದಿ. 9-2-[illegible]

ತಹಶೀಲ್ದಾರ್
ಚಾಮರಾಜನಗರ ತಾಲ್ಲೂಕು
27/7/98

1	2	3	4
4-21 93-94	[illegible] LND SR 18/92-93 [illegible] 9-2-94 [illegible] LND SR 9/92-93 [illegible] 11-2-94 [illegible]	49 5-00 [illegible] 21/2/94	[illegible]
34-22 93-94	[illegible] LND SR 25/92-93 [illegible] 9-2-94 [illegible] LND SR 26/92-93 [illegible] 11-2-94 [illegible]	49 4-00 [illegible]	[illegible] 21/2/94

W.D. 67375/3 m. 93/C

9

V3

23 ... 94	... LND SR 17/92-93 ... LND SR 13/92-93 ...	49 500	21/8/97

2-7-02

	2	3	
17/97 RTC 194	[illegible] S/o [illegible] SR No. 2256/96-97 [illegible] 6-12-96	61/2 2-31 [illegible] 0-2½	RTC [illegible]
18/97	[illegible]	62/2B 0-57 [illegible]; 49/1 0-25; PHR No. 741/96-97 [illegible] 12-2-97	[illegible] R. [illegible] ½; R. [illegible] ½; R. [illegible] ½; R. [illegible] ½; RTC [illegible]

299 [illegible] 10-12-97

31 JULY 2008

299

ನಮೂನೆ—೧೨

ಹಕ್ಕು ಬದಲಾವಣೆ ವಹಿ (ಮ್ಯುಟೇಷನ್ ರಿಜಿಸ್ಟರ್)

ನಿಯಮಗಳು — ೬೪ ಮತ್ತು ೬೬

(ಹಿಂದೆ ಕಂಡಿಕೆ ನೋಡಿ)

ಗ್ರಾಮ ....

ಹೋಬಳಿ ....

ತಾಲ್ಲೂಕು : ಚಿಂತಾಮಣಿ

1	2	3	4
34-H / 99-2000	[illegible] S.R.No. 17/98-99 ದಿ. 27/3/99	49/1 [illegible]	[illegible]

ಶಿರಸ್ತೇದಾರ್
ಚಿಂತಾಮಣಿ ತಾಲ್ಲೂಕು.

ತಹಸೀಲ್ದಾರ್
ಚಿಂತಾಮಣಿ ತಾಲ್ಲೂಕು
27/7/02

ನಮೂನೆ—೧೨

ಹಕ್ಕು ಬದಲಾವಣೆ ವಹಿ (ಮ್ಯುಟೇಷನ್ ರಿಜಿಸ್ಟರ್)

ನಿಯಮಗಳು — ೬೬ ಮತ್ತು ೬೭

(೫ನೇ ಕಂಡಿಕೆ ನೋಡಿ)

ಗ್ರಾಮ ....

ಹೋಬಳಿ ....

ತಾಲ್ಲೂಕು : ....

ಅನುಕ್ರಮ ಕ್ರಮ ಸಂಖ್ಯೆ 1	ಹಕ್ಕಿನ ಬದಲಾವಣೆ ರೀತಿ 2	ಬಾಧಿತವಾದ ಸರ್ವೆ ನಂ. ಮತ್ತು ಉಪ-ವಿಭಾಗ ನಂ. 3	ಪರಾಮರ್ಶಿಸಿದ ಅಧಿಕಾರಿಯ ... 4
34-59 / 2000.01	[illegible] ... 22.12.1999 ... [illegible] ನಕಲು	[illegible] ... ಸ.ನಂ. 62/2 ... 1.13 ... 1) 40 × 44 ... 1/2 ... 2) 31 × 76 ... 1/2 ... 3) 08 × 05 ... 4) 30 × 65 ... 5) 70 × (14+22)/2 ... 30 × (14+22)/2 ... 6) 90 × (34+56)/2 ... (45+56)/2 ... 7) (129+155)/2 × (86+40)/2 ... 1/2 ... ಸ.ನಂ. 69/1 ... 5.00 ... 0.14 1/2 ...	VB59 ... 34-59 ... [illegible] ... 16/4

ರೆಕಾರ್ಡ್ ಆಫ್ ರೈಟ್ಸ್, ಟೆನೆನ್ಸಿ ಮತ್ತು ಬೆಳೆ ಪತ್ರಿಕೆ (R.T.C) ಫಾರಂ ನಂ. 02

Print Page No: 1 Village Account Form No. 2

[illegible] 21/07/2008 3:12:50 PM

[illegible]	8,31,00,00	5	
[illegible]	4,00,00,00	8	MRNO.34-23/93-94
[illegible]	4,00,00,00	0	MRNO 34-22/93-94
[illegible]			
[illegible]	0,00,00,00	346	MRNOOH-21/93-94, 28/03/2004

Area: 19.31,00.00 / 19.31,00.00

12. [illegible]

1	2	3	4	5	6	7	8	9	10	11	12	13	14	15	16
[illegible]	[illegible]														

[illegible] 21/07/2008 00:00 [illegible] 15.00

4 ಉತ್ತರಿಸುವವರು	:	**(ಶ್ರೀ ವೆಂಕಟರಮಣಪ್ಪ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು**

ಅ ಮಂಡ್ಯ ತಾಲ್ಲೂಕಿನ ದುದ್ದ ಹೋಬಳಿಯಲ್ಲಿರುವ ಮಲ್ಲಿಗೆ ರೇಷ್ಮೆ ಫಾರಂ ಪ್ರಾರಂಭವಾದದ್ದು ಯಾವಾಗ; ಹಾಗೂ ಆ ಫಾರಂನ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡುವುದು;

ಮಂಡ್ಯ ತಾಲ್ಲೂಕಿನ ದುದ್ದ ಹೋಬಳಿಯಲ್ಲಿರುವ ರೇಷ್ಮೆ ಫಾರಂನ್ನು 1980 ರಲ್ಲಿ ಪ್ರಾರಂಭಿಸಲಾಗಿದೆ. ಇದರ ಒಟ್ಟು ವಿಸ್ತೀರ್ಣ 100 ಎಕರೆಗಳು. ಈ ಕೃಷಿ

ಕ್ಷೇತ್ರದಲ್ಲಿ ಮೂಲ ಬಿತ್ತನೆ ಗೂಡಿನ ಉತ್ಪಾದನೆಯಲ್ಲದೆ ಈ ಕೆಳಕಂಡ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.

1. ಸುಧಾರಿತ ಹಿಪ್ಪುನೇರಳೆ ತಳಿಗಳ ಸಸಿಗಳನ್ನು ಬೆಳಸಿ ರೈತರಿಗೆ ವಿತರಿಸುವುದು.
2. ದ್ವಿತಳಿ ಸಂಕರಣ ರೇಷ್ಮೆ ಮೊಟ್ಟೆಗಳನ್ನು ಚಾಕಿ ಸಾಕಾಣಿಕೆ ಮಾಡಿ ರೇಷ್ಮೆ ಬೆಳೆಗಾರರಿಗೆ ವಿತರಿಸುವುದು.
3. ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸಿದ ಹೊಸ ತಳಿಗಳು ಮತ್ತು ತಾಂತ್ರಿಕತೆಗಳನ್ನು ಕ್ಷೇತ್ರಮಟ್ಟದ ಪರೀಕ್ಷೆಗೆ ಒಳಪಡಿಸಿ ಅವುಗಳ ಬಗ್ಗೆ ರೈತರಿಗೆ ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು.
4. ಪಿ2 ಮೂಲ ದ್ವಿತಳಿಯ ಬಿತ್ತನೆ ಗೂಡು ಉತ್ಪಾದಿಸುವುದು.

ಪ್ರಸ್ತುತ ಈ ಕೃಷಿ ಕ್ಷೇತ್ರದಲ್ಲಿ 5.10 ಎಕರೆ ಹಿಪ್ಪುನೇರಳೆ ವಿಸ್ತೀರ್ಣವಿದೆ.

ಆ ಮಂಡ್ಯ ತಾಲ್ಲೂಕಿನ ರೈತರಿಗೆ ಈ ರೇಷ್ಮೆ ಫಾರಂನಿಂದ ಅನುಕೂಲವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಮಂಡ್ಯ ತಾಲ್ಲೂಕು ಅಷ್ಟೇ ಅಲ್ಲದೆ ರಾಜ್ಯಾದ್ಯಂತ ಈ ಕ್ಷೇತ್ರದಿಂದ ರೈತರಿಗೆ ಅನುಕೂಲವಾಗಿದೆ. ಪ್ರಾರಂಭದಲ್ಲಿ ಈ ಕ್ಷೇತ್ರದಲ್ಲಿ ಎಂ5 ಹಿಪ್ಪುನೇರಳೆ ಕಡ್ಡಿ/ಸಸಿಗಳನ್ನು ಬೆಳೆಸಿ ಆಸಕ್ತ ರೈತರಿಗೆ ಒದಗಿಸಲಾಗುತ್ತಿತ್ತು. ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಸಹ ನೀಡಲಾಗಿತ್ತು. ಈಗ ದ್ವಿತಳಿ ಬಿತ್ತನೆ ಗೂಡಿನ ಉತ್ಪಾದನೆಯಲ್ಲಿ ಈ ಕ್ಷೇತ್ರವು ಸಹಕಾರಿಯಾಗಿದೆ. ಕಳೆದ 5 ವರ್ಷಗಳ ದ್ವಿತಳಿ ಬಿತ್ತನೆ ಗೂಡುಗಳ ಉತ್ಪಾದನಾ ವಿವರ ಮತ್ತು ಚಾಕಿ ಮಾಡಿ ರೈತರಿಗೆ ವಿತರಿಸಿದ ದ್ವಿತಳಿ ಸಂಕರಣ ಮೊಟ್ಟೆಗಳ ವಿವರ ಕೆಳಕಂಡಂತಿದೆ.

ವರ್ಷ	ಬಿತ್ತನೆ ಗೂಡುಗಳ ಉತ್ಪಾದನೆ (ಲಕ್ಷಗಳಲ್ಲಿ)	ಚಾಕಿ ಮಾಡಿ ವಿತರಿಸಿದ ಮೊಟ್ಟೆಗಳು
2003–04	1.41	19,150
2004–05	4.68	1,750
2005–06	3.37	12,250
2006–07	2.70	15,450
2007–08	1.65	35,150

ಈ ಮೇಲ್ಕಂಡ ಕಾರ್ಯ ಚಟುವಟಿಕೆಗಳಿಂದ ಈ ಕ್ಷೇತ್ರದ ಪ್ರಾರಂಭದ ಉದ್ದೇಶ ಸಫಲವಾಗಿದೆ.

ಇ ಹಾಗಿದ್ದಲ್ಲಿ, ಇದರ ಪುನಃಶ್ಚೇತನದ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಈ ಕ್ಷೇತ್ರವನ್ನು ಪಿ2 ಕ್ಷೇತ್ರವನ್ನಾಗಿ ಮತ್ತು ದ್ವಿತಳಿ ಸಂಕರಣ ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಿ ಸ್ಥಳಿಯ ರೇಷ್ಮೆ ಬೆಳೆಗಾರರಿಗೆ ಒದಗಿಸುವ ಕೇಂದ್ರವನ್ನಾಗಿ ಮುಂದುವರೆಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(388)166
ಸದಸ್ಯರ ಹೆಸರು	:	ಶ್ರೀ. ಪುಟ್ಟರಾಜು ಸಿ.ಎಸ್ (ಮೇಲುಕೋಟೆ)
ಉತ್ತರಿಸುವ ಸಚಿವರು	:	(ಶ್ರೀ ಶಿವರಾಜ್ ಎಸ್.ತಂಡರಗಿ) ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

1 ಮಂಡ್ಯ ಸರ್ಕಾರಿ ಸಕ್ಕರೆ ಕಾರ್ಖಾನೆಯನ್ನು ನವೀಕರಣಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ;

ಮಂಡ್ಯ ಸಕ್ಕರೆ ಕಾರ್ಖಾನೆಯನ್ನು ನವೀಕರಣಗೊಳಿಸುವ ಸಂಬಂಧ 36.00 ಕೋಟಿ ರೂಗಳ ಬಂಡವಾಳ ಹೂಡಿಕೆ ಪ್ರಸ್ತಾವನೆಯನ್ನು ಕಾರ್ಖಾನೆಯಿಂದ ಸ್ವೀಕರಿಸಲಾಗಿದೆ. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

2 ಹಾಗಿದ್ದಲ್ಲಿ, ನವೀಕರಣಕ್ಕಾಗಿ ಮೀಸಲಿಟ್ಟ ಹಣವೆಷ್ಟು ಹಾಗೂ ಖರ್ಚು ಮಾಡಿದ ಹಣವೆಷ್ಟು;

ನವೀಕರಣಕ್ಕಾಗಿ ಯಾವುದೇ ಹಣವನ್ನು ಮೀಸಲಿಟ್ಟಿರುವುದಿಲ್ಲ. 2005-06 ರಿಂದ 2008-09ರ ಈ ದಿನಾಂಕದವರೆಗೆ ಕಾರ್ಖಾನೆಗೆ 80.10 ಕೋಟಿ ರೂಗಳನ್ನು ದುಡಿಯುವ ಬಂಡವಾಳ ಮತ್ತು ಇತರೆ ಉದ್ದೇಶಗಳಿಗಾಗಿ ಸರ್ಕಾರದಿಂದ ಸಾಲವಾಗಿ ನೀಡಲಾಗಿದೆ.

3 ಪೂರ್ಣ ನವೀಕರಣಕ್ಕಾಗಿ ತಗಲುವ ವೆಚ್ಚವೆಷ್ಟು ಹಾಗೂ ನವೀಕರಣದ ನಂತರ ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚಾಗುವುದೇ (ವಿವರ ನೀಡುವುದು)?

ಕಾರ್ಖಾನೆಯ ನವೀಕರಣಕ್ಕಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಸಮಿತಿ ರಚಿಸಲಾಗಿದ್ದು, ತಾಂತ್ರಿಕ ಸಮಿತಿಯು ನೀಡುವ ವರದಿಯಲ್ಲಿ ಯೋಜಿತ ನವೀಕರಣಕ್ಕೆ ಎಷ್ಟು ಹಣ ಬೇಕಾಗಬಹುದು ಎಂಬ ಮಾಹಿತಿ ಲಭ್ಯವಾಗಲಿದೆ. ಹಾಗೂ ಪ್ರಸ್ತುತ ಕಾರ್ಖಾನೆ ಸಾಮರ್ಥ್ಯ 5000 ಟಿಸಿಡಿ ಇದ್ದು ಕಾರ್ಖಾನೆಯ ನವೀಕರಣದ ನಂತರವೇ ಕಬ್ಬು. ಅರೆಯುವ ಸಾಮರ್ಥ್ಯ ಹೆಚ್ಚಾಗುವ ಬಗ್ಗೆ ತಿಳಿಯಬಹುದಾಗಿದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (384)167
2. ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
3. ವಿಷಯ : ಬ್ರಹ್ಮಾವರ ತಾಲ್ಲೂಕು ರಚನೆ
4. ಉತ್ತರಿಸುವ ಸಚಿವರು : (ಶ್ರೀ.ಜಿ.ಕರುಣಾಕರ ರೆಡ್ಡಿ) ಕಂದಾಯ ಸಚಿವರು

(ಅ) ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ನಾಗರೀಕರ ಬಹುಕಾಲದ ಬೇಡಿಕೆಯಾಗಿರುವ ಬ್ರಹ್ಮಾವರ ತಾಲ್ಲೂಕು ರಚನಾ ವಿಚಾರದಲ್ಲಿನ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಲಾಗಿದ್ದು, ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

(ಆ) ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟ ನಿಲುವೇನು; ನಾಗರೀಕರ ಕನಸು ನನಸಾಗಿಸಲು ಕೈಗೊಂಡ ಕ್ರಮವೇನು;

(ಇ) ಬ್ರಹ್ಮಾವರ ತಾಲ್ಲುಕು ರಚನೆಗೆ ಸಂಬಂಧಿಸಿದ ರೂಪುರೇಷೆಗಳು ಯಾವಾಗ ಪೂರ್ಣಗೊಳ್ಳಬಹುದು;

(ಈ) ಸರ್ಕಾರದ ಅಂತಿಮ ಆದೇಶ ಹೊರಡಿಸುವುದು ಯಾವಾಗ ಹಾಗೂ ನಾಗರೀಕರ ಈ ಬೇಡಿಕೆ ಈಡೇರಿಸುವುದು ಯಾವಾಗ?

-ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ-

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (385)168
2) ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ರಘುಪತಿಭಟ್.ಕೆ (ಉಡುಪಿ)
3) ವಿಷಯ : ಕಂದಾಯ ಇಲಾಖೆಯಲ್ಲಿ ಜನ ಸಾಮಾನ್ಯರಿಗೆ ಆಗುತ್ತಿರುವ ಸಮಸ್ಯೆಗಳು
4) ಉತ್ತರಿಸುವ ಸಚಿವರು : (ಶ್ರೀ.ಜಿ.ಕರುಣಾಕರ ರೆಡ್ಡಿ) ಮಾನ್ಯ ಕಂದಾಯ ಸಚಿವರು

ಅ) ಕಂದಾಯ ಇಲಾಖೆಯಲ್ಲಿ ಜೀವಂತ ಸದಸ್ಯರ ದೃಢ ಪತ್ರ ನೀಡುವಲ್ಲಿ ಈ ಹಿಂದೆ ಇದ್ದ ನಿಯಮಾವಳಿಗಳಿಗೆ ಇತ್ತೀಚೆಗೆ ಹೊರಡಿಸಿ ಸುತ್ತೋಲೆ ಆರ್‌ಡಿ 06 ಎಎಸ್‌ಡಿ 2005ರಲ್ಲಿ ಸೂಚಿಸಿರುವ ನಿಯಮದಿಂದ ಆಗಿರುವ ವಿಳಂಬ ನೀತಿ, ದುಬಾರಿ ಹಣ ವ್ಯಯಿಸಬೇಕಾದ ಕ್ಲಿಷ್ಟಕರ ಪರಿಸ್ಥಿತಿಯಿಂದ ಜನ ಸಾಮಾನ್ಯರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

--- ಬಂದಿಲ್ಲ ---

ಆ) ಹಾಗಿದ್ದಲ್ಲಿ, ಈ ಹಿಂದಿನಂತೆ ಅರ್ಜಿ, ಅಫಿಡವಿಟ್, ಮರಣ ದಾಖಲಾತಿಗಳನ್ನು ಗ್ರಾಮಕರಣಿಕರು ವಿಚಾರಣೆಯೊಂದಿಗೆ ತಹಶೀಲ್ದಾರರು ಪರಿಶೀಲಿಸಿ ಜೀವಂತ ಸದಸ್ಯರ ದೃಢ ಪತ್ರ ನೀಡುವ ಕ್ರಮವನ್ನು ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ;

-- ಪ್ರಶ್ನೆ ಉದ್ಭವಿಸುವುದಿಲ್ಲ --

ಇ) ಪಹಣಿ ಪತ್ರಿಕೆಯಲ್ಲಿ ವಾರಸುದಾರರ ಹೆಸರನ್ನು ದಾಖಲಿಸಲು ಕಂದಾಯ ನಕಾಶೆ ಕೇಳುತ್ತಿರುವುದರಿಂದ ಆಗುವ ಸಮಸ್ಯೆ ಮತ್ತು ಕೃಷಿ ಜಮೀನು ಪರಬಾರೆ ಸಂದರ್ಭ ಭೂ-ಮಾಪಕರಿಂದ ಮೋಜಿಣಿ ಮಾಡಿಸಿ ಸಂಯೋಜಿತ ಪೋಡಿ ನಕಾಶೆಯನ್ನು ಹಾಜರುಪಡಿಸಲು ಸೂಚಿಸುತ್ತಿರುವುದರಿಂದ ರೈತರಿಗೆ ಆಗುತ್ತಿರುವ ತೊಂದರೆ, ವಿಳಂಬ ನೀತಿ ಹಾಗೂ ದುಬಾರಿ ಖರ್ಚು ವೆಚ್ಚಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ರೈತಾಪಿ ಜನರ ದೈನಂದಿನ ಆಸ್ತಿಗಳ ವ್ಯವಹಾರ ನಿರ್ವಹಣೆಗಳಿಂದ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಉಂಟಾಗಿ ಮುಂದೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ತಪ್ಪಿಸುವ ಸದುದ್ದೇಶದಿಂದ ಭೂ ಕಂದಾಯ ಅಧಿನಿಯಮ 1966 ನಿಯಮ 46ಕ್ಕೆ ತಿದ್ದುಪಡಿ ತಂದು 46(ಎ) ಯಿಂದ 46(ಕೆ) ವರೆಗೆ ಸೇರ್ಪಡೆ ಮಾಡುವ ಮೂಲಕ 11ಇ ನಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ, ನಕಾಶೆ ಪಡೆಯುವುದರಿಂದ ಜಮೀನಿನ ನಿಖರವಾದ ವಿಸ್ತೀರ್ಣ ಮತ್ತು ಸರಹದ್ದು ಖಚಿತವಾಗುತ್ತದೆ. ಮುಂದುವರೆದು, ಯಾವುದೇ ರೈತರು ಜಮೀನನ್ನು ಖರೀದಿಸುವ ಪೂರ್ವದಲ್ಲಿ ಮೋಜಣಿ ಮಾಡಿಸಿಕೊಂಡು, ನೋಂದಣಿ ಮಾಡಿಸಿಕೊಂಡಲ್ಲಿ, ರೈತರಿಗೆ ಯಾವುದೇ ನಷ್ಟವಾಗುವುದಿಲ್ಲ. ಇದಲ್ಲದೇ, ಭೂ ಮಾಲೀಕರಿಗೆ ತಗಲುವ ಹೆಚ್ಚಿನ ಖರ್ಚು ವೆಚ್ಚಗಳನ್ನು ನಿವಾರಣಾ ಮಾಡುವ ಹಿನ್ನಲೆಯಲ್ಲಿ ಗಣಕೀಕರಣ ಪದ್ಧತಿ ಮೂಲಕ ಪಹಣಿ, ವರ್ಗಾವಣೆ ನಕಲು ವಿತರಿಸುವ ಸೂಕ್ತ ಸೌಕರ್ಯವನ್ನು ಸರ್ಕಾರವು ಕಲ್ಪಿಸಿಕೊಡಲಾಗಿದೆ. ಪ್ರತಿ ಪಹಣಿ ಅಥವಾ ವರ್ಗಾವಣೆ ನಕಲಿಗೆ ರೂ.15/- ರಂತೆ ಪಡೆದು ತ್ವರಿತಗತಿಯಲ್ಲಿ ನೀಡಲಾಗುತ್ತಿದೆ. ಅಲ್ಲದೇ ಸರ್ಕಾರವು ರೈತರ ಹಿತದೃಷ್ಟಿಯಿಂದ ವೆಬ್‌ಸೈಟ್ ಮೂಲಕ ಮೇಲಿನ ದಾಖಲೆಗಳನ್ನು ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಯೋಜನೆಯು ರೈತರಿಗೆ ಉಪಯೋಗಿಯಾಗಿದ್ದು ಮತ್ತು ಭೂ ಮಾಲೀಕರಿಗೆ ತಗಲುವ ಹೆಚ್ಚಿನ ಖರ್ಚು ವೆಚ್ಚಗಳನ್ನು ನಿವಾರಣಾ ಮಾಡುವ ಹಿನ್ನಲೆಯಲ್ಲಿ ಗಣಕೀಕರಣ ಪದ್ಧತಿ ಮೂಲಕ ಪಹಣಿ, ವರ್ಗಾವಣೆ ನಕಲು ವಿತರಿಸುವ ಸೂಕ್ತ ಸೌಕರ್ಯವನ್ನು ಸರ್ಕಾರವು ಕಲ್ಪಿಸಿಕೊಡಲಾಗಿದೆ. ಇದರಿಂದ ರೈತರಿಗೆ ಯಾವುದೇ ರೀತಿಯ ವಿಳಂಬ ನೀತಿ ಹಾಗು ದುಬಾರಿ ಖರ್ಚು ವೆಚ್ಚಗಳ ಸಾಧ್ಯತೆ ಇರುವುದಿಲ್ಲ.

ಈ) ಈ ವಿಚಾರದಲ್ಲಿ ಸರಳೀಕರಣ ನೀತಿ ರೂಪಿಸಿ ಜನ ಸಾಮಾನ್ಯರಿಗೆ ನ್ಯಾಯ ದೊರಕಿಸಲು ಸರ್ಕಾರ ಕೈಗೊಂಡ ಕ್ರಮವೇನು?

—— ಪ್ರಶ್ನೆ ಉದ್ಭವಿಸುವುದಿಲ್ಲ ——

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (386)169
ಸದಸ್ಯರ ಹೆಸರು : ಶ್ರೀ ರಘುಪತಿಭಟ್ ಕೆ.
ಉತ್ತರಿಸುವವರು : (ಶ್ರೀ.ಜಿ.ಕರುಣಾಕರ ರೆಡ್ಡಿ)
ಮಾನ್ಯ ಕಂದಾಯ ಸಚಿವರು

ಅ) ಮೂಲೀ ಹಕ್ಕಿನ ಸ್ವಂತಹಾಗೂ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಜಮೀನುಗಳ ಭೂ ಪರಿವರ್ತನೆ ವಿಚಾರದಲ್ಲಿ ತಾಲ್ಲೂಕು ಕಛೇರಿಯಲ್ಲಿ ಜನ ಸಾಮಾನ್ಯರಿಗಾಗುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಬಂದಿದ್ದಲ್ಲಿ, ಸಾಮಾನ್ಯ ಜನತೆಗೆ ಹಾಗೂ ರೈತರಿಗೆ ಅನುಕೂಲ ಕಲ್ಪಿಸುವ ದಿಶೆಯಲ್ಲಿ ಕೃಷಿ ಭೂಮಿ ಪರಿವರ್ತನೆ ನಿಯಮಾವಳಿಗಳನ್ನು ಸರಳೀಕರಣಗೊಳಿಸುವ ಅಥವಾ ರದ್ದು ಪಡಿಸುವ ಬಗ್ಗೆ ಚಿಂತನೆ ನಡೆಸಿದೆಯೇ;

ಹೌದು.

ಇ) ಹಾಗಿದ್ದಲ್ಲಿ, ಇದರ ಬಗ್ಗೆ ಕೈಗೊಂಡ ಕ್ರಮವೇನು;

ನಿಯಮಗಳನ್ನು ಸರಳೀಕರಣಗೊಳಿಸಲು ಪರಿಶೀಲಿಸಲಾಗುತ್ತಿದೆ.

ಈ) ಗ್ರಾಮೀಣ ಪ್ರದೇಶದ ಸಾಮಾನ್ಯ ಜನತೆ ಹಾಗೂ ರೈತರಿಗೆ ಸ್ವಂತ ವಾಸ್ತವ್ಯದ ಮನೆ ರಚನೆ ಬಗ್ಗೆ ಮೂಲಿ ಹಕ್ಕಿನ ಜಮೀನು ಅಥವಾ ಭೂ ನ್ಯಾಯ ಮಂಡಳಿಯಲ್ಲಿ ನೋಂದಾಯಿಸಿದ 0.05 ರಿಂದ 0.10 ಸೆರ್ಟ್ಯು ಜಮೀನುಗಳನ್ನು ಪರಿವರ್ತಿಸುವಾಗ ಇರುವ ಪ್ರಭೇದಗಳಿಂದಾಗಿ ನಿರೀಕ್ಷೇಪಣಾ ಪತ್ರ ಪಡೆಯುವಾಗ ಕಾನೂನು ತೊಡಕಿನಿಂದ ಆಗುತ್ತಿರುವ ಸಮಸ್ಯೆಗಳ ಸರಳೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಹೌದು.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (108)164
2) ಸದಸ್ಯರ ಹೆಸರು : ಶ್ರೀ ಸಿ.ಎಸ್.ಪುಟ್ಟರಾಜು
3) ಉತ್ತರಿಸುವ ಸಚಿವರು : (ಶ್ರೀ.ಗೋವಿಂದ ಎಂ.ಕಾರಜೋಳ್)
ಮಾನ್ಯ ಸಣ್ಣ ನೀರಾವರಿ,
ಯೋಜನೆ ಮತ್ತು ಸಾಂಖ್ಯಿಕ ಸಚಿವರು

ಅ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಬೀಜಿಕೆರೆ ಹಾಗೂ ಕೆನಾಲ್ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೇ; ಇದಕ್ಕಾಗಿ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು ಹಾಗೂ ಈ ಕಾಮಗಾರಿಗಾಗಿ ಸರ್ಕಾರದಿಂದ ಮಂಜೂರಾದ ಹಣವೆಷ್ಟು;

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೊಸರಹಳ್ಳ ಬೇಬಿ ಕೆರೆ ಕೆನಾಲ್ ಕಾಮಗಾರಿಗೆ 1982–83ನೇ ಸಾಲಿನಲ್ಲಿ ರೂ.34.00 ಲಕ್ಷಗಳಿಗೆ ಅಂದಾಜು ಮಂಜೂರಾಗಿದೆ. ಈ ಕಾಮಗಾರಿಯನ್ನು 1996ನೇ ಸಾಲಿನಲ್ಲಿ ಪಾರ್ಣಗೊಳಿಸಲಾಗಿದೆ. ಇದಕ್ಕಾಗಿ ಆದ ವೆಚ್ಚ ರೂ.195.86 ಲಕ್ಷಗಳು.

ಆ ಹಾಗಿದ್ದಲ್ಲಿ, ಬೀಜಿಕೆರೆಯ ಕಾಮಗಾರಿ ಪೂರ್ಣಗೊಳಿಸುವುದು ಯಾವಾಗ ಹಾಗೂ ಪೂರ್ಣಗೊಂಡಲ್ಲಿ ನೀರಾವರಿಗೆ ಒಳಪಡುವ ಜಮೀನೆಷ್ಟು?

ಮೊಸರಹಳ್ಳ ಬೇಬಿಕೆರೆಯನ್ನು 1996ರಲ್ಲಿ ಪೂರ್ಣಗೊಳಿಸಲಾಗಿದೆ. 240 ಎಕರೆ ಜಮೀನು ನೀರಾವರಿಗೆ ಒಳಪಡುತ್ತದೆ. ಸದರಿ ಕೆರೆಗೆ ಎರಡು ಕಾಲುವೆಗಳಿದ್ದು, ಬಲದಂಡೆ ಕಾಲುವೆ 3.36 ಕಿ.ಮೀ ಹಾಗೂ ಎಡದಂಡೆ ಕಾಲುವೆ 3.65 ಕಿ.ಮೀ ಉದ್ದ ಇರುತ್ತದೆ. ಸದರಿ ಕಾಲುವೆಗಳಿಗೆ ಈ ಹಿಂದೆ ಕೈಗೊಂಡಿದ್ದ ಪಿ.ಸಿ.ಸಿ ಸ್ಲ್ಯಾಬ್ ಲೈನಿಂಗ್ ಹಾಳಾಗಿದ್ದು ಸದರಿ ಕೆರೆಯ ಸಂಪೂರ್ಣ 240 ಎಕರೆ ಜಮೀನಿಗೆ ನೀರು ಒದಗಿಸುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ 2006–07 ಹಾಗೂ 2007–08ನೇ ಸಾಲಿನಲ್ಲಿ ಎರಡು ಕಾಲುವೆಗಳಿಗೆ 2 ಕಿ.ಮೀ. ಉದ್ದಕ್ಕೆ ಸಿ.ಸಿ. ಲೈನಿಂಗ್ ಕಾಮಗಾರಿ ಕೈಗೊಂಡಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಇನ್ನುಳಿದ ಕಾಲುವೆ ಉದ್ದಕ್ಕೆ ಅನುದಾನದ ಲಭ್ಯತೆಗನುಗುಣವಾಗಿ ಸಿ.ಸಿ. ಲೈನಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು

1) ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ :: (369)170
2) ಸದಸ್ಯರ ಹೆಸರು :: ಶ್ರೀ ರಾಜಶೇಖರ್. ಬಸವರಾಜ ಪಾಟೀಲ್ (ಹುಮ್ನಾಬಾದ್)
3) ಉತ್ತರಿಸುವ ಸಚಿವರು :: (ಶ್ರೀ ಜಿ.ಕರುಣಾಕರ ರೆಡ್ಡಿ) ಮಾನ್ಯ ಕಂದಾಯ ಸಚಿವರು

ಅ) ಹುಮ್ನಾಬಾದ್ ವಿಧಾನ ಸಭಾ ಕ್ಷೇತ್ರದ ಬಾಕಿ ಇರುವ ಬಗರ್ ಹುಕುಂ ಪ್ರಕರಣಗಳು ಎಷ್ಟು; (ಪ್ರತಿ ಗ್ರಾಮವಾರು ವಿವರ ಒದಗಿಸುವುದು);

ಒಟ್ಟು 1555 ಪ್ರಕರಣಗಳು

ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

ಆ) ಪ್ರಕರಣ ಇತ್ಯರ್ಥಕ್ಕೆ ಸರ್ಕಾರ ಕೈಗೊಂಡ ಕ್ರಮವೇನು?

ಬಗರ್ ಹುಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ ಸಲ್ಲಿಸಿರುವ ಅರ್ಜಿಗಳನ್ನು ವಿಲೇವಾರಿಪಡಿಸಲು ನೀಡಲಾಗಿದ್ದ ಕಾಲಾವಧಿಯು ಮುಕ್ತಾಯವಾಗಿರುವುದರಿಂದ ಕಾಲಾವಧಿಯನ್ನು ವಿಸ್ತರಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ

94(ಬಿ)ಗೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ. ತಿದ್ದುಪಡಿ ತಂದನಂತರ ಬಾಕಿ ಇರುವ ಅರ್ಜಿಗಳನ್ನು ಇತ್ಯಾರ್ಥಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಾಜಶೇಖರ್ ಬಸವರಾಜ ಪಾಟೀಲ್ (ಹುಮ್ನಾಬಾದ್) ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:369ಕ್ಕೆ ಅನುಬಂಧ

ಕ್ರಮ ಸಂಖ್ಯೆ:	ಗ್ರಾಮದ ಹೆಸರು	ಪ್ರಕರಣಗಳ ಸಂಖ್ಯೆ
1	ಹುಮನಾಬಾದ್	45
2	ಹುಡಗಿ	12
3	ಧುಮನಸೂರು	10
4	ಗಡವಂತಿ	12
5	ಸಿಂದನಕೇರಾ	51
6	ಗೋಡಂಪಳ್ಳಿ	15
7	ಹಣಕುಣಿ	04
8	ನಂದಗಾಂವ	17
9	ಕಪ್ಪರಗಾಂವ	30
10	ಹಳ್ಳಿಖೇಡ(ಕೆ)	06
11	ಮುಸ್ತಪೋರ	05
12	ರಾಂಪೂರ	10
13	ಹಿಪ್ಪರಗಾ	09
14	ಕಂದಗೂಳ	08
15	ಮಡಗೋಳ	06
16	ಉಡಬಾಳ	35
17	ಉಡಬಾಳ	37
18	ಭದ್ರಾಪೂರ	30
19	ಶವಣಗಿ	45
20	ಭೈರಳ್ಳಿ	12
21	ಪೊಲಕಪಳ್ಳಿ	22
22	ಕರಕನಳ್ಳಿ	46
23	ಸೋಮಕೇರಾ	21
24	ಹಳ್ಳಿಕೇರಾ	34
25	ಕನಕಟ್ಟಿ	01
26	ಮಾರನೂರ	02
27	ಸುಲ್ತಾನಬಾದ	06

28	ಅತೀವಾಳ	15
29	ಬೋದಗಿ	03
30	ನಿಂಬೂರ	05
31	ಮಾಳಗೇರಾ	06
32	ಕಲ್ಲೂರ	07
33	ಕಟ್ಟೋಳಿ	10
34	ಬೆಳಕೇರಾ	49
35	ಇಟಗಾ	06
36	ಶಾಮದಾಬಾದ	17
37	ವಡ್ಡನಕೇರಾ	17
38	ಮುತ್ತಂಗಿ	19
39	ಬನ್ನಳ್ಳಿ	30
40	ಮದರಗಿ	49
41	ಬೇಮಳಖೇಡಾ	153
42	ಮೀನಕೇರಾ	52
43	ಚಾಂಗ್ಲೇರಾ	83
44	ದುಬಲಗುಂಡಿ	04
45	ಬೆಳಕೇರಾ	17
46	ಕುಮಾರ ಚಿಂಚೋಳಿ	25
47	ಘಾಟಿ ಬೋರಾಟ	09
48	ಶೇಡೋಳ	13
49	ಸಿಂದಬಂದಗಿ	01
50	ಬೇನ ಚಿಂಚೋಳಿ	03
51	ಮರಕಲ್	01
52	ಸೀತಾಳಗೇರಾ	06
53	ಚಿಟಗುಪ್ಪಾ	83
54	ಮುಸ್ತೂರಿ	22
55	ಒಳಕಿಂಡಿ	01
56	ಮುದನಾಳ	01
57	ಕೋಡಂಬಳ	03
58	ತಾಳಮಡಗಿ	28
59	ನಿರ್ಣಾ	191
60	ಅಲೇಪುರ	04
61	ಮಂಗಲಗಿ	13
62	ಬಶೀರಾಪುರ	10

63	ಮನ್ನಖೇಳಿ	06
64	ಕಾರಪಾಕಪಳ್ಳಿ	31
65	ಉಡಮನಳ್ಳು	06
66	ಚಾರನಹಳ್ಳಿ	03
67	ಜಲಸಿಂಗಿ	06
68	ಗೋಟಲಾಡಗಿ	01
69	ಹುಣಸಗೇರಾ	06
70	ಮೋತಗಿ	04
71	ಕದಿರಾಬಾದ	03
72	ಹಳ್ಳೂರ	01
73	ಹಿಲಾಲಪೂರ	01
	ಒಟ್ಟು	1555

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (292)171
2) ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್)
3) ವಿಷಯ : ಚೌಡನ ಕುಪ್ಪೆ ತಾಂತ್ರಿಕ ಸೇವಾ ಕೇಂದ್ರ
4) ಉತ್ತರಿಸುವವರು : (ಶ್ರೀ ವೆಂಕಟರಮಣಪ್ಪ)
ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು

ಅ ಕುಣಿಗಲ್ ಕ್ಷೇತ್ರದ ರೇಷ್ಮೆ ಇಲಾಖೆಯ ಚೌಡನಕುಪ್ಪೆ ತಾಂತ್ರಿಕ ಸೇವಾ ಕೇಂದ್ರವನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಚೌಡನಕುಪ್ಪೆ ತಾಂತ್ರಿಕ ಸೇವಾ ಕೇಂದ್ರವನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ ಹಾಗಿದಲ್ಲಿ, ಈ ಕೇಂದ್ರವನ್ನು ಮುಚ್ಚಲು ಕಾರಣಗಳೇನು;

ಉದ್ಭವಿಸುವುದಿಲ್ಲ

ಇ ಸದರಿ ಕೇಂದ್ರವನ್ನು ಮುಚ್ಚಿದಲ್ಲಿ ಮೈಸೂರು ರೇಷ್ಮೆ ತಳಿ ಬಿತ್ತನೆ ಬೆಳೆಯನ್ನು ಮುಂದುವರೆಸಿರುವ ಬಹು ಸಂಖ್ಯಾತರ ರೈತರಿಗೆ ತೊಂದರೆಯಾಗುವುದಿಲ್ಲವೇ;

ಉದ್ಭವಿಸುವುದಿಲ್ಲ

ಈ ರೈತರ ಹಿತದೃಷ್ಟಿಯಿಂದ ಸದರಿ ಕೇಂದ್ರವನ್ನು ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉದ್ಭವಿಸುವುದಿಲ್ಲ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (293)172
2. ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ.
3. : (ಶ್ರೀ ಬಸವರಾಜ್ ಬೊಮ್ಮಾಯಿ)

1. ಕುಣಿಗಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀಟರ್ ಉದ್ದದ ಹೇಮಾವತಿ ನಾಲಾ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮಾಡಲಾಗಿತ್ತು (ವಿವರ ನೀಡುವುದು):

ಕುಣಿಗಲ್ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಒಟ್ಟು 68 ಕಿ.ಮೀಗಳ ತುಮಕೂರು ಶಾಖಾ ಮುಖ್ಯ ನಾಲೆ (ಕಿ.ಮೀ. 173 ರಿಂದ 240 ಕಿ.ಮಿವರೆಗೆ) ಹಾಗೂ 32.925

ಕಿ.ಮೀಗಳ ವಿತರಣಾ ನಾಲಾ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮಾಡಲಾಗಿದೆ. ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

ಕ್ರ ಸಂ	ನಾಲೆ ವಿವರ	ನಾಲೆಯ ಉದ್ದ ಕಿ.ಮೀ	ಅಂದಾಜು ಮಾಡಿರುವ ಮೊತ್ತ
1	2	3	4
1.	ತು.ಶಾ.ನಾ.ಕಿ.ಮೀ 173 ರಿಂದ 194	22 ಕಿ.ಮೀ	7,500.00
2.	**ವಿತರಣಾ ನಾಲೆಗಳು** ಅ) ವಿ.ನಾ-26 (ಕಿ.ಮೀ 8 ಹಾಗೂ ಕಿ.ಮೀ 13 ರಿಂದ 22) ಆ) ವಿ.ನಾಲೆ-27(ಎ) (ಕಿ.ಮೀ 0 ರಿಂದ 7.60) ಇ) ವಿ.ನಾಲೆ-27 (ಕಿ.ಮೀ 0.00 ರಿಂದ 14.325 ಕಿ.ಮೀ)	11.00 ಕಿಮೀ 7.60 ಕಿ.ಮೀ 14.325 ಕಿ.ಮೀ	361.00
		54.925 ಕಿ.ಮೀ	**11.110.00**

2. ಈ ಪೈಕಿ ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ ಹಾಗೂ ಆ ಪೈಕಿ ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು? ಪ್ರಗತಿಯಲ್ಲಿರುವವುಗಳೆಷ್ಟು? ಇನ್ನೂ ಪ್ರಾರಂಭಿಸಬೇಕಾಗಿರುವ ಕಾಮಗಾರಿಗಳೆಷ್ಟು ಹಾಗೂ ಯಾವಾಗ ಪ್ರಾರಂಭಿಸಲಾಗುವುದು.

ತುಮಕೂರು ಶಾಖಾ ನಾಲೆಯ ಒಟ್ಟು 68 ಕಿ.ಮೀ ಗಳ ಪೈಕಿ 22 ಕಿ.ಮೀ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. ಈ 22 ಕಿ.ಮೀ ಗಳ ಪೈಕಿ 19 ಕಿ.ಮೀ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 2 ಕಿ.ಮೀ ಕಾಮಗಾರಿಗಳು

ಪ್ರಗತಿಯಲ್ಲಿವೆ ಹಾಗೂ 1 ಕಿ.ಮೀ ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಪ್ರಾರಂಭಿಸಬೇಕಾಗಿದೆ. ಹಾಗೂ ಇನ್ನುಳಿದ 46 ಕಿ.ಮೀ ಗಳ ಕಾಮಗಾರಿಗಳನ್ನು ನೀರಿನ ಲಭ್ಯತೆ ಮೇರೆಗೆ ಮುಂದಿನ ಸಾಲುಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ವಿತರಣಾ ನಾಲೆಗಳ ಪೈಕಿ 26ನೇ ವಿತರಣಾ ನಾಲೆಯ ಒಟ್ಟು ಉದ್ದ 11 ಕಿ.ಮೀ ಇದ್ದು, 11 ಕಿ.ಮೀ. ಕಾಮಗಾರಿಗಳಿಗು ಮಂಜೂರಾತಿ ಆಗಿದ್ದು, 10 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿವೆ. ಒಂದು ಕಿ.ಮೀ. ನ ಕಾಮಗಾರಿಗಳು ಪ್ರಗತಿಯಲ್ಲಿವೆ. ವಿತರಣಾ ನಾಲೆಗಳ ಪೈಕಿ 27 (ಎ) ನ ವಿತರಣಾ ನಾಲೆಯ ಒಟ್ಟು ಉದ್ದ 7.6 ಕಿ.ಮೀ ಇದ್ದು, 7.6 ಕಿ.ಮೀ. ಕಾಮಗಾರಿಗಳಿಗು ಮಂಜೂರಾತಿ ಆಗಿದ್ದು, 7.6 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿವೆ.

ವಿತರಣಾ ನಾಲೆಗಳ ಪೈಕಿ 27ನೆ ವಿತರಣಾ ನಾಲೆಯ ಒಟ್ಟು ಉದ್ದ 14.325 ಕಿ.ಮೀ. ಇದ್ದು, 14.325 ಕಿ.ಮೀ. ಕಾಮಗಾರಿಗಳಿಗೂ ಮಂಜೂರಾತಿ ಆಗಿದ್ದು, 14.325 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿವೆ.

3. ಈ ಎಲ್ಲಾ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳುವವು ಹಾಗೂ ಇದರಿಂದಾಗಿ ಕ್ಷೇತ್ರದ ಎಷ್ಟು ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ?

ಮೇಲ್ಕಂಡ ಎಲ್ಲಾ ಕಾಮಗಾರಿಗಳನ್ನು 2011ರ ಒಳಗಾಗಿ ನೀರಿನ ಲಭ್ಯತೆಯನ್ವಯ ಪೂರ್ಣಗೊಳಿಸಲು ಉದ್ದೇಶಿಸಿದೆ. ಕಾಮಗಾರಿಗಳು ಪೂರ್ಣಗೊಂಡಾಗ ಸುಮಾರು 44.166 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಘೋಷಿಸಬಹುದಾಗಿದೆ.

ವಿಷಯ: ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ	**: (294)173**
2. ಸದಸ್ಯರ ಹೆಸರು	**: ಶ್ರೀ. ರಾಮಸ್ವಾಮಿ ಗೌಡ ಬಿ.ಬಿ. (ಕುಣಿಗಲ್)**
3. ಉತ್ತರಿಸುವ ಸಚಿವರು	**: (ಶ್ರೀ ಮುರುಗೇಶ್ ಆರ್.ನಿರಾಣಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು**

ಅ. ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯವಾದ ಮೂಲಭೂತ ಸೌಕರ್ಯಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ. ಬಂದಿದ್ದಲ್ಲಿ, ಈ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳಿರುವುದು ಗಮನದಲ್ಲಿದ್ದು, ಈ ಕೆಳಕಂಡಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

- ಕುಣಿಗಲ್‌ನಲ್ಲಿ ಕೆಐಎಡಿಬಿಯವರು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಮೊದಲನೇ ಹಂತದಲ್ಲಿ 112.57 ಎಕರೆ ಜಮೀನನ್ನು 1984ರಲ್ಲಿ ಸ್ವಾಧೀನ ಪಡಿಸಿಕೊಂಡು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಿರುತ್ತಾರೆ.
- ಕೆಐಎಡಿಬಿಯವರು 2ನೇ ಹಂತದ ಕೈಗಾರಿಕಾ ಪ್ರದೇಶಕ್ಕೆ 57.91 ಎಕರೆ ಜಮೀನನ್ನು 2006-07ರಲ್ಲಿ ವಶಪಡಿಸಿ ಕೊಂಡು ಅಭಿವೃದ್ಧಿ ಪಡಿಸಿರುತ್ತಾರೆ.
- ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 18 ಯೋಜನೆಗಳಿಗೆ ಒಟ್ಟು ರೂ.205.77 ಕೋಟಿ ಬಂಡವಾಳ ಹೂಡಿ ಸ್ಥಾಪಿಸಲು ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯು ಅನುಮೋದನೆ ನೀಡಿದ್ದು, ಇವುಗಳಲ್ಲಿ 12 ಯೋಜನೆಗಳು ರೂ.188.84 ಕೋಟಿ ಬಂಡವಾಳ ಹೂಡಿ ಅನುಷ್ಠಾನಗೊಂಡಿದ್ದು, ಇವುಗಳಿಂದ 1845 ಜನರಿಗೆ ಉದ್ಯೋಗ ದೊರಕಿದೆ. ಉಳಿದ 6 ಯೋಜನೆಗಳು ಅನುಷ್ಠಾನ ಹಂತದಲ್ಲಿರುತ್ತದೆ.
- ದಿನಾಂಕ 17.3.2008ರಂದು ಮೆ: ವೇನರ್ ಬರ್ಗರ್ ಬ್ರಿಕ್ ಇಂಡಸ್ಟ್ರಿ ಪ್ರೈ. ಲಿಮಿಟೆಡ್ ಇವರಿಗೆ ರೂ.88.87 ಕೋಟಿ ಬಂಡವಾಳ ಹೂಡಿ ಬಿಲ್ಡಿಂಗ್ ಬ್ರಿಕ್ಸ್ ಘಟಕವನ್ನು 2ನೇ ಹಂತದ ಕೈಗಾರಿಕಾ ಪ್ರದೇಶ ಕುಣಿಗಲ್‌ನಲ್ಲಿ ಸ್ಥಾಪಿಸಲು ರಾಜ್ಯ ಉನ್ನತ ಮಟ್ಟದ ಸಭೆಯಿಂದ ಅನುಮೋದನೆ ದೊರಕಿದ್ದು, ಸದರಿ ಯೋಜನೆಯು ಅನುಷ್ಠಾನದ ಹಂತದಲ್ಲಿರುತ್ತದೆ. ಈ ಯೋಜನೆಯಿಂದ 181 ಜನರಿಗೆ ಉದ್ಯೋಗ ಸಿಗುವ ನಿರೀಕ್ಷೆ ಇದೆ.

ಇ. ಹಾಗಿದ್ದಲ್ಲಿ, ಸರ್ಕಾರ ಈ ದಿಸೆಯಲ್ಲಿ ಕೂಡಲೇ ಕ್ರಮ ಕೈಗೊಳ್ಳುವುದೇ?

ಕೆಐಎಡಿಬಿಯವರು ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ 3ನೇ ಹಂತದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : (295)174

2) ಸದಸ್ಯರ ಹೆಸರು : ಶ್ರೀ.ರಾಮಸ್ವಾಮಿಗೌಡ, ಬಿ.ಬಿ.(ಕುಣಿಗಲ್)

3) ಉತ್ತರಿಸುವ ಸಚಿವರು : (ಶ್ರೀ.ಗೋವಿಂದ ಎಂ.ಕಾರಜೋಳ್)
ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಂಖ್ಯಿಕ ಸಚಿವರು

ಅ) ಕುಣಿಗಲ್ ತಾಲ್ಲೂಕು ಹುತ್ತಿದುರ್ಗ ಹೋಬಳಿಯ ಮುದ್ದು ರಂಗನಕೆರೆ ಮತ್ತು ಹುಲಿಯೂರು ದುರ್ಗ ಹೋಬಳಿಯ ಮುದ್ದಲಿಂಗನದೊಡ್ಡಿ ಕೆರೆಗಳ ಪುನರ್ ನಿರ್ಮಾಣ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬಂದಿದೆ.

ಆ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ?

1) ಕುಣಿಗಲ್ ತಾಲ್ಲೂಕು ಹುತ್ತರಿ ದುರ್ಗ ಹೋಬಳಿಯ ಮುದ್ದುರಂಗನಕೆರೆ ಪುನರ್ ನಿರ್ಮಾಣಕ್ಕಾಗಿ 2007-08ರ ಸಾಲಿನಲ್ಲಿ ರೂ.100.00ಲಕ್ಷಗಳ ಅಂದಾಜು ಮೊತ್ತ ಮತ್ತು ರೂ.40.00 ಲಕ್ಷಗಳ ಅನುದಾನ ಒದಗಿಸುಲಾಗಿತ್ತು. ಈ ಕೆರೆ ಪುನರ್ ನಿರ್ಮಾಣಕ್ಕಾಗಿ 2007-08ನೇ ಸಾಲಿನ ದರಪಟ್ಟಿಯ ದರಗಳನ್ವಯ ರೂ.260.00 ಲಕ್ಷಗಳ ಅಂದಾಜು ಮೊತ್ತಕ್ಕೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಅನುಮೋದನೆಯನ್ನು ಪಡೆಯಲಾಗಿದೆ. ಸದರಿ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವ ಸಲುವಾಗಿ ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ.

2)ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗ ಹೋಬಳಿಯ ಮುದ್ದಲಿಂಗನದೊಡ್ಡಿ ಕೆರೆ ಪುನರ್ ನಿರ್ಮಾಣಕ್ಕಾಗಿ 2007-08ರ ಸಾಲಿನ ಆಯವ್ಯಯದಲ್ಲಿ ರೂ.98.00 ಲಕ್ಷಗಳ ಅಂದಾಜು ಮೊತ್ತಕ್ಕೆ ಹಾಗೂ ರೂ.40.00ಲಕ್ಷಗಳ ಅನುದಾನ ಒದಗಿಸಲಾಗಿತ್ತು. ಸದರಿ ಕೆರೆ ಪುನರ್ ನಿರ್ಮಾಣಕ್ಕಾಗಿ 2007-08ನೇ ಸಾಲಿನ ದರಪಟ್ಟಿಯ ದರಗಳನ್ವಯ ರೂ.130.00 ಲಕ್ಷಗಳ ಅಂದಾಜಿಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಿಂದ ತೀರುವಳಿ ಪಡೆಯಲಾಗಿದೆ. ಆಡಳಿತಾತ್ಮಕ ಅನುಮೋದನೆಗಾಗಿ ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಇಲಾಖೆಯ ಅಭಿಪ್ರಾಯವನ್ನು ನಿರೀಕ್ಷಿಸಲಾಗುತ್ತಿದೆ.

ಇ) ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೆ ?

ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಇಲಾಖೆಯಿಂದ ಅಭಿಪ್ರಾಯ ಪಡೆದುಕೊಂಡು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : (296)175
2. ಸದಸ್ಯರ ಹೆಸರು : ಶ್ರೀ.ರಾಮಸ್ವಾಮಿ ಗೌಡ ಬಿ.ಬಿ. (ಕುಣಿಗಲ್)
3. ಉತ್ತರಿಸುವ ಸಚಿವರು : (ಶ್ರೀ. ವೆಂಕಟರಮಣಪ್ಪ)
ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು

ವಿಷಯ : ಸಣ್ಣ ಮತ್ತು ಗೃಹ ಕೈಗಾರಿಕೆ ಸ್ಥಾಪನೆ.

ಅ. ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯವಾದ ಮೂಲಭೂತ ಸೌಕರ್ಯಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಬಂದಿದೆ

ಆ. ಹಾಗಿದ್ದಲ್ಲಿ, ಈ ಕೈಗಾರಿಕೆಗಳನ್ನು ಹೆಚ್ಚಾಗಿ ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಹೆಚ್ಚಾಗಿ ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಕೆಳಕಂಡಂತೆ ಇರುತ್ತದೆ:

1. ಕುಣಿಗಲ್‌ನಲ್ಲಿ ಕೆ.ಐ.ಎ.ಡಿ.ಬಿರವರು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಮೊದಲ ಹಂತದಲ್ಲಿ 112.50ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಿರುತ್ತಾರೆ. ಸದರಿ ಪ್ರದೇಶದಲ್ಲಿ ಒಟ್ಟು 41 ಉದ್ದಿಮೆದಾರರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಹಂಚಿಕೆ ಮಾಡಲಾಗಿದೆ.
2. ಕೆ.ಐ.ಎ.ಡಿ.ಬಿರವರು 2ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ 57.91 ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದು, ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಹಾಗೂ 11 ಉದ್ದಿಮೆದಾರರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಜಮೀನು ಹಂಚಿಕೆ ಮಾಡಲಾಗಿದೆ.
3. ಕೆ.ಎಸ್.ಎಸ್.ಐ.ಡಿ.ಸಿಯಿಂದ 1986 ರಲ್ಲಿ 8.10 ಎಕರೆ ಜಮೀನಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಿ ಸಣ್ಣ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ.
4. ಕುಣಿಗಲ್ ತಾಲ್ಲೂಕು ಕುಂದೂರು ಹಾಗೂ ಸಂದಲಗೆರೆ ಗ್ರಾಮಗಳಲ್ಲಿ ಕ್ರಮವಾಗಿ 71.58 ಹಾಗೂ 8.46 ಎಕರೆ ಸರ್ಕಾರಿ ಜಮೀನನ್ನು ಗುರುತಿಸಿ ಕೈಗಾರಿಕಾ ವಸಾಹತು ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ.
5. ಕೈಗಾರಿಕಾ ಅಭಿವೃದ್ಧಿಗಾಗಿ 250 ಫಲಾನುಭವಿಗಳಿಗೆ ಒಂದು ದಿನದ ಜಾಗೃತಿ ಶಿಬಿರವನ್ನು ದಿನಾಂಕ:26.6.2006ರಂದು ಏರ್ಪಡಿಸಲಾಗಿತ್ತು.
6. ದಿನಾಂಕ:13.2.2007ರಂದು 34 ಮಂದಿಗೆ ಹಾಗೂ 26.4.2007ರಂದು 37 ಮಂದಿಗೆ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (163)178
2) ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ.
3) ಉತ್ತರಿಸುವ ಸಚಿವರು : (ಶ್ರೀ.ಮುರುಗೇಶ್ ಆರ್.ನಿರಾಣಿ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ. ಕಳೆದ 2 ವರ್ಷಗಳಿಂದ ಕೆಐಎಡಿಬಿಯ ವತಿಯಿಂದ ಜಮೀನುಗಳನ್ನು ಕೈಗಾರಿಕೆಗಳಿಗಾಗಿ ಕಂಪನಿಗಳಿಗೆ ಮಂಜೂರು ಮಾಡಲಾದ ಜಮೀನೆಷ್ಟು;

ಕ.ಕೈ.ಪ್ರ.ಅ.ಮಂಡಳಿಯ ಕಳೆದ 2 ವರ್ಷಗಳಿಂದ 1609 ಘಟಕಗಳಿಗೆ 3899.64 ಎಕರೆ ಜಮೀನನ್ನು ಕೈಗಾರಿಕೆಗಳ ಸ್ಥಾಪನೆಗಾಗಿ ಹಂಚಿಕೆ ಮಾಡಲಾಗಿದೆ.

ಆ. ಈ ಜಮೀನುಗಳನ್ನು ಮಂಜೂರು ಮಾಡಿರುವುದು ಅಂತಿಮ ಅಧಿಸೂಚನೆ ನಂತರವೋ ಅಥವಾ ಮೊದಲೋ ಎಂಬುದರ ಬಗ್ಗೆ ನೀಡುವುದು;

ಮಂಡಳಿಯು ಕಲಂ 28(4)ರ ಅಂತಿಮ ಅಧಿಸೂಚನೆ ಪ್ರಕಟಣೆಯಾದ ನಂತರವೇ ಹಂಚಿಕೆ ಪತ್ರಗಳನ್ನು ನೀಡುತ್ತದೆ.

ಇ. ಕೆಐಎಡಿಬಿಯ ನಿಯಮದ ಪ್ರಕಾರ ಲಭ್ಯವಿರುವ ಜಮೀನನ್ನು ಕಂಪನಿಗಳ ಗಮನಕ್ಕೆ ತರಲು ಪ್ರಕಟಿಸಲಾಗಿತ್ತೇ; ಇಲ್ಲವಾದಲ್ಲಿ, ಕಾರಣಗಳೇನು;

ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ಜಮೀನಿನ ಮಾಹಿತಿಗಳನ್ನು ಮಂಡಳಿಯ ಎಲ್ಲಾ ಕಚೇರಿಗಳಲ್ಲಿ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಪ್ರಕಟಿಸಲಾಗಿದೆ.

ಈ. ಈ ಜಮೀನನ್ನು ಕಳೆದುಕೊಂಡ ರೈತರಿಗೆ ಸರ್ಕಾರ ನೀಡಿರುವ ಅಭಿವೃದ್ಧಿಪಡಿಸಿದ ಜಮೀನೆಷ್ಟು; ಮಾಹಿತಿ ನೀಡುವುದು ?

ಕ.ಕೈ.ಪ್ರ.ಅಧಿನಿಯಮ 1966ರ ಅಡಿಯಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡ ನಿಮಿತ್ತ ಜಮೀನನ್ನು ಕಳೆದುಕೊಂಡ ರೈತರಿಗೆ ಅಭಿವೃದ್ಧಿಪಡಿಸಿದ 8500 ಚ.ಅಡಿ ಜಮೀನನ್ನು ಅಥವಾ ಭೂಪರಿಹಾರವನ್ನು ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ:ಸಿಐ 417 ಎಸ್‌ಪಿಕ್ಯೂ 2007, ದಿ: 13.8.2007 ಅನ್ನು ಹೊರಡಿಸಲಾಗಿರುತ್ತದೆ. ಈವರೆಗೆ ಯಾವುದೇ ಅಭಿವೃದ್ಧಿಪಡಿಸಿದ ಜಮೀನನ್ನು ರೈತರಿಗೆ / ಭೂಮಾಲೀಕರಿಗೆ ನೀಡಿರುವುದಿಲ್ಲ. ಹೊಸದಾಗಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನಿನ ಮಾಲೀಕರುಗಳಿಗೆ ದಿನಾಂಕ 13.8.2007ರ ಸರ್ಕಾರದ ಆದೇಶನುಸಾರ ಭೂಮಾಲೀಕರಿಗೆ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಲಿಖಿತ ಒಪ್ಪಿಗೆ ಪಡೆಯಲು ನೋಟೀಸು ನೀಡಿದೆ ಹಾಗೂ ನೀಡಲಾಗುತ್ತಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (110)179
2) ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್
3) ಉತ್ತರಿಸುವ ಸಚಿವರು : (ಶ್ರೀ.ಮುರುಗೇಶ್ ಆರ್.ನಿರಾಣಿ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಬಡ ರೈತರ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿರುವುದು ನಿಜವೇ ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಅದಕ್ಕೆ ನಿಗಧಿಗೊಳಿಸಿದ ಪರಿಹಾರದ ಮೊತ್ತವೆಷ್ಟು; (ವಿವರ ಒದಗಿಸುವುದು);

ಬಾಗೇಪಲ್ಲಿ ತಾಲ್ಲೂಕಿನ ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಒಟ್ಟು 192 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ ಜಮೀನಿಗೆ ಇದುವರೆವಿಗೂ ಪರಿಹಾರ ಪಾವತಿಸಲು ಭೂದರ ನಿಗದಿಗೊಳಿಸಿರುವುದಿಲ್ಲ.

ಆ. ಈವರೆವಿಗೂ ಬಡ ರೈತರಿಗೆಂದು ಸರ್ಕಾರಿ ಜಮೀನುಗಳನ್ನು ಯಾವ ಯಾವ ಭಾಗದಲ್ಲಿ ಹಂಚಿಕೆ ಮಾಡಲಾಗಿದೆ (ಹಂಚಿಕೆಯ ವಿವರ ಒದಗಿಸುವುದು) ?

ಇಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : (358) 182
2) ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್.
3) ಉತ್ತರಿಸುರವ ಸಚಿವರು : ಶ್ರೀ ಗೂಳಿಹಟ್ಟಿ ಡಿ.ಶೇಖರ್(ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು.)

ಅ) ರಾಜ್ಯದಲ್ಲಿರುವ ಕ್ರೀಡಾಪಟುಗಳಿಗೆ ಇದುವರೆವಿಗೂ ಯಾವ ಯಾವ ಪ್ರಶಸ್ತಿಯನ್ನು ಸರ್ಕಾರದ ವತಿಯಿಂದ ನೀಡಲಾಗಿದೆ (ವಿವರ ಒದಗಿಸುವುದು);

ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯದಲ್ಲಿರುವ ಕ್ರೀಡಾಪಟುಗಳಿಗೆ 1992 ರಿಂದ 2006ರವರೆಗೆ 288 ಏಕಲವ್ಯ ಪ್ರಶಸ್ತಿ. 2006-07ನೇ ಸಾಲಿನಲ್ಲಿ 270 ಜಿಲ್ಲಾ ಕ್ರೀಡಾ ಪ್ರಶಸ್ತಿ, 2007ನೇ ಸಾಲಿನಲ್ಲಿ 1044 ನಗದು ಪ್ರಶಸ್ತಿ ಹಾಗೂ ಒಬ್ಬರಿಗೆ ಜೀವನ ಪರ್ಯಂತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಆ) ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಸರ್ಕಾರವು ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ (ವಿವರ ಒದಗಿಸುವುದು);

ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

ಪ್ರತಿ ಜಿಲ್ಲೆಯ 30 ಗ್ರಾಮೀಣ ಕ್ರೀಡಾ ಸಂಘಗಳಿಗೆ ಕ್ರೀಡಾ ಸಲಕರಣಗಳನ್ನು ಖರೀದಿಸಲು ರೂ. 5,000/- ದಂತೆ ಅನುದಾನ ಒದಗಿಸಲಾಗಿದೆ. ಆಯ್ಕೆ ಮಾಡಿದ 10 ಗ್ರಾಮೀಣ ಕ್ರೀಡಾಪಟುಗಳಿಗೆ ತಲಾ ರೂ. 5,000/- ಗಳಂತೆ ಜಿಲ್ಲಾ ಕ್ರೀಡಾ ಪ್ರಶಸ್ತಿಗಳನ್ನು ನೀಡಲಾಗಿದೆ.

ಅಖಿಲ ಭರತ ಗ್ರಾಮೀಣ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ರಾಜ್ಯದ ತಂಡಗಳಿಗೆ ಸಮವಸ್ತ್ರಗಳನ್ನು ನೀಡಲಾಗಿದೆ. ತಾಲ್ಲೂಕು ಕ್ರೀಡಾಂಗಣಗಳಲ್ಲಿ ದೈನಂದಿನ ಕ್ರೀಡಾ ತರಬೇತಿ ನೀಡಲಾಗುತ್ತಿದೆ.

2007 ಜನವರಿಯಿಂದ ರಾಜ್ಯದ 23 ಜಿಲ್ಲೆಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದ್ದು ಒಟ್ಟು 822 ಸಂಖ್ಯೆಯ ಬಾಲಕ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದು ಈ ಕ್ರೀಡಾಪಟುಗಳಿಗೆ ವರ್ಷದಾದ್ಯಂತ ಉಚಿತ ವಸತಿ ಹಾಗೂ ಉಚಿತ ಪೌಷ್ಠಿಕ ಊಟೋಪಹಾರದ ವ್ಯವಸ್ಥೆಯನ್ನು ವೈಜ್ಞಾನಿಕ ಕ್ರೀಡಾ ತರಬೇತಿ, ಶೈಕ್ಷಣಿಕ ವಿಷಯಗಳಲ್ಲಿ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.
ಈ ಕ್ರೀಡಾಶಾಲೆಯಲ್ಲಿ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ 5 ರಿಂದ 7ನೇ ತರಗತಿಯ ವರೆಗೆ ವಸತಿ ಕಲ್ಪಿತ ಕ್ರೀಡಾ ಶಾಲೆಗಳಲ್ಲಿ ತಲಾ 2 ಕ್ರೀಡೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ಕ್ರೀಡಾಶಾಲೆಗೆ ಸೇರ್ಪಡೆ ಹೊಂದಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಕ್ರೀಡಾ ಸಮವಸ್ತ್ರ, ಕ್ರೀಡಾಪಟುಗಳು ಅಭ್ಯಾಸ ಮಾಡಲು ಅವಶ್ಯವಿರುವ ಕ್ರೀಡಾ ಸಲಕರಣೆಗಳು/ಉಪಕರಣಗಳನ್ನು ಎಲ್ಲಾ ಕ್ರೀಡಾಶಾಲೆಗಳಿಗೆ ಒದಗಿಸಲಾಗಿರುತ್ತದೆ.
ಹಿರಿಯ ವಿದ್ಯಾರ್ಥಿಗಳಿಗೆ (8ನೇ ತರಗತಿಯಿಂದ 10ನೇ ತರಗತಿ) ಅನುಕೂಲವಾಗುವಂತೆ ಕೂಡಿಗೆ (ಕೊಡಗು ಜಿಲ್ಲೆ) ಹಾಗೂ ವಿದ್ಯಾನಗರ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಒಟ್ಟು 160 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಇವರಲ್ಲಿ ಶೇ 80 ರಷ್ಟು ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶದಿಂದ ಆಯ್ಕೆಯಾಗಿರುತ್ತಾರೆ. ಪ್ರಥಮ ಪಿ.ಯು.ಸಿ. ಯಿಂದ ಪದವಿಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಬೆಳಗಾವಿ (ಜುಡೋ, ಕುಸ್ತಿ), ದಾವಣಗೆರೆ (ಕುಸ್ತಿ), ಬೆಂಗಳೂರು (ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ವಾಲಿಬಾಲ್, ಫುಟ್ಬಾಲ್ ಮತ್ತು ಹಾಕಿ), ಮೈಸೂರು (ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ವಾಲಿಬಾಲ್ ಮತ್ತು ಹಾಕಿ) ಮತ್ತು ವಿಜಾಪುರ (ಸೈಕ್ಲಿಂಗ್) ಈ ಸ್ಥಳಗಳಲ್ಲಿ ಆವರಣದಲ್ಲಿ ತೋರಿಸಿರುವ ಕ್ರೀಡೆಗಳಲ್ಲಿ ಕ್ರೀಡಾ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ 5 ಕ್ರೀಡಾ ವಸತಿ ನಿಲಯಗಳಲ್ಲಿ 203 ಸಂಖ್ಯೆಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಈ ಪೈಕಿ ಶೇ. 75ರಷ್ಟು ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶದಿಂದ ಬಂದವರಾಗಿರುತ್ತಾರೆ.

ಇ) ಏಕಲವ್ಯ ಪ್ರಶಸ್ತಿಗಳನ್ನು ಪ್ರತಿ ವರ್ಷ ಕ್ರೀಡಾಪಟುಗಳಿಗೆ ನೀಡುತ್ತಿರುವುದು ನಿಜವೇ; ಈ ಪ್ರಶಸ್ತಿ ಪಡೆದ ಕ್ರೀಡಾಪಟುಗಳಿಗೆ ನೀಡುವ ಸರ್ಕಾರದ ಮೊತ್ತವೆಷ್ಟು ಮತ್ತು ಪ್ರಶಸ್ತಿಗೆ ವೆಚ್ಚವಾಗುವ ಹಣವೆಷ್ಟು;

ಹೌದು. ಏಕಲವ್ಯ ಪ್ರಶ್ತಿಯು ರೂ. 50,000/- ನಗದು, ಪ್ರಶಸ್ತಿ, ಸುರುಳಿ, ಕಂಚಿನ ಪ್ರತಿಮೆ ಮತ್ತು ಕ್ರೀಡಾ ಸಮವಸ್ತ್ರ ಒಳಗೊಂಡಿರುತ್ತದೆ. ಈ ಪ್ರಶಸ್ತಿ ಸಮಾರಂಭಕ್ಕೆ ರೂ. 25.00 ಲಕ್ಷಗಳ ವೆಚ್ಚವಾಗುವುದು.

ಈ) ತಾಲ್ಲೂಕು ಮಟ್ಟದಲ್ಲಿರುವ ಕ್ರೀಡಾಂಗಣಗಳು ಕ್ರೀಡಾಪಟುಗಳಿಗೆ ಎಷ್ಟು ಪ್ರಯೋೀಯನವಾಗುತ್ತಿದೆ ಹಾಗೂ ಈಗ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣಗಳು ಪ್ರಾರಂಭವಾಗುವುದರ ಬಗ್ಗೆ ವಿವರ ಒದಗಿಸುವುದು?

ಪೂರ್ಣಗೊಂಡಿರುವ 35 ತಾಲ್ಲೂಕು ಕ್ರೀಡಾಂಗಣಗಳಲ್ಲಿ ಪೆವಿಲಿಯನ್ ಕಟ್ಟಡ, ಕುಡಿಯುವ ನೀರಿನ ವ್ಯವಸ್ಥೆ, 200 ಮೀ. ಅಥವಾ 400 ಮೀ. ಟ್ರಾಕ್‌ಗಳು. ಮಲ್ಟಿ ಜಿಮ್ ಸೌಲಭ್ಯ ಲಭ್ಯವಿದ್ದು, ಕ್ರೀಡಾಪಟುಗಳು ದೈನಂದಿನ ಕ್ರೀಡಾ ಚಟುವಟಿಕೆಗಳಲ್ಲದೆ ಇಲಾಖೆಯ ಮುಖಾಂತರ ನಡೆಸಲಾಗುವ ಗ್ರಾಮೀಣ ಕ್ರೀಡಾಕೂಟ, ದಸರಾ ಕ್ರೀಡಾಕೂಟ ಮತ್ತು ಅಂತರ ಯುವಕ ಸಂಘಗಳ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಕ್ರೀಡಾಂಗಣಗಳ ಉಪಯೋಗವನ್ನು ಪಡೆಯುತ್ತಿಲಿದ್ದಾರೆ. 57 ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿರುತ್ತವೆ. 15 ತಾಲ್ಲೂಕು ಕ್ರೀಡಾಂಗಣಗಳನ್ನು 31-03-2009ರ ಒಳಗೆ ಪೂರ್ಣಗೊಳಿಸಲು ಕ್ರಮ ರೂಪಿಸಲಾಗಿದೆ.

ಕೊಡಗು, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲಾ ಕ್ರೀಡಾಂಗಣಗಳನ್ನು 12ನೇ ಹಣಕಾಸು ಆಯೋಗದ ಅನುದಾನದಡಿ ಉನ್ನತೀಕರಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**: (113)183**
	: (ಶ್ರೀ ಜಿ.ಕರುಣಾಕರ ರೆಡ್ಡಿ)
ವಿಧಾನಸಭೆ ಸದಸ್ಯರ ಹೆಸರು	**: ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)**
ವಿಷಯ	**: ರೈತರ ಪಹಣಿಗಳ ತಿದ್ದುಪಡಿಯು ವಿಳಂಬವಾಗುತ್ತಿರುವುದು**

ಅ ರೈತರ ಭೂಮಿಗಳ ಪಹಣಿಗಳ ತಿದ್ದುಪಡಿ ಅಧಿಕಾರ ತಹಶೀಲ್ದಾರ್‌ರಿಂದ ಉಪವಿಭಾಗಾಧಿಕಾರಿಗಳಿಗೆ ವರ್ಗಾಯಿಸಿರುವುದರಿಂದ ತಿದ್ದುಪಡಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೆಲವು ಕಡೆ ಉಪ ವಿಭಾಗಧಿಕಾರಿಗಳು ಪಹಣಿಗಳ ತಿದ್ದುಪಡಿ ಮಾಡಲು ಸ್ವಲ್ಪ ವಿಳಂಬವಾಗುತ್ತಿದೆ.

ಆ ಹಾಗಿದ್ದಲ್ಲಿ, ಇದರಿಂದಾಗಿ ಅನೇಕ ರೈತರಿಗೆ ತೊಂದರೆಯಾಗುತ್ತಿರುವುದು ನಿಜವೇ; ಇದನ್ನು ಪುನರ್ ಪರಿಶೀಲನೆ ಮಾಡಿ ತಹಶೀಲ್ದಾರ್‌ರವರಿಗೆ ಪುನಃ ಅಧಿಕಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ರೈತರಿಗೆ ಕೆಲವು ಸಂದರ್ಭದಲ್ಲಿ ಸ್ವಲ್ಪ ತೊಂದರೆಯಾಗುತ್ತಿರಬಹುದು, ಸರ್ಕಾರವು ಎಲ್ಲಾ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸಲು 6 ತಿಂಗಳ ವಿಶೇಷ ಕಾರ್ಯಚರಣೆಯನ್ನು ತೆಗೆದುಕೊಳ್ಳುತ್ತದೆ ಮತ್ತು ಈ ಅವಧಿಯಲ್ಲಿ ತಿದ್ದುಪಡಿ ಮಾಡುವ ಅಧಿಕಾರವನ್ನು ತಹಶೀಲ್ದಾರುಗಳಿಗೆ ವರ್ಗಾಯಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: (114)184
2	ಸದಸ್ಯರ ಹೆಸರು	: ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.
3	ಉತ್ತರಿಸುವ ಸಚಿವರು	: (ಶ್ರೀ ಬಸವರಾಜ್. ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು

ಅ) ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಭದ್ರಾ ಮೇಲ್ದಂಡೆ ಮತ್ತು ನೇತ್ರಾವತಿ ತಿರುವು ಯೋಜನೆಗಳ ಕಾರ್ಯಕ್ರಮಗಳ ಅನ್ವಯ ಕೋಲಾರ ತಾಲ್ಲೂಕಿನ ಕೇವಲ 19 ಕೆರೆಗಳಿಗೆ ಮಾತ್ರ ನೀರು ಬಿಡುವ ಯೋಜನೆ ಅನುಷ್ಠಾನಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಇದೇ ರೀತಿ ಕುಡಿಯುವ ನೀರಿಗಾಗಿ ತುಂಬಾ ತೊಂದರೆಯನ್ನು ಅನುಭವಿಸುತ್ತಿರುವ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿನ ಅನುಕೂಲತೆಯ ಸಲುವಾಗಿ ಸದರಿ ಯೋಜನೆಯನ್ನು ಗೌರಿಬಿದನೂರು ತಾಲ್ಲುಕಿಗೂ ತರುವ ಯೋಜನೆ ಸರ್ಕಾರದ ಮುಂದಿದೆಯೇ;

ಭದ್ರಾ ಮೇಲ್ದಂಡೆ ಯೋಜನೆಯನ್ನು ಶ್ರೀ ಕೆ.ಸಿ.ರೆಡ್ಡಿಯವರ ವರದಿಯ ಪ್ರಕಾರ ಸ್ಕೀಂ-ಎ ಅಡಿಯಲ್ಲಿ ಹಂಚಿಕೆಯಾಗಿರುವ ನೀರಿನ ಪ್ರಮಾಣಕ್ಕೆ ಅನುಸಾರವಾಗಿ ಕೈಗೆತ್ತಿಕೊಳ್ಳಲಾಗಿದೆ. ಈ ವರದಿಯ ಅನುಸಾರ ಅನುಷ್ಠಾನಗೊಳ್ಳುತ್ತಿರುವ ಭದ್ರಾ ಮೇಲ್ದಂಡೆ ಯೋಜನೆಯಡಿ, ಗೌರಿಬಿದನೂರು ತಾಲ್ಲೂಕಿನ ಕೆರೆಗಳಿಗೆ ನೀರು ಪೂರೈಸುವ ಯೋಜನೆಯು ಇರುವುದಿಲ್ಲ.

ಇ) ಈ ಭಾಗದ ಜನತೆಗೆ ಕುಡಿಯುವ ನೀರಿನ ಅನುಕೂಲತೆಯನ್ನು ಕಲ್ಪಿಸಲು ಈ ಭಾಗದ ಕೆರೆಗಳಿಗೆ ನೀರನ್ನು ಬಿಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (115)185
2. ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)
3. ಉತ್ತರಿಸುವವರು : (ಶ್ರೀ.ಗೋವಿಂದ ಎಂ.ಕಾರಜೋಳ್) ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು

ಅ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿರುವ ಕೆರೆಗಳನ್ನು ಜಲ ಸಂವರ್ಧನಾ ಯೋಜನೆಯಡಿ ಅಭಿವೃದ್ಧಿ ಕೈಗೊಳ್ಳಲು ಈ ತಾಲ್ಲೂಕನ್ನು ಕಡೆಗಣಿಸಿ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಜಲ ಸಂವರ್ಧನಾ ಯೋಜನಾ ಸಂಘವು ವಿಶ್ವ ಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯನ್ನು 2002–2003ನೇ ಸಾಲಿನಿಂದ ರಾಜ್ಯದ 09 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ತಾಲ್ಲೂಕುಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ 04 ತಾಲ್ಲೂಕುಗಳಾದ ಚಿಂತಾಮಣಿ, ಶಿಡ್ಲಘಟ್ಟ, ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳು ಮೊದಲನೇ ಹಂತದ ಯೋಜನೆಗೆ ಸೇರ್ಪಡೆಯಾಗಿದ್ದು ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳು ಯೋಜನೆಯ ಆಯ್ಕೆ ಮಾನದಂಡಗಳಿಗೆ ಒಳಪಡದ ಕಾರಣ ಮೊದಲನೇ ಹಂತದಲ್ಲಿ ಸೇರ್ಪಡಿಸಿಲ್ಲ.

ಆ ಹಾಗಿಲ್ಲದಿದ್ದಲ್ಲಿ, ಗೌರಿಬಿದನೂರು ತಾಲ್ಲೂಕನ್ನು ಸಹ ಜಲ ಸಂವರ್ಧನಾ ಯೋಜನೆಯಡಿಯಲ್ಲಿ ಸೇರ್ಪಡಿಸಿ ಈ ಭಾಗದ ಕೆರೆಗಳ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಮೊದಲನೇ ಹಂತದ ಯೋಜನೆಯ 2005 ಕೆರೆಗಳ ಅನುಷ್ಠಾನದಲ್ಲಿ ಬಹುತೇಕ ಕಾಮಗಾರಿಗಳು ಮುಗಿದಿದ್ದು ಸುಮಾರು ರೂ.170.00 ಕೋಟಿಗಳಷ್ಟು ಯೋಜನೆಯ ಹಣ ಉಳಿತಾಯವಾಗುವುದೆಂದು ಅಂದಾಜಿಸಿ ಈ ಹಣವನ್ನು ಸದುಪಯೋಗಪಡಿಸಿಕೊಳ್ಳಲು ಮೊದಲನೇ ಹಂತದ ಜಿಲ್ಲೆಗಳಲ್ಲಿ ಸೇರ್ಪಡೆಯಾಗದೆ ಇದ್ದ 24 ತಾಲ್ಲೂಕುಗಳನ್ನು ಯೋಜನೆಯಡಿ ಸೇರ್ಪಡಿಸುವ ಪ್ರಸ್ತಾವನೆಯಿದೆ. ಈ 24 ತಾಲ್ಲೂಕುಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳನ್ನು ಸೇರ್ಪಡಿಸಲಾಗಿದೆ. ಈ ಪ್ರಸ್ತಾವನೆಯನ್ನು ಸರ್ಕಾರ ಮತ್ತು ವಿಶ್ವಬ್ಯಾಂಕಿನ ಅನುಮೋದನೆಗೆ ಇನ್ನು ಸಲ್ಲಿಸಬೇಕಾಗಿದೆ. ಮೇಲಿನ ಅನುಮೋದನೆಗಳನ್ನು ಪಡೆದು ನವೆಂಬರ್–ಡಿಸೆಂಬರ್–2008 ರಿಂದ ಪ್ರಾರಂಭಿಸಿ 3 ವರ್ಷಗಳ ಅವಧಿಯಲ್ಲಿ ಆಯಾ ತಾಲ್ಲೂಕಿನಲ್ಲಿ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ

ಇ ಗೌರಿಬಿದನೂರು ತಾಲ್ಲೂಕಿನಲ್ಲಿರುವ ಕೆರೆಗಳಲ್ಲಿ ಅಧಿಕವಾಗಿ ಹೂಳು ತುಂಬಿದ್ದು, ಇದರಿಂದ ಯಾವುದೇ ಕೆರೆಯ ಅಭಿವೃದ್ಧಿ ಇಲ್ಲದೆ ರೈತರಿಗೆ ನೀರಾವರಿ

ಸೌಕರ್ಯವು ಸರಿಯಾದ ಪ್ರಮಾಣದಲ್ಲಿ ಆಗದೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ ಹಾಗಿದ್ದಲ್ಲಿ, ಕೂಡಲೇ ಜಲ ಸಂವರ್ಧನೆ ಯೋಜನೆಯಡಿಯಲ್ಲಿ ಈ ತಾಲ್ಲೂಕನ್ನು ಸೇರ್ಪಡಿಸಿ, ಈ ಭಾಗದ ರೈತರಿಗೆ ನೀರಾವರಿ ಸೌಕರ್ಯವನ್ನು ಕಲ್ಪಿಸಿಕೊಡುವ ಯೋಜನೆ ಸರ್ಕಾರದ ಮುಂದಿದೆಯೇ?

"ಆ"ದಲ್ಲಿ ನೀಡಿರುವ ಉತ್ತರದಂತೆ

ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ
1ನೇ ಅಧಿವೇಶನ

****

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**: (116)186**
	: (ಶ್ರೀ ಜಿ.ಕರುಣಾಕರ ರೆಡ್ಡಿ)
ವಿಧಾನಸಭೆ ಸದಸ್ಯರ ಹೆಸರು	**: ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್. (ಗೌರಿಬಿದನೂರು)**
ವಿಷಯ	**: ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ಗಣಕೀಕೃತಗೊಳಿಸುವುದು**

ಅ ಸರ್ಕಾರವು ಈ ಹಿಂದೆ ಯೋಜಿಸಲಾಗಿದ್ದ ಜನನ, ಮರಣ ಹಾಗೂ ಜಾತಿ ಪ್ರಮಾಣ ಪತ್ರ ಮತ್ತು ಭೂಮಿ ಯೋಜನೆಯಲ್ಲಿ ಪಹಣಿಗಳ ಗಣಕೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು;

i. ಪಹಣಿಗಳ ಗಣಕೀಕರಣವನ್ನು ಭೂಮಿ ಯೋಜನೆಯಡಿ ಪೂರ್ಣಗೊಳಿಸಲಾಗಿದೆ.

ii. ಜನನ,ಮರಣ ಹಾಗೂ ಜಾತಿ ಪ್ರಮಾಣ ಪತ್ರಗಳ ಗಣಕೀಕರಣದ ಕಾರ್ಯ ನೆಮ್ಮದಿ ಯೋಜನೆಯಡಿ ಪ್ರಗತಿಯಲ್ಲಿದೆ.

ಆ ಪ್ರಸ್ತುತ ಸರ್ಕಾರವು ಜಾತಿ ಆದಾಯ ಪತ್ರವನ್ನು 5 ವರ್ಷಕೊಮ್ಮೆ ಪಡೆಯುವ ಅವಧಿಯನ್ನು ಸೀಮಿತಗೊಳಿಸಿ ನಿಗದಿಮಾಡಿದ್ದು, ಪದೇ ಪದೇ ಜಾತಿ ಪ್ರಮಾಣ ಪತ್ರ ಪಡೆಯುವ / ನೀಡುವ ಕೆಲಸವನ್ನು ನಿಲ್ಲಿಸಿ, ರೈತರಿಗೆ ವಿದ್ಯಾರ್ಥಿಗಳಿಗೆ, ನೌಕರರುಗಳಿಗೆ ಅನುಕೂಲಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿಯಲ್ಲಿ ಮೀಸಲಾತಿ ಇತರೆ) ನಿಯಮಗಳು, 1992ರ ನಿಯಮ 3-ಸಿಯ ಉಪ ನಿಯಮ(2) ಕ್ಕೆ ಅಧಿಸೂಚನೆ ಸಂಖ್ಯೆ:

ಎಸ್‌ಡಬ್ಲ್ಯೂಡಿ 3 ಎಸ್‌ಟಿಸಿ 02, ದಿನಾಂಕ: 11.03.2002 ರಲ್ಲಿ ತಿದ್ದುಪಡಿ ತಂದಂತೆ ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮೀಸಲಾತಿ ಇತರೆ) ಕಾಯ್ದೆ 1990ರ ಕಲಂ 4-ಎ ರಂತೆ ತಹಶೀಲ್ದಾರ್‌ರವರು ನೀಡುವ ಜಾತಿ/ಆದಾಯ ಪ್ರಮಾಣ ಪತ್ರ 5 ವರ್ಷಗಳವರೆಗೆ ಜಾರಿಯಲ್ಲಿರುತ್ತದೆ.

ಅನುಷ್ಠಾನದಲ್ಲಿ ಇರುವ ಸರ್ಕಾರಿ ಸುತ್ತೋಲೆಯಂತೆ ಪ್ರತಿ ವರ್ಷವು ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಕೇಳುವುದನ್ನು ತಪ್ಪಿಸಲು ಸಮಾಜ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ಇ ಎಲ್ಲಾ ವರ್ಗದ ಜಾತಿ ಪ್ರಮಾಣ ಪತ್ರಗಳಲ್ಲಿ ಅವರವರ ಭಾವ ಚಿತ್ರಗಳನ್ನು ಲಗತ್ತಿಸಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಸಮಾಜ ಕಲ್ಯಾಣ ಇಲಾಖೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಎಸ್‌ಡಬ್ಲ್ಯೂಎಲ್ 213 ಎಸ್‌ಎಡಿ 85 ದಿನಾಂಕ: 12.08.1987ರ ಪ್ರಕಾರ ಪರಿಶಿಷ್ಟ ವರ್ಗಗಳ ಜನಗಳಿಗೆ ನೀಡುವ ಜಾತಿ ಆದಾಯ ಪ್ರಮಾಣ ಪತ್ರದಲ್ಲಿ ಭಾವ ಚಿತ್ರವನ್ನು ಅಳವಡಿಸಿ ನೀಡಬೇಕೆಂಬುದನ್ನು ಕಡ್ಡಾಯಗೊಳಿಸಲಾಗಿದೆ. ಇತರೆ ಹಿಂದುಳಿದ ವರ್ಗಗಳವರಿಗೆ ಭಾವಚಿತ್ರ ಅಳವಡಿಸಿ ಜಾತಿ ಆದಾಯ ಪತ್ರ ನೀಡುವ ವಿಷಯ ಪರಿಶೀಲನೆಯಲ್ಲಿರುತ್ತದೆ.

ಈ ಸಂಧ್ಯಾ ಸುರಕ್ಷೆ ಯೋಜನೆಯಲ್ಲಿ ಪಿಂಚಣಿ ನೀಡಲು ಪಡಿತರ ಚೀಟಿ ನೀಡುವಲ್ಲಿ ಒತ್ತಾಯಿಸುತ್ತಿರುವುದು ನಿಜವೇ; ಪಡಿತರ ಚೀಟಿಗಳಲ್ಲಿ ಮಕ್ಕಳ ಹೆಸರು ನಮೂದಾಗಿದ್ದರೆ ಪಿಂಚಣಿ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ ಇದರಿಂದ ವೃದ್ದರಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ; ಇದರಿಂದ ಸಂಧ್ಯಾ ಸುರಕ್ಷಿತ ಯೋಜನೆಯು ವಿಫಲವಾಗಿತ್ತಿಲ್ಲವೇ; ಮಕ್ಕಳಿಂದ ಪೋಷಣೆಯಾಗದೇ ಇರುವ ವೃದ್ದರಿಗೆ ಸರ್ಕಾರದಿಂದೊದಗಿಸಬಹುದಾದ ರೂಪುರೇಷೆ ಏನು; ಈ ಕಾನೂನುಗಳ ಸಡಲಿಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

I. ಸಂಧ್ಯಾ ಸುರಕ್ಷಾ ಯೋಜನೆಯನ್ನು ಆರ್ಥಿಕ ಸಂಕಷ್ಟದಲ್ಲಿರುವ 65 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಹಿರಿಯ ಜೀವಗಳಿಗೆ ಆರ್ಥಿಕ ಸಹಾಯವಾಗಿ ರೂ 400ಗಳ ಮಾಸಾಶನವನ್ನು ನೀಡುವುದಾಗಿರುತ್ತದೆ.

II. ಯೋಜನೆಯ ನಿಯಮಾವಳಿಗಳಂತೆ ಪಿಂಚಣಿಯನ್ನು ಅರ್ಹ ವ್ಯಕ್ತಿಗೆ ಮಂಜೂರು ಮಾಡಲು ಪಡಿತರ ಚೀಟಿಯ ಅಗತ್ಯವಿರುವುದಿಲ್ಲ. ಆದುದರಿಂದ ಸಂಧ್ಯಾ ಸುರಕ್ಷಾ ಯೋಜನೆಯನ್ನು ಮಂಜೂರು ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಪಡಿತರ ಚೀಟಿಯಲ್ಲಿ ಮಕ್ಕಳ ಹೆಸರು ನಮೂದಾಗಿದ್ದಲ್ಲಿ ಪಿಂಚಣಿ ನಿರಾಕರಿಸಲು ಬರುವುದಿಲ್ಲ.

III. ಜನಸ್ಪಂದನ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಜನರಿಗೆ ಸಂಧ್ಯಾ ಸುರಕ್ಷಾ ಅರಿವು ಮೂಡಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಕೂಡಲೆ ಮಂಜೂರಾತಿಗೆ ಕ್ರಮ ಜರೂಗಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಮೂಲಕ ತಿಳಿಸಲಾಗಿರುತ್ತದೆ. ಈಗಾಗಲೇ 119063 ಫಲಾನುಭಾವಿಗಳಿಗೆ ಮಂಜೂರಾತಿ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (363)187
ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ.
ಉತ್ತರಿಸುವವರು : (ಶ್ರೀ.ಜಿ.ಕರುಣಾಕರರೆಡ್ಡಿ)
ಮಾನ್ಯ ಕಂದಾಯ ಸಚಿವರು

ಅ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಒತ್ತುವರಿಯಾಗಿರತಕ್ಕ ಸರ್ಕಾರಿ ಜಮೀನುಗಳ ಅಂದಾಜು ವಿಸ್ತೀರ್ಣವೆಷ್ಟು;

ಬೆಂಗಳೂರು ನಗರ ಜಿಲ್ಲೆಯಲ್ಲಿ 33,877 ಎಕರೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2,212 ಎಕರೆ 34 ಗುಂಟೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ ಎಂದು ಗುರುತಿಸಲಾಗಿದೆ.

ಆ) ಶ್ರೀ ಎ.ಟಿ. ರಾಮಸ್ವಾಮಿ ನೇತೃತ್ವದ ಕರ್ನಾಟಕ ವಿಧಾನ ಮಂಡಲದ ಜಂಟಿ ಸದನ ಸಮಿತಿ ನೀಡಿರುವ ವರದಿ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಮೇಲ್ಕಂಡ ಜಿಲ್ಲೆಗಳಲ್ಲಿ ಒತ್ತುವರಿಯಾಗಿರತಕ್ಕ ಸರ್ಕಾರಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಸರ್ಕಾರಿ ಜಮೀನಿನಲ್ಲಿನ ಒತ್ತುವರಿಯನ್ನು ತೆರವುಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇಲ್ಲಿಯವರೆಗೂ 8,717 ಎಕರೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1,495 ಎಕರೆ 2 ಗುಂಟೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಿ ಸರ್ಕಾರಕ್ಕೆ ಸ್ವಾಧೀನ ಪಡೆಸಿಕೊಳ್ಳಲಾಗಿದೆ ಮತ್ತು 615 ಕ್ರಿಮಿನಲ್ ದೂರುಗಳನ್ನು ದಾಖಲಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (364)188
2) ಸದಸ್ಯರ ಹೆಸರು : ಶ್ರೀ ವಿ.ಸೋಮಣ್ಣ
3) ಉತ್ತರಿಸುವ ಸಚಿವರು : (ಶ್ರೀ.ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ ತಮಿಳುನಾಡು ಸರ್ಕಾರ ಹೊಗೆನಕಲ್ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತಮಿಳುನಾಡು ಸರ್ಕಾರವು ಹೊಗೇನಕಲ್ ಬಳಿ ಪ್ರಾರಂಭಿಸಿರುವ ಕುಡಿಯುವ ನೀರಿನ ಯೋಜನೆಯ ವಿಷಯವು ರಾಜ್ಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ ಹಾಗಿದ್ದಲ್ಲಿ, ಈ ಯೋಜನೆಯಿಂದ ರಾಜ್ಯಕ್ಕೆ ಉಂಟಾಗತಕ್ಕ ಅನ್ಯಾಯವನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಸದರಿ ಯೋಜನೆಯ ಬಗ್ಗೆ ಪತ್ರಿಕಾ ವರದಿಗಳಲ್ಲಿ ಪ್ರಕಟವಾದ ಕೂಡಲೇ ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳು ದಿನಾಂಕ:14.02.2008ರ ಪತ್ರದಲ್ಲಿ ತಮಿಳುನಾಡು ರಾಜ್ಯದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಆದೇಶವು ಸರ್ವೋಚ್ಚ ನ್ಯಾಯಾಲಯ ಹಾಗೂ ನ್ಯಾಯಾಧಿಕರಣದಲ್ಲಿ ಪ್ರಶ್ನಿಸಿರುವ ಹಿನ್ನಲೆಯಲ್ಲಿ ಯೋಜನೆಯನ್ನು ತೆಗೆದುಕೊಳ್ಳದಂತೆ ಕೋರಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ತಮಿಳುನಾಡು ಸರ್ಕಾರದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಬರೆದಿರುವ ದಿನಾಂಕ:27.02.2008ರ ಪತ್ರದಲ್ಲಿ ಸದರಿ ಯೋಜನೆಯಿಂದ ಆಗುವ ಅಂತರ ರಾಜ್ಯ ಪರಿಣಾಮಗಳನ್ನು ಪರಿಶೀಲಿಸಲು ಯೋಜನಾ ವರದಿಯ ಪ್ರತಿಯನ್ನು ಕಳುಹಿಸಿಕೊಡುವಂತೆ ಕೋರಿರುತ್ತಾರೆ.

ರಾಜ್ಯದ ಮುಖ್ಯ ಕಾರ್ಯದರ್ಶಿಗಳು ದಿನಾಂಕ:28.02.2008ರ ಪತ್ರದಲ್ಲಿ ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳನ್ನು ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನು ಮುಂದುವರೆಸದಂತೆ ಕೋರಿರುತ್ತಾರೆ.

ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ: 27.03.2008ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರೆದಿರುವ ಪತ್ರದಲ್ಲಿ ಸದರಿ ಯೋಜನೆಯ ಪ್ರಸ್ತಾಪವನ್ನು ಕಾವೇರಿ ನ್ಯಾಯಾಧಿಕರಣದ ಮುಂದೆ ತಮಿಳುನಾಡು ರಾಜ್ಯವು ಪ್ರಸ್ತಾಪಿಸಿಲ್ಲದಿರುವುದರಿಂದ, ಈ ಯೋಜನೆಗೆ ಕೇಂದ್ರ ಸರ್ಕಾರವು ನೀಡಿರುವ ನಿರಪೇಕ್ಷಣಾ ಪತ್ರವನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು, ಯೋಜನೆಯ ವಿವರವಾದ ವರದಿ ಹಾಗೂ ಸಂಬಂಧಿಸಿದ ಮಾಹಿತಿಗಳ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ಒದಗಿಸದೇ ತಮಿಳುನಾಡು ರಾಜ್ಯವು ಯೋಜನೆಯನ್ನು ತೆಗೆದುಕೊಳ್ಳಬಾರದೆಂದು ತಿಳಿಸಿ, ಯೋಜನೆಯನ್ನು ಮುಂದುವರೆಸದಂತೆ ಕೋರಲಾಗಿದೆ.

ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ: 24.05.2008ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರೆದಿರುವ ಪತ್ರದಲ್ಲಿ ತಮಿಳುನಾಡು ರಾಜ್ಯವು ಕೈಗೊಂಡಿರುವ ಯೋಜನೆಯಿಂದ, ಕರ್ನಾಟಕ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವುದಿಲ್ಲವೆಂದು ರಾಜ್ಯಕ್ಕೆ ಮನವರಿಕೆ ಮಾಡಿಕೊಳ್ಳುವ ಜವಾಬ್ದಾರಿ ಆ ರಾಜ್ಯಕ್ಕೆ ಇರುವುದರಿಂದ, ಯೋಜನೆಯ ವರದಿ ಹಾಗೂ ಇತರೆ ಸಂಬಂಧಿಸಿದ ವಿವರಗಳನ್ನು ಕರ್ನಾಟಕ ರಾಜ್ಯಕ್ಕೆ ಒದಗಿಸುವಂತೆ ಕೋರಲಾಗಿದೆ. ಮುಂದುವರೆದು ಯೋಜನೆ ಮುಂದುವರೆಸದಂತೆ ಸಹ ಕೋರಲಾಗಿದೆ.

ರಾಜ್ಯದ ಜಲಸಂಪನ್ಮೂಲ ಸಚಿವರು ಕೇಂದ್ರ ಜಲ ಸಂಪನ್ಮೂಲ ಸಚಿವರಿಗೆ ಬರೆದಿರುವ ದಿನಾಂಕ: 17.07.2008ರ ಪತ್ರದಲ್ಲಿ ತಮಿಳು ನಾಡು ಸರ್ಕಾರವು ಯೋಜನೆಯನ್ನು ಮುಂದುವರೆಸದಂತೆ ಆ ರಾಜ್ಯಕ್ಕೆ ನಿರ್ದೇಶನ ನೀಡಲು ಹಾಗೂ ಸದರಿ ವಿಷಯವು ಎರಡೂ ರಾಜ್ಯಗಳ ನಡುವೆ ಇತ್ಯರ್ಥವಾಗುವವರೆಗೆ ಯೋಜನೆಗೆ ನೀಡಿರುವ ಅಭ್ಯಂತರ ರಹಿತ ಪತ್ರವನ್ನು ತಡೆ ಹಿಡಿಯುವಂತೆ ಕೋರಲಾಗಿದೆ. ಮುಂದುವರೆದು, ವಿಷಯವನ್ನು ಇತ್ಯರ್ಥ ಮಾಡಲು ಎರಡೂ ರಾಜ್ಯಗಳ ಪ್ರತಿನಿಧಿಗಳನ್ನು ಚರ್ಚೆಗೆ ಕರೆಯುವಂತೆ ಸಹ ಕೋರಲಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : **(365)189**
ಸದಸ್ಯರ ಹೆಸರು : ಶ್ರೀ ವಿ.ಸೋಮಣ್ಣ
ಉತ್ತರಿಸಬೇಕಾದ ಸಚಿವರು : ಶ್ರೀ ಗೂಳಿಹಟ್ಟಿ ಡಿ.ಶೇಖರ್. ಜವಳಿ,
ಯುವಜನ ಸೇವಾ ಮತ್ತು ಕ್ರೀಡಾ ಸಚಿವರು.

ಅ) ಬೀಜಿಂಗ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ರೀಡೆಗಳನ್ನು ವೀಕ್ಷಿಸಲು ರಾಜ್ಯ ಸರ್ಕಾರದಿಂದ ಕ್ರೀಡಾಪಟುಗಳು, ಅಧಿಕಾರಿಗಳು ಹಾಗೂ ಇತರ ಗಣ್ಯರ ತಂಡವನ್ನು ಕಳುಹಿಸಲು ಸರ್ಕಾರ ನಿರ್ಧರಿಸಿದೆಯೇ?

– ಇಲ್ಲ –

ಆ) ಹಾಗಿದ್ದಲ್ಲಿ, ಎಷ್ಟು ಜನರ ತಂಡವನ್ನು ಕಳುಹಿಸಲು ನಿರ್ಧರಿಸಲಾಗಿದೆ ಹಾಗೂ ವೀಕ್ಷಣೆಗೆ ತೆರಳಳಿರುವ ಈ ತಂಡದಲ್ಲಿ ಕ್ರೀಡಾಪಟುಗಳ ಅಧಿಕಾರಿಗಳ ಹೆಸರುಗಳು ಹಾಗೂ ಇತರ ಗಣ್ಯರ ವಿವರ ನೀಡುವುದು;

– ಉದ್ಭವಿಸುವುದಿಲ್ಲ –

ಇ) ಇದಕ್ಕಾಗಿ ತಗುಲುವ ಅಂದಾಜು ವೆಚ್ಚವೆಷ್ಟು?

– ಉದ್ಭವಿಸುವುದಿಲ್ಲ –

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : **(380) 190**
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ (ಮಂಡ್ಯ)
ಉತ್ತರಿಸಬೇಕಾದ ಸಚಿವರು : ಶ್ರೀ ಗೂಳಿಹಟ್ಟಿ ಡಿ.ಶೇಖರ್
ಜವಳಿ, ಯುವಜನ ಸೇವಾ ಮತ್ತು ಕ್ರೀಡಾ
ಸಚಿವರು.

ಅ) ಮಂಡ್ಯ ನಗರದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣಕ್ಕೆ ಈವರೆಗೆ ಮಾಡಿದ ವೆಚ್ಚದ ಹಣವೆಷ್ಟು; ಅದರ ಮೂಲ ವಿನ್ಯಾಸಗಳ ವಿವರಗಳೇನು;

ಮಂಡ್ಯ ನಗರದ ಜಿಲ್ಲಾ ಮಟ್ಟದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣ ನಿರ್ಮಿಸಲು ರೂ. 31.45 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಮೂಲವಿನ್ಯಾಸದ ಪ್ರಕಾರ ಪೆವಿಲಿಯನ್ ಕಟ್ಟಡ, ಗ್ಯಾಲರಿ, ಆಟದ ಮೈದಾನ, ಸುತ್ತಲೂ ಚೈನ್‌ಲಿಂಕ್ ಫೆನ್ಸಿಂಗ್, ಜೋಡಿ ಬಾಸ್ಕೆಟ್‌ಬಾಲ್ ಅಂಕಣ ಕಾಮಗಾರಿಗಳನ್ನು ಮೂಲವಿನ್ಯಾಸದಂತೆ ಶೇ 100 ರಷ್ಟು ಪೂರ್ಣಗೊಂಡಿರುತ್ತವೆ.

ಆ) ಜಿಲ್ಲಾ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಿ ರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ಅನುವು ಮಾಡಿಕೊಡುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;

ಜಿಲ್ಲಾ ಕ್ರೀಡಾಂಗಣವು ರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ಅನುವು ಮಾಡುವ ವ್ಯವಸ್ಥೆ ಹೊಂದಿದೆ ಮತ್ತು ಹಾಗೂ ರಾಜ್ಯ ಒಲಂಪಿಕ್ ಕ್ರೀಡಾಕೂಟವನ್ನು ನಡೆಸಲಾಗಿದೆ.

ಇ) ಕ್ರೀಡಾಂಗಣದಲ್ಲಿ ವೀಕ್ಷಕರಿಗೆ ಮೇಲ್ಚಾವಣಿ ನಿರ್ಮಿಸಿಕೊಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಕ್ರೀಡಾಂಗಣದ ಪೆವಿಲಿಯನ್ ಕಟ್ಟಡದಲ್ಲಿ ವೀಕ್ಷಕರಿಗೆ ಮೇಲ್ಚಾವಣಿಯನ್ನು ಕಳೆದ ಸಾಲಿನಲ್ಲಿ ನಡೆದ ಒಲಂಪಿಕ್ ಕ್ರೀಡಾಕೂಟದ ಸಂದರ್ಭದಲ್ಲಿ ದುರಸ್ತಿಗೊಳಿಸಲಾಗಿದೆ.

ಉಳಿದಂತೆ ಕ್ರೀಡಾಂಗಣದ ಸುತ್ತ ವೀಕ್ಷಕರ ಗ್ಯಾಲರಿಯಲ್ಲಿ ಮೇಲ್ಚಾವಣಿ ನಿರ್ಮಿಸುವ ಬಗ್ಗೆ ಜಿಲ್ಲಾ ಕ್ರೀಡಾಂಗಣ ಸಮಿತಿಯಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹಾಗಿದ್ದಲ್ಲಿ, ಈ ಕ್ರೀಡಾಂಗಣದಲ್ಲಿ ಅವ್ಯವಸ್ಥೆಗಳು ಕ್ರೀಡೆಗೆ ಸಂಬಂಧಿಸಿರದ ಚಟುವಟಿಕೆಗಳು ಇಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **:(382)192**
ಸದಸ್ಯರ ಹೆಸರು **: ಶ್ರೀ ಶ್ರೀನಿವಾಸ್ ಎಂ.**
ಉತ್ತರಿಸುವವರು **: (ಶ್ರೀ.ಜಿ.ಕರುಣಾಕರ ರೆಡ್ಡಿ)**
ಮಾನ್ಯ ಕಂದಾಯ ಸಚಿವರು.

ಅ) ರೈತರು ಜಮೀನು ಕಂದಾಯವನ್ನು ಕಟ್ಟದೇ ಇರುವ ಸಂದರ್ಭಗಳಲ್ಲಿ ಆ ಭೂಮಿಯನ್ನು ಬೀಳು ಭೂಮಿ ಎಂದು ಪರಿಗಣಿಸುತ್ತಿದ್ದನ್ನು ಸರ್ಕಾರ ರದ್ದು ಪಡಿಸಿರುವುದು ನಿಜವೇ;

ರೈತರು ಜಮೀನಿನ ಕಂದಾಯವನ್ನು ಕಟ್ಟದೇ ಇರುವ ಸಂದರ್ಭಗಳಲ್ಲಿ ಆ ಭೂಮಿಯನ್ನು ಬೀಳು ಭೂಮಿ ಎಂದು ಪರಿಗಣಿಸಲು ಅವಕಾಶವಿದ್ದ ಕರ್ನಾಟಕ

ಭೂ ಕಂದಾಯ ನಿಯಮಗಳು 1966ರ ನಿಯಮ 114ನ್ನು ನಿರಶನಗೊಳಿಸಲಾಗಿರುತ್ತದೆ.

ಆ) ಹಾಗಿದ್ದಲ್ಲಿ, ಆ ಕುರಿತು ಆದೇಶವನ್ನು ಯಾವಾಗ ಹೊರಡಿಸಲಾಯಿತು, ವಿವರ ನೀಡುವುದು;

ದಿ:17.02.1972ರಿಂದ ಜಾರಿಗೆ ಬರುವಂತೆ ಸದರಿ ನಿಯಮ 114ನ್ನು ಅಧಿಸೂಚನೆ ಸಂ:ಜಿಎಸ್‌ಆರ್ 65, ದಿ:22.01.1972ರಲ್ಲಿ ನಿರಶನಗೊಳಿಸಲಾಗಿದೆ.

ಇ) ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುತ್ತಿದ್ದ ಈ ಸೌಲಭ್ಯವನ್ನು ಹಿಂಪಡೆಯಲು ಕಾರಣಗಳೇನು;

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 163ರನ್ವಯ ಭೂ ಕಂದಾಯ ಬಾಕಿ ಎಂದು ಪರಿಗಣಿಸಿದ ಸಂದರ್ಭಗಳಲ್ಲಿ ಸದರಿ ಜಮೀನುಗಳನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ಇರುವುದರಿಂದ ಬೀಳು ಭೂಮಿ ಎಂದು ಪರಿಗಣಿಸುತ್ತಿದ್ದ ನಿಯಮ 114ನ್ನು ನಿರಶನಗೊಳಿಸಲಾಗಿದೆ.

ಈ) ರೈತರ ಅನುಕೂಲಕ್ಕಾಗಿ ಬೀಳು ಭೂಮಿ ಕುರಿತಾದ ಅಧಿಕಾರ ಮತ್ತು ಸೌಲಭ್ಯಗಳನ್ನು ಹಿಂದೆ ಇದ್ದಂತೆ ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: (121)193
ಸದಸ್ಯರ ಹೆಸರು	: ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)
ವಿಷಯ	: ಲಂಬಾಣಿ ತಾಂಡ ಮತ್ತು ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು.
ಉತ್ತರಿಸುವ ಸಚಿವರು	: (ಶ್ರೀ.ಜಿ.ಕರುಣಾಕರ ರೆಡ್ಡಿ) ಕಂದಾಯ ಸಚಿವರು

(ಅ) ರಾಜ್ಯದಲ್ಲಿರುವ ಎಲ್ಲಾ ಲಂಬಾಣಿ ತಾಂಡಗಳು ಮತ್ತು ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಹೌದು

(ಆ) ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)?

ರಾಜ್ಯದಲ್ಲಿ ಒಟ್ಟು 918 ತಾಂಡಗಳು ಇರುತ್ತವೆ. ಇವುಗಳಲ್ಲಿ 276ನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗಿದೆ.

ಪ್ರಸ್ತುತ ಚುನಾವಣಾ ಆಯೋಗವು (ಕ್ಷೇತ್ರ ಪುನರ್ವಿಂಗಡಣಾ ಆಯೋಗದ) ವಿಧಿಸಿದ್ದ ನಿರ್ಬಂಧವು ಇತ್ತೀಚೆಗೆ ರದ್ದಾಗಿರುವುದರಿಂದ ಉಳಿದ ಲಂಬಾಣಿ ತಾಂಡಾ:ಗೊಲ್ಲರಹಟ್ಟಿ:ಹ್ಯಾಮ್ಲೆಟ್(ಮಜರೆ)ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳಿಂದ ವರದಿ/ಪ್ರಸ್ತಾವನೆ ಪಡೆಯಲಾಗುತ್ತಿದ್ದು, ಅರ್ಹವಿರುವ ಲಂಬಾಣಿ ತಾಂಡ, ಹಟ್ಟಿ, ಮಜರೆ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ನಿಗಧಿಪಡಿಸಿರುವ ಮಾನದಂಡಗಳನ್ವಯ (ಮಾರ್ಗಸೂಚಿ) ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (250) 194
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ ಕತ್ತಿ
3. ಉತ್ತರಿಸುವ ಸಚಿವರು : (ಶ್ರೀ.ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು.

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕೊಟಬಾಗಿ ಏತ ನೀರಾವರಿ ಯಾವಾಗ ಮಂಜೂರಾಗಿದೆ; ಕಾಮಗಾರಿ ಪ್ರಾರಂಭವಾಗಿ ಮುಕ್ತಾಯಗೊಂಡಿದ್ದು ಯಾವಾಗ;

ಕೊಟಬಾಗಿ ಏತ ನೀರಾವರಿ ಯೋಜನೆಗೆ ಸರ್ಕಾರದ ಪತ್ರ ಸಂಖ್ಯೆ: ಐಡಿ/114/ಎನ್ಐಎನ್/92 ದಿನಾಂಕ: 31.10.92ರಲ್ಲಿ ಮಂಜೂರಾಗಿದೆ. ಕಾಮಗಾರಿ 1994 ರಲ್ಲಿ ಪ್ರಾರಂಭವಾಗಿ ಆಗಸ್ಟ್ 2007 ರಲ್ಲಿ ಪೂರ್ಣಗೊಂಡಿದೆ.

ಆ) ಹಾಗಿದ್ದಲ್ಲಿ ಏತ ನೀರಾವರಿ ಮಂಜೂರಾದ ಹಂತದಲ್ಲಿ ಉದ್ದೇಶಿತ ನೀರಾವರಿ ಅಚ್ಚುಕಟ್ಟು ಪ್ರದೇಶ ಎಷ್ಟಿತ್ತು;

ನೀರಾವರಿ ಅಚ್ಚುಕಟ್ಟು ಪ್ರದೇಶ 14,880 ಎಕರೆ (6,022 ಹೆ) ಆಗಿತ್ತು.

ಇ) ಸದರಿ ಏತ ನೀರಾವರಿ ಹೆಚ್ಚುವರಿ ಅಚ್ಚುಕಟ್ಟು ಪ್ರದೇಶ ಯೋಜನೆಯಾದದ್ದು ನಿಜವೇ; ಹೆಚ್ಚುವರಿ ಆದಲ್ಲಿ ಸದರಿ ಯೋಜನೆಗೆ ಒಳಪಡುವ ಅಚ್ಚುಕಟ್ಟು ಪ್ರದೇಶದ ನೀಲ ನಕ್ಷೆಯು ಯೋಜನೆಗೆ ಸೂಕ್ತವಾಗಿದೆಯೇ;

ಯೋಜನೆಯ ಅಚ್ಚುಕಟ್ಟಿನಲ್ಲಿ ಹೆಚ್ಚುವರಿ ಆಗಿರುವುದು ನಿಜವಿದ್ದು, ಸದರಿ ಯೋಜನೆಗೆ ಈ ಹೆಚ್ಚು ಅಚ್ಚುಕಟ್ಟುಪ್ರದೇಶವು ಸೂಕ್ತವಾದುದರಿಂದ ಈ ಹೆಚ್ಚುವರಿಯನ್ನು ಕೋಟಬಾಗಿ ಏತನೀರವರಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

ಈ) ಈ ಯೋಜನೆಗೆ ಅಚ್ಚುಕಟ್ಟು ಪ್ರದೇಶ ಹೆಚ್ಚುವರಿಯಾದ ನಂತರ ನೀರಿನ ಪ್ರಮಾಣ ಹೆಚ್ಚುವರಿಯಾಗಿ ನಿಗದಿಪಡಿಸಲಾಗಿದೆಯೇ;

ಏತ ನೀರಾವರಿ ಯೋಜನೆಗೆ 1.88 ಟಿಎಂಸಿ ಪ್ರಮಾಣದ ನೀರನ್ನು ನಿಗದಿಪಡಿಸಲಾಗಿರುತ್ತದೆ. 1.88 ಟಿಎಂಸಿ ಪ್ರಮಾಣವು ಯೋಜನೆಯ ಪರಷ್ಕೃತ

ಕ್ಷೇತ್ರದ ಅಚ್ಚುಕಟ್ಟಿಗೆ ಸಾಕಾಗುವುದರಿಂದ ಹೆಚ್ಚುವರಿ ನೀರಿನ ಪ್ರಮಾಣ ನಿಗದಿಪಡಿಸಲಾಗಿರುವುದಿಲ್ಲ.

ಉ) ಹಾಗಿದ್ದಲ್ಲಿ, ಹೆಚ್ಚುವರಿ ಯೋಜನೆಯಿಂದ ಅಚ್ಚುಕಟ್ಟು ಪ್ರದೇಶದ ರೈತರಿಗೆ ನೀರು ಪೂರ್ಣ ಪ್ರಮಾಣದಲ್ಲಿ ಪೂರೈಸಲು ಸಾಧ್ಯವಾಗದೇ ಇರುವುದು ನಿಜವೇ;

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಈ ಯೋಜನೆಯಿಂದ ಪ್ರಥಮ ಹಂತದಲ್ಲಿ 4 ತಿಂಗಳ ಕಾಲ ನೀರು ಪೂರೈಸುತ್ತಿದ್ದು, ಈ ಯೋಜನೆಯೊಳಗೆ ಅಚ್ಚುಕಟ್ಟು ಪ್ರದೇಶ ಹೆಚ್ಚುವರಿಯಾದ ನಂತರ 8 ತಿಂಗಳ ಕಾಲ ನೀರು ಪೂರೈಸಲು ಸಾಧ್ಯವೇ;

ಯೋಜನಾ ವರದಿಯಲ್ಲಿ ಮುಂಗಾರು ಹಂಗಾಮಿನ 4 ತಿಂಗಳಿನ ಅವಧಿಗೆ ಮಾತ್ರ ನೀರು ಪೂರೈಸಲು ಅವಕಾಶ ಇರುತ್ತದೆ.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಸಂ.	: (252)195
2.	ಸದಸ್ಯರ ಹೆಸರು	: ಶ್ರೀ ಉಮೇಶ್ ವಿಶ್ವನಾಥ್ ಕತ್ತಿ
3.	ಉತ್ತರಿಸುವ ಸಚಿವರು	: (ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ, ಹಾಗೂ ಸಾಂಖ್ಯಿಕ ಸಚಿವರು

ಅ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕಮತನೂರ ಕೆರೆಯು ಮಂಜೂರಾದದ್ದು ಯಾವಾಗ; ಇದರ ಕಾಮಗಾರಿ ಪ್ರಾರಂಭವಾಗಿ ಮುಕ್ತಾಯಗೊಂಡಿದ್ದು ಯಾವಾಗ;

ಸರ್ಕಾರದ ಆದೇಶ ಸಂಖ್ಯೆ:ಐಡಿ 89 ಎಂಐಬಿ 1988, ದಿನಾಂಕ 21/10/1992ರಲ್ಲಿ ಮಂಜೂರಾತಿ ನೀಡಲಾಗಿದೆ. ಕಾಮಗಾರಿಯನ್ನು ದಿನಾಂಕ 06/02/1997 ರಂದು ಪ್ರಾರಂಭಿಸಲಾಗಿದ್ದು; ಇನ್ನೂ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.

ಆ ಈ ಕೆರೆಯಲ್ಲಿ ನೀರು ತುಂಬಿದ್ದು ಯಾವಾಗ; ಸದರಿ ಕೆರೆಯು ಕುಸಿದು, ಹಾಳಾಗಿರುವುದು ನಿಜವೇ; ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿರುವ ಜಮೀನು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

1999ರ ಮಳೆಗಾಲದಲ್ಲಿ ಕೆರೆಯಲ್ಲಿ ನೀರು ನಿಲ್ಲಿಸಲಾಗಿತ್ತು. ಈ ಕೆರೆಯು ಕುಸಿದಿರುವುದು ನಿಜ. ಅಚ್ಚುಕಟ್ಟು ಪ್ರದೇಶದಲ್ಲಿರುವ ಜಮೀನು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ ಹಾಗಿದ್ದಲ್ಲಿ, ಅಚ್ಚುಕಟ್ಟು ಪ್ರದೇಶದ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ; ಸದರಿ ಕೆರೆಯ ಕುಸಿತದಿಂದ ಅಚ್ಚುಕಟ್ಟು ಪ್ರದೇಶದ ಜಮೀನಿನಲ್ಲಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅಚ್ಚುಕಟ್ಟು ಪ್ರದೇಶದ ರೈತರಿಗೆ ಪರಿಹಾರ ಧನ ನೀಡಲಾಗಿದೆ, ಅಚ್ಚುಕಟ್ಟು ಪ್ರದೇಶದ ಜಮೀನಿನಲ್ಲಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಈ ಕೆ.ಇ.ಆರ್.ಸಿ. ಪರಣಿತ ತಂಡದವರು ಕೆರೆಯ ಕುಸಿತಕ್ಕೆ ನಿರ್ದಿಷ್ಟ ಕಾರಣಗಳನ್ನು ತಿಳಿಸಿರುವುದು ನಿಜವೇ;

ನಿಜ

ಉ ಸದರಿ ಕುಸಿದ ಕೆರೆಯನ್ನು ಹೊಸದಾಗಿ ನಿರ್ಮಿಸುವುದಕ್ಕಾಗಿ ರೂ.387 ಲಕ್ಷಗಳ ಅಂದಾಜು ವೆಚ್ಚ ತಯಾರಿಸಿರುವುದು ನಿಜವಲ್ಲವೆ;

ಕುಸಿದ ಏರಿಯನ್ನು ಹೊಸದಾಗಿ ನಿರ್ಮಿಸಲು ಅಂದಾಜು ತಯಾರಿಸಿರುವುದಿಲ್ಲ.

ಊ ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಎಂದು ಮುಕ್ತಾಯಗೊಳಿಸಲಾಗುವುದು?

ಈ ಹಂತದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (253)196
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ್ ಕತ್ತಿ
3. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ರುಸ್ತುಂಪೂರ ಏತ ನೀರಾವರಿ ಯೋಜನೆ ಮಂಜೂರಾದದ್ದು ಯಾವಾಗ ಇದರ ಕಾಮಗಾರಿಯು ಪ್ರಾರಂಭವಾಗಿ ಮುಕ್ತಾಯಗೊಳಿಸಿದ್ದು ಯಾವಾಗ;

ರುಸ್ತುಂಪೂರ ಏತ ನೀರಾವರಿ ಯೋಜನೆಯು ಮಾರ್ಚ್ 1994 ರಲ್ಲಿ ಮಂಜೂರಾಗಿರುತ್ತದೆ. ರುಸ್ತುಂಪೂರ ಏತ ನೀರಾವರಿ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

ಆ) ಸದರಿ ಏತ ನೀರಾವರಿ ಯೋಜನೆ ಎರಡು ಹಂತದಲ್ಲಿದೆಯೇ? ಈ 2 ಹಂತಗಳಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಯಡಿ ಎಷ್ಟು ಪ್ರದೇಶ ನೀರಾವರಿಗೆ ಒಳಪಡುತ್ತದೆ.

ಸದರಿ ಏತ ನೀರಾವರಿ ಯೋಜನೆ ಎರಡು ಹಂತಗಳಲ್ಲಿರುತ್ತದೆ. 1ನೇ ಹಂತದಲ್ಲಿ 2226 ಹೆ. ಕ್ಷೇತ್ರವು ಹಾಗೂ 2ನೇ ಹಂತದಲ್ಲಿ 526 ಹೆ. ಕ್ಷೇತ್ರವು ನೀರಾವರಿಗೆ ಒಳಪಡುತ್ತದೆ.

ಇ) ಸದರಿ ಯೋಜನೆ ಈವರೆಗೆ ಪ್ರಾರಂಭವಾಗದಿರಲು ಕಾರಣಗಳೇನು? ಈ ಯೋಜನೆಯು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಸದರಿ ಯೋಜನೆಯಡಿ ಬರುವ 1ನೇ ಹಾಗೂ 2ನೇ ಹಂತದ ಪಂಪಿಂಗ್ ಮೆಷನರಿ, ರೈಸಿಂಗ್ ಮೇನ್ ಹಾಗೂ ಕಾಲುವೆ ಕೆಲಸಗಳು ಪೂರ್ಣಗೊಂಡಿವೆ.

(ಲ್ಯಾಟರಲ್ ನಂ.8, 10ಬಿ ಮತ್ತು 11 ಸಿ ಗಳನ್ನು ಹೊರಡುಪಡಿಸಿ) 1ನೇ ಹಂತವನ್ನು ಏಪ್ರಿಲ್ 2005 ರಲ್ಲಿ ಹಾಗೂ 2ನೇ ಹಂತವನ್ನು ಸೆಪ್ಟೆಂಬರ್ 2007 ರಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ. 1ನೇ ಹಂತದ ಕಿಮೀ.5 ರಲ್ಲಿ ಬರುವ ರೇಲ್ವೆ ಕ್ರಾಸಿಂಗಿನ ಕಾಮಗಾರಿಯನ್ನು ಮುಗಿಸುವಲ್ಲಿ ರೇಲ್ವೆ ಇಲಾಖೆಯಿಂದ ವಿಳಂಬವಾಗಿರುತ್ತದೆ. ಸದರಿ ರೇಲ್ವೆ ಕ್ರಾಸಿಂಗ್ ಕಾಮಗಾರಿಯು ಡಿಸೆಂಬರ್ 2005 ರಲ್ಲಿ ಪೂರ್ಣಗೊಂಡಿರುತ್ತದೆ. 1ನೇ ಹಂತದ ಬ್ಲಾಕ್ ನಂ.7 ಹಾಗೂ 10 (ಬಿ) ರಲ್ಲಿ ರೇಲ್ವೆ ಕ್ರಾಸಿಂಗ್ ನಿರ್ಮಾಣವಾಗಬೇಕಾಗಿದೆ. ಎಫ್.ಐ.ಸಿ. ಕಾಮಗಾರಿಗಳನ್ನು 3/09 ರೊಳಗೆ ಪೂರ್ಣಗೊಳಿಸುವುದು.

ಈ) ಹಾಗಿದ್ದಲ್ಲಿ ಐತ ನೀರಾವರಿ ಯೋಜನೆಯನ್ನು ಕೂಡಲೇ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಎಫ್.ಐ.ಸಿ. ಕೆಲಸಗಳು ಹಾಗೂ ಬ್ಲಾಕ್ ನಂ.7 ಹಾಗೂ 10 (ಬಿ) ಗಳಲ್ಲಿ ಬರುವ ರೇಲ್ವೆ ಕ್ರಾಸಿಂಗ್‌ಗಳನ್ನು ಹೊರತುಪಡಿಸಿದಂತೆ ಯೋಜನೆಯು ಪೂರ್ಣಗೊಂಡಿರುತ್ತದೆ. 1ನೇ ಹಂತದ ಬ್ಲಾಕ್ ನಂ.7 ಹಾಗೂ 10(ಬಿ) ಗಳಲ್ಲಿ ರೇಲ್ವೆ ಕ್ರಾಸಿಂಗ್ ಹಾಗೂ ಎಫ್.ಐ.ಸಿ. ಕಾಮಗಾರಿಗಳನ್ನು ಮಾರ್ಚ್ 2009 ರ ವೇಳೆಗೆ ಪೂರ್ಣಗೊಳಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (308)197
2. ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ
3. ಉತ್ತರಿಸುವ ಸಚಿವರು : (ಶ್ರೀ.ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು

ಅ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಸಿಂಧೋಗಿ ಗ್ರಾಮದ ಹತ್ತಿರ ಬಂದಾರ ನಿರ್ಮಿಸಲು ಕಳೆದ ವರ್ಷ ಮಂಜೂರಾಗಿದ್ದರೂ ಕಾಮಗಾರಿ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಸಿಂದೋಗಿ (ಹೀರೂರ) ಗ್ರಾಮದ ಹತ್ತಿರ ಮಲಪ್ರಭಾನದಿಗೆ ಅಡ್ಡಲಾಗಿ ಬಾಂಧಾರ ನಿರ್ಮಾಣದ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಗುತ್ತಿಗೆದಾರರು ಅಗೆತದ ಕೆಲಸವನ್ನು ಪ್ರಾರಂಭಿಸಿರುತ್ತಾರೆ.

ಆ) ಹಾಗಿದ್ದಲ್ಲಿ, ಮಂಜೂರಾದ ಕಾಮಗಾರಿಯನ್ನು ಪ್ರಾರಂಭ ಮಾಡಲು ವಿಳಂಬ ಮಾಡುತ್ತಿರುವ ಕಾರಣಗಳೇನು;

ಕಾಮಗಾರಿಯ ವಿಳಂಬಕ್ಕೆ ಉಂಟಾಗಿರುವ ಕಾರಣಗಳು ಈ ಕೆಳಗಿನಂತಿವೆ:-

i 2007 ರ ಜುಲೈ, ಆಗಸ್ಟ್, ಸೆಪ್ಟೆಂಬರನಲ್ಲಿ ಮಲಪ್ರಭಾ ಜಲಾಶಯಕ್ಕೆ ಹೆಚ್ಚಿನ ಒಳಹರಿವು ಬಂದಿದ್ದರಿಂದ.

ii 2008 ರ ಜೂನ್ ಕೊನೆಯ ಹಾಗೂ ಜುಲೈ ಮೊದಲೇ ವಾರಗಳಲ್ಲಿ ಕುಡಿಯುವ ನೀರಿಗಾಗಿ ನದಿಯಲ್ಲಿ ನೀರು ಬಿಟ್ಟಿದ್ದು.

iii ಗುತ್ತಿಗೆದಾರರು ಅಗೆತದ ಕೆಲಸವನ್ನು ಪ್ರಾರಂಭಿಸಿ ನಂತರ ಅದನ್ನು ಸ್ಥಗಿತಗೊಳಿಸಿರುತ್ತಾರೆ.

ಇ) ಬಂದಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಈಗ ಹೆಚ್ಚಿನ ಸಾಮರ್ಥ್ಯದ ಪಂಪುಗಳನ್ನು ಅಳವಡಿಸಿ ಪಾಯದಲ್ಲಿನ ಜಿನುಗು ನೀರನ್ನು ಹೊರಹಾಕಿ. ಕಾಮಗಾರಿಯ ಪ್ರಗತಿಯನ್ನು ಸಾಧಿಸಲು ಗುತ್ತಿಗೆದಾರರಿಗೆ ಕಟ್ಟುನಿಟ್ಟಾಗಿ ಸೂಚಿಸಿದ್ದು, ಸದರಿ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ರೇಣುಕಾ ಏತ ನೀರಾವರಿ ಕಾಲುವೆಯಿಂದ ಪೈಪ್‌ಲೈನ್ ಮೂಲಕ ಹುಲೀಕೆರೆಗೆ ನೀರನ್ನೊದಗಿಸಲು ಕಳೆದ ಎರಡು ವರ್ಷಗಳಿಂದ ಕಾಮಗಾರಿ ಪ್ರಾರಂಭವಾಗಿದ್ದು, ಸದರಿ ಕಾಮಗಾರಿಯು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಗುತ್ತಿಗೆದಾರರು ಕಾಮಗಾರಿಯನ್ನು ಅಪೂರ್ಣ ಹಂತದಲ್ಲಿ ನಿಲ್ಲಿಸಿರುತ್ತಾರೆ.

ಉ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪೂರ್ಣಗೊಳಿಸುವುದು?

ಗುತ್ತಿಗೆದಾರರು ಕಾಮಗಾರಿಯನ್ನು ಅಪೂರ್ಣ ಹಂತದಲ್ಲಿ ನಿಲ್ಲಿಸಿರುತ್ತಾರೆ ಹಾಗೂ ವಿಳಂಬ ನೀತಿಯನ್ನು ಅನುಸರಿಸಿರುತ್ತಾರೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ನೋಟೀಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ. ಟೆಂಡರ್ ನಿಯಮಾವಳಿ ಪ್ರಕಾರ ಗರಿಷ್ಠ ದಂಡ ವಿಧಿಸಿ ನಂತರ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರರ ಆರ್ಥಿಕ ಹೊಣೆಗಾರಿಕೆಯ ಮೇಲೆ ಗುತ್ತಿಗೆಯನ್ನು ಮೊಟಕುಗೊಳಿಸಿ ಬಾಕಿ ಕಾಮಗಾರಿಗಳಿಗೆ ಟೆಂಡರ್ ಕರೆದು ಬೇರೆ ಗುತ್ತಿಗೆದಾರರಿಗೆ ವಹಿಸಿ, ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (117)198
ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಎಸ್.ಆರ್.
ಉತ್ತರಿಸುವವರು : (ಶ್ರೀ.ಜಿ.ಕರುಣಾಕರ ರೆಡ್ಡಿ)
ಮಾನ್ಯ ಕಂದಾಯ ಸಚಿವರು

ಅ) ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.111ರಲ್ಲಿ 20 ಎಕರೆ ಸರ್ಕಾರಿ ಗೋಮಾಳವನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ಸರ್ಕಾರಿ ಜಾಗವನ್ನು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಬಂದಿದ್ದಲ್ಲಿ ಈ ಅಕ್ರಮ ಖಾತೆಯನ್ನು ರದ್ದುಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು (ವಿವರ ನೀಡುವುದು)?

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.111ರಲ್ಲಿ ಒಟ್ಟು 76 ಎಕರೆ ಸರ್ಕಾರಿ ಜಮೀನಿದ್ದು ಈ ಪೈಕಿ 20 ಎಕರೆಯಲ್ಲಿ ಶ್ರೀ ಸಿ.ಆರ್.ಗೋವಿಂದರೆಡ್ಡಿ ಬಿನ್ ರಾಮ್ಮಯ್ಯ ಎಂಬುವವರಿಗೆ 15 ಎಕರೆ ಹಾಗೂ ಶ್ರೀ ಎನ್.ಗೋವಿಂದ ರಾಜು ಬಿನ್ ನಾರಾಯಣಪ್ಪ ಇವರ ಹೆಸರಿಗೆ 5 ಎಕರೆ ಪ್ರದೇಶವನ್ನು ಅಕ್ರಮವಾಗಿ ಕಂದಾಯ ದಾಖಲೆಗಳಲ್ಲಿ ನಮೂದು ತಂದಿದ್ದು, ಸದರಿ ಅಕ್ರಮ ದಾಖಲೆಗಳನ್ನು ರದ್ದು ಪಡಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136(3)ರ ಅಡಿಯಲ್ಲಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಯುತ್ತಿದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (164)199
2. ಸದಸ್ಯರ ಹೆಸರು : ಶ್ರೀ ಎಸ್.ಆರ್.ವಿಶ್ವನಾಥ್
3. ಉತ್ತರಿಸುವವರು : (ಶ್ರೀ ಬಸವರಾಜ್ ಬೊಮ್ಮಾಯಿ)

ಅ ಅರ್ಕಾವತಿ ನದಿಯು ನಂದಿ ಬೆಟ್ಟದಲ್ಲಿ ಹುಟ್ಟಿ, ಮಂಚನಬೆಲೆ ಕಿರು ಅಣೆಕಟ್ಟೆವರೆಗೂ ಹರಿದು ಹೋಗುತ್ತಿದ್ದು, ಇತ್ತೀಚೆಗೆ ಈ ನದಿಯು ಸರಿಯಾದ ನದಿ ಕಾಲುವೆಗಳು ಇಲ್ಲದೆ ಬತ್ತಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅರ್ಕಾವತಿ ನದಿಯು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಉಳಿದ ಅವಧಿಯಲ್ಲಿ ನದಿ ಬತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ ಹಾಗಿದ್ದಲ್ಲಿ, ಇದನ್ನು ಪುನಃಶ್ಚೇತನಗೊಳಿಸುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ?

ಈಗ ಸಧ್ಯಕ್ಕೆ ಯಾವುದೇ ನದಿಯ ಪುನಶ್ಚೇತನಗೊಳಿಸುವ ಕಾರ್ಯ ಸರ್ಕಾರದ ಮುಂದೆ ಇರುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (165)200
2. ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಎಸ್.ಆರ್ (ಯಲಹಂಕ)
3. ವಿಷಯ : ಬೆಂಗಳೂರು ಉತ್ತರ ತಾಲ್ಲೂಕನ್ನು ವಿಸ್ತರಿಸಿಕೊಂಡು ಒಂದು ಮಾಡುವುದು
4. ಉತ್ತರಿಸುವ ಸಚಿವರು :(ಶ್ರೀ.ಜಿ.ಕರುಣಾಕರ ರೆಡ್ಡಿ) ಕಂದಾಯ ಸಚಿವರು

(ಅ) ಯಲಹಂಕ ವಿಧಾನ ಸಭಾ ಕ್ಷೇತ್ರವು ಸುಮಾರು 40 ಕಿ.ಮೀಗಳಿಗಿಂತಲೂ ಉದ್ದವಾಗಿದ್ದು 5 ಹೋಬಳಿಗಳನ್ನೊಳಗೊಂಡ ವಿಧಾನ ಸಭಾ ಕ್ಷೇತ್ರವಾಗಿದೆ. ಇದನ್ನು ಒಂದೇ ತಾಲ್ಲೂಕನ್ನಾಗಿ ಮಾಡುವ ವಿಚಾರ ಸರ್ಕಾರದ ಗಮನದಲ್ಲಿ ಇದೆಯೇ?

ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಲಾಗಿದ್ದು, ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

(ಆ) ಹಾಗಿದ್ದಲ್ಲಿ, ಇದನ್ನು ಒಂದೇ ತಾಲ್ಲೂಕನ್ನಾಗಿ ಘೋಷಣೆ ಮಾಡುವುದು ಯಾವಾಗ; ಹಾಗಿಲ್ಲದಿದ್ದಲ್ಲಿ ಇದಕ್ಕಿರುವ ಅಡಚಣೆಗಳೇನು? ಮಾಹಿತಿ ಒದಗಿಸುವುದು.

– ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ –

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(166)201**
ಸದಸ್ಯರ ಹೆಸರು	:	ಶ್ರೀ ವಿಶ್ವನಾಥ್ ಎಸ್.ಆರ್.
ಉತ್ತರಿಸುವವರು	:	(ಶ್ರೀ.ಜಿ. ಕರುಣಾಕರ ರೆಡ್ಡಿ) ಮಾನ್ಯ ಕಂದಾಯ ಸಚಿವರು.

ಅ) ಸರ್ಕಾರಿ ಜಾಗಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ಕಡುಬಡವರಿಗೆ ಅದೇ ಮನೆಗಳನ್ನು ಸಕ್ರಮಗೊಳಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಸಿ ರಡಿಯಲ್ಲಿ ದಿ:14.04.1998ಕ್ಕೆ ಪೂರ್ವದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆಯನ್ನು ನಿರ್ಮಿಸಿದ್ದು ದಿ:01.01.2002ಕ್ಕೆ ಮುಂಚಿತವಾಗಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಮಾತ್ರ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆ) ಈ ಹಿಂದೆ 94ಸಿ ನಲ್ಲಿ ಅಕ್ರಮ ಕಟ್ಟಡ ಸಕ್ರಮಗೊಳಿಸಲು ಅರ್ಜಿ ಹಾಕದೇ ಇರುವ ಕೆಲವು ಅನಕ್ಷರಸ್ಥ ಬಡವರು ತೊಂದರೆ ಅನುಭವಿಸುತ್ತಿದ್ದು, ಇವರಿಗೆ ಮತ್ತೊಮ್ಮೆ ಅರ್ಜಿ ಹಾಕಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗುವುದೇ;

ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಇ) ಹಾಗಿದ್ದಲ್ಲಿ, ಅದರ ಪೂರ್ಣ ಮಾಹಿತಿಯನ್ನು ಒದಗಿಸುವುದು?

ಉದ್ಭವಿಸುವುದಿಲ್ಲ.

ಸದಸ್ಯರ ಹೆಸರು	:	ಶ್ರೀ ಡಾ:ಸುಧಾಕರ್ ಎಂ.ಸಿ. (ಚಿಂತಾಮಣಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(305)171**
ಉತ್ತರಿಸುವ ಸಚಿವರು	:	(ಶ್ರೀ ಗೂಳಿಹಟ್ಟಿ.ಡಿ.ಶೇಖರ್)

ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ಕತ್ತರಿಗುಪ್ಪೆ ಗ್ರಾಮದ ನೇಕಾರರಿಗೆ ವಸತಿ ಗೃಹ ನಿರ್ಮಾಣ ಷೆಡ್‌ಗಳು ಮಂಜೂರು ಮಾಡಲಾಗಿದೆಯೇ ;

ಇಲ್ಲ

ಆ) ಹಾಗಿದ್ದರೆ, ಮಂಜೂರಾಗಿರುವ ವಸತಿ ಗೃಹ ನಿರ್ಮಾಣ ಷೆಡ್‌ಗಳ ಸಂಖ್ಯೆ ಎಷ್ಟು (ವಿವರ ನೀಡುವುದು) ಹಾಗೂ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ ;

1) ಉದ್ಭವಿಸುವುದಿಲ್ಲ
2) 2007–08 ನೇ ಸಾಲಿನಲ್ಲಿ ಕತ್ತರಿಗುಪ್ಪೆ ಗ್ರಾಮದ 394 ನೇಕಾರರಿಗೆ ನೇಕಾರರ ಆಶ್ರಯ (ವಿಶೇಷ ಉದ್ಯೋಗ ಗುಂಪು) ಯೋಜನೆಯಡಿ ಮನೆಗೆ ಹೊಂದಿಕೊಂಡಂತೆ ಕಾರ್ಯಗಾರ ನಿರ್ಮಿಸಿಕೊಳ್ಳಲು ಪಟ್ಟಿಯನ್ನು ಸಿದ್ಧಪಡಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಇ) ಸಿದ್ಧಪಡಿಸಿದ್ದಲ್ಲಿ, ಆಯ್ಕೆಯಾಗಿರುವ ಎಲ್ಲಾ ಫಲಾನುಭವಿಗಳು ವೃತ್ತಿಯಲ್ಲಿ ನೇಕಾರರೇ;

ಹೌದು

ಈ) ಆಯ್ಕೆಯಾಗಿರುವ ಫಲಾನುಭವಿಗಳು ಈ ಹಿಂದೆ ವಸತಿ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಸರ್ಕಾರದಿಂದ ಸೌಲಭ್ಯ ಪಡೆದಿದ್ದಾರೆಯೇ ;

ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಚಿಂತಾಮಣಿ ರವರಿಗೆ ವರದಿಯನ್ನು ಕಳುಹಿಸಲು ಕೋರಿದ್ದು, ವರದಿಯು ನಿರೀಕ್ಷಣೆಯಲ್ಲಿದೆ

ಉ) ಫಲಾನುಭವಿಗಳನ್ನು ಆಯ್ಕೆ ಮಾಡಿರುವ ಕಾರ್ಯವಿಧಾನ ಹಾಗೂ ಸಿದ್ಧಪಡಿಸಿದ ಪಟ್ಟಿಯನ್ನು ನೀಡುವುದು ?

(1) ನೇಕಾರಿಕೆ ಚಟುವಟಿಕೆಯಲ್ಲಿರುವವರನ್ನು ಗುರುತಿಸಿ, ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ಮಾರ್ಗ ಸೂಚಿಯಂತೆ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ, ಅನುಮೋದನೆಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗುವುದು.
(2) ಚಿಂತಾಮಣಿ ತಾಲ್ಲೂಕಿನ ಕತ್ತರಿಗುಪ್ಪೆ ಗ್ರಾಮದಲ್ಲಿ 2007–08 ನೇ ಸಾಲಿನಲ್ಲಿ ನೇಕಾರರ ಆಶ್ರಯ (ವಿಶೇಷ ಉದ್ಯೋಗ ಗುಂಪು) ಯೋಜನೆಯಡಿ ಗುರುತಿಸಲಾಗಿರುವ ಫಲಾನುಭವಿಗಳ ಪಟ್ಟಿಯನ್ನು ಲಗತ್ತಿಸಿದೆ.

ಯೋಜನೆಯ ಹೆಸರು: ವಿಶೇಷ ಉದ್ಯೋಗ ಗುಂಪು (ನೇಕಾರರು/ಕುಶಲ ಕರ್ಮಿಗಳು)

ವಿಧಾನಸಭಾ ಕ್ಷೇತ್ರದ ಹೆಸರು : ಚಿಂತಾಮಣಿ
ತಾಲ್ಲೂಕು : ಚಿಂತಾಮಣಿ
ಗ್ರಾಮ ಪಂಚಾಯತಿಯ ಹೆಸರು : ಕತ್ತರಿಗುಪ್ಪೆ
ವರ್ಷ : 2007-08

ಫಲಾನುಭವಿಗಳ ಪಟ್ಟಿ

ಕ್ರ ಸಂ.	ಹೆಸರು	ತಂದೆ/ಗಂಡನ ಹೆಸರು	ಗ್ರಾಮದ ಹೆಸರು	ಜಾತಿ/ಉಪಜಾತಿ	ವೃತ್ತಿ	ಫಲಾನುಭವಿಯ ವಾರ್ಷಿಕ ವರಮಾನ
01	ಮುನಿರತ್ನಮ್ಮ	ಮುನಿಕೃಷ್ಣಪ್ಪ	ಕತ್ತರಿಗುಪ್ಪೆ	ಎಸ್.ಸಿ	ಕೈಮಗ್ಗ	6500
02	ವೆಂಕಟೇಶಪ್ಪ	ಗೋರಪ್ಪ	ಕತ್ತರಿಗುಪ್ಪೆ	ಬುಡಗಜಂಗಮ	ಕೈಮಗ್ಗ	6300
03	ಬಿ.ವೆಂಕಟರೆಡ್ಡಿ	ಕೆ.ಸಿ.ಬಯ್ಯಣ್ಣ	ಕತ್ತರಿಗುಪ್ಪೆ	ವಕ್ಕಲಿಗ	ಕೈಮಗ್ಗ	6200
04	ಮಂಜುಳಮ್ಮ	ಚೆನ್ನಾರೆಡ್ಡಿ	ಕತ್ತರಿಗುಪ್ಪೆ	ವಕ್ಕಲಿಗ	ಕೈಮಗ್ಗ	6400
05	ಸುಬ್ರಮಣಿ	ಗಂಗಾರಾಮಯ್ಯ	ಕತ್ತರಿಗುಪ್ಪೆ	ಬುಡಜಂಗಮ	ಕೈಮಗ್ಗ	6800
06	ಎಸ್.ನಾರಾಯಣಪ್ಪ	ಸೀತಪ್ಪ	ಕತ್ತರಿಗುಪ್ಪೆ	ಎಸ್.ಸಿ	ಕೈಮಗ್ಗ	6900
07	ವಿ.ವೆಂಕಟೇಶಪ್ಪ	ಚೆನ್ನವೆಂಕಟರಾಯಪ್ಪ	ಕತ್ತರಿಗುಪ್ಪೆ	ವಕ್ಕಲಿಗ	ಕೈಮಗ್ಗ	6600
08	ಟಿ.ನಾರಾಯಣರೆಡ್ಡಿ	ತಿರುಪತಿರೆಡ್ಡಿ	ಕತ್ತರಿಗುಪ್ಪೆ	ವಕ್ಕಲಿಗ	ಕೈಮಗ್ಗ	6500
7	681aml2007	21/4/2007	M/S.Grasim Industries Ltd,Adrtyanagar Malkhed Road-585,292	Gulbarga Sedam Udgi		284.34 Hectares	NA/Others	
8	733aml2007	25/4/2007	M/S.Ittina Cement Pvt Ltd,723 6th B Cross 3rd block Behind B D A Complex Koramangala- 560,034	Gulbarga Chitapur Margol		2,300.00 Acres	NA/Others Fully Overlap	126AML1992,
9	734aml2007	25/4/2007	M/S.ITTINA CEMENT PVT LTD.NO.723, 6TH B CROSS, IIIRD BLOCK BEHIND B.D.A COMPLEX,KORAMANGALA, BANGALORE-	Gulbarge Chitapur K NAGAON	100	3,700,00 Acres	NA/Others Free	

10	731aml2 007	4/5/2007	M/S.Murli Industries Ltd,101 Jai Bhawani Society Central Avenue Road Wardhman Nagar, Nagpur-440,008	Gulbarga Chitapur Alura		211.00 Hectares	NA/Others Fully Overlap	135APL1995,
11	740aml2 007	11/5/2007	M/S. regency Cements Chemicals Ltd,5-8-356 chirag Ali Lane, Hyderabad- 500,001	Gulbarga Gulbarga Saradgi		915.36 Acres	NA/Others	
12	833aml2 007	8/6/2007	M/S.Genuba,S/o Anneppa Sevalakar Devapur Cross	Gulbarga Shorapur Banchigadd i		2.34 Acres	NA/Others	
13	834aml2 007	8/6/2007	M/S.Vijayalaxmi Mineral industries,Basavagouda S Madigi Patil Managing director Kalladevanahalli Shorapur tq Gulbarga	Gulbarga Shorapur Kaldevanha lli		12.10 Acres	NA/Others	
14	924aml2 007	27/6/2007	M/S.Murli Industries Ltd, 101 Jai Bhawani Society Central Avenue Road Wardhman Nagar, Nagpur-440,008	Gulbarga Chitapur K Chittapur		543390 Hectares	NA/Others Fully Overlap	135APL1995,

15	957AM L2007	10/7/2007	M/S.SHREE CEMENT LTD.P.B.NO. 33, BANGURNAGAR, BEAWAR., BEAWAR- 305,901	Gulbarga Sedam Kodla		1,220.90 Acres	NA/Others	
16	967AM L2007	11/7/2007	Mr.VEERPAKSHI REDDY.S/O PAMPAPATHI REDDY HOUSING BOARD COLONY BEHIND COURT	Gulbarga Chitapur Alooru Khurd		450.00 Acres	NA/Others	
17	968aml2 007	13/7/2007	M/S.Ultra Tech Cement Limited, Andhra Pradesh Cement Works APCW Bhogasamudram Tadipatri Anantapur- 515,415	Gulbarga Sedam Udgi		702.33 Acres	NA/Others Fully Overlap	681AML2007,
18	979aml2 007	16/7/2007	M/S.Arvathreddy,S/oVirupakshredd y Kodla Sedam	Gulbarga Sedam Kodla		1,800.00 Acres	NA/Others Fully Overlap	957AML2007,
19	1691aml 2007	2/8/2007	M/S.Surana Corporation Ltd,No29 Whites Road Roaypettah, Chennai-14.00	Gulbarga Chincholi Bedgapalli		1,000.00 Acres	NA/Others	
20	1692aml 2007	2/8/2007	M/S.Surana Corporation Ltd,No29 Whites Road Roaypettah, Chennai-14.00	Gulbarga Chincholi Garagpalli		1,000.00 Acres	NA/Others Fully Overlap	95APL1993,

21	1744aml 2007	9/8/2007	M/S. Ultra Tech Cement Limited,Cement Works APCW Bogasamudram Tadipatri Ananthapur- 515,415	Culbarga Sedam Udgi		703.23 Acres	NA/others Fully Overlap	2006.147AM L2007,
22	1779aml 2007	16/8/2007	M/S,Shree Cement Limited, P B No33 Bangur Nagar, Beawar- 305,901	Gulbarga Sedam Mogla		1,490.35 Hectares	NA/Others	
23	1790AM L2007	3/9/2007	M/S.DIMOND EXPORTS, 1/26,LAKSHMIPURAM,KU PPAM-517425.CHITTOR DISTRICT.AP	Gulbarga Chincholi Tumkunta		1,110.00 Acres	NA/Others Free	
24	1791AM L2007	3/9/2007	M/S.DIMOND EXPORTS, LAKSHMIPURAM,KUPPA M-517425,CHITTOR DIST.,ANDHRA PRADESH	Gulbarga Chincholi Ganganpalli		500.00 Acres	NA/Others Free	
25	2269aml 200	11/9/2007	M/S.SAGAR CEMENTS LIMITED,D 8-2-472/B/2,ROAD 1.BANJARA HILLS,HYERABAD-500034	Guibarga Chincholi KallurRoad		1,186.00 Acres	NA/Others Fully Overlap	87APL1995,
26	1920aml 200	14/9/2007	M/S.Ba Al Enterprises,No2581 Cahandragiri 13th Main 26th Cross Sector I HSR Layout	Gulbarga Chincholi Keroli		1,450.00 Acres	NA/Others Fully Overlap	

27	1821AM L2007	17/9/2007	M/S.CHETTINAD CEMENT CORPORATION LTD,603,ANNASALAI,RENI SEETHAIHALL BUILDING,	Gulbarga Chinchoii Kallur Road		1,074,48 Acres	NA/Others Fully Overlap	423AML1998 1, 48 1983, 49AML198 APL1983.87A PL 5,83APL 1 983,22
28	2276AM L2007	4/10/2007	M/S.ULTRA TECH CEMENT LTD.ANDHRA PRADESH CEMENT WORKS, BOGASAMUDRAM, TADIPATRI ANANTAPUR, A.P-	Guibarga Sedam Kodla	104	888.17 Acres	NA/Others Free	
29	2443aml 2007	22/10/2007	Mr.krisha udupa, 137 A i coboo Nagar 13th Main 2nd Cross BTM Layout Bangalore 560068	Gulbarga Chincholi Tumkunta		1,110.00 Acres	NA/Others	
30	2444AM L2007	22/10/2007	M/S.SURANA CORPORATION LTD.NO.29, WHITES ROAD, ROAYPETTAH, CHENNAI- 14.00	Gulbarga Chincholi Ganganpalli	23	500.00 Acres	NA/Others Free	
31	2592AM L2007	22/11/2007	M/S.CHINCHOLI CEMENTS PVT LTD.DR.VIKRAM V.PATIL, MANAGING DIRECTOR, HO .NO .4, SHANTHI NAGAR, GULBARGA-	Gulbarga Chincholi NIDAGUN DA	125	1,386.00 Hectares	NA/Others Free	

32	2598AML2007	27/11/2007	M/S.CHINCHOLI CEMENTS PVT LTD.GOUTAM PATIL, DIRECTORE, MIG4, SHANTHINAGAR, M.S.K. MILL ROAD,	Gulbarga Chincholi Bhaktampalli		2,056.00 Acres	NA/Others Free	
33	26AML 2007	3/12/2007	Mrs.SMT D K VANI,NIKETAN CONSULTANTS, 583/A, SRINIVAS NAGAR, 10TH MAIN, 3RD CROSS,	Gulbarga Shorapur Kolihal		200.00 Acres	NA/Others Free	
34	2694AML2007	3/12/2007	Mr.S N MAHESH,S/O T NAGENDRAPPA, DOOR NO 130.2C, WARD NO 30, INNA REDDY COMPOUND,	Gulbarga Shorapur Kolihal	85	436.00 Acres	NA/Others Free	
35	2277AML2007	4/12/2007	M/S.ULTRA TECH CEMENT LTD,ANDHRA PRADESH CEMENT WORKS, BOGASAMUDRAM, TADIPATRI, ANANTAPUR, ANDHRA	Gulbarga Chitapur DIGGANO		1,643.34 Acres	NA/Others Free	
36	2613AML2007	10/12/2007	M/S.AKSHAYA CEMENTS PRIVATE LTD.MENAKEMPAL ARCADE, FLOOR,113,SRI THYAGARAYA RD.TNAGAR ,CHENNAI-600017	Gulbarga Chincholi sangamk		919.00 Acres	NA/Others Fully Overlap	87APL1995,

37	2614AML2007	10/12/2007	M/S.AKSHAYA CEMENTS PRIVATE LTD.MENAKEMPALA ARCADE, I FLOOR,113,SRI THYAGARAYA RD,T NAGAR, CHENNAI-600017	Gulbarga Chincholi Nidugunda		5,720.99 Acres	NA/Others Fully Overlap jg	110APL2007.1920AML2007.69APL1997, 72APL1997.603AML2006,108APL2007,2
38	2614AML2007	10/12/2007	M/S.AKSHAYA CEMENTS PRIVATE LTD.MENAKEMPALA ARCADE, I FLOOR,113,SRI THYAGARAYA RD,T NAGAR,CHENNAI-60001 7	Gulbarga Chincholi Nidugunda		5,720.99 Acres	NA/Others Fully Overlap	110APL2007.1920AML2007.69APL1997, 72APL1997.603AML2006,108APL2007,2
39	2615aml2007	10/12/2007	M/S.AKSHAYA CEMENTS P LTD.S V Subramanyam Managing Director Manekempala Areccede I Floor 113, Tajaroye Rd.,T Nagar Chennai5000	Gulbarga Chincholi Karachkhed		3,086.25 Acres	NA/Others	
40	2697aml2007	17/12/2007	Mr. Sri Rajkumar,S/o Veeresbetta paltl Yallaling Nilaya Vidyanagar Sedam Tq	Gulbarga Sedam Konapur		39.00 Acres	NA/Others	

41	2691AM L2007	27/12/2007	M/S.DALMIA CEMENT BHARAT LTD.H.O 11TH/12TH FLOORS, HANSALAYA BARAKHAMBA ROAD,	Gulbarga Sedam Malkhed huda		2,400.00 Acres	NA/Others Free	
42	2692AM L2007	27/12/2007	M/S.DALMIA CEMENT BHARAT LTD.H.O 11TH/12TH FLOORS, HANSALAYA, |15 BARAKHAMBA ROAD,	Gulbarga Chitapur Mogla		2,400.00 Acres	NA/Others Free	
43	2701AM L2007	28/12/2007	M/S.SAGAR CEMENTS LIMITED,D.NO.8-2-472/B/2, ROAD NO 1 BANJARA HILLS, HYDERABAD., HYDERABAD-	Gulbarga Chincholi Chatarsal		1,790.00 Acres	NA/Others Free	

Government of Karnataka
Department of Mines and Geology
Mining Application Details of Year 2008

22/07/2008
District- Gulbarga

Sl. No	Application Number	Application Date	Name of the Applicant with full Address	District ,Taluk & Village Name	Survey No	Area &Unit	Notification No & Status	Overlapping Detail
1	8aml2008	7/1/2008	M/S.Rungtu Mines Ltd,32 Shahidnagar Bhnbaneswara- 75 1,007	Gulbarga Chitapur Dongaon		910.58 Hectares	NA/Others	
2	338aml2008	12/3/2008	Mr.Sri B T Sridhar,4/3,V BlkJedhalli Rajajinagar.Blore-10.00	Gulbarga Gulbarga Kalbenur		877.0 Acres	NA/Others	
3	998aml2008	19/9/2009	Mr.Sri Bharath Simha M D,S/o Durgaslimha Myageri, 2581/13th Cross,26th Main.HSR Layout.1 Sector Blore- 34.00	Gulbarga Sedam Khanderayanpalli		50.00 Acres	NA/Others	
4	413aml2008	17/3/2008	M/S.Sahyadri Industries Ltd.Swastik House,39/D, Guttekdi,J N Marg.Pune- 411,037	Gulbarga Sedam Handerki		1,301.00 Acres	NA/Others	

5	434aml2 008	27/3/2008	M/S.P Suresh Minerals Industries,Red and HO,Belgaum,C/o A A Srishail 2,1 Main,Nagarabavi Main Rd,Mudalapalya,Blore- 72.00	Gulbarga Shorapur Kaldevanhalli	222/1	41.10 Acres	NA/Others	
6	539AA ML2008	9/4/2008	M/S.TRIMEX INDUSTRIES LTD;NO.1057/F1, 45, JUBILEE HILLS, HYDRABAD- 33.00	Gulbarga Chincholi HUDINEHALL I		680.00 Hectares	NA/Others	
7	736AM L2008	9/5/2008	M/S.DALMIA CEMENT BHARAT LTD.40, 11TH AND 12TH CROSS,HAARSALYA, 15B BAROSTHKUBA RAOD, NEW DELHI., DELHI- 110,001	Gulbarga Sedam Konkanhalli		995.97 Hectares	NA/Others	
8	998ami2 008	18/6/2008	M/S.Vani Vilas Mines and Minerals,302,RVAprts,31,Pipline, 11th Cross Malleshwaram .Blore- 3.00	Gulbarga Shorapur Hagratgi		1,800.00 Acres	NA/Others	
9	100aml2 008	23/6/2008	M/S.Purna Cement P Ltd ,4, 1Main,60ft Rd,Amarjyothi Layout, Sanjaynagar,Blore- 94.00	Gulbarga Shorapur Dyamanhal		2,000,00 Acres	NA/Othtere s	

ಗುಲ್ಬರ್ಗಾ ಜಿಲ್ಲೆ, ಸೇಡಂ/ಚಿತ್ತಾಪುರ ತಾಲ್ಲೂಕು ಗಣಿ ಗುತ್ತಿಗೆಗಳು (ML) **ಅನುಬಂಧ-II**

ಕ್ರ ಸಂ.	ಹೆಸರು	ಎಂ. ಎಲ್ ಸಂಖ್ಯೆ	ಗ್ರಾಮ	ತಾಲ್ಲೂಕು	ಖನಿಜ	ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ಅಮಲ್ದಾರಿ ದಿನಾಂಕ	ಅವಧಿ	ಷರಾ
1	ಮೆ: ಎಸಿಸಿ ಸಿಮೆಂಟ್ ಲಿ., ನಂ.121, ಮಹರ್ಷಿ ರಸ್ತೆ, ಮುಂಬಯಿ.	1853	ಇಂಗಲಗಿ ರಾವೂರ್	ಚಿತ್ತಾಪುರ	ಸುಣ್ಣದ ಕಲ್ಲು & ಕ್ಲೇ	471.03	12/02/1982	20ವರ್ಷ	–
2	ಮೆ: ಎಸಿಸಿ ಸಿಮೆಂಟ್ ಲಿ.,ನಂ.121 ಮಹರ್ಷಿ ರಸ್ತೆ ಮುಂಬಯಿ.	1949	ಇಂಗಲಗಿ	ಚಿತ್ತಾಪುರ	ಸುಣ್ಣದ ಕಲ್ಲು & ಕ್ಲೇ	471.03	19/07/1984	20ವರ್ಷ	–
3	ಮೆ: ಸಿಮೆಂಟ್ ಕಾರ್ಪೊರೇಷನ್ ಲಿ., ನಂ.59, ನೆಹರೂ ಪ್ಲೇಸ್, ನ್ಯೂಡೆಲ್ಲಿ-110 019	2015	ಸೇಡಂ	ಸೇಡಂ	ಸುಣ್ಣದ ಕಲ್ಲು	118.64	21/05/1986	20ವರ್ಷ	–
4	ಮೆ:ಕೆಸೂರಾಂ ಸಿಮೆಂಟ್ಸ್ ಲಿ, ಸೇಡಂ	2417	ಇಂಜೆಪಲ್ಲಿ ಸೇಡಂ	ಸೇಡಂ	ಸುಣ್ಣದ ಕಲ್ಲು	897.86	9/05/2003	20ವರ್ಷ	–

5	ಮೆ: ಜವಾರ್ ಸಿಮೆಂಟ್ಸ್ ಲಿ., ನಂ.ಬಿ/105, ಕಲ್ಪತರು ಪ್ಲಾಜ, 224, ಭವಾನಿ ಕೇಟ್ ಪುಣೆ-411042.	2092	ಬರಿಕೂರು	ಗುಲ್ಬರ್ಗಾ	ಸುಣ್ಣದ ಕಲ್ಲು	329.34	01/10/1985	10ವರ್ಷ	ನವೀಕರಣ ಅರ್ಜಿ ಸಲ್ಲಿಸಿದ್ದಾರೆ.

<u>ಗುಲ್ಬರ್ಗಾ ಜಿಲ್ಲೆಯ ಅನ್ವೇಷಣಾ ಲೈಸನ್ಸ್‌ಗಳು (PL)</u>

ಕ್ರ ಸಂ.	ಹೆಸರು	ಎಂ. ಎಲ್ ಸಂಖ್ಯೆ	ಗ್ರಾಮ	ತಾಲ್ಲೂಕು	ಖನಿಜ	ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ಅಮಲ್ದಾರಿ ದಿನಾಂಕ	ಅವಧಿ	ಷರಾ
1	ಮೆ: ದಾಲ್ಮಿಯ ಸಿಮೆಂಟ್ಸ್ ಲಿ., 11ನೇ ಮಹಡಿ, ಹಂಸಾಲಯ, 15 ಬರಕಾಂಬ ರಸ್ತೆ, ನ್ಯೂಡೆಲ್ಲಿ-110019	3363	ಬೀರನಹಳ್ಳಿ ಮುಂತಾದ ಗ್ರಾಮಗಳು	ಸೇಡಂ	ಸುಣ್ಣದ ಕಲ್ಲು, ಕ್ಲೇ & ಶೇಲ್	1219.77	21/08/2007	2ವರ್ಷ	–

2	ಶ್ರೀ ಸಿಮೆಂಟ್ಸ್ ಲಿ., ನಾಗೂರನಗರ, ಬೀದರ್, ಬೀವಾರ್–90.	3364	ಘರತಾಬಿಂದ್ ಬೆಳವಾಡ ಮುಂತಾದ ಗ್ರಾಮಗಳು	ಗುಲ್ಬರ್ಗಾ	ಸುಣ್ಣದ ಕಲ್ಲು	1750.00	20/11/2007	2ವರ್ಷ	–
3	ದಿ ಇಂಡಿಯಾ ಸಿಮೆಂಟ್ಸ್ ಲಿ., 'ದುನ್ ಕಟ್ಟಡ', 827, ಅನ್ನಾ ಸಾಲೈ, ಸೇಡಂ–585 222.	3365	ಗಾಣಾಪುರ, ಬುರಗಪಲ್ಲಿ ಮುಂತಾದ ಗ್ರಾಮಗಳು	ಚಿಂಚೋಳಿ	ಸುಣ್ಣದ ಕಲ್ಲು	1298.28	07/12/2007	2ವರ್ಷ	–
4	ಮೆ: ಕೆಸೂರಾಂ ಇಂಡಸ್ಟ್ರೀಸ್ ಲಿ., ಸೇಡಂ–585 222.	3367	ಸೇಡಂ ಗ್ರಾಮ	ಸೇಡಂ	ಸುಣ್ಣದ ಕಲ್ಲು	5566.61	11/06/2008	2ವರ್ಷ	–

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (411) 212
ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
ಉತ್ತರಿಸುವ ಸಚಿವರು : (ಶ್ರೀ ಎಸ್.ಸುರೇಶ್ ಕುಮಾರ್)
ಪೌರಾಡಳಿತ ಸಚಿವರು

ಅ ಬೀದರ್ ಜಿಲ್ಲಾಧಿಕಾರಿಗಳು ಬೀದರ್ ನಗರದಲ್ಲಿ ರಸ್ತೆಗಳ ಅಗಲೀಕರಣಕ್ಕಾಗಿ ಎಷ್ಟು ಕಟ್ಟಡಗಳನ್ನು ಕೆಡವುವಂತೆ ಆದೇಶ ನೀಡಿದ್ದಾರೆ (ಪ್ರತಿ ಪ್ರದೇಶದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು);

ಬೀದರ್ ನಗರದಲ್ಲಿ 866 ಒತ್ತುವರಿ ಪ್ರಕರಣಗಳನ್ನು ತೆರವುಗೊಳಿಸಲಾಗಿದೆ. ಈ ಪೈಕಿ 8 ಪ್ರಕರಣಗಳಲ್ಲಿ ಒಡೆದು ಹಾಕಲು ನಗರಸಭೆಯಿಂದ ಆದೇಶ ನೀಡಲಾಗಿದೆ. ಉಳಿದ 858 ಪ್ರಕರಣಗಳಲ್ಲಿ ನಗರಸಭೆ, ಬೀದರ್ ವತಿಯಿಂದ ನಿಯಮಾವಳಿಯಂತೆ ಅತಿಕ್ರಮಣದಾರರಿಗೆ ನೋಟೀಸ್ ನೀಡಲಾಗಿರುತ್ತದೆ. ಅತಿಕ್ರಮಣದಾರರಿಂದ ಒತ್ತುವರಿಯಾಗಿರುವ ಜಾಗವನ್ನು ಗುರುತು ಮಾಡಲಾಗಿರುತ್ತದೆ ಹಾಗೂ ಅತಿಕ್ರಮಣದಾರರು ಗುರುತು ಮಾಡಿರುವ ಜಾಗವನ್ನು ಸ್ವಇಚ್ಛೆಯಿಂದ ತೆರವುಗೊಳಿಸಿರುತ್ತಾರೆ. ತೆರವುಗೊಳಿಸಿರುವ ಜಾಗದಲ್ಲಿನ ಅವಶೇಷಗಳನ್ನು ನಗರಸಭೆಯಿಂದ ತೆಗೆದು ಹಾಕಲಾಗಿರುತ್ತದೆ.

ಆ ಇದಕ್ಕಾಗಿ ಕಟ್ಟಡದ/ಮನೆಯ ಮಾಲಿಕರುಗಳಿಗೆ ಪರಿಹಾರವನ್ನೇನಾದರೂ ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾರ ಯಾರಿಗೆ ಎಷ್ಟೆಷ್ಟು ಪರಿಹಾರವನ್ನು ನೀಡಲಾಗಿದೆ (ಹೆಸರು ವಿವರ ಒದಗಿಸುವುದು);

ಅಧಿಕೃತ ಕಟ್ಟಡಗಳನ್ನು ಮಾತ್ರ ತೆರವುಗೊಳಿಸಿರುವುದರಿಂದ ಕಟ್ಟಡದ/ಮನೆಯ ಮಾಲೀಕರುಗಳಿಗೆ ಯಾವುದೇ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

ಇ ರಸ್ತೆಯ ಅಗಲೀಕರಣದ ಹೆಸರಿನಲ್ಲಿ ಕಟ್ಟಡಗಳನ್ನು ಕೆಡವಿದ್ದು ಪರ್ಯಾಯ ವ್ಯವಸ್ಥೆಯನ್ನು ಮಾಡುವಲ್ಲಿ ವಿಳಂಬ ಮಾಡುತ್ತಿರುವುದು ಹಾಗೂ ಈಗ ಮಳೆಗಾಲ ಪ್ರಾರಂಭವಾಗಿರುವುದರಿಂದ ಇಲ್ಲಿನ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ತೊಂದರೆಯನ್ನು ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ತೆರವು ಮಾಡಿದವರಲ್ಲಿ ಪರ್ಯಾಯ ವ್ಯವಸ್ಥೆಯಾಗಿ ನಗರಸಭೆ ವತಿಯಿಂದ ಸುಮಾರು 29 ಮಳಿಗೆಗಳನ್ನು ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಕಡಿಮೆ ಠೇವಣಿ ಹಾಗೂ ಬಾಡಿಗೆ ನಿಗದಿ ಮಾಡಿ ನೀಡಲಾಗಿದೆ. ಪೂರ್ಣ ಮನೆ ಕಳೆದುಕೊಂಡ ಬಡವರಿಗೆ ಆಶ್ರಯ ಯೋಜನೆಯಡಿಯಲ್ಲಿ 108 ಮನೆಗಳನ್ನು ನೀಡಲಾಗಿದೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಈ ಇಲ್ಲಿಯವರೆವಿಗೆ ಯಾವ ಯಾವ ರಸ್ತೆಗಳನ್ನು ಅಗಲೀಕರಣ ಮತ್ತು ದುರಸ್ತಿ ಮಾಡಲಾಗಿದೆ; ಹಾಳಾಗಿರುವ ಎಷ್ಟು ಚರಂಡಿಗಳನ್ನು ದುರಸ್ತಿ ಮಾಡಲಾಗಿದೆ.

1) ಅಂಬೇಡ್ಕರ್ ವೃತ್ತದಿಂದ ಗವಾನ್ ವೃತ್ತದವರೆಗಿನ ರಸ್ತೆ
2) ನಯಾ ಕಮಾನದಿಂದ ಚೌಬಾರದವರೆಗಿನ ರಸ್ತೆ
3) ಮಹಾವೀರ ಸರ್ಕಲ್‌ನಿಂದ ಎ.ಪಿ.ಎಂ.ಸಿ.ವರೆಗಿನ ರಸ್ತೆ
4) ಬೊಮ್ಮಗೊಂಡೇಶ್ವರ ವೃತ್ತದಿಂ ಬಿ.ಬಿ.ವಿ. ಕಾಲೇಜ್‌ವರೆಗಿನ ರಸ್ತೆ
5) ಸ್ಟೇಡಿಯಂ ರಸ್ತೆ
6) ಕೆ.ಹೆಚ್.ಬಿ. ಕಾಲೋನಿಯ ರಸ್ತೆ- ಇವುಗಳ ಅಗಲೀಕರಣ ಮತ್ತು ಚರಂಡಿ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(448) 213**
ಸದಸ್ಯರ ಹೆಸರು	:	**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**
ಉತ್ತರಿಸುವ ಸಚಿವರು	:	**(ಶ್ರೀ ಎಸ್.ಸುರೇಶ್) ಕುಮಾರ್ ಪೌರಾಡಳಿತ ಸಚಿವರು**

1 ಭಾಲ್ಕಿ ಪುರಸಭೆಯಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ; ಇದಕ್ಕೆ ಪ್ರತಿ ವರ್ಷ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಕುಡಿಯುವ ನೀರು ರಸ್ತೆ ಅಭಿವೃದ್ಧಿ, ವಿದ್ಯುಧೀಕರಣ ಮತ್ತು ಚರಂಡಿ ಕಾಮಗಾರಿಗಳಿಗಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

2005–06 – ರೂ.62.90 ಲಕ್ಷಗಳು

2006–07 – ರೂ.137.72 ಲಕ್ಷಗಳು

2007–08 – ರೂ.45.70 ಲಕ್ಷಗಳು

2 ಪ್ರಸಕ್ತ ವರ್ಷದಲ್ಲಿ ಈ ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಯೋಜನೆ ರೂಪಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ; ಇದಕ್ಕೆ ಅಗತ್ಯವಿರುವ ಹಣವೆಷ್ಟು; ಈ ಪೈಕಿ ಇಲ್ಲಿಯವರೆವಿಗೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ; ಇದರಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;

ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. ಆದರೆ, ಪ್ರಸಕ್ತ ವರ್ಷದಲ್ಲಿ ಎಸ್.ಎಫ್.ಸಿ. ಯೋಜನೆ ಅಡಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ರೂ.302.88 ಲಕ್ಷ ಹಣ ನಿಗಧಿಪಡಿಸಿದ್ದು, ಮಾಸಿಕವಾಗಿ ರೂ.25.24 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ.

ಅಲ್ಲದೆ 12ನೇ ಹಣಕಾಸಿನ ಯೋಜನೆ ಅಡಿಯಲ್ಲಿ ರಸ್ತೆ ಹಾಗೂ ಸೇತುವೆಗಳ ದುರಸ್ತಿಗಾಗಿ ರೂ.13.00 ಲಕ್ಷಗಳ ಕ್ರಿಯಾ ಯೋಜನೆ ಅಡಿ ರೂ.6.70 ಲಕ್ಷ ಬಿಡುಗಡೆ ಮಾಡಲಾಗಿರುತ್ತದೆ ಮತ್ತು ರೂ.5.40 ಲಕ್ಷಗಳಲ್ಲಿ ಘನತ್ಯಾಜ್ಯ ವಸ್ತುಗಳ ಉಪಕರಣಗಳನ್ನು ಖರೀದಿಸಲು ಕ್ರಮ ಜರುಗಿಸಲಾಗಿದೆ.

3 ಈ ಪುರಸಭೆಯ ವ್ಯಾಪ್ತಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳು ಸಾಗದೇ ಇರಲು ಸಿಬ್ಬಂದಿ ಕೊರತೆಯೂ ಕಾರಣವೆಂಬುದು ಸರ್ಕಾರಕ್ಕೆ ತಿಳಿದಿದೆಯೇ;

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

4 ಹಾಗಿದ್ದಲ್ಲಿ, ಈ ಪುರಸಭೆಗೆ ಎಷ್ಟು ಹುದ್ದೆಗಳು ಮಂಜೂರಾಗಿವೆ; ಈ ಪೈಕಿ ಎಷ್ಟು ಹುದ್ದೆಗಳು ಖಾಲಿ ಇವೆ; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ. ಸದರಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗುವುದು.

ಅನುಬಂಧ-1

ಹುದ್ದೆಗಳ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಮುಖ್ಯಾಧಿಕಾರಿ	1	1	0
ಪರಿಸರ ಅಭಿಯಂತರರು	1	1	0
ಲೆಕ್ಕ ಅಧೀಕ್ಷಕರು	1	0	1
ಕಛೇರಿ ವ್ಯವಸ್ಥಾಪಕರು	1	0	1
ಅಕೌಂಟೆಂಟ್	1	0	1
ಕಿರಿಯ ಅಭಿಯಂತರರು	2	0	2
ಹಿರಿಯ ಆರೋಗ್ಯ ನಿರೀಕ್ಷಕರು	1	0	1
ಪ್ರಥಮ ದರ್ಜೆ ಸಹಾಯಕರು	2	0	2
ಸಮುದಾಯ ಸಂಘಟನಾ ಅಧಿಕಾರಿ	1	0	1
ಶೀಘ್ರಲಿಪಿಗಾರರು	1	0	1
ಜ್ಯೂನಿಯರ್ ಪ್ರೋಗ್ರಾಮರ್	1	0	1
ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು	1	1	0
ವಾಟರ್ ಸಪ್ಲೈ ಆಪರೇಟರ್	4	4	0

ಕಂಪ್ಯೂಟರ್ ಆಪರೇಟರ್	2	0	2
ಕಿರಿಯ ಆರೋಗ್ಯ ನಿರೀಕ್ಷಕರು	2	0	2
ಸಮುದಾಯ ಸಂಘಟಕರು	1	1	0
ದ್ವಿತೀಯ ದರ್ಜೆ ಸಹಾಯಕರು	3	3	0
ಕರವಸೂಲಿಗಾರರು	2	2	0
ವಾಹನ ಚಾಲಕರು	3	0	3
ಸಹಾಯಕ ವಾಟರ್ ಸಪ್ಲೈ ಆಪರೇಟರ್	4	4	0
ಪ್ಲಂಬರ್	1	0	1
ಸ್ಯಾನಿಟರಿ ಸೂಪರ್‌ವೈಸರ್	2	0	2
ಸೀನಿಯರ್ ವಾಲ್ವ್‌ಮೆನ್	2	0	2
ಪೌರಕಾರ್ಮಿಕರು	35	14	21
ಅಟೆಂಡರ್	3	1	2
ಲೋಡರ್ಸ್	8	0	8
ಕ್ಲೀನರ್ಸ್	2	0	2
ಗಾರ್ಡನರ್	1	2	0
ಹೆಲ್ಪರ್/ವಾಟರ್ ಸಪ್ಲೈ ವಾಲ್ವ್‌ಮೆನ್	8	0	8
ಒಟ್ಟು	**97**	**34**	**64**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :**(449)214**
ಮಾನ್ಯ ಸದಸ್ಯರ ಹೆಸರು :**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**
ಉತ್ತರಿಸುವ ಸಚಿವರು :**(ಶ್ರೀ ಜಿ.ಜನಾರ್ಧನ ರೆಡ್ಡಿ)**
:**ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು**

ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ; ಈ ತಾಣಗಳ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮಗಳನ್ನು ರೂಪಿಸಿದೆ;

ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಾರಂಜಿ ಜಲಾಶಯ ಪ್ರದೇಶವನ್ನು ಪ್ರವಾಸಿ ತಾಣವೆಂದು ಗುರುತಿಸಲಾಗಿದೆ. ಈ ಜಲಾಶಯದ ಬಳಿ ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ, ಇತ್ಯಾದಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ಪ್ರವಾಸಿ ತಾಣಗಳು ಯಾವ ಯಾವ ಅಭಿವೃದ್ಧಿಗೆ ಪ್ರತಿ ವರ್ಷ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಈವರೆವಿಗೆ ಈ ಪ್ರದೇಶದ ಅಭಿವೃದ್ಧಿಗಾಗಿ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ಇ) ಈ ಪ್ರವಾಸಿ ತಾಣಗಳ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ(ಪೂರ್ಣ ವಿವರಗಳನ್ನು ಒದಗಿಸುವುದು)

ನಿವೇಶನದ ಲಭ್ಯತೆ ಇಲ್ಲದಿದ್ದರಿಂದ ಈ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದಿಲ್ಲ

ಈ) ಪ್ರಸಕ್ತ ಸಾಲಿನಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ ಮತ್ತು ಇದಕ್ಕೆ ಎಷ್ಟು ಹಣವನ್ನು ವೆಚ್ಚ ಮಾಡಲಿದೆ;

ಪ್ರಸಕ್ತ ಸಾಲಿನಲ್ಲಿ ಕಾರಂಜಿ ಡ್ಯಾಮ್ ಪ್ರದೇಶದಲ್ಲಿ ಸಂಗೀತ ಕಾರಂಜಿ, ಆಂಪಿ ಥಿಯೇಟರ್, ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ, ವಾಹನ ನಿಲ್ದಾಣ, ದೀಪಾಲಂಕಾರ ಮತ್ತು ಶೌಚಾಲಯಗಳನ್ನು ನಿರ್ಮಿಸಲು ರೂ.157.04ಲಕ್ಷ ಗಳನ್ನು ಕಾದಿರಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :(450)215
2) ಸದಸ್ಯರ ಹೆಸರು :ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)
3) ಉತ್ತರಿಸುವ ಸಚಿವರು :(ಡಾ: ವಿ.ಎಸ್.ಆಚಾರ್ಯ)
:ಗೃಹ ಸಚಿವರು

* * *

ಅ) ಬೀದರ್ ಜಿಲ್ಲೆಯ ಎಸ್.ಪಿ. ಕಛೇರಿಯೂ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು? (ಹುದ್ದೆವಾರು ವಿವರಗಳನ್ನು ಒದಗಿಸುವುದು).

ಬೀದರ್ ಜಿಲ್ಲೆಯ ಎಸ್.ಪಿ. ಕಛೇರಿಯೂ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಿಗೆ ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ 1774. (ಹುದ್ದೆವಾರು ವಿವರಗಳನ್ನು ಅನುಬಂಧ "ಅ" ನಲ್ಲಿ ನೀಡಲಾಗಿದೆ)

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ.

ಈ ಪೈಕಿ 1720 ಎಷ್ಟು ಹುದ್ದೆಗಳು ಭರ್ತಿಯಾಗಿವೆ.

ಇ) ಎಷ್ಟು ಹುದ್ದೆಗಳು ಯಾವ ಅವಧಿಯಿಂದ ಖಾಲಿ ಇವೆ.

51 ಹುದ್ದೆಗಳು 2008 ರಿಂದ ಹಾಗೂ 3 ಹುದ್ದೆಗಳು 2007 ರಿಂದ ಖಾಲಿ ಇರುತ್ತವೆ. (ವಿವರಗಳನ್ನು ಅನುಬಂಧ "ಅ" ನಲ್ಲಿ ನೀಡಲಾಗಿದೆ)

ಈ) ಬೀದರ್ ಜಿಲ್ಲೆಯ ಗಟಿ ಭಾಗದಲ್ಲಿ ಬರುತ್ತಿರುವ ಜಿಲ್ಲೆಯಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಕಾನೂನು ಸುವ್ಯವಸ್ಥೆಯ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಬೀದರ್ ಜಿಲ್ಲೆಯಲ್ಲಿ ಖಾಲಿ ಇರುವ 1 ಆರ್.ಪಿ.ಐ. ಸಶಸ್ತ್ರ, 1 ಪಿ.ಐ. (ನಿಸ್ತಂತು), ಮತ್ತು 1 ಪಿ.ಐ.(ಎಫ್.ಪಿ.ಬಿ.) ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಬೇಕಾಗಿದ್ದು, ಅರ್ಹ ಅಭ್ಯರ್ಥಿಗಳು ಇಲ್ಲದಿರುವ ಕಾರಣ ಮುಂಬಡ್ತಿಯನ್ನು

ನೀಡಲಾಗಿರುವುದಿಲ್ಲ. ಅರ್ಹ ಅಭ್ಯರ್ಥಿಗಳು ದೊರಕಿದ ಕೂಡಲೇ ಮುಂಬಡ್ತಿಯ ಮೂಲಕ ಸದರಿ ಹುದ್ದೆಗಳನ್ನು ತುಂಬಲಾಗುವುದು. ಹಾಗೂ ಖಾಲಿ ಇರುವ ಸಿಪಿಸಿ/ಮಪಿಸಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು.

ಉ) ಕಳೆದ 3 ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಗೆ ಎಷ್ಟು ಹಣವನ್ನು ಒದಗಿಸಲಾಗಿತ್ತು; ಈ ಪೈಕಿ ಎಷ್ಟು ಹಣವನ್ನು ಯಾವ ಯಾವ ಕಾರ್ಯಗಳಿಗಾಗಿ ವೆಚ್ಚ ಮಾಡಲಾಗಿದೆ (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಕಳೆದ 3 ವರ್ಷಗಳಲ್ಲಿ 2005-06 ರಿಂದ 2007-08ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಪೊಲೀಸ್, ಇಲಾಖೆಯು ಬಿಡುಗಡೆ ಮಾಡಿರುವ ವಿವರಗಳನ್ನು ಅನುಬಂಧ-"ಅ" ನಲ್ಲಿ ನೀಡಲಾಗಿದೆ.

ಊ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಮತ್ತು ಆಧುನೀಕರಣ ಕಾರ್ಯಗಳಿಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು. ಪ್ರಸಕ್ತ ಸಾಲಿನಲ್ಲಿ ಈ ದಿಸೆಯಲ್ಲಿ ಯಾವಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು. (ಕ್ಷೇತ್ರವಾರು ವಿವರ ಒದಗಿಸುವುದು).

ಪ್ರಸಕ್ತ 2008-09ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆ ಮಾಡಿರುವ ಹಣದ ವಿವರಗಳನ್ನು ಅನುಬಂಧ – "ಇ" ನಲ್ಲಿ ನೀಡಲಾಗಿದೆ.

ಅನುಬಂಧ-ಅ (A)

ಕ್ರಮ ಸಂಖ್ಯೆ	ಹುದ್ದೆಗಳು	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ	ಯಾವ ಅವಧಿಯಿಂದ ಖಾಲಿ ಇದೆ
1.	ಪೊಲೀಸ್ ಅಧೀಕ್ಷಕರು	01	01	0	0
2.	ಹೆಚ್ಚುವರಿ ಪೊಲೀಸ ಅಧೀಕ್ಷಕರು	01	01	0	0
3.	ಪೊಲೀಸ ಉಪಾಧೀಕ್ಷಕರು, (ಸಿವಿಲ್)	03	03	0	0
4.	ಪೊಲೀಸ್ ನಿರೀಕ್ಷಕರು (ಸಿವಿಲ್)	16	15	01	2008
5.	ಪಿ.ಎಸ್.ಐ./ಮ.ಪಿ.ಎಸ್.ಐ.	46	44	2	
6.	ಎ.ಎಸ್.ಐ./ಮ.ಎ.ಎಸ್.ಐ.	68	67	1	2004

7.	ಸಿ.ಹೆಚ್.ಸಿ/ಮ.ಹೆಚ್.ಸಿ.	285	279	06	
8.	ಸಿ.ಪಿ.ಸಿ/ಮ.ಪಿ.ಸಿ	912	895	17	2008
9.	ಪೊಲೀಸ್ ಉಪಾಧೀಕ್ಷಕರು, (ಡಿ.ಎ.ಆರ್)	01	01	0	
10.	ಆರ್.ಪಿ.ಐ	02	01	01	2005
11.	ಆರ್.ಎಸ್.ಐ	05	03	02	2007
12.	ಎ.ಆರ್.ಎಸ್.ಐ	10	10	0	
13.	ಎ.ಹೆಚ್.ಸಿ.	46	46	0	
14.	ಎ.ಪಿ.ಸಿ.	295	285	10	2008
15.	ಪೊಲೀಸ್ ನಿರೀಕ್ಷಕರು (ನಿಸ್ತಂತು)	01	0	01	2008
16.	ಪಿ.ಎಸ್.ಐ	04	01	03	2008
17.	ಎ.ಎಸ್.ಐ	08	02	06	2008
18.	ಹೆಚ್.ಸಿ.	10	10	0	
19.	ಪಿ.ಸಿ	09	08	01	2008
20.	ಪಿ.ಐ (ಎಫ್‌ಪಿಬಿ)	01	00	1	2000
21.	ಸಹಾಯಕ ಆಡಳಿತಾಧಿಕಾರಿಗಳು	01	01	0	
22.	ಶಾಖಾಧೀಕ್ಷಕರು,	03	03	0	
23.	ಪ್ರ.ದ.ಸ.	08	08	0	
24.	ದ್ವಿ.ದ.ಸ.	13	12	01	2008
25.	ಶೀಘ್ರಲಿಪಿಗಾರರು	02	02	0	
26.	ಬೆರಳಚ್ಚುಗಾರರು	03	03	0	
27.	ದಲಾಯತ್	04	03	01	2008
28.	ಪೂರ್ಣಕಾಲಿಕ ಜಾಡುಮಾಲಿಗಳು	04	04	0	
29.	ಕುಕ್ಕ	01	01	0	
30.	ಸ್ಕಾವೇಂಜರ್ (ಜಾಡುಮಾಲಿಗಳು)	01	01	0	
31.	ವೈದ್ಯಾಧಿಕಾರಿಗಳು	01	01	0	
32.	ಫಾರ್ಮಾಶಿಷ್ಟ್	01	01	0	
33.	ದಾಯಿಸ್	01	01	0	

34.	ದಲಾಯತ್	02	02	0	
35.	ಪೂರ್ಣಕಾಲಿಕ ಜಾಡುಮಾಲಿಗಳು ಸಾದಿಲ್ವಾರು ವೆಚ್ಚದಿಂದ	05	05	0	
	ಒಟ್ಟು	**1774**	**1720**	**54**	

ಅನುಬಂಧ "ಆ"

ಅಭಿವೃದ್ಧಿ ಕಾರ್ಯಗಳಿಗೆ ಈ ಕೆಳಗಿನಂತೆ ಅನುದಾನ ವೆಚ್ಚ ಮಾಡಲಾಗಿದೆ.

1. ಸಂಚಾರ ಸುಧಾರಣೆಗಾಗಿ:

ಸಂಚಾರ ಸುಧಾರಣೆಗಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿರುತ್ತದೆ.

ಎ) 2005-06ನೇ ಸಾಲಿನಲ್ಲಿ ರೂ. 4.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

(ಬೀದರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.1.20 ಲಕ್ಷ ಭಾಲ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ. 0.70 ಲಕ್ಷ, ಹುಮನಾಬಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ 0.70 ಲಕ್ಷ, ಬಸವಕಲ್ಯಾಣಕ್ಕಾಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ. 0.70 ಲಕ್ಷ ಮತ್ತು ಔರಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ. 0.70 ಲಕ್ಷ)

2006-07ನೇ ಸಾಲಿನಲ್ಲಿ ರೂ. 6.45 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

(ಬೀದರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.2.00 ಲಕ್ಷ, ಭಾಲ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.1.00 ಲಕ್ಷ, ಹುಮನಾಬಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.1.35 ಲಕ್ಷ, ಬಸವಕಲ್ಯಾಣ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.1.20 ಲಕ್ಷ, ಮತ್ತು ಔರಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.0.90)

2007-08ನೇ ಸಾಲಿನಲ್ಲಿ ರೂ.6.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

(ಬೀದರ್ ವಿಧಾನಸಭಾ ಕ್ಷೇತ್ರ (ಉತ್ತರ) ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.1.75, ಲಕ್ಷ ಬೀದರ್ ವಿಧಾನಸಭಾ (ದಕ್ಷಿಣ) ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.0.50 ಲಕ್ಷ ಭಾಲ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.0.90 ಲಕ್ಷ, ಹುಮನಾಬಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.1.00 ಲಕ್ಷ, ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ

ಠಾಣೆಗಳಿಗೆ ರೂ.1.00 ಲಕ್ಷ, ಔರಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ರೂ.0.85 ಲಕ್ಷ)

2. ಹೊಸ ಕಟ್ಟಡಗಳ ನಿರ್ಮಾಣಕ್ಕಾಗಿ:-

1) ಹೊಸ ಕಟ್ಟಡಗಳ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿರುತ್ತದೆ.

ಅ) 2005-06ನೇ ಸಾಲಿಗೆ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಸವ ಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಹೊಸ ಕಟ್ಟಡಕ್ಕಾಗಿ ರೂ.10.69 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಆ) ಬೀದರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಔರಾದ್ ಪೊಲೀಸ್ ಠಾಣೆ ಸರಹದ್ದಿನಲ್ಲಿ 60 ಲೋಯರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳು ಹಾಗೂ 3 ಅಪ್ಪರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳಿಗೆ ಒಟ್ಟು ರೂ.230.09 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ರೂ.183.75 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇ) ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಸವಕಲ್ಯಾಣ ಪೊಲೀಸ್ ಠಾಣಾ ಸರಹದ್ದಿನಲ್ಲಿ 20 ಲೋಯರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳು ಹಾಗೂ 5 ಅಪ್ಪರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳಿಗೆ ಒಟ್ಟು ರೂ.95.35 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ರೂ.84.28 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಈ) ಭಾಲ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಭಾಲ್ಕಿ ಪೊಲೀಸ್ ಠಾಣಾ ಸರಹದ್ದಿನಲ್ಲಿ 20 ಲೋಯರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳು ಹಾಗೂ 1 ಅಪ್ಪರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳಿಗೆ ಒಟ್ಟು ಅಂದಾಜು ರೂ.73.05 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ರೂ.68.93 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2) 2006-07ನೇ ಸಾಲಿನಲ್ಲಿ ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಸವ ಕಲ್ಯಾಣ ಪೊಲೀಸ್ ಠಾಣೆ, ಭಾಲ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಭಾಲ್ಕಿ ಪೊಲೀಸ್ ಠಾಣೆ ಮತ್ತು ಹುಮನಾಬಾದ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಟಗುಪ್ಪಾ ಗ್ರಾಮೀಣ ಪೊಲೀಸ್ ಠಾಣೆಗಳಿಗೆ ತಲಾ ರೂ.25.00 ಲಕ್ಷಗಳಂತೆ ಒಟ್ಟು ರೂ.75.00 ಲಕ್ಷಗಳನ್ನು ಪೊಲೀಸ್ ಪಡೆಯ ಆಧುನೀಕರಣ ಯೋಜನೆಯಡಿಯಲ್ಲಿ ಮಂಜೂರು ಮಾಡಲಾಗಿದೆ. ಈ ಪೈಕಿ ಭಾಲ್ಕಿ

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಭಾಲ್ಕಿ ಗ್ರಾಮೀಣ ಪೋಲೀಸ್ ಠಾಣೆ ಹೊಸ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿರುತ್ತದೆ. ಹುಮನಾಬಾದ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಟಗುಪ್ಪಾ ಪೋಲೀಸ್ ಠಾಣೆ ಕಟ್ಟಡ ಕಾಮಗಾರಿ ಮುಗಿದಿರುತ್ತದೆ.

ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಸವ ಕಲ್ಯಾಣ ಪೋಲೀಸ್ ಠಾಣೆ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಬೀದರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಡಿ.ಎ.ಆರ್. ಕೇಂದ್ರದಲ್ಲಿ ಆರ್ಮರ್ ಸ್ಟೋರ್ ರೂಂ ನಿರ್ಮಾಣಕ್ಕಾಗಿ ರೂ.60.00 ಲಕ್ಷಗಳನ್ನು ಮಂಜೂರು ಮಾಡಿದ್ದು ಸದರಿ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

3) 2007-08ನೇ ಸಾಲಿನಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಾಲ್ಕಿ ಪೋಲೀಸ್ ಠಾಣಾ ಸರಹದ್ದಿನಲ್ಲಿ 2 ಅಪ್ಪರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳನ್ನು ಮತ್ತು 18 ಲೋಯರ್ ಸಬ್‌ಆರ್‌ಡಿನೇಟ್ ವಸತಿ ಗೃಹಗಳನ್ನು ಪೋಲೀಸ್ ಆಧುನೀಕರಣ ಯೋಜನೆಯಡಿಯಲ್ಲಿ ರೂ.105.00 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಮ ಕೈಗೊಂಡಿದೆ.

3. <u>ವಸತಿ ಗೃಹಗಳ ದುರಸ್ತಿಗಾಗಿ:</u>

ವಸತಿ ಗೃಹಗಳ ದುರಸ್ತಿಗಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿರುತ್ತದೆ.

ಎ) 2005-06ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಇರುವುದಿಲ್ಲ.

ಬಿ) 2006-07ನೇ ಸಾಲಿನಲ್ಲಿ ರೂ.10.00 ಲಕ್ಷಗಳು ವೆಚ್ಚವಾಗಿರುತ್ತೆ. ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಖಟಿಕ, ಚಿಂಚೋಳಿ ಹಾಗೂ ಧನ್ನೂರ ಪೋಲೀಸ್ ಠಾಣೆ/ ವವತಿ ಗೃಹ ದುರಸ್ತಿಗಾಗಿ, ರೂ.10.00 ಲಕ್ಷಗಳು ವೆಚ್ಚವಾಗಿರುತ್ತದೆ.

ಸಿ) 2007-08ನೇ ಸಾಲಿನಲ್ಲಿ ರೂ.15.70 ಲಕ್ಷಗಳು ವೆಚ್ಚವಾಗಿರುತ್ತದೆ.

ಬೀದರ್ ವಿಧಾನಸಭಾ ಕ್ಷೇತ್ರದ (ಉತ್ತರ ಮತ್ತು ದಕ್ಷಿಣ) ವ್ಯಾಪ್ತಿಯಲ್ಲಿ ಬರುವ ಬೀದರ್ ಪೋಲೀಸ್ ಠಾಣೆ/ವಸತಿ ಗೃಹ ದುರಸ್ತಿಗೆ ರೂ.1.80 ಲಕ್ಷ ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಾಲ್ಕಿ ಪೋಲೀಸ್ ಠಾಣೆ/ವಸತಿ ಗೃಹ ದುರಸ್ತಿಗೆ ರೂ.5.00 ಲಕ್ಷ ಔರಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಔರಾಧ್ ಪೋಲೀಸ್ ಠಾಣೆ/ವಸತಿ ಗೃಹ ದುರಸ್ತಿಗೆ ರೂ.92,000/-, ಹುಮನಾಬಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹುಮನಾಬಾದ್ ಪೋಲೀಸ್ ಠಾಣೆ/ವಸತಿ ಗೃಹ ದುರಸ್ತಿಗೆ ರೂ.4.53 ಲಕ್ಷ, ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಸವಕಲ್ಯಾಣ ಪೋಲೀಸ್ ಠಾಣೆ/ವಸತಿ ಗೃಹ ದುರಸ್ತಿಗೆ ರೂ.2.75 ಲಕ್ಷ ಹಾಗೂ ಜಿಲ್ಲಾ ಪೋಲೀಸ್ ಕಛೇರಿಯ ದುರಸ್ತಿಗಾಗಿ ರೂ.70.000/-ಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಅನುಬಂಧ "ಇ"

1) 2008–09ನೇ ಸಾಲಿನಲ್ಲಿ ಸಂಚಾರ ಸುಧಾರಣೆಗಾಗಿ ರೂ.6.00ಲಕ್ಷ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಈ ಅನುದಾನದಲ್ಲಿ ಸಂಚಾರ ಸುಧಾರಣೆಗಾಗಿ ಸಂಬಂಧಪಟ್ಟ ಸಲಕರಣೆಗಳನ್ನು ಖರೀದಿಸಿ ಬೀದರ್ ವಿಧಾನಸಭಾ ಉತ್ತರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗೆ ರೂ.1.90 ಲಕ್ಷ & ಬೀದರ್ ವಿಧಾನಸಭಾ ದಕ್ಷಿಣ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗೆ ರೂ.0.50ಲಕ್ಷ ಹುಮನಾಬಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗೆ ರೂ.0.80 ಲಕ್ಷ, ಭಾಲ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗೆ ರೂ.0.95 ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗೆ ರೂ.0.95 ಲಕ್ಷ ಔರಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಠಾಣೆಗೆ ರೂ.0.90 ಲಕ್ಷ ಮೊತ್ತದಲ್ಲಿ ಪೊಲೀಸ್ ಠಾಣೆಗಳಿಗೆ ಸಲಕರಣೆಗಳನ್ನು ಅಳವಡಿಸಲಾಗುವುದು.

2) 2008–09ನೇ ಸಾಲಿನಲ್ಲಿ ರೂ.15.00 ಲಕ್ಷ ಅನುದಾನವನ್ನು ವಸತಿಗೃಹಗಳ ದುರಸ್ತಿಗಾಗಿ ಹಂಚಿಕೆ ಮಾಡಿದ್ದು, ಈ ಅನುದಾನದಲ್ಲಿ ಬೀದರ್ ವಿಧಾನಸಭಾ ಕ್ಷೇತ್ರ (ಉತ್ತರ & ದಕ್ಷಿಣ) ವ್ಯಾಪ್ತಿಯಲ್ಲಿ ಬರುವ ಬೀದರ್ ನಗರ ಪೊಲೀಸ್ ವಸತಿ ಗೃಹಗಳಿಗೆ ರೂ.6.91 ಲಕ್ಷ, ಔರಾದ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಔರಾದ್ ಪೊಲೀಸ್ ವಸತಿ ಗೃಹಗಳಿಗೆ ರೂ.5.09 ಲಕ್ಷ, ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಸವಕಲ್ಯಾಣ ಪೊಲೀಸ್ ವಸತಿ ಗೃಹಗಳಿಗೆ ರೂ.3.00 ಲಕ್ಷಗಳನ್ನು ವಸತಿ ಗೃಹಗಳ ದುರಸ್ತಿಗಾಗಿ ವೆಚ್ಚ ಮಾಡಲು ಕ್ರಮವಹಿಸಲಾಗುವುದು.

3) 2008–09ನೇ ಸಾಲಿಗೆ ಬೀದರ್ ವಿಧಾನಸಭಾ ಕ್ಷೇತ್ರ (ದಕ್ಷಿಣ) ವ್ಯಾಪ್ತಿಯಲ್ಲಿ ಬರುವ ಮನೇಕಳ್ಳಿಯಲ್ಲಿ ಗ್ರಾಮೀಣ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣಕ್ಕಾಗಿ ರೂ.30.00 ಲಕ್ಷಗಳನ್ನು ವೆಚ್ಚ ಮಾಡಲಾಗುವುದು.

4) ಹುಮನಾಬಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹುಮನಾಬಾದ್ ಪೊಲೀಸ್ ಠಾಣೆ, ಬೀದರ್ ವಿಧಾನಸಭಾ ಕ್ಷೇತ್ರ (ದಕ್ಷಿಣ) ವ್ಯಾಪ್ತಿಯಲ್ಲಿ ಬರುವ ಬೀದರ್ ನಗರ ಪೊಲೀಸ್ ಠಾಣೆ, ಬಗದಲ್ ಪೊಲೀಸ್ ಠಾಣೆ, ಬೇಮಳಖೇಡಾ ಪೊಲೀಸ್ ಠಾಣೆ, ಔರಾದ್ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಸಂತಪೂರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಸಿಬ್ಬಂದಿರವರುಗಳಿಗೆ ಹೊಸದಾಗಿ 51 ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಒಟ್ಟು ರೂ. 344.25 ಲಕ್ಷಗಳನ್ನು ಮಂಜೂರು ಮಾಡಿ, ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ : (184)217
ಸದಸ್ಯರ ಹೆಸರು : ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು)
ಉತ್ತರಿಸುವ ಸಚಿವರು : (ಶ್ರೀ ಆರ್.ಅಶೋಕ್) ಮಾನ್ಯ ಸಾರಿಗೆ ಸಚಿವರು.

ಅ) ಮೊಳಕಾಲ್ಮೂರು ಕ್ಷೇತ್ರದಲ್ಲಿ ಸಾರಿಗೆ ವ್ಯವಸ್ಥೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿರುತ್ತದೆ.

ಆ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೊಳಕಾಲ್ಮೂರು ಮತ ಕ್ಷೇತ್ರದಲ್ಲಿನ ಹಳ್ಳಿಗಾಡಿನ ಪ್ರದೇಶಗಳಲ್ಲಿ ಖಾಸಗಿ ಮೋಟಾರು ವಾಹನಗಳನ್ನು ಓಡಿಸಲು ಅನುಮತಿ ನೀಡಿದೆಯೇ?

ಇಲ್ಲ.

ಇ) ನೀಡಿದ್ದಲ್ಲಿ, ಅನುಮತಿ ಪಡೆದು ಓಡಿಸುತ್ತಿರುವ ಖಾಸಗಿ ಮೋಟಾರು ವಾಹನಗಳೆಷ್ಟು?

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಚಿತ್ರದುರ್ಗ ಮತ್ತು ದಾವಣಗೆರೆ ಇವರು ಕ್ರಮವಾಗಿ 35 ಮತ್ತು 4 ಖಾಸಗಿ ಮಜಲುವಾಹನಗಳ ಆಚರಣೆಗೆ ರಹದಾರಿಗಳನ್ನು ನೀಡಿರುತ್ತಾರೆ.

ಈ) ಅನುಮತಿ ಇಲ್ಲದೆ ಓಡಿಸುತ್ತಿರುವ ವಾಹನಗಳೆಷ್ಟು?

ಯಾವುದು ಇರುವುದಿಲ್ಲ.

ಉ) ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಖಾಸಗಿ ಪ್ರವರ್ತಕರು ಮಜಲು ವಾಹನ ರಹದಾರಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಪ್ರಾಧಿಕಾರದ ಮುಂದೆ ಮಂಡಿಸಿ ನಿಯಮಾನುಸಾರ ರಹದಾರಿ ನೀಡಲು ಕ್ರಮ ಜರುಗಿಸಲಾಗುವುದು. ಇದಲ್ಲದೆ ಕೆ.ಎಸ್.ಆರ್.ಟಿ.ಸಿ.ಯವರಿಗೆ ಹೆಚ್ಚಿನ ಸಾರಿಗೆ ವ್ಯವಸ್ಥೆಯನ್ನು ಒದಗಿಸಲು ತಿಳಿಸಲಾಗಿದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (186) 219
2. ಸದಸ್ಯರ ಹೆಸರು : ಶ್ರೀ ಗೋಪಾಲಕೃಷ್ಣ ಎನ್.ವೈ. (ಮೊಳಕಾಲೂರು)
3. ಉತ್ತರಿಸುವ ಸಚಿವರು : ಶ್ರೀ ಡಾ: ವಿ.ಎಸ್.ಆಚಾರ್ಯ (ಮಾನ್ಯ ಗೃಹ ಸಚಿವರು)

ಅ. ಗಡಿ ಭಾಗದ ಚೆಕ್‌ಪೋಸ್ಟ್‌ಗಳನ್ನು ಪೊಲೀಸ್ ಸಿಬ್ಬಂದಿ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗಡಿ ಭಾಗದ ಚೆಕ್ ಪೋಸ್ಟ್‌ಗಳಲ್ಲಿ ಸಿಬ್ಬಂದಿ ಕೊರತೆ ಇರುವುದಿಲ್ಲ.

ಆ. ಮೊಳಕಾಲ್ಮೂರು ಕ್ಷೇತ್ರದಲ್ಲಿ ನಕ್ಸಲೀಯರ ಚಟುವಟಿಕೆಯು ಹೆಚ್ಚುತ್ತಿರುವುದರಿಂದ ಇದನ್ನು ನಿಯಂತ್ರಿಸಲು ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಆಂಧ್ರ ಪ್ರದೇಶದ ಗಡಿ ಭಾಗದಲ್ಲಿ ರಾಜ್ಯದ ಪೊಲೀಸರ ಚಟುವಟಿಕೆ ಹೆಚ್ಚಿಸುವ ನಿಟ್ಟಿನಲ್ಲಿ ಪರಶುರಾಂಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಜಾಜೂರು ಉಪಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಹಾಗೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ. ಪೊಲೀಸ್ ಸಿಬ್ಬಂದಿ ವರ್ಗದವರು ಪರಿಣಾಮಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಲು ಅನುವಾಗಲು ಜೀಪ್, ವೈರ್‌ಲೆಸ್ ಸಿಸ್ಟಂ ಹಾಗೂ ಇನ್ನಿತರ ಅತ್ಯಾಧುನಿಕ ಉಪಕರಣಗಳನ್ನು ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೇ?

ರಾಜ್ಯದಲ್ಲಿನ ಎಲ್ಲಾ ಪೊಲೀಸ್ ಘಟಕಗಳಿಗೆ ಜೀಪು, ದ್ವಿಚಕ್ರ ವಾಹನಗಳನ್ನು ಒದಗಿಸಲಾಗಿದೆ. ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ನಕ್ಸ್ಲ್ ಪೀಡಿತ ಠಾಣೆ ಹಾಗೂ ಗಡಿ ಭಾಗದ ಪೊಲೀಸ್ ಠಾಣೆಗಳಿಗೆ ಮೈನ್ ಪೊಟೆಕ್ಟಡ್ ವಾಹನಗಳನ್ನು ಒಳಗೊಂಡಂತೆ ಹೆಚ್ಚುವರಿ ವಾಹನಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ವೈರ್‌ಲೆಸ್ ಉಪಕರಣ ಹಾಗೂ ಸ್ಯಾಟ್‌ಲೇಟ್ ದೂರವಾಣಿ, ಆಧುನಿಕ ಉಪಕರಣಗಳಾದ ಗಣಕ ಯಂತ್ರಗಳು, ಬೆರಳಚ್ಚು ಯಂತ್ರಗಳು, ಫ್ಯಾಕ್ಸ್ ಯಂತ್ರಗಳು, ಎಮರ್ಜೆನ್ಸಿ ಲೈಟಿಂಗ್ ಸಿಸ್ಟಂ, ಜನರೇಟರ್‌ಗಳು, ಸೋಲಾರ್ ಪವರ್ ಫ್ಯಾಕ್ಸ್‌ಗಳು, ನೈಟ್ ವಿಷನ್ ಬೈನಾಕ್ಯುಲರ್ಸ್, ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್‌ಗಳು, ಡಿಜಿಟಲ್/ವಿಡಿಯೋ ಕ್ಯಾಮರಾ ಇತ್ಯಾದಿಗಳನ್ನು ಒದಗಿಸಲಾಗಿದೆ.

ಮೊಳಕಾಲ್ಮೂರು ಕ್ಷೇತ್ರದ ಪೊಲೀಸ್ ಸಿಬ್ಬಂದಿ ವರ್ಗದವರು ಪರಿಣಾಮಕಾರಿಯಾಗಿ ಕರ್ತವ್ಯನಿರ್ವಹಿಸಲು ಅನುಕೂಲವಾಗುವಂತೆ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಈಗಾಗಲೇ ವಸತಿ ಗೃಹಗಳನ್ನು ಮಂಜೂರು ಮಾಡಲಾಗಿದೆ. ನಾಯಕನಹಟ್ಟಿ ಪೊಲೀಸ್ ಠಾಣೆಯ ಸಿಬ್ಬಂದಿ ವರ್ಗದವರಿಗೆ ತ್ವರಿತ ವಸತಿ ಯೋಜನೆ–3ರಡಿಯಲ್ಲಿ ವಸತಿ ಗೃಹಗಳನ್ನು ಆದ್ಯತೆಯ ಮೇರೆಗೆ ಕಟ್ಟಿಸಿಕೊಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:(126)220
ಮಾನ್ಯ ಸದಸ್ಯರ ಹೆಸರು	:ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)
	:(ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು) ಮಾನ್ಯ ಅಬಕಾರಿ ಸಚಿವರು

ಅ) ಕಳೆದ ಮೂರು ತಿಂಗಳಲ್ಲಿ ರಾಜ್ಯದ ವಿವಿಧೆಡೆಗಳಲ್ಲಿ ಕಳ್ಳಭಟ್ಟಿ ಸೇವಿಸಿ ಸಾವನ್ನಪ್ಪಿದವರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಒಟ್ಟು 137 ಜನ ಮೃತಪಟ್ಟಿರುತ್ತಾರೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ.

1. ಬೆಂಗಳೂರು ನಗರಜಿಲ್ಲೆ – 80 ಜನ
2. ಬೆಂಗಳೂರು ಗ್ರಾಮಾಂತರ ಜಿಲ್ಲೆ 20 ಜನ
3. ಕೋಲಾರ ಜಿಲ್ಲೆ – 28 ಜನ
4. ಹಾಸನ ಜಿಲ್ಲೆ – 9 ಜನ

ಆ) ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಅಕ್ರಮ ಕಳ್ಳಭಟ್ಟಿ ಮಾರಾಟ ಮಾಡಿ ದುರಂತಕ್ಕೆ ಕಾರಣರಾದ ಆರೋಪಿಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಈ ಪ್ರಕರಣದಲ್ಲಿ ಸಾವನ್ನಪ್ಪಿದವರಿಗೆ ಸರ್ಕಾರವು ಪರಿಹಾರವನ್ನೇನಾದರೂ ನೀಡಿದೆಯೇ? (ವಿವರ ನೀಡುವುದು)

ಈ ದುರಂತದಲ್ಲಿ 117 ಜನ ಮೃತರ ಅವಲಂಬಿತರಿಗೆ ತಲಾ ರೂ.50.000/–ಗಳ ಎಕ್ಸ್‌ಗ್ರೇಷಿಯಾ ಮೊತ್ತವನ್ನು ಸರ್ಕಾರವು ನೀಡಿರುತ್ತದೆ. ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ಇಂತಹ ಪ್ರಕರಣವನ್ನು ತಡೆಗಟ್ಟಲು ನಿಷ್ಕ್ರಿಯವಾಗಿರುವ ಅಬ್ಕಾರಿ ಇಲಾಖೆಯ ಯಾವ ಯಾವ ಅಧಿಕಾರಿಗಳ ಮೇಲೆ ಶಿಸ್ತಿನಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

ಅಬಕಾರಿ ಇಲಾಖೆಯ ಅಧಿಕಾರಿಗಳ ಕಾರ್ಯಲೋಪ ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಕೆಳಕಂಡ ಅಬಕಾರಿ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ.

1. ಶ್ರೀ ಟಿ.ಜಯರಾಂ, ಅಬಕಾರಿ ಉಪ ಆಯುಕ್ತರು, ಕೋಲಾರ ಜಿಲ್ಲೆ.
2. ಶ್ರೀ ಸೋಮಶೇಖರಪ್ಪ, ಅಬಕಾರಿ ಅಧೀಕ್ಷಕರು ಜಯನಗರ (ಜಾರಿ ಮತ್ತು ತನಿಖೆ), ಬೆಂಗಳೂರು ನಗರ ಜಿಲ್ಲೆ.
3. ಶ್ರೀ ವೆಂಕಟರಮಣಯ್ಯ, ಅಬಕಾರಿ ಅಧೀಕ್ಷಕರು, (ಜಾರಿ ಮತ್ತು ತನಿಖೆ), ಇಂದಿರಾನಗರ, ಬೆಂಗಳೂರು ಜಿಲ್ಲೆ
4. ಶ್ರೀ ವಿಜಯ ರೇವಡಿ, ಅಬಕಾರಿ ಉಪ ಅಧೀಕ್ಷಕರು(ಪ್ರ), ಹೊಸಕೋಟೆ ಉಪ ವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ

5. ಶ್ರೀ ಜಿ.ಆರ್.ಶ್ರೀನಿವಾಸ್, ಅಬಕಾರಿ ನಿರೀಕ್ಷಕರು ಕೋಲಾರ ವಲಯ
6. ಶ್ರೀ ಸಯ್ಯದ್ ಬುಕಾರಿ, ಅಬಕಾರಿ ನಿರೀಕ್ಷಕರು, ಮಾಲೂರು ವಲಯ, ಕೋಲಾರ
7. ಶ್ರೀ ಲಕ್ಷ್ಮೀನಾರಾಯಣ, ಅಬಕಾರಿ ನಿರೀಕ್ಷಕರು (ಪ್ರಭಾರ), ಫ್ರೇಜರ್ ಟೌನ್ ವಲಯ, ಬೆಂಗಳೂರು ನಗರ ಜಿಲ್ಲೆ
8. ಶ್ರೀ ಟಿ.ಗಿರೀಶ್, ಅಬಕಾರಿ ಉಪ ನಿರೀಕ್ಷಕರು, ಆನೇಕಲ್ ವಲಯ, ಬೆಂಗಳೂರು ನಗರ ಜಿಲ್ಲೆ
9. ಶ್ರೀಮತಿ ರಮಾಮಣಿ, ಅಬಕಾರಿ ನಿರೀಕ್ಷಕರು, ಕೋಲಾರ ವಲಯ
10. ಶ್ರೀ ಶಂಕರ್‌ಪ್ರಸಾದ್, ಅಬಕಾರಿ ಉಪ ನಿರೀಕ್ಷಕರು, ಮಾಲೂರು ವಲಯ, ಕೋಲಾರ ಜಿಲ್ಲೆ.
11. ಶ್ರೀಮತಿ ಆಶಾ, ಅಬಕಾರಿ ಉಪ ನಿರಿಕ್ಷಕರು ಫ್ರೇಜರ್‌ಟೌನ್ ವಲಯ, ಬೆಂಗಳೂರು ನಗರ ಜಿಲ್ಲೆ.

ಉ) ರಾಜ್ಯದಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಕಳ್ಳಭಟ್ಟಿ ದಂಧೆಯನ್ನು ತಡೆಗಟ್ಟಲು ಸರ್ಕಾರದ ಮುಂದಿರುವ ಕ್ರಮಗಳೇನು?

ಯಾವುದೇ ಕಳ್ಳಭಟ್ಟಿ/ ನಕಲಿ ಮಧ್ಯ ಸೇವಿಸಬಾರದೆಂದು ಹಾಗೂ ಇಂತಹ ಅಕ್ರಮ ಚಟುವಟಿಕೆಗಳು ಗಮನಕ್ಕೆ ಬಂದಲ್ಲಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಸಮೂಹ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿರುತ್ತದೆ. ಜಾರಿ ಮತ್ತು ತನಿಖೆ ಕಾರ್ಯವನ್ನು ಚುರುಕುಗೊಳಿಸಿ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ನಿರಂತರ ದಾಳಿ ಕಾರ್ಯ ನಡೆಸಲಾಗುತ್ತಿದೆ. ಈ ಬಗೆಗೆ ಅಧೀನ ಸಿಬ್ಬಂದಿಗೆ ಮಾರ್ಗದರ್ಶನ ಕೈಪಿಡಿ ನೀಡಿದ್ದು, ಅದರಂತೆ ಕಾರ್ಯ ನಿರ್ವಹಿಸಲಾಗುತ್ತಿದೆ.

ಕಳ್ಳಭಟ್ಟಿ ದಂಧೆಯಲ್ಲಿ ಮೃತರಾದ ವ್ಯಕ್ತಿಗಳ ಅವಲಂಬಿತರಿಗೆ ಎಕ್ಸ್‌ಗ್ರೇಷಿಯ ಮೊತ್ತ ಪಾವತಿ ಮಾಡಿರುವ ವಿವರ

(ಉತ್ತರ ತಾಲ್ಲೂಕು)

ಕ್ರ ಸಂ	ಮೃತ ವ್ಯಕ್ತಿಯ ಹೆಸರು ಮತ್ತು ವಿಳಾಸ	ಪರಿಹಾರ ಸ್ವೀಕರಿಸಿದ ಅವಲಂಬಿತರ ವಿವರ	ಪರಿಹಾರ ಮೊತ್ತ
1	ಕುಪ್ಪ ಅಲಿಯಾಸ್ ಹೃದಯನಾಥನ್ ತಂದೆ: ಮನುಕ್ಯಂ ಟಿಪ್ಪು ಮೊಹಲ್ಲ, ಮೋದಿ ರಸ್ತೆ, ಡಿ.ಜಿ.ಹಳ್ಳಿ	ಪುಷ್ಪ – ಹೆಂಡತಿ	50.000/-
2	ರಾಣಿ, ಪತಿಃ ಮುಖೇಶ್ ಬಾಬು	ದೇವಿ ಮತ್ತು ಕುಟುಂಬ	50.000/-

	ರೋಷನ್ ನಗರ್, ಮೋದಿ ರಸ್ತೆ, ಡಿ.ಜೆ.ಹಳ್ಳಿ	ಅರ್ಜಿ –ರಮ್ಯಮ್ಮಾಳ್	
3	ಸಂಪಂಗಿ ರಾಮ, ತಂದೆ: ನಾರಾಯಣ ಸ್ವಾಮಿ ದೊಡ್ಡಣ್ಣ ನಗರ, ಕೆ.ಬಿ.ಸಂದ್ರ	ಪ್ರಕಾಶ್ – ಮಗ	50.000/–
4	ಶಿವಕುಮಾರ್ (ಸುಕುಮಾರ) ತಂದೆ: ರಾಜು ಶಿವಾಜಿ ರಸ್ತೆ, ಡಿ.ಜೆ.ಹಳ್ಳಿ	ಮಲ್ಲಿಕಾ – ಪತ್ನಿ	50.000/–
5	ಮೊಹಮ್ಮದ್ ಯಾಕೂಬ್, ತಂದೆ: ಅಬ್ದುಲ್ ಶುಕೂರ್ ಡಿ.ಜೆ.ಹಳ್ಳಿ	ಮೊಹರುನ್ನೀಸ – ಪತ್ನಿ	50.000/–
6	ಜಾಫರ್ ಷರೀಫ್ ತಂದೆ: ಅಹಮದ್ ಷರೀಫ್ ರೋಷನ್ ನಗರ್, ಡಿ.ಜೆ.ಹಳ್ಳಿ	ತಸೀನ್ ತಾಜ್ – ಪತ್ನಿ	50.000/–
7	ನಾಗರಾಜ್ ತಂದೆ: ಗೋವಿಂದಪ್ಪ ರೋಷನ್ ನಗರ್, ಡಿ.ಜೆ.ಹಳ್ಳಿ	ಮುನಿಯಮ್ಮ ಮತ್ತು ಪಾರ್ವತಮ್ಮ ಪತ್ನಿಯವರು	50.000/–
8	ಅಜದ್ ಪಾಷಾ ತಂದೆ: ಅಬ್ದುಲ್ ರಹೀಂ, ಬಂಗಾರ ಗಿರಿ ನಗರ, ಡಿ.ಜೆ.ಹಳ್ಳಿ	ಯಾಸ್ಮಿನ್ ತಾಜ್ – ಪತ್ನಿ	50.000/–
9	ಇಂತಿಯಾಜ್ ತಂದೆ: ಅಬ್ದುಲ್ ಅಫೀಜ್ ರೋಷನ್ ನಗರ, ಡಿ.ಜೆ.ಹಳ್ಳಿ	ನೂಬಿನ್ – ಪತ್ನಿ	50.000/–
10	ಬಾಬು ಅಲಿ ಸಲೀಂ ತಂದೆ: ಬಾಜಿರ್ ಖಾನ್ ರೋಷನ್ ನಗರ, ಡಿ.ಜೆ.ಹಳ್ಳಿ	ರೇಷ್ಮಾ – ಪತ್ನಿ	50.000/–
11	ರವಿಕುಮಾರ್ ತಂದೆ: ರಾಮಸ್ವಾಮಿ ಈದ್ಗಾ ಮೊಹಲ್ಲಾ	ರಾಮಸ್ವಾಮಿ – ತಂದೆ	50.000/–
12	ಥಾಮಸ್ ತಂದೆ: ಡೋಮಿನಿಕ್ ಜೋವಿಯಲ್ ಪೆರಿಯಾನಗರ, ಡಿ.ಜೆ.ಹಳ್ಳಿ	ಸೆಲ್ವಿ – ಪತ್ನಿ	50.000/–
13	ಮೆಹಬೂಬ್ ಪಾಷಾ ತಂದೆ:	ಜಬೀನಾ – ಪತ್ನಿ	50.000/–

	ಅಲ್ಲಾ ಭಕ್ಷಿ ರೋಷನ್ ನಗರ, ಡಿ.ಜಿ.ಹಳ್ಳಿ		
14	ಥೆರೆಸಮ್ಮ ಕೋಂ ಮುನಿಸ್ವಾಮಿ ಇಂದಿರಾಪುರ, ಡಿ.ಜಿ.ಹಳ್ಳಿ	ವಳ್ಳಿಯಮ್ಮ, ಸರೋಜಮ್ಮ ಮಕ್ಕಳು	50.000/-
15	ಎಸ್ ಕಾಂತರಾಜು ತಂದೆ: ಸುಬ್ರಮಣಿ ಮೋದಿ ರಸ್ತೆ, ಡಿ.ಜಿ.ಹಳ್ಳಿ	ದೇವಿ – ಪತ್ನಿ	50.000/-
16	ಕೃಷ್ಣ ತಂದೆ: ಗೋವಿಂದ ಸ್ವಾಮಿ ದೊಡ್ಡಣ್ಣ ನಗರ, ಡಿ.ಜಿ.ಹಳ್ಳಿ	ಕೃಷ್ಣವೇಣಿ – ಪತ್ನಿ	50.000/-
17	ಇಬ್ರಾಹಿಂ ತಂದೆ: ಅಬ್ದುಲ್ ಜಬ್ಬಾರ್ ಮುಸ್ಲಿಂ ಕಾಲೋನಿ, ಡಿ.ಜಿ.ಹಳ್ಳಿ	ಬತುಲ್ಲಾ – ಪತ್ನಿ	50.000/-
18	ಚಂದು, ತಂದೆ: ಕಣ್ಣನ್ ಪೆರಿಯಾರ್ ನಗರ, ಡಿ.ಜಿ.ಹಳ್ಳಿ	ಮೇನಘ – ಪತ್ನಿ	50.000/-
19	ವಾಹಿದ್ ಅಹಮ್ಮದ್ ತಂದೆ: ಅಬ್ದುಲ್ಲಾ ಸಂಪಂಗಿರಾಮಯ್ಯ ಬ್ಲಾಕ್, ಡಿ.ಜಿ.ಹಳ್ಳಿ	ಹಮೀದ್ – ಪತ್ನಿ	50.000/-
20	ಅಬ್ದುಲ್ ರಜಾಕ್ ತಂದೆ: ಸಬ್‌ಜಾನ್, ಶ್ಯಾಮಪುರ ರಸ್ತೆ	ಖುರ್ಷಿದಾ – ಪತ್ನಿ	50.000/-
21	ಸಯದ್ ಸಲೀಂ ತಂದೆ: ಸಯದ್ ಇಬ್ರಾಯಿಂದ, ದೊಡ್ಡಣ್ಣ ನಗರ, ಕೆ.ಬಿ.ಸಂದ್ರ	ಜರೀನ್ ತಾಜ್ – ಪತ್ನಿ	50.000/-
22	ನವೀನ್ ಕುಮಾರ್, ತಂದೆ: ಕಾನಿಕ್ಯ ರಾಜ, ಮುಸ್ಲಿಂ ಕಾಲೋನಿ, ಶ್ಯಾಂ ಪುರ ರಸ್ತೆ	ಶಾಲಿನಿ – ಪತ್ನಿ	50.000/-
23	ಅಮೀನ, ತಂದೆ: ಬಾಬು ದೊಡ್ಡಣ್ಣ ನಗರ,	ಶಂಶಾದ್ – ಪತ್ನಿ	50.000/-
24	ಅನ್ಬು, ತಂದೆ: ಅಶೋಕ್ ಬಾಬು ದೊಡ್ಡಣ್ಣ ನಗರ, ಕೆ.ಬಿ.ಸಂದ್ರ	ಗುಣ – ಪತ್ನಿ	50.000/-
25	ನಾಜಿರ್ ಅಹಮದ್ ತಂದೆ: ಜಾನಿಬಾಷಾ ಮೋದಿ ರಸ್ತೆ, ಡಿ.ಜಿ.ಹಳ್ಳಿ	ಪರ್ವಿನ್ ತಾಜ್ – ಪತ್ನಿ	50.000/-

26	ಮುಲ್ಲಾ, ತಂದೆ: ಅಲ್ಲಾಭಕ್ಷಿ ರೋಷನ್ ನಗರ	ಗುಲ್ಮಾರ್ – ಪತ್ನಿ	50.000/–
27	ದೊರೆ, ತಂದೆ: ಗಣೇಶ್ ರೋಷನ್ ನಗರ	ಮಂಜು – ಪತ್ನಿ	50.000/–
28	ಆರ್.ಮೋಹನ್ ತಂದೆ: ರಂಗಸ್ವಾಮಿ ಬಸವನಗರ, ಶಾಂ ಪುರ ರಸ್ತೆ	ರಾಜೇಶ್ವರಿ – ಪತ್ನಿ	50.000/–
29	ದೊರೆ, ತಂದೆ: ದಾಮೋದರ್ ರೋಷನ್ ನಗರ, ಡಿ.ಜಿ.ಹಳ್ಳಿ	ಶಾಂತಮ್ಮ – ಪತ್ನಿ	50.000/–
30	ಮುರ್ಗೇಶ್ ತಂದೆ: ಕೋಲಂದೇವಲು ತಂಗಮಲ್ಲೆ ನಗರ, ಡಿ.ಜಿ.ಹಳ್ಳಿ	ಲಕ್ಷ್ಮಿ – ಪತ್ನಿ	50.000/–
31	ರಾಮು, ತಂದೆ: ಪುಟ್ಟಸ್ವಾಮಿ ಡಿ.ಜಿ.ಹಳ್ಳಿ	ವಸಂತ – ಪತ್ನಿ	50.000/–
32	ರಾಜು, ತಂದೆ: ದವನಪ್ಪ ಡಿ.ಜಿ.ಹಳ್ಳಿ	ಸಂಗಾಯಮ್ – ಪತ್ನಿ	50.000/–
33	ಸಿಲ್ವಂ ತಂದೆ: ದೊರೈ ರೋಷನ್ ನಗರ	ಹಂಸವೇಣಿ, ಕುಟ್ಟಿ, ಅಪ್ಪನ್ ಮಕ್ಕಳು ಶಾಂತಮ್ಮ – ಅಜ್ಜಿ	50.000/–
34	ಕಣ್ಣನ್, ತಂದೆ: ಶೇಷಾಚಲ ಪೆರಿಯಾರ್ ನಗರ	ಶಾಂತಿ – ಪತ್ನಿ	50.000/–
35	ಜಯಶೀಲನ್, ತಂದೆ: ಪೆರಿಯನ್ ಪೆರಿಯಾರ್ ನಗರ, ಡಿ.ಜಿ.ಹಳ್ಳಿ	ಇಸ್ಸೈ ಒಳ್ಳಿ – ಪತ್ನಿ	50.000/–
36	ಮಾಲಕೊಂಡಯ್ಯ, ತಂದೆ: ರಂಗಯ್ಯ ಪೆರಿಯಾರ್ ನಗರ, ಡಿ.ಜಿ.ಹಳ್ಳಿ	ನಾಗಮ್ಮ – ಪತ್ನಿ	50.000/–
37	ಮುನಿರಾಜು, ತಂದೆ: ಭೈರಪ್ಪ ರೋಷನ್ ನಗರ	ಜಯಮ್ಮ – ಪತ್ನಿ	50.000/–
38	ವಸುದೇವನ್ ಪೆರಿಯಾರ್ ನಗರ	ಸರಸ್ವತಿ – ಪತ್ನಿ	50.000/–
39	ರೇಗ್, ಬಿನ್ ಚಿನ್ನಪ್ಪ ಕೆ.ಬಿ.ಸಂದ್ರ	ಶಾಂತಿ – ಮಗಳು	50.000/–
40	ಕುಮಾರ್ ಅಲಿಯಾಸ್ ರಾಜು ಕೆ.ಜಿ.ಎಫ್	ಮಣಿ – ಪತ್ನಿ	50.000/–

41	ಅಂತೋನಿ ರಾಜ್ ತಂದೆ: ಜೋಸೆಫ್ ಕಾಚರಕನ ಹಳ್ಳಿ	ಉಮಾ – ಪತ್ನಿ	50.000/-
42	ನಾಗರಾಜು, ತಂದೆ: ಕೃಷ್ಣ ಕಾಕ್ಸ್‌ಟೌನ್	ಕಸ್ತೂರಿ – ಪತ್ನಿ	50.000/-
43	ರಾಮು, ತಂದೆ: ಮೋಹನ್ ಕಾಕ್ಸ್‌ಟೌನ್	ಅಂತೋನಿಯಮ್ಮ – ಪತ್ನಿ	50.000/-
44	ಲಕ್ಷ್ಮಿ, ತಂದೆ: ಪೆರುಮಾಳ್ ಕಾಕ್ಸ್‌ಟೌನ್	ಕುಮಾರಿ ಸರಳ – ಮಗಳು	50.000/-
45	ಶಂಕರ್, ತಂದೆ: ಗಂಭೀರನ್ ನ್ಯೂ ಬೆಂಗಳೂರು ಲೇ ಔಟ್	ಮನಿಷಾ – ಪತ್ನಿ	50.000/-
46	ಸಂಪೂರ್ಣಮ್ಮ ತಂದೆ: ಮಕರಂದಯ್ಯ ಬೆಂಗಳೂರು ಲೇಔಟ್	ನಂದಕುಮಾರ್ – ಮಗ	50.000/-
47	ಲಾರೆನ್ಸ್ ತಂದೆ: ಜೋಸೆಫ್ ಸಬಸ್ಟೇನ್ ಒಲ್ಡ್ ಬೆಂಗಳೂರು ರಸ್ತೆ	ಕನ್ನಿಕಾ ಮೇರಿ – ತಾಯಿ	50.000/-
48	ಶೀಲಾ ಪತಿ: ಲೇಟ್ – ವೇಲಾ ಒಲ್ಡ್ ಬೆಂಗಳೂರು ಲೇಔಟ್	ರಾಜೇರ್ಶ – ಮಗ	50.000/-
49	ಬಾಬು, ತಂದೆ: ಮುತ್ತು ಕಾಕ್ಸ್‌ಟೌನ್	ವಿನೋದ – ಮಗ	50.000/-
50	ಪಾಪಮ್ಮ, ಪತಿ: ಮುನಿಯಲ್ಲಪ್ಪ ಕಾಕ್ಸ್ ಟೌನ್	ಮುನಿಯಲ್ಲಪ್ಪ – ಪತಿ	50.000/-
51	ಸಾಮುಯಲ್ ತಂದೆ: ಸುಂದರಯ್ಯ, ಕಾಕ್ಸ್‌ಟೌನ್	ನಿರ್ಮಲ – ಪತ್ನಿ	50.000/-
52	ರಮೇಶ್, ತಂದೆ: ಲಕ್ಷ್ಮಯ್ಯ ಕಾಕ್ಸ್‌ಟೌನ್	ಸಂಪೂರ್ಣಮ್ಮ – ಪತ್ನಿ	50.000/-
53	ಕೋಟೇಶ್ವರಿ, ಪತಿ: ಶ್ರೀನಿವಾಸ್ ಕಾಕ್ಸ್‌ಟೌನ್	ಬಾಲು – ಮಗ	50.000/-
54	ಸುನಿಲ್ ರಾವ್ ತಂದೆ: ವಿಠಲ್ ರಾವ್, ಕಾಕ್ಸ್‌ಟೌನ್	ಸರಸ್ವತಿ ಸುರೇಖ – ತಾಯಿ	50.000/-
55	ಕೃಷ್ಣನ್, ತಂದೆ: ಶೇಖರ್ ಕಾಕ್ಸ್‌ಟೌನ್	ರಾಧಮ್ಮ – ಪತ್ನಿ	50.000/-

56	ಮಣ್ಣಗಟ್ಟಿ, ತಂದೆ: ಅರ್ಜುನನ್ ಕಾರ್ಕ್ಸ್‌ಟೌನ್	ಆಂಡಾಳಮ್ಮ – ಪತ್ನಿ	50.000/–
57	ಪುಟ್ಟಮ್ಮ ಎ.ಜಿ.ಹಳ್ಳಿ	ಕದಿರ ವೇಲು ಮತ್ತು ಪೆರಿಯಾ ಸ್ವಾಮಿ ಖ ಮೊಮ್ಮಕ್ಕಳು	50.000/–
58	ಮನೋಹರ್, ಫ್ರೇಜರ್ ಟೌನ್	ನರಸಮ್ಮ – ಪತ್ನಿ	50.000/–

<u>ದಕ್ಷಿಣ ತಾಲ್ಲೂಕು</u>

1	ನರಸಿಂಹಯ್ಯ ಕಮ್ಮನ ಹಳ್ಳಿ, ಆನೇಕಲ್ ತಾಲ್ಲೂಕು	ನರಸಮ್ಮ – ಪತ್ನಿ	50.000/–
2	ಎಲ್.ಬಾಬು ಗೋಣಿಗಟ್ ಪುರ ಆನೇಕಲ್ ತಾಲ್ಲೂಕು	ಪ್ರೇಮ – ಪತ್ನಿ	50.000/–
3	ಚೌರಿ, ಗೋಣಿಗಟ್ ಪುರ, ಆನೇಕಲ್ ತಾಲ್ಲೂಕು	ಸುಭಾಷಿಣಿ – ಪತ್ನಿ	50.000/–
4	ಪುಟ್ಟರಾಜಾಚಾರಿ ಗೋಣಿಗೇಟ್ ಪುರ, ಆನೇಕಲ್ ತಾಲ್ಲೂಕು	ಗಿರಿಜಮ್ಮ – ಪತ್ನಿ	50.000/–
5	ಪುಟ್ಟಪ್ಪ, ಗೋಣಿಗಟ್ ಪುರ, ಆನೇಕಲ್ ತಾಲ್ಲೂಕು	ಅಮರಾವತಿ ಮತ್ತು ವೆಂಕಟಮ್ಮ ಪತ್ನಿಯರು	50.000/–
6	ಮುನಿಯಮ್ಮ, ಗೋಣಿಗಟ್ ಪುರ, ಆನೇಕಲ್ ತಾಲ್ಲೂಕು	ಕೃಷ್ಣಪ್ಪ – ಪತಿ	50.000/–
7	ಕೃಷ್ಣಪ್ಪ ಅತ್ತಿಬೆಲೆ, ಆನೇಕಲ್ ತಾಲ್ಲೂಕು	ವೀರಭದ್ರಪ್ಪ – ಮಗ	50.000/–
8	ಸುದರ್ಶನ್ ಅತ್ತಿಬೆಲೆ, ಆನೇಕಲ್ ತಾಲ್ಲೂಕು	ತಮ್ಮಾಲ್ – ಪತ್ನಿ	50.000/–
9	ಪುಲ್ಲಾ ಅತ್ತಿಬೆಲೆ, ಆನೇಕಲ್ ತಾಲ್ಲೂಕು	ಗುರುಬಾಲಿ – ಮಗಳು	50.000/–
10	ಯಲ್ಲಪ್ಪನ್ ಅತ್ತಿಬೆಲೆ	ನೀಲಮ್ಮ – ಪತ್ನಿ	50.000/–
11	ರಾಜಪ್ಪ ಅತ್ತಿಬೆಲೆ	ಯಲ್ಲಮ್ಮ – ಪತ್ನಿ	50.000/–

12	ಜಯಮೇರಿ ಅತ್ತಿಬೆಲೆ	ಲುರ್ದ್ ಮೇರಿ – ಮಗಳು	50.000/–
13	ಮುನಿಯಲ್ಲಪ್ಪ ಅತ್ತಿಬೆಲೆ	ರತ್ನಮ್ಮ – ಪತ್ನಿ	50.000/–
14	ಮಾದನ ಗಿರಿಯಪ್ಪ ಅತ್ತಿಬೆಲೆ	ಮುನಿಯಮ್ಮ – ಪತ್ನಿ	50.000/–
15	ಕುಂಗುರು ಮುನಿಯಪ್ಪ ಅತ್ತಿಬೆಲೆ	ರತ್ನಮ್ಮ – ಪತ್ನಿ	50.000/–
16	ಚಂದ್ರಪ್ಪ ಅತ್ತಿಬೆಲೆ	ವಸಂತಮ್ಮ – ಪತಿ	50.000/–
17	ಯಲ್ಲಮ್ಮ ಅತ್ತಿಬೆಲೆ	ಮುತ್ತಪ್ಪ – ಪತಿ	50.000/–
18	ಶ್ರೀಧರ ಅತ್ತಿಬೆಲೆ	ಗುರುಬಾಲಿ – ಮಗಳು	50.000/–
19	ಅಂತೋನಿ ರಾಜ್ ಅತ್ತಿಬೆಲೆ	ಲುರ್ದ್ ಮೇರಿ – ಪತ್ನಿ	50.000/–
20	ಇದಾಯತ್ ಅತ್ತಿಬೆಲೆ	ಖಾಸಿಂ – ತಂದೆ	50.000/–

ಬೆಂಗಳೂರು ಗ್ರಾಮಾಂತರ ಜಿಲ್ಲೆ

1	ವೆಂಕಟಮ್ಮ ಕೋಂ ಲೇಟ್ ವೆಂಕಟೇಶಪ್ಪ, ನಡವತ್ತಿ ವಿಲೇಜ್ ಹೊಸಕೋಟೆ	*	50.000/–
2	ವೆಂಕಟಲಕ್ಷ್ಮಮ್ಮ ಕೋಂ ಲೇಟ್ ವೆಂಕಟೇಶ್ ಸಮೇತನಹಳ್ಳಿ, ಹೊಸಕೋಟೆ	*	50.000/–
3	ತಿಮ್ಮರಾಯಪ್ಪ ಬಿನ್ ಗಿರಿಯಪ್ಪ ನಡವಿನಪುರ, ಹೊಸಕೋಟೆ	*	50.000/–
4	ಪಾರ್ವತಮ್ಮ ಕೋಂ ವೆಂಕಟೇಶಪ್ಪ ಭೀಮಾಪುರ, ಹೊಸಕೋಟೆ	*	50.000/–
5	ಸುಬ್ರಮಣಿ ಬಿನ್ ಅಂಜಿನಪ್ಪ ಶಿವನಾಪುರ ಗ್ರಾಮ, ಹೊಸಕೋಟೆ	*	50.000/–
6	ಕೃಷ್ಣಪ್ಪ ಬಿನ್ ಲೇಟ್ ಮೂಗಪ್ಪ	*	50.000/–

	ಗಂಜಾರನಹಳ್ಳಿ, ಹೊಸಕೋಟೆ ತಾಲ್ಲೂಕು		
7	ಸರೋಜಮ್ಮ ಕೋಂ ಮುನಿಕೃಷ್ಣ ಸಮೇತನ ಹಳ್ಳಿ, ಹೊಸಕೋಟೆ ತಾಲ್ಲೂಕು	*	50.000/-
8	ಮಂಜುನಾಥಾಚಾರಿ ಬಿನ್ ಲಕ್ಷಣಾಚಾರಿ, ಸಮೇತನಹಳ್ಳಿ, ಹೊಸಕೋಟೆ ತಾಲ್ಲೂಕು	*	50.000/-
9	ವೆಂಕಟಸ್ವಾಮಿ ಬಿನ್ ರಾಮಯ್ಯ, ತತ್ತನೂರು, ಹೊಸಕೋಟೆ ತಾಲ್ಲೂಕು	*	50.000/-
10	ನಾರಾಯಣಪ್ಪ ಬಿನ್ ಮುನಿಸ್ವಾಮಪ್ಪ, ಭೀಮಾಪುರ, ಹೊಸಕೋಟೆ ತಾಲ್ಲೂಕು	*	50.000/-
11	ಚಿಕ್ಕಪ್ಪಯ್ಯ ಬಿನ್ ಉತ್ತಾನಲ್ಲಯ್ಯ ಶಿವನಾಪುರ, ಹೊಸಕೋಟೆ ತಾಲ್ಲೂಕು	*	50.000/-
12	ಮೀನಾಕ್ಷಮ್ಮ ಕೋಂ ವೆಂಕಟೇಶ್ ಗಡಿಗೇನ ಹಳ್ಳಿ, ಹೊಸಕೋಟೆ ತಾಲ್ಲೂಕು	*	50.000/-
13	ಪಾರ್ವತಮ್ಮ ಕೋಂ ವೆಂಕಟೇಶ್ ಗಡಿಗೇನ ಹಳ್ಳಿ, ಹೊಸಕೋಟೆ ತಾಲ್ಲೂಕು	*	50.000/-

ಕೋಲಾರ ಜಿಲ್ಲೆ

1	ಕರಗಪ್ಪ ಬಿನ್ ಲೇಟ್ ಚೆನ್ನಪ್ಪ ಟೇಕಲ್ ಗ್ರಾಮ	ನೇತ್ರಾವತಿ – ಮಗಳು	60.000/-
2	ಪಾಯಪ್ಪ ಬಿನ್ ಲೇಟ್ ಗೋಪಾಲಪ್ಪ, ಟೇಕಲ್ ಗ್ರಾಮ	ಎಲ್ಲಮ್ಮ – ಪತ್ನಿ	61.000/-
3	ಮುನಿಸ್ವಾಮಿ ಬಿನ್ ಬೋಡಪ್ಪ ನರಸಾಪುರ	ಕೃಷ್ಣಮ್ಮ – ಪತ್ನಿ	61.000/-
4	ಚಿನ್ನಕ್ಕ ಕೋಂ ಚಿಕ್ಕನಾರಾಯಣ ನರಸಾಪುರ	ಚಿನ್ನಪ್ಪ – ಮಗ	51.000/-
5	ಪಾಪಮ್ಮ ಕೋ ವೆಂಕಟರಮಣಪ್ಪ ನರಸಾಪುರ	ವೆಂಕಟೇಶ್ – ಮಗ	50.000/-
6	ನಾರಾಯಣಸ್ವಾಮಿ ಬಿನ್ ಚಿನ್ನಕುಟ್ಟಪ್ಪ, ನರಸಾಪುರ	ಗಂಗಲಕ್ಷ್ಮಮ್ಮ – ಪತ್ನಿ	61.000/-
7	ಈಶ್ವರ್ ಬಿನ್ ನಂಜಪ್ಪ ಬೆಳ್ಳೂರು ಗ್ರಾಮ	ಮುನಿಯಮ್ಮ – ತಾಯಿ	60.000/-
8	ನಾರಾಯಣಮ್ಮ ಕೋಂ ನಂಜಪ್ಪ	ತ್ಯಾಗರಾಜ್ – ಮಗ	51.000/-

	ನರಸಾಪುರ ಗ್ರಾಮ		
9	ಮುಂಜುನಾಥ್ ಬಿನ್ ಚಂದ್ರಪ್ಪ ನರಸಾಪುರ	ಯಲ್ಲಮ್ಮ – ಪತ್ನಿ	61.000/–
10	ಶ್ರೀನಿವಾಸ್ ಬಿನ್ ರಾಘವಪ್ಪ ಬೆಳ್ಳೂರು ಗ್ರಾಮ	ಶಾಂತಮ್ಮ – ಪತ್ನಿ	60.000/–
11	ಸುಬ್ರಮಣಿ ಬಿನ್ ಕೃಷ್ಣಸ್ವಾಮಿ ಟೇಕಲ್ ಗ್ರಾಮ	ಬಿ.ಪಿ.ಪುಟ್ಟಮ್ಮ – ಪತ್ನಿ	50.000/–
12	ರಾಮಕ್ಕ ಕೋಂ ಕೃಷ್ಣಪ್ಪ ಟೇಕಲ್ ಗ್ರಾಮ	ಕೃಷ್ಣಪ್ಪ – ಪತಿ	51.000/–
13	ಕೃಷ್ಣಪ್ಪ ಬಿನ್ ಲೇಟ್ ನಾರಾಯಣಪ್ಪ ಟೇಕಲ್ ಗ್ರಾಮ	ಯಲ್ಲಮ್ಮ – ಪತ್ನಿ	10.000/–
14	ಮುನಿಯಪ್ಪ ಬಿನ್ ಸಾದಪ್ಪ ಟೇಕಲ್ ಗ್ರಾಮ	ನಾರಾಯಣಸ್ವಾಮಿ – ಮಗ	51.000/–
15	ಸಮೀವುಲ್ಲಾ ಬಿನ್ ಪೈಂಟರ್ ಬಾಬು, ಬೆಳ್ಳೂರು ಗ್ರಾಮ	ಮಮ್‌ತಾಜ್ – ಪತ್ನಿ	60.000/–
16	ಮುನಿಯಪ್ಪ ಬಿನ್ ಮುನಿಯಪ್ಪ ಗೆದ್ದೆ ಕಣ್ಣೂರು, ಟಮಕ	ಡಿ.ಮುನಿಯಪ್ಪ – ತಂದೆ	60.000/–
17	ಗುಂಡಪ್ಪ ಬಿನ್ ಲೇಟ್ ಮಕರಂದಪ್ಪ, ಟೇಕಲ್ ಗ್ರಾಮ	ಮುನಿಯಮ್ಮ – ಪತ್ನಿ	60.000/–
18	ವೆಂಕಟೇಶ್ ಶೆಟ್ಟಿ ಬಿನ್ ವಿಜಯಪ್ಪ ಶೆಟ್ಟಿ, ಟೇಕಲ್ ಗ್ರಾಮ	ಶ್ವೇತಾ – ಪತ್ನಿ	61.000/–
19	ನಾಗಮ್ಮ ಕೋಂ ಈರಪ್ಪ ನರಸಾಪುರ ಗ್ರಾಮ	ಹರೀಶ್ – ಮಗ	50.000/–
20	ಗಾಂಧಿ ಬಿನ್ ದೊರೈ ರಾಜ್ ಬಂಗಾರಪೇಟೆ	ಗೋಪಿ – ಪೋಷಕರು	60.000/–
21	ಪುಷ್ಪರಾಜ್ ಬಿನ್ ಚೆನ್ನಸ್ವಾಮಿ ಬಂಗಾರಪೇಟೆ ತಾಲ್ಲೂಕು	ಜಯಲಕ್ಷ್ಮಮ್ಮ – ಪತ್ನಿ	60.000/–
22	ಮುನಿಯಪ್ಪ ಬಿನ್ ಬಿ.ಮುನಿಯಪ್ಪ ಟೇಕಲ್ ಗ್ರಾಮ	ದಾಸಪ್ಪ – ತಂದೆ	60.000/–

<u>ಹಾಸನ ಜಿಲ್ಲೆ</u>

1	ಧರ್ಮಯ್ಯ ಬಿನ್ ಕರಿಯಯ್ಯ ಹಿರಿಯೂರು	ವಿ.ಡಿ.ರಾಜು – ಮಗ	50.000/-
2	ಗೌರಮ್ಮ ಕೋಂ ಧರ್ಮಯ್ಯ ಹಿರಿಯೂರು	ವಿ.ಡಿ.ರಾಜು – ಮಗ	50.000/-
3	ಕುಶಾಲಪ್ಪ ಬಿನ್ ಅಣ್ಣಪ್ಪ ಗೌಡ ಕರಡಿಗಾಲ ಗ್ರಾಮ	ಕುಸುಮಾವತಿ – ಪತ್ನಿ	50.000/-
4	ಮೊಗಣ್ಣಗೌಡ ಬಿನ್ ಮುತ್ತೇಗೌಡ ಬುಮಾರ ಹಳ್ಳಿ	ರುಕ್ಮಣಿ – ಪತ್ನಿ	50.000/-

(ಸಣ್ಣಭತ್ತಪ್ಪ)
ಅಬಕಾರಿ ಜಂಟಿ ಆಯುಕ್ತರು
ಅಬಕಾರಿ ಇಲಾಖೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : (127)221
ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ (ಬೀದರ್)
ಉತ್ತರಿಸುವ ಮಂತ್ರಿಗಳು : (ಕೆ.ಸಿ.ಎಂ.ಉದಾಸಿ) ಲೋಕೋಪಯೋಗಿ ಸಚಿವರು

ಅ) ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಯ ವಶದಲ್ಲಿರುವ ಸಚಿವರ ಅಧಿಕೃತ ನಿವಾಸಗಳ ಸಂಖ್ಯೆ ಎಷ್ಟು; ಅವು ಎಲ್ಲೆಲ್ಲಿ ಇವೆ;

ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಯ ವಶದಲ್ಲಿರುವ ಸಚಿವರ ಅಧಿಕೃತ ನಿವಾಸಗಳ ಸಂಖ್ಯೆ 20.

ಅವುಗಳ ವಿವರವನ್ನು ಅನುಬಂಧ-1ರಲ್ಲಿ ಸಲ್ಲಿಸಲಾಗಿದೆ.

ಆ) ಇವುಗಳನ್ನು ರಾಜ್ಯ ಸಚಿವ ಸಂಪುಟದ ಯಾವ ಯಾವ ಸಚಿವರಿಗೆ ಹಾಗೂ ಇತರರಿಗೆ ಹಂಚಿಕೆ ಮಾಡಲಾಗಿದೆ;

ರಾಜ್ಯ ಸಚಿವ ಸಂಪುಟದ ಸಚಿವರಿಗೆ ಹಾಗೂ ಇತರರಿಗೆ ಹಂಚಿಕೆ ಮಾಡಿರುವ ವಿವರಗಳನ್ನೂ ಸಹ ಅನುಬಂಧ-1ರಲ್ಲಿ ಸಲ್ಲಿಸಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಈ ಮನೆಗಳ ನವೀಕರಣ ಕಾಮಗಾರಿಗಳಿಗೆ ವೆಚ್ಚ ಮಾಡಲಾದ ಹಣವೆಷ್ಟು

ಕಳೆದ ಮೂರು ವರ್ಷಗಳಲ್ಲಿ ಈ ಮನೆಗಳ ನವೀಕರಣ ಕಾಮಗಾರಿಗಳಿಗೆ ವೆಚ್ಚ ಮಾಡಲಾದ ಹಣದ ವಿವರ ಈ ಕೆಳಕಂಡಂತಿದೆ;

2005–06 ರೂ. 47.63 ಲಕ್ಷಗಳು

2005–07 ರೂ. 241.15 ಲಕ್ಷಗಳು

2005–08 ರೂ. 185.10 ಲಕ್ಷಗಳು

ಈ) ನೂತನ ಸರ್ಕಾರದ ಸಚಿವರುಗಳಿಗೆ ಹಂಚಿಕೆ ಮಾಡಲಾಗಿರುವ ಮನೆಗಳಿಗೆ ಪುನಃ ನವೀಕರಣ ಕಾಮಗಾರಿಗಳನ್ನು ನಡೆಸುತ್ತಿರುವುದು ನಿಜವಲ್ಲವೆ;

ಹೌದು

ಉ) ಹಾಗಿದ್ದಲ್ಲಿ ಅದಕ್ಕೆ ವೆಚ್ಚ ಮಾಡುತ್ತಿರುವ ಹಣವೆಷ್ಟು (ಪ್ರತಿ ಮನೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಸದರಿ ಮನೆಗಳಿಗೆ ವೆಚ್ಚ ಮಾಡುತ್ತಿರುವ ವಿವರಗಳನ್ನು ಅನುಬಂಧ–2ರಲ್ಲಿ ಸಲ್ಲಿಸಲಾಗಿದೆ.

ಊ) ವಾಸ್ತುದೋಷದ ಹೆಸರಿನಲ್ಲಿ ಈ ಮನೆಗಳನ್ನು ನವೀಕರಣ ಮಾಡುವ ಮೂಲಕ ವೃಥಾ ಹಣವನ್ನು ವ್ಯರ್ಥ ಮಾಡುವುದನ್ನು ತಪ್ಪಿಸಲು ಮುಂದಿನ ದಿನಗಳಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಸದರಿ ಮನೆಗಳಿಗೆ ಕೇವಲ ದುರಸ್ತಿ ಮತ್ತು ನವೀಕರಣ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಆದರೆ, ವಾಸ್ತು ದೋಷದ ಹೆಸರಿನಲ್ಲಿ ಈ ಮನೆಗಳನ್ನು ನವೀಕರಣ ಮಾಡಿರುವುದಿಲ್ಲ.

ಅನುಬಂಧ–1

ಕ್ರಸಂ	ಸರ್ಕಾರಿ ಅಧಿಕೃತ ನಿವಾಸದ ವಿವರ : ವಿಳಾಸ	ಹಂಚಿಕೆಯಾಗಿರುವ ವಿವರ
1	ಅನುಗ್ರಹ, ಕೆ.ಕೆ. ರಸ್ತೆ, ಬೆಂಗಳೂರು	ಮಾನ್ಯ ಮುಖ್ಯಮಂತ್ರಿಗಳು
2	ಕಾವೇರಿ, ಕೆ.ಕೆ. ರಸ್ತೆ, ಬೆಂಗಳೂರು	ಯಾವ ಸಚಿವರಿಗೂ ಇನ್ನೂ ಹಂಚಿಕೆಯಾಗಿರುವುದಿಲ್ಲ
3	ಕೆ.ಕೆ. ದಕ್ಷಿಣ, 1, ಕೆ.ಕೆ. ರಸ್ತೆ, ಬೆಂಗಳೂರು	ಮಾನ್ಯ ವಿರೋಧಪಕ್ಷದ ನಾಯಕರು
4	ಕೆ.ಕೆ. ದಕ್ಷಿಣ, 2, ಕೆ.ಕೆ. ರಸ್ತೆ, ಬೆಂಗಳೂರು	ಮಾನ್ಯ ಇಂಧನ ಸಚಿವರು
5	ಕೆ.ಕೆ. ದಕ್ಷಿಣ, 3, ಕೆ.ಕೆ. ರಸ್ತೆ, ಬೆಂಗಳೂರು	ಮಾನ್ಯ ಸಭಾಧ್ಯಕ್ಷರು
6	ವಸತಿ ಗೃಹ ಸಂಖ್ಯೆ : 30 ಸ್ಯಾಂಕಿ ರಸ್ತೆ ಬೆಂಗಳೂರು	ಮಾನ್ಯ ಕೃಷಿ ಮಾರುಕಟ್ಟೆ ಹಾಗೂ ಸಕ್ಕರೆ ಸಚಿವರು

7	ವಸತಿ ಗೃಹ ಸಂಖ್ಯೆ : 31 ಸ್ಯಾಂಕಿ ರಸ್ತೆ ಬೆಂಗಳೂರು	ಮಾನ್ಯ ಕಾನೂನು, ನ್ಯಾಯಾ, ಮಾನವ ಹಕ್ಕು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು
8	ಹೌಸಿಂಗ್ ಬೋರ್ಡ್ ವಸತಿ ಗೃಹ ಸಂಖ್ಯೆ : 2 ಕ್ರಿಸೆಂಟ್ ರಸ್ತೆ, ಬೆಂಗಳೂರು	ಮಾನ್ಯ ಲೋಕೋಪಯೋಗಿ ಸಚಿವರು
9	ಹೌಸಿಂಗ್ ಬೋರ್ಡ್ ವಸತಿ ಗೃಹ ಸಂಖ್ಯೆ : 3 ಕ್ರಿಸೆಂಟ್ ರಸ್ತೆ, ಬೆಂಗಳೂರು	ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು
10	ನಂ.1 ರೇಸ್‌ವ್ಯೂ ಕಾಟೇಜ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು	ಮಾನ್ಯ ಕಂದಾಯ ಸಚಿವರು
11	ನಂ.2 ರೇಸ್‌ವ್ಯೂ ಕಾಟೇಜ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
12	ಹೌಸಿಂಗ್ ಬೋರ್ಡ್ ವಸತಿ ಗೃಹ ಸಂಖ್ಯೆ : 4 ರೇಸ್‌ಕೋರ್ಸ್ ರಸ್ತೆ, ಬೆಂಗಳೂರು	ಮಾನ್ಯ ಗೃಹ ಸಚಿವರು
13	ಸಪ್ತ ಸಚಿವರ ನಿವಾಸ ಸಂಖ್ಯೆ–1 ಸ್ಯಾಂಕಿ ರಸ್ತೆ, ಬೆಂಗಳೂರು	ಮಾನ್ಯ ಸಮಾಜ ಕಲ್ಯಾಣ ಸಚಿವರು
14	ಸಪ್ತ ಸಚಿವರ ನಿವಾಸ ಸಂಖ್ಯೆ–3 ಸ್ಯಾಂಕಿ ರಸ್ತೆ, ಬೆಂಗಳೂರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
15	ಸಪ್ತ ಸಚಿವರ ನಿವಾಸ ಸಂಖ್ಯೆ–4 ಸ್ಯಾಂಕಿ ರಸ್ತೆ, ಬೆಂಗಳೂರು	ಮಾನ್ಯ ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು
16	ಸಪ್ತ ಸಚಿವರ ನಿವಾಸ ಸಂಖ್ಯೆ–6 ಸ್ಯಾಂಕಿ ರಸ್ತೆ, ಬೆಂಗಳೂರು	ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು
17	ಸಪ್ತ ಸಚಿವರ ನಿವಾಸ ಸಂಖ್ಯೆ–7 ಸ್ಯಾಂಕಿ ರಸ್ತೆ, ಬೆಂಗಳೂರು	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು
18	ವಸತಿ ಗೃಹ ಸಂ– ಬಿ–2 ಜಯಮಹಲ್ ಬಡಾವಣೆ ಬೆಂಗಳೂರು	ಮಾನ್ಯ ಕಾರ್ಮಿಕ ಸಚಿವರು
19	ವಸತಿ ಗೃಹ ಸಂ– ಬಿ–3 ಜಯಮಹಲ್ ಬಡಾವಣೆ ಬೆಂಗಳೂರು	ಮಾನ್ಯ ಸಾರಿಗೆ ಸಚಿವರು
20	ವಸತಿ ಗೃಹ ಸಂ– ಬಿ–5 ಜಯಮಹಲ್ ಬಡಾವಣೆ ಬೆಂಗಳೂರು	ಮಾನ್ಯ ಜವಳಿ ಹಾಗೂ ಯುವ ಜನ ಸೇವಾ ಸಚಿವರು

ಅನುಬಂಧ-2

ಕ್ರಸಂ	ನಿವಾಸದ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1	ಅನುಗ್ರಹ, ಕೆ.ಕೆ. ರಸ್ತೆ	11.30
2	ವಸತಿ ಗೃಹ ಸಂಖ್ಯೆ – 30, ಸ್ಯಾಂಕಿ ರಸ್ತೆ	6.95
3	ಕೆ.ಕೆ.ದಕ್ಷಿಣ, 2, ಕೆ.ಕೆ. ರಸ್ತೆ	6.00
4	ಕೆ.ಕೆ. ದಕ್ಷಿಣ, 3, ಕೆ.ಕೆ. ರಸ್ತೆ	9.25
5	ವಸತಿ ಗೃಹ ಸಂಖ್ಯೆ – 2, ಕ್ರೆಸೆಂಟ್ ರಸ್ತೆ	7.18
6	ವಸತಿ ಗೃಹ ಸಂಖ್ಯೆ – 3, ಕ್ರೆಸೆಂಟ್ ರಸ್ತೆ	5.35
7	ವಸತಿ ಗೃಹ ಸಂಖ್ಯೆ – 31, ಸ್ಯಾಂಕಿ ರಸ್ತೆ	7.50
8	ವಸತಿ ಗೃಹ ಸಂಖ್ಯೆ – 1 ರೇಸ್ ವ್ಯೂ ಕಾಟೇಜ್, ರೇಸ್ ಕೋರ್ಸ್ ರಸ್ತೆ	16.58
9	ಸಪ್ತ ಸಚಿವರ ವಸತಿ ಗೃಹ ಸಂಖ್ಯೆ – 1 ಸ್ಯಾಂಕಿ ರಸ್ತೆ	14.00
10	ಸಪ್ತ ಸಚಿವರ ವಸತಿ ಗೃಹ ಸಂಖ್ಯೆ – 3 ಸ್ಯಾಂಕಿ ರಸ್ತೆ	4.00
11	ಸಪ್ತ ಸಚಿವರ ವಸತಿ ಗೃಹ ಸಂಖ್ಯೆ – 4 ಸ್ಯಾಂಕಿ ರಸ್ತೆ	10.00
12	ಸಪ್ತ ಸಚಿವರ ವಸತಿ ಗೃಹ ಸಂಖ್ಯೆ – 6 ಸ್ಯಾಂಕಿ ರಸ್ತೆ	10.00
13	ಸಪ್ತ ಸಚಿವರ ವಸತಿ ಗೃಹ ಸಂಖ್ಯೆ – 7 ಸ್ಯಾಂಕಿ ರಸ್ತೆ	12.00
14	ಬೆಂಗಳೂರು ಜಯಮಹಲ್ ಬಡಾವಣೆಯಲ್ಲಿರುವ ಸರ್ಕಾರಿ ವಸತಿ ಗೃಹ ಸಂ: ಎ–2	12.00
15	ಬೆಂಗಳೂರು ಜಯಮಹಲ್ ಬಡಾವಣೆಯಲ್ಲಿರುವ ಸರ್ಕಾರಿ ವಸತಿ ಗೃಹ ಸಂ: ಎ–3	10.00
16	ಬೆಂಗಳೂರು ಜಯಮಹಲ್ ಬಡಾವಣೆಯಲ್ಲಿರುವ ಸರ್ಕಾರಿ ವಸತಿ ಗೃಹ ಸಂ: ಎ–5	5.00
17	ನಂ.2 ರೇಸ್‌ವ್ಯೂ ಕಾಟೇಜ್ ರೇಸ್ ಕೋರ್ಸ್ ರಸ್ತೆ ಬೆಂಗಳೂರು	4.00

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (128)222
ಮಾನ್ಯ ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ) ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಬೀದರ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ಸ್ಥಳಗಳನ್ನು ಪ್ರವಾಸೋದ್ಯಮ ತಾಣಗಳೆಂದು ಗುರುತಿಸಲಾಗಿದೆ

ಬೀದರ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಾನಕ್ ಝುರಾ, ನರಸಿಂಹ ಜಾರಿಣಿ, ಬೀದರ್ ಕೋಟೆ, ಪಾಪನಾಶ ಶಿವ ದೇವಾಲಯ, ಅಷ್ಟೂರಿನ ಬಹುಮನಿ ಸಮಾಧಿಗಳು, ಚೌಬಾರ, ಮಹಮದ್ ಗವಾನ್ ಮದರಸಾ ಮುಂತಾದವು ಪ್ರವಾಸಿ ತಾಣಗಳೆಂದು ಗುರುತಿಸಲ್ಪಟ್ಟಿದೆ.

ಆ) ಈ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಹಾಗು ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಸರ್ಕಾರ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆಯೇ;

ಹೌದು, ಅಭಿವೃದ್ಧಿಯ ಕಾರ್ಯ ಪ್ರಗತಿಯಲ್ಲಿದೆ.

ಇ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಹಣವೆಷ್ಟು;

ಕಳೆದ ಮೂರು ವರ್ಷಗಳ ಅವಧಿಯಲ್ಲಿ ರೂ.2.50 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರದ ಅನುದಾನದಿಂದ ಬಿಡುಗಡೆ ಮಾಡಲಾಗಿದ್ದು ಇಲ್ಲಿಯವರೆಗೆ ರೂ.40,60,915.00 ಗಳನ್ನು ಖರ್ಚು ಮಾಡಲಾಗಿದೆ.

ಈ) ಇದರಿಂದ ಯಾವ ಯಾವ ಪ್ರವಾಸಿ ತಾಣದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

1. ಚೌಬಾರ ಬಳಿ ಹೈಮಾಸ್ಟ್ ಲ್ಯಾಂಪ್ ಅಳವಡಿಸುವುದು ಹಾಗೂ ರಸ್ತೆ ಅಗಲೀಕರಣ .
2. ಪಾಪನಾಶ ಕೆರೆ ಅಭಿವೃದ್ಧಿ (ಹೂಳೆತ್ತುವುದು)
3. ಅಲಿಬರೀದ ಆವರಣ ಗೋಡೆ ನಿರ್ಮಾಣ
4. ಬರೀದ್ ಷಾಹಿ ಗಾರ್ಡನ್ ಅಭಿವೃದ್ಧಿ
5. ಬೀದರ್ ಕೋಟೆ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ.

ಉ) ಈ ಪ್ರವಾಸಿ ತಾಣಗಳ ಅಭಿವೃದ್ಧಿಯ ಸಂಬಂಧವಾಗಿ ಯಾವ ಯಾವ ಕಾಮಗಾರಿಗಳು ಪ್ರಗತಿಯಲ್ಲಿವೆ;

ಪ್ರಶ್ನೆ (ಈ) ನಲ್ಲಿ ಪ್ರಸ್ತಾಪಿಸಿರುವ ಅಭಿವೃದ್ಧಿ ಕಾರ್ಯಗಳ ಜೊತೆಗೆ 1. ಬೀದರ್ ಕೋಟೆಗೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗಿದೆ. ಟೆಂಡರ್ ಪ್ರಕ್ರಿಯೆಯಾಗುವ ಹಂತದಲ್ಲಿದೆ.

2. ಅಕ್ಟೋಬರ್ ಮಾಹೆಯಲ್ಲಿ ನಡೆಯಲಿರುವ 300ನೇ ವರ್ಷದ ಗುರ್ ತಾ ಗದ್ದಿ ಕಾರ್ಯಕ್ರಮಕ್ಕೆ ಆಗಮಿಸಲಿರುವ ಪ್ರವಾಸಿಗರಿಗೆ ಸೌಲಭ್ಯ ಕಲ್ಪಿಸಲು ರೂ.1500 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಊ) ಬೀದರ್ ನಗರವನ್ನು ಪ್ರವಾಸಿ ತಾಣವನ್ನಾಗಿ ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆಯೇ?

ಪ್ರಸ್ತಾವನೆಗಳು ಬಂದಿದ್ದು ಅಭಿವೃದ್ಧಿ ಕಾರ್ಯಗಳನ್ನು ಹಂತಹಂತವಾಗಿ ಕೈಗೊಳ್ಳಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (457)224
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ (ಬೀದರ್)
ಉತ್ತರಿಸುವವರು : (ಶ್ರೀ ಬಿ.ಎಸ್.ಯಡಿಯೂರಪ್ಪ) ಮಾನ್ಯ ಮುಖ್ಯ ಮಂತ್ರಿಗಳು

ಅ) ರಾಮನಗರ ಜಿಲ್ಲೆಯ ರಾಮನಗರ ಪ್ರಾದೇಶಿಕ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಬರುವ ಹುಲ್ತಾರ್ ಸ್ಟೇಟ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಎಷ್ಟು ಕ್ರಶರ್‌ಗಳು ಅರಣ್ಯ ಇಲಾಖೆಯ ಅನುಮತಿ ಪಡೆದು ಕಾರ್ಯನಿರ್ವಹಿಸುತ್ತಿವೆ;

ರಾಮನಗರ ಪ್ರಾದೇಶಿಕ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಬರುವ ಹುಲ್ತಾರ್‌ನ ಎ ಮತ್ತು ಬಿ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ನ್ಯಾಯಾಲಯದ ಆದೇಶದನ್ವಯ 8 ಜಲ್ಲಿ ಕ್ರಶರ್‌ಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಿಗೆ ಅರಣ್ಯ ಇಲಾಖೆಯ ಪರವಾನಿಗೆ ದೊರೆತಿಲ್ಲ.

ಆ) ಎಷ್ಟು ಕ್ರಶರ್‌ಗಳು ಇಲಾಖೆಯ ಪರವಾನಗಿ ಮತ್ತು ಅನುಮತಿ ಇಲ್ಲದೇ ಕಾರ್ಯನಿರ್ವಹಿಸುತ್ತಿವೆ; (ವಿವರ ಒದಗಿಸುವುದು)

8 ಕ್ರಶರ್‌ಗಳು ಕೋರ್ಟ್‌ನ ಆದೇಶದನ್ವಯ ಕೆಲಸ ಮಾಡುತ್ತಿದೆ. ಆದರೆ, ಇವುಗಳಿಗೆ ಅರಣ್ಯ ಇಲಾಖೆಯಿಂದ ಪರವಾನಗಿಯನ್ನು ನೀಡಿರುವುದಿಲ್ಲ.

ಇ) ಈ ವಲಯದಲ್ಲಿ ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಕ್ರಶರ್‌ಗಳಿಗೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಷ್ಟು ಜನ ವಲಯಾರಣ್ಯ ಅಧಿಕಾರಿಗಳ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿ ಇಡಲಾಗಿತ್ತು; ಇವರ ಹೆಸರು ವಿವರಗಳೇನು; (ಪ್ರಕರಣದ ಪೂರ್ಣ ವಿವರಗಳು ಹಾಗೂ ಇದರಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿವರಗಳನ್ನು ಒದಗಿಸುವುದು)

ರಾಮನಗರ ವಲಯ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶಗಳಲ್ಲಿ ಕ್ರಶರ್‌ಗಳನ್ನು ಉಪಯೋಗಿಸಿ ಅಕ್ರಮವಾಗಿ ಕಲ್ಲುಗಳನ್ನು ತೆಗೆಯುವುದನ್ನು ತಡೆಗಟ್ಟಲು ವಿಫಲರಾದ ಆಪಾದನೆ ಮೇಲೆ ಶ್ರೀ ಡಿ.ದೇವರಾಜು, ಅಂದಿನ ವಲಯ ಅರಣ್ಯಾಧಿಕಾರಿ,

ರಾಮನಗರ ಇವರನ್ನು ದಿನಾಂಕ 26.05.2006ರ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಈ) ಈ ಪ್ರಕರಣ ಈಗ ಯಾವ ಹಂತದಲ್ಲಿದೆ; ಈ ಪ್ರಕರಣದಲ್ಲಿ ಶಾಮೀಲಾಗಿರುವ ಎಷ್ಟು ಜನ ಅಧಿಕಾರಿಗಳಿಗೆ ಶಿಕ್ಷೆ ನೀಡಲಾಗಿದೆ; ಈ ಪ್ರಕರಣದಲ್ಲಿ ಭಾಗಿಯಾಗಿದ್ದು, ಅಮಾನತ್ತಿಗೆ ಒಳಗಾಗಿದ್ದ ಎಷ್ಟು ಜನರಿಗೆ ಯಾವ ಹುದ್ದೆಗೆ ಬಡ್ತಿ ನೀಡಲಾಗಿದೆ (ಹೆಸರು ವಿವರಗಳು ಒದಗಿಸುವುದು);

ಈ ಪ್ರಕರಣದಲ್ಲಿ ಶ್ರೀ ಡಿ.ದೇವರಾಜ ಇವರು ಅರಣ್ಯ ಪ್ರದೇಶದಲ್ಲಿ ನಡೆಸುತ್ತಿದ್ದ ಗಣಿಗಾರಿಕೆ ಬಗ್ಗೆ ಮೊಕದ್ದಮೆ ದಾಖಲೆ ಮಾಡಿ ನ್ಯಾಯಾಲಯಕ್ಕೆ ವರದಿ ಮಾಡಿದ್ದಾರೆ. ಇವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವವರಿಗೆ ಪ್ರೋತ್ಸಾಹ ನೀಡಿಲ್ಲದಿರುವುದು ತನಿಖಾ ವರದಿಯಲ್ಲಿ ವ್ಯಕ್ತವಾದ ಕಾರಣ ಇವರ ವಿರುದ್ಧ ಉದ್ದೇಶಿಸಲಾಗಿದ್ದ ಶಿಸ್ತು ಕ್ರಮವನ್ನು ದಿನಾಂಕ 22.01.2007ರ ಆದೇಶದಲ್ಲಿ ಕೈಬಿಡಲಾಗಿದೆ.

ಉ) ಮೇಲ್ಕಂಡ ಗುರುತರವಾದ ವಿಚಾರಣೆ ಎದುರಿಸುತ್ತಿರುವ ಅಧಿಕಾರಿಗಳಿಗೆ ಶಿಕ್ಷೆಗೆ ಬದಲು ಬಡ್ತಿ ನೀಡಿರುವುದು ಸರಿಯೇ; ಹಾಗಿದ್ದಲ್ಲಿ ಸರ್ಕಾರ ಈ ವಿಷಯವನ್ನು ಪುನರ್ ಪರಿಶೀಲನೆ ಮಾಡಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳುವುದು;

ಶ್ರೀ ಡಿ.ದೇವರಾಜು ವಲಯ ಅರಣ್ಯಾಧಿಕಾರಿ ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅವರನ್ನು ಬಡ್ತಿಗಾಗಿ ಪರಿಶೀಲಿಸುವ ಸಮಯದಲ್ಲಿ ಇಲ್ಲದಿದ್ದುರಿಂದ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಅಪಜೀ 25 ಅಪಸೇ 2008 ದಿನಾಂಕ 03/04/2008 ರಲ್ಲಿ ಸಹಾಯಕ ಸಂರಕ್ಷಣಾಧಿಕಾರಿ ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : (310)225
2) ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3) ಉತ್ತರಿಸಬೇಕಾದ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಳೆದ 3 ವರ್ಷಗಳಲ್ಲಿ ತೆರವುಗೊಳಿಸಿದ ಅನಧಿಕೃತ ಕಟ್ಟಡಗಳ ಸಂಖ್ಯೆ ಎಷ್ಟು; ಅವುಗಳ ಅಂದಾಜು ಮೌಲ್ಯ ಎಷ್ಟು (ವಿವರಗಳನ್ನು ಒದಗಿಸುವುದು);

ಕಳೆದ 3 ವರ್ಷಗಳಿಂದ ತೆರವುಗೊಳಿಸಿದ ಅನಧಿಕೃತ ಕಟ್ಟಡಗಳ ಸಂಖ್ಯೆ: 923.

ಸುಮಾರು ರೂ.1030.17 ಕೋಟಿಗಳು.

(ವಿವರಗಳನ್ನು ಅನುಬಂಧದಲ್ಲಿ ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

ಆ) ಅನಧಿಕೃತ ಕಟ್ಟಡಗಳನ್ನು ನಿರ್ಮಿಸಲು ಅನುಮತಿ ನೀಡಿರುವ ಇಲಾಖಾ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು (ಅಂಥಹ ಅಧಿಕಾರಿಗಳ ವಿವರ ನೀಡುವುದು);

ಅನಧಿಕೃತ ಪ್ರಕರಣಗಳು ವಿವಿಧ ಪ್ರಕಾರಗಳಿರುತ್ತವೆ. ಬಿಬಿಎಂಪಿ ವ್ಯಾಪ್ತಿಗೆ ಬರುವ ಅನಧಿಕೃತ ಕಟ್ಟಡಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವಾಧೀನ ಪಡಿಸಿಕೊಂಡ ಜಮೀನುಗಳ ಹಾಗೂ ಸರ್ಕಾರಿ ಜಮೀನುಗಳ ಅನಧಿಕೃತ ಕಟ್ಟಡಗಳನ್ನು ವಿವಿಧ ಇಲಾಖೆಗಳಾದ, ಕಂದಾಯ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿಯಂತ್ರಿಸಲಾಗುತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿನ ಒತ್ತುವರಿ ಹಾಗೂ ಅನಧಿಕೃತ ಕಟ್ಟಡಗಳನ್ನು ಪ್ರಾಧಿಕಾರವು ನಿರಂತರವಾಗಿ ತೆರವುಗೊಳಿಸುತ್ತಿದ್ದು, ಅನಧಿಕೃತ ಕಟ್ಟಡಗಳಿಗೆ ಮಂಜೂರಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಹಾಲಿ ಇರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಎಚ್ಚರಿಕೆಯಿಂದ ಹಾಗೂ ಮಾನವೀಯತೆಯ ದೃಷ್ಟಿಯಿಂದ ಕ್ರಮ ಕೈಗೊಳ್ಳುತ್ತಿದೆ. ಆದುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕಟ್ಟಡಗಳಿಗೆ ಅನುಮತಿ ನೀಡುವ ಮೊದಲೇ ಎಲ್ಲಾ ಕಾನೂನು ಕ್ರಮಗಳನ್ನು ಜರುಗಿಸಲು ಸರಕಾರದ ಕಟ್ಟುನಿಟ್ಟಿನ ಕ್ರಮಗಳೇನು; ಮುಂದೆ ಇಂಥ ಅಕ್ರಮಗಳನ್ನು ತಡೆಗಟ್ಟಲು ಸರಕಾರ ಪರಿಣಾಮಕಾರಿ ಕಾನೂನುಗಳನ್ನು ರಚಿಸಲು ಕ್ರಮ ಕೈಗೊಳ್ಳುವುದೇ?

ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡುವ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗುವುದು. ಅಧಿಕೃತ ಮಂಜೂರಾತಿ ಹೊಂದದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಮೀನು ಒತ್ತುವರಿ ಸಂದರ್ಭದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ. ಅನಧಿಕೃತ ನಿರ್ಮಾಣದ ತಡೆ, ವ್ಯಾಪ್ತಿ ಪ್ರದೇಶದ ಅಭಿಯಂತರರುಗಳ ಕರ್ತವ್ಯವಾಗಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ : (311)226
ಸದಸ್ಯರ ಹೆಸರು : ಶ್ರೀ ಎನ್.ಎ.ಹ್ಯಾರಿಸ್
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
: ಮುಖ್ಯಮಂತ್ರಿಯವರು

ಅ ಬಿಬಿಎಂಪಿ ವ್ಯಾಪ್ತಿಗೆ ಬರುವ ಒಟ್ಟು ಕ್ರೀಡಾಂಗಣಗಳೆಷ್ಟು; ಅವುಗಳ ಸುಸ್ಥಿತಿ ಮತ್ತು ನಿರ್ವಹಣೆಗಾಗಿ ಕೈಗೊಂಡ ಕ್ರಮಗಳೇನು;

ಪಾಲಿಕೆಯ ವ್ಯಾಪ್ತಿಯಲ್ಲಿ 14 ಕ್ರೀಡಾಂಗಣಗಳಿರುತ್ತವೆ. ಅವುಗಳ ಪೈಕಿ 9 ಕ್ರೀಡಾಂಗಣಗಳ ಕಾಮಗಾರಿಯು ಮುಕ್ತಾಯಗೊಂಡಿದ್ದು, ಉಳಿದ 5 ಕ್ರೀಡಾಂಗಣಗಳ ಕಾಮಗಾರಿಯು ಪ್ರಗತಿಯಲ್ಲಿದೆ. ಅವುಗಳ ನಿರ್ವಹಣೆಗಾಗಿ ಹೊರಗುತ್ತಿಗೆ ನೀಡಲು ಉದ್ದೇಶಿಸಿದ್ದು ಈ ಪ್ರಕ್ರಿಯೆ ಟೆಂಡರ್ ಹಂತದಲ್ಲಿರುತ್ತದೆ.

ಆ ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಾರಂಭಿಸಿದ ರಾಜೀವ ಗಾಂಧಿ ಕ್ರೀಡಾ ಸಂಕೀರ್ಣದ ಪ್ರಸ್ತುತ ಸ್ಥಿತಿಗತಿಗಳೇನು;

ಸದರಿ ಕ್ರೀಡಾಂಗಣದ ನಿರ್ವಹಣೇಗಾಗಿ ಹೊರ ಗುತ್ತಿಗೆ ನೀಡುವ ಪ್ರಕ್ರಿಯೆಯು ಟೆಂಡರ್ ಹಂತದಲ್ಲಿರುತ್ತದೆ.

ಇ ಈ ಕ್ರೀಡಾಂಗಣಕ್ಕೆ ಬಳಸಿಕೊಂಡ ಜಮೀನು ಮತ್ತು ಇತರ ವೆಚ್ಚಗಳ ವಿವರಗಳೇನು; ಈ ತನಕ ಇಲ್ಲಿ ಜರುಗಿದ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ ಇತ್ಯಾದಿಗಳ ವಿವರಗಳೇನು;

ಅದಕ್ಕಾಗಿ ಉಪಯೋಗಿಸಿದ ಜಮೀನು 5 ಎಕರೆಯಾಗಿದ್ದು ಇದನ್ನೂ ನಿರ್ಮಿಸಲು ಒಟ್ಟು ರೂ. 16.80 ಕೋಟಿಗಳು ವೆಚ್ಚವಾಗಿರುತ್ತದೆ. ಇಲ್ಲಿ 2004ನೇ ಸಾಲಿನಲ್ಲಿ ಅಂತರಾಷ್ಟ್ರೀಯ ಕಿರಿಯ ಬ್ಯಾಸ್ಕೆಟ್ ಬಾಲ್ ಕ್ರೀಡಾಕೂಟವನ್ನುನಡೆಸಲಾಗಿರುತ್ತದೆ.

ಈ ಈ ಕ್ರೀಡಾಂಗಣವನ್ನು ಕ್ರೀಡಾ ಸಂಸ್ಥೆಗಳ ನಿರ್ವಹಣೆಗೆ ಒಪ್ಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಆ ಕುರಿತಾದ ವಿವರಗಳೇನು?

ಹೊರಗುತ್ತಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಕ್ರೀಡಾ ಸಂಸ್ಥೆಗಳೂ ಸಹ ಭಾಗವಹಿಸಬಹುದಾಗಿರುತ್ತದೆ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : (312)227
ಸದಸ್ಯರ ಹೆಸರು : ಶ್ರೀ ಹ್ಯಾರಿಸ್‌ಎನ್.ಎ. (ಶಾಂತಿನಗರ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯಮಂತ್ರಿಗಳು

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ಕುರಿತಾದ ಪ್ರಗತಿಯ ವಿವರಗಳೇನು;

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಿಕೊಡಲು ಸರ್ಕಾರವು ದಿನಾಂಕ 11.02.2005ರಂದು ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಮನವಿ ಪತ್ರವನ್ನು ಸಲ್ಲಿಸಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 02.07.2008ರಂದು ಖ್ಯಾತ ಸಾಹಿತಿಗಳು ಹಾಗೂ ಪ್ರಮುಖ ಗಣ್ಯರ ನಿಯೋಗದೊಂದಿಗೆ ಸನ್ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡಲು ಮನವಿ ಸಲ್ಲಿಸಲಾಗಿದೆ.

ಆ) ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡುವಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಅರ್ಹತಾ ನೀತಿ-ನಿಯಮಗಳೇನು;

ಕೇಂದ್ರ ಸರ್ಕಾರವು ಭಾರತೀಯ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನಗಳನ್ನು ನೀಡುವ ಸಂಬಂಧ ದಿನಾಂಕ: 01.11.2004ರಲ್ಲಿ ಭಾಷಾ ತಜ್ಞರ ಸಮಿತಿಯೊಂದನ್ನು ರಚಿಸಿ. ಶಾಸ್ತ್ರೀಯ ಭಾಷೆ ಎಂದು ಘೋಷಿಸುವ ಬಗ್ಗೆ ಕೆಳಕಂಡ ಮಾನದಂಡವನ್ನು ನಿಗದಿಪಡಿಸಿದೆ:

1. ಭಾಷೆಯ ಪ್ರಾಚೀನತೆಯು ಸಾವಿರ ವರ್ಷಗಳಿಗೂ ಮಿಗಿಲಾದ ಚರಿತ್ರೆಯನ್ನು ಹೊಂದಿರಬೇಕು.
2. ಭಾಷೆಯ ಸಾಹಿತ್ಯ ಮತ್ತು ಪಠ್ಯಗಳು ಅಮೂಲ್ಯವಾದ ಪುರಾತನ ಪರಂಪರೆಯನ್ನು ಹೊಂದಿಸಬೇಕು.
3. ಅದರ ಸಾಹಿತ್ಯಕ ಸಂಪ್ರದಾಯವು ಮೂಲದ್ದಾಗಿರಬೇಕು ಹಾಗೂ ಯಾವುದೇ ಇತರ ಆಡುಭಾಷೆಯ ಸಮುದಾಯದಿಂದ ಎರವಲು ಪಡೆದದ್ದಿರಬಾರದು.
4. ಸದರಿ ಶಾಸ್ತ್ರೀಯ ಭಾಷೆ ಹಾಗೂ ಅದರ ಸಾಹಿತ್ಯವು ಈಗಿನ ಸ್ವರೂಪಕ್ಕಿಂತ ಭಿನ್ನವಾಗಿರಬೇಕು ಹಾಗೂ ಮೂಲ ಪದಗಳಿಗಿಂತ (ಗ್ರೀಕ್, ಲ್ಯಾಟೀನ್, ರೋಮನ್, ಸಂಸ್ಕೃತ, ಪಾಲಿ ಮತ್ತು ಆಧುನಿಕ ಇಂಡೋ ಆರ್ಯನ್) ಬೆಳವಣಿಗೆಯಿಂದ ಪ್ರತ್ಯೇಕಗೊಂಡಿರಬೇಕು.

ಇ) ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಪಡೆದುಕೊಳ್ಳುವ ದಿಶೆಯಲ್ಲಿ ಸರ್ಕಾರ ಮಾಡಿರುವ ಪ್ರಯತ್ನಗಳೇನು?

ಪ್ರಪ್ರಥಮವಾಗಿ ದಿನಾಂಕ 11.2.2005ರಂದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿ ಯವರು ರಾಜ್ಯ ಜನತೆಯ ಪರವಾಗಿ ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಲು ಕೋರಿ ಮನವಿ ಸಲ್ಲಿಸಿದರು. ದಿನಾಂಕ.18-05-2005 ರ ಪತ್ರವನ್ನು ಕೇಂದ್ರ ಸಂಸ್ಕೃತಿ ಸಚಿವಾಲಯಕ್ಕೆ ಬರೆದು ರಾಜ್ಯದ ಬೇಡಿಕೆಗೆ ಪೂರಕ ಟಿಪ್ಪಣಿಗಳನ್ನು ಹಾಗೂ ದಾಖಲಾತಿಗಳನ್ನು ಒದಗಿಸಲು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ದೊರಕಿಸಿಕೊಡುವುದು ಪ್ರಮುಖ ಪಾತ್ರ ವಹಿಸುವ ತಮಿಳು ವಿದ್ವಾಂಸರ ಕೃತಿಯೂ

ಸೇರಿದಂತೆ ಹಲವಾರು ಧಾಖಲೆಗಳನ್ನು ದಿನಾಂಕ:25-11-2005 ರ ಪತ್ರದಲ್ಲಿ ಸಂಸ್ಕೃತಿ ಸಚಿವಾಲಯಕ್ಕೆ ಕಳುಹಿಸಲಾಗಿದೆ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಸಹ ದಿನಾಂಕ:24-5-2006ರಂದು ಕೇಂದ್ರದ ಸಂಸ್ಕೃತಿ ಸಚಿವರು, ಮಾನವ ಸಂಪನ್ಮೂಲ ಸಚಿವರುಗಳನ್ನು ಭೇಟಿ ಮಾಡಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡುವ ಕುರಿತು ಕೋರಿಕೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಹಾಗೂಲೋಕಸಭಾ ಸದಸ್ಯರುಗಳಿಗೆ ಮಾನ್ಯ ಮುಖ್ಯಮಂತ್ರಿಯವರಿಂದ ದಿ:13-6-2006ರಂದು ಪತ್ರ ಬರೆದು ಕನ್ನಡವನ್ನು ಶಾಸ್ತ್ರೀಯ ಭಾಷೆಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರದ ಮೇಲೆ ವಿಶೇಷ ಪ್ರಭಾವ ಬೀರುವಂತೆಯು ಕೋರಲಾಗಿದೆ. ಘನತೆವೆತ್ತ ರಾಜ್ಯಪಾಲರು ದಿನಾಂಕ.14.1.2008ರಂದು ಸನ್ಮಾನ್ಯ ಪ್ರಧಾನಮಂತ್ರಿಗಳು ಹಾಗೂ ಕೇಂದ್ರ ಸಂಸ್ಕೃತಿ ಸಚಿವರಿಗೆ ಈ ನಿಟ್ಟಿನಲ್ಲಿ ಪತ್ರ ಬರೆದಿರುತ್ತಾರೆ. ಇತ್ತೀಚೆಗೆ ದಿನಾಂಕ 02.07.2008 ರಂದು ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಪ್ರಮುಖ ಗಣ್ಯರ ನಿಯೋಗದೊಂದಿಗೆ ಸನ್ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (313)228
2) ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3) ಉತ್ತರಿಸಬೇಕಾದ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ) ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಬಿ.ಡಿ.ಎ. ಬಡಾವಣೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಅಭಿವೃದ್ಧಿ ಪಡಿಸದ ಬಡಾವಣೆಗಳ ಸಂಖ್ಯೆ ಎಷ್ಟು;

ಒಟ್ಟು ಬಡಾವಣೆಗಳ ಸಂಖ್ಯೆ 257.

ಅವುಗಳಲ್ಲಿ ಅಭಿವೃದ್ಧಿ ಪಡಿಸದ ಬಡಾವಣೆಗಳು 04.

ಆ) ಅಭಿವೃದ್ಧಿ ಪಡಿಸದ ಬಡಾವಣೆಗಳ ನಿವೇಶನಗಳನ್ನು ಯಾವ ಸಾಲಿನಲ್ಲಿ ಹಂಚಿಕೆ ಮಾಡಲಾಗಿತ್ತು;

ಪ್ರಶ್ನಿತ ನಿವೇಶನಗಳನ್ನು 2002 ರಿಂದ 2004ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದೆ.

ಇ) ನಿವೇಶನದಾರರು ಮನೆ ಕಟ್ಟಿಕೊಳ್ಳಲು ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಬಿ.ಡಿ.ಎ. ಒದಗಿಸಿ ಕೊಡಲು ವಿಳಂಬ ಮಾಡಲು ಕಾರಣಗಳೇನು; ಈ ಕುರಿತು ಸರಕಾರದ ಸಕಾಲಿಕ ಕ್ರಮಗಳೇನು;

ಕಳೆದ 3 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿದ ಸರ್.ಎಂ.ವಿಶ್ವೇಶ್ವರಯ್ಯ, ಸರ್.ಎಂ.ವಿಶ್ವೇಶ್ವರಯ್ಯ ಮುಂದುವರಿದ ಬಡಾವಣೆ, ಬನಶಂಕರಿ 6ನೇ ಹಂತ ಮತ್ತು ಬನಶಂಕರಿ 6ನೆ ಹಂತ ಮುಂದುವರಿದ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿಯನ್ನು ಒದಗಿಸುವ

ಕಾರ್ಯ ಪ್ರಗತಿಯಲ್ಲಿದೆ. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕಾಮಗಾರಿಯ ಅಂದಾಜುಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಂದಾಜು ಠೇವಣಿ ಮಾಡಲು ಸಿದ್ಧವಿದೆ. ಇನ್ನು ಮುಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸುವ ಬಡಾವಣೆಗಳಿಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಬಡಾವಣೆ ನಿರ್ಮಿಸುವ ಸಮಯದಲ್ಲೇ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು.

ಈ) ಸರ್ಕಾರ ಸಾರ್ವಜನಿಕರ ನಿವೇಶನಗಳನ್ನು ಹಸ ಬಡಾವಣೆಗಳನ್ನು ಸಿದ್ಧಪಡಿಸುತ್ತಿರುವ ಯೋಜನೆಗಳು ಯಾವುವು?

ಸರ್ಕಾರವು ನಾಡಪ್ರಭು ಕೆಂಪೆಗೌಡ ಬಡಾವಣೆಯನ್ನು ರಚಿಸಲು ಅನುಮೋದನೆ ನೀಡಿದ್ದು, ಈ ಬಡಾವಣೆ ರಚಿಸಲು ಜಮೀನುಗಳನ್ನು ಸ್ವಾದೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರಡಿಸುತ್ತದೆ.ಈ ಕೆಳಕಂಡ 4 ಬಡಾವಣೆಗಳನ್ನು ರಚಿಸಲು ಯೋಜಿಸಲಾಗಿದೆ.

1. ಶಿವರಾಮ ಕಾರಮತ ಬಡಾವಣೆ.
2. ಡಿ.ದೇವರಾಜ ಅರಸು ಬಡಾವಣೆ
3. ಕೆ.ಸಿ.ರೆಡ್ಡಿ ಬಡಾವಣೆ,
4. ಎಸ್.ನಿಜಲಿಂಗಪ್ಪ ಬಡಾವಣೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	(314)229
ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ.
ಉತ್ತರಿಸುವ ಸಚಿವರು	:	(ಶ್ರೀ ಬಿ.ಎಸ್.ಯಡಿಯೂರಪ್ಪ)
	:	ಮಾನ್ಯ ಮುಖ್ಯಮಂತ್ರಿಗಳು

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜಾರಿಯಲ್ಲಿರುವ ಸ್ವಯಂ ಮೌಲ್ಯಮಾಪನ ಆಸ್ತಿ ತೆರಿಗೆ ಪದ್ಧತಿಯನ್ನು ಮುಂದುವರಿಸುವುದೇ ಇಲ್ಲವಾದಲ್ಲಿ ಕಾರಣಗಳು ಮತ್ತು ಪರ್ಯಾಯ ಪದ್ಧತಿಯ ವಿವರಗಳೇನು

ದಿನಾಂಕ 1.4.2008ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಿ.ವಿ.ಎಸ್.ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಉದ್ದೇಶಿಸಲಾಗಿತ್ತು. ಈ ಹಂತದಲ್ಲಿ ಸಾರ್ವಜನಿಕರಿಂದ ಸದರಿ ಪದ್ಧತಿಗೆ ವ್ಯಾಪಕ ವಿರೊಧ ವ್ಯಕ್ತವಾದ ಹಿನ್ನಲೆಯಲ್ಲಿ ರಾಷ್ಟ್ರಪತಿಗಳ ಆಡಳಿತದಲ್ಲಿ ತಾತ್ಕಾಲಿಕವಾಗಿ ನೂತನ ಚುನಾಯಿತ ಸರ್ಕಾರ ರಚನೆಯಾಗುವವರೆಗೆ ಮುಂದೂಡಲು ನಿರ್ಣಯಿಸಲಾಗಿತ್ತು. ಈ ಮಧ್ಯಂತರ ಅವಧಿಯಲ್ಲಿ ನಿಯಮಕ್ಕೆ ತಿದ್ದುಪಡಿ ತರದೇ ಯಾವುದೇ ರೀತಿಯ ಆಸ್ತಿ

ತೆರಿಗೆಯನ್ನು ಸಂಗ್ರಹಿಸಲು ಉದ್ಭವಿಸಿದ ಆಡಳಿತಾತ್ಮಕ ತೊಂದರೆಗಳ ಹಿನ್ನಲೆಯಲ್ಲಿ ಹಾಗೂ ಆಸ್ತಿ ತೆರಿಗೆಯನ್ನು ವಾರ್ಷಿಕ ಬಾಡಿಗೆ ಆಧಾರದ ಮೇಲೆ ಸಂಗ್ರಹಿಸಿದ ಬಗ್ಗೆ ಉಚ್ಛ ನ್ಯಾಯಾಲಯದ ಮುಂದೆ ರಿಟ್ ಅರ್ಜಿಗಳು ಸಲ್ಲಿಸಿದ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ತೆರಿಗೆಯನ್ನು ಸಂಗ್ರಹಿಸಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿ ತೆರಿಗೆಯನ್ನು ಯಾವ ಪದ್ಧತಿಯಡಿಯಲ್ಲಿ ಸಂಗ್ರಹಿಸಬೇಕೆಂಬ ಬಗ್ಗೆ ಪರಿಶೀಲಿಸಲು ಸಚಿವ ಸಂಪುಟದ ಉಪಸಮಿತಿಯೊಂದನ್ನು ರಚಿಸಲಾಗಿದೆ. ಸದರಿ ಸಮಿತಿಯು ಈ ವಿಷಯದ ಬಗ್ಗೆ ಈಗಾಗಲೇ ಚರ್ಚಿಸಿದ್ದು, ಒಂದು ಅಂತಿಮ ನಿರ್ಣಯವನ್ನು ಶೀಘ್ರದಲ್ಲಿಯೇ ತೆಗೆದುಕೊಳ್ಳಲಿದೆ.

ಆ) ಕಳೆದ ಎರಡು ವರ್ಷಗಳಲ್ಲಿ ಪಾಲಿಕೆಯು ಸಂಗ್ರಹಿಸಿದ ಮನೆ ಕಂದಾಯದ ಒಟ್ಟು ಮೊತ್ತ ಎಷ್ಟು;

2006–07 – ರೂ. 347.25 ಕೋಟಿಗಳು

2007–08 – ರೂ. 448.73 ಕೋಟಿಗಳು

ಇ) ಮಹಾನಗರ ವ್ಯಾಪ್ತಿಯ ಎಲ್ಲಾ ಮನೆಯೊಡೆಯರು ಕಂದಾಯ ವ್ಯಾಪ್ತಿಗೆ ಒಳಪಟ್ಟಿರುತ್ತಾರೆಯೇ, ಇಲ್ಲವಾದಲ್ಲಿ ಅದರ ಪ್ರಮಾಣವೇನು;

ಈ) ಪೂರ್ಣ ಪ್ರಮಾಣದಲ್ಲಿ ಎಲ್ಲಾ ಆಸ್ತಿ–ಮನೆಗಳನ್ನು ಕಂದಾಯಕ್ಕೊಳಪಡಿಸುವ ಮೂಲಕ ಕಂದಾಯದ ಮೊತ್ತವನ್ನು ಹೆಚ್ಚಿಸುವಲ್ಲಿ ಸರ್ಕಾರದ ಕ್ರಮಗಳೇನು;

ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ 100 ವಾರ್ಡ್‌ಗಳ ಪ್ರದೇಶದಲ್ಲಿ ಸುಮಾರು 6,60.000 ಸ್ವತ್ತುಗಳನ್ನು ಕಂದಾಯಕ್ಕೆ ಒಳಪಡಿಸಿದ್ದು, ಇನ್ನು ಸುಮಾರು 35,000 ರಿಂದ 40,000 ಸ್ವತ್ತುಗಳು ಕಂದಾಯಕ್ಕೆ ಒಳಪಡಬೇಕಾಗಿದೆ. ಈ ಸ್ವತ್ತುಗಳು ಬಹುತೇಕ ರೆವಿನ್ಯೂ ನಿವೇಶನಗಳಾಗಿರುತ್ತವೆ. ಇತ್ತೀಚೆಗೆ ರೆವಿನ್ಯೂ ನಿವೇಶನಗಳನ್ನು ನೊಂದಾಯಿಸಲು ಪ್ರತಿಬಂಧ ಹಾಕಿರುವುದರಿಂದ ಅಂತಹ ನಿವೇಶನದಾರರು / ನಿವೇಶನಗಳ ಮಾಲೀಕರಾಗಿಲ್ಲವಾದ್ದರಿಂದ ಹಾಗೂ ಸಕ್ರಮ ಯೋಜನೆ ಇತ್ಯರ್ಥವಾದ ನಂತರ ಎಲ್ಲಾ ಮನೆಯೊಡೆಯರನ್ನು ಕಂದಾಯ ವ್ಯಾಪ್ತಿಗೆ ಒಳಪಡಿಸಲು ಸಾಧ್ಯವಾಗುತ್ತದೆ ಮಹಾನಗರ ಪಾಲಿಕೆ ರಚನೆಗೊಂಡಿದ್ದು, ಇದರಲ್ಲಿ 7 ಸಿಎಂಸಿ ಮತ್ತು 1 ಟಿಎಂಸಿ ಹಾಗೂ 110 ಗ್ರಾಮ ಪ್ರದೇಶದಲ್ಲಿ ಇದುವರೆವಿಗೂ ಒಟ್ಟು 2,50.000 ಸ್ವತ್ತುಗಳನ್ನು ಕಂದಾಯಕ್ಕೆ ಒಳಪಡಿಸಿದ್ದು ಇನ್ನು 4,00.000 ಮೀರಿದ ಸ್ವತ್ತುಗಳು ಕಂದಾಯಕ್ಕೆ ಒಳಪಡದೆ ಇರುತ್ತದೆ.

ಉ) ಉಪಗ್ರಹದ ಚಿತ್ರದ ಮೂಲಕ ಬಿಬಿಎಂಪಿ ವ್ಯಾಪ್ತಿಗೆ ಬರುವ ಎಲ್ಲಾ ಆಸ್ತಿಗಳ ವಿವರ ಪಡೆದುಕೊಳ್ಳುವ ತಂತ್ರಜ್ಞಾನ ಆಧಾರಿತ ಕ್ರಮಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ಕ್ರಮ ಜರುಗಿಸುವುದೇ?

ಪಾಲಿಕೆಯ ಹಳೆಯ 100 ವಾರ್ಡ್‌ಗಳ ಪೈಕಿ ಈಗಾಗಲೇ 29 ವಾರ್ಡ್‌ಗಳಲ್ಲಿ ಜಿಐಎಸ್ ಮೂಲಕ ಎಲ್ಲಾ ಸ್ವತ್ತುಗಳ ವಿವರಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ವಾರ್ಡ್‌ಗಳಲ್ಲೂ ಕೂಡ ಇದೇ ರೀತಿ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	(132)230
ಸದಸ್ಯರ ಹೆಸರು	:	ಶ್ರೀ ಜಯಚಂದ್ರ ಟಿ.ಬಿ(ಶಿರಾ)
ಉತ್ತರಿಸುವ ಸಚಿವರು	:	(ಶ್ರೀ ಬಿ.ಎಸ್.ಯಡಿಯೂರಪ್ಪ
	:	ಮಾನ್ಯ ಮುಖ್ಯಮಂತ್ರಿಗಳು

ಅ. ರಾಜ್ಯದಲ್ಲಿ ಕಲ್ಲುಗಣಿಗುತ್ತಿಗೆಗಳನ್ನು ಈ ಹಿಂದೆ ಸರ್ಕಾರಿ ಗೋಮಾಳ ಜಮೀನಿನಲ್ಲಿ ನೀಡಿದ್ದು, ನಂತರ ಸರ್ಕಾರವು ಗೋಮಾಳದ ಜಮೀನಿನಲ್ಲಿ ಕಲ್ಲುಗುಣಿಗುತ್ತಿಗೆಯನ್ನು ನಿಷೇಧಿಸಿ, ಸರ್ಕಾರಿ ಆದೇಶವನ್ನು ಹೊರಡಿಸಿದ ನಂತರವೂ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸುತ್ತೋಲೆ ಸಂಖ್ಯೆ: RD 83 LGP 2006, ದಿನಾಂಕ 05-01-2007 ರಲ್ಲಿ ಗೋಮಾಳ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ನಿರ್ಬಂಧವಿರುತ್ತದೆ. ಅಂತೆಯೇ, ಸದರಿ ಸುತ್ತೋಲೆಯ ದಿನಾಂಕದಿಂದ ರಾಜ್ಯದಲ್ಲಿನ ಗೋಮಾಳ ಪ್ರದೇಶಗಳಲ್ಲಿ ಹೊಸದಾಗಿ ಕಲ್ಲುಗಣಿಗುತ್ತಿಗೆಗಳ ಮಂಜೂರಾತಿ/ನವೀಕರಣವನ್ನು ಮಾಡಿರುವುದಿಲ್ಲ. ಆದರೆ, ದಿನಾಂಕ 05-01-2007 ರ ಪೂರ್ವದಲ್ಲಿ ಮಂಜೂರು ಮಾಡಿರುವ / ನವೀಕರಿಸಲ್ಪಟ್ಟಿರುವ ಕಲ್ಲುಗುಣಿಗುತ್ತಿಗೆಗಳು ಅವಧಿ ಮುಕ್ತಾಯದವರೆಗೆ ಚಾಲ್ತಿಯಲ್ಲಿರುತ್ತವೆ.

ಮಾನ್ಯ ಉಚ್ಚ ನ್ಯಾಯಾಲಯವು W.P.No.15882/07ರಲ್ಲಿ ದಿನಾಂಕ 15-02-2008 ರಂದು ನೀಡಿರುವ ತೀರ್ಪಿನಲ್ಲಿ, ದಿನಾಂಕ: 05-01-2007 ರ ಸುತ್ತೋಲೆಯನ್ನು ರದ್ದುಪಡಿಸಿದ್ದು, ದಿನಾಂಕ:24-02-1999 ರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ, 3 ತಿಂಗಳೊಳಗಾಗಿ ಗೋಮಾಳ ಪ್ರದೇಶಗಳಲ್ಲಿ ಹೊಸದಾಗಿ ಕಲ್ಲುಗುಣಿ ಗುತ್ತಿಗೆ ಮಂಜೂರು ಮಾಡುವ / ಚಾಲ್ತಿಯಲ್ಲಿರುವ ಗುತ್ತಿಗೆಗಳನ್ನು ನವೀಕರಿಸುವ ಬಗ್ಗೆ ಕ್ರಮವಹಿಸುವಂತೆ ಆದೇಶಿಸಿದೆ. ದಿನಾಂಕ:15-02-2008 ರ ತೀರ್ಪಿನನ್ವಯ ಬಾಕಿ ಪ್ರಸ್ತಾವನೆಗಳ ವಿಲೇವಾರಿ ಕುರಿತು ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಗೆ ಸೂಚಿಸಿದೆ. ದಿನಾಂಕ:15-02-2008ರ ತೀರ್ಪಿನ ವಿರುದ್ಧ ಕಂದಾಯ ಇಲಾಖೆಯು ಮೇಲ್ಮನವಿಯನ್ನು ಸಲ್ಲಿಸಿದ್ದು, ಇತ್ಯರ್ಥವಾಗಬೇಕಿದೆ.

ಆ. ಹಾಗಿದ್ದಲ್ಲಿ, ಸದರಿ ಮಾಹಿತಿಯನ್ನು ಒದಗಿಸುವುದು;

ರಾಮನಗರ, ಬೆಂಗಳೂರು ಉತ್ತರ, ಚಿಕ್ಕಮಗಳೂರು, ಶಿವಮೊಗ್ಗ, ಕೋಲಾರ ಹಾಗೂ ಹಾಸನ ಜಿಲ್ಲೆಗಳಲ್ಲಿ 43 ಗೋಮಾಳ ಪ್ರದೇಶಗಳಲ್ಲಿ, ಅವಧಿ ಮುಗಿದು, ಗುತ್ತಿಗೆಗಳನ್ನು ನವೀಕರಿಸದೇ ಇರುವ ಪ್ರದೇಶಗಳಲ್ಲಿ ನಡೆಯುತ್ತಿದ್ದ ಅಕ್ರಮ ಕಲ್ಲು ಗಣಿಗಾರಿಕೆ ತಡೆಗಟ್ಟಿ, ರೂ.14,79,564/- ಗಳನ್ನು ದಂಡ ರೂಪದಲ್ಲಿ ವಸೂಲಿ ಮಾಡಲಾಗಿದೆ.

ಇ ಅವು ಯಾವುವು, ಇವುಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

(1) ರಾಮನಗರ ಜಿಲ್ಲೆ:- 7 ಅಕ್ರಮ ಕಲ್ಲು ಗಣಿಗಾರಿಕೆಯ ಪ್ರಕರಣಗಳಲ್ಲಿ, ಮೊಕದ್ದಮೆ ದಾಖಲಿಸಿದ್ದು, 5 ಪ್ರಕರಣಗಳಲ್ಲಿ ಗುತ್ತಿಗೆ ದಾರರು ತಡೆಯಾಜ್ಞೆ ತಂದು ಕೆಲಸ ನಿರ್ವಹಿಸುತ್ತಿದ್ದಾರೆ. ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ.

(2) ಬೆಂಗಳೂರು ಉತ್ತರ ಜಿಲ್ಲೆ:- ಅಕ್ರಮ ಕಲ್ಲುಗಣಿಗಾರಿಕೆಯ 9 ಪ್ರಕರಣಗಳನ್ನು ಪತ್ತೆ ಹಚ್ಚಿ, ರೂ.7,22,564/-ಗಳನ್ನು ದಂಡ ರೂಪದಲ್ಲಿ ವಸೂಲಿ ಮಾಡಲಾಗಿದೆ.

(3) ಚಿಕ್ಕಮಗಳೂರು ಜಿಲ್ಲೆ:- ಅಕ್ರಮ ಕಲ್ಲು ಗಣಿಗಾರಿಕೆಯ 3 ಪ್ರಕರಣಗಳನ್ನು ಪತ್ತೆ ಹಚ್ಚಿ, ಅಕ್ರಮ ಕಲ್ಲುಗಣಿಗಾರಿಕೆಯನ್ನು ತಡೆಗಟ್ಟಿ, ರೂ.15,000/-ಗಳ ದಂಡ ವಸೂಲಿ ಮಾಡಲಾಗಿದೆ.

(4) ಶಿವಮೊಗ್ಗ ಜಿಲ್ಲೆ:- 5 ಪ್ರಕರಣಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕ್ರಮಕೈಗೊಂಡು ರೂ.2,17,750/-ಗಳ ದಂಡ ವಸೂಲಿ ಮಾಡಲಾಗಿದೆ.

(5) ಕೋಲಾರ ಜಿಲ್ಲೆ:- 3 ಪ್ರಕರಣಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕ್ರಮಕೈಗೊಂಡು ರೂ.4,37,500/-ಗಳ ದಂಡ ವಸೂಲಿ ಮಾಡಲಾಗಿದೆ.

(6) ಹಾಸನ ಜಿಲ್ಲೆ:- 16 ಪ್ರಕರಣಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕ್ರಮಕೈಗೊಂಡು ರೂ.,86,750/-ಗಳ ದಂಡ ವಸೂಲಿ ಮಾಡಲಾಗಿದೆ.

ಕಾಲಕಾಲಕ್ಕೆ ತಪಾಸಣೆ ಕೈಗೊಂಡು, ಅಕ್ರಮ ಕಲ್ಲು ಗಣಿಗಾರಿಕೆಯನ್ನು ನಿಯಂತ್ರಿಸಲಾಗಿದೆ. ಮೇಲಿನ ಪ್ರದೇಶಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯನ್ನು ಸ್ಥಗಿತಗೊಳಿಸಿದ್ದು, ಅಂತಹ ಪ್ರದೇಶಗಳ ಮೇಲೆ ಪೂರ್ಣ ನಿಗಾ ವಹಿಸಲಾಗುತ್ತಿದೆ. ಈ ವಿಷಯಗಳನ್ನು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಗಮನಕ್ಕೆ ತರಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(406)231
ಸದಸ್ಯರ ಹೆಸರು	:	ಶ್ರೀ ಜಯಚಂದ್ರ ಟಿ.ಬಿ
ಉತ್ತರಿಸುವ ಸಚಿವರು	:	(ಶ್ರೀ ಆರ್.ಅಶೋಕ್)
	:	ಮಾನ್ಯ ಸಾರಿಗೆ ಸಚಿವರು

ಅ) ಶಿರಾದಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ ತುಮಕೂರಿಗೆ ಅನೇಕ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ಬರುತ್ತಿದ್ದು ಅವರನ್ನು ಶಿರಾ ಗೇಟ್‌ನಲ್ಲಿ ಇಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ಒಂದು ಮಾರ್ಗದಲ್ಲಿ 50 ಕಿ.ಮೀ ದೂರದವರೆಗೆ ಮಾತ್ರ ಪ್ರಯಾಣಿಸಲು ಅವಕಾಶವಿದ್ದು, ಶಿರಾ–ತುಮಕೂರು ಮಧ್ಯೆ 52.7 ಕಿ.ಮೀ ಅಂತರವಿರುವುದರಿಂದ ಶಿರಾ ಗೇಟ್ ವರೆಗೆ ಮಾತ್ರ ವಿದ್ಯಾರ್ಥಿಗಳು ಪ್ರಯಾಣಿಸಲು ಅರ್ಹರಿರುತ್ತಾರೆ.

ಆ) ಈ ಬಗ್ಗೆ ಅನೇಕ ಮನವಿ ಸಲ್ಲಿಸಿದರೂ ಬಸ್ಸುಗಳನ್ನು ಶಿರಾ ಸ್ಟ್ಯಾಂಡಿನಲ್ಲಿ ನಿಲುಗಡೆಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಸ್ಸುಗಳನ್ನು ಶಿರಾ ಬಸ್‌ನಿಲ್ದಾಣದಲ್ಲಿಯೇ ನಿಲುಗಡೆ ಮಾಡಲಾಗುತ್ತಿದೆ.

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು;

ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತುಮಕೂರಿನಿಂದ ಶಿರಾ ಬಸ್ಸು ನಿಲ್ದಾಣಕ್ಕೆ ಬಸ್ಸಿನ ವ್ಯವಸ್ಥೆ ಮಾಡಲಾಗುವುದೇ?

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ವಿದ್ಯಾರ್ಥಿ ರಿಯಾಯಿತಿ ಬಸ್‌ಪಾಸ್‌ಗಳನ್ನು ಗರಿಷ್ಠ 50 ಕಿ.ಮೀ ಗಳ ಪ್ರಯಾಣ ಮಿತಿಗೊಳಪಟ್ಟು ವಿತರಿಸುತ್ತಿದೆ. ತುಮಕೂರು ಮತ್ತು ಶಿರಾನಡುವಿನ ಅಂತರವು 52.7 ಕಿ.ಮೀ. ಇರುವುದರಿಂದ 50 ಕಿ.ಮೀ.ಗಳ ಗರಿಷ್ಠ ಪ್ರಯಾಣದ ಮಿತಿಯನ್ನು ಮೀರಿ ಪ್ರಯಾಣಿಸುವುದಕ್ಕೆ ಅನುಮತಿಸಲು ನಿಗಮದ ನಿಯಮಾವಳಿಗಳಲ್ಲಿ ಅವಕಾಶ ಇರುವುದರಿಲ್ಲ. ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತುಮಕೂರಿನಿಂದ ಶಿರಾಕ್ಕೆ ಅವಶ್ಯವಿದ್ದಲ್ಲಿ ಇನ್ನಷ್ಟು ಬಸ್ ಸೌಲಭ್ಯದ ವ್ಯವಸ್ಥೆ ಮಾಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(407)232
ಸದಸ್ಯರ ಹೆಸರು	:	ಶ್ರೀ ಜಯಚಂದ್ರ ಟಿ.ಬಿ
ಉತ್ತರಿಸುವ ಸಚಿವರು	:	(ಶ್ರೀ ಆರ್.ಅಶೋಕ್)
	:	ಮಾನ್ಯ ಸಾರಿಗೆ ಸಚಿವರು

ಅ) ಶಿರಾ ತಾಲ್ಲೂಕಿನ ತಾವರೆಕೆರೆ ಮತ್ತು ಕಳ್ಳಂಬೆಳ್ಳಗಳು ಹೋಬಳಿ ಮುಖ್ಯಕೇಂದ್ರವಾಗಿದ್ದು ಅಲ್ಲಿ ರಾಜ್ಯ ರಸ್ತೆ ಸಾರಿಗೆಯ ಬಸ್ಸುಗಳನ್ನು ನಿಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಸ್ಸುಗಳನ್ನು ನಿಲುಗಡೆಗೊಳಿಸಲು ಕ್ರಮ ಕೈಗೊಳ್ಳುವುದೇ; ಈ ಬಗ್ಗೆ ಸರ್ಕಾರದ ನಿಲುವೇನು;

ತಾವರೆಕೆರೆಯಲ್ಲಿ ವೇಗದೂತ ಸಾರಿಗೆಗಳಿಗೆ ಕೋರಿಕೆ ನಿಲುಗಡೆಯನ್ನು ನೀಡಲಾಗಿದೆ. ಶಿರಾ–ತಾವರೆಕೆರೆ ನಡುವೆ ಪ್ರಸ್ತುತ, 7 ಅನುಸೂಚಿಗಳಿಂದ 14 ಸುತ್ತುವಳಿಗಳ ಸಾಮಾನ್ಯ ಸಾರಿಗೆಯ ಸೌಲಭ್ಯವನ್ನು ಒದಗಿಸಲಾಗಿದೆ.

ದಿ:1.8.2008ರಿಂದ ಜಾರಿಗೆ ಬರುವಂತೆ ದಾವಣಗೆರೆ ವಿಭಾಗಕ್ಕೆ ಸೇರಿದ 54 ಹಾಗೂ ತುಮಕೂರು ವಿಭಾಗಕ್ಕೆ ಸೇರಿದ 43 ದೂರ ಮಾರ್ಗದ ವೇಗದೂತ ಸಾರಿಗೆಗಳಿಗೆ ಶಿರಾ ಕಡೆಯಿಂದ ತುಮಕೂರು ಕಡೆಗೆ ಬರುವಾಗ ಕಳ್ಳಂಬೆಳ್ಳ ಬಸ್ ನಿಲ್ದಾಣವನ್ನು ತಲುಪಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಕಾರ್ಯಾಚರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) ತುಮಕೂರಿನಿಂದ ಜವನಗೊಂಡನಹಳ್ಳಿವರೆಗೂ ಅಧಿಕ ಸಂಪರ್ಕ ಒತ್ತಡದಿಂದಾಗಿ ಅಪಘಾತಗಳು ಹೆಚ್ಚಾಗುತ್ತಿರುವುದರಿಂದ ಇದನ್ನು ಶಾಶ್ವತವಾಗಿ ತಡೆಗಟ್ಟಲು ತುಮಕೂರಿನಿಂದ ಜವನಗೊಂಡನಹಳ್ಳಿವರೆಗೆ ಶಟಲ್ ಬಸ್ಸುಗಳನ್ನು ಹಾಕುವ ಯೋಜನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ಚಿಂತನೆ ನಡೆಸುವುದೇ?

ಜವನಗೊಂಡನಹಳ್ಳಿಯಲ್ಲಿ ಎಲ್ಲಾ ವೇಗದೂತ ಸಾರಿಗೆಗಳಿಗೆ ನಿಲುಗಡೆಯನ್ನು ಕಲ್ಪಿಸಲಾಗಿದೆ. ಹೆಚ್ಚುವರಿಯಾಗಿ ಶಿರಾದಿಂದ ಜವನಗೊಂಡನಹಳ್ಳಿಗೆ 4 ಸುತ್ತುವಳಿಗಳ ಸಾಮಾನ್ಯ ಸಾರಿಗೆಗಳನ್ನು ಆಚರಣೆ ಮಾಡಲಾಗುತ್ತಿದೆ. ಮೇಲೆ ತಿಳಿಸಿದಂತೆ ತುಮಕೂರಿನಿಂದ ಜವನಗೊಂಡನಹಳ್ಳಿಗೆ ವೇಗದೂತ ಹಾಗೂ ಶಿರಾದಿಂದ ಸಾಮಾನ್ಯ ಸಾರಿಗೆ ಸೌಲಭ್ಯ ಕಲ್ಪಿಸಿರುವುದರಿಂದ ಪ್ರತ್ಯೇಕ ಸಾರಿಗೆ ಸೌಲಭ್ಯದ ಅಗತ್ಯತೆ ಕಂಡುಬರುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(189)233
2. ಸದಸ್ಯರ ಹೆಸರು	:	ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
3. ಉತ್ತರಿಸುವವರು	:	(ಶ್ರೀ ಬಿ.ಎಸ್.ಯಡಿಯೂರಪ್ಪ) ಮಾನ್ಯ ಮುಖ್ಯಮಂತ್ರಿಯವರು

ಅ. ಕೊಪ್ಪಳ ಜಿಲ್ಲೆಯು ಬಯಲು ಪ್ರದೇಶವಾಗಿದ್ದು, ಇಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ. ಜಿಂಕೆಗಳಿಂದ ಸ್ಥಳೀಯ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಇ. ಹಾಗಿದ್ದಲ್ಲಿ, ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ವನ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ

ಹೌದು

ಈ. ಹಾಗಿದ್ದಲ್ಲಿ, ಎಂದಿನಿಂದ ಜಿಂಕೆ ವನವನ್ನು ತೆರೆಯಲಾಗುವುದು?

ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(190) 234
ಸದಸ್ಯರ ಹೆಸರು	:	ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ಉತ್ತರಿಸುವವರು	:	(ಶ್ರೀ ಜಿ.ಶ್ರೀರಾಮುಲು) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ, ಅಭಿವೃದ್ಧಿ ಸಚಿವರು

ಅ) ಕೊಪ್ಪಳ ತಾಲ್ಲೂಕಿನ ಭಾಗ್ಯನಗರದ 62 ಮತ್ತು ಕುಷ್ಟಗಿ ರಸ್ತೆಯ 66 ಗೇಟಿನ ಮೇಲುಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ'

ಇದೆ.

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು;

ರಸ್ತೆ ಮೇಲು ಸೇತುವೆ /ಕೆಳಸೇತುವೆಗಳ ನಿರ್ಮಾಣದ ಬಗ್ಗೆ ದಿನಾಂಕ 14.7.08ರಂದು ಜರುಗಿದ ಚಾಲನ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ ಕೊಪ್ಪಳ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಪಡೆಯಲಾಗುತ್ತಿದ್ದು, ವರದಿ ಬಂದ ನಂತರ ಎಲ್.ಸಿ.ಗಳ ಬದಲಾಗಿ ಎಲ್ಲಿ ಮೇಲುಸೇತುವೆಗಳನ್ನು ನಿರ್ಮಾಣ ಮಾಡಬೇಕೆಂಬ ಬಗ್ಗೆ ರೈಲ್ವೆ ಹಾಗೂ ಲೋಕೋಪಯೋಗಿ ಇಲಾಖೆಗಳು ಜಂಟಿ ಸಮೀಕ್ಷೆ ನಡೆಸಿದ ನಂತರ ಅಗತ್ಯ ಕ್ರಮವನ್ನು ವಹಿಸಲಾಗುವುದು.

ಇ) ಈ ಕಾಮಗಾರಿಗೆ ನಿಗದಿ ಪಡಿಸಿರುವ ಅನುದಾನವೆಷ್ಟು?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (459)235
ಸದಸ್ಯರ ಹೆಸರು : ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯ ಮಂತ್ರಿಯವರು

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ಇಲಾಖಾವಾರು, ಹುದ್ದೆವಾರು ವಿವರ ನೀಡುವುದು);

ಒಟ್ಟು ಖಾಲಿ ಹುದ್ದೆಗಳು 1,34,018 (ವಿವರಗಳು ಅನುಬಂಧದಲ್ಲಿವೆ)

ಆ) ಖಾಲಿ ಇರುವ ಹುದ್ದೆಗಳನ್ನು ನೇಮಕಾತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಅಗತ್ಯಗನುಗುಣವಾಗಿ ತುಂಬಲು ಕ್ರಮತೆಗೆದುಕೊಳ್ಳಲಾಗುವುದು.

ಅನುಬಂಧ

ಸಿಬ್ಬಂದಿ ಸಂಖ್ಯಾಬಲ 2008-09

ಕ್ರಮ ಸಂಖ್ಯೆ	ಇಲಾಖೆಗಳು	ಒಟ್ಟು ಖಾಲಿ ಹುದ್ದೆಗಳು
1	ಕೃಷಿ ಮತ್ತು ತೋಟಗಾರಿಕೆ	6220
2	ಪಶುಸಂಗೋಪನೆ	4172
3	ವಾಣಿಜ್ಯ ತೆರಿಗೆ	1368
4	ಸಹಕಾರ	1473
5	ಶಿಕ್ಷಣ	34991
6	ಅಬಕಾರಿ	1842
7	ಮೀನುಗಾರಿಕೆ	460
8	ಆಹಾರ ಮತ್ತು ನಾಗರೀಕ ಸರಬರಾಜು	335
9	ಅರಣ್ಯ	2483
10	ರಾಜ್ಯಪಾಲರ ಸಚಿವಾಲಯ	18
11	ಸರ್ಕಾರಿ ಮುದ್ರಣಾಲಯ	837
12	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	3313
13	ಕೈಗಾರಿಕೆ	1049
14	ವಾರ್ತಾ ಮತ್ತು ಪ್ರಚಾರ	50
15	ಬಂಧಿಖಾನೆ	605
16	ನ್ಯಾಯಾಂಗ	5760

17	ಕನ್ನಡ ಮತ್ತು ಸಂಸ್ಕೃತಿ	624
18	ಕರ್ನಾಟಕ ಲೋಕಾ ಸೇವಾ ಆಯೋಗ	60
19	ಕಾರ್ಮಿಕ ಮತ್ತು ಉದ್ಯೋಗ	2370
20	ಭಾರಿ ನೀರಾವರಿ	654
21	ವೈದ್ಯಕೀಯ ಶಿಕ್ಷಣ	22076
22	ಸಣ್ಣ ನೀರಾವರಿ	384
23	ಮೋಟಾರು ವಾಹನ	612
24	ಪೊಲೀಸ್	14295
25	ಲೋಕೋಪಯೋಗಿ	1716
26	ಕಂದಾಯ	2919
27	ಕರ್ನಾಟಕ ಸರ್ಕಾರದ ಸಚಿವಾಲಯ	517
28	ಸಮಾಜ ಕಲ್ಯಾಣ	7556
29	ನೋಂದಣಿ ಮತ್ತು ಮುದ್ರಾಂಕ	278
30	ತಾಂತ್ರಿಕ ಶಿಕ್ಷಣ	2679
31	ಪ್ರವಾಸೋದ್ಯಮ	43
32	ಖಜಾನೆ ಮತ್ತು ರಾಜ್ಯ ಲೆಕ್ಕಪತ್ರ	627
33	ಮಹಿಳಾ ಮತ್ತು ಮಕ್ಕಳ ಕಲ್ಯಾಣ	2335
34	ಯುವಜನ ಸೇವಾ	360
35	ಇತರೆ ಸಣ್ಣ ಇಲಾಖೆಗಳು	8937
	ಒಟ್ಟು	**134018**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(274)236
ಮಾನ್ಯ ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್.ಮೆಂಡನ್
ಉತ್ತರಿಸುವ ಸಚಿವರು	:	(ಶ್ರೀ ಜಿ.ಜನಾರ್ಧನ ರೆಡ್ಡಿ)
	:	ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಕಾಪು ವಿಧಾನಸಭಾ ಕ್ಷೇತ್ರದ ಪ್ರವಾಸಿಗಳ ಆಕರ್ಷಣೆಯಾಗಿರುವ ಕಾಪು ದೀಪಸ್ಥಂಭ (ಕಾಪು ಲೈಟ್ ಹೌಸ್)ಅಧಿಕೃತವಾಗಿ ಎಂದಿನಿಂದ ಹಾಗೂ ಯಾರಿಂದ ಪ್ರಾರಂಭವಾಯಿತು;

34 ಮೀಟರ್ ಎತ್ತರವಿರುವ ಕಾಪು ದೀಪ ಸ್ಥಂಭವನ್ನು 1935 ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರ ನಿರ್ಮಿಸಿದೆ ಎಂದು ಕಾಪು ದೀಪ ಸ್ಥಂಭದ ಉಸ್ತುವಾರಿ ನೋಡಿಕೊಳ್ಳುವ ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಆ) ಪ್ರವಾಸೋದ್ಯಮ ಕೇಂದ್ರವಾಗಿ ಈಗಾಗಲೇ ಲಕ್ಷಾಂತರ ಜನರನ್ನು ಆಕರ್ಷಿಸುತ್ತಿರುವ ಈ ದೀಪಸ್ಥಂಬದ ಅಭಿವೃದ್ಧಿಗೆ ಸರಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ;

ಕಾಪು ದ್ವೀಪಸ್ತಂಬದ ಬಳಿ ಪ್ರವಾಸಿ ಸೌಲಭ್ಯ ಕಲ್ಪಿಸಲು ಇಲಾಖೆಯು ರೂ. 55.00 ಲಕ್ಷಗಳನ್ನು ಉಡುಪಿ ಜಿಲ್ಲಾಡಳಿತಕ್ಕೆ ಬಿಡುಗಡೆ ಮಾಡಿರುತ್ತದೆ. ಸದರಿ ಮೊತ್ತದಲ್ಲಿ ಕಾಲುಪಥ ನಿರ್ಮಾಣ, ಲ್ಯಾಂಡ್ ಸ್ಕೇಪಿಂಗ್, ಗಾರ್ಡನ್ ಲೈಟಿಂಗ್, ಸಿವಿಲ್ ಕಾಮಗಾರಿಗಳು ಹಾಗು ವಾಹನ ನಿಲುಗಡೆ ಸೌಲಭ್ಯಗಳನ್ನು ಕೈಗೊಳ್ಳಲಾಗುವುದು.

ಇ) ಕಾಪಿ ದೀಪಸ್ಥಂಭ ನಿರ್ವಹಣೆಯಲ್ಲಿ ಕರ್ನಾಟಕ ಸರ್ಕಾರದ ಪಾತ್ರವೇನು;

ಇದರ ನಿರ್ವಹಣೆಯು ಕೇಂದ್ರ ಸರ್ಕಾರಕ್ಕೆ ಸೇರಿರುತ್ತದೆ. ಪ್ರವಾಸೋದ್ಯಮ ವ್ಯಾಪ್ತಿಗೆ ಬರುವುದಿಲ್ಲ. ಪ್ರವಾಸಿಗರ ಅನುಕೂಲಕ್ಕಾಗಿ ಮೇಲಿನಂತೆ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ.

ಈ) ಈ ದೀಪಸ್ಥಂಭದ ವಾರ್ಷಿಕ ಆರ್ಥಿಕ ಆಧಾಯ ಹಾಗೂ ಖರ್ಚುಗಳೆಷ್ಟು?

ಇದರ ಆದಾಯ ಮತ್ತು ವೆಚ್ಚಗಳು ರಾಜ್ಯ ಸರ್ಕಾರದ ವ್ಯಾಪ್ತಿಗೆ ಅಥವಾ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(272)237**
ಮಾನ್ಯ ಸದಸ್ಯರ ಹೆಸರು	:	**ಶ್ರೀ ನಾಯ್ಕ ಜೆ.ಡಿ**
ಉತ್ತರಿಸುವ ಸಚಿವರು	:	**(ಶ್ರೀ ಸಿ.ಎಂ.ಉದಾಸಿ)**
	:	**ಲೋಕೋಪಯೋಗಿ ಸಚಿವರು**

ಅ ಕಳೆದ 3 ವರ್ಷಗಳಿಂದ ಜಿಲ್ಲಾ ಪಂಚಾಯತ್, ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ಎಷ್ಟು ಕಿ.ಮೀ.ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ.

2005-06, 2006-07 ಹಾಗೂ 2007-08 ರಲ್ಲಿ 8,597.83 ಕಿ.ಮೀ ಉದ್ದದ ಜಿಲ್ಲಾ ಪಂಚಾಯತ್ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳಲಾಗಿದೆ.

ಆ ಲೋಕೋಪಯೋಗಿ ಇಲಾಖೆ ವಹಿಸಿಕೊಳ್ಳದಿದದ್ದರೆ ಕಾರಣವೇನು (ವಿವರ ನೀಡುವುದು)

ಮೇಲ್ದರ್ಜೆಗೇರಿಸಿದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯು ವಹಿಸಿಕೊಂಡಿರುತ್ತದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (194)238
2. ಸದಸ್ಯರ ಹೆಸರು : ಶ್ರೀ ನರೇಂದ್ರ ಬಾಬು ಎನ್.ಎಲ್
3. ಉತ್ತರಿಸುವವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
: ಮಾನ್ಯ ಮುಖ್ಯಮಂತ್ರಿಗಳು

1 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿ.ಬಿ.ಎಮ್.ಪಿ ವ್ಯಾಪ್ತಿಯಲ್ಲಿನ ಅನಧಿಕೃತ ಕಟ್ಟಡಗಳನ್ನು ಸಕ್ರಮ ಗೊಳಿಸುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಸಲ್ಲಿಸಿದ ತಿದ್ದುಪಡಿ ಕಾಯ್ದೆಯ ಅಂಗೀಕಾರವಾಗಿದೆಯೇ;

ಹೌದಾದಲ್ಲಿ, ಸದರಿ ಕಾಯ್ದೆಯ ಪ್ರತಿಯನ್ನು ಒದಗಿಸುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯನ್ನು ಒಳಗೊಂಡಂತೆ ರಾಜ್ಯ ಎಲ್ಲಾ ನಗರ/ಪಟ್ಟಣ ಪ್ರದೇಶಗಳಲ್ಲಿನ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 76(ಎಫ್)ಗಳ ತಿದ್ದುಪಡಿ ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್‌ಗಳ ಕಾಯ್ದೆ, 1976ರ ಕಲಂ 321ಕ್ಕೆ ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 187ಕ್ಕೆ ತಿದ್ದುಪಡಿ ವಿಧೇಯಕ 2004ನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಿ ಅಂಗೀಕಾರ ಪಡೆದು ಘನತೆವೆತ್ತ ರಾಜ್ಯಪಾಲರ ಅನುಮೋದನೆಯೊಂದಿಗೆ ದಿ:06-02-2007ರಂದು ಪ್ರಕಟಿಸಿದೆ.

ಪ್ರತಿ ಲಗತ್ತಿಸಿದೆ.

2 ಇಲ್ಲವಾದಲ್ಲಿ, ಪ್ರಸ್ತಾವನೆಯು ಸರ್ಕಾರದಲ್ಲಿ ಯಾವ ಹಂತದಲ್ಲಿದೆ;

ಉದ್ಭವಿಸುವುದಿಲ್ಲ

3 ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಲು ವಿಳಂಬಕ್ಕೆ ಕಾರಣವೇನು;

ನಿಯಮಗಳನ್ನು ಪರಿಶೀಲಿಸಲು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದ್ದು, ಸದರಿ ಉಪ ಸಮಿತಿಯು ಪರಿಶೀಲಿಸುತ್ತಿದೆ.

4 ಈ ಕಾಯ್ದೆಯಡಿ ಸಕ್ರಮಗೊಳಿಸಲು ಅರ್ಹವಿರುವ ನಿವೇಶನಗಳ ಗರಿಷ್ಠ ವಿಸ್ತೀರ್ಣವೇನು;

ಗರಿಷ್ಠ ವಿಸ್ತೀರ್ಣವನ್ನು ನಿಗಧಿಪಡಿಸಿರುವುದಿಲ್ಲ

5 ಇದರಿಂದ ಸರ್ಕಾರ/ಬಿ.ಡಿ.ಎ.ಗೆ ಬರುವ ಆದಾಯವೆಷ್ಟು?

ನಿಯಮಗಳನ್ನು ಅಂತಿಮಗೊಳಿಸಿದ ನಂತರ ಸದರಿ ಮಾಹಿತಿ ಲಭ್ಯವಾಗುವುದು.

ಅನುಬಂಧ

ಸರ್ಕಾರದ ಸುತ್ತೋಲೆ ಸಂಖ್ಯೆ:ಯುಡಿಡಿ/129/ಎಂಎನ್ಜಿ/97, 06/08/97ರ ವಿವರವು ಈ ಕೆಳಕಂಡಂತಿದೆ;

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಿಡಿ ನಿವೇಶನಗಳ ಹಂಚಿಕೆಯ ಬಗ್ಗೆ ಹೊರಡಿಸಿದ್ದ ಎಲ್ಲಾ ಆದೇಶ:ಸುತ್ತೋಲೆಗಳನ್ನು ಸ್ಥಾನ ಚ್ಯುತಿ ಪಡಿಸುತ್ತಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನ ಹಂಚಿಕೆ) ನಿಯಮ 1984ರ ನಿಯಮ 5ರ ಅವಕಾಶದಡಿಯಲ್ಲಿ ಬಿಡಿ ನಿವೇಶನ ಹಂಚಿಕೆ ಮಾಡಲು ಈ ಕೆಳಕಂಡಂತೆ ಪರಿಷ್ಕೃತ ಮಾರ್ಗ ಸೂಚಿಯನ್ನು ಹೊರಡಿಸಲಾಗಿದೆ.

ಕ್ರಮ ಸಂಖ್ಯೆ	ಪ್ರವರ್ಗ	ವಿವರಣೆ	ಶೇಕಡಾವಾರು
1	ಎ	ಬಹಿರಂಗ ಹರಾಜಿನ ಮೂಲಕ	30
2	ಬಿ	ಕರ್ನಾಟಕ ರಾಜ್ಯದ ನಿವಾಸಿಗಳಾಗಿ ಕ್ರೀಡೆಯಲ್ಲಿ ಅಂತರರಾಷ್ಟ್ರಿಯ:ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದ ವ್ಯಕ್ತಿಗಳು.	15
3	ಸಿ	ಕಲೆ, ವಿಜ್ಞಾನ, ಸಾಹಿತ್ಯ, ಶಿಕ್ಷಣ, ವೈದ್ಯಕೀಯ, ಚಿತ್ರಕಲೆ, ಶಿಲ್ಪ, ಸಂಗೀತ, ನೃತ್ಯ, ನಾಟಕ, ಸಿನಿಮಾ ಇತ್ಯಾದಿ ಕ್ಷೇತ್ರದಲ್ಲಿ ರಾಷ್ಟ್ರೀಯ:ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದ ವ್ಯಕ್ತಿಗಳು	10
4	ಡಿ	ಕರ್ನಾಟಕ ರಾಜ್ಯದ ನಿವಾಸಿಗಳಾಗಿರುವ ಮಾಜಿ ಸೈನಿಕರು ಹಾಗೂ ಸೈನಿಕ ಸಿಬ್ಬಂದಿ	5
5	ಇ	10 ವರ್ಷಗಳ ಅವಧಿಗಿಂತ ಕಡಿಮೆ ಇಲ್ಲದೇ ಬೆಂಗಳೂರಿನಲ್ಲಿ ವಾಸವಾಗಿರುವ ಸ್ವಾತಂತ್ರ್ಯ ಯೋಧರು	5
6	ಎಫ್	ಕರ್ತವ್ಯ ನಿರತರಾಗಿದ್ದಾಗ ನಿಧನ ಹೊಂದಿದ ರಾಜ್ಯ ಸರ್ಕಾರಿ ನೌಕರರ ಅವಲಂಬಿತರು	5
7	ಜಿ	ಸರ್ಕಾರವು ನಿರ್ದೇಶನ ನೀಡುವ ಸಾರ್ವಜನಿಕ ಜೀವನದಲ್ಲಿನ ವ್ಯಕ್ತಿಗಳು	30

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 409
2) ಸದಸ್ಯರ ಹೆಸರು : ಶ್ರೀ ಎನ್.ಎಲ್.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್)
3) ಉತ್ತರಿಸಬೇಕಾದ ದಿನಾಂಕ : 29/07/2008
4) ಉತ್ತರಿಸಬೇಕಾದ ಸಚಿವರು : ಮುಖ್ಯ ಮಂತ್ರಿಗಳು

ಅ) ಮುಖ್ಯಮಂತ್ರಿಗಳು ವಿವೇಚನಾ ಕೋಟಾ ಪ್ರವರ್ಗದಡಿ ಬಿಡಿ ನಿವೇಶನ ಹಂಚಿಕೆಗೆ ಮಾಡಲು ಮಾರ್ಗಸೂಚಿ ಏನು;

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ /129/ಬೆಂಆಸೇ/ 97, ದಿನಾಂಕ 06/08/97ರ ಪರಿಷ್ಕೃತ ಮಾರ್ಗಸೂಚಿಯಂತೆ ಜಿ ಪ್ರವರ್ಗದಡಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಆ) ಸರ್ಕಾರದ ಸುತ್ತೋಲೆ ಸಂಖ್ಯೆ:ಯಡಿಡಿ/ಎಂಎನ್‌ಜಿ/97–06/08/97ರ ವಿವರವೇನು;

ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ಈ ಸುತ್ತೋಲೆಯ ಮಾರ್ಪಾಟು ಆಗಿದ್ದಲ್ಲಿ ವಿವರ ಒದಗಿಸುವುದು;

ಸರ್ಕಾರದ ದಿನಾಂಕ 06/08/97ರ ಪರಿಷ್ಕೃತ ಮಾರ್ಗಸೂಚಿಯು ಇಂದಿಗೂ ಸಹ ಚಾಲ್ತಿಯಲ್ಲಿರುತ್ತದೆ.

ಈ) ಈ ಸುತ್ತೋಲೆಯಂತೆ ಇದರಲ್ಲಿ ಎಷ್ಟು ಪ್ರವರ್ಗಗಳಿವೆ (ವಿವರ ಒದಗಿಸುವುದು);

ಏಳು ಪ್ರವರ್ಗಗಳಿವೆ. (ಅನುಬಂಧದಲ್ಲಿ ವಿವರಿಸಿದೆ)

ಉ) ಪ್ರತಿ ಪ್ರವರ್ಗದಡಿ ಬಿಡಿ ನಿವೇಶನ ಹಂಚಿಕೆ ಮಾಡಲು ಮಾನದಂಡವೇನು?

ಸರ್ಕಾರದ ದಿನಾಂಕ:06/08/97ರ ಪರಿಷ್ಕೃತ ಮಾರ್ಗಸೂಚಿಯಲ್ಲಿ ವಿವರಿಸಿರುವಂತೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (409)240
2) ಸದಸ್ಯರ ಹೆಸರು : ಶ್ರೀ ನರೇಂದ್ರ ಬಾಬು ಎನ್.ಎಲ್. (ಮಹಾಲಕ್ಷ್ಮಿ ಲೇಔಟ್)
3) ಉತ್ತರಿಸಬೇಕಾದ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ) ಮುಖ್ಯ ಮಂತ್ರಿಗಳು

ಅ) 2004ರ ನಂತರ ಅಸ್ಥಿತ್ವಕ್ಕೆ ಬಂದ ಸರ್ಕಾರದ ಮುಖ್ಯಮಂತ್ರಿಗಳ ವಿವೇಚನಾ ಕೋಟಾ ಜಿ ಪ್ರವರ್ಗದಡಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ;

ಹೌದು

ಆ) ಮಾಡಲಾಗಿದ್ದರೆ, ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ಹೆಸರು ಸಹಿತ ವಿವರ ನೀಡುವುದು;

361 ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು)

ಇ) ಬಿಡಿ ನಿವೇಶನ ಹಂಚಿಕೆ ಮಾಡಲ್ಪಟ್ಟ ವ್ಯಕ್ತಿಗಳು ಸಾರ್ವಜನಿಕ ಸೇವೆಯಲ್ಲಿರುವ ಗಣ್ಯ ವ್ಯಕ್ತಿಗಳೇ; ವಿವರ ಒದಗಿಸುವುದು;

ದಿನಾಂಕ:6–8–1997ರ ಪರಿಷ್ಕೃತ ಮಾರ್ಗಸೂಚಿಯನ್ವಯ ಸರ್ಕಾರ ನಿರ್ದೇಶನ ನೀಡುವ ಸಾರ್ವಜನಿಕ ಜೀವನಗಳ ವ್ಯಕ್ತಿಗಳಿಗೆ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಈ) ಬಿಡಿ ನಿವೇಶನ ಹಂಚಿಕೆ ಮಾಡಲ್ಪಟ್ಟ ವ್ಯಕ್ತಿಗಳು ತಮಗೆ ಅಥವಾ ತಮ್ಮ ಕುಟುಂಬದ ಅವಲಂಬಿತರಿಗೆ ಸ್ವಂತ ನಿವೇಶನ/ ಮನೆ ಇಲ್ಲ ಎಂದು ಸ್ವ-ಪ್ರಮಾಣ ಪತ್ರ ನೀಡಿದ್ದಾರೆಯೇ;

ಹೌದು

ಉ) ನೀಡಿದ್ದರೆ, ವಿವರ ಒದಗಿಸಲಾಗುವುದೇ?

ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಕೋರಿದ್ದಲ್ಲಿ ಒದಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(191)242**
ಮಾನ್ಯ ಸದಸ್ಯರ ಹೆಸರು	:	**ಶ್ರೀ ಪ್ರತಾಪಗೌಡ ಪಾಟೀಲ್(ಮಸ್ಕಿ)**
ಉತ್ತರಿಸುವ ಸಚಿವರು	:	**(ಶ್ರೀ ಸಿ.ಎಂ.ಉದಾಸಿ)**
	:	**ಮಾನ್ಯ ಲೋಕೋಪಯೋಗಿ ಸಚಿವರು**

ಅ) ಬೀದರ – ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಬರುವ ಮಸ್ಕಿ ಗ್ರಾಮದ ಹಿರೆನಾಲಾದ (ಬ್ರಿಡ್ಜ್) ಸೇತುವೆ ಸಂಪೂರ್ಣ ಕೊಚ್ಚಿ ಹೋಗಿದ್ದು ಇದರ ಪುನರ್ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಬೀದರ – ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿ ಕಿ.ಮೀ.445ರ (ಮಸ್ಕಿ ಹತ್ತಿರ) ಇರುವ ಹಾಲಿ ಸೇತುವೆಯು ಕಳೆದ ವರ್ಷ ಬಿದ್ದ ಭಾರಿ ಮಳೆಯಿಂದಾಗಿ ಕೊಚ್ಚಿಕೊಂಡು ಹೋಗಿರುವುದರಿಂದ ಹೊಸ ಸೇತುವೆಯ ನಿರ್ಮಾಣದ ಅವಶ್ಯಕತೆ ಇದೆ.

ಪ್ರಸ್ತುತ ಈ ಸೇತುವೆ ಕಾಮಗಾರಿಯು ಯಾವುದೇ ಯೋಜನೆಯಡಿ ಸೇರ್ಪಡೆಯಾಗಿರುವುದಿಲ್ಲ. ಆದರೂ ರಾಯಚೂರು ಲೋಕೋಪಯೋಗಿ ಇಲಾಖೆ ವಿಭಾಗ ವ್ಯಾಪ್ತಿಯಲ್ಲಿ ಈಗಾಗಲೇ ಅನುಮೋದನೆ ಯಾಗಿರುವ ಮತ್ತು ಸದ್ಯಕ್ಕೆ ತುರ್ತು ನಿರ್ಮಾಣದ ಅಗತ್ಯವಿಲ್ಲದಿರುವ ಸೇತುವೆ/ಸೇತುವೆಗಳ ಬದಲಾಗಿ ಸದರಿ

ಸೇತುವೆ ಪುನರ್‌ನಿರ್ಮಾಣ ಕಾಮಗಾರಿ ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(192)243
ಮಾನ್ಯ ಸದಸ್ಯರ ಹೆಸರು	:	ಶ್ರೀ ಪ್ರತಾಪಗೌಡ ಪಾಟೀಲ್(ಮಸ್ಕಿ)
ಉತ್ತರಿಸುವ ಸಚಿವರು	:	(ಶ್ರೀ ಸಿ.ಎಂ.ಉದಾಸಿ)
	:	ಮಾನ್ಯ ಲೋಕೋಪಯೋಗಿ ಸಚಿವರು

ಅ) ಬೀದರ್ - ಶ್ರೀರಂಗಪಟ್ಟಣ ಹೆದ್ದಾರಿಯಲ್ಲಿ ಬರುವ ಲಿಂಗಸಗೂರು-ಸಿಂಧನೂರ ಮಧ್ಯದ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಆ) ಹಾಗಿದ್ದಲ್ಲಿ, ಇದರ ದುರಸ್ಥಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಸದರಿ ರಸ್ತೆಯ ಕಿ.ಮೀ.421.00 ರಿಂದ 437.00ರ ವರೆಗಿನ ಭಾಗವು ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಹಾದು ಹೋಗುತ್ತದೆ. ಈ ಪ್ರದೇಶದಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಭತ್ತದ ಗದ್ದೆಗಳಿದ್ದು ಕಿ.ಮೀ 427.00 ರಿಂದ 437.00 ವರೆಗಿನ ರಸ್ತೆಯ (ಲಿಂಗಸಗೂರು-ಸಿಂಧನೂರು ಮಧ್ಯದ ರಸ್ತೆ) ಕೆಲಭಾಗಗಳು ಕುಸಿದಿರುತ್ತವೆ. ಆದ ಕಾರಣ ಈ ಭಾಗಗಳನ್ನು ಮರುನಿರ್ಮಾಣ ಮಾಡುವುದು ಅವಶ್ಯವಿರುತ್ತದೆ.

ಸದರಿ ರಾಜ್ಯ ಹೆದ್ದಾರಿಯ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ OPRMC(Output and Performance based Road Maintenance Contract) ಆಧಾರದ ಮೇಲೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(458)244
2. ಸದಸ್ಯರ ಹೆಸರು	:	ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ)
3. ಉತ್ತರಿಸುವ ಸಚಿವರು	:	(ಡಾ: ವಿ.ಎಸ್.ಆಚಾರ್ಯ)
	:	ಮಾನ್ಯ ಗೃಹ ಸಚಿವರು

ಅ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿರುವ ಅರಕ್ಷಕ ಠಾಣೆಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು)

ಪಾಂಡವಪುರ ತಾಲ್ಲೂಕಿನಲ್ಲಿ 01 ಪೊಲೀಸ್ ಠಾಣೆ ಹಾಗೂ 02 ಪೊಲೀಸ್ ಹೊರಠಾಣೆಗಳಿರುತ್ತವೆ. ವಿವರಗಳು ಈ ಕೆಳಗಿನಂತಿವೆ.

1. ಪಾಂಡವಪುರ ಪೊಲೀಸ್ ಠಾಣೆ

2. ಮೇಲುಕೋಟೆ ಹೊರಠಾಣೆ
3. ಚಿನಕುರುಳಿ ಹೊರಠಾಣೆ

ಆ. ಜನಸಂಖ್ಯೆಗೆ ಅನುಗುಣವಾಗಿ ಅರಕ್ಷಕ ಠಾಣೆಗಳನ್ನು ತೆರೆಯಲಾಗಿದೆಯೇ?

ಇಲ್ಲ

ಇ. ಪಾಂಡವಪುರ ತಾಲ್ಲೂಕಿನಲ್ಲಿರುವ ಎಲ್ಲಾ ಅರಕ್ಷಕ ಠಾಣೆಗಳಿಗೂ ಸ್ವಂತ ಕಟ್ಟಡಗಳು ಇವೆಯೇ? (ಆ ಕಟ್ಟಡಗಳ ಸ್ಥಿತಿಗತಿಗಳ ಬಗ್ಗೆ ವಿವರಗಳನ್ನು ನೀಡುವುದು)

ಪಾಂಡವಪುರದ ಪೊಲೀಸ್ ಠಾಣೆ ಹಾಗೂ ಮೇಲುಕೋಟೆ ಹೊರಠಾಣೆಗಳು ಹೊಸದಾಗಿ ನಿರ್ಮಿಸಲಾದ ಸರ್ಕಾರಿ ಕಟ್ಟಡಗಳಲ್ಲಿರುತ್ತದೆ. ಪ್ರಸ್ತುತ ಚಿನಕುರುಳಿ ಪೊಲೀಸ್ ಹೊರಠಾಣೆಯು ಮಾತ್ರ ಹಳೆಯ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದುರಸ್ತಿಯ ಅವಶ್ಯಕತೆ ಇರುತ್ತದೆ.

ಈ) ಈ ತಾಲ್ಲೂಕಿನಲ್ಲಿರುವ ಕೆಲವು ಅರಕ್ಷಕ ಠಾಣೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ

ಉ) ಹಾಗಿದ್ದಲ್ಲಿ, ಈ ಕಟ್ಟಡಗಳನ್ನು ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ದುಸ್ಥಿತಿ ಕಂಡುಬಂದಿರುವ ಸ್ಥಳಗಳಲ್ಲಿ ದುರಸ್ತಿ ಕಾರ್ಯ ಹಮ್ಮಿಕೊಳ್ಳಲಾಗುವುದು.

ಊ) ಪಾಂಡವಪುರ ತಾಲ್ಲೂಕಿನಲ್ಲಿರುವ ಅರಕ್ಷಕ ಠಾಣೆಗಳಲ್ಲಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು?(ವರ್ಗಾವಾರು ವಿವರಗಳನ್ನು ನೀಡುವುದು)

ಕ್ರಮ ಸಂಖ್ಯೆ	ಠಾಣೆಯ ಹೆಸರು	ಹುದ್ದೆ	ಮಂಜೂರಾತಿ ಬಲ	ವಾಸ್ತವಿಕ ಬಲ	ಖಾಲಿ
1)	ಪಾಂಡವಪುರ ಠಾಣೆ	ಪಿ.ಐ	1	1	–
		ಪಿ.ಎಸ್.ಐ	1	1	–
		ಎ.ಎಸ್.ಈ	2	1	1
		ಸಿ.ಹೆಚ್.ಸಿ.	8	8	–
		ಮ.ಹೆಚ್.ಸಿ.	1	1	–
		ಸಿ.ಪಿ.ಸಿ	24	24	–
		ಮ.ಪಿ.ಸಿ.	3	3	–
	ಒಟ್ಟು		**40**	**39**	**1**
2)	ಚಿನಕುರುಳಿ ಹೊರಠಾಣೆ	ಸಿ.ಹೆಚ್.ಸಿ.	1	1	–
		ಸಿ.ಪಿ.ಸಿ	4	2	2
	ಒಟ್ಟು		**5**	**3**	**2**

3)	ಮೇಲುಕೋಟೆ ಹೊರಠಾಣೆ	ಸಿ.ಹೆಚ್.ಸಿ.	1	1	–
		ಸಿ.ಪಿ.ಸಿ	4	3	1
	ಒಟ್ಟು		5	4	1

ಋ) ಈ ತಾಲ್ಲೂಕಿನಲ್ಲಿರುವ ಅರಕ್ಷಕ ಠಾಣೆಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸಿಬ್ಬಂದಿಯನ್ನು ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ? ಎಂದಿನಿಂದ ಸಿಬ್ಬಂದಿಯನ್ನು ತುಂಬಲಾಗುವುದು? (ಸಂಪೂರ್ಣ ಮಾಹಿತಿಯನ್ನು ನೀಡುವುದು)

ಮಂಡ್ಯ ಜಿಲ್ಲೆಯಲ್ಲಿ ಹೊಸದಾಗಿ ನೇಮಕಗೊಂಡಿರುವ 124 ನಾಗರೀಕ ಪೇದೆಗಳನ್ನು ಬುನಾದಿ ತರಬೇತಿಗಾಗಿ ನಿಯೋಜಿಸಲಾಗಿದ್ದು, ತರಬೇತಿಯಿಂದ ಬಂದ ನಂತರ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (413)245
ಮಾನ್ಯ ಸದಸ್ಯರ ಹೆಸರು : ಶ್ರೀ ರಾಜಶೇಖರ ಬಸವರಾಜ ಪಾಟೀಲ್
ಉತ್ತರಿಸುವ ಸಚಿವರು : (ಶ್ರೀ ಆರ್.ಅಶೋಕ)
: ಮಾನ್ಯ ಸಾರಿಗೆ ಸಚಿವರು

ಅ) ಹುಮ್ನಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲೆಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಪರ್ಕದ ಕೊರತೆಯಿದೆ;(ವಿವರ ನೀಡುವುದು);

ಹುಮ್ನಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 87 ಹಳ್ಳಿಗಳಿರುತ್ತವೆ. ಈ ಪೈಕಿ, 86 ಹಳ್ಳಿಗಳಿಗೆ ಸಾರಿಗೆ ಸೌಕರ್ಯ ಕಲ್ಪಿಸಲಾಗಿದೆ. ಘಾತಿಮಾಪುರ ಗ್ರಾಮಕ್ಕೆ ಬಸ್ ಕಾರ್ಯಾಚರಣೆಗೆ ರಸ್ತೆ ಸರಿಯಿಲ್ಲದ ಕಾರಣ ಸಾರಿಗೆ ಸೌಕರ್ಯ. ಕಲ್ಪಿಸಲಾಗಿಲ್ಲ.

ಆ) ಈ ಕೊರತೆಯನ್ನು ಪರಿಹರಿಸಲು ಕೈಗೊಂಡ ಕ್ರಮಗಳ ವಿವರ ನೀಡುವುದು?

ಘಾತಿಮಾಪುರ ಗ್ರಾಮದ ಹತ್ತಿರ ಅಡಿಗಾಲುವೆ ಜಖಂಗೊಂಡಿರುತ್ತದೆ. ಸದರಿ ಅಡಿಗಾಲುವೆ ದುರಸ್ತಿ ಕಾರ್ಯ ಮುಗಿದ ನಂತರ ಈ ಗ್ರಾಮಕ್ಕೆ ಸಾರಿಗೆ ಸೌಕರ್ಯ ಕಲ್ಪಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(315)246
2. ಸದಸ್ಯರ ಹೆಸರು	:	ಶ್ರೀ ರಾಮಸ್ವಾಮಿಗೌಡ ಬಿ.ಬಿ
3. ಉತ್ತರಿಸುವ ಸಚಿವರ	:	(ಶ್ರೀ ಡಾ: ವಿ.ಎಸ್.ಆಚಾರ್ಯ)
	:	ಮಾನ್ಯ ಗೃಹ ಸಚಿವರು

ಅ ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವಿವಿಧ ಪೋಲೀಸ್ ಠಾಣೆಗಳಲ್ಲಿ ರೈತರ ವಿರುದ್ಧ ಕಳೆದ 3 ವರ್ಷಗಳಿಂದ ಹೂಡಿರುವ ಮೊಕದ್ದಮೆಗಳೆಷ್ಟು (ಪ್ರತಿ ಮೊಕದ್ದಮೆಗಳ ವಿವರಗಳನ್ನು ನೀಡುವುದು);

ಒಟ್ಟು 8 ಮೊಕದ್ದಮೆಗಳನ್ನು ಹೂಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ ರೈತರ ವಿರುದ್ಧ ಹೂಡಿರುವ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿಗಳು ಸದನದಲ್ಲಿ ಪ್ರಕಟಿಸಿದ್ದರೂ, ಈವರೆಗೂ ಆ ಮೊಕದ್ದಮೆಗಳನ್ನು ವಾಪಸ್ಸುಪಡೆಯದಿರಲು ಕಾರಣಗಳೇನು;

ಈ ಪ್ರಕರಣಗಳನ್ನು ಹಿಂದೆ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.+

ಇ ಈ ಮೊಕದ್ದಮೆಗಳನ್ನು ಸರ್ಕಾರ ವಾಪಸ್ಸು ಪಡೆಯುವುದು ಎಂದತ?

ಮೇಲಿನಂತೆ

ಅನುಬಂಧ

ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಕಳೆದ ಮೂರು ವರ್ಷಗಳಿಂದ ರೈತರ ಮೇಲೆ ಹೂಡಿರುವ ಮೊಕದ್ದಮೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಪೊಲೀಸ್ ಠಾಣೆ ಮತ್ತು ಮೊಕದ್ದಮೆ ಸಂಖ್ಯೆ	ಕೃತ್ಯ ನಡೆದ ದಿನಾಂಕ	ಪಿರ್ಯಾದಿಯ ಹೆಸರು ಮತ್ತು ವಿಳಾಸ	ಪ್ರಕರಣದ ಸಂಕ್ಷಿಪ್ತ ವಿವರ	ಆರೋಪಿಗಳ ಹೆಸರು ಮತ್ತು ವಿಳಾಸ	ಸಿ.ಸಿ.ನಂಬರ್
1	ಕುಣಿಗಲ್ ಪೊ.ಠಾ.ಮೊ.ಸಂ.225/2006 ಕಲಂ 143-147-148-353-504-506-127 ರೆ/ವಿ 149 ಐಪಿಸಿ	20-10-2006	ಚಂದ್ರಮೋಹನ್, ಎ.ಇ.ಇ. ಹೇಮಾವತಿ ನಾರಾವಿಭಾಗ, ಹೆಬ್ಬೂರು	ದಿ: 20/10/2006ರಂದು ಕೊತ್ತಗೆರೆ ಕೆರೆಯ ಕೋಡಿಯ ಬಳಿ ಪಿರ್ಯಾದುದಾರರು ತಮ್ಮ ಸಿಬ್ಬಂದಿಯೊಂದಿಗೆ ಜಿಲ್ಲಾಧಿಕಾರಿಗಳ ಆದೇಶದಂತೆ ಕೊತ್ತಗೆರೆ ಕೆರೆಯಿಂದ ಮಂಗಲ ಜಲಾಶಯಕ್ಕೆ ನೀರು ಬಿಡಲು ಜೆಸಿಬಿ ಯಿಂದ ಡ್ರಾಫ್ಟ್ ಚಾನಲ್ ತೆಗೆಯುತ್ತಿರುವಾಗ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೈಗಳಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಅಕ್ರಮ ಕೂಟ ಸೇರಿ ಅವಾಚ್ಯ ಶಬ್ದಗಳಿಂದ ಬೈದು, ಕಲ್ಲುಗಳಿಂದ ಜೆ.ಸಿ.ಬಿ.ಯಂತ್ರಕ್ಕೆ ಹೊಡೆದು, ಗ್ಲಾಸುಗಳನ್ನು ಜಖಂಗೊಳಿಸಿ, ಸರ್ಕಾರಿ ಕೆಲಸ ಮಾಡಲು ಅಡ್ಡಿಪಡಿಸಿ, ಅಧಿಕಾರಿಗಳನ್ನು ಕುರಿತು ನೀವೇನಾದರೂ ಕಾಲುವೆ ತೆಗೆದು ನೀರನ್ನು ಬಿಟ್ಟರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣಬೆದರಿಕೆ ಹಾಕಿರುತ್ತಾರೆಂದು ತನಿಖೆಯಿಂದ ದೃಢಪಟ್ಟಿರುತ್ತದೆ	ತಿಮ್ಮಯ್ಯ ಬಿನ್ ಗಿರಿಯಪ್ಪ 33 ವರ್ಷ, ವಡ್ಡರಪಾಳ್ಯ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾ. ಮತ್ತು ಇತರೆ 13 ಜನರು	ಸಿ.ಸಿ.ನಂ.51/2007 ದಿ:25.09.08ರಂದು ವಿಚಾರಣೆ ದಿನಾಂಕ, ನಿಗದಿಯಾಗಿದೆ.

2	ಕುಣಿಗಲ್ ಪೊ.ಠಾ.ಮೊ.ಸಂ.2 26/2006 ಕಲಂ 143–147–148–353–323–324–326–332–333–427 ರೆ/ಪ 149 ಐಪಿಸಿ ಮತ್ತು ಸೆಕ್ಷನ್ 2&3 ಆಫ್ ಕರ್ನಾಟಕ ಪ್ರಿವೆನ್‌ಷನ್ ಆಫ್ ಡಿಸ್ಟ್ರಾಕ್ಷನ್ ಪ್ರಾಪರ್ಟಿ ಕಾಯ್ದೆ	21–10–2006	ಚಂದ್ರಮೋಹನ್, ಎ.ಇ.ಇ. ಹೇಮಾವತಿ ನಾಲಾವಿಭಾಗ, ಹೆಬ್ಬೂರು	ದಿನಾಂಕ: 21/10/2008ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ 1, 2 ಮತ್ತು 3ನೇ ಸಾಕ್ಷಿಯವರುಗಳನ್ನು ಹಾಗೂ ಇತರರು ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಇತರೆ ಜನರನ್ನು ಸೇರಿಸಿಕೊಂಡು ಕೋಡಿಯಿಂದ ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ ಆರೋಪಿಗಳು ಉದ್ರಿಕ್ತಗೊಂಡು ಅಧಿಕಾರಿಗಳಿಗೂ ಮತ್ತು ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸದಂತೆ, ಸರ್ಕಾರಿ ಕೆಲಸಕ್ಕೆ ಅಡ್ಡಪಡಿಸಿ ಏಕಾಏಕಿ ಕಲ್ಲುಗಳಿಂದ ಪೊಲೀಸರಿಗೂ ಮತ್ತು ಪೊಲೀಸ್ ವಾಹನಗಳಿಗೆ ಹೊಡೆದು ಜಖಂಗೊಳಿಸಿ ಕಲ್ಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಬಗ್ಗೆ.	ಸುರೇಶಗೌಡ ಬಿನ್ ಬೆಟ್ಟಯ್ಯ, 42 ವರ್ಷ, ಕೆಂಪನಹಳ್ಳಿ, ಹುತ್ರಿದುರ್ಗ ಹೋಬಳಿ, ಕುಣಿಗಲ್ ತಾ. ಮತ್ತು ಇತರೆ 44 ಜನರು	ಸಿ.ಸಿ.ನಂ.702/2007 ದಿ:26.07.08ರಂದು ವಿಚಾರಣೆ ದಿನಾಂಕ, ನಿಗದಿಯಾಗಿದೆ.

3	ಕುಣಿಗಲ್ ಪೊ.ಠಾ.ಮೊ.ಸಂ. 227/2006 ಕಲಂ 143-504-506-127 ರೆ/ವಿ 149ಐಪಿಸಿ	21-10-2006	ಬೆಟ್ಟಸ್ವಾಮಯ್ಯ ಬಿನ್ ಲಿಂಗಯ್ಯ ಭಕ್ತರಹಳ್ಳಿ,	ದಿ: 21/10/2006ರಂದು ಕೆರೆಯ ಕೋಡಿಯ ಬಳಿ ಆರೋಪಿಗಳು ಸಮಾನ ಉದ್ದೇಶದಿಂದ ಪಿರ್ಯಾದುದಾರರನ್ನು ಕುರಿತು ನೀನು ಉದ್ದೇಶಪೂರ್ವಕವಾಗಿ ಜನರನ್ನು ಕರೆದುಕೊಂಡು ಬಂದು ಕೆರೆಯ ಕೋಡಿಯನ್ನು ಒಡೆಸಿ ನೀರು ಬಿಡಿಸಲು ಬಂದಿದ್ದೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿನ್ನನ್ನು ಹಳ್ಳಕ್ಕೆ ತಳ್ಳಿ ಸಾಯಿಸಿ ಬಿಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುವ ಕುರಿತು	ತಿಮ್ಮಯ್ಯ ಬಿನ್ ಗಿರಿಯಪ್ಪ, 35 ವರ್ಷ, ವಡ್ಡರಪಾಳ್ಯ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾ. ಮತ್ತು ಇತರೆ 3 ಜನರು	ಸಿ.ಸಿ.ನಂ.933/06 ದಿ:29.08.08 ರಂದು ವಿಚಾರಣೆಯಲ್ಲಿದೆ
4	ಕುಣಿಗಲ್ ಪೊ.ಠಾ.ಮೊ.ಸಂ. 258/2006 ಕಲಂ 143,147,148,323, 324,504 ರೆ/ವಿ 149 ಐಪಿಸಿ	21-10-2006	ನಾರಾಯಣ ಬಿನ್ ರಾಮಣ್ಣ, ಚಿಗನಿಪಾಳ್ಯ	ದಿ: 21-10-2006ರಂದು ಕೊತ್ತಗೆರೆ ಕೆರೆಯಿಂದ ಮಂಗಳ ಜಲಾಶಯಕ್ಕೆ ನೀರು ಹರಿಸುವುದನ್ನು ನೋಡಲು ಹೋಗಿದ್ದ ಪಿರ್ಯಾದುದಾರರಿಗೆ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೈಗಳಲ್ಲಿ ಜಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಉದ್ದೇಶಪೂರ್ವಕವಾಗಿ ನೀನು ಸಹ ನೀರನ್ನು ಕೆರೆಯಿಂದ ಹೊರಗಡೆಗೆ ಹರಿಸಲು ಬಂದಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಕಲ್ಲು ತೂರಾಟ ಮಾಡಿದ್ದು, ಪಿರ್ಯಾದಿಯ ತಲೆಗೆ ಸಾಮಾನ್ಯ ಗಾಯವಾಗಿದ್ದು, ಇಲ್ಲಿಂದ ನೀನು ಹೋಗದಿದ್ದರೆ ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುವ ಕುರಿತು	ಗಂಗಾಧರ ಬಿನ್ ವಡ್ಡರಪ್ಪ, 40 ವರ್ಷ, ಬಾಗೇನಹಳ್ಳಿ ಮತ್ತು ಇತರ 9 ಜನರು	ಸಿ.ಸಿ.ನಂ.934/06 ದಿ:29.08.08ರಂದು ವಿಚಾರಣೆಯಲ್ಲಿದೆ.

5	ಕುಣಿಗಲ್ ಪೊ.ಠಾ.ಮೊ.ಸಂ 259/2006 ಕಲಂ 143–147–148–323–324–325–333–427–504–506ರೆ/ವಿ 149 ಐಪಿಸಿ ಮತ್ತು ಸೆಕ್ಷನ್ 2&3 ಆಫ್ ಕರ್ನಾಟಕ ಪ್ರಿವೆನ್‌ಷನ್ ಆಫ್ ಡಿಸ್ಟ್ರಾಕ್ಷನ್ ಪ್ರಾಪರ್ಟಿ ಕಾಯ್ದೆ	21–10–2006	ಶ್ರೀ ಎ.ಆರ್.ಬಲರಾವೆ ೦ೀಗೌಡ, ಸಿ.ಪಿ.ಐ ಕುಣಿಗಲ್	ದಿ: 21/10/2006 ರಂದು ಕೊತ್ತಗೆರೆ ಕೆರೆಯಿಂದ ಮಂಗಳ ಜಲಾಶಯಕ್ಕೆ ನೀರು ಹರಿಸಲು ಹೇಮಾವತಿ ಇಂಜಿನಿಯರ್ ರವರ ಆದೇಶದಂತೆ ಮಂಗಳ ಜಲಾಶಯಕ್ಕೆ ನೀರನ್ನು ಕಾಲುವೆ ತೆಗೆಸಲು ಮುಂದಾದಾಗ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ನಾವುಗಳು ಯಾವುದೇ ಕಾರಣಕ್ಕೂ ಮಂಗಳ ಜಲಾಶಯಕ್ಕೆ ನೀರನ್ನು ಬಿಡುವುದಿಲ್ಲವೆಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಸರ್ಕಾರಿ ಕೆಲಸ ಮಾಡದಂತೆ ಅಡ್ಡಿಪಡಿಸಿ, ಸ್ಥಳದಲ್ಲೇ ಬಿದ್ದಿದ್ದ ಜಲ್ಲಿ ಕಲ್ಲುಗಳಿಂದ ಪೊಲೀಸ್ ಸಿಬ್ಬಂದಿಯವರ ಮೇಲೆ ಮತ್ತು ಅಧಿಕಾರಿಗಳ ಮೇಲೆ ಕಲ್ಲು ತೂರಾಟ ಮಾಡಿದಾಗ, ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ರಕ್ತಗಾಯಗಳಾಗಿದ್ದು, ಪೊಲೀಸ್ ವಾಹನಕ್ಕೂ ಕಲ್ಲುಗಳಿಂದ ಜಖಂಗೊಳಿಸಿದಾಗ ಪೊಲೀಸರು ಗುಂಪನ್ನು ಲಘು ಲಾಠಿ ಪ್ರಹಾರದಿಂದ ಚದುರಿಸುತ್ತಾರೆ ಎಂಬುದರ ಕುರಿತು	ಶಿವರಾಮಯ್ಯ ಬಿನ್ ಬೋರಪ್ಪ, 50 ವರ್ಷ, ನರ್ಜುನಕುಪ್ಪೆ, ಮತ್ತು ಇತರೆ 27 ಜನರು	ಸಿ.ಸಿ.ನಂ.753/07 ದಿ:18.07.08ರಂದು ವಿಚಾರಣೆ ದಿನಾಂಕ ನಿಗದಿಯಾಗಿದೆ.

6	ಕುಣಿಗಲ್ ಪೊ.ಠಾ.ಮೊ.ಸಂ. 260/2006 ಕಲಂ 143–147–148–323–353–332–427–504–506 ರೆ/ವಿ 149ಐಪಿಸಿ	21–10–2006	ಪಾಂಡವರಾಜು, ತುಮಕೂರು	ದಿನಾಂಕ: 21/10/2008ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ, ಆರೋಪಿತರು ಉದ್ರಿಕ್ತಗೊಂಡು ಅಧಿಕಾರಿಗಳಿಗೂ ಮತ್ತು ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸದಂತೆ, ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಏಕಾಏಕಿ ಗಲಭೆವುಂಟು ಮಾಡುವ ಸಮಾನ ಉದ್ದೇಶದಿಂದ ಅಕ್ರಮಗುಂಪು ಸೇರಿ ಕೋಡಿಹಳ್ಳಿಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ನಿಂತಿದ್ದ ಕೆಎ–06–ಜಿ–369 ವಾಹನಕ್ಕೂ ಹಾಗೂ ಪೊಲೀಸರಿಗೂ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿ ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಕುರಿತು	ಶಿವರಾಮಯ್ಯ ಬಿನ್ ಬೋರಪ್ಪ, 50 ವರ್ಷ, ನರ್ಜುನಕುಪ್ಪೆ, ಮತ್ತು ಇತರೆ 14 ಜನರು	ಸಿ.ಸಿ.ನಂ.703/07 ದಿ:17.07.08ರಂದು ವಿಚಾರಣೆ ದಿನಾಂಕ ನಿಗದಿಯಾಗಿದೆ.

7	ಕುಣಿಗಲ್ ಪೊ.ಠಾ.ಮೊ.ಸಂ. 261/2006 ಕಲಂ 143–147–148–353–323–324–332 427 ರೆ/ವಿ 149 ಐಪಿಸಿ	21–10–2006	ಶ್ರೀ ನರಸಿಂಹಯ್ಯ ಪಿ.ಎಸ್.ಐ. ಅಮೃತೂರು	ದಿನಾಂಕ: 21/10/2008ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ ಪಿರ್ಯಾದಿದಾರರು ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೋಡಿಯಿಂದ ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ, ಉದ್ರಿಕ್ತಗೊಂಡು ಅಧಿಕಾರಿಗಳಿಗೆ ಹಾಗೂ ಪೊಲೀಸ್ ಸಿಬ್ಬಂದಿಯವರಿಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಏಕಾಏಕಿ ಗಲಭೆವುಂಟು ಮಾಡುವ ಸಮಾನ ಉದ್ದೇಶದಿಂದ ಅಕ್ರಮಗುಂಪು ಸೇರಿ ಕೋಡಿಹಳ್ಳಿಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ನಿಂತಿದ್ದ ಕೆಎ–06–ಜಿ–369 ವಾಹನಕ್ಕೂ ಹಾಗೂ ಪೊಲೀಸರಿಗೂ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿ ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಕುರಿತು	ಶಿವರಾಮಯ್ಯ ಬಿನ್ ಬೋರಪ್ಪ, 50 ವರ್ಷ, ನರ್ಜುನಕುಪ್ಪೆ, ಮತ್ತು ಇತರೆ 23 ಜನರು	ಸಿ.ಸಿ.ನಂ.704/07 ದಿ:28.08.08ರಂದು ದಿನಾಂಕ ನಿಗದಿಯಾಗಿದೆ.

8	ಕುಣಿಗಲ್ ಪೊ.ಠಾ.ಮೊ.ಸಂ.262/2006 ಕಲಂ143–147–148–323–324–353–332–333–427–506 ರೆ/ವಿ 149 ಐಪಿಸಿ ಮತ್ತು ಸೆಕ್ಷನ್ 2&3 ಆಫ್ ಕರ್ನಾಟಕ ಪ್ರಿವೆನ್ಷನ್ ಆಫ್ ಡಿಸ್ಟ್ರಾಕ್ಷನ್ ಪ್ರಾಪರ್ಟಿ ಕಾಯ್ದೆ	21–10–2006	ಶ್ರೀ ರಂಗಸ್ವಾಮಿ ಪಿಡಸ್ಐ ಹುಲಿಯೂರು ದುರ್ಗ	ದಿನಾಂಕ: 21/10/2006 ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ ಪಿರ್ಯಾದಿದಾರರು ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೋಡಿಯಿಂದ ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ, ಉದ್ರಿಕ್ತಗೊಂಡು ಅಧಿಕಾರಿಗಳಿಗೆ ಹಾಗೂ ಪೊಲೀಸ್ ಸಿಬ್ಬಂದಿಯವರಿಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಏಕಾಏಕಿ ಗಲಭೆವುಂಟು ಮಾಡುವ ಸಮಾನ ಉದ್ದೇಶದಿಂದ ಅಕ್ರಮಗುಂಪು ಸೇರಿ ವಡ್ಡರಪಾಳ್ಯ ರಸ್ತೆಯಲ್ಲಿ ನಿಂತಿದ್ದ ಕೆಎ–06–ಜಿ–324 ವಾಹನಕ್ಕೂ ಹಾಗೂ ಪೊಲೀಸರಿಗೂ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿ, ಪಿರ್ಯಾದಿಗೆ ಪ್ರಾಣ ಬೆದರಿಕೆ ಹಾಕಿ, ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಕುರಿತು	ಲಕ್ಕಮ್ಮ ಕೋ ಕೃಷ್ಣಪ್ಪ, 35 ವರ್ಷ, ವಡ್ಡರಪಾಳ್ಯ, ಕುಣಿಗಲ್ ತಾ ಮತ್ತು ಇತರೆ 16 ಜನರು	ಸಿ.ಸಿ.ನಂ.705/07 ದಿ:23.10.08ರಂದು ದಿನಾಂಕ ನಿಗದಿಯಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (316)247
ಮಾನ್ಯ ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ.(ಕುಣಿಗಲ್)
ಉತ್ತರಿಸಬೇಕಾದವರು : (ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು)
ಮಾನ್ಯ ಅಬಕಾರಿ ಸಚಿವರು

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಪತ್ತೆಯಾಗಿರುವ ಅಬ್ಕಾರಿ ಅಕ್ರಮಗಳೆಷ್ಟು; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ವಿವರಗಳನ್ನು ನೀಡುವುದು)

ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ 25 ಮೊಕದ್ದಮೆಗಳನ್ನು ದಾಖಲು ಮಾಡಲಾಗಿರುತ್ತದೆ. ಸದರಿ ಮೊಕದ್ದಮೆಗಳಲ್ಲಿನ ಆರೋಪಿಗಳ ವಿರುದ್ಧ ಘನ ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಮೊಕದ್ದಮೆಗಳು ವಿಚಾರಣಾ ಹಂತದಲ್ಲಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಲಾಗಿದೆ.

ಆ) ಈ ಕ್ಷೇತ್ರದಲ್ಲಿ ಕಳ್ಳಭಟ್ಟಿ ಉತ್ಪಾದನೆ, ವಿತರಣೆ ಮತ್ತು ಸೇವನೆಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಕುಣಿಗಲ್ ಕ್ಷೇತ್ರದಲ್ಲಿ ಕಳ್ಳಭಟ್ಟಿ ಉತ್ಪಾದನೆ, ವಿತರಣೆ ಹಾಗೂ ಸೇವನೆಯಿಂದ ಯಾವುದೇ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. ಮುಂದೆ ಇಂತಹ ಅಕ್ರಮಗಳು ಕಂಡುಬಂದಲ್ಲಿ ಕಾನೂನು ರೀತ್ಯಾ ಮೊಕದ್ದಮೆ ದಾಖಲಿಸಲಾಗುವುದು. ರಸ್ತೆ ಕಾವಲು, ಗಸ್ತುಕಾರ್ಯ ನಡೆಸಲಾಗುತ್ತಿದೆ. ಸನ್ನದೇತರ ಸ್ಥಳಗಳಲ್ಲಿನ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯುವ ಸಲುವಾಗಿ ಮತ್ತು ಕಳ್ಳಭಟ್ಟಿ ಸೇವನೆಯಿಂದಾಗುವ ಅನಾಹುತಗಳ ಕುರಿತು ಸಾರ್ವಜನಿಕರಲ್ಲಿ ಗ್ರಾಮಸಭೆಗಳನ್ನು ನಡೆಸಿ ಜನಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಅನುಬಂಧ

2005–06, 2006–07 ಮತ್ತು 2007–08ನೇ ಸಾಲಿನಲ್ಲಿ ಕುಣಿಗಲ್ ವಲಯದಲ್ಲಿ ದಾಖಲಿಸಿದ ಅಬಕಾರಿ ಕ್ರಮಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳು

ಕ್ರ ಸಂ	ಪ್ರಮಾವ ಸಂಖ್ಯೆ ಮತ್ತು ದಿನಾಂಕ	ಆರೋಪಿತರ ಹೆಸರು, ವಿಳಾಸ	ವಶಪಡಿಸಿ ಕೊಂಡ ವಸ್ತುಗಳು	ವಶಪಡಿಸಿ ಕೊಂಡ ವಾಹನಗಳು	ಸಿಸಿ ನಂಬರ್
1	2	3	4	5	6
01.	ಅನಿ.ತುಉವಿ.01/05–06 ದಿನಾಂಕ:20–10–2005	ಬೆಟ್ಟಯ್ಯ ಬಿನ್ ನಿಂಗಯ್ಯ, ಚೌಡನಕುಪ್ಪೆ, ಕುಣಿಗಲ್ ತಾಲ್ಲೂಕು	5 ಲೀ. ಸೇಂದಿ	–	165/2006
02.	ಅನಿ.ತುಉಜಿವಿ.ದಳ.12/05–06ದಿನಾಂಕ:20–10–2005	ಕೃಷ್ಣ ಬಿನ್ ವೆಂಕಟಯ್ಯ, ಹುಲಿಕಟ್ಟೆ ವಾಸ, ಹುಲಿಯೂರುದುರ್ಗ, ಹೋಬಳಿ, ಕುಣಿಗಲ್ ತಾಲ್ಲೂಕು	3 ಲೀ ಸೇಂದಿ	–	166/2006
03	ಅಮೃತೂರು.ಪೊ.ಕ್ರೈ.ಸಂ. 100/05–06. ದಿನಾಂಕ: 19–05–2005	ಲಕ್ಕಣ್ಣ @ ರಾಜಣ್ಣ ಬಿನ್ ಚಿಕ್ಕಲಕ್ಕಣ್ಣ, ಕಟ್ಟಿಗೇನಹಳ್ಳಿ, ಯಡಿಯೂರು ಹೋಬಳಿ	322.280 ಲೀ ಮಧ್ಯ	–	207/2006
04	ಅಉನಿ.ಕು.ಜಾಮತ.08/08–06 ದಿನಾಂಕ: 02–05–2007	ಮಣಿಕ್ಯಂ ವಿನ್ ಲೇ:ಚಿನ್ನಸ್ವಾಮಿ, ತಾವರೆಕೆರೆ, ಹುಲಿಯೂರುದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು	25 ಲೀ ಸೇಂದಿ	–	456/2006

05	ಅನಿ.ತುಉವಿ.18/06-07, ದಿನಾಂಕ: 29-05-2007	ನಾಗರಾಜು ಬಿನ್ ತುಬಿ, ಕುಡತ್ಲು ಗ್ರಾಮ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ	25.920 ಲೀ ನಕಲಿ ಮದ್ಯ	–	458/2008
06	ಅನಿ.ಕುವ.05/07-08, ದಿನಾಂಕ: 30-07-2007	ಹುಚ್ಚಪ್ಪ ಬಿನ್ ಮರಿಯಣ್ಣಗೌಡ, ಮಾಯಣ್ಣಗೌಡನ ಪಾಳ್ಯ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು	2.700 ಲೀ ಮದ್ಯ	1 ಟಿವಿಎಸ್ ಎಕ್ಸ್‌ಎಲ್ – 50	ತನಿಖಾ ಹಂತದಲ್ಲಿದೆ
07.	ಅನಿ.ಕುವ.06/07-08, ದಿನಾಂಕ: 01-08-2007	ಉಮೇಶ್ ಬಿನ್ ಚಿಕ್ಕ ಹುಚ್ಚಯ್ಯ, ದೊಡ್ಡಮಾವತ್ತೂರು, ಕುಣಿಗಲ್ ತಾಲ್ಲೂಕು	3.500 ಲೀ ಸಾರಾಯಿ	–	ತನಿಖಾ ಹಂತದಲ್ಲಿದೆ
08.	ಅನಿ.ಕುವ,07/2007-08, ದಿನಾಂಕ: 10-08-2007	ಸಿದ್ದಯ್ಯ ಬಿನ್ ಗಂಗಕರಿಯಪ್ಪ, ಬೊರಲಿಂಗನಪಾಳ್ಯ, ಕುಣಿಗಲ್ ತಾಲ್ಲೂಕು	15ಲೀ. ಬಿಡಿ ನಕಲಿ ಮದ್ಯ	–	ತನಿಖಾ ಹಂತದಲ್ಲಿದೆ
09.	ಕು.ಪೊ.ಕ್ರೈಂ. 197/2007, ದಿನಾಂಕ: 11-08-2007	ಕೆ.ಬಿ.ರಾಮಣ್ಣ ಬಿನ್ ಬೋರಯ್ಯ ಕುಣಿಗಲ್ ಟೌನ್	29 ರಟ್ಟಿನ ಪೆಟ್ಟಿಗೆ ಮದ್ಯ	–	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.
10	ಅನಿ.ಕುವ.08/07-08, ದಿನಾಂಕ: 01-09-2007	ದಾಸೇಗೌಡ ಬಿನ್ ಚಿಕ್ಕುಡುಗೇಗೌಡ, ಕೊಡಮತ್ತಿ ಗ್ರಾಮ, ಕುಣಿಗಲ್ ತಾಲ್ಲೂಕು	34.560 ಲೀ ನಕಲಿ ಮದ್ಯ	–	ತನಿಖಾ ಹಂತದಲ್ಲಿದೆ

11	ಅಮೃತೂರು ಪೊ. ಕ್ರೈ.ಸಂ.80/2007, ದಿನಾಂಕ: 20-08-2007	ಲಕ್ಷಣ್ @ ಪಾಪ ಬಿನ್ ರಾಮಣ್ಣ, ಸಿಂಗೋನಹಳ್ಳಿ, ಯಡಿಯೂರು ಹೋಬಳಿ, ಕುಣಿಗಲ್ ತಾಲ್ಲೂಕು	2.800 ಲೀ ಮದ್ಯ	ಸುಜುಕಿ ಸಮುರಾಯ್ ನಂ. ಕೆಎ-05-ಇಇ-2133	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ
12.	ರಾವಿದಳ.ಅಉನಿ.17/07-08, ದಿನಾಂಕ: 28-10-2007	1) ಬಸವರಾಜು ಬಿನ್ ನಾಗರಾಜು, ಬಣವಿಕಲ್ಲು, ಕೂಡ್ಲಿಗೆ ತಾಲ್ಲೂಕು, ಬಳ್ಳಾರಿ ಜಿಲ್ಲೆ. 2) ಜಯರಾಂ ಬಿನ್ ವರದೇಗೌಡ @ ಡಾಬಾಜಯರಾಂ, ಹುಲಿಯೂರುದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು.	210 ಲೀ ಮದ್ಯಸಾರ	–	ತನಿಖಾ ಹಂತದಲ್ಲಿದೆ

13.	ರಾವಿದಳ.ಅನಿ–4/40/07–08, ದಿನಾಂಕ: 04–11–2007	1) ಗದ್ದಯ್ಯ ಬಿನ್ ಸೀರಯ್ಯ, ಸೀರಯ್ಯನಪಾಳ್ಯ ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು 2) ರಾಮ @ ವೈನ್ ಸ್ಟೋರ್ ರಾಮ, ಕುಣಿಗಲ್ ಟೌನ್ 3) ವೆಂಕಟೇಶ್ ಮತ್ತು ಸತೀಶ್ ಬಿನ್ ಗದ್ದಯ್ಯ, ಸೀರಯ್ಯನಪಾಳ್ಯ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು	7.382 ಲೀ ನಕಲಿ ಮದ್ಯ 35 ಲೀ. ಮದ್ಯಸಾರ 20 ಲೀ. ಬ್ಲೆಂಡರ್ ಮದ್ಯ 1–ಕೈಚಲಿತ ಯಂತ್ರ ಎಸೆನ್ಸಸ್, ಲೇಬಲ್ಗಳು	–	ತನಿಖಾ ಹಂತದಲ್ಲಿದೆ
14.	ಹು.ದು.ಪೊ.ಕ್ರೈಂ.ಸಂ.91/2007, ದಿನಾಂಕ: 13–07–2007	ರಮೇಶ್ ಬಿನ್ ಸಣ್ಣಪ್ಪ, ವಳಗೆರೆಪುರ, ಅಮೃತೂರು ಹೋಬಳಿ	90.000 ಲೀ ಸಾರಾಯಿ ಸ್ಯಾಚೆಟ್	–	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾಲೋಚನೆ ಪಟ್ಟಿ ಸಲ್ಲಿಸಿರುತ್ತಾರೆ
15.	ಹು.ದು.ಪೊ.ಕ್ರೈಂ.ಸಂ.154/2007, ದಿನಾಂಕ: 02–11–2007	ಜಯರಾಮಯ್ಯ ಬಿನ್ ವರದೇಗೌಡ, ಬಂಡಿಹಳ್ಳಿ, ಕುಣಿಗಲ್ ತಾಲ್ಲೂಕು	33.000 ಲೀ ಮದ್ಯಸಾರ 3.600 ಲೀ ನಕಲಿ ಮದ್ಯ		ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

16.	ಹು.ದು.ಪೊ.ಕ್ರೈಂ.ಸಂ. 150/2007, ದಿನಾಂಕ: 2-10-2007	1) ಜಯರಾಮಯ್ಯ ಬಿನ್ ವರದೇಗೌಡ, ಬಂಡಿಹಳ್ಳಿ, ಕುಣಿಗಲ್ ತಾಲ್ಲೂಕು. 2) ದೇವರಾಜು ಬಿನ್ ಲೇಟ್ ಬೆಟ್ಟಸ್ವಾಮಿ, ಹಳೇಪೇಟೆ, ಹೆ.ದುರ್ಗ 3) ಕೃಷ್ಣಮೂರ್ತಿ ಬಿನ್ ಲೇಟ್ ಹೊನ್ನಪ್ಪ 4) ಪ್ರವೀಣ್ 5) ಶಿವಲಿಂಗಯ್ಯ ಬಿನ್ ಪುಟ್ಟಸ್ವಾಮಯ್ಯ, ಹುನುಗನಹಳ್ಳಿ ಹೆ.ದುರ್ಗ, ಹೋಬಳಿ 6) ನಿಂಗಯ್ಯ ಬಿನ್ ಅಣ್ಣೆಗೌಡ, 38 ವರ್ಷ, ಹಳೇಪೂರು, ಕುಣಿಗಲ್ ತಾಲ್ಲೂಕು, ವಾಸ, ಬೆಂಗಳೂರು.	41ನಕಲಿ ಮದ್ಯ 350.000 ಲೀ ಮದ್ಯಸಾರ 3) 105.00 ಲೀ ಸಿದ್ದಪಡಿಸಿದ ಮದಯ 4) 2880 ಖಾಲಿ ಬಾಟಲಿಗಳು (180 ಮಿಲಿ) %) 35 ಲೀ.ನ.20 ಪ್ಲಾಸ್ಟಿಕ್ ಕ್ಯಾನುಗಳು	–	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ
17	ಅಉನಿ.ಕು.ಜಾಮತ.8/20 07-08, ದಿನಾಂಕ: 19-12-2007	ಶಿವಣ್ಣ ಬಿನ್ ನಿಂಗಯ್ಯ, 38 ವರ್ಷ, ಕೆಬ್ಬಳ್ಳಿ, ಹೆ.ದುರ್ಗ ಹೋಬಳಿ	6.840 ಲೀ ಮದ್ಯ	–	373/2008
18.	ಅನಿ.ತುಉವಿ.07/07-08, ದಿನಾಂಕ: 19-12-2007	ಸಮಿತ್ರಮ್ಮ @ ವರದಮ್ಮ ಕೋಂ ವೈರಮುಡಿ, 36 ವರ್ಷ, ಸಇಂಗೋನಹಳ್ಳಿ, ಕುಣಿಗಲ್ ತಾಲ್ಲೂಕು	4.500 ಲೀ ನಕಲಿ ಮದ್ಯ	–	374/2008

19.	ಅಉನಿ.ಜಿವಿದಳತು.17/2007-08, ದಿನಾಂಕ: 14-02-2008	1) ಆಂಟೋಣಿ ಕೆ.ವಿ.ಬಿನ್ ವರ್ಗೀಸ್ ಕುಣ್ಣಪ್ಪಳ್ಳಿ ಹೌಸ್, ಪರೂರು ತಾಲ್ಲೀಕು, ಎರ್ನಾಕುಲಂ ಜಿಲ್ಲೆ, ಕೇರಳ ರಾಜ್ಯ. 2) ಮನೋಜ್‌ಕುಮಾರ್ ಬಿನ್ ಮೋಣಪ್ಪ, ಕುಲಾಲ, 24 ವರ್ಷ, ಕಾವಲಕಟ್ಟೆ ಪೋ. ಬಂಟ್ವಾಳ ತಾಲ್ಲೂಕು 3) ಸಂತೋಷ್ ಬಿನ್ ಕೃಷ್ಣಪ್ಪ, 22 ವರ್ಷ, ಮಾಗುಂಡಿ ಗ್ರಾಮ, ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.	1750.000 ಲೀ. ಮದ್ಯಸಾರ	ಸಿಆರೆಕ್ಸ್-9686 ಐಷರ್ ವಾಹನ	ತನಿಖಾ ಹಂತದಲ್ಲಿದೆ
20.	ಅಉನಿ.ಕುಉವ.4/07-08. ದಿನಾಂಕ: 06-05-2008	ಶ್ರೀನಿವಾಸ ಬಿನ್ ವಜ್ರಪ್ಪ(ಅ:ಸೀನ), 35 ವರ್ಷ, ಶೆಟ್ಟಿಗೆಹಳ್ಳಿ, ಕುಣಿಗಲ್ ತಾಲ್ಲೂಕು.	864.000 ಲೀ ಹೊರರಾಜ್ಯದ ಮದ್ಯ	–	ತನಿಖಾ ಹಂತ
21.	ಅಉನಿ.ಕುಉವ.5/07-08, ದಿನಾಂಕ: 07-05-2008	ಹಾಲನಾಗ ಬಿನ್ ಚಂದ್ರಯ್ಯ 40 ವರ್ಷ, ಯಲಿಯೂರು, ಹುತ್ರಿದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು	.540 ಮಿಲಿ ನಕಲಿ ಮದ್ಯ	–	ತನಿಖಾ ಹಂತ

22.	ದು.ದು.ಪೊ.ಕ್ರೈಂ.ಸಂ.196 /2007, ದಿನಾಂಕ: 26-12-2007	ಮಂಜುನಾಥ ಬಿನ್ ಲೇಟ್ ಮರಿಯಪ್ಪ	8.640 ನಕಲಿ ಮದ್ಯ	-	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ
23.	ಕು.ಪೊ.ಕ್ರೈಂ.ಸಂ.77/2007, ದಿನಾಂಕ: 22-03-2008	1) ಮಂಜುನಾಥ ಬಿನ್ ಲೇಟ್ ಮರಿಯಪ್ಪ 2) ಮಂಜುನಾಥ ಬಿನ್ ಲೇಟ್ ಶಿವರಾಮಯ್ಯ, 3) ರಮೇಶ್ ಬಿನ್ ಡಾಬಾ ರಮೇಶ್, ದೊಡ್ಡಮಾವತ್ತೂರು 4) ಗಂಗಗುಡ್ಡಯ್ಯ ಬಿನ್ ಗಂಗಣ್ಣ, ಮೈಸೂರು, ಬಾಗೇನಹಳ್ಳಿ ವಾಸಿ, ಕೊತ್ತಗೆರೆ ಹೋಬಳಿ.	1) 25.920 ಲೀ. ನಕಲಿ ಮದ್ಯ ಬಾಟಲುಗಳು 3 ಕ್ಯಾನ್ ಸ್ಪಿರಿಟ್ 3 ಖಾಲಿ ಕ್ಯಾನ್ಗಳು, 1 ಹ್ಯಾಂಡ್ ಮಿಷನ್, 180 ಮಿಲಿಯ 200 ಖಾಲಿ ಬಾಟಲುಗಳು	ಕೆಎ-37-ಪಿ-9000 ಟಾಟಾ ಸುಮೋ	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ

24	ಕು.ಪೊ.ಕ್ರೈಂ.ಸಂ.126/2008, ದಿನಾಂಕ: 09-05-2008	ಕುಮಾರ್ ಬಿನ್ ಬೈಯ್ಯಣ್ಣ, ಬಾಗೇನಹಳ್ಳಿ ಗ್ರಾಮ ಕೊತ್ತಗೆರೆ ಹೋಬಳಿ	67.680 ಲೀ ಹೊರರಾಜ್ಯದ ಮದ್ಯ	–	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ
25.	ಕು.ಪೊ.ಕ್ರೈಂ.ಸಂ.127/2008, ದಿನಾಂಕ: 09-05-2008	ನಾಗೇಶ್ ಬಿನ್ ಗುಂಡಯ್ಯ, ಕೆಂಕೆರೆ ಗ್ರಾಮ, ಕಸಬಾ ಹೋಬಳಿ, ಕುಣಿಗಲ್ ತಾಲ್ಲೂಕು	169.20 ಲೀ ಹೊರರಾಜ್ಯದ ಮದ್ಯ	–	ಪೊಲೀಸ್ ಇಲಾಖೆಯಲ್ಲಿಯೇ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (317)248
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ
ಉತ್ತರಿಸುವ ಸಚಿವರು : (ಶ್ರೀ ಸಿ.ಎಂ.ಉದಾಸಿ)
: ಲೋಕೋಪಯೋಗಿ ಸಚಿವರು

ಅ ಕುಣಿಗಲ್ ವಿಧಾನಸಭಾ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ರಸ್ತೆಗಳಿವೆ (ಈ ರಸ್ತೆಗಳಿಂದ ಸಂಪರ್ಕ ಹೊಂದುವ ಊರು:ಗ್ರಾಮಗಳ ವಿವರ ನೀಡುವುದು)

ಕುಣಿಗಲ್ ವಿಧಾನಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 49 ಜಿಲ್ಲಾ ರಸ್ತೆಗಳಿದ್ದು ಇವುಗಳ ಒಟ್ಟು ಉದ್ದ 439.50 ಇರುತ್ತದೆ. ಹಾಗೂ 4 ರಾಜ್ಯ ಹೆದ್ದಾರಿಗಳು ಹಾದು ಹೋಗುತ್ತಿದ್ದು ಇವುಗಳ ಒಟ್ಟು ಉದ್ದ 112.00 ಕಿ.ಮೀ ಆಗಿದೆ. (ವಿವರಗಳು ಅನುಬಂಧ-1ರಲ್ಲಿವೆ)

ಆ ಈ ರಸ್ತೆಗಳು ದುರಸ್ಥಿಗೆ ಒಳಗಾಗಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಇ ಇವುಗಳ ದುರಸ್ಥಿಗಾಗಿ ಸರ್ಕಾರ ಅನುದಾನಗಳನ್ನು ಬಿಡುಗಡೆ ಮಾಡುವುದೆ?

ಹೌದು

ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ಬಿ.ಬಿ.ರಾಮಸ್ವಾಮಿಗೌಡ, (ಕುಣಿಗಲ್) ಇವರ ಚುಕ್ಕೆ ಗುರುತಿನ ಪ್ರಶ್ನೆ 317ಕ್ಕೆ ಸಂಬಂಧಿಸಿದಂತೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಪರ್ಕ ಹೊಂದಿರುವ ಊರು ಹಾಗೂ ಗ್ರಾಮಗಳ ವಿವರಗಳು

ಕ್ರಮ ಸಂಖ್ಯೆ	ಜಿಲ್ಲಾ ಮುಖ್ಯ ರಸ್ತೆ ಹೆಸರು	ಒಟ್ಟು ಉದ್ದ (ಕಿ.ಮೀ)	ಸಂಪರ್ಕಿಸುವ ಹಳ್ಳಿಗಳು
1	2	3	4
1	ಅಂಚಿಪಾಳ್ಯ-ಯಲಗಲವಾಡಿ ರಸ್ತೆ	18.00	ಅಂಚಿಪಾಳ್ಯ (0.00ಕಿ.ಮೀ), ಕಲ್ಲನಾಯಕನಹಳ್ಳಿ (1.00ಕಿ.ಮೀ), ಎಲಿಯೂರು (3.10ಕಿ.ಮೀ) ಬುಕ್ಕಸಾಗರ (4.50ಕಿ.ಮೀ), ಈಡಿಗರ ಪಾಳ್ಯ (5.80 ಕಿ.ಮೀ), ಸೊಂದಲಗೆರೆ (6.50ಕಿ.ಮೀ), ಸಿದ್ದಮಣಿಪಾಳ್ಯ (8.40 ಕಿ.ಮೀ), ಕೆಂಪನಹಳ್ಳಿ(9.40ಕಿ.ಮೀ). ಸಂತೇಪೇಟೆ (11.00ಕಿ.ಮೀ), ಬೆಟ್ಟಹಳ್ಳಿ (11.70ಕಿ.ಮೀ), ಗುಲ್ಲಹಳ್ಳಿಪುರ (12.30ಕಿ.ಮೀ), ಕಣಿವೇಪಾಳ್ಯ (14.60ಕಿ.ಮೀ), ಜೋಡಿಹೊಸಹಳ್ಳಿ (15.40 ಕಿ.ಮೀ), ಯಲಗವಾಡಿ (16.40ಕಿ.ಮೀ), ಮಾಗಡಿ-ತಾ.ಗಡಿ(18.00ಕಿ.ಮೀ)
2	ಗವಿಮಠ-ಹೇರೋಹಳ್ಳಿ ರಸ್ತೆ	18.15	ಕಾಡಮತ್ತಿಕೆರೆ (1.50ಕಿ.ಮೀ), ಕಿತ್ನಾಮಂಗಲ (3.75ಕಿ.ಮೀ), ಗುಜ್ಜನಹಳ್ಳಿ (6.20ಕಿ.ಮೀ), ಚೌಡಮ್ಮಗುಡಿ (8.00ಕಿ.ಮೀ), ಸೀನಪ್ಪನಹಳ್ಳಿ (8.70ಕಿ.ಮೀ), ತಿಪ್ಪನಾಯಕನಹಳ್ಳಿ (11.00ಕಿ.ಮೀ), ಇಪ್ಪಾಡಿ (13.50ಕಿ.ಮೀ), ಶಿವಪುರ (14.20ಕಿ.ಮೀ), ಹೆರೋಹಳ್ಳಿ (17.20ಕಿ.ಮೀ), ಹೇರೋಹಳ್ಳಿಗೇಟ್ (18.15ಕಿ.ಮೀ)
3	ಕೊತ್ತಗೆರೆ-ಸಿ ಎಸ್.ಪುರ ರಸ್ತೆ (ಕಿ.ಮೀ 0.00	16.20	ಕೊತ್ತಿಕೆರೆ, ಹೊಸಹಳ್ಳಿ, ಮಡಿಕೆಹಳ್ಳಿ, ಗೋವಿಂದಯ್ಯನಪಾಳ್ಯ,

	ರಿಂದ 16.20ಕಿ.ಮೀ)		ಗುನ್ನಾಗೆರೆ ಕಾಲೋನಿ, ಗುನ್ನಾಗೆರೆ, ಬಿ.ಟಿ.ಪಾಳ್ಯ, ಯಡ್ಡಿಗೆರೆ, ಜಿಡ್ಡಿಗೆರೆ, ಚೊಟ್ಟನಹಳ್ಳಿ, ಚೊಟ್ಟನಹಳ್ಳಿ ಕ್ರಾಸ್
4	ಕೊತ್ತಗೆರೆ-ಸಿ.ಎಸ್.ಪುರ ರಸ್ತೆಯಿಂದ ವಡ್ಡರಕುಪ್ಪೆ ಜಾಣಗೆರೆ, ತೆರೆದಕುಪ್ಪೆ ಮೂಲಕ ಮಾಗಡಿ ಗಡಿ ಸಂಪರ್ಕಿಸುವ ರಸ್ತೆ, (ಕಿ.ಮೀ 0.00 ರಿಂದ 20.00ಕಿ.ಮೀ)	17.60	ಜಾಗಣಗೆರೆ, ರಾಯಗೋನಹಳ್ಳಿ, ವಾಣಿಗೆರೆ, ಬಕ್ತರಹಳ್ಳಿ, ವಡ್ಡರಕುಪ್ಪೆ ತೆರೆದಕುಪ್ಪೆ, ಗಿಡದಪಾಳ್ಯ, ಮಾಗಡಿ-ತಾ:ಗಡಿ.
5	ಹುಲಿಯೂರುದುರ್ಗ-ಅಮೃತ್ತೂರು ರಸ್ತೆ (ಕಿ.ಮೀ 0.00 ರಿಂದ 15.40ಕಿ.ಮೀ)	15.40	ಹುಲಿಯೂರುದುರ್ಗ (0.00ಕಿ.ಮೀ), ಹಳೇಊರು (2.00ಕಿ.ಮೀ), ಲಕ್ಷ್ಮೀಪುರ (6.20 ಕಿ.ಮೀ), ವನಮಾಚನಹಳ್ಳಿ (9.20 ಕಿ.ಮೀ),, ಕೊರಟಿ (11.10 ಕಿ.ಮೀ), ಗಾಜ್ಜನಪಾಳ್ಯ (11.80 ಕಿ.ಮೀ), ಪುಟ್ಟನಪಾಳ್ಯ (13.70 ಕಿ.ಮೀ), ಹೊಸಪಾಳ್ಯ (14.50 ಕಿ.ಮೀ).
6	ರಾಹೆ 48 ರಿಂದ ದುದ್ದ ಸಂಪರ್ಕಿಸುವ ರಸ್ತೆ. (ಕಿ.ಮೀ 0.00 ರಿಂದ 12.80ಕಿ.ಮೀ)	12.80	ಹಾಲಪ್ಪನಗುಡ್ಡೆ (0.00 ಕಿ.ಮೀ), ಕಗ್ಗೆರೆ (2.50 ಕಿ.ಮೀ), ತಿಮ್ಮೇಗೌಡನಪಾಳ್ಯ (6.20 ಕಿ.ಮೀ), ಹೊಸಹಳ್ಳಿ (8.90 ಕಿ.ಮೀ), ಕೊಡಗೀಹಳ್ಳಿ (10.20 ಕಿ.ಮೀ), ಇಂದಿರಾನಗರ (11.15 ಕಿ.ಮೀ), ಅಮೃತೂರು (12.80 ಕಿ.ಮೀ),
7	ಸಂತೇಮಾವತ್ತೂರು-ರಾಘವನಹೊಸೂರು ರಸ್ತೆ. (ಕಿ.ಮೀ 0.00 ರಿಂದ 8.50 ಕಿ.ಮೀ)	8.50	ಸಂತೇಮಾವತ್ತೂರು (0.00 ಕಿ.ಮೀ), ಮೋದೂರುಗೇಟ್ (3.50 ಕಿ.ಮೀ), ಯಗ್ಗಡತಿಹಳ್ಳಿ (5.50 ಕಿ.ಮೀ), ರಾಘವನಹೊಸೂರು (8.00 ಕಿ.ಮೀ);
8	ಯಡಿಯೂರು-ಮಾರ್ಕೋನಹಳ್ಳಿ ರಸ್ತೆ (ಕಿ.ಮೀ 5.20 ರಿಂದ 7.20ಕಿ.ಮೀ)	2.00	ಮಾರ್ಕೋನಹಳ್ಳಿ (0.00 ಕಿ.ಮೀ), ನಾಗಮಂಗಲ-ತಾ:ಗಡಿ (2.00 ಕಿ.ಮೀ),

9	ನಿಡ-ಸಾಲೆ ಚನ್ನಪಟ್ಟಣ ರಸ್ತೆ (ಕಿ.ಮೀ 0.00 ರಿಂದ 12.20ಕಿ.ಮೀ)	12.70	ಬೀಸೇಗೌಡನದೊಡ್ಡಿ (0.00 ಕಿ.ಮೀ), ಉಜ್ಜನಿ (5.50 ಕಿ.ಮೀ), ದೇವಸಂದ್ರ (6.50 ಕಿ.ಮೀ), ಯಲೆಕಡಕಲು (7.00 ಕಿ.ಮೀ), ಕೆ.ಬ್ಯಾಡರಹಳ್ಳಿ (12.0 ಕಿ.ಮೀ),
10	ಕೊತ್ತಿಪುರ-ಹೆರೂರು-ಗೌಡಗೆರೆ ರಸ್ತೆ (ಕಿ.ಮೀ 0.00 ರಿಂದ 11.40ಕಿ.ಮೀ)	11.60	ಕೊತ್ತಿಪುರ, ಹೇರೂರು, ಗೌಡಗೆರೆ
11	ರಾಹೆ 48 ರಿಂದ ಅಮೃತ್ತೂರು, ಇಂದಿರಾನಗರ ವೃತ್ತ, ಚಿನ್ನಹಳ್ಳಿ, ಪಡ್ಬೆರೆ ಮೂಲಕ ಕೆ.ಹೊನಮಾಚನಹಳ್ಳಿ ಸಂಪರ್ಕಿಸುವ ರಸ್ತೆ (ಕಿಮೀ 0.00 ರಿಂದ 35.00ಕಿ.ಮೀ)	35.40	ಬ್ಯಾಲದಕೆರೆಗೇಟ್ (0.00 ಕಿ.ಮೀ), ಅಗ್ರಹಾರ (0.80 ಕಿ.ಮೀ),, ಸಿಂಗೋನಹಳ್ಳಿ (1.80 ಕಿ.ಮೀ), ಮಂಟ್ಯ (3.50 ಕಿ.ಮೀ), ಇಂದಿರಾನಗರ (7.70 ಕಿ.ಮೀ), ಚಿನ್ನಹಳ್ಳಿ (8.80 ಕಿ.ಮೀ), ಯಾಚನಹಳ್ಳಿ (10.10 ಕಿ.ಮೀ), ಶಾನುಬೋನಹಳ್ಳಿ (11.50 ಕಿ.ಮೀ), ತೋರೆಹಳ್ಳಿ (12.20 ಕಿ.ಮೀ), ಕಿರಂಗೂರು (13.30 ಕಿ.ಮೀ), ಕೆ.ಟಿ.ಪಾಳ್ಯ (14.00 ಕಿ.ಮೀ), ಬೆಟ್ಟಹಳ್ಳಿ (15.15 ಕಿ.ಮೀ), ಪಡುವಗೆರೆ (17.30 ಕಿ.ಮೀ), ಚಿಕ್ಕರ್ಜುನಹಳ್ಳಿ (18.20 ಕಿ.ಮೀ), 14ನೇ ಮೈಲಿ ಬಂಗಲೆ (19.98 ಕಿ.ಮೀ),, ದೂಡ್ಡಕಲ್ಲಹಳ್ಳಿ (21.20 ಕಿ.ಮೀ),, ವಳಗೆರೆಪುರಕಾಲೋನಿ (22.10 ಕಿ.ಮೀ), ಚಂದನಹಳ್ಳಿ (24.30 ಕಿ.ಮೀ), ಎಂ.ಎ.ಕಾಲೋನಿ (25.90 ಕಿ.ಮೀ), ಅಂಚೀಪುರ ಗೇಟ್ (27.20 ಕಿ.ಮೀ), ಕಿಲಾರ (30.00 ಕಿ.ಮೀ), ಕಿಲಾರಕೊಪ್ಪಲು (31.62 ಕಿ.ಮೀ), ಸಣಬಾಗಟ್ಟ (33.40 ಕಿ.ಮೀ), ರಾಮೇದೇವರ ಪಾಳ್ಯ (34.60 ಕಿ.ಮೀ), ಕುಂಬಾರಪಾಳ್ಯ (35.25 ಕಿ.ಮೀ), ಕೆ.ಹೊನಮಾಚನಹಳ್ಳಿ (35.40 ಕಿ.ಮೀ).

12	ರಾಹೆ 48 ರಿಂದ ದಾಸನಪುರ, ಬಸವಮತ್ತಿಕೆರೆ ಮೂಲಕ ಕೊತ್ತಿಪುರ, ಹೇರೂರು, ಗೌಡಗೆರೆ ರಸ್ತೆ ಸಂಪರ್ಕಿಸುವ ರಸ್ತೆ, (ಕಿಮೀ 0.00 ರಿಂದ 4.00ಕಿ ಮೀ)	4.60	ರಾಗೀಹಳ್ಳಿಪಾಳ್ಯ, ಬಸವಮತ್ತಿಕೆರೆ
13	ಕೊತ್ತಗೆರೆ ರಸ್ತೆ 14ನೇ ಕಿಮೀ ಹುರುಳಗೆರೆ ಮೂಲಕ ಕೊತ್ತಿಪುರ, ಹೇರೂರು, ಗೌಡಗೆರೆ ರಸ್ತೆ ಸಂಪರ್ಕಿಸುವ ರಸ್ತೆ, (ಕಿಮೀ 0.00 ರಿಂದ 4.00ಕಿಮೀ)	13.50	ಹುರಳೀಗೆರೆ (0.55 ಕಿ.ಮೀ), ದೇವರಕನ್ನಸಂದ್ರ (1.40 ಕಿ.ಮೀ), ಯಲ್ಲಾರ (3.40 ಕಿ.ಮೀ), ಚನ್ನತಿಮ್ಮನಪಾಳ್ಯ (4.20 ಕಿ.ಮೀ), ಶೆಟ್ಟಿಹಳ್ಳಿ (7.00 ಕಿ.ಮೀ), ಕೋಡಿಪಾಳ್ಯ (12.10 ಕಿ.ಮೀ), ಸಿಂಗಟಿಹಳ್ಳಿ (13.00 ಕಿ.ಮೀ),
14	ಸಿ.ಎಸ್.ಪುರ–ಕೊಪ್ಪ ರಸ್ತೆ (ಕಿ.ಮೀ 8.00 ರಿಂದ 19.30ಕಿಮೀ)	11.30	ವಗರಗೆರೆ, ಚೊಟ್ಟನಹಳ್ಳಗೇಟ್, ನಾಗಸಂದ್ರ, ಹುಲಿವಾನ, ಮನವಳ್ಳಿ, ಕೊಪ್ಪ
15	ಕೊರಟಗೆರೆ–ಬಾವಲಿ ರಸ್ತೆಯಿಂದ ಬೀಚನಹಳ್ಳಿ, ಹಳೇಊರು ಮೂಲಕ ಹುಲಿಯೂರು ದುರ್ಗ ಅಮೃತ್ತೂರು ರಸ್ತೆಗೆ ಸಂಪರ್ಕಿಸುವ ರಸ್ತೆ (ಕಿಮೀ 0.00 ರಿಂದ 3.00 ಕಿಮೀ)	2.60	ಬೀಚನಹಳ್ಳಿ (1.00 ಕಿ.ಮೀ), ಹಳೇಊರು (2.60 ಕಿ.ಮೀ).
16	ರಾಹೆ 33 ರಿಂದ ಮಾದಪ್ಪನಹಳ್ಳಿ, ಚೌಡನಕುಪ್ಪೆ ತಾವರೆಕೆರೆ ಮೂಲಕ ಚನ್ನಪಟ್ಟಣ ಗಡಿಸೇರುವ ರಸ್ತೆ (ಕಿಮೀ 0.00 ರಿಂದ 7.12ಕಿಮೀ)	7.12	ಮಾದಪ್ಪನಹಳ್ಳಿ (060 ಕಿ.ಮೀ), ನಾಗತೀಹಳ್ಳಿ (1.50 ಕಿ.ಮೀ), ಗುಡ್ಡೆತಿಪ್ಪಸಂದ್ರ(4.00 ಕಿ.ಮೀ), ಈಡಿಗರ ಕಾಲೋನಿ ಕಿ.ಮೀ), ಚೌಡನಕುಪ್ಪೆ (7.10 ಕಿ.ಮೀ).
17	ರಾಹೆ 48 ರಿಂದ ಹಾಲಪ್ಪಗುಡ್ಡೆ, ಎಡ್ಡಿಗೆರೆ, ಕನ್ನಗುಣಿ, ಅಡವನಹಳ್ಳಿ, ಮೂಲಕ ಮಡಿಕೆಕನ್ನಸಂದ್ರ ಸೇರುವ ರಸ್ತೆ (ಕಿಮೀ 0.00	9.00	ಕನ್ನಗುಣಿ, ಗೊಲ್ಲರಹಟ್ಟಿ, ಕನ್ನಗುಣಿ, ಅಡವನಹಳ್ಳಿ ಕ್ರಾಸ್, ಮಡಿಕೆಕನ್ನಸಂದ್ರ, ಕೋಟೀಕೆರೆ.

	ರಿಂದ 9.00ಕಿಮೀ)		
18	ಅಂಚಿಪಾಳ್ಯ-ಯಲಗಲವಾಡಿ ರಸ್ತೆಯಿಂದ ಮಾಗಡಿ-ತಾ: ಗಡಿಗೆ ಮಾರ್ಗ ಜೋಡಿಹೊಸಹಳ್ಳಿ ಮೂಗನಪುರ ಸಂತೇಪೇಟೆ, ಹಾಲುವಾಗಿಲು ಮೂಲಕ ಸಂಪರ್ಕಿಸುವ ರಸ್ತೆ (ಕಿಮೀ 0.00 ರಿಂದ 13.00ಕಿಮೀ)	13.00	ಜೋಡಿಹೊಸಹಳ್ಳಿ (0.00 ಕಿ.ಮೀ), ಗಿಡದಾಸನಪುರ (1.30 ಕಿ.ಮೀ), ನಾಗನಹಳ್ಳಿ (2.40 ಕಿ.ಮೀ), ಯಡೇಹಳ್ಳಿ (4.00 ಕಿ.ಮೀ), ಅಂದಾನಿಗೌಡನಪಾಳ್ಯ (4.80 ಕಿ.ಮೀ), ಮೂಗನಪುರ (6.10 ಕಿ.ಮೀ), ಬೆಟ್ಟಹಳ್ಳಿ (7.10 ಕಿ.ಮೀ), ಸಂತೇಪೇಟೆ (7.70 ಕಿ.ಮೀ), ಹೊಸಪಾಳ್ಯ (10.10 ಕಿ.ಮೀ), ಹಾಲುವಾಗಿಲು (10.50 ಕಿ.ಮೀ), ವೆಂಕಟರಮಣನಪಾಳ್ಯ (11.40 ಕಿ.ಮೀ), ಹೊಸೂರು (11.70 ಕಿ.ಮೀ), ಕತ್ತರೀಘಟ್ಟ(13.00 ಕಿ.ಮೀ).
19	ಅಂಚೆಪಾಳ್ಯ-ಯಲಗವಾಡಿ ರಸ್ತೆಯಿಂದ ವಡಾಘಟ್ಟಗೆ ಬುಕ್ಕಸಾಗರ, ಹಾಲುವಾಗಿಲು ಮೂಲಕ ಸಂಪರ್ಕಿಸುವ ರಸ್ತೆ (ಕಿಮೀ 0.00 ರಿಂದ 13.00ಕಿಮೀ)	13.00	ಬುಕ್ಕಸಾಗರ (0.00 ಕಿ.ಮೀ), ಉತ್ತರೀಕೊಪ್ಪಲು (2.60 ಕಿ.ಮೀ), ಉತ್ತರಿ (3.00 ಕಿ.ಮೀ), ಚೌಡನಾಯಕನಪಾಳ್ಯ (3.80 ಕಿ.ಮೀ), ಹಾಲುವಾಗಿಲು (4.80 ಕಿ.ಮೀ), ತೋರೆಮರದಪಾಳ್ಯ (5.90 ಕಿ.ಮೀ), ವಡಾಘಟ್ಟ (8.60 ಕಿ.ಮೀ), ಯಲಗಲವಾಡಿ (13.00 ಕಿ.ಮೀ).
20	ಕೊತ್ತಗೆರೆ-ಸಿ.ಎಸ್ಪುರ ರಸ್ತೆಯಿಂದ ರಾಹೆ-48ಕ್ಕೆ ಬೆಟ್ಟದ ರಂಗನಾಥಸ್ವಾಮಿ ದೇವಸ್ಥಾನದ ಮೂಲಕ ಸಂಪರ್ಕಿಸುವ ರಸ್ತೆ.	4.50	ಬೆಟ್ಟದ ರಂಗನಾಥಸ್ವಾಮಿ ದೇವಸ್ಥಾನ, ಬಿಳಿದೇವಾಲಯ
21	ಬಿ.ಟಿ.ಪಾಳ್ಯ ದಿಂದಶೆಟ್ಟಿಹಳ್ಳೀ, ಹೆಳವರಹಟ್ಟಿ, ಶಿಡ್ಲನಹಟ್ಟಿ ಮೂಲಕ ಅರಳೀಮರದ ಗೇಟ್ ಸೇರುವ ರಸ್ತೆ (ಕಿಮೀ 0.00 ರಿಂದ 7.00ಕಿಮೀ)	7.00	ಶೆಟ್ಟಿಬೀಡು (0.30 ಕಿ.ಮೀ), ಯಳವರಹಟ್ಟಿ (0.55 ಕಿ.ಮೀ), ಶಿಡ್ಲನಹಟ್ಟಿ (5.50 ಕಿ.ಮೀ), ಹರಳೀಮರದಗೇಟ್ (7.00 ಕಿ.ಮೀ),

22	ಹುಲಿಯೂರುದುರ್ಗ–ಅಮೃತೂರು ರಸ್ತೆಯ 15ನೇ ಕಿಮೀ ನಿಂದ ಹೊಸಪಾಳ್ಯ ಕುಪ್ಪೆ ಮೂಲಕ ರಾಹೆ–85ಕ್ಕೆ ಸಂಪರ್ಕಿಸುವ ರಸ್ತೆ	14.00	ಹೊಸಪಾಳ್ಯ (0.00 ಕಿ.ಮೀ), ಹಂದಲಗೆರೆ (2.00 ಕಿ.ಮೀ), ಶೆಟ್ಟಿಪುರ (3.20 ಕಿ.ಮೀ), ಹಾಲಗೆರೆ (4.00 ಕಿ.ಮೀ), ಕುಪ್ಪೆ (5.50 ಕಿ.ಮೀ), ಬ್ಯಾಡಗೆರೆ (10.00 ಕಿ.ಮೀ), ಕಗ್ಗನಹಳ್ಳಿ (12.00 ಕಿ.ಮೀ), ಪಲ್ಲೇರಾಯನಹಳ್ಳಿ (13.50 ಕಿ.ಮೀ).
23	ರಾಹೆ 33ರಿಂದ ಬಂಡಿಹಳ್ಳಿ, ನಿಡಸಾಲೆ, ಚಲಮಸಂದ್ರ ಮೂಲಕ ನಿಡಸಾಲೆ–ಚನ್ನಪಟ್ಟಣ ರಸ್ತೆ	15.00	ಕೃಷ್ಣಪ್ಪನಕೊಪ್ಪಲು (0.30 ಕಿ.ಮೀ), ದೊಡ್ಡಕೊಪ್ಪಲು (1.90 ಕಿ.ಮೀ), ಬಂಡೀಹಳ್ಳಿ (4.90 ಕಿ.ಮೀ), ಕುರುಬರದೊಡ್ಡಿ (5.50 ಕಿ.ಮೀ), ನಿಡಸಾಲೆ (9.30 ಕಿ.ಮೀ), ಕೆಬ್ಬಹಳ್ಳಿ (10.30 ಕಿ.ಮೀ), ಚಲಮಸಂದ್ರ (11.30 ಕಿ.ಮೀ), ಶಿವನಹಳ್ಳಿ (12.50 ಕಿ.ಮೀ), ದೇವಸಂದ್ರ (15.00 ಕಿ.ಮೀ).
24	ರಾಹೆ 85 ರಿಂದ ಅಂಗರಹಳ್ಳಿ, ಉಜ್ಜನಿ ಮೂಲಕ ಹುಲಿಯೂರುದುರ್ಗ ರಸ್ತೆ	15.00	ಹಣಗರಹಳ್ಳಿ (0.00 ಕಿ.ಮೀ), ಬೆಂಚಕಲ್ಲು (2.00 ಕಿ.ಮೀ), ಬೋರೇಗೌಡನಕೊಪ್ಪಲು (7.00 ಕಿ.ಮೀ), ವುತ್ತಲಪುರ (8.00 ಕಿ.ಮೀ), ಹುಲಿಯೂರುದುರ್ಗ (15.00 ಕಿ.ಮೀ).
25	ರಾಹೆ 33 ರಿಂದ ಲಕ್ಷ್ಮೀಪುರ, ಗೊಲ್ಲರಹಟ್ಟಿ ಕಿಚವಾರಿ ಮೂಲಕ ಹುಲಿಯೂರುದುರ್ಗ–ಅಮೃತೂರು ರಸ್ತೆಗೆ ಸೇರುವ ರಸ್ತೆ.	6.00	ಗೊಲ್ಲರಹಟ್ಟಿ (0.00 ಕಿ.ಮೀ), ಸೀಗೇಪಾಳ್ಯ (1.00 ಕಿ.ಮೀ), ಕಿಚವಾಡಿ (3.00 ಕಿ.ಮೀ), ಲಕ್ಷ್ಮೀಪುರ (6.00 ಕಿ.ಮೀ),
26	ರಾಹೆ–48 ರಿಂದ ಸಣಬಗಟ್ಟಿ ಗೇಟ್, ಕುಪ್ಪೆ ಸಣಬ ಒಳಗೆರೆಪುರ ಮೂಲಕ ಕಿಲಾರ–ಕೆ.ಹೊನಮಾಚನಹಳ್ಳಿ ರಸ್ತೆಗೆ ಸೇರುವ ರಸ್ತೆ.	7.40	ಸಣಬಘಟ್ಟ (0.00 ಕಿ.ಮೀ), ವಡೇರಹಳ್ಳಿ (1.30 ಕಿ.ಮೀ), ಕುಪ್ಪೆ (2.40 ಕಿ.ಮೀ), ಸಣಬ (4.00 ಕಿ.ಮೀ), ಸಣಬ ಕೊಪ್ಪಲು (4.50 ಕಿ.ಮೀ), ವಳಗೆರೆಪೂರ (6.30 ಕಿ.ಮೀ), ವಸಗೆರೆಪುರ ಕಾಲೋನಿ (7.40 ಕಿ.ಮೀ).
27	ರಾಹೆ 48 ನಾಗೇಗೌಡನಪಾಳ್ಯ, ತುವ್ವೆಕೆರೆ ಮೂಲಕ	8.70	ನಾಗೇಗೌಡನಪಾಳ್ಯ, ತುವ್ವೇಕೆರೆ, ಜಿಡ್ಡಿಗೆರೆ

	ಜಿಡ್ಡಿಗೆರೆ ಕ್ರಾಸ್ ಸೇರುವ ರಸ್ತೆ		
28	ಸಿ.ಎಸ್.ಪುರ ಕೊಪ್ಪ ರಸ್ತೆಯಿಂದ ನಾಗಸಂದ್ರ, ಕೋಟೆಗೆರೆ ಮೂಲಕ ತೆಂಗಿನಮರದ ಪಾಳ್ಯ ಸೇರುವ ರಸ್ತೆ (ಕಿಮೀ 0.00 ರಿಂದ 8.50ಕಿಮೀ)	8.50	ನಾಗಸಂದ್ರ, ತುರುಗನೂರು, ಕೋಟೇಕೆರೆ, ಯಡ್ಡಿಗೆರೆ, ತೆಂಗಿನಮರದಪಾಳ್ಯ
29	ರಾಹೆ 33 ರಿಂದ ಶೆಟ್ಟಿಗೇಹಳ್ಳಿ, ಕುರುಪಾಳ್ಯ ಮೂಲಕ ಎಲಿಯೂರು ಸೇರುವ ರಸ್ತೆ (ಕಿಮೀ 0.00 ರಿಂದ 9.00ಕಿಮೀ)	9.00	ಶೆಟ್ಟಿಗೆಹಳ್ಳಿ, ಕುರುಪಾಳ್ಯ, ಯಲಿಯೂರು
30	ರಾಹೆ 33 ರಿಂದ ಸಂತೇಮಾವತ್ತೂರು, ಅರೇಪಾಳ್ಯ ಚೌಡಮ್ಮನಗುಡಿ, ನಿಟ್ಟೂರು ಕೆಂಪನಹಳ್ಳಿ ಮೂಲಕ ಅಂಚಿಪಾಳ್ಯ-ಯಲಗಲವಾಡಿ ರಸ್ತೆಗೆ ಸೇರುವ ರಸ್ತೆ, (ಕಿಮೀ 0.00 ರಿಂದ 9.00 ಕಿಮೀ)	9.00	ಸಂತೇಮಾವತ್ತೂರು (0.00 ಕಿ.ಮೀ), ಅರೇಪಾಳ್ಯ (1.10 ಕಿ.ಮೀ), ಸಾಲುಪಾಳ್ಯ (4.00 ಕಿ.ಮೀ), ಹೊಸಕೆರೆ (5.00 ಕಿ.ಮೀ), ಚೌಡಮ್ಮನಗುಡಿ (6.00 ಕಿ.ಮೀ), ನಿಟ್ಟೂರು (10.00 ಕಿ.ಮೀ), ಕೆಂಪನಹಳ್ಳಿ (11.00 ಕಿ.ಮೀ).
31	ರಾಹೆ 48 ನಾಗಮಂಗಲದ ರಸ್ತೆಯಿಂದ ಹಂಪಾಪುರ, ರಾಗಿಹಳ್ಳಿ ಮೂಲಕ ಕುರುಬರ ಶೆಟ್ಟಿಹಳ್ಳಿಗೆ ಸೇರುವ ರಸ್ತೆ (ಕಿಮೀ 0.00 ರಿಂದ 6.00 ಕಿಮೀ)	6.00	ಹಂಪಾಪುರ (1.00 ಕಿ.ಮೀ), ರಾಗೀಹಳ್ಳಿ (1.50 ಕಿ.ಮೀ), ಕಿತ್ತಾಘಟ್ಟ (3.00 ಕಿ.ಮೀ), ಕುರುಬರಶೆಟ್ಟಿಹಳ್ಳಿ (6.00 ಕಿ.ಮೀ).
(4) All payments made under sub-section (1) shall be credited to a separate fund kept in the concerned local/planning authority called the urban areas infrastructure development fund which shall be utilized in such manner; for the development of infrastructure, civic amenities, lighting, parks, drinking water, drainage system and for any other infrastructure, as may be prescribed.

187-B. Penalty against jurisdictional officer failing to prevent unauthorized deviations or constructions.- The jurisdicational officer who is proved to have failed to prevent unauthorized deviation or construction that habe taken place in his jurisdiction shall be liable for such punishment as may be prescribed".

THE KARNATAK MUNICIPAL CORPORATIONS (AMENDMENT) RULES, 2006

NORIFICATION

No. UDD 270 MNU 2005, Bangalore, dated 24th May, 2006

Karnataka Gazette, Extraordinary No.560, dated 24-5-2006

Whereas, the draft of the following rules further ro amend tha Karnataka Municipal Corporations Rules, 1977, which the Government of Karnataka proposes to make in exercise of the power conferred by Section 421 read with Section 91 of the Karnataka Municipal Corporations Act, 1976 (Karnataka Act 14 of 1977), was published in Notification No. IDD 270 MNU 05, dated 23-2-2006, in Part IV-A of the Karnataka Gazette, dated 23-2-2006, inviting objections and suggestions from all persons likely to be affected

thereby within 30 days from the date of publication of the said notification in the Official Gazette.

Whereas, the Gazette was made available on 23-2-2006.

And whereas, no objections and suggestions have been received by the State Government.

Now, therefore in exercise of powers conferred by Section 421 of the Karnataka Municipal Corporations Act, 1976 (Karnataka Act 14 of 1977), the Government of Karnataka hereby makes the following rules, namely.-

1. Title and commencement.-(1) These rules may be called the **Karnataka Municipal Corporations (Amendment) Rules, 2006.**

(2) They shall come into force from the date of their publication in the Official Gazette.

2. Amendment of Rule 26.- In Rule 26 of the Karnataka Municipal Corporations Rules, 1977, in the table, under the heading "Bangalore City Corporation" under the sub-heading (A) Administration, after Sl. No. 8-B, the following shall be *substituted*, namely.-

"8-C	Additional Council Secretary	By promotion from the cadre of Junior Law Officer/Assistant Revenue Officer on the basis of combined seniority provided that Junior Law Officer/Assistant Revenue Officer shall exercise an irrevocable option at the

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (452) 272
2. ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
3. ಉತ್ತರಿಸುವ ಸಚಿವರು : ಶ್ರೀ ಬಿ.ಎಸ್.ಯಡಿಯೂರಪ್ಪ (ಸನ್ಮಾನ್ಯ ಮುಖ್ಯಮಂತ್ರಿಗಳು)

ಅ) ಉಡುಪಿ ಸಮಾವೇಶದಲ್ಲಿ ನಿರ್ಧಡಿಸಿದಂತೆ ವಿಶ್ವ ಕನ್ನಡ ಸಮ್ಮೇಳನವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸಲಾಗುವುದೇ;

ವಿಶ್ವಕನ್ನಡ ಸಮ್ಮೇಳನವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.

ಆ) ವಿಶ್ವ ಕನ್ನಡ ಸಮ್ಮೇಳನವನ್ನು ಜಿಲ್ಲೆಯಲ್ಲಿ ಯಾವ ತಿಂಗಳಿನಲ್ಲಿ ನಡೆಸುವ ಉದ್ದೇಶವಿದೆ.

ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ ಬಾರಿ ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ-2008-09ರ ಬಜೆಟ್ ಮಂಡನೆಯಲ್ಲಿ ರೂ.25.00 ಕೋಟಿ ಅನುದಾನ ನೀಡುವುದಾಗಿ ಘೋಷಿಸಿರುತ್ತಾರೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (453)273
2. ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
3. ಉತ್ತರಿಸುವವರು : (ಶ್ರೀ.ಎಸ್.ಸುರೇಶ್‌ಕುಮಾರ್)
: ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

1 ಚಳ್ಳಕೆರೆ ನಗರದಲ್ಲಿ ಕೊಳವೆ ಬಾವಿಗಳಲ್ಲಿನ ನೀರಿನ ಪ್ರಮಾಣ ಕುಸಿದಿದ್ದು, ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಚಳ್ಳಕೆರೆ ನಗರದ ಕೊಳವೆ ಬಾವಿಗಳ ಅಂತರ್ಜಲದ ಪ್ರಮಾಣ ಕುಸಿದಿರುವುದು ಗಮನಿಸಿ 2004-05ನೇ ಸಾಲಿನಲ್ಲಿ ರೂ.1.00 ಲಕ್ಷಗಳ ಅಂದಾಜಿನ ಮೊತ್ತದಲ್ಲಿ, ಅಜ್ಜಯ್ಯನಕೆರೆ ಅಂಗಳದಲ್ಲಿರುವ 4 ಸಂಖ್ಯೆ ಕೊಳವೆಬಾವಿಗೆ ಇಂಗಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಸದರಿ ಕೊಳವೆ ಬಾವಿಗಳ ಅಂತರ್ಜಲದ ಪ್ರಮಾಣವು ಶೇ.25 ರಷ್ಟು ಮಳೆಗಾಲದಲ್ಲಿ ಮಾತ್ರ ಹೆಚ್ಚಾಗುತ್ತದೆ.

2 ಚಳ್ಳಕೆರೆ ಪಟ್ಟಣಕ್ಕೆ ಬೇರೆ ಮೂಲಗಳಿಂದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇಲ್ಲ

3 ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (454) 274
ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ
ಉತ್ತರಿಸುವವರು : (ಶ್ರೀ ಕೆ.ಜನಾರ್ಧನ ರೆಡ್ಡಿ)
ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ವೈಮಾನಿಕ ದಳಕ್ಕೆ ಬೇಕಾಗಿರುವ ಭೂಮಿ ಎಷ್ಟು;

ಮುಂದಿನ ಪೀಳಿಗೆಯ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಹಾಗೂ ಪರೀಕ್ಷಿಸಲು ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಅಧೀನ ರಕ್ಷಣಾ ಸಂಶೋಧನಾ (DRDO) ಸಂಸ್ಥೆಗೆ ಸುಮಾರು 4000 ಎಕರೆ ಭೂಪ್ರದೇಶದ ಅಗತ್ಯವಿದೆ.

ಆ) ವೈಮಾನಿಕ ದಳದ ತರಬೇತಿಯು ಇದೇ ಸ್ಥಳದಲ್ಲಿ ಸ್ಥಾಪಿಸುವ ಉದ್ದೇಶವೇನು;

ವಿಸ್ತೃತವಾದ ವೈಮಾನಿಕ ಹಾಗೂ ಭೂಸಮೀಕ್ಷೆಯನ್ನು ನಡೆಸಿದ ನಂತರ DRDO ಸಂಸ್ಥೆ ಚಿತ್ರದುರ್ಗ ಜಿಲ್ಲೆಯ ವರವು ಹಾಗೂ ಕುದಾಪುರ ಕಾವಲ್‌ನಲ್ಲಿ 2 ಸ್ಥಳಗಳನ್ನು ಹಾಲಿ ಕೋಲಾರದಲ್ಲಿನ VOD.179 ಸ್ಥಳಾಂತರಕ್ಕೆ ರಕ್ಷಣಾ ಮಂತ್ರಾಲಯ DRDO ಹಾಗೂ ನಾಗರೀಕ ವಿಮಾನಯಾನ ಮಂತ್ರಾಲಯ, ಭಾರತ ಸರ್ಕಾರವು ಗುರುತಿಸಿದೆ.

ಇ) ರೈತರ ಭೂಮಿಯನ್ನು ವಶಪಡಿಸಿಕೊಂಡ ವೈಮಾನಿಕ ದಳದ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವುದರಿಂದ ರೈತರಿಗಾಗುವ ಅನುಕೂಲತೆಗಳೇನು?

ಉದ್ದೇಶಿತ ಭೂಸ್ವಾಧೀನವು ಕೇವಲ ಸರ್ಕಾರದ ಜಮೀನನ್ನು ಒಳಗೊಂಡಿದೆ. ಆದುದರಿಂದ ರೈತರಿಗೆ ಯಾವುದೇ ನೇರವಾದ ಅನುಕೂಲ ಆಗುವುದಿಲ್ಲ, ಆದಾಗ್ಯೂ ಸ್ಥಳೀಯರಿಗೆ ಸ್ವಲ್ಪ ಮಟ್ಟಿಗೆ ಉದ್ಯೋಗವಕಾಶ ದೊರೆಯುವ ಸಾಧ್ಯತೆ ಇದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (455)275
ಮಾನ್ಯ ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ
ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)
: ಪ್ರವಾಸೋದ್ಯಮ ಮತ್ತು ಮೂಲಭೂತ

ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಚಿತ್ರದುರ್ಗದ ಐತಿಹಾಸಿಕ ಕೋಟೆಯಲ್ಲಿ ವಿದ್ಯುತ್ ಜೋಡಣೆ ಮತ್ತು ಪ್ರವಾಸಿಗರನ್ನು ರಂಜಿಸಲು ಸಪ್ತಸ್ವರದ ಧ್ವನಿವರ್ಧಕ ರೂಪಿಸುವಲ್ಲಿ ಸರ್ಕಾರದ ಕ್ರಮವೇನು;

ಚಿತ್ರದುರ್ಗದ ಕೋಟೆಗೆ ಹೊನಲು ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಕೋಟೆಯಲ್ಲಿ ಧ್ವನಿ ಮತ್ತು ಬೆಳಕಿನ ಯೋಜನೆಯನ್ನು ಅಳವಡಿಸುವ ಪ್ರಸ್ತಾವನೆ ಇಲಾಖೆಯ ಮುಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಸಪ್ತಸ್ವರದ ಧ್ವನಿವರ್ಧಕ ರೂಪಿಸುವ ಕಾರ್ಯಕ್ರಮ ಇಲಾಖೆಯ ಮುಂದಿರುವುದಿಲ್ಲ. ಚಿತ್ರದುರ್ಗದ ಕೋಟೆಯೊಳಗಿನ ಐತಿಹಾಸಿಕ ಸ್ಮಾರಕಗಳು ಹಾಗೂ ದೇವಾಲಯಗಳನ್ನು ಸಂರಕ್ಷಿಸಲು ಮತ್ತು ಪುನರುತ್ಥಾನಗೊಳಿಸಲು ರೂ.93.00ಲಕ್ಷಗಳನ್ನು ಮಹಾ ನಿರ್ದೇಶಕರು, ಕೇಂದ್ರ ಪುರಾತತ್ವ ಇಲಾಖೆ, ನವದೆಹಲಿರವರಿಗೆ ಬಿಡುಗಡೆ ಮಾಡಲಾಗಿದೆ.

ಆ) ಕೋಟೆಯಲ್ಲಿ ಪ್ರವಾಸಿಗರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಕೋಟೆಯ ಒಳಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ. ಎ.ಎಸ್.ಐ ವ್ಯಾಪ್ತಿಗೆ ಬರುತ್ತದೆ. ಆದರೆ ಚಿತ್ರದುರ್ಗದ ಕೋಟೆ ಪ್ರದೇಶದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕೋಟೆಯಲ್ಲಿ ಪ್ರವಾಸಿಗರಿಗೆ ನೆರಳಿನ ವ್ಯವಸ್ಥೆಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಈ ಯೋಜನೆ ಇಲಾಕಾ ವ್ಯಾಪ್ತಿಗೆ ಬರುವುದಿಲ್ಲ.

ಈ) ಕೋಟೆಯ ಒಳಗೆ ಮತ್ತು ಸುತ್ತಲೂ ಸಾರ್ವಜನಿಕರು ನಿವೇಶನಗಳನ್ನು ನಿರ್ಮಿಸಿಕೊಂಡಿದ್ದು, ಅವರುಗಳಿಗೆ ಬೇರೆ ಕಡೆ ನಿವೇಶನಗಳನ್ನು ನೀಡಿ ತೆರವುಗೊಳಿಸುವ ಬಗ್ಗೆ ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ?

ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: (188)276
2. ಸದಸ್ಯರ ಹೆಸರು	: ಶ್ರೀ ವಿಶ್ವನಾಥ್ ಎಸ್.ಆರ್ (ಯಲಹಂಕ)
3. ಉತ್ತರಿಸುವ ಸಚಿವರು	: (ಡಾ|| ವಿ.ಎಸ್.ಆಚಾರ್ಯ)
	: ಮಾನ್ಯ ಗೃಹ ಸಚಿವರು

ಅ. ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ನೆಲಮಂಗಲ ಪೊಲೀಸ್ ಠಾಣಾ ಸರಹದ್ದು ಮಾದನಾಯ್ಕನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಇದೆ

ಆ. ಹಾಗಿದ್ದಲ್ಲಿ, ಎಂದಿನಿಂದ ಈ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲಾಗುವುದು?

ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ – 3

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (426)302
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)
: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತ ಸೈಕಲ್ ವಿತರಣೆಗೆ ಸಂಬಂಧಿಸಿದಂತೆ ಇದುವರೆಗೂ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ; ಈ ಬಗ್ಗೆ ಯಾವ ಯಾವ ಕಂಪನಿ/ಏಜೆನ್ಸಿಗಳಿಗೆ ಇದುವರೆಗೂ ನೀಡಿದ ಹಣವೆಷ್ಟು; ಯಾವ ಮಾನದಂಡದ ಮೇಲೆ ಈ ಸೈಕಲ್‌ಗಳನ್ನು ಖರೀದಿಸಲಾಗಿದೆ; (ವರ್ಷವಾರು ವಿವರ ನೀಡುವುದು);

2006-07ನೇ ಸಾಲಿನಲ್ಲಿ 1,75,023 ಹೆಣ್ಣು ಮಕ್ಕಳ ಮತ್ತು 2,45,300 ಗಂಡು ಮಕ್ಕಳ ಒಟ್ಟು 4,20,323 ಬೈಸಿಕಲ್‌ಗಳನ್ನು ಖರೀದಿಸಲು ರೂ.85.33 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸಂಸ್ಥೆ ಹೆಸರು	ವಿಭಾಗ	ಪಾವತಿಸಿರುವ ಮೊತ್ತ (ಕೋಟಿಗಳಲ್ಲಿ)
ಮೆ॥ ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ	ಬೆಂಗಳೂರು	22.72
ಮೆ॥ ಅಟ್ಲಾಸ್ ಸೈಕಲ್ಸ್ (ಹ) ಲಿ., ಮಧ್ಯಪ್ರದೇಶ	ಮೈಸೂರು	20.63
ಮೆ॥ ಹೀರೋ ಸೈಕಲ್ಸ್ ಲಿ, ಲೂಧಿಯಾನ	ಗುಲ್ಬರ್ಗಾ	14.89
ಮೆ॥ ಏವನ್ ಸೈಕಲ್ಸ್ ಲಿ, ಲೂಧಿಯಾನ	ಬೆಳಗಾವಿ	19.99

ಬೈಸಿಕಲ್‌ಗಳನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 2000ರಲ್ಲಿನ ನಿಯಮವನ್ನು ಅನುಸರಿಸಿ ನಾಲ್ಕು ಸಂಸ್ಥೆಗಳಿಂದ ಪ್ರತಿ ಬೈಸಿಕಲ್ ದರ ರೂ.2030/- ರಂತೆ ಖರೀದಿ ಮಾಡಲಾಗಿದೆ.

2007-08ನೇ ಸಾಲಿನಲ್ಲಿ 2,21,300 ಹೆಣ್ಣು ಮಕ್ಕಳ ಮತ್ತು 2,13,700 ಗಂಡು ಮಕ್ಕಳ ಒಟ್ಟು 4,35,000 ಬೈಸಿಕಲ್‌ಗಳನ್ನು ಖರೀದಿಸಲು ರೂ.89.18 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸಂಸ್ಥೆ ಹೆಸರು	**ವಿಭಾಗ**	**ಪಾವತಿಸಿರುವ ಮೊತ್ತ (ಕೋಟಿಗಳಲ್ಲಿ)**
ಮೆ॥ ಹೀರೋ ಸೈಕಲ್ಸ್ ಲಿ, ಲೂಧಿಯಾನ	ಬೆಂಗಳೂರು	25.61
ಮೆ॥ ಅಟ್ಲಾಸ್ ಸೈಕಲ್ಸ್ (ಹ) ಲಿ., ಮಧ್ಯಪ್ರದೇಶ	ಮೈಸೂರು	20.64

2006-07ನೇ ಸಾಲಿನಲ್ಲಿ ಮತ್ತು 2007-08ನೇ ಸಾಲಿನಲ್ಲಿ ಬಾಲಕ/ಬಾಲಕಿಯರಿಗೆ ವಿತರಿಸಲಾದ ಉಚಿತ ಬೈಸಿಕಲ್ ಖರೀದಿ ಮತ್ತು ವಿತರಣೆಯಲ್ಲಿ ಸದರಿ ನಿಭಂದನೆಗಳನ್ನು ಅನುಸರಿಸಲಾಗಿ ಕಾರ್ಯಕ್ರಮ ಯಾವುದೇ ಅಡ್ಡಿ ಆತಂಕಗಳಿಲ್ಲದೇ ನಿರಾತಂಕವಾಗಿ ಅನುಷ್ಠಾನಗೊಳಿಸಿರುವ ಅಂಶವನ್ನು ಗಮನದಲ್ಲಿಟ್ಟು ಕೊಂಡು ಪ್ರಸಕ್ತ ಸಾಲಿನಲ್ಲಿ ಮಾರ್ಗಸೂಚಿ/ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: **(427)303**
ಸದಸ್ಯರ ಹೆಸರು	: **ಶ್ರೀ ಜಯಚಂದ್ರ ಟಿ.ಬಿ. (ಶಿರಾ)**
ಉತ್ತರಿಸುವ ಸಚಿವರು	: **(ಶ್ರೀ ಕೆ.ಎಸ್.ಈಶ್ವರಪ್ಪ)**
	: **ಇಂಧನ ಸಚಿವರು**

****

ಅ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಮೆಗಾವ್ಯಾಟ್ ಎಷ್ಟು; ಬೇಡಿಕೆ ಮತ್ತು ಕೊರತೆಯ ಪ್ರಮಾಣ ಎಷ್ಟು; ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಹಾಗಿದ್ದಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಲು ಸರ್ಕಾರ ಯಾವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ; ಕೊರತೆಯನ್ನು ಯಾವ ಮೂಲದಿಂದ ನೀಗಿಸಲಾಗುವುದು?

ಪ್ರಸ್ತುತ ರಾಜ್ಯದಲ್ಲಿ ಪ್ರತಿ ದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ 100 ದಶಲಕ್ಷ ಯೂನಿಟ್ಟುಗಳು. ಪ್ರಸ್ತುತ ರಾಜ್ಯದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸಲು

ಪ್ರತಿ ದಿನ ಸುಮಾರು 115ರಿಂದ 120 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತಿನ ಅವಶ್ಯಕತೆ ಇರುತ್ತದೆ. ರಾಜ್ಯವು ಪ್ರಸ್ತುತ ದಿನವಹಿ 15 ರಿಂದ 20 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಈ ಕೊರತೆಯನ್ನು ನೀಗಿಸಲು ಹಾಗೂ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಲು ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಅಲ್ಪ ಕಾಲಿಕ ಕ್ರಮಗಳು

1. ಅಕ್ಟೋಬರ್ 2008 ರಿಂದ ಜನವರಿ 2009 ರವರೆಗಿನ ಅವಧಿಯಲ್ಲಿ ಕನಿಷ್ಠ 100 ಮೆ.ವ್ಯಾಟ್‌ನಿಂದ ಗರಿಷ್ಠ 700 ಮೆ.ವಾಟ್‌ಗಳ ಮಿತಿಗೆ ಒಳಪಟ್ಟು ವಿದ್ಯುತ್ತನ್ನು ಖಚಿತ / ಒಂದು ದಿನ ಮುಂಚಿತ (ಡೇ ಅಹೆಡ್) ಆಧಾರಿತ ರೀತಿಯಲ್ಲಿ ಪಡೆಯಲು ಬಿಡ್ಡುಗಳನ್ನು ಆಹ್ವಾನಿಸಲಾಗಿರುತ್ತದೆ.
2. ದಿನ ನಿತ್ಯ ವಿದ್ಯುತ್ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು "ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್" ಮೂಲಕ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.
3. ಲಭ್ಯತೆ ಆಧಾರಿತ ದರದ ಪ್ರಕಾರ ಅನುಕೂಲಕರ ಜಾಲ ತರಂಗವಿದ್ದಾಗ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲಾಗುತ್ತಿದೆ.
4. ಜಲಾಶಯಗಳಲ್ಲಿ ನೀರಿನ ಪ್ರಮಾಣವನ್ನು ಹೆಚ್ಚಿಸಲು ಮೋಡ ಬಿತ್ತನೆ ಕಾರ್ಯದ ಅನುಷ್ಠಾನವನ್ನು ಶೀಘ್ರದಲ್ಲಿ ಪ್ರಾರಂಭಿಸಲು ಜಲಸಂಪನ್ಮೂಲ ಇಲಾಖೆಗೆ ವಹಿಸಲಾಗಿದೆ.
5. ಹೆಚ್ಚುವರಿ ವಿದ್ಯುತ್ತಿಗಾಗಿ ಛತ್ತೀಸ್‌ಘಡ್ ಮತ್ತು ಒರಿಸ್ಸಾ ರಾಜ್ಯಗಳೂ ಸೇರಿದಂತೆ ಇತರ ರಾಜ್ಯಗಳನ್ನು ಮತ್ತು ವಿದ್ಯುತ್ತಿನ ವಾಣಿಜ್ಯ ವಹಿವಾಟು ನಡೆಸುವ ಕಂಪನಿಗಳನ್ನು ಸಂಪರ್ಕಿಸಲಾಗಿದೆ.
6. ಛತ್ತೀಸ್‌ಘಡ್ ರಾಜ್ಯವು 100 ಮೆ.ವ್ಯಾಟ್ ವಿದ್ಯುತ್ತನ್ನು ಒದಗಿಸಲು ಸಕಾರಾತ್ಮಕವಾಗಿ ಸ್ಪಂದಿಸಿದೆ.
7. ಜಿಂದಾಲ್ ಮತ್ತು ಟಾಟಾಗಳಂತಹ ಖಾಸಗೀ ವಿದ್ಯುತ್ ಉತ್ಪಾದಕರೂ ಸಹ ವಿದ್ಯುತ್ ಒದಗಿಸಲು ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ.
8. ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ಹೆಚ್ಚುವರಿ ವಿದ್ಯುತ್ತಿನ ಹಂಚಿಕೆಗಾಗಿ ಮನವಿ ಮಾಡಿ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.
9. ಕಲ್ಲಿದ್ದಲನ್ನು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಸಾಗಾಣಿಕೆ ಮಾಡಲು ಹಾಲೀ ಇರುವ ಮೂರು ರೇಖುಗಳ ಬದಲು ಕನಿಷ್ಠ 7 ರೇಖುಗಳನ್ನು ಹಂಚಿಕೆ ಮಾಡುವಂತೆ ರೈಲ್ವೇ ಮಂಡಳಿಯ ಅಧ್ಯಕ್ಷರಿಗೆ

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಪತ್ರವನ್ನು ಬರೆದಿರುತ್ತಾರೆ.

10. ವರಾಹಿ ಜಲ ವಿದ್ಯುತ್ ಯೋಜನೆಯಲ್ಲಿ 2 * 115 ಮೆ.ವ್ಯಾ. ಸಾಮರ್ಥ್ಯದ 3 ಮತ್ತು 4ನೇ ಘಟಕಗಳನ್ನು ಡಿಸೆಂಬರ್ 2008ರ ಅಂತ್ಯದೊಳಗೆ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

11. ಪ್ರಸಕ್ತ ವರ್ಷ ಪವನ ವಿದ್ಯುತ್ ಯೋಜನೆಗಳಿಂದ 100 ಮೆ.ವ್ಯಾ. ವಿದ್ಯುತ್ ರಾಜ್ಯಕ್ಕೆ ದೊರೆಯಲಿದೆ.

ಧೀರ್ಘ ಕಾಲಿಕ ಕ್ರಮಗಳು :

1. ರಾಯಚೂರು ಶಾಖೋತ್ಪನ್ನ 8ನೇ ವಿದ್ಯುತ್ ಉತ್ಪಾದನಾ ಘಟಕವು ಅಕ್ಟೋಬರ್ 2009 ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.
2. ಬಳ್ಳಾರಿಯಲ್ಲಿ 500 ಮೆ.ವ್ಯಾ. ಶಾಖೋತ್ಪನ್ನ 2ನೇ ವಿದ್ಯುತ್ ಉತ್ಪಾದನಾ ಘಟಕವು ಮಾರ್ಚ್ 2010ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.
3. ತಲಾ 1000 ರಿಂದ 1320 ಮೆ.ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ ಬೆಳಗಾವಿ ಜಿಲ್ಲೆಯ ಘಟಪ್ರಭಾ ದಲ್ಲಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಖಾಸಗಿ ವಿದ್ಯುತ್ ಉತ್ಪಾದಕರಿಂದ ಸ್ಥಾಪಿಸಲು ಪವರ್ ಕಂಪನಿ ಆಫ್ ಕರ್ನಾಟಕ ಲಿ. ಸ್ಪರ್ಧಾತ್ಮಕ ಬಿಡ್ಡು ಪ್ರಕ್ರಿಯೆಯನ್ನು ಆರಂಭಿಸಿರುತ್ತದೆ.
4. ಧೀರ್ಘಕಾಲಿಕ ಕ್ರಮವಾಗಿ 2500 ಮೆ.ವ್ಯಾಟ್ ವಿದ್ಯುತ್ತನ್ನು ಟ್ಯಾರಿಫ್ ಆಧಾರಿತ ಸ್ಪರ್ಧಾತ್ಮಕ ಬಿಡ್ಡು ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.
5. ತಾಲ್ಲೂಕು ಮಟ್ಟದಲ್ಲಿ 5 ಮೆ.ವ್ಯಾಟ್ ಮತ್ತು ಅದರ ಭಾಗ ಸಾಮರ್ಥ್ಯದ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಬಿಡ್ಡುಗಳನ್ನು ಕರೆಯಲಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: (495)314
ಸದಸ್ಯರ ಹೆಸರು	: ಶ್ರೀ ಕೃಷ್ಣಮೂರ್ತಿ, ಕೆ.ಎಂ. (ಕಡೂರು)
ಉತ್ತರಿಸುವ ಸಚಿವರ ಹೆಸರು	: (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
	: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ರಾಜ್ಯದಲ್ಲಿ ಅಲೆಮಾರಿ ಜನಾಂಗದವರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಈ ಜನಾಂಗದವರ ವಸತಿರಹಿತರ ಕುಟುಂಬ ಸಮೀಕ್ಷೆ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ನಿವೇಶನರಹಿತರ ಮತ್ತು ವಸತಿರಹಿತರ ಇಲ್ಲದಿದ್ದಲ್ಲಿ ಸರ್ಕಾರದ ಕ್ರಮವೇನು (ತಾಲ್ಲೂಕುವಾರು ಕುಟುಂಬ ಮಾಹಿತಿ ನೀಡುವುದು);

ಈ ಜನಾಂಗದವರಿಗಾಗಿ ಪ್ರತ್ಯೇಕವಾಗಿ ರಾಜ್ಯಾದ್ಯಂತ ಕುಟುಂಬ ಸಮೀಕ್ಷೆ ನಡೆಸಲಾಗಿಲ್ಲ. ಮುಂದಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 2005-06, 2006-07 ಮತ್ತು 2007-08 ಸಾಲಿನಲ್ಲಿ ಅಲೆಮಾರಿ ಜನಾಂಗದವರಿಗೆ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

2005-06, 2006-07 ಸಾಲಿಗೆ ಅಲೆಮಾರಿ ಜನಾಂಗಕ್ಕೆ ಪ್ರತ್ಯೇಕವಾಗಿ ಗುರಿ ನಿಗದಿಪಡಿಸಿರುವುದಿಲ್ಲ.

ಆದರೆ ಸರ್ಕಾರದ ಸುತ್ತೋಲೆ ಸಂ. ವಇ/166/ಹೆಚ್‌ಎಎಂ/2007 ದಿನಾಂಕ-07.08.2007 ರಲ್ಲಿ ಈ ಜನಾಂಗವನ್ನು ವಿಶೇಷ ವರ್ಗವೆಂದು ಪರಿಗಣಿಸಿದ ನಂತರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2007-08ನೇ ಸಾಲಿಗೆ ರೂ.100.00 ಲಕ್ಷಗಳನ್ನು ಬಿಡುಗಡೆಗೊಳಿಸಿ, ರಾಜ್ಯಕ್ಕೆ 333 ಮನೆಗಳನ್ನು ಮಂಜೂರು ಮಾಡಿದೆ.

ಈ) ಈ ಮೂರು ವರ್ಷಗಳಲ್ಲಿ ಅಲೆಮಾರಿ ಜನಾಂಗದವರಿಂದ ಮನೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು, ಕುಟುಂಬಗಳವಾರು ಮಾಹಿತಿ ನೀಡುವುದು);

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಈವರೆಗೆ ಒಟ್ಟು 902 ಅರ್ಜಿಗಳು ಬಂದಿದ್ದು ತಾಲ್ಲೂಕುವಾರು, ಕುಟುಂಬವಾರು ವಿವರ ಈ ಕೆಳಗಿನಂತಿರುತ್ತದೆ:

ಜಿಲ್ಲೆ	ತಾಲ್ಲೂಕು	ಕುಟುಂಬಗಳ ಸಂಖ್ಯೆ
ದಾವಣಗೆರೆ	ದಾವಣಗೆರೆ	53
ಚಿತ್ರದುರ್ಗ	ಹೊಳಲ್ಕೆರೆ	129
	ಹಿರಿಯೂರು	46
	ಚಳ್ಳಕೆರೆ	66
	ಹೊಸದುರ್ಗ	18
ಚಿಕ್ಕಬಳ್ಳಾಪುರ	ಬಾಗೇಪಲ್ಲಿ	51
	ಚಿಂತಾಮಣಿ	37
ಕೋಲಾರ	ಬಂಗಾರಪೇಟೆ	40

ಬೆಂಗಳೂರು ಗ್ರಾಮಾಂತರ	ಹೊಸಕೋಟೆ	79
ಗುಲ್ಬರ್ಗಾ	ಗುಲ್ಬರ್ಗಾ	50
ಮಂಡ್ಯ	ಶ್ರೀರಂಗಪಟ್ಟಣ	25
ತುಮಕೂರು	ಶಿರಾ	56
ಕೋಲಾರ	ಕೋಲಾರ	14
ರಾಯಚೂರು	ರಾಯಚೂರು	24
	ಮಾನ್ವಿ	30
	ದೇವದುರ್ಗ	12
	ಲಿಂಗಸೂಗೂರು	12
ಹಾವೇರಿ	ಹಾನಗಲ್	55
ಬಿಜಾಪುರ	ಮುದ್ದೇಬಿಹಾಳ	35
ಬಳ್ಳಾರಿ	ಬಳ್ಳಾರಿ	44
ತುಮಕೂರು	ಮಧುಗಿರಿ	26
ಒಟ್ಟು		**902**

ಉ) ಆಶ್ರಯ/ಇಂದಿರಾ ನಿವಾಸ್ ಯೋಜನೆಯಡಿಯಲ್ಲಿ ಉಚಿತವಾಗಿ/ಸಹಾಯಧನ ರೂಪದಲ್ಲಿ ಮನೆಗಳನ್ನು ಮಂಜೂರು ಮಾಡುತ್ತಿರುವುದು ನಿಜವೇ;

ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ನೀಡಲಾಗುವ ಎಲ್ಲಾ ಘಟಕ ವೆಚ್ಚವು ಸಂಪೂರ್ಣವಾಗಿ ಸಹಾಯಧನದ ರೂಪದಲ್ಲಿರುತ್ತದೆ.

ಆದರೆ ಆಶ್ರಯ ಯೋಜನೆಯಡಿ ನೀಡಲಾಗುವ ಘಟಕವೆಚ್ಚ ರೂ.30,000/-ಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗೆ ಸಂಪೂರ್ಣವಾಗಿ ಸಹಾಯಧನದ ರೂಪದಲ್ಲಿದ್ದು, ಸಾಮಾನ್ಯ ವರ್ಗಕ್ಕೆ ರೂ.15,000/- ಸಾಲ ಮತ್ತು ರೂ.15,000/-ಸಹಾಯಧನವಾಗಿರುತ್ತದೆ.

ನಗರ ಆಶ್ರಯ ಯೋಜನೆಯಡಿ ನೀಡಲಾಗುವ ಘಟಕ ವೆಚ್ಚವು ರೂ.25,000/-ಗಳಾಗಿದ್ದು, ಎಲ್ಲಾ ವರ್ಗಕ್ಕೂ ಸಾಲದ ರೂಪದಲ್ಲಿರುತ್ತದೆ.

ಊ) ಹಾಗಿದ್ದಲ್ಲಿ, ಹಿಂದುಳಿದ ವರ್ಗದ ಅಲೆಮಾರಿ ಜನಾಂಗದವರಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗುವುದೇ; ಈ ಬಗ್ಗೆ ಸರ್ಕಾರದ ನಿಲುವೇನು;

2007-08ನೇ ಸಾಲಿನ ನಿಗದಿಪಡಿಸಿದ ಈ ಅಲೆಮಾರಿ ಜನಾಂಗಕ್ಕೆ ನೀಡಲಾಗುವ ಘಟಕವೆಚ್ಚ ರೂ.30,000/-ವನ್ನು ಸಂಪೂರ್ಣವಾಗಿ ಸಹಾಯಧನದ ರೂಪದಲ್ಲಿ ನೀಡಲಾಗುತ್ತಿದೆ.

ಋ) 2008-09ನೇ ಸಾಲಿನಿಂದ ಅಲೆಮಾರಿ ಜನಾಂಗದ ವಿಶೇಷ ವಸತಿ ಯೋಜನೆಯನ್ನು ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುವುದೇ;

ಇಲ್ಲ.

ೠ) ಹಾಗಿದ್ದಲ್ಲಿ, ಆಗಸ್ಟ್ 15, 2008ನೇ ಸಾಲಿನಿಂದ ಸರ್ಕಾರ ಅನುಷ್ಠಾನಗೊಳಿಸುವುದೇ?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (428)304
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ. (ಶಿರಾ)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ತುಮಕೂರು ಜಿಲ್ಲೆ, ಶಿರಾ ಪಟ್ಟಣದಲ್ಲಿ 220 ಕೆ.ವಿ. ವಿದ್ಯುತ್ ಸ್ಥಾವರ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಕೈಗಾರಿಕಾಭಿವೃದ್ಧಿಯತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯುತ್ ಸ್ಥಾವರಕ್ಕೆ ಸೂಕ್ತ ಜಾಗ ಗುರುತಿಸಲಾಗಿದೆಯೇ;

ಹೌದು, ತುಮಕೂರು ಜಿಲ್ಲೆ ಶಿರಾ ಪಟ್ಟಣದಲ್ಲಿ 220 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಪ್ರಾರಂಭಿಕ ಹಂತದಲ್ಲಿದ್ದು, ಈ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ. ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ದೊರೆತ ನಂತರ ಸದರಿ 220 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆಗೆ ಅವಶ್ಯವಿರುವ ಸ್ಥಳವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಗ್ರಾಮಗಳಲ್ಲಿ ಹಾಗೂ ಹೊಸ ಬೀದಿಗಳಿಗೆ ಹೆಚ್ಚುವರಿ ದೀಪ ಇಲ್ಲದೇ ರೈತರು ಮತ್ತು ನಾಗರೀಕರು ಕತ್ತಲಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಂತಹ ಪ್ರಕರಣಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಹಾಗೂ ಸ್ಥಳೀಯ ಸಂಸ್ಥೆಗಳಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ದೀಪದ ಕೋರಿಕೆ ಬಂದ ಕೂಡಲೇ ವಿದ್ಯುತ್ ಸರಬರಾಜು ಕಂಪನಿಗಳು ನಿಯಮಾವಳಿಗಳನ್ನು ಅನುಸರಿಸಿ ವಿದ್ಯುತ್ ಸಂಪರ್ಕ ಒದಗಿಸುತ್ತವೆ.

ಇ) ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ;

ಸರ್ಕಾರದ ಮುಂದೆ ಯಾವುದೇ ವಿಶೇಷ ಯೋಜನೆಯ ಪ್ರಸ್ತಾಪ ಇರುವುದಿಲ್ಲ.

ಈ) ರಾಜೀವ್ ಗಾಂಧಿ ವಿದ್ಯುದೀಕರಣದಿಂದ ರಾಜ್ಯಕ್ಕಾದ ಲಾಭವೇನು?

ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣದ ಮುಖ್ಯ ಉದ್ದೇಶಗಳು ಕೆಳಕಂಡಂತಿವೆ:-

1. ಎಲ್ಲಾ ಹಳ್ಳಿಗಳನ್ನು ಹಾಗೂ ಜನ ವಸತಿ ಪ್ರದೇಶಗಳನ್ನು ಕೇಂದ್ರ ಸರ್ಕಾರವು ವಿದ್ಯುದೀಕರಣದ ಬಗ್ಗೆ ಸೂಚಿಸಿರುವ ಹೊಸ ವ್ಯಾಖ್ಯಾನದ ಪ್ರಕಾರ (New definition for village electrification) ವಿದ್ಯುದೀಕರಿಸುವುದು.
2. ಗ್ರಾಮೀಣ ಪ್ರದೇಶಗಳ ಎಲ್ಲಾ ಮನೆಗಳಿಗೂ ವಿದ್ಯುತ್ ಸೌಲಭ್ಯವು ದೊರಕುವಂತೆ ಮಾಡುವುದು.
3. ಗ್ರಾಮಾಂತರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆದ್ಯತೆ ಮೇರೆಗೆ ವಿದ್ಯುತ್ ಸೌಲಭ್ಯ ಒದಗಿಸುವುದು.

ರಾಜ್ಯದಲ್ಲಿ ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಅಡಿಯಲ್ಲಿ ಜೂನ್ 2008 ಅಂತ್ಯದವರೆಗೆ 47 ಹಳ್ಳಿಗಳನ್ನು ಮತ್ತು ಉಪಗ್ರಾಮಗಳು/ದಲಿತಬಸ್ತಿ/ಜನತಾ ಕಾಲೋನಿ/ ಗಿರಿಜನ ಕಾಲೋನಿಗಳೂ ಸೇರಿದಂತೆ ಒಟ್ಟು 7884 ಜನವಸತಿ ಪ್ರದೇಶಗಳನ್ನು ವಿದ್ಯುದೀಕರಿಸಲಾಗಿದೆ ಹಾಗೂ ಈಗಾಗಲೇ ವಿದ್ಯುದೀಕರಣಗೊಂಡಿರುವ 18,809 ಹಳ್ಳಿಗಳಲ್ಲಿ ಅವಶ್ಯಕತೆ ಇರುವ ಕಡೆಗಳಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿ ವಿದ್ಯುದೀಕರಣವನ್ನು ತೀವ್ರಗೊಳಿಸಲಾಗಿದೆ. ಅಲ್ಲದೇ, ಗ್ರಾಮೀಣ ಪ್ರದೇಶಗಳಲ್ಲಿರುವ ಒಟ್ಟು 4,87,300 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇವುಗಳ ಪೈಕಿ 4,20,300 ಮನೆಗಳಿಗೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿವೆ.

ಈ ಯೋಜನೆಯ ಅಡಿಯಲ್ಲಿ ಇದುವರೆವಿಗೂ 484.83 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದ್ದು, ಒಟ್ಟು 495.53 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ಅತ್ಯಂತ ಪ್ರಮುಖ ಪ್ರಯೋಜನವೆಂದರೆ ಶೇ.90 ರಷ್ಟು ಹಣ ಅನುದಾನದ ರೂಪದಲ್ಲಿ ಕೇಂದ್ರ ಸರ್ಕಾರದಿಂದ ಲಭ್ಯವಾಗುತ್ತಿದೆ. ಉಳಿದ ಶೇಕಡ 10 ರಷ್ಟು ಹಣ ಮಾತ್ರ ಸಾಲವಾಗಿರುತ್ತದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (470)305
2) ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ
3) ಉತ್ತರಿಸುವ ಸಚಿವರು : (ಶ್ರೀ ರೇವು ನಾಯಕ್ ಬೆಳಮಗಿ)
: ಮಾನ್ಯ ಪಶುಸಂಗೋಪನೆ ಸಚಿವರು.

ಅ) ಕೊಪ್ಪಳ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಕೋಳಿ ಫಾರ್ಮ್‌ಗಳ ಸಂಖ್ಯೆ ಎಷ್ಟು ಹಾಗೂ ಹೊಸದಾಗಿ ಆಗುತ್ತಿರುವ ಕೋಳಿ ಫಾರ್ಮ್‌ಗಳ ಸಂಖ್ಯೆ ಎಷ್ಟು?

ಕೊಪ್ಪಳ ಜಿಲ್ಲೆಯಲ್ಲಿ 23 ಕೋಳಿ ಫಾರ್ಮ್‌ಗಳು ನಿರ್ಮಾಣವಾಗಿರುತ್ತವೆ. ಅವುಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರಗಳು	ಫಾರ್ಮ್‌ಗಳ ಸಂಖ್ಯೆ
1)	2 ಲಕ್ಷಕ್ಕಿಂತ ಜಾಸ್ತಿ ಕೋಳಿಗಳಿರುವ ಫಾರ್ಮ್‌ಗಳು	5
2)	50 ಸಾವಿರದಿಂದ 2 ಲಕ್ಷದ ವರೆಗೆ ಕೋಳಿಗಳಿರುವ ಫಾರ್ಮ್‌ಗಳು	12
3)	50 ಸಾವಿರಕ್ಕಿಂತ ಕಡಿಮೆ ಕೋಳಿಗಳಿರುವ ಫಾರ್ಮ್‌ಗಳು	05
4)	ಸರ್ಕಾರಿ ಕೋಳಿ ಫಾರ್ಮ್‌ಗಳು	01
	ಒಟ್ಟು	23

ಹೊಸದಾಗಿ ನಿರ್ಮಾಣವಾಗುತ್ತಿರುವ ಕೋಳಿಫಾರ್ಮ್‌ಗಳ ಸಂಖ್ಯೆ 2 ಇದ್ದು, ಕುಷ್ಟಗಿ ಮತ್ತು ಬೂದಗುಂಪ ಗ್ರಾಮಗಳಲ್ಲಿ ನಿರ್ಮಾಣವಾಗುತ್ತಿವೆ.

ಆ) ಈ ಕೋಳಿ ಫಾರ್ಮ್‌ಗಳಿಂದ ಈ ಪ್ರದೇಶದಲ್ಲಿ ಕೋಳಿ ಜ್ವರ ಮತ್ತು ಪಕ್ಷಿ ಜ್ವರವು ವ್ಯಾಪಕವಾಗಿ ಹರಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ರಾಜ್ಯದಲ್ಲಿ ಕೊಪ್ಪಳ ಜಿಲ್ಲೆಯೂ ಸೇರಿದಂತೆ ಹಕ್ಕಿಜ್ವರ ಅಥವಾ ಕೋಳಿಶೀತ ಜ್ವರ ಕಂಡುಬಂದಿರುವುದಿಲ್ಲ.

ಕೊಪ್ಪಳ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಕೋಳಿಶೀತ ಜ್ವರ ಕಂಡುಬಂದಿದ್ದರೂ ಸಹ ಇಲಾಖಾ ವತಿಯಿಂದ ಕಣ್ಗಾವಲು ಕಾರ್ಯಕ್ರಮ ಮುಂದುವರೆದಿದ್ದು, ಪ್ರತಿ ಮಾಹೆ ಜಿಲ್ಲಾವಾರು ಕೋಳಿ ಫಾರ್ಮ್‌ಗಳ ಮತ್ತು ರೈತರು ಸಾಕಿರುವ ಕೋಳಿಗಳಿಂದ ಹಾಗೂ ರಾಜ್ಯದ ಪಕ್ಷಿಧಾಮಗಳಲ್ಲಿ ಕಂಡುಬರುವ ಕಾಡುಹಕ್ಕಿಗಳಿಂದ ಸೀರಂ ಮತ್ತು ಇತರೆ ಮಾದರಿಗಳನ್ನು ಸಂಗ್ರಹಿಸಿ ರೋಗ ಪತ್ತೆ ಹಚ್ಚುವ ಕಾರ್ಯಕ್ರಮವನ್ನು ಮುಂದುವರೆಸಲಾಗಿದೆ. ಹಾಗೆಯೇ ಸ್ಥಳೀಯ ಪಶುವೈದ್ಯರು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಕೋಳಿ ಫಾರ್ಮ್‌ಗಳನ್ನು ಪರಿಶೀಲಿಸುವ ಕಾರ್ಯಕ್ರಮವನ್ನು ಸಹ ಮುಂದುವರೆಸಲಾಗಿದೆ.

ರಾಜ್ಯಾದ್ಯಂತ 700ಕ್ಕೂ ಹೆಚ್ಚು ರ್‍ಯಾಪಿಡ್ ರೆಸ್ಪಾನ್ಸ್ ಗುಂಪು ಮತ್ತು ಪರಿವೀಕ್ಷಣಾ ದಳಗಳನ್ನು ಜಿಲ್ಲಾದ್ಯಂತ ಮತ್ತು ತಾಲ್ಲೂಕಿನಾದ್ಯಂತ ರಚಿಸಿ ತುರ್ತು ಸಂದರ್ಭಗಳಲ್ಲಿ ಸನ್ನದ್ಧರಾಗಲು ಕ್ರಮವಹಿಸಲಾಗಿದೆ. ಈ ಬಗ್ಗೆ ಕೊಪ್ಪಳದಲ್ಲಿ 21 ರ್‍ಯಾಪಿಟ್ ರೆಸ್ಪಾನ್ಸ್ ಗುಂಪು ಮತ್ತು 5 ಪರಿವೀಕ್ಷಣಾ ದಳಗಳನ್ನು ರಚಿಸಲಾಗಿರುತ್ತದೆ.

ಕೋಳಿ ಶೀತಜ್ವರ ಪತ್ತೆ ಹಚ್ಚುವಿಕೆ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಉಸ್ತುವಾರಿ ಮಾಡಲು ಮತ್ತು ಅಗತ್ಯ ನಿರ್ದೇಶನ ನೀಡಲು ರಾಜ್ಯಮಟ್ಟದಲ್ಲಿ ಇಲಾಖಾ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಪರ ನಿರ್ದೇಶಕರು

(ಜಾನುವಾರು ಆರೋಗ್ಯ) ರವರ ಅಧ್ಯಕ್ಷತೆಯಲ್ಲಿ ಶೀತಜ್ವರ ಮಾನಿಟರಿಂಗ್ ಸಮಿತಿ ರಚಿಸಿ, ಪ್ರತಿ ಮಾಹೆ 1ನೇ ತಾರೀಖು ಸಭೆ ನಡೆಸಿ ಎಲ್ಲಾ ಜಿಲ್ಲೆಗಳ ಪ್ರಗತಿಯನ್ನು ಪರಿಶೀಲನೆ ಮಾಡಲಾಗುತ್ತದೆ. ತದನಂತರ ಪ್ರತಿ ಮಾಹೆ 3ನೇ ತಾರೀಖು ಇಲಾಖಾ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೋಳಿ ಶೀತ ಜ್ವರದ Core committee ಸಭೆಯಲ್ಲಿ ಪರಿಶೀಲನೆ ಮಾಡಿ ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ.

ಭಾರತ ಸರ್ಕಾರದ ನೆರವಿನಿಂದ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪಶುವೈದ್ಯರು ಮತ್ತು ಅರೆ ತಾಂತ್ರಿಕ ಸಿಬ್ಬಂದಿಗಳಾದ ಪಶುವೈದ್ಯಕೀಯ ಮೇಲ್ವಿಚಾರಕರು, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯ ಸಹಾಯಕರು ಮತ್ತು ಇತರೆ ರ್‍ಯಾಪಿಡ್ ರೆಸ್ಪಾನ್ಸ್ ಗುಂಪಿನ ಸದಸ್ಯರುಗಳಿಗೆ ಕೋಳಿ ಶೀತ ಜ್ವರ ನಿಯಂತ್ರಣ ಹಾಗೂ ಕಣ್ಗಾವಲು ಕಾರ್ಯಕ್ರಮದಡಿಯಲ್ಲಿ ತರಬೇತಿಯನ್ನು ರೂ:76.80 ಲಕ್ಷಗಳ ಅನುದಾನದಲ್ಲಿ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮ ಏಪ್ರಿಲ್ 2008ರ ಮಾಹೆಯಿಂದಲೇ ಜಾರಿಯಲ್ಲಿದೆ.

ಈಗಾಗಲೇ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಗೆ 131 ಫಾಗಿಂಗ್ ಮಿಷನ್‌ಗಳನ್ನು, 631 ವೈಯಕ್ತಿಕ ಸುರಕ್ಷಿತ ಸಾಧನ ಕಿಟ್‌ಗಳನ್ನು, 662 ರೋಗತಪಾಸಣಾ ಅಧಿಕಾರಿಗಳ ಕಿಟ್‌ಗಳನ್ನು ಸರಬರಾಜು ಮಾಡಿದ್ದು, ಇದರಲ್ಲಿ ಕೊಪ್ಪಳ ಜಿಲ್ಲೆಗೆ 5 ಫಾಗಿಂಗ್ ಮಿಷನ್‌ಗಳನ್ನು 22 ವೈಯಕ್ತಿಕ ಸುರಕ್ಷಿತ ಸಾಧನ ಕಿಟ್‌ಗಳನ್ನು, ಹಾಗೂ 24 ರೋಗತಪಾಸಣಾ ಅಧಿಕಾರಿಗಳ ಕಿಟ್‌ಗಳನ್ನು ಈಗಾಗಲೇ ಸರಬರಾಜು ಮಾಡಲಾಗಿದೆ.

ಪ್ರಸಕ್ತ ಸಾಲಿನ ರಾಜ್ಯ ಆಯವ್ಯಯದ ಲೆಕ್ಕ ಶೀರ್ಷಿಕೆ 2403–00–101–0–21 (ಅಸ್ಕಾಡ್) ರಲ್ಲಿ ರೂ:100.88 ಲಕ್ಷ ಅನುದಾನವನ್ನು ಅಳವಡಿಸಿಕೊಂಡು ಕೋಳಿ ಶೀತ ಜ್ವರ ಕಣ್ಗಾವಲು ಕಾರ್ಯಕ್ರಮವನ್ನು ಮುಂದುವರೆಸಲು ಮತ್ತು ಸನ್ನದ್ಧರಾಗಿರಲು ಕ್ರಮವಹಿಸಲಾಗಿದೆ.

ಖಾಸಗಿ ಕೋಳಿ ಫಾರ್ಮ ಮಾಲೀಕರಿಗೆ ಅವರ ಫಾರ್ಮ್‌ಗಳಲ್ಲಿ ಅಳವಡಿಸಿಕೊಳ್ಳಬೇಕಾದ ಜೈವಿಕ ಸುರಕ್ಷತಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಗಿದೆ ಹಾಗೂ ಸ್ಥಳೀಯ ಪಶುವೈದ್ಯರು ಫಾರ್ಮ್‌ಗಳಿಗೆ ಭೇಟಿ ನೀಡಿದಾಗ ಈ ಬಗ್ಗೆ ಪರಿಶೀಲಿಸಲು ಸಹ ಸೂಚಿಸಲಾಗಿದೆ.

ಇ) ಈ ಫಾರ್ಮ್‌ಗಳಿಂದ ಈ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ರೋಗಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಈ ಖಾಸಗಿ ಕೋಳಿ ಫಾರ್ಮ್‌ಗಳಿಂದ ಸಾಂಕ್ರಾಮಿಕ ರೋಗಗಳು ಹರಡಿರುವ ಬಗ್ಗೆ ಯಾವುದೇ ವರದಿ ಇರುವುದಿಲ್ಲ. ಆದ್ದಾಗ್ಯೂ ಮುಂಜಾಗ್ರತೆ

ಕ್ರಮವಾಗಿ ಕೋಳಿ ಫಾರ್ಮ್‌ಗಳಲ್ಲಿ ಜೈವಿಕ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಮಾಲೀಕರಿಗೆ ತಿಳುವಳಿಕೆ ನೀಡಲಾಗಿದೆ.

ಈ) ಈ ಫಾರ್ಮ್‌ಗಳಿಂದ ಅತೀ ಹೆಚ್ಚು ಮೊಟ್ಟೆಗಳು ರಫ್ತಾಗುತ್ತಿದ್ದು, ಇದರಿಂದಾಗಿ ಈ ಕೇಂದ್ರಗಳಿಂದ ಸರ್ಕಾರಕ್ಕೆ ಸಂಗ್ರಹಣೆಯಾಗಿರುವ ಮೊತ್ತವೆಷ್ಟು?

ಕೊಪ್ಪಳ ಜಿಲ್ಲೆಯ ಕೋಳಿ ಸಾಕಾಣಿಕಾ ಕೇಂದ್ರಗಳಿಂದ ಪ್ರತಿದಿನ ಸುಮಾರು 30.00 ಲಕ್ಷ ಮೊಟ್ಟೆಗಳು ಇತರೆ ರಾಜ್ಯಗಳಿಗೆ ಹಾಗೂ ರಾಜ್ಯದ ಇತರೆ ನಗರ ಪಟ್ಟಣಗಳಿಗೆ ಸರಬರಾಜಾಗುತ್ತಿದೆ. ಈ ಕೋಳಿ ಫಾರ್ಮ್‌ಗಳ ಮೊಟ್ಟೆ ಉತ್ಪಾದನೆ ಸರಬರಾಜು ಹಾಗೂ ಮಾರಾಟದಿಂದ ಸರ್ಕಾರಕ್ಕೆ ಯಾವುದೇ ರೀತಿಯ ಮೊತ್ತ ಸಂಗ್ರಹಣೆ ಮಾಡಲಾಗುತ್ತಿಲ್ಲ. ಆದರೆ ಈ ಕೋಳಿ ಫಾರ್ಮ್‌ಗಳಿಂದ ಪರೋಕ್ಷವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಅವಕಾಶ ಮತ್ತು ರೈತರು ಬೆಳೆಯುವ ಮೆಕ್ಕೆಜೋಳ ಹಾಗೂ ಇತರೆ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ದೊರೆಯುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (471)306
ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ
ಉತ್ತರಿಸಬೇಕಾದ ಸಚಿವರು : (ಶ್ರೀ ಅರವಿಂದ ಲಿಂಬಾವಳಿ)
: ಉನ್ನತ ಶಿಕ್ಷಣ ಸಚಿವರು

ಅ) ಕರ್ನಾಟಕ ರಾಜ್ಯ ಪದವಿ ಕಾಲೇಜುಗಳ ತಾತ್ಕಾಲಿಕ ಉಪನ್ಯಾಸಕರಿಗೆ ಪ್ರತಿ ತಿಂಗಳ ವೇತನವು ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ತಾತ್ಕಾಲಿಕ ಉಪನ್ಯಾಸಕರ ವೇತನವು ವಿಳಂಬವಾಗಲು ಕಾರಣಗಳೇನು (ಜಿಲ್ಲಾವಾರು ವಿವರ ನೀಡುವುದು)

ಹೌದು

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2007-08ನೇ ಸಾಲಿನಲ್ಲಿ ನೇಮಕಾತಿಗೊಂಡ ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಸದರಿ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಶೇ 22ರಷ್ಟು ವೇತನ ಬಿಡುಗಡೆ ಮಾಡಲಾಗಿತ್ತು.. ಉಳಿದ ಮೊತ್ತವನ್ನು 2008-09ನೇ ಸಾಲಿಗೆ ಒದಗಿಸುವ ಅನುದಾನದಲ್ಲಿ ಬಿಡುಗಡೆ ಮಾಡಲಾಗುವುದು. (ಜಿಲ್ಲಾ-ವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಕೊಪ್ಪಳ ಜಿಲ್ಲೆಯ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಉಪನ್ಯಾಸಕರು ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

87

ತಾಲ್ಲೂಕು-ವಾರು ವಿವರ ಈ ಕೆಳಕಂಡಂತಿದೆ:

- ಗಂಗಾವತಿ ತಾಲ್ಲೂಕು: - 37
- ಕೊಪ್ಪಳ ತಾಲ್ಲೂಕು: - 33

- ಕುಷ್ಟಗಿ ತಾಲ್ಲೂಕು: – 07
- ಯಲಬುರ್ಗಾ ತಾಲ್ಲೂಕು: –10

ಇ) ಕೊಪ್ಪಳ ಜಿಲ್ಲೆಯ ಪದವಿ ಕಾಲೇಜುಗಳಲ್ಲಿ ತಾತ್ಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಪ್ರತಿ ತಿಂಗಳು ವೇತನದಿಂದ ವಂಚಿತರಾದವರ ಸಂಖ್ಯೆ ಎಷ್ಟು?

87

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (467)307
ಸದಸ್ಯರ ಹೆಸರು : ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ಸರ್ಕಾರ ರೈತರಿಗೆ ಉಚಿತ ವಿದ್ಯುತ್ ನೀಡುವುದಾಗಿ ಭರವಸೆ ನೀಡಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಮುಂದಿನ ನಿಲುವೇನು?

ಹೌದು ನಿಜ. ರಾಜ್ಯದ ರೈತರ 10 ಹೆಚ್.ಪಿ.ಸಾಮರ್ಥ್ಯದವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಸೌಲಭ್ಯವನ್ನು ದಿನಾಂಕ 1–8–2008 ರಿಂದ ಜಾರಿಗೊಳಿಸಲಾಗುತ್ತದೆ ಎಂದು ದಿನಾಂಕ 17–7–2008 ರಂದು ಸದನದಲ್ಲಿ ಮಂಡಿಸಲಾದ 2008–09ರ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ. ಅದರಂತೆ ಸರ್ಕಾರಿ ಆದೇಶ ಹೊರಡಿಸಲು ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (469)308
ಸದಸ್ಯರ ಹೆಸರು : ಶ್ರೀ ಕಿಮ್ಮನೆ ರತ್ನಾಕರ್ [ತೀರ್ಥಹಳ್ಳಿ]
ಉತ್ತರಿಸುವ ಸಚಿವರು : (ಶ್ರೀ ಅರವಿಂದಲಿಂಬಾವಳಿ)
: ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ಕಳೆದ ಸಾಲಿನಲ್ಲಿ ಮತ್ತು ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಸಲಾದ ಪ್ರಥಮ ದರ್ಜೆ(ಪದವಿ) ಕಾಲೇಜುಗಳ ಸಂಖ್ಯೆ ಎಷ್ಟು;

ಕಳೆದ ಸಾಲಿನಲ್ಲಿ ಎಂದರೆ 2007–08ನೇ ಸಾಲಿಗೆ 167 ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಳನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಎಂದರೆ 2008–09ನೇ ಸಾಲಿಗೆ ಯಾವುದೇ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ.

ಆ. ಈ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ. ಉಪನ್ಯಾಸಕರ ಮತ್ತು ಕೊಠಡಿಗಳ ಕೊರತೆಯನ್ನು ನೀಗಿಸಲು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಉದಾ: ತೀರ್ಥಹಳ್ಳಿ ಸರ್ಕಾರಿ ಪದವಿ ಕಾಲೇಜು);

ಈ ರೀತಿ ಯಾವ ದೂರುಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ. ಈ ವಸೂಲಾತಿಯನ್ನು ನಿಲ್ಲಿಸಲು ಮತ್ತು ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಸದಾಗಿ ಪ್ರಾರಂಭಿಸಲಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು 2007–08ನೇ ಸಾಲಿಗೆ ಕಟ್ಟಡಕ್ಕಾಗಿ 50.00ಕೋಟಿರೂಗಳನ್ನು ಒದಗಿಸಿದ್ದು, ನಿವೇಶನ ಲಭ್ಯವಿರುವಂತಹ ಕಾಲೇಜುಗಳಿಗೆ ಕಟ್ಟಡ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡಗಳನ್ನು ಒದಗಿಸಲು ನಬಾರ್ಡ್ ಅನುದಾನದ ಆರ್.ಐ.ಡಿ.ಎಫ್–13ರಡಿ 50.00ಕೋಟಿರೂಗಳನ್ನು ಒದಗಿಸಿದ್ದು, ಈ ಸಾಲಿನಿಂದ ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ತೀರ್ಥಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2007–08ನೇ ಸಾಲಿನಿಂದ ಪ್ರಾರಂಭಿಸಲಾಗಿದ್ದು, ಕಟ್ಟಡ ನಿರ್ಮಾಣಕ್ಕಾಗಿ 75.00ಲಕ್ಷರೂಗಳನ್ನು ಒದಗಿಸಲಾಗಿತ್ತು. ಆದರೆ ನಿವೇಶನ ಕೊರತೆಯಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ನಿವೇಶನ ದೊರೆತ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸದರಿ ಕಾಲೇಜಿನ ಕಚೇರಿ ವೆಚ್ಚಕ್ಕೆ 35,000/–ರೂಗಳನ್ನು ಗ್ರಂಥಾಲಯ ಪುಸ್ತಕಗಳಿಗಾಗಿ 1.35ಲಕ್ಷರೂಗಳನ್ನು, ಪೀಠೋಪಕರಣ ಮತ್ತು ಪ್ರಯೋಗಾಲಯ ಉಪಕರಣಗಳಿಗಾಗಿ ತಲಾ 1.50ಲಕ್ಷರೂಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ 17 ಡೆಸ್ಕ್‌ಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:: **(497)309**
ಸದಸ್ಯರ ಹೆಸರು	:: **ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)**
ಉತ್ತರಿಸುವ ಸಚಿವರು	:: **(ಶ್ರೀ ಕೆ.ಎಸ್.ಈಶ್ವರಪ್ಪ)**
	:: **ಇಂಧನ ಸಚಿವರು**

ಅ) ಚಕ್ರಾ – ವರಾಹಿ – ಸಾವೆಹಕ್ಲು ಮುಳುಗಡೆ ಸಂತ್ರಸ್ತರಿಗೆ ಇದುವರೆವಿಗೂ ಅನೇಕರಿಗೆ ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಚಕ್ರಾ, ಸಾವೇಹಕ್ಲು ಮತ್ತು ವರಾಹಿ ಯೋಜನೆಯ ಮುಳುಗಡೆ ಸಂತ್ರಸ್ಥರಿಗೆ ಇದುವರೆಗೆ ಕ್ರಮವಾಗಿ ರೂ.325.09 ಲಕ್ಷ ಹಾಗೂ ರೂ. 2,769.22 ಲಕ್ಷಗಳನ್ನು ಜಮೀನು ಹಾಗೂ ಕಟ್ಟಡಗಳಿಗೆ ಪರಿಹಾರ ಪಾವತಿಸಲಾಗಿದೆ.

ಈ ಪರಿಹಾರದ ಬಗ್ಗೆ ಅಸಮಾಧಾನಗೊಂಡ ಸಂತ್ರಸ್ಥರು ಹೆಚ್ಚಿನ ಪರಿಹಾರ ಕೋರಿ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿರುತ್ತಾರೆ.

ನ್ಯಾಯಾಲಯಗಳ ತೀರ್ಪಿಗನುಗುಣವಾಗಿ ಪರಿಹಾರದ ಮೊತ್ತವನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಶಿವಮೊಗ್ಗ ಹಾಗೂ ನಿಗಮವು ನೇರವಾಗಿ ನ್ಯಾಯಾಲಯಗಳ ಮುಖಾಂತರ ಸಂತ್ರಸ್ಥರಿಗೆ ಪಾವತಿಸಲಾಗುತ್ತಿದೆ

ಆ) ಮುಳುಗಡೆ ಸಂತ್ರಸ್ತ ಕುಟುಂಬದಲ್ಲಿ ಒಬ್ಬರಿಗೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಸರ್ಕಾರದ ಆಶ್ವಾಸನೆಯಂತೆ ಪ್ರಸ್ತುತ ಮುಳುಗಡೆ ಕುಟುಂಬದ ಸುಮಾರು 500 ಉದ್ಯೋಗ ಆಕಾಂಕ್ಷಿಗಳು ಹೋರಾಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸಪ್ಟಂಬರ್ – ಅಕ್ಟೋಬರ್ 2005ರಲ್ಲಿ ಚಕ್ರಾ– ವರಾಹಿ ಯೋಜನೆಗಳ ಕೆಲ ಭೂಸಂತ್ರಸ್ಥರು ಕೆ.ಪಿ.ಸಿ.ಎಲ್ ನಲ್ಲಿ ಉದ್ಯೋಗ ಕೋರಿ ಚಳುವಳಿ ನಡೆಸಿದ್ದರು.

ಇ) ಹಾಗಿದ್ದಲ್ಲಿ ಇವರುಗಳಿಗೆ ಯಾವಾಗ ಉದ್ಯೋಗ ನೀಡಲಾಗುವುದು?

ಸರ್ಕಾರವು ಸಿ ಮತ್ತು ಡಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಯೋಜನಾ ನಿರ್ವಸಿತರಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು ಸರ್ಕಾರಿ ಆದೇಶ ದಿನಾಂಕ 23.11.2000 ದಲ್ಲಿ ಕಲ್ಪಿಸಿರುತ್ತದೆ. ರಾಜ್ಯ ಸರ್ಕಾರದ ಎಲ್ಲಾ ಸಂಸ್ಥೆಗಳು ಉದ್ದಿಮೆಗಳು, ನಿಗಮಗಳು, ಮಂಡಳಿಗಳು, ಸರ್ಕಾರದಿಂದ ಅನುದಾನ ಪಡೆಯುವ ಖಾಸಗೀ ಸಂಸ್ಥೆಗಳಲ್ಲಿನ ನೇರ ನೇಮಕಾತಿಯಲ್ಲಿಯೂ ಸಹ ಈ ಸಮತಲ ಮೀಸಲಾತಿ ಅನ್ವಯಿಸಲು ಸೂಕ್ತ ಅವಕಾಶಗಳನ್ನು ಅಳವಡಿಸಿ ಕೊಳ್ಳಬೇಕೆಂದು ದಿನಾಂಕ 28.7.2001 ರ ಸುತ್ತೋಲೆಯಲ್ಲಿ ಸೂಚನೆ ನೀಡಲಾಗಿರುತ್ತದೆ. ಇದರಿಂದ ಚಕ್ರಾ – ವರಾಹಿ –ಸಾವೆಹಕ್ಲು ಯೋಜನೆಗಳ ಮುಳುಗಡೆ ಸಂತ್ರಸ್ಥರೂ ಸೇರಿದಂತೆ ಯೋಜನಾ – ನಿರ್ವಸಿತರು ಈ ಮೀಸಲಾತಿ ಅವಕಾಶಗಳನ್ನು ಉದ್ಯೋಗ ಪಡೆಯುವಲ್ಲಿ ಬಳಸಿಕೊಳ್ಳಬೇಕು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: (498)310
ಸದಸ್ಯರ ಹೆಸರು	: ಶ್ರೀ ಕಿಮ್ಮನೆ ರತ್ನಾಕರ್ [ತೀರ್ಥಹಳ್ಳಿ]
ಉತ್ತರಿಸುವ ಸಚಿವರು	: (ಶ್ರೀ ಅರವಿಂದ ಲಿಂಬಾವಳಿ)
	: ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ಕಳೆದ ಸಾಲಿನಲ್ಲಿ ಮತ್ತು ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಸಲಾದ ಪ್ರಥಮ ದರ್ಜೆ(ಪದವಿ) ಕಾಲೇಜುಗಳ ಸಂಖ್ಯೆ ಎಷ್ಟು;

ಕಳೆದ ಸಾಲಿನಲ್ಲಿ ಎಂದರೆ 2007-08ನೇ ಸಾಲಿಗೆ 167 ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಳನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಎಂದರೆ 2008-09ನೇ ಸಾಲಿಗೆ ಯಾವುದೇ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ.

ಆ. ಈ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ. ಉಪನ್ಯಾಸಕರ ಮತ್ತು ಕೊಠಡಿಗಳ ಕೊರತೆಯನ್ನು ನೀಗಿಸಲು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಉದಾ: ತೀರ್ಥಹಳ್ಳಿ ಸರ್ಕಾರಿ ಪದವಿ ಕಾಲೇಜು);

ಈ ರೀತಿ ಯಾವ ದೂರುಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ. ಈ ವಸೂಲಾತಿಯನ್ನು ನಿಲ್ಲಿಸಲು ಮತ್ತು ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಸದಾಗಿ ಪ್ರಾರಂಭಿಸಲಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು 2007-08ನೇ ಸಾಲಿಗೆ ಕಟ್ಟಡಕ್ಕಾಗಿ 50.00ಕೋಟಿರೂಗಳನ್ನು ಒದಗಿಸಿದ್ದು, ನಿವೇಶನ ಲಭ್ಯವಿರುವಂತಹ ಕಾಲೇಜುಗಳಿಗೆ ಕಟ್ಟಡ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡಗಳನ್ನು ಒದಗಿಸಲು ನಬಾರ್ಡ್ ಅನುದಾನದ ಆರ್.ಐ.ಡಿ.ಎಫ್-13ರಡಿ 50.00ಕೋಟಿರೂಗಳನ್ನು ಒದಗಿಸಿದ್ದು, ಈ ಸಾಲಿನಿಂದ ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ತೀರ್ಥಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2007-08ನೇ ಸಾಲಿನಿಂದ ಪ್ರಾರಂಭಿಸಲಾಗಿದ್ದು, ಕಟ್ಟಡ ನಿರ್ಮಾಣಕ್ಕಾಗಿ 75.00ಲಕ್ಷರೂಗಳನ್ನು ಒದಗಿಸಲಾಗಿತ್ತು. ಆದರೆ ನಿವೇಶನ ಕೊರತೆಯಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ನಿವೇಶನ ದೊರೆತ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸದರಿ ಕಾಲೇಜಿನ ಕಚೇರಿ ವೆಚ್ಚಕ್ಕೆ 35,000/-ರೂಗಳನ್ನು ಗ್ರಂಥಾಲಯ ಪುಸ್ತಕಗಳಿಗಾಗಿ 1.35ಲಕ್ಷರೂಗಳನ್ನು, ಪೀಠೋಪಕರಣ ಮತ್ತು ಪ್ರಯೋಗಾಲಯ ಉಪಕರಣಗಳಿಗಾಗಿ ತಲಾ 1.50ಲಕ್ಷರೂಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ 17 ಡೆಸ್ಕ್‌ಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (329)311
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ.ಕೆ.ಎಂ. (ಕಡೂರು)
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)
: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ರಾಜ್ಯದಲ್ಲಿ 29 ವರ್ಷ ದಾಟಿದ ಪದವೀಧರರ ಸಂಖ್ಯೆ ಎಷ್ಟು; ಪ್ರಾಥಮಿಕ ಶಾಲೆಗಳಲ್ಲಿ 29 ವರ್ಷ ದಾಟಿದ ಟಿ.ಸಿ.ಹೆಚ್ ಮಾಡಿದವರಿಗೆ ಆದ್ಯತೆ ನೀಡಿ ನೇಮಕಾತಿ ಮಾಡಲಾಗಿದೆಯೇ; ಬಿ.ಎಡ್ ಮಾಡಿದ 29 ವರ್ಷ ಮೀರಿದ ಪದವೀಧರರಿಗೆ ಪ್ರೌಢಶಾಲೆಯಲ್ಲಿ ನೇಮಕಾತಿ ಮಾಡಲು ಸರ್ಕಾರ ತೀರ್ಮಾನಿಸಿದೆಯೇ; ಹಾಗಿದ್ದಲ್ಲಿ ಯಾವಾಗ ನೇಮಕಾತಿ ಮಾಡಲಾಗುವುದು; ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

- ರಾಜ್ಯದಲ್ಲಿ 29 ವರ್ಷ ದಾಟಿದ ಪದವೀಧರರ ಸಂಖ್ಯೆಯ ವಿವರ ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.
- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 29 ವರ್ಷ ದಾಟಿದ 2254 ಹುದ್ದೆಗಳಿಗೆ ಟಿ.ಸಿ.ಎಚ್ ಮಾಡಿದವರಿಗೆ ಆದ್ಯತೆ ನೀಡಿ ನೇಮಕಾತಿ ಮಾಡಲಾಗುತ್ತಿದೆ.
- ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಾಗಿ ಈ ಕೆಳಕಂಡ ಕನಿಷ್ಟ ಮತ್ತು ಗರಿಷ್ಠ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ:-

  ಕನಿಷ್ಟ ವಯೋಮಿತಿ – 20ವರ್ಷಗಳು
  ಗರಿಷ್ಠ ವಯೋಮಿತಿ:-
  ಪರಿಶಿಷ್ಟ ಜಾತಿ/ಪಂಗಡ – 45 ವರ್ಷಗಳು
  ಹಿಂದುಳಿದ ವರ್ಗಗಳು – 43 ವರ್ಷಗಳು
  ಇತರರಿಗೆ – 40 ವರ್ಷಗಳು.
- ಮೇಲೆ ಸೂಚಿಸಿರುವ ವಯೋಮಿತಿಯನ್ನು ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಪಾಲಿಸುತ್ತಿರುವುದರಿಂದ ಬಿ.ಇಡಿ ಮಾಡಿದ 29 ವರ್ಷ ಮೀರಿದ ಪದವೀಧರರಿಗೆ ಪ್ರೌಢಶಾಲೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಮಾಡುವ ಪ್ರಸ್ತಾವ ಇರುವುದಿಲ್ಲ.

ಆ) 2008-09ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

2008-09ನೇ ಸಾಲಿಗೆ ಸಂಬಂಧಿಸಿದಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಮಾಹಿತಿಯನ್ನು ವಿಭಾಗೀಯ ಸಹನಿರ್ದೇಶಕರಿಂದ ಪಡೆಯಲಾಗುತ್ತಿದೆ. ಮಾಹಿತಿ ಬಂದ ನಂತರ ಶಿಕ್ಷಕರನ್ನು ನೇಮಕ ಮಾಡಲಾಗುವುದು.

ಇ) 2008-09ನೇ ಸಾಲಿನಲ್ಲಿ ನೇಮಕಾತಿ ಮಾಡಲಾಗಿರುವ ಸಂಖ್ಯೆ ಎಷ್ಟು (ವಿವರ ನೀಡುವುದು);

ಈ) PCM/CBZ (ಪಿಸಿಎಂ/ಸಿಬಿಝುಡ್) ಆದವರಿಗೆ ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಿದಂತೆ ಶಾಲಾ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಲು ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಯಾವಾಗ ನೇಮಕ ಮಾಡಲಾಗುವುದು;

- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರು ಇರುತ್ತಾರೆ.
- ಸರ್ಕಾರಿ ಪ್ರೌಢಶಾಲೆಗಳಿಗೆ ಪಿಸಿಎಂ ಮತ್ತು ಸಿಬಿಝುಡ್ ಶಿಕ್ಷಕರನ್ನು ಸಹ ನೇಮಕ ಮಾಡಲಾಗುತ್ತಿದೆ. ಸರ್ವ ಶಿಕ್ಷಣ ಅಭಿಯಾನದಡಿ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ (8ನೇ ತರಗತಿ) 5356 ಪಿಸಿಎಂ ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ.

ಉ) ಸರ್ಕಾರ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜುಗಳನ್ನು ನೂತನವಾಗಿ ಆರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರಗಳೇನು (ವಿವರ ನೀಡುವುದು);

- ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಬೇಡಿಕೆ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು.
- ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

ಊ) ನೂತನ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ನೂತನ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (330)312
2) ಸದಸ್ಯರ ಹೆಸರು : ಶ್ರೀ.ಕೃಷ್ಣಮೂರ್ತಿ ಕೆ.ಎಂ.
3) ಉತ್ತರಿಸುವ ಸಚಿವರು : (ಶ್ರೀ ರೇವುನಾಯಕ್ ಬೆಳಮಗಿ)
: ಮಾನ್ಯ ಪಶುಸಂಗೋಪನೆ ಸಚಿವರು

ಅ) ಅಮೃತಮಹಲ್ ಕಾವಲ್ ನಲ್ಲಿ ಅನೇಕರು ಅತಿಕ್ರಮ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಹೌದು. ಅಮೃತಮಹಲ್ ಕಾವಲಿನಲ್ಲಿ ಅತಿಕ್ರಮ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಗಿದ್ದಲ್ಲಿ ಇದನ್ನು ರಕ್ಷಿಸಲು ತೆಗೆದುಕೊಂಡ ಕ್ರಮಗಳೇನು

ಇ) ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ ಹಿಂದೆ ಹಲವು ಬಾರಿ ಅಮೃತ ಮಹಲ್ ಕಾವಲ್ ಪ್ರದೇಶದಲ್ಲಿ ಉಂಟಾಗಿರುವ ಒತ್ತುವರಿ ಹಾಗೂ ಬಗರು ಸಾಗುವಳಿ ತೆರವುಗೊಳಿಸಿ ಕೊಡಲು ಕಂದಾಯ ಇಲಾಖೆ ಹಾಗೂ ಆರಕ್ಷಕ ಇಲಾಖೆಗೆ ಕೋರಿಕೊಂಡ ಪ್ರಕಾರ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಅವರ ಪತ್ರ ಸಂಖ್ಯೆ ಕಂ.ಇ:40/ಸಿ.ಜಿ.ಪಿ/2006 ದಿನಾಂಕ 06-09-2006ರ ಆದೇಶದಂತೆ ಕಂದಾಯ ಇಲಾಖೆ ಹಾಗೂ ಪಶು ಪಾಲನಾ ಇಲಾಖೆಯ ಜಂಟಿ ಸಹಯೋಗದಲ್ಲಿ ಅಮೃತಮಹಲ್ ಕಾವಲುಗಳ ಒತ್ತುವರಿ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಹಾಸನ, ಮಂಡ್ಯ, ತುಮಕೂರು, ಚಿತ್ರದುರ್ಗ, (ಹೊಳಲ್ಕೆರೆ ತಾಲ್ಲೂಕು ಹೊರತುಪಡಿಸಿ) ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿನ ಅಮೃತಮಹಲ್ ಕಾವಲುಗಳ ಒತ್ತುವರಿ ಸಮೀಕ್ಷಾ ವರದಿ ಬಂದಿರುವುದಿಲ್ಲ.

ಈ ಎಲ್ಲಾ ಕಾವಲುಗಳ ಒತ್ತುವರಿ ಸಮೀಕ್ಷಾ ವರದಿ ಬಂದ ನಂತರ ಈ ರೀತಿಯ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು ಸಂಖ್ಯೆ 17954/2001 ರ ರೀತ್ಯಾ ಅಮೃತಮಹಲ್ ಕಾವಲುಗಳಲ್ಲಿನ ಒತ್ತುವರಿಯನ್ನು ತೆರವುಗೊಳಿಸಲು ಆದೇಶವಿರುವುದರಿಂದ ಒತ್ತುವರಿ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಅಂತಿಮ ವರದಿ ಬಂದ ನಂತರ ಒತ್ತುವರಿ ತೆರವುಗೊಳಿಸಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಬೇಕಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (494)313
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು),
ಉತ್ತರಿಸುವ ಸಚಿವರ ಹೆಸರು : (ಶ್ರೀ ಎಸ್.ಎಂ.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ವಸತಿ ಯೋಜನಾ ಸೌಲಭ್ಯ ಕಲ್ಪಿಸಲು ಮಹಿಳಾ ಅಭ್ಯರ್ಥಿಗಳ ಹೆಸರಿನಲ್ಲಿ ಖಾತೆ ಇರಬೇಕೆಂದು ಸರ್ಕಾರದ ಆದೇಶವಿದೆಯೆ; ಹಾಗಿದ್ದಲ್ಲಿ ಆದೇಶದ ಪ್ರತಿ ನೀಡುವುದು;

ಹೌದು (ಪ್ರತಿ ಲಗತ್ತಿಸಿದೆ).

ಆ) ಕೇಂದ್ರ: ರಾಜ್ಯ ಸರ್ಕಾರವು ಶೇ33 ಮಹಿಳಾ ಮೀಸಲಾತಿ ನೀಡುತ್ತಿರುವಾಗ, ಮಹಿಳಾ ಫಲಾನುಭವಿ ಹೆಸರಿನಲ್ಲಿ ಕಡ್ಡಾಯ ಖಾತೆ ಇರಬೇಕೆಂಬ ನಿಯಮಾವಳಿಗೆ ಅರ್ಥವೇನು;

ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ.33ರಷ್ಟು ಮಹಿಳಾ ಮೀಸಲಾತಿ ನಿಗದಿಪಡಿಸಿರುವುದು, ನೇಮಕಾತಿ ಮತ್ತು ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದ್ದಾಗಿದ್ದು, ವಸತಿ ಯೋಜನೆಗೆ ಇದು ಅನ್ವಯಿಸುವುದಿಲ್ಲ.

ಇ) ಹಾಗಿದ್ದಲ್ಲಿ, ಶೇ. 33 ಮಹಿಳಾ ಮೀಸಲಾತಿ ನೀಡಿ, ಉಳಿದ ಫಲಾನುಭವಿಗಳು ಗಂಡಸರಿಗೆ ವಸತಿ ಸೌಲಭ್ಯ ನೀಡುವಂತೆ, ನಿಯಮಾವಳಿಗಳನ್ನು ಸಡಿಲಗೊಳಿಸಿ ಆದೇಶ ನೀಡಲಾಗುವುದೇ;

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಈ ಕಾರಣಕ್ಕಾಗಿ ಅಲೆಮಾರಿ ಜನಾಂಗದವರ ಯೋಜನಾ ಸೌಲಭ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇಲ್ಲ.

ಉ) ಹಾಗಿದ್ದಲ್ಲಿ, ಅಲೆಮಾರಿ ಜನಾಂಗದವರಿಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 100 ಮನೆ ಹಾಗೂ 500 ನಿವೇಶನ ಕಾರ್ಯಕ್ರಮವನ್ನು ಗಾಂಧಿಜಯಂತಿ – 2008 ರಂದು ಅನುಷ್ಠಾನಗೊಳಿಸಲಾಗುವುದೇ;

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಊ) ಈ ಬಗ್ಗೆ ಸರ್ಕಾರ ಪ್ರತ್ಯೇಕ ಗುರಿ ನಿಗದಿ ಮಾಡಿ ಹಣ ಮಂಜೂರು ಮಾಡುವುದೇ?

ಅಲೆಮಾರಿ ಜನಾಂಗದವರನ್ನು ಸರ್ಕಾರವು ವಿಶೇಷ ವರ್ಗದಡಿ ಸೇರಿಸಿರುವುದರಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರತಿ ವರ್ಷ ಗುರಿ ನಿಗದಿಪಡಿಸಿ ಅನುದಾನ ಬಿಡುಗಡೆ ಮಾಡುತ್ತಿದೆ.

ಕರ್ನಾಟಕ ಸರ್ಕಾರ

ವಇ.208 ಹೆಚ್‌ಎಹೆಚ್ 2001

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 11/12/2001

<u>ಸುತ್ತೋಲೆ</u>

ವಿಷಯ: ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಲ್ಲಿ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ

ಉಲ್ಲೇಖ: ಆದೇಶ ಸಂ: ವಇ 55 ಹೆಚ್‌ಎಎಸ್ 2000 ದಿನಾಂಕ:3.7.2000.

ಸರ್ಕಾರವು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೀವ್ರವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸರ್ಕಾರದ ವಿವಿಧ ವಸತಿ

ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕು ಪತ್ರಗಳನ್ನು ಮಹಿಳಾ ಸಂಘಗಳ ಹೆಸರಿನಲ್ಲೇ ವಿತರಿಸುವಂತೆ ಈಗಾಗಲೇ ತಿಳಿಸಲಾಗಿದೆ.

ಈ ಬಗ್ಗೆ ದಿನಾಂಕ: 9.11.2001ರಂದು ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ ಬಗ್ಗೆ ಜರುಗಿದ ಸಭೆಯಲ್ಲಿ ಈ ಸರ್ಕಾರಿ ಆದೇಶವನ್ನು ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಡಿ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡುವಾಗ ಹೆಚ್ಚಾಗಿ ಪಾಲಿಸಬೇಕೆಂದು ತೀರ್ಮಾನಿಸಲಾಗಿದೆ. ಅದರಂತೆ ಈ ಸದರಿ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಎಂದಲೇ ಕುಟುಂಬದ ಮಹಿಳಾ ಮುಖ್ಯಸ್ಥರನ್ನೇ/ಸದಸ್ಯರನ್ನೇ ಫಲಾನುಭವಿಗಳೆಂದು ಆಯ್ಕೆ ಮಾಡಬೇಕೆಂದು ಹಾಗೂ ಈಗ ಅವರನ್ನು ಆಯ್ಕೆ ಮಾಡಿದ ಕಡೆ ಅವರನ್ನು ಬದಲಾಯಿಸಿ ಮಹಿಳಾ ಸದಸ್ಯರನ್ನೇ ಆಯ್ಕೆ ಮಾಡಿ ಅವರ ಹೆಸರಿನಲ್ಲಿ ಹಕ್ಕುಗಳನ್ನು ನೀಡಲು ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

(ಬಿ.ಎಸ್.ಜಾಪಾಲಿ)
ಪೀಠಾಧಿಕಾರಿ-II.
ವಸತಿ ಇಲಾಖೆ.

ಅಧಿಕಾರಿಗಳಿಗೆ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು
,ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ, ಬೆಂಗಳೂರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ಮುಖ್ಯಸ್ಥರು, ಹುಡ್ಕೋ, ಮಣಿಪಾಲ್ ಸೆಂಟರ್, ಬೆಂಗಳೂರು
ನಿರ್ದೇಶಕರು(ಯೋಜನೆ) ಆಂತರಿಕ ಆರ್ಥಿಕ ಸಲಹೆಗಾರರು, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ
ಇಲಾಖೆ ವೆಚ3
ಕಲ್ಯಾಣ ಇಲಾಖೆ
ಸಮಾಜಕಲ್ಯಾಣ ಇಲಾಖೆ/ಗಿರಿಜನ ಕಲ್ಯಾಣ ಇಲಾಖೆ, ಬೆಂಗಳೂರು
ನಗರ ಆಪ್ತ ಕಾರ್ಯದರ್ಶಿಗಳು
ವಸತಿ ಇಲಾಖೆರವರ ಆಪ್ತ ಸಹಾಯಕರುಗಳಿಗೆ
ಕಾರ್ಯದರ್ಶಿ ವಸತಿ ಇಲಾಖೆರವರ ಆಪ್ತ ಸಹಾಯಕರುಗಳಿಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (285)315
ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಉತ್ತರಿಸುವವರು : (ಶ್ರೀ.ಕು.ಶೋಭಾ ಕರಂದ್ಲಾಜೆ)
: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನೈರ್ಮಲ್ಯ ಸುಧಾರಣೆ, ಪರಿಸರ ಕಾಪಾಡುವ ದೃಷ್ಟಿಯಿಂದ ಸರ್ಕಾರಿ ಜಾಗದ ಕೊರತೆ ಇದ್ದು, ಒಳಚರಂಡಿ, ಶುಚಿತ್ವದ ಬಗ್ಗೆ ಸಮಸ್ಯೆಯ ಬಗ್ಗೆ ಯಾವ ಯೋಜನೆ ಕೈಗೊಳ್ಳಲಾಗಿದೆ.

ಗ್ರಾಮೀಣ ಪ್ರದೇಶಗಳ ನೈರ್ಮಲೀಕರಣಕ್ಕಾಗಿ ಹಾಗೂ ಬಯಲು ಮಲ ವಿಸರ್ಜನೆಯಂತ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವ ಉದ್ದೇಶದಿಂದ ಪ್ರಸ್ತುತ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಸಂಪೂರ್ಣ ಸ್ವಚ್ಚತಾ ಆಂದೋಲನ ಕಾರ್ಯಕ್ರಮವನ್ನು ಇಡೀ ರಾಜ್ಯದ್ಯಾಂತ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮ ಮಂಚಾಯಿತಿ ವ್ಯಾಪ್ತಿಯಲ್ಲಿ ನೈರ್ಮಲ್ಯ ಸುಧಾರಣೆಗಾಗಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕಾಗಿ ಬಿ.ಪಿ.ಎಲ್ ಕುಟುಂಬಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ಶಾಲಾ ಶೌಚಾಲಯಗಳು, ಅಂಗನವಾಡಿ ಶೌಚಾಲಯಗಳು ಹಾಗೂ ಸಮುದಾಯ ಶೌಚಾಲಯಗಳನ್ನು ಯೋಜನೆಯಡಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಜಾಗದ ಸಮಸ್ಯೆ ಇರುವಲ್ಲಿ ಸಮುದಾಯ ಶೌಚಾಲಯಗಳ ನಿರ್ಮಾಣ ಮಾಡಲಾಗುವುದು.

ಒಳಚರಂಡಿ ಯೋಜನೆಯ ಅನುಷ್ಠಾನವು ಸಂಪೂರ್ಣ ಸ್ವಚ್ಚತಾ ಆಂದೋಲನದಡಿಯಲ್ಲಿ ಬರುವುದಿಲ್ಲ.

ಆ) ಗ್ರಾಮ ಪಂಚಾಯತ್‌ಗಳಲ್ಲಿ ಸಂಪನ್ಮೂಲ ಕೊರತೆ ಇರುವುದರಿಂದಾಗಿ, ಈ ಯೋಜನೆಗೆ ತಾಂತ್ರಿಕ ಹಾಗೂ ಪರಿಸರದ ರಕ್ಷಣೆಯ ಪೂರಕ ವ್ಯವಸ್ಥೆಗೆ ಪ್ರತ್ಯೇಕ ಅನುದಾನ ಬಿಡುಗಡೆ ಮಾಡಲಾಗುವುದೇ?

ಸಂಪೂರ್ಣ ಸ್ವಚ್ಚತಾ ಆಂದೋಲನದಡಿಯಲ್ಲಿ ಹೆಚ್.ಆರ್.ಡಿ ಹಾಗೂ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಯ ಅನುದಾನದಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ವಿವಿಧ ಹಂತಗಳಲ್ಲಿ ಶುಚಿತ್ವ ಶಿಕ್ಷಣ, ಶೌಚಾಲಯ ನಿರ್ಮಾಣಕ್ಕೆ ತಾಂತ್ರಿಕತೆ ಅರಿವು, ಗ್ರಾಮ ಮಟ್ಟದಲ್ಲಿ ಗೋಡೆ ಬರಹಗಳು, ಬೀದಿನಾಟಕ ಹಾಗೂ ಪರಿಸರ ರಕ್ಷಣೆ ಕುರಿತು ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ನಿರ್ವಹಣೆಯ ಬಗ್ಗೆ ತರಬೇತಿ ನೀಡಲಾಗುವುದು. ಗ್ರಾಮ ಪಂಚಾಯತ್ ಮಟ್ಟದಲ್ಲಿ ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ತ್ಯಾಜ್ಯ ವಸ್ತುಗಳ ನಿರ್ವಹಣೆಯು ಅತ್ಯವಶ್ಯಕವಾಗಿದ್ದು ಸಂಪೂರ್ಣ ಸ್ವಚ್ಚತಾ ಆಂದೋಲನದಡಿಯಲ್ಲಿ ಒಟ್ಟು ಯೋಜನಾ ಗಾತ್ರದ ಶೇ.10 ರಷ್ಟು ಅನುದಾನವನ್ನು ಮೀಸಲಿಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (287)316
ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು).
ಉತ್ತರಿಸಲಿರುವ ಸಚಿವರ : (ಶ್ರೀ.ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು.

ಅ) ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲೂರು ಪರಿಸರದಲ್ಲಿ, ಮೆ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದ ಪ್ರಾರಂಭದ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಅನುಮತಿ ನೀಡಿದೆಯೇ, ಹಾಗಿದ್ದಲ್ಲಿ, ಅದು ಈಗ ಯಾವ ಹೆಸರಿನಲ್ಲಿದೆ;

ಮೆ : ನಾಗಾರ್ಜುನ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹಾಗು ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಹಾಗೂ ಪರಿಸರ ಸಂರಕ್ಷಣೆ ಕಾಯ್ದೆಗಳಡಿಯಲ್ಲಿ ಸಮ್ಮತಿ ನೀಡಿರುತ್ತದೆ.

ಕರ್ನಾಟಕ ರಾಜ್ಯವು ಪತ್ರ ದಿನಾಂಕ: 9.11.1998ರಂದು ಮೆ: ನಾಗಾರ್ಜುನ ಪವರ್ ಕಾರ್ಪೊರೇಷನ್ ಲಿಮಿಟೆಡ್ ರವರಿಗೆ 1015 ಮೆ. ವ್ಯಾ. ಸಾಮರ್ಥ್ಯದ ಶಾಖೋತ್ಪನ್ನ ಘಟಕವನ್ನು ಸ್ಥಾಪಿಸಲು ವಿದ್ಯುತ್ ವಿತರಣಾ ಕಾಯ್ದೆ 1948ರ ಕಲಂ 18(A) ಪ್ರಕಾರ ಅನುಮತಿ ನೀಡಿದೆ ಹಾಗೂ ಕೇಂದ್ರ ವಿದ್ಯುತ್ ಪ್ರಾಧಿಕಾರವು ದಿನಾಂಕ 29.04.1999 ರಂದು ಟಿ.ಇ.ಸಿ. ನೀಡಿದೆ. ಸಿ.ಇ.ಆರ್.ಸಿ ಯ ಆದೇಶ ದಿನಾಂಕ 25.10.2005 ಮೂಲಕ ಯೋಜನೆ ವೆಚ್ಚಕ್ಕೆ ತಾತ್ವಿಕ ಅನುಮೋದನೆ ನೀಡಿದೆ.

ದಿನಾಂಕ 8.2.2008 ರಿಂದ ಮೆ : ನಾಗಾರ್ಜುನ ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯ ಹೆಸರನ್ನು ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್ ಎಂದು ಬದಲಾಯಿಸಲಾಗಿದೆ.

ಆ ಈ ಯೋಜನೆಗೆ ಎಂದಿನಿಂದ ಸರ್ಕಾರ ಅನುಮತಿ ನೀಡಿದೆ. ಈ ಯೋಜನೆಯಲ್ಲಿ ಸ್ಥಳೀಯ ಜನರನ್ನು ಹಾಗೂ ಜನಪ್ರತಿನಿದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಿದೆಯೇ, ಈ ಬಗ್ಗೆ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿ ಆಕ್ಷೇಪ ವಿದ್ದರೂ ಯಾವ ನೆಲೆಯಲ್ಲಿ ಈ ಘಟಕದಲ್ಲಿ ಆರಂಭಿಕ ಜಾಗ ವಶೀಕರಣ ಆಗುತ್ತಿದೆ;

ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಸಂರಕ್ಷಣಾ ಕಾಯ್ದೆಗಳಡಿಯಲ್ಲಿ ಪರಿಸರ ವಿಮೋಚನೆಯನ್ನು ದಿನಾಂಕ 20.3.1997 ರಲ್ಲಿ ನೀಡಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ 19.3.1996 ರಂದು ತಾತ್ಕಾಲಿಕವಾಗಿ ಉದ್ದೇಶಿತ ಯೋಜನೆಯ ಸ್ಥಳ/ನಿವೇಶನಕ್ಕೆ ನಿರಾಪೇಕ್ಷಣಾ ಪತ್ರವನ್ನು ಹಾಗು ದಿನಾಂಕ 31.8.2005 ರಂದು ಜಲ (ಮಾಲಿನ್ಯ ನಿಯಂತ್ರಣ ಹಾಗು ನಿವಾರಣೆ) ಕಾಯ್ದೆ, 1974 ಹಾಗು ವಾಯು (ಮಾಲಿನ್ಯ ನಿಯಂತ್ರಣ ಹಾಗು ನಿವಾರಣೆ) ಕಾಯ್ದೆ, 1981 ರ ಅಡಿಯಲ್ಲಿ ಸ್ಥಾಪನಾ ಸಮ್ಮತಿ ಪತ್ರವನ್ನು ನೀಡಿರುತ್ತದೆ.

ಈ ಯೋಜನೆಯ ವಿರುದ್ಧ ಜನ ಜಾಗೃತಿ ಸೇವಾ ಸಂಸ್ಥೆ ಎಂಬ ಸ್ವಯಂ ಸೇವಾ ಸಂಸ್ಥೆಯೂ ಹಾಗು ಕೆಲವು ಭೂನಿರ್ವಾಹಿತರು, ದೇವಸ್ಥಾನಗಳು ಹಾಗು ಒಂದು ಚರ್ಚ್ ರಿಟ್ ಅರ್ಜಿಗಳನ್ನು ದಾಖಿಲು ಮಾಡಿರುತ್ತದೆ. ಈ ರಿಟ್ ಅರ್ಜಿಗಳು ವಿಚಾರಣಾ ಹಂತದಲ್ಲಿದ್ದು ನ್ಯಾಯಾಲಯವು ಯಾವುದೇ ಮಧ್ಯಂತರ ಆದೇಶಗಳನ್ನು ಹೊರಡಿಸಿರುವುದಿಲ್ಲ.

ಈ ಯೋಜನೆಯ ಉದ್ದೇಶಕ್ಕೆ ಭೂಸ್ವಾಧೀನ ಪಡಿಸುವಾಗ ಕೆ.ಐ.ಎ.ಡಿ. ಕಾಯ್ದೆ ಕಲಂ 28(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಕಲಂ 28(2)ರಡಿ ಭೂಮಾಲಿಕರಿಗೆ ನೋಟೀಸ್ ಜಾರಿ ಮಾಡಿ ಆಕ್ಷೇಪಣೆಯನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಆಕ್ಷೇಪಣೆಗಳನ್ನು ಪರಿಶೀಲಿಸಿ ಯೋಜನೆಯ ಅವಶ್ಯಕತೆಯ ಮೇರೆಗೆ ಕಲಂ 28(4)ರಡಿ ಅಂತಿಮ ಅಧಿಸೂಚನೆ ಹೊರಡಿಸಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಈ ಘಟಕ್ಕೆ ವಶಪಡಿಸಿಕೊಂಡ ಸರ್ಕಾರಿ ಹಾಗೂ ಖಾಸಗಿ ಜಾಗ ಎಷ್ಟು; ಖಾಸಗಿಯವರು ಒಪ್ಪಿಗೆ ಪತ್ರ ನೀಡಲಾಗಿರುವುದೇ;

ಮೆ : ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದ ಯೋಜನೆಗಾಗಿ ಮಂಡಳಿ ವತಿಯಿಂದ ಉಡುಪಿ ತಾಲ್ಲೂಕಿನ ಪಾದಬೆಟ್ಟು, ತೆಂಗ, ಎಲ್ಲೂರು ಹಾಗೂ ಸಾಂತೂರು ಗ್ರಾಮಗಳಲ್ಲಿ 722 ಎಕರೆ 83 ಸೆಂಟ್ಸ್ ಖಾಸಗಿ ಹಾಗೂ 63 ಎಕರೆ 73 ಸೆಂಟ್ಸ್ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 786 ಎಕರೆ 58 ಸೆಂಟ್ಸ್ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಕ್ರಮ ಸಂಖ್ಯೆ	ಗ್ರಾಮ	ವಿಸ್ತೀರ್ಣ
1	ಎಲ್ಲೂರು	512–14
2	ಪಾದಬೆಟ್ಟು	32–99
3	ತೆಂಕ	46–73
4	ಸಂತೂರು	130–97
	ಒಟ್ಟು ಖಾಸಗಿ ಜಮೀನು	**722–83**
1	ಎಲ್ಲೂರು	47–05
2	ತೆಂಕ	16–68

	ಒಟ್ಟು ಸರ್ಕಾರಿ ಜಮೀನು	63–73
	ಒಟ್ಟು ಸ್ವಾಧೀನಪಡಿಸಿದ ಜಮೀನು	**786–56**

ದಿನಾಂಕ 24.8.1996 ರಂದು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ 4ನೇ ಲ್ಯಾಂಡ್ ಆಡಿಟ್ ಕಮಿಟಿ ಸಭೆಯಲ್ಲಿ ನಾಗಾರ್ಜುನ ವಿದ್ಯುತ್ ಕಂಪನಿಗೆ 1330 ಎಕರೆ ಜಮೀನನ್ನು ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ.

ಸದರಿ ಲ್ಯಾಂಡ್ ಅಡಿಟ್ ಕಮಿಟಿಯಲ್ಲಿ ಖಾಸಗಿಯವರಿಂದ ಒಪ್ಪಿಗೆ ಪತ್ರ ಪಡೆಯುವ ಬಗ್ಗೆ ನಿಬಂಧನೆ ವಿಧಿಸಿರಲಿಲ್ಲ.

ಈ ಈ ಪ್ರದೇಶದಲ್ಲಿ ಈಗಾಗಲೇ ಯಾವ ಘಟಕಗಳು ಕೈಗಾರಿಕೆಗಳು ಬರಲು ಅರ್ಜಿ ಸಲ್ಲಿಸಿದ್ದಾರೆ: (ವಿವರ ನೀಡುವುದು)?

ಕೆ.ಐ.ಎ.ಡಿ.ಬಿ. ಯಿಂದ ಈ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಿರುವುದಿಲ್ಲ. ಈ ಪ್ರದೇಶದಲ್ಲಿ ಹಂಚಿಕೆ ಕೋರಿ ಯಾವ ಘಟಕಗಳು ಮಂಡಳಿಗೆ ಅರ್ಜಿ ಸಲ್ಲಿಸಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (288)317
ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಉತ್ತರಿಸುವ ಸಚಿವರ ಹೆಸರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿರುವ ವಸತಿ ರಹಿತರಿಗೆ, ಸರ್ಕಾರ ಎಂದಿನಿಂದ ನಿವೇಶನ ನೀಡಲಾಗುವುದು;

ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿರುವ ನಿವೇಶನ ರಹಿತರಿಗೆ ಸರ್ಕಾರವು ಪ್ರಾರಂಭದಿಂದಲೇ ನಿವೇಶನವನ್ನು ನೀಡುತ್ತಿದೆ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು 2000ದ ಇಸವಿಯಲ್ಲಿ ಪ್ರಾರಂಭವಾಗಿದ್ದು, ಅಂದಿನಿಂದ ಇಂದಿನವರೆಗೆ **1,28,253** ನಿವೇಶನಗಳನ್ನು ನೀಡಲಾಗಿದೆ.

ಆ) ಈಗ ತಾತ್ಕಾಲಿಕ ವ್ಯವಸ್ಥೆಯಲ್ಲಿ ಹಲವಾರು ವರ್ಷಗಳಿಂದ ಮನೆ ಕಟ್ಟಿದವರಿಗೆ ಜಾಗದ ಹಕ್ಕುಪತ್ರ ಯಾವಾಗಿನಿಂದ ನೀಡಲಾಗುವುದು;

ತಾತ್ಕಾಲಿಕ ವ್ಯವಸ್ಥೆಯಲ್ಲಿ ಹಲವಾರು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸವಿರುವ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ವತಿಯಿಂದ ಹಕ್ಕುಪತ್ರಗಳನ್ನು ನೀಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಇ) ಸರಕಾರದ ವಸತಿ ಯೋಜನೆಗಳಾದ ಇಂದಿರಾ ಆವಾಜ್, ಅಂಬೇಡ್ಕರ್ ಮತ್ತು ಆಶ್ರಯ ಇತ್ಯಾದಿ ಮನೆಗಳ ಮೊತ್ತ ದ್ವಿಗುಣಗೊಳಿಸಲಾಗುವುದೇ;

ಈ ತರಹದ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಈ) ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತೀ ಪಂಚಾಯತ್ ವ್ಯಾಪ್ತಿಗೆ ಮನೆಗಳ ಸಂಖ್ಯೆ ಹೆಚ್ಚಿಸಲಾಗುವುದೇ?

ಈ ತರಹದ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: **(289)318**
ಸದಸ್ಯರ ಹೆಸರು	: ಲಾಲಾಜಿ ಆರ್.ಮೆಂಡನ್ (ಕಾಪು)
ಉತ್ತರಿಸುವ ಸಚಿವರು	: (ಶ್ರೀ ಅರವಿಂದ ಲಿಂಬಾವಳಿ)
	: ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ಉಡುಪಿ ಜಿಲ್ಲೆಯ ಕಾಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಹೌದು.

ಆ. ಹಾಗಿದ್ದಲ್ಲಿ, ಹೊಸ ಕಟ್ಟಡದ ನೀಲಿ ನಕ್ಷೆ ತಯಾರಿಸಲಾಗಿದೆಯೇ; ಅದರ ಅಂದಾಜು ವೆಚ್ಚ ಎಷ್ಟು; ಸದರಿ ಕಟ್ಟಡ ಯಾವಾಗ ಪೂರ್ಣಗೊಳ್ಳುವುದು ಮತ್ತು ಯಾವಾಗ ಸ್ಥಳಾಂತರಗೊಳ್ಳುವುದು;

ಸದರಿ ಕಾಲೇಜಿಗೆ ಕಟ್ಟಡವನ್ನು ಒದಗಿಸಲು ನಬಾರ್ಡ್ ಅನುದಾನದ ಆರ್.ಐ.ಡಿ.ಎಫ್ ಯೋಜನೆಯಡಿ 50.00ಲಕ್ಷರೂಗಳ ಸಾಲ ಮಂಜೂರಾಗಿದೆ. ಸದರಿ ಕಾಲೇಜಿಗೆ ನಿವೇಶನ ಲಭ್ಯವಿದ್ದು, ಕಟ್ಟಡ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಲಾಗುವುದು. ಕಟ್ಟಡ ಪೂರ್ಣಗೊಂಡ ನಂತರ ಕಾಲೇಜನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

ಇ. ಉಪನ್ಯಾಸಕರ ಹಾಗೂ ಸಿಬ್ಬಂದಿಗಳ ಕೊರತೆ ಮೂಲಭೂತ ಸೌಲಭ್ಯಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಸದರಿ ಕಾಲೇಜಿಗೆ 10 ಉಪನ್ಯಾಸಕರ ಹುದ್ದೆ ಗಳು ಮಂಜೂರಾಗಿ, 09 ಜನ ಕಾರ್ಯ ನಿರ್ವಹಿಸುತ್ತಿದ್ದಾರೆ. 01 ಹುದ್ದೆ ಖಾಲಿ ಇರುತ್ತದೆ. ಈ ಖಾಲಿ ಹುದ್ದೆಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಬಂದ ನಂತರ ನೇಮಕ ಮಾಡಲಾಗುವುದು. ತಲಾ 01 ಗ್ರಂಥಪಾಲಕರು, ಪ್ರಥಮದರ್ಜೆ, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು, ಅಟೆಂಡರ್ ಕಾರ್ಯ ನಿರ್ವಹಿಸುತ್ತಿರುತ್ತಾರೆ. 01 ಬೆರಳಚ್ಚುಗಾರ, 01 ಅಟೆಂಡರ್ ಮತ್ತು 02 ಪರಿಚಾರಕರ ಹುದ್ದೆಗಳ ಖಾಲಿ ಇರುತ್ತದೆ.

01 ಬೆರಳಚ್ಚುಗಾರ ಹುದ್ದೆಯನ್ನು ಕರ್ನಾಟಕ ಲೋಕ ಸೇವಾ ಆಯೋಗದಿಂದ ಭರ್ತಿ ಮಾಡಲು ಉದ್ದೇಶಿಸಿದ್ದು, ಅಭ್ಯರ್ಥಿಗಳ ಆಯ್ಕೆ ಪಟ್ಟಿ ಬಂದ ನಂತರ ನೇಮಕ ಮಾಡಿಕೊಳ್ಳಲಾಗುವುದು.

ಇತರೆ ಮೂಲಭೂತ ಸೌಲಭ್ಯಗಳಾಗ ಗ್ರಂಥಾಲಯ ಪುಸ್ತಕ, ಪೀಠೋಪಕರಣ, ಜೆರಾಕ್ಸ್ ಯಂತ್ರ, ಫ್ಯಾಕ್ಸ್ ಯಂತ್ರ ಕಛೇರಿ ವೆಚ್ಚಗಳಿಗಾಗಿ ಸುಮಾರು 1,64,000/–ರೂಗಳನ್ನು ಒದಗಿಸಲಾಗಿದೆ. ಅಲ್ಲದೇ ಪ್ರಸ್ತುತ ವರ್ಷದಲ್ಲಿ ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್ ಮೈಸೂರು ಇವರಿಂದ 17 ಡೆಸ್ಕ್‌ಗಳನ್ನು ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ. ಅನುದಾನದ ಲಭ್ಯತೆಯನ್ನು ಆಧರಿಸಿ 2008–09ನೇ ಸಾಲಿಗೆ ಹೆಚ್ಚುವರಿ ಸೌಲಭ್ಯವನ್ನು ಒದಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (282)319
ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)
ಉತ್ತರಿಸುವ ಸಚಿವರ ಹೆಸರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮಂಜೂರಾದ ಆಶ್ರಯ ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಕಳೆದ ಮೂರು ವರ್ಷಗಳಿಂದ ಗ್ರಾಮೀಣ ಆಶ್ರಯ ಯೋಜನೆಯಡಿ 5,66,640 ಹಾಗೂ ನಗರ ಆಶ್ರಯ ಯೋಜನೆಯಡಿ 51,230 ಮನೆಗಳು ಮಂಜೂರಾಗಿದ್ದು, ತಾಲ್ಲೂಕವಾರು ವಿವರ ಅನುಬಂಧ 1 ರಲ್ಲಿ ಲಗತ್ತಿಸಿದೆ.

ಆ) ಈ ಪೈಕಿ ಪೂರ್ಣಗೊಂಡ ಮನೆಗಳೆಷ್ಟು ಹಾಗೂ ಅಪೂರ್ಣಗೊಂಡ ಮನೆಗಳೆಷ್ಟು; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಈ ಪೈಕಿ ಗ್ರಾಮೀಣ ಆಶ್ರಯ ಯೋಜನೆಯಡಿ 3,21,359 ಮನೆಗಳು ಪೂರ್ಣಗೊಂಡಿದ್ದು, 2,45,281 ಮನೆಗಳು ಅಪೂರ್ಣಗೊಂಡಿರುತ್ತದೆ. ನಗರ ಆಶ್ರಯ ಯೋಜನೆಯಡಿ 1,436 ಮನೆಗಳು ಪೂರ್ಣಗೊಂಡಿದ್ದು, 49,794 ಮನೆಗಳು ಅಪೂರ್ಣಗೊಂಡಿರುತ್ತದೆ, ಈ ಪೈಕಿ ಬಹುಪಾಲು ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದಿಲ್ಲ.

ತಾಲ್ಲೂಕವಾರು ವಿವರ ಅನುಬಂಧ–1 ಎ ದಲ್ಲಿ ಲಗತ್ತಿಸಿದೆ.

ಇ) ಹಾಗಿದ್ದಲ್ಲಿ, ಪೂರ್ಣಗೊಳ್ಳದಿರಲು ಕಾರಣಗಳೇನು;

ಗ್ರಾಮೀಣ ಆಶ್ರಯ ಯೋಜನೆಯಡಿ ಮನೆಗಳು ಅಪೂರ್ಣಗೊಳ್ಳಲು ಈ ಕೆಳಗಿನ ಅಂಶಗಳು ಕಾರಣವಾಗಿವೆ.

ಗ್ರಾಮೀಣ ಪ್ರದೇಶ:

1. ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬವಾಗುತ್ತಿರುವುದು.

2. ಫಲಾನುಭವಿಗಳು ಕಡುಬಡವರಾಗಿರುವುದರ ಜೊತೆಗೆ ಕೂಲಿಗಾಗಿ ವಲಸೆ ಹೋಗುತ್ತಿದ್ದು ನಿಗದಿತ ಅವಧಿಯಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳದಿರುವುದು.

ನಗರ ಆಶ್ರಯ:

ನಗರ ಆಶ್ರಯ ಯೋಜನೆಯಡಿ ನೀಡಲಾದ ಗುರಿಯಲ್ಲಿ ಶೇಕಡ 5% ಮನೆಗಳು ಪೂರ್ಣಗೊಂಡಿದ್ದು ಶೇಕಡ 13% ರಷ್ಟು ಮನೆಗಳು ಪ್ರಗತಿಯಲ್ಲಿರುತ್ತವೆ. ಈ ಯೋಜನೆಯಡಿ ಬಡಾವಣೆ ನಿರ್ಮಿಸಿ ನಿವೇಶನ ರಹಿತರಿಗೆ ವಸತಿ ಸೌಕರ್ಯ ನೀಡಲು ಅಗತ್ಯ ಭೂಮಿಯು ಸರ್ಕಾರದ ಮಾರ್ಗಸೂಚಿ ಬೆಲೆಗೆ ದೊರಕುತ್ತಿಲ್ಲವಾದ್ದರಿಂದ ಹಾಗೂ ಕಟ್ಟಡ ಸಾಮಾಗ್ರಿಗಳ ಬೆಲೆ ಹೆಚ್ಚಾಗಿದ್ದು ನೀಡಲಾಗುವ ಅನುದಾನ ರೂ. 25,000/- ದಲ್ಲಿ ಉತ್ತಮ ಮನೆಯ ನಿರ್ಮಾಣ ಅಸಾಧ್ಯವಾಗಿರುವುದರಿಂದ ಸದರಿ ಯೋಜನೆಯಡಿ ಕೆಲವು ಕಡೆಗಳಲ್ಲಿ ನೀಡಲಾದ ಗುರಿಯನ್ನು ಸಾಧಿಸದಿರಲು ಕಾರಣವಾಗಿದೆ.

ಈ) ರಾಜ್ಯದಲ್ಲಿನ ನಿರಾಶ್ರಿತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು);

2003 ರಲ್ಲಿ ನಿಗಮವು ನಡೆಸಿದ ವಸತಿರಹಿತರ ಮತ್ತು ನಿವೇಶನರಹಿತರ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ 2598602 ನಿರಾಶಿತರಿದ್ದು, ಅದರಲ್ಲಿ ಸಮೀಕ್ಷೆಯ ನಂತರ ಒಟ್ಟು 1092795 ಮನೆಗಳನ್ನು ಒದಗಿಸಿದ್ದು, ಇನ್ನು 1505807 ನಿರಾಶ್ರಿತರು ಬಾಕಿ ಇರುತ್ತವೆ. ವಿವರ ಕೆಳಗಿನಂತಿದೆ:

ಪ್ರದೇಶ	ವಸತಿ ರಹಿತರು	ನಿವೇಶನ ರಹಿತರು	ಒಟ್ಟು	2003ರಿಂದ ಇಲ್ಲಿಯವರೆಗೆ ವಿತರಿಸಿದ ಮನೆಗಳು	ಸಮೀಕ್ಷೆ ಪ್ರಕಾರ ಬಾಕಿ
ಗ್ರಾಮೀಣ	1226345	1042986	2269331	1060787	1208544
ನಗರ	73444	255827	329271	32008	297263
ಒಟ್ಟು	**1299789**	**1298813**	**2598602**	**1092795**	**1505807**

ತಾಲ್ಲೂಕವಾರು ವಿವರ ಅನುಬಂಧ 2 ರಲ್ಲಿ ಲಗತ್ತಿಸಿದೆ.

ಉ) ಈ ನಿರಾಶ್ರಿತರಿಗೆ ವಸತಿ ಸೌಲಭ್ಯ ಒದಗಿಸುವ ಆಲೋಚನೆ ಸರ್ಕಾರದಲ್ಲಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇದೆ.

ಸದರಿ ನಿರಾಶ್ರಿತರಿಗೆ ಸರ್ಕಾರವು ವಿವಿಧ ವಸತಿ ಯೋಜನೆಗಳಡಿಯಲ್ಲಿ ಪ್ರತಿ ವರ್ಷ ನೀಡುವ ಮನೆಗಳ ಗುರಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗುತ್ತಿದೆ. ಹಾಗೂ ಪ್ರಸಕ್ತ ಸಾಲಿನಲ್ಲಿ 3 ಲಕ್ಷ ಮನೆಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (433)320
ಸದಸ್ಯರ ಹೆಸರು : ಶ್ರೀ ನರೇಂದ್ರಬಾಬು ಎನ್.ಎಲ್
ಉತ್ತರಿಸುವವರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ ನಮ್ಮ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆಯಾದ ಹಣ ಎಷ್ಟು;

ನರ್ಮ್ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ರೂ. 6070.42 ಲಕ್ಷಗಳು ಹಣ ಬಿಡುಗಡೆಯಾಗಿರುತ್ತದೆ.

ಆ ಹಾಗಿದ್ದಲ್ಲಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಿಗಾಗಿ ಮಂಡಳಿಗೆ ಬಿಡುಗಡೆಯಾದ ಹಣ ಎಷ್ಟು; (ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು);

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜವಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್‌ನ (JNNURM) ನಗರ ಬಡಜನರಿಗೆ ಮೂಲಸೌಕರ್ಯ (BSUP) ಮತ್ತು ಸಮಗ್ರ ವಸತಿ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ (IHSDP) ಮಂಡಳಿಗೆ ಬಿಡುಗಡೆಯಾದ ಹಣ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವರ್ಷ	ಬಿಎಸ್‌ಯುಪಿ	ಐಹೆಚ್‌ಎಸ್‌ಡಿಪಿ	ಒಟ್ಟು
2005–06	00	00	00
2006–07	4343.67	00	4343.67
2007–08	1062.32	3289.62	4351.94
ಒಟ್ಟು	**5405.99**	**3289.62**	**8695.61**

ಇ ರಾಜ್ಯದಲ್ಲಿ ಕೊಳಚೆ ನಿರ್ಮೂಲನ ಮಂಡಳಿಗೆ ವಸತಿ ಹಂಚಿಕೆಗಾಗಿ ಅರ್ಜಿಸಲ್ಲಿಸಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

ಕೊಳಚೆ ನಿರ್ಮೂಲನ ಮಂಡಳಿಗೆ ವಸತಿ ಹಂಚಿಕೆಗಾಗಿ ಬೆಂಗಳೂರು ನಗರದಲ್ಲಿ ಸುಮಾರು 5377 ಕೊಳಚೆ ಪ್ರದೇಶದ ನಿವಾಸಿಗಳಲ್ಲದವರು ಅರ್ಜಿ ಸಲ್ಲಿಸಿರುತ್ತಾರೆ. ಇತರೆ ಜಿಲ್ಲೆಗಳಲ್ಲಿನ ನಿವಾಸಿಗಳಿಂದ ಅರ್ಜಿ ಬಂದಿರುವುದಿಲ್ಲ.

ಈ ಈ ಹಂಚಿಕೆಗಾಗಿ ಯಾವ ರೀತಿಯ ಮಾನದಂಡಗಳನ್ನು ಅನುಸರಿಸಲಾಗುವುದು;

ಘೋಷಿತ ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದು, ಮಂಡಳಿ ನಡೆಸಿದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷಾ ಪಟ್ಟಿಯಲ್ಲಿ ದಾಖಲಾಗಿರುವ ನಿವಾಸಿಗಳು ಮನೆ ಹಂಚಿಕೆಗೆ ಅರ್ಹರಿರುತ್ತಾರೆ.

ಇ ಈವರೆವಿಗೂ ಕೊಳಚೆ ನಿರ್ಮೂಲನ ಮಂಡಳಿಗೆ ಸರ್ಕಾರದಿಂದ ಎಷ್ಟು ಜಮೀನು ಮಂಜೂರು ಮಾಡಲಾಗಿದೆ. ಇವುಗಳ ಜಿಲ್ಲಾವಾರು ಮಾಹಿತಿ ನೀಡುವುದು; ಇವುಗಳಲ್ಲಿ ಎಷ್ಟು ಜಮೀನುಗಳಲ್ಲಿ ವಸತಿಗಳನ್ನು ನಿರ್ಮಾಣ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು);

ಈವರೆವಿಗೂ ಕೊಳಚೆ ನಿರ್ಮೂಲನ ಮಂಡಳಿಗೆ ಸರ್ಕಾರದಿಂದ 490.00 ಎಕರೆ ಜಮೀನನ್ನು ಮಂಜೂರು ಮಾಡಲಾಗಿದ್ದು, ಜಿಲ್ಲಾವಾರು ವಿವರ ಹಾಗೂ ವಸತಿ ನಿರ್ಮಾಣದ ವಿವರಗಳನ್ನು ಅನುಬಂಧ-"ಅ" ನಲ್ಲಿ ಲಗತ್ತಿಸಿದೆ.

490.00 ಎಕರೆ ಪೈಕಿ 232.00 ಎಕರೆ ಜಮೀನಿನಲ್ಲಿ ವಿವಿಧ ಯೋಜನಗಳಡಿಯಲ್ಲಿ ಮನೆಗಳನ್ನು ನಿರ್ಮಿಸಲಾಗಿರುತ್ತದೆ.

ಊ ಮಂಡಳಿಯ ಮನೆಗಳನ್ನು ನಿರ್ಮಾಣ ಮಾಡಲಾದ ಜಿಲ್ಲೆಗಳಾವುವು; ಇವುಗಳ ಕಾಮಗಾರಿಗಳು ಯಾವ ಹಂತದಲ್ಲಿದೆ;

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಹುಡ್ಕೋ ಯೋಜನೆಯಡಿ 27116 ಮನೆಗಳು, ವಿಶೇಷ ಘಟಕ ಯೋಜನೆಯಡಿ (ಪರಿಶಿಷ್ಟ ಜಾತಿಯವರಿಗಾಗಿ) 3080 ಮನೆಗಳು ಹಾಗೂ ವಾಂಬೆ ಯೋಜನೆಯಡಿ 34538 ಮನೆಗಳು ಒಟ್ಟು 64734 ಮನೆಗಳಲ್ಲಿ 751 (ವಾಂಬೆ) ಮನೆಗಳನ್ನು ಹೊರತುಪಡಿಸಿ ಉಳಿದ ಮನೆಗಳು ಪೂರ್ಣಗೊಂಡಿದ್ದು, ಹಂಚಿಕೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-"ಆ"ನಲ್ಲಿ ಒದಗಿಸಲಾಗಿದೆ.

ಋ ಪ್ರತಿ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು; (ಸಂಪೂರ್ಣ ವಿವರಗಳನ್ನು ನೀಡುವುದು);

ಈ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣದ ವಿವರಗಳು ಈ ಕೆಳಕಂಡಂತಿವೆ;

(ರೂ.ಲಕ್ಷಗಳಲ್ಲಿ)

ಹುಡ್ಕೋ	ಎಸ್.ಸಿ.ಪಿ	ವಾಂಬೆ
3108.60	1078.00	14849.60

ಎ ಕೊಳಚೆ ನಿರ್ಮೂಲನ ಮಂಡಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ:ಲು ಬಿಡುಗಡೆ ಮಾಡಿದ ಹಣ ಎಷ್ಟು; ಮೂರು ವರ್ಷದ ಹಣದ ವಿವರಗಳನ್ನು ಹಾಗೂ ಕಾರ್ಯಕ್ರಮಗಳನ್ನು ನಡೆಸಲು ಯಾವ ಯಾವ ಸರ್ಕಾರೇತರ ಸಂಘಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿಗಳನ್ನು ನೀಡುವುದು);

ಕೇಂದ್ರ ಪ್ರಾಯೋಜಿತ ಜವಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್‌ನ (JNNURM) ನಗರ ಬಡಜನರಿಗೆ ಮೂಲಸೌಕರ್ಯ (BSUP) ಯೋಜನೆಯಡಿಯಲ್ಲಿ ಜಾಗೃತಿ (IEC) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮೊದಲನೇ ಹಂತದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಕ್ರಮವಾಗಿ 2006–07ರಲ್ಲಿ ರೂ. 1.12 ಕೋಟಿಗಳನ್ನು ಮತ್ತು 2007–08ರಲ್ಲಿ ರೂ. 0.50 ಕೋಟಿಗಳನ್ನು ಮಂಡಳಿಗೆ ಬಿಡುಗಡೆ ಮಾಡಲಾಗಿದೆ.

ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ನಿಗದಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿವೆ.

1) 5 ಕಿ.ಮೀ. ಅಂತರದಲ್ಲಿ ಯಾವುದೇ ಪ್ರೌಢಶಾಲೆ ಇರಬಾರದು.
2) ಆಯವ್ಯಯದಲ್ಲಿನ ಹಣಕಾಸು ಲಭ್ಯತೆ ಮತ್ತು ಶೈಕ್ಷಣಿಕ ಅಗತ್ಯತೆಯನ್ನು ಅವಲಂಭಿಸಿ ಹೊಸ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗುವುದು.
3) ಕನಿಷ್ಟ 3 ಹಿರಿಯ ಪ್ರಾಥಮಿಕ ಶಾಲೆಗಳಿಂದ ಕನಿಷ್ಟ 50 ವಿದ್ಯಾರ್ಥಿಗಳು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. (ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶದಲ್ಲಿ ಕನಿಷ್ಟ 25 ಮಕ್ಕಳು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(476)334**
ಸದಸ್ಯರ ಹೆಸರು	:	**ಶ್ರೀ ಸಿದ್ದುಸವದಿ (ತೆರದಾಳ್)**
ಉತ್ತರಿಸುವ ಸಚಿವರು	:	**(ಶ್ರೀ ಕೃಷ್ಣಯ್ಯ ಶೆಟ್ಟಿ)**
	:	**ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು**

ಅ) ಜಮಖಂಡಿ ತಾಲ್ಲೂಕಿನ ತೇರದಾಳ ಆಶ್ರಯ ಯೋಜನೆಯಲ್ಲಿ 2002-03ರ ಸಾಲಿನಲ್ಲಿ 450 ಮನೆಗಳು ಮಂಜೂರು ಆಗಿ ಕಟ್ಟಡಗಳನ್ನು ಪ್ರಾರಂಭಿಸಿ 6 ವರ್ಷಗಳಾಗಿದ್ದರೂ ಇನ್ನೂ ಪೂರ್ಣಗೊಳಿಸದಿರಲು ಕಾರಣಗಳೇನು;

ಜಮಖಂಡಿ ತಾಲ್ಲೂಕಿನಲ್ಲಿ ಬರುವ ತೇರದಾಳ ಪಟ್ಟಣ ಪ್ರದೇಶಕ್ಕೆ ನಗರ ಆಶ್ರಯ ಯೋಜನೆಯಡಿ 2002-03ನೇ ಸಾಲಿನಲ್ಲಿ 454 ಮನೆಗಳು ಮಂಜೂರಾಗಿದ್ದು, ಈ ಮನೆಗಳನ್ನು ನಿರ್ಮಿಸಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿದ್ದು. ನಿಗಮವು 404 ಮನೆಗಳನ್ನು ನಿರ್ಮಿಸಿದ ನಂತರ ಕಟ್ಟಡ ಸಾಮಗ್ರಿಗಳ ಬೆಲೆ ಹೆಚ್ಚಿಸುವುದರಿಂದ ಉಳಿದ 50 ಮನೆಗಳನ್ನು ನಿರ್ಮಿಸಲು ಹೆಚ್ಚುವರಿ ಅನುದಾನವನ್ನು ನೀಡಬೇಕೆಂದು ಕೋರಿರುತ್ತಾರೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಆ) ಕಟ್ಟಡದ ಸಂಪೂರ್ಣ ಕೆಲಸವನ್ನು ಮುಗಿಸಿ ಎಂದಿನಿಂದ ಹಂಚಿಕೆ ಮಾಡಲಾಗುವುದು.

ಕರ್ನಾಟಕ ಭೂಸೇನಾ ನಿಗಮ ಎಲ್ಲಾ ಮನೆಗಳನ್ನು ನಿರ್ಮಿಸಿದ ನಂತರ ಹಂಚಿಕೆ ಮಾಡಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಇ) ಪ್ರಸ್ತುತ ಎಷ್ಟು ಮನೆಗಳನ್ನು ಕಟ್ಟಲಾಗಿದೆ; ಉಳಿದವುಗಳನ್ನು ಎಂದಿನಿಂದ ಕಟ್ಟಿಸಲಾಗುವುದು;

ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾದ 454 ಮನೆಗಳಲ್ಲಿ 404 ಮನೆಗಳು ನಿರ್ಮಾಣವಾಗಿದ್ದು, ಇದರಲ್ಲಿ 50 ಮನೆಗಳನ್ನು ಪೂರ್ಣಗೊಳಿಸದೆ ಬಿಡಲಾಗಿದೆ. ಈ ಸಮಸ್ಯೆಯನ್ನೂ ಪರಿಹರಿಸಿ, ಮನೆಗಳನ್ನು ಪೂರ್ಣಗೊಳಿಸುವ ವ್ಯವಸ್ಥೆ ಮಾಡಲು ಜಿಲ್ಲಾಧಿಕಾರಿಗಳು ಪ್ರಯತ್ನ ಮಾಡುತ್ತಾರೆ.

ಈ) ಈ ಯೋಜನೆಯಲ್ಲಿ ಮೂಲ ಕ್ರಿಯಾ ಯೋಜನೆಯಲ್ಲಿ ಯಾವ ಯಾವ ಕೆಲಸಗಳಿವೆ; ಗುತ್ತಿಗೆದಾರರಿಗೆ ಇಲ್ಲಿಯವರೆಗೆ ನೀಡಲಾದ ಹಣ ಎಷ್ಟು;

ಈ ಯೋಜನೆಯ ಮೂಲ ಕ್ರಿಯಾ ಯೋಜನೆಯಲ್ಲಿ ಮನೆ ನಿರ್ಮಾಣ ಸೇರಿದ್ದು, ಇಲ್ಲಿಯವರೆಗೆ ಗುತ್ತಿಗೆದಾರನಿಗೆ ರೂ. 113.50 ಲಕ್ಷ ಹಣವನ್ನು ಬಿಡುಗಡೆ ಮಾಡಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಉ) ಈ ಮನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ನಿಯಮಾನುಸಾರ ಮಾಡಲಾಗಿದೆ (ಸಂಪೂರ್ಣ ವಿವರ ಒದಗಿಸುವುದು)

ಈ ಫಲಾನುಭವಿಗಳನ್ನು ತೇರದಾಳ ಆಶ್ರಯ ಕಮಿಟಿಯು ಸರ್ಕಾರದ ಆದೇಶ ಸಂಖ್ಯೆ: ವ.ವಿ 42 ಹೆಚಿಎಮ್ 99 ಬೆಂಗಳೂರು ದಿನಾಂಕ:10.05.2000 ದಲ್ಲಿ ತಿಳಿಸಿರುವ ನಿಯಮಗಳ ಮೇರೆಗೆ ದಿನಾಂಕ 07.12.2002ರಲ್ಲಿ ಠರಾವು ಸಂಖ್ಯೆ 6,ರ ಮುಖಾಂತರ ಅನುಮೋದಿಸಿ ಆಯ್ಕೆ ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (477)335
ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೇರದಾಳ್)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು

ಅ) ಅನಿಯಮಿತ ಲೋಡ್ ಶೆಡ್ಡಿಂಗ್‌ಗೆ ಕಾರಣಗಳೇನು;

ಮುಂಗಾರು ಮಳೆ ವಿಳಂಬವಾದುದರಿಂದ ರಾಜ್ಯದ ಪ್ರಮುಖ ಜಲಾಶಯಗಳ ನೀರಿನ ಮಟ್ಟ ಕುಸಿದಿದೆ. ರಾಯಚೂರು ಶಾಖೋತ್ಪನ್ನ ಕೇಂದ್ರದಲ್ಲಿ 2 ಘಟಕಗಳು ದುರಸ್ಥಿ ಕಾರ್ಯದಲ್ಲಿರುವುದರಿಂದ ಮತ್ತು ಕಲ್ಲಿದ್ದಲಿನ ಕೊರತೆಯಿಂದ ವಿದ್ಯುತ್ ಉತ್ಪಾದನೆ ಕಡಿಮೆಯಾಗಿರುತ್ತದೆ. ಒರಿಸ್ಸಾದ ತಾಲ್ಚೇರ್, ಆಂಧ್ರಪ್ರದೇಶದ ರಾಮಗುಂಡಂ ಹಾಗೂ ತಮಿಳುನಾಡಿನ ನೈವೇಲಿಯಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳ ದುರಸ್ಥಿ ಕಾರ್ಯ ನಡೆಯುತ್ತಿರುವುದರಿಂದ, ಕೇಂದ್ರ ಉತ್ಪಾದನಾ ಘಟಕಗಳಿಂದ ಬರಬೇಕಾದ ಕರ್ನಾಟಕದ ಪಾಲೂ ಸಹ ಕಡಿಮೆಯಾಗಿದೆ. ಹಾಗೂ ಇಂಡಿಯನ್ ಎಲೆಕ್ಟ್ರಿಸಿಟಿ ಗ್ರಿಡ್ ಕೋಡ್ (ಐಇಜಿಸಿ) ಮತ್ತು ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿಇಆರ್‌ಸಿ) ನಿಯಮಗಳ ಪ್ರಕಾರ ವಿದ್ಯುತ್ ಜಾಲದ ತರಂಗಾಂತರವನ್ನು 49 ತರಂಗಗಳಿಗಿಂತ ಹೆಚ್ಚಿಗೆ ಇರುವಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ವಿದ್ಯುತ್ತಿನ ಲಭ್ಯತೆಗೆ ತಕ್ಕಂತೆ ವಿದ್ಯುತ್ತಿನ ಬಳಕೆಯನ್ನು ನಿಯಂತ್ರಿಸಲು ಅನಿಯವಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಇಡೀ ವಿದ್ಯುತ್ ವ್ಯವಸ್ಥೆಯೇ ಸಂಪೂರ್ಣವಾಗಿ ಕುಸಿಯುವ ಸಂಭವವಿರುತ್ತದೆ.

ಆ) ಲೋಡ್ ಶೆಡ್ಡಿಂಗ್‌ನ್ನು ಅಧಿಕೃತವಾಗಿ ಪ್ರಕಟಪಡಿಸಲು ಇರುವ ತೊಂದರೆಗಳೇನು;

ಶೀಘ್ರದಲ್ಲಿಯೇ ಲೋಡ್ ಶೆಡ್ಡಿಂಗ್‌ನ್ನು ಅಧಿಕೃತವಾಗಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಇ) ಸ್ಥಿತಿ ಎಲ್ಲಿಯವರೆಗೆ ಮುಂದುವರೆಯುವುದು; ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಎಂದಿನಿಂದ ಅದನ್ನು ಜಾರಿಗೆ ತರಲಾಗುವುದು;

ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಮುಂಗಾರು ಮಳೆಯ ವಿಫಲತೆ, ಕಲ್ಲಿದ್ದಲಿನ ಕೊರತೆ ಮತ್ತು ವಿದ್ಯುತ್ ಉತ್ಪಾದನಾ ಘಟಕಗಳ ದುರಸ್ಥಿ ಕಾರ್ಯಗಳಿಂದ ರಾಜ್ಯಕ್ಕೆ ಲಭ್ಯವಾಗುತ್ತಿದ್ದ ವಿದ್ಯುತ್ತಿನ ಪ್ರಮಾಣವು ಕಡಿಮೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಮುಂಗಾರು ಚುರುಕುಗೊಂಡಲ್ಲಿ ಹಾಗೂ ದುರಸ್ಥಿ ಕಾರ್ಯದಲ್ಲಿರುವ ಈ ಮೇಲಿನ ವಿದ್ಯುತ್ ಉತ್ಪಾದನಾ ಘಟಕಗಳು

ಕಾರ್ಯಾರಂಭಗೊಂಡ ನಂತರ ವಿದ್ಯುತ್ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವ ಸಾಧ್ಯತೆ ಇರುತ್ತದೆ. ಅಲ್ಲಿಯವರೆಗೆ, ವಿದ್ಯುತ್ ಲಭ್ಯತೆಗೆ ತಕ್ಕಂತೆ ವಿದ್ಯುತ್ತಿನ ಬಳಕೆಯನ್ನು ನಿಯಂತ್ರಿಸುವುದು ಅನಿವಾರ್ಯವಾಗಿರುತ್ತದೆ.

ರಾಜ್ಯವು ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲು ಈ ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಕ್ಟೋಬರ್ 2008 ರಿಂದ ಜನವರಿ 2009 ರವರೆಗಿನ ಕನಿಷ್ಠ 100 ಮೆ.ವ್ಯಾಟ್‌ನಿಂದ ಗರಿಷ್ಠ 700 ಮೆ.ವ್ಯಾಟ್‌ಗಳ ಮಿತಿಗೆ ಒಳಪಟ್ಟು ವಿದ್ಯುತ್ತನ್ನು ಖಚಿತ / ಒಂದು ದಿನ ಮುಂಚಿತ (ಡೇ ಅಹೆಡ್) ಆಧಾರಿತ ರೀತಿಯಲ್ಲಿ ಪಡೆಯಲು ಬಿಡ್ದುಗಳನ್ನು ಆಹ್ವಾನಿಸಲಾಗಿರುತ್ತದೆ.
2. ದಿನ ನಿತ್ಯ ವಿದ್ಯುತ್ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು "ಇಂಡಿಯನ್ ಎನರ್ಜಿ ಎಕ್ಸ್‌ಚೆಂಜ್" ಮೂಲಕ ವಿದ್ಯತ್ತನ್ನು ಖರೀದಿಸಲಾಗುತ್ತಿದೆ.
3. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ ಕಾರ್ಯಾರಂಭ ಮಾಡಿದ್ದು, ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿದೆ.
4. ಲಭ್ಯತೆ ಆಧಾರಿತ ದರದ ಪ್ರಕಾರ ಅನುಕೂಲಕರ ಜಾಲ ತರಂಗವಿದ್ದಾಗ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲಾಗುತ್ತಿದೆ.
5. ಜಲಾಶಯಗಳಲ್ಲಿ ನೀರಿನ ಪ್ರಮಾಣವನ್ನು ಹೆಚ್ಚಿಸಲು ಮೋಡ ಬಿತ್ತನೆ ಕಾರ್ಯದ ಅನುಷ್ಠಾನವನ್ನು ಶೀಘ್ರದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದ್ದು, ಈ ಕಾರ್ಯವನ್ನು ಜಲಸಂಪನ್ಮೂಲ ಇಲಾಖೆಗೆ ವಹಿಸಲಾಗಿದೆ.
6. ಛತ್ತೀಸ್‌ಘಡದಿಂದ ರಾಜ್ಯಕ್ಕೆ 300 ಮೆ.ವ್ಯಾಟ್ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲು ಸರ್ಕಾರದಿಂದ ಪತ್ರ ವ್ಯವಹಾರವನ್ನು ಮಾಡಲಾಗುತ್ತಿದೆ. ಛತ್ತೀಸ್‌ಘಡ್ ರಾಜ್ಯವು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದು, ಶೀಘ್ರದಲ್ಲಿಯೇ 100 ಮೆಗಾವ್ಯಾಟ್ ವಿದ್ಯುತ್ ನೆರವು ಲಭ್ಯವಾಗುವ ಸೂಚನೆಗಳಿವೆ.
7. ಕಲ್ಲಿದ್ದಲು ಕೊರತೆಯ ನಿವಾರಣೆಗೆ ಮಹಾನದಿ ಕಲ್ಲಿದ್ದಲು ಗಣಿಯಿಂದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕಲ್ಲಿದ್ದಲಿನ ಸಾಗಾಣಿಕೆ ವ್ಯವಸ್ಥೆಗಾಗಿ ಸರ್ಕಾರದಿಂದ ಕ್ರಮ ಜರುಗಿಸಲಾಗುತ್ತಿದೆ.
8. ಅಸಂಪ್ರದಾಯಿಕ ಇಂಧನ ಉತ್ಪಾದಕರಣದ ಹೆಚ್ಚಿನ ವಿದ್ಯುತ್‌ನ್ನು ಸರಬರಾಜು ಮಾಡುವಂತೆ ಕೋರಲಾಗಿದೆ.
9. ವಿದ್ಯುತ್‌ನ್ನು ಸರಬರಾಜು ಮಾಡುವ ಬಗ್ಗೆ ಮುಕ್ತ ಪ್ರವೇಶಾವಕಾಶದಡಿ ಬರುವ ವಿದ್ಯುತ್ ಉತ್ಪಾದಕರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ.

ಈ) ಸ್ಥಿತಿಯಿಂದ ಮೇಲಿಂದ ಮೇಲೆ ಟಿ.ಸಿ.(ಪರಿವರ್ತಕ)ಗಳು ಸುಟ್ಟು ಹೋಗುತ್ತಿದ್ದು. ಇದರಿಂದ ರೈತರಿಗೆ ಬಹಳ ತೊಂದರೆ ಆಗಿದ್ದು, ಇದನ್ನು ಯಾವ ರೀತಿ ಸರಿಪಡಿಸಲಾಗುವುದು?

ಲೋಡ್ ಶೆಡ್ಡಿಂಗ್ ನಿರ್ವಹಣೆಗಾಗಿ ಪರಿವರ್ತಕಗಳು ವಿಫಲಗೊಳ್ಳುವ ಸಾಧ್ಯತೆಗಳು ಇರುವುದಿಲ್ಲ. ಒಂದು ವೇಳೆ, ಓವರ್ ಲೋಡ್ ಅಥವಾ ತಾಂತ್ರಿಕ ದೋಷಗಳಿಂದ ಪರಿವರ್ತಕಗಳು ವಿಫಲಗೊಂಡಲ್ಲಿ, ಅವುಗಳನ್ನು ಬೇರೆ ಒಳ್ಳೆಯ ಪರಿವರ್ತಕಗಳ ಮೂಲಕ ಬದಲಾಯಿಸಲಾಗುತ್ತಿದೆ.

ಓವರ್ ಲೋಡ್ ಸಮಸ್ಯೆಗಳಿಂದ ಪರಿವರ್ತಕಗಳು ವಿಫಲಗೊಳ್ಳುವುದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಲಿ ಇರುವ ಪರಿವರ್ತಕಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು, ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸುವುದು ಮುಂತಾದ ಸುಧಾರಣಾ ಕಾರ್ಯಗಳನ್ನು ಸಹ ಕೈಗೊಳ್ಳಲಾಗುತ್ತಿದೆ.

ಉ) ಪರಿವರ್ತಕಗಳು ಸುಟ್ಟಾಗ ದುರಸ್ತಿ ಮಾಡಿಕೊಡುವ ಅಥವಾ ಹೊಸ ಪರಿವರ್ತಕಗಳನ್ನು ಕೊಡಲು ಇರುವ ನಿಯಮಾವಳಿಗಳೇನು; ಎಷ್ಟು ದಿನಗಳಲ್ಲಿ ಇವುಗಳನ್ನು ನೀಡಲಾಗುವುದು?

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಾವಳಿಗಳ ಪ್ರಕಾರ ನಗರ ಪ್ರದೇಶಗಳಲ್ಲಿ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಒಂದು ದಿನದ ಒಳಗಾಗಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಮೂರು ದಿನಗಳ ಒಳಗಾಗಿ ಬದಲಾಯಿಸಬೇಕೆಂಬ ನಿಯಮಗಳಿರುತ್ತವೆ.

ಕುಡಿಯುವ ನೀರಿನ ಸ್ಥಾವರಗಳಿಗೆ ಹಾಗೂ ಗ್ರಾಮಗಳ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡುವ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡಾ ಅವುಗಳನ್ನು ಮೊದಲ ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತದೆ. ಉಳಿದ ಪ್ರಕರಣಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಳ್ಳುವ ದಿನಾಂಕಗಳ ಪ್ರಕಾರ ಜೇಷ್ಠತೆಯನ್ನು ಆಧಾರ ಮಾಡಿಕೊಂಡು ದುರಸ್ತಿಗೊಂಡ ಅಥವಾ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಡಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮ ತೆಗೆದುಕೊಳ್ಳುತ್ತಿವೆ.

ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ಅನುಸರಿಸಲಾಗುವ ವಿಧಿ ವಿಧಾನಗಳ ವಿವರಗಳು:

1. ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಪಡಿಸಲು ಟೆಂಡರ್‌ಗಳನ್ನು ಕರೆದು ಗೊತ್ತುಪಡಿಸಿದ ರೇಟ್ ಕಾಂಟ್ರಾಕ್ಟ್ ಆಧಾರದ ಮೇಲೆ ಆಯಾ ವಿಭಾಗದ

ವ್ಯಾಪ್ತಿಯಲ್ಲಿರುವ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳಲ್ಲಿ ದುರಸ್ತಿ ಮಾಡಲಾಗುವುದು.

2. ಸರ್ಕಾರಿ ಸ್ವಾಮ್ಯದ ಮೆ: ಕ.ವಿ.ಕಾ ಸಂಸ್ಥೆಗೆ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕಾರ್ಯನಿರ್ವಹಿಸಲು ಕ್ರಮಗಳನ್ನು ರೂಪಿಸಲಾಗುತ್ತಿದೆ.
3. ಖಾತರೀ ಅವಧಿಯಲ್ಲಿ ವಿಫಲಗೊಳ್ಳುವ ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಬಂಧಪಟ್ಟ ಸರಬರಾಜು ಸಂಸ್ಥೆಗಳು/ದುರಸ್ಥಿ ಏಜೆನ್ಸಿಗಳು ತಮ್ಮ ವೆಚ್ಚದಲ್ಲಿಯೇ ದುರಸ್ತಿ ಮಾಡಬೇಕಾಗಿರುತ್ತದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (478)336
ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೆರದಾಳ್)
ಉತ್ತರಿಸುವ ಸಚಿವರು : (ಶ್ರೀ ಶೋಭಾ ಕರಂದ್ಲಾಜೆ)

1 ತೆರೆದಾಳ ಮತಕ್ಷೇತ್ರಕ್ಕೆ ಸೇರಿದ ಬಹುತೇಕ ಎಲ್ಲಾ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೆಲವು ಗ್ರಾಮೀಣ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2 ಹಾಗಿದ್ದಲ್ಲಿ ಅವುಗಳ ದುರಸ್ತಿ ಕಾರ್ಯವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು;

3 ಯಾವ ಯಾವ ರೀತಿ ಮತ್ತು ಎಷ್ಟು ಕಿ.ಮೀ ರಸ್ತೆಗಳನ್ನು ಈ ವರ್ಷದಲ್ಲಿ ಅಭಿವೃದ್ಧಿ ಪಡಿಸಲಾಗುವುದು;

ಪ್ರಸ್ತುತ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿಗೆ ಒದಗಿಸಲಾಗುವ ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ದಿ ಯೋಜನೆ, 12ನೇ ಹಣಕಾಸು ಆಯೋಗದ ಯೋಜನೆ ಮತ್ತು 5054ರಡಿ ಅನುದಾನ ಲಭ್ಯತೆಗನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ನಿರ್ದಿಷ್ಟ ಗ್ರಾಮೀಣ ರಸ್ತೆಗಳ ಆಯ್ಕೆ ಹಾಗೂ ನಿರ್ವಹಣೆ/ಅಭಿವೃದ್ಧಿ ಕಾರ್ಯವು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

4 ತೆರೆದಾಳ ಮತಕ್ಷೇತ್ರದಲ್ಲಿ ಈ ಇಲಾಖೆಗೆ ಸೇರಿದ ರಸ್ತೆಗಳು ಯಾವುವು ಮತ್ತು ಅವುಗಳ ವಿಸ್ತೀರ್ಣವೆಷ್ಟು; ಅವುಗಳ ಈಗಿನ ಸ್ಥಿಗತಿಗಳೇನು;

ತೆರೆದಾಳ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿಸ್ತೀರ್ಣ ಮತ್ತು ಅವುಗಳ ಸ್ಥಿತಿ ಕೆಳಗಿನಂತಿವೆ.

ಕ್ರಸಂ.	ರಸ್ತೆ ವಿವರ	ಉದ್ದ(ಕಿ.ಮೀ)
1	ಡಾಂಬರು	166

	ರಸ್ತೆ	
2	ಜಲ್ಲಿ ರಸ್ತೆ	67
3	ಮಣ್ಣಿನ ರಸ್ತೆ	341
	ಒಟ್ಟು	574

5 ರೈತರ ಜಮೀನುಗಳ ರಸ್ತೆ ಯಾವ ಇಲಾಖೆಯ ಅಧೀನದಲ್ಲಿ ಬರುತ್ತವೆ; ಅವುಗಳ ದುರಸ್ತಿ ಕಾರ್ಯಗಳನ್ನು ಯಾವಾಗ ಪೂರ್ಣ ಮಾಡಲಾಗುವುದು?

ರೈತರ ಜಮೀನುಗಳ ರಸ್ತೆ ಸಾರ್ವಜನಿಕ ರಸ್ತೆಯಾಗಿದ್ದಲ್ಲಿ ಅವು ಜಿಲ್ಲಾ/ಗ್ರಾಮ ಪಂಚಾಯತ್ ಸಂಸ್ಥೆಗಳ ಅಧೀನದಲ್ಲಿ ಬರುತ್ತಲಿದ್ದು ಅವಶ್ಯಕತೆ ಆಧಾರದ ಮೇಲೆ ಕಾರ್ಯವು ಆಯಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (479)337
ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೇರದಾಳ್)
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ರಾಜ್ಯದಲ್ಲಿ ಈ ಹಿಂದಿನ ಮೂರು ವರ್ಷಗಳಲ್ಲಿ ಜೂನಿಯರ್ ಕಾಲೇಜುಗಳನ್ನು ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿರುವ ಸಂಖ್ಯೆ ಎಷ್ಟು;

ರಾಜ್ಯದಲ್ಲಿ ಈ ಹಿಂದಿನ ಮೂರು ವರ್ಷಗಳಲ್ಲಿ 512 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು 1220 ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಆ) ಈ ಎಲ್ಲಾ ಶಾಲೆಗಳಿಗೆ ಶಿಕ್ಷಕರುಗಳನ್ನು ನೇಮಿಸಲಾಗಿದೆಯೇ; ಹಾಗಿದ್ದಲ್ಲಿ ಯಾವ ಯಾವ ಶಾಲೆಗಳಿಗೆ ಬೇಡಿಕೆ ಎಷ್ಟು ಮತ್ತು ನೇಮಿಸಲಾಗಿರುವ ಶಿಕ್ಷಕರುಗಳೆಷ್ಟು (ಪೂರ್ಣ ಮಾಹಿತಿ ಒದಗಿಸುವುದು);

ಹೌದು

512 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟು 3524 ಉಪನ್ಯಾಸಕರ ಹುದ್ದೆಗಳಿರುತ್ತವೆ.

2144 ಉಪನ್ಯಾಸಕರ ಬೇಡಿಕೆ ಇರುತ್ತದೆ.

1380 ಉಪನ್ಯಾಸಕರನ್ನು ನೇಮಕ ಮಾಡಲಾಗಿದೆ.

ಕಳೆದ 03 ವರ್ಷಗಳಲ್ಲಿ ಮಂಜೂರಾದ ಪ್ರೌಢಶಾಲೆಗಳು	ಮಂಜೂರಾದ ಪ್ರೌಢಶಾಲೆಗಳು	ಭರ್ತಿ ಮಾಡಿದ ಶಿಕ್ಷಕರ ಹುದ್ದೆಗಳು	ಭರ್ತಿ ಮಾಡಬೇಕಾದ ಶಿಕ್ಷಕರ ಹುದ್ದೆಗಳು

2005–06	126	756	126
2006–07	485	2910	485
2007–08	609	3654	609
ಒಟ್ಟು	1220	7320	1220

ಇ) ಶಿಕ್ಷಕರು ಇಲ್ಲದೇ ಹೋದಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳು ತಮ್ಮ ಎಲ್.ಸಿ.ತೆಗೆದುಕೊಂಡು ಹೋಗುತ್ತಿರುವುದನ್ನು ಯಾವಾಗ ಸರಿಪಡಿಸಲಾಗುವುದು?

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರು ಇಲ್ಲವೆಂದು ಗ್ರಾಮಾಂತರ ಪ್ರದೇಶದ ಮಕ್ಕಳು ತಮ್ಮ ಎಲ್.ಸಿ. ತೆಗೆದುಕೊಂಡು ಹೋಗುತ್ತಿರುವ ಪ್ರಕರಣಗಳು ಕಂಡುಬರುತ್ತಿಲ್ಲವಾದ್ದರಿಂದ ಎಲ್.ಸಿ. ತೆಗೆದುಕೊಂಡು ಹೋಗುತ್ತಿರುವುದನ್ನು ಸರಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆದಾಗ್ಯೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗದಂತೆ, ಶಿಕ್ಷಕರು ಇಲ್ಲದ ಶಾಲೆಗಳಿಗೆ ಜಿಲ್ಲೆಯಲ್ಲಿನ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಲಾಗಿದೆ.

ಇದಲ್ಲದೆ ಬಡ್ತಿ ಹಾಗೂ ನೇರ ನೇಮಕಾತಿ ಮುಖಾಂತರ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳು ತಮ್ಮ ಎಲ್.ಸಿ.ತೆಗೆದುಕೊಂಡು ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (417)338
ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ. (ಗೋವಿಂದರಾಜ ನಗರ)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ) ಇಂಧನ ಸಚಿವರು

ಅ) ರಾಜ್ಯದಲ್ಲಿ ಪ್ರತಿ ದಿನ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣವೆಷ್ಟು;

ಪ್ರಸ್ತುತ ರಾಜ್ಯದಲ್ಲಿ ಪ್ರತಿ ದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ 100 ದಶಲಕ್ಷ ಯೂನಿಟ್ಟುಗಳು

ಆ) ರಾಜ್ಯದಲ್ಲಿ ಪ್ರತಿ ದಿನದ ವಿದ್ಯುತ್ ಬೇಡಿಕೆ ಎಷ್ಟು;

ಪ್ರಸ್ತುತ ರಾಜ್ಯದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಪ್ರತಿ ದಿನ ಸುಮಾರು 115 ರಿಂದ 120 ದಶಲಕ್ಷ ಯೂನಿಟ್ಟುಗಳಷ್ಟಿಗೂ ವಿದ್ಯುತ್ತಿನ ಅವಶ್ಯಕತೆ ಇರುತ್ತದೆ.

ಇ) ಖಾಸಗಿ ಹಾಗೂ ಕೇಂದ್ರ ಗ್ರಿಡ್‌ನಿಂದ ಬರತಕ್ಕ ವಿದ್ಯುತ್ ಪ್ರಮಾಣವೆಷ್ಟು;

ಪ್ರಸ್ತುತ ಖಾಸಗಿ ವಲಯದಿಂದ ರಾಜ್ಯದ ವ್ಯವಸ್ಥೆಗೆ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ 10 ದಶಲಕ್ಷ ಯೂನಿಟ್ಟುಗಳು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ 25 ದಶಲಕ್ಷ ಯೂನಿಟ್ಟುಗಳು

ಈ) ಪ್ರತಿ ದಿನ ಉಂಟಾಗುವ ವಿದ್ಯುತ್ ಕೊರತೆ ಎಷ್ಟು;

ರಾಜ್ಯವು ಪ್ರಸ್ತುತ ದಿನವಹಿ 15 ರಿಂದ 20 ದಶಲಕ್ಷ ಯೂನಿಟ್ಟುಗಳನಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಉ) ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ನಡುವೆ ಇರುವ ಅಂತರವನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಕ್ಟೋಬರ್ 2008 ರಿಂದ ಜನವರಿ 2009 ರವರೆಗಿನ ಅವಧಿಯಲ್ಲಿ ಕನಿಷ್ಠ 100 ಮೆ.ವ್ಯಾಟ್‌ನಿಂದ ಗರಿಷ್ಠ 700 ಮೆ.ವ್ಯಾಟ್‌ಗಳ ಮಿತಿಗೆ ಒಳಪಟ್ಟು ವಿದ್ಯುತ್ತನ್ನು ಖಚಿತ/ಒಂದು ದಿನ ಮುಂಚಿತ (ಡೇ ಅಹೆಡ್) ಆಧಾರಿತ ರೀತಿಯಲ್ಲಿ ಪಡೆಯಲು ಬಿಡ್ಡುಗಳನ್ನು ಆಹ್ವಾನಿಸಲಾಗಿರುತ್ತದೆ.
2. ದಿನ ನಿತ್ಯ ವಿದ್ಯುತ್ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು "ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್" ಮೂಲಕ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.
3. ಲಭ್ಯತೆ ಆಧಾರಿತ ದರದ ಪ್ರಕಾರ ಅನುಕೂಲಕರ ಜಾಲ ತರಂಗವಿದ್ದಾಗ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲಾಗುತ್ತಿದೆ.
4. ಜಲಾಶಯಗಳಲ್ಲಿ ನೀರಿನ ಪ್ರಮಾಣವನ್ನು ಹೆಚ್ಚಿಸಲು ಮೋಡ ಬಿತ್ತನೆ ಕಾರ್ಯದ ಅನುಷ್ಠಾನವನ್ನು ಶೀಘ್ರದಲ್ಲಿ ಪ್ರಾರಂಬಿಸಲು ಯೋಜಿಸಲಾಗಿದ್ದು, ಈ ಕಾರ್ಯವನ್ನು ಜಲಸಂಪನ್ಮೂಲ ಇಲಾಖೆಗೆ ವಹಿಸಲಾಗಿದೆ.
5. ಹೆಚ್ಚುವರಿ ವಿದ್ಯುತ್ತಿಗಾಗಿ ಛತ್ತೀಸ್‌ಘಡ್ ಮತ್ತು ಒರಿಸ್ಸಾ ರಾಜ್ಯಗಳೂ ಸೇರಿದಂತೆ ಇತರ ರಾಜ್ಯಗಳನ್ನು ಮತ್ತು ವಿದ್ಯುತ್ತಿನ ವಾಣಿಜ್ಯ ವಹಿವಾಟು ನಡೆಸುವ ಕಂಪನಿಗಳನ್ನು ಸಂಪರ್ಕಿಸಲಾಗಿದೆ.
6. ಛತ್ತೀಸ್‌ಘಡ್ ರಾಜ್ಯವು 100 ಮೆ.ವ್ಯಾಟ್ ವಿದ್ಯತ್ತನ್ನು ಒದಗಿಸಲು ಸಕಾರಾತ್ಮಕವಾಗಿ ಸ್ಪಂದಿಸಿದೆ.
7. ಜಿಂದಾಲ್ ಮತ್ತು ಟಾಟಾಗಳಂತಹ ಖಾಸಗೀ ವಿದ್ಯುತ್ ಉತ್ಪಾದಕರೂ ಸಹ ವಿದ್ಯುತ್ ಒದಗಿಸಲು ಸಕಾರಾತ್ಮಮಕವಾಗಿ ಸ್ಪಂದಿಸಿರುತ್ತಾರೆ.

8. ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಹಂಚಿಕೆ ಮಾಡುವಂತೆ ಮನವಿ ಮಾಡಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.
9. ಬಳ್ಳಾರಿಯಲ್ಲಿ 500 ಮೆ.ವ್ಯಾ.ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕವನ್ನು ಸದ್ಯದಲ್ಲಿಯೇ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
10. ವರಾಹಿ ಜಲ ವಿದ್ಯುತ್ ಯೋಜನೆಯಲ್ಲಿ 2 * 115 ಮೆ.ವ್ಯಾ. ಸಾಮರ್ಥ್ಯದ 3 ಮತ್ತು 4 ನೇ ಘಟಕಗಳನ್ನು ಡಿಸೆಂಬರ್ 2008ರ ಅಂತ್ಯದೊಳಗೆ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
11. ಪ್ರಸಕ್ತ ವರ್ಷ ಪವನ ವಿದ್ಯುತ್ ಯೋಜನೆಗಳಿಂದ 100 ಮೆ.ವ್ಯಾ. ವಿದ್ಯುತ್ ರಾಜ್ಯಕ್ಕೆ ದೊರೆಯಲಿದೆ.

ಧೀರ್ಘಕಾಲಿಕ ಕ್ರಮಗಳು:

ಚಿ. ಎಲ್ಲಾ ವಿದ್ಯುತ್ ಕಂಪನಿಗಳ ಪರವಾಗಿ ಪವರ್ ಕಂಪನಿ ಆಫ್ ಕರ್ನಾಟಕ ಲಿ. ತಲಾ 1000 ರಿಂದ 1320 ಮೆ.ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ, ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಹಾಗೂ ಗುಲ್ಬರ್ಗ ಜಿಲ್ಲೆಯ ಜೇವರ್ಗಿಯಲ್ಲಿ ಸ್ಥಾಪಿಸಲು ಸ್ಪರ್ಧಾತ್ಮಕ ಬಿಡ್ಡು ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಈ ಯೋಜನೆಯನ್ನು ಖಾಸಗೀ ವಿದ್ಯುತ್ ಉತ್ಪಾದಕರಿಗೆ ಬಿಡ್ಡಿಂಗ್ ಪ್ರೋಸಸ್ ಮುಖಾಂತರ ಅವಾರ್ಡ್ ಮಾಡಲಾಗುವುದು.

ಛ. ಧೀರ್ಘಕಾಲಿಕ ಕ್ರಮವಾಗಿ 2500 ಮೆ.ವ್ಯಾಟ್ ವಿದ್ಯುತ್ತನ್ನು ಟ್ಯಾರಿಫ್ ಆಧಾರಿತ ಸ್ಪರ್ಧಾತ್ಮಕ ಬಿಡ್ಡು ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಛಿ. ತಾಲ್ಲೂಕು ಮಟ್ಟದಲ್ಲಿ ಅಂದಾಜು ಪ್ರತಿ 5 ಮೆ.ವ್ಯಾಟ್ ಘಟಕಗಳನ್ನು ಸ್ಥಾಪಿಸಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

ಜ. ರಾಯಚೂರು ಶಾಖೋತ್ಪನ್ನ 8ನೇ ವಿದ್ಯುತ್ ಉತ್ಪಾದನಾ ಘಟಕವು ಅಕ್ಟೋಬರ್ 2009ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.

ಜಿ. ಬಳ್ಳಾರಿಯಲ್ಲಿ 500 ಮೆ.ವ್ಯಾ. ಶಾಖೋತ್ಪನ್ನ 2ನೇ ವಿದ್ಯುತ್ ಉತ್ಪಾದನಾ ಘಟಕವು ಮಾರ್ಚ್ 2010ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.

ಊ) ವಿದ್ಯುತ್ ಕೊರತೆಯನ್ನು ನೀಗಿಸಲು ಸೋಲಾರ್ ಎನರ್ಜಿ ಬಳಕೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಸೋಲಾರ್ ಎನರ್ಜಿ ಉಪಕರಣಗಳಾದ ಮನೆ ದೀಪ, ಬೀದಿ ದೀಪ ಮತ್ತು ವಾಟರ್ ಹೀಟರ್‌ಗಳನ್ನು ಜನರು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವಂತೆ ಜನರಲ್ಲಿ ಅವುಗಳ ಉಪಯೋಗತೆಯ ಬಗ್ಗೆ

ಅರಿವು ಮೂಡಿಸಲಾಗುತ್ತಿದೆ. ನವೀನ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ, ನವದೆಹಲಿ ಇವರು ಈ ಉಪಕರಣಗಳನ್ನು ಅಳವಡಿಸಿದಲ್ಲಿ ಸಹಾಯಧನ ನೀಡುತ್ತಾರೆ. ರಾಜ್ಯದ ವಿವಿದೆಡೆ ಈ ಉಪಕರಣಗಳನ್ನು ಪ್ರಚುರಪಡಿಸಿ ಹೆಚ್ಚು ಜನರು ಇವುಗಳ ಉಪಯೋಗವನ್ನು ಪಡೆದು ವಿದ್ಯುತ್ ಶಕ್ತಿ ಉಳಿತಾಯ ಮಾಡುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (418)339

ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ. (ಗೋವಿಂದರಾಜ ನಗರ)

ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) 2008ನೇ ಸಾಲಿನ ದ್ವಿತೀಯ ಪಿ.ಯು.ಪರೀಕ್ಷಾ ಫಲಿತಾಂಶ ಕಳೆದ 5-6 ವರ್ಷಕ್ಕಿಂತ ಕಡಿಮೆ ಪ್ರಮಾಣವಾಗಿರುವುದಕ್ಕೆ ಕಾರಣಗಳೇನು;

2008ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶ ಕಡಿಮೆಯಾಗಿರುವುದಕ್ಕೆ ಕಾರಣಗಳು ಕೆಳಕಂಡಂತಿವೆ.

1) 2005-06 ರಲ್ಲಿ ಮೊದಲ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 60:40 ಅನುಪಾತದ (Multiple choice Question: Descriptive type of questions) ಪ್ರಶ್ನೆ ಪತ್ರಿಕೆ ಉತ್ತರಿಸಿದ ವಿದ್ಯಾರ್ಥಿಗಳು ಈ ಬಾರಿ ದ್ವಿತೀಯ ಪಿ.ಯು.ಸಿ.ಪರೀಕ್ಷೆ ಬರೆದಿರುವುದು. ಅನೇಕ ವಿದ್ಯಾರ್ಥಿಗಳು ಲಘು ಉತ್ತರ, ದೀರ್ಘ ಉತ್ತರ ಬರೆಯುವ ಅಭ್ಯಾಸವನ್ನು ಬೆಳೆಸಿಕೊಂಡಿರುವುದು. ವಿಶೇಷವಾಗಿ ಕಲಾ ವಿಭಾಗದಲ್ಲಿ ದೀರ್ಘ ಉತ್ತರ ಬರೆಯಬೇಕಾಗಿರುವುದು ಅನಿವಾರ್ಯವಾಗಿರುವುದರಿಂದ ಫಲಿತಾಂಶ ಕಡಿಮೆಯಾಗಿರುತ್ತದೆ.
2) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸುಮಾರು 3500 ಉಪನ್ಯಾಸಕರ ಹುದ್ದೆ ಖಾಲಿಯಿರುವುದು.
3) ಪ್ರಥಮ ಪಿ.ಯು.ಸಿ. ಅಧ್ಯಯನವನ್ನು ಮತ್ತು ಪರೀಕ್ಷೆಯನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸದೇ ಇರುವುದು.

ಆ) ಈ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಮೊದಲನೇ ಹಾಗೂ ಎರಡನೇ ವರ್ಷದ ಪಠ್ಯ ಕ್ರಮಗಳನ್ನು ಅಭ್ಯಸಿಸಬೇಕಾಗಿರುವುದರಿಂದ ಹೆಚ್ಚಿನ ಒತ್ತಡಕ್ಕೆ ಬಿದ್ದು ದ್ವಿತೀಯ ಪಿ.ಯು.ಫಲಿತಾಂಶ ಅದರಲ್ಲೂ ವಿಜ್ಞಾನ ವಿಭಾಗ ಕುಸಿಯುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಪ್ರಥಮ ಪಿ.ಯು. ಪಠ್ಯಕ್ರಮದ ಮೇಲೆ ಪ್ರಶ್ನೆಗಳು ಇರುವುದಿಲ್ಲ. ಎಲ್ಲಾ ಪ್ರಶ್ನೆಗಳು ದ್ವಿತೀಯ ಪಿ.ಯು.ಸಿ. ಪಠ್ಯಕ್ರಮದ ಮೇಲೆ ಮಾತ್ರ ಇರುತ್ತವೆ. ಆದ ಕಾರಣ ವಿದ್ಯಾರ್ಥಿಗಳು 02 ವರ್ಷದ ಪಠ್ಯಕ್ರಮವನ್ನು ಒಟ್ಟಿಗೆ ಅಧ್ಯಯನ ಮಾಡುವ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗುವುದಿಲ್ಲ. ಈ ಒತ್ತಡ ಇರುವುದಿಲ್ಲ.

ಇ) ವಿದ್ಯಾರ್ಥಿಗಳ ಮೇಲಿನ ಮಾನಸಿಕ ಒತ್ತಡ ಕಡಿಮೆ ಮಾಡಲು ಮೊದಲನೇ ಪಿ.ಯು. ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆಯನ್ನಾಗಿ ಮಾಡಲು ಸರ್ಕಾರದ ಆಲೋಚನೆ ಇದೆಯೇ;

ವಿದ್ಯಾರ್ಥಿಗಳಿಗೆ ನಿರಂತರವಾಗಿ 03 ಪಬ್ಲಿಕ್ ಪರೀಕ್ಷೆಗಳನ್ನು ನಡೆಸಬಾರದು ಎನ್ನುವುದು ಶಿಕ್ಷಣ ತಜ್ಞರ ಅಭಿಪ್ರಾಯ. ಆದ್ದರಿಂದ ಪ್ರಥಮ ಪಿ.ಯು. ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆಯನ್ನಾಗಿ ಮಾಡುವ ಆಲೋಚನೆ ಇರುವುದಿಲ್ಲ. ಆದರೆ ಪ್ರಥಮ ಪಿ.ಯು.ಸಿ. ಅಧ್ಯಯನವನ್ನು ಮತ್ತು ಪರೀಕ್ಷೆಯನ್ನು ಗಂಭೀರವಾಗಿ ವಿದ್ಯಾರ್ಥಿಗಳು ತೆಗೆದುಕೊಳ್ಳುವಂತೆ ಮಾಡಲು ಕೆಲವು ಪರೀಕ್ಷಾ ಸುಧಾರಣೆಗಳನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಇದರಿಂದ ಮೊದಲನೇ ಪಿ.ಯು. ನಲ್ಲಿ ಹಾಜರಾತಿ ಉತ್ತಮಗೊಂಡು ವಿದ್ಯಾರ್ಥಿಗಳ ಮೇಲಿನ ಪಠ್ಯ ಕ್ರಮಗಳ ಹೊರೆ ಕಡಿಮೆಯಾಗುವುದಿಲ್ಲವೇ?

ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ಎರಡೂ ವರ್ಷಗಳ ಪಠ್ಯಕ್ರಮದ ಮೇಲೆ ಒಟ್ಟಿಗೆ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಕೇಳುವುದಿಲ್ಲ. ಆದಕಾರಣ ಪಠ್ಯಕ್ರಮಗಳ ಹೊರೆ ಕಡಿಮೆಯಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(419)340**
ಸದಸ್ಯರ ಹೆಸರು	:	**ಶ್ರೀ ಸೋಮಣ್ಣ ವಿ.** **(ಗೋವಿಂದರಾಜ ನಗರ)**
ಉತ್ತರಿಸುವ ಸಚಿವರು	:	**(ಶ್ರೀ ಅರವಿಂದ ಲಿಂಬಾವಳಿ)** **ಮಾನ್ಯ ಉನ್ನತ ಶಿಕ್ಷಣ ಸಚಿವರು**

ಅ) ರಾಜ್ಯದಲ್ಲಿ ಇಂಜನಿಯರಿಂಗ್ ಪ್ರವೇಶಕ್ಕೆ ಸಾಮಾನ್ಯ ಮಾರ್ಗದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ದ್ವಿತೀಯ ಪಿ.ಯು. ಪರೀಕ್ಷೆಯ ಶೇಕಡವಾರು ಅಂಕಗಳೆಷ್ಟು;

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಗಳು 2006ರನ್ವಯ ರಚಿಸಲಾಗಿರುವ ನಿಯಮದನ್ವಯ ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಭೌತಶಾಸ್ತ್ರ ಹಾಗೂ ಗಣಿತ

ವಿಷಯಗಳ ಜೊತೆಗೆ ರಸಾಯನಶಾಸ್ತ್ರ, ಬಯೋಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್, ಬಯಾಲಜಿ, ಎಲೆಕ್ಟ್ರಾನಿಕ್ಸ್ ಇವುಗಳಲ್ಲಿ ಯಾವುದಾದರೊಂದು ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದಲ್ಲಿ ಸರಾಸರಿ ಶೇಕಡ 45 ರಷ್ಟು ಅಂಕವನ್ನು ಪಡೆದಿರಬೇಕಿರುತ್ತದೆ.

ಆ) ಕಳೆದ ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದ ಫಲಿತಾಂಶದಲ್ಲಿ ತೀವ್ರ ಕುಸಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2007ನೇ ಸಾಲಿನಲ್ಲಿ ವಿಜ್ಞಾನ ವಿಭಾಗದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 2006ನೇ ಫಲಿತಾಂಶಕ್ಕೆ ಹೋಲಿಸಿದಲ್ಲಿ 2007ನೇ ಸಾಲಿನ ಫಲಿತಾಂಶ ಉತ್ತಮವಾಗಿರುತ್ತದೆ.

ಇ) ಹಾಗಿದ್ದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳು ಭರ್ತಿಯಾಗದೇ ಇರುವುದಕ್ಕೆ ಕಾರಣಗಳೇನು;

ಪ್ರತಿ ವರ್ಷವೂ ಎಲ್ಲಾ ಸುತ್ತುಗಳ ಸೀಟು ಆಯ್ಕೆಯ ನಂತರ ಸಾಮಾನ್ಯ ವರ್ಗದಡಿ ಯಾವುದೇ ಸೀಟುಗಳು ಉಳಿಕೆಯಾಗುವುದಿಲ್ಲ.

ಈ) ಇದರಿಂದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಪ್ರವೇಶಾವಕಾಶಕ್ಕೆ ಶೇಕಡ 40 ಅಂಕಗಳೆಂದು ನಿಗಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

1994 ರಿಂದ 2002ನೇ ಸಾಲಿನವರೆಗೆ ಇಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಅರ್ಹತಾ ಪರೀಕ್ಷೆಯಾದ ಪಿ.ಯು.ಸಿ.ಯಲ್ಲಿ ಸರಾಸರಿ ಕನಿಷ್ಠ 50 ರಷ್ಟು ಅಂಕಗಳನ್ನು ಗಳಿಸಬೇಕಾಗಿತ್ತು. ನಂತರ 2003ನೇ ಸಾಲಿನಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಈ ಸರಾಸರಿ ಅಂಕವನ್ನು ಕನಿಷ್ಠ 35ರಷ್ಟಕ್ಕೆ ನಿಗದಿಪಡಿಸಲಾಗಿದ್ದು, ಅದರಂತೆ 2005ನೇ ಸಾಲಿನವರೆಗೂ ಅಳವಡಿಸಿಕೊಳ್ಳಲಾಗಿರುತ್ತದೆ. ಈ ಅವಧಿಯಲ್ಲಿ ಇಂಜಿನಿಯರಿಂಗ್ ಪರೀಕ್ಷೆಯ ಫಲಿತಾಂಶದಲ್ಲಿ ತೀವ್ರ ಕುಸಿತವಾದದ್ದನ್ನು ಗಮನಕ್ಕೆ ತೆಗೆದುಕೊಂಡು ಇಂಜಿನಿಯರಿಂಗ್ ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಪ್ರವೇಶಾವಕಾಶಕ್ಕೆ ಕನಿಷ್ಠ ಶೇಕಡವಾರು ಅಂಕಗಳನ್ನು ನಿಗದಿಪಡಿಸುವ ಕುರಿತಂತೆ ಉಪಕುಲಪತಿಗಳ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯ ಶಿಫಾರಸ್ಸಿನನ್ವಯ ಸಚಿವ ಸಂಪುಟ ಉಪಸಮಿತಿಯು ಸರಾಸರಿ ಶೇಕಡ 45ರಷ್ಟು ಅಂಕಗಳನ್ನು ನಿಗದಿಪಡಿಸಲು ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (420)341
ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ.
(ಗೋವಿಂದರಾಜ ನಗರ)
ಉತ್ತರಿಸುವ ಸಚಿವರು : (ಶ್ರೀ ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು

ಅ) ತುಮಕೂರು ವಿಶ್ವವಿದ್ಯಾಲಯ ಯಾವಾಗ ಪ್ರಾರಂಭವಾಯಿತು;

ದಿನಾಂಕ:20-3-2004 ರಿಂದ ಪ್ರಾರಂಭವಾಗಿದೆ

ಆ) ಈ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣಕ್ಕೆ ಸರ್ಕಾರ ಇದುವರೆಗೆ ಖರ್ಚು ಮಾಡಿದ ಹಣವೆಷ್ಟು;

ಇಲ್ಲ

ಇ) ಈ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಹಿನ್ನೆಡೆಗೆ ಕಾರಣಗಳೇನು;

ತುಮಕೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಸೂಕ್ತ ಭೂಮಿ ಲಭ್ಯವಾಗದ ಕಾರಣದಿಂದ ನಿರ್ಮಾಣ ಸಾಧ್ಯವಾಗಲಿಲ್ಲ. ಈಗ ಭೂಮಿ ಮಂಜೂರಾಗಿರುತ್ತದೆ.

ಈ) ಈ ವಿಶ್ವವಿದ್ಯಾಲಯಕ್ಕೆ ನೀಡಿದ ಜಮೀನೆಷ್ಟು ಹಾಗೂ ಎಷ್ಟು ಎಕರೆ ಜಮೀನನ್ನು ವಾಪಾಸ್ಸು ಪಡೆಯಲು ಸರ್ಕಾರ ನಿರ್ಧರಿಸಿದೆ;

1) ಈ ಹಿಂದೆ ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕು ಊರ್ಡಿಗೆರೆ ಗ್ರಾಮದಲ್ಲಿ ನೀಡಿದ ಜಮೀನು 75 ಎಕರೆ.

2) ಈಗ ತುಮಕೂರು ತಾಲ್ಲೂಕು ಹೆಬ್ಬೂರು ಹೋಬಳಿ ಬಿದರಿಕಟ್ಟೆ, ತಮ್ಮಸಂದ್ರ ಹಾಗೂ ದೊಮ್ಮನಕುಪ್ಪೆ ಗ್ರಾಮಗಳ ವ್ಯಾಪ್ತಿಯಲ್ಲಿ 242.10 ಎಕರೆ ಭೂಮಿಯನ್ನು ಮಂಜೂರು ಮಾಡಿದೆ.

3) ಈಗ ಮಂಜೂರು ಮಾಡಿರುವ ಭೂಮಿಯಲ್ಲಿ ಯಾವುದೇ ಭೂಮಿಯನ್ನು ವಾಪಾಸ್ಸು ಪಡೆಯುವ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ

ಉ) ಈ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಕಾರ್ಯ ಯಾವಾಗ ಪೂರ್ಣಗೊಳಿಸಲಾಗುವುದು?

ಈಗ ಮಂಜೂರಾಗಿರುವ ಭೂಮಿಯ ಬಗ್ಗೆ ಅರಣ್ಯ ಮತ್ತು ಪರಿಸರ ಇಲಾಖೆಯು ಅನುಮತಿ ನೀಡಿದ ಕೂಡಲೇ ಹಾಗೂ ಹಣಕಾಸಿನ ಲಭ್ಯತೆಗನುಗುಣವಾಗಿ ಕ್ಯಾಂಪಸ್‌ನ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (442)342
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ,(ಮಂಡ್ಯ)
ಉತ್ತರಿಸುವ ಸಚಿವರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಮಂಡ್ಯ ನಗರ ವ್ಯಾಪ್ತಿಯ ಕೊಳಚೆ ಪ್ರದೇಶದ ಬಡ ನಿವಾಸಿಗರಿಗೆ ಮನೆಗಳನ್ನು ಕಟ್ಟಿಕೊಡುವ ಸರ್ಕಾರದ ಯೋಜನೆಗಳ ವಿವರಗಳೇನು;

ಮಂಡ್ಯ ನಗರ ವ್ಯಾಪ್ತಿಯ ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಿವಿಧ ಯೋಜನೆಗಳಡಿ- ಹುಡ್ಕೋ-1065, ವಾಂಬೆ-166, ಎಸ್‌ಸಿಪಿ-292, ನಗರ ಆಶ್ರಯ-100 ಒಟ್ಟು-1623 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿರುತ್ತದೆ. ಕೇಂದ್ರ ಪುರಸ್ಕೃತ ಕೇಂದ್ರ ಸರ್ಕಾರದ ಜನಹರಲಾಲ್ ನೆಹರು ನಗರ ನವೀಕರಣ ಯೋಜನೆಯ (ಜೆ.ಎನ್.ಎನ್.ಯು.ಆರ್.ಎಂ) ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (ಐ.ಹೆಚ್.ಎಸ್.ಡಿ.ಪಿ) ಯೋಜನೆಯಡಿ 558 ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯ ಒದಗಿಸುವ ರೂ.15.44 ಕೋಟಿ ವೆಚ್ಚದ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಪರಿಶೀಲನೆಗೆ ಹಾಗೂ ಮಂಜೂರಾತಿಗೆ ಸಲ್ಲಿಸಲಾಗಿದೆ.

ಆ ಇಲ್ಲಿಯವರೆಗೆ ಎಷ್ಟು ನಿವಾಸಿಗರಿಗೆ ಮನೆಗಳನ್ನು ಒದಗಿಸಿಕೊಡಲಾಗಿದೆ; ಉಳಿದವರಿಗೆ ಎಂದಿನಿಂದ ಸೌಲಭ್ಯವನ್ನು ಒದಗಿಸಿಕೊಡಲಾಗುವುದು;

ಇಲ್ಲಿಯವರೆಗೆ 1623 ಕೊಳಚೆ ಪ್ರದೇಶದ ನಿವಾಸಿಗರಿಗೆ ಮನೆಗಳನ್ನು ಒದಗಿಸಿಕೊಡಲಾಗಿದೆ. ಉಳಿದವರಿಗೆ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (ಐ.ಹೆಚ್.ಎಸ್.ಡಿ.ಪಿ) ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಸೌಲಭ್ಯವನ್ನು ಒದಗಿಸಿಕೊಡಲಾಗುವುದು.

ಇ ಮಂಡ್ಯ ನಗರ ಆಸ್ಪತ್ರೆಯ ಪಕ್ಕದ ಕೊಳಚೆ ಪ್ರದೇಶದ ಬೆಂಕಿ ಅನಾಹುತಕ್ಕೆ ಒಳಗಾಗಿ ಮನೆಗಳನ್ನು ಕಳೆದುಕೊಂಡ ಅವರಿಗೆ ಸರ್ಕಾರ ನೀಡಿದ ಪರಿಹಾರ ಮತ್ತು ನೆರವಿನ ಕ್ರಮಗಳೇನು;

ಮಂಡ್ಯ ನಗರಸಭೆ ಮತ್ತು ಮಂಡ್ಯ ಜಿಲ್ಲಾಡಳಿತ ವತಿಯಿಂದ ಬೆಂಕಿ ಅನಾಹುತಕ್ಕೆ ಒಳಗಾಗಿ ಮನೆಗಳನ್ನು ಕಳೆದುಕೊಂಡ ನಿವಾಸಿಗಳಿಗೆ ತಕ್ಷಣಕ್ಕೆ ಅಗತ್ಯವಿದ್ದ ತಾತ್ಕಲಿಕ ಷೆಡ್, ಊಟ ಮತ್ತು ಪ್ರತಿ ಗುಡಿಸಲು ವಾಸಿಗಳಿಗೆ 200 ಪರಿಹಾರವನ್ನು ಒದಗಿಸಲಾಗಿರುತ್ತದೆ.

ಈ ಅನಾಹುತಕ್ಕೊಳಗಾಗಿದ್ದ ಸಾವಿರಾರು ಕುಟುಂಬಗಳಿಗೆ ವಸತಿ ಸೌಲಭ್ಯ ಒದಗಿಸಿ ಕೊಡಲು ಸರ್ಕಾರದ ತುರ್ತು ಕ್ರಮಗಳೇನು?

ಬೆಂಕಿ ಅನಾಹುತಕ್ಕೆ ಒಳಗಾಗಿ ಗುಡಿಸಲು ಕಳೆದುಕೊಂಡ ನಿವಾಸಿಗಳಿಗೆ ಕೇಂದ್ರ ಪುರಸ್ಕೃತ ಜನಹರಲಾಲ್ ನೆಹರು ನಗರ ನವೀಕರಣ ಯೋಜನೆಯ (ಜೆ.ಎನ್.ಎನ್.ಯು.ಆರ್.ಎಂ) ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ

(ಐ.ಹೆಚ್.ಎಸ್.ಡಿ.ಪಿ) ಯೋಜನೆಯಡಿ 558 ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯ ಒದಗಿಸುವ ರೂ.15.44 ಕೋಟಿ ವೆಚ್ಚದ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಪರಿಶೀಲನೆಗೆ ಹಾಗೂ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ನಂತರ ವಸತಿ ಸೌಲಭ್ಯ ಕಲ್ಪಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(472)343**
ಸದಸ್ಯರ ಹೆಸರು	:	ಶ್ರೀ. ಶ್ರೀನಿವಾಸ್ ಎಂ.
ಉತ್ತರಿಸಬೇಕಾದ ಸಚಿವರು	:	(ಶ್ರೀ ಅರವಿಂದ ಲಿಂಬಾವಳಿ) ಉನ್ನತ ಶಿಕ್ಷಣ ಸಚಿವರು

ಅ) ರಾಜ್ಯದಲ್ಲಿರುವ ಜಿಲ್ಲಾವಾರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು; ಇನ್ನೂ ಎಷ್ಟು ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೆ? ಇದ್ದಲ್ಲಿ ಆ ಕುರಿತು ವಿವರಗಳೇನು;

349 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಂತಹ ಯಾವುದೇ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳನ್ನುಹೆಚ್ಚಾಗಿ ಹೊಂದಿದ್ದು, ಹೋಬಳಿ ಕೇಂದ್ರಗಳಲ್ಲಿ ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಮುಂದಾಗುವುದೇ;

ಸದರಿ ಜಿಲ್ಲೆಯಲ್ಲಿ ಒಟ್ಟು 15 ಮಂದಿ ಕಾಲೇಜುಗಳಿವೆ. ಉಳಿದ ಹೋಬಳಿ ಕೇಂದ್ರದಲ್ಲಿ ಪದವಿ ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ

ಇ) ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ ಕೇಂದ್ರವಾಗಿದ್ದು, ಪದವಿ ಕಾಲೇಜಿಗಾಗಿ ಕನಿಷ್ಠ 30 ಕಿ.ಮೀ.ಗಳಷ್ಟು ದೂರ ಹೋಗಬೇಕಾಗಿದ್ದು, ಗ್ರಾಮಾಂತರ ಪ್ರದೇಶಗಳ ಮಕ್ಕಳು ಈ ಕಾರಣಕ್ಕಾಗಿ ಕಾಲೇಜು ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲದ ಕಾರಣ ಮುಂಬರುವ ಶೈಕ್ಷಣಿಕ ವರ್ಷದಲ್ಲಾದರೂ ಪದವಿ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಪರಿಶೀಲಿಸಲಾಗುವುದು.

ಅನುಬಂಧ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯದಲ್ಲಿರುವ ಜಿಲ್ಲಾವಾರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪಟ್ಟಿ

ಕ್ರಮ ಸಂಖ್ಯೆ	ಕಾಲೇಜುಗಳ ಹೆಸರು ಮತ್ತು ವಿಳಾಸ
ಬೆಂಗಳೂರು ಪ್ರಾದೇಶಿಕ ಕಛೇರಿ-ಬೆಂಗಳೂರು ಜಿಲ್ಲೆ	
1	ಮಹಾರಾಣಿ ಮಹಿಳಾ ಕಲಾ ಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು–560 001.
2	ಸರ್ಕಾರಿ ಕಲಾ ಕಾಲೇಜು, ಡಾ: ಅಂಬೇಡ್ಕರ್ ವೀದಿ. ಬೆಂಗಳೂರು–560 001.
3	ಸರ್ಕಾರಿ ಆರ್.ಸಿ.ವಾಣಿಜ್ಯ ಕಾಲೇಜು, ಬಸವೇಶ್ವರ ಸರ್ಕಲ್, ಬೆಂಗಳೂರು–560 001.
4	ಶ್ರೀಮತಿ ವಿ.ಹೆಚ್.ಡಿ.ಕೇಂದ್ರೀಯ ಗೃಹ ವಿಜ್ಞಾನ ಕಾಲೇಜು, ಶೇಷಾದ್ರಿ ರಸ್ತೆ ಬೆಂಗಳೂರು–560 001.
5	ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ರಸ್ತೆ, ಬೆಂಗಳೂರು–560 001.
6	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಅರಮನೆ ರಸ್ತೆ, ಬೆಂಗಳೂರು–560 001.
7	ಡಾ: ಎಸ್.ಗೋಪಾಲರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆನೇಕಲ್–562 105
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, 3ನೇ ಮುಖ್ಯ ರಸ್ತೆ, 8ನೇ ಅಡ್ಡರಸ್ತೆ, ಬೆಂಗಳೂರು
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು–560 036
10	ಲಾಲ್ಬಹದ್ದೂರ್ ಶಾಸ್ತ್ರಿ ಸರ್ಕಾರಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಆರ್.ಟಿ.ನಗರ.ಬೆಂಗಳೂರು
11	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಸರಘಟ್ಟ, ಬೆಂಗಳೂರು–560 069
12	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ
13	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ
14	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ
15	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲೇಶ್ವರಂ
16	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪೀಣ್ಯ
17	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಫ್ರೆಜರ್ ಟೌನ್
18	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸೂರು ಸರ್ಜಾಪುರ
19	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ, ಬೆಂಗಳೂರು
ಬೆಂಗಳೂರು ಗ್ರಾಮಾಂತರ ಜಿಲ್ಲೆ	
20	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ–561 203
21	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ–562 110
22	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ–562 110

23	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ
24	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತ್ಯಾಮಗೊಂಡ್ಲು, ನೆಲಮಂಗಲ ತಾ.
25	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೂಲಿಬೆಲೆ, ಹೊಸಕೋಟೆ
ರಾಮನಗರ ಜಿಲ್ಲೆ	
26	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ-571 511
27	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ
28	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಡದಿ, ರಾಮನಗರ ತಾ;
29	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ-571 501
30	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ-562 120
31	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು-5610101(ಮಾಗಡಿ ತಾಲ್ಲೂಕು)
32	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ
33	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾರೋಹಳ್ಳಿ, ಕನಕಪುರ ತಾ:
34	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಡಿಹಳ್ಳಿ, ಕನಕಪುರ ತಾ:
35	ಸರ್ಕಾರಿ ಕಾನೂನು ಕಾಲೇಜು, ರಾಮನಗರ
ತುಮಕೂರು ಜಿಲ್ಲೆ	
36	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು-572 102
37	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ-572 137
38	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು-572 102
39	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್-572 130
40	ಶ್ರೀಮತಿ ಮತ್ತು ಶ್ರೀ ವೈ.ಇ.ರಂಗಯ್ಯಶೆಟ್ಟಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ-561 202
41	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ-572 216
42	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ-572 129
43	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ-572 227
44	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ-572 214
45	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರ-572 218(ಚಿಕ್ಕನಾಯಕನಹಳ್ಳಿ ತಾಲ್ಲೂಕು)
46	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ-572 132
47	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬೂರು, ಕುಣಿಗಲ್ ತಾಲ್ಲೂಕು
48	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು
49	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾ:
50	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ ತಾ:
51	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೊಣವಿನಕೆರೆ, ತಿಪಟೂರು ತಾ:
52	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾ:
ಚಿಕ್ಕಾಬಳ್ಳಾಪುರ	

53	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಾಬಳ್ಳಾಪುರ–562 101
54	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೌರಿಬಿದನೂರು
55	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಬಂಡೆ–561 209
56	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ–562 106
57	ಸರ್ಕಾರಿ ಬಾಲಕರ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ–563 125
58	ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ–563 125
59	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವೇಮಗಲ್, ಚಿಂತಾಮಣಿ ತಾ:
60	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಗೇಪಲ್ಲಿ
	ಕೋಲಾರ ಜಿಲ್ಲೆ
61	ಸರ್ಕಾರಿ ಬಾಲಕರ ಪ್ರಥಮ ದರ್ಜೆ ಕಾಲೇಜು, ಕೋಲಾರ–563 101
62	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು–563 131
63	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ–563 101
64	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ–563 114
65	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಸಪುರ–563 135
66	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು–563 130
67	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ–563 101
68	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್
69	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರು ತಿರುಪತಿ, ಬಂಗಾರುಪೇಟೆ
	ಮೈಸೂರು ಪ್ರಾದೇಶಿಕ ಕಛೇರಿ ಮೈಸೂರು ಜಿಲ್ಲೆ
70	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು–570 005
71	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ–571 502
72	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು–571 105
73	ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು – 570 005
74	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ – 571 114
75	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ–571 107
76	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು ನಗರ
77	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು(ಟಿ.ನರಸೀಪುರ ತಾಲ್ಲೂಕು)
78	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೂಟಗಳ್ಳಿ, ಮೈಸೂರು
79	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ
80	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ, ಹುಣಸೂರು ತಾ:
81	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು
82	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ
83	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೋಡು, ಹುಣಸೂರು ತಾ:
84	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹುಣಸೂರು
85	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥ ಲೇಔಟ್, ಮೈಸೂರು

86	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಲ್ಲಹಳ್ಳಿ, ನಂಜನಗೂಡು
	ಚಾಮರಾಜನಗರ ಜಿಲ್ಲೆ
87	ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ–571 440
88	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನೂರು–571 439 (ಕೊಳ್ಳೇಗಾಲ ತಾಲ್ಲೂಕು)
89	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ–571 313
90	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಳಂದೂರು
91	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ
92	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೇರು, ಚಾಮರಾಜನಗರ ತಾ:
93	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ, ಗುಂಡ್ಲುಪೇಟೆ ತಾ:
	ಮಂಡ್ಯ ಜಿಲ್ಲೆ
94	ಸರ್ಕಾರಿ ಬಾಲಕರ ಪ್ರಥಮ ದರ್ಜೆ ಕಾಲೇಜು, ಮಂಡ್ಯ–571 401
95	ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು, ಮಂಡ್ಯ–571 401
96	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ–571 438
97	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪೇಟೆ–571 428
98	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಳವಳ್ಳಿ
99	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮದ್ದೂರು
100	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, (ಮದ್ದೂರು ತಾಲ್ಲೂಕು)
101	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ ಪಾಂಡವಪುರ ತಾ:
102.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ
103	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ
104	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಾರತೀನಗರ, ಮದ್ದೂರು ತಾ:
105	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಸಾಗರ, ಶ್ರೀರಂಗಪಟ್ಟಣ ತಾ:
106	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಲಗೂರು, ಮಳವಳ್ಳಿ ತಾ:
107	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೇಲುಕೋಟೆ, ಪಾಂಡವಪುರ ತಾ:
108	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ
	ಹಾಸನ ಜಿಲ್ಲೆ
109	ಸರ್ಕಾರಿ ವಿಜ್ಞಾನ ಪ್ರಥಮ ದರ್ಜೆ ಕಾಲೇಜು, ಹಾಸನ–573 201
110	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಣನೂರು–572 130(ಅರಕಲಗೂಡು)
111	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೇನರಸೀಪುರ–573 211
112	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಕಲೇಶಪುರ–573 134
113	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾಸನ–573 201
114	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು–573 102
115	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು–573 115
116	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಾವಗಲ್–573 125 (ಅರಸೀಕೆರೆ ತಾಲ್ಲೂಕು)
117	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಡಸಿ, (ಅರಸೀಕೆರೆ ತಾಲ್ಲೂಕು)

118	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ-573 116
119	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಲೂರು(ಹಾಸನ ಜಿಲ್ಲೆ)
120	ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಸನ
121	ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ
122	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡವಲಹಿಪ್ಪೆ
123	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ
124	ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹಾಸನ
125	ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹೊಳೆನರಸೀಪುರ
126	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಸಾವೆ, ಚನ್ನರಾಯಪಟ್ಟಣ ತಾ:
127	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ, ಚನ್ನರಾಯಪಟ್ಟಣ ತಾ:
128	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಣಾವಾರ, ಅರಸೀಕೆರೆ ತಾ:
129	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು, ಹೊಳೆನರಸೀಪುರ ತಾ:
130	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಸಳೆ ಹೊಸಹಳ್ಳಿ, ಹಾಸನ ತಾ:
131	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೇಬೀಡು, ಬೇಲೂರು ತಾ:
132	ಸರ್ಕಾರಿ ಕಾನೂನು ಕಾಲೇಜು, ಹಾಸನ ನಗರ
133	ಸರ್ಕಾರಿ ಕಾನೂನು ಕಾಲೇಜು, ಹೊಳೆನರಸೀಪುರ
134	ಸರ್ಕಾರಿ ಕಾನೂನು ಕಾಲೇಜು, ಪಡವಲಹಿಪ್ಪೆ, ಹೊಳೆನರಸೀಪುರ ತಾ:
135	ಸರ್ಕಾರಿ ಕಾನೂನು ಕಾಲೇಜು, ಹೆತ್ತೂರು ಸಕಲೇಶಪುರ ತಾ:
	ಶಿವಮೊಗ್ಗ ಪ್ರಾದೇಶಿಕ ಕಛೇರಿ ಶಿವಮೊಗ್ಗ ಜಿಲ್ಲೆ
136	ಸರ್.ಎಂ.ವಿ.ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ, ಭದ್ರಾವತಿ-577 302
137	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ-577 427
138	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ-577 418
139	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೊರಬ-577 429
140	ಸರ.ಎಂ.ವಿ.ಸರ್ಕಾರಿ ಕಲೆ ಮತ್ತು ವಾಣಿಜ್ಯ ಕಾಲೇಜು, ನ್ಯೂಟೌನ್ ಭದ್ರಾವತಿ-577 301
141	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅನವಟ್ಟಿ-577 413(ಸೊರಬ ತಾಲ್ಲೂಕು)
142	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು-577 227(ಭದ್ರಾವತಿ ತಾಲ್ಲೂಕು)
143	ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸಾಗರ-577 401
144	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ-577 301
145	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ
146	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ
147	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್ ಪೇಟೆ, ಹೊಸನಗರ ತಾ:
148	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ, ಶಿಕಾರಿಪುರ ತಾ:

ಚಿತ್ರದುರ್ಗ ಜಿಲ್ಲೆ	
149	ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ–577 501
150	ಹೆಚ್.ಪಿ.ಸಿ.ಸಿ.ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ–577 522
151	ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ–577 501
152	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ–577 527
153	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು–577 535
154	ವೇದಾವತಿ ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಹಿರಿಯೂರು – 572 143
155	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪರಶುರಾಮನಗರ, (ಚಳ್ಳಕೆರೆ ತಾಲ್ಲೂಕು)
156	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭರಮಸಾಗರ, ಚಿತ್ರದುರ್ಗ ತಾ:
157	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳಲ್ಕೆರೆ
158	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜವನಗೊಂಡನಹಳ್ಳಿ, ಹಿರಿಯೂರು ತಾ:
	ದಾವಣಗೆರೆ ಜಿಲ್ಲೆ
159	ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ–577 213
160	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಯಕೊಂಡ–577 534
161	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನ್ಯಾಮತಿ–577 223(ಹೊನ್ನಾಳಿ ತಾಲ್ಲೂಕು)
162	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ–577 002
163	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ
164	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ
165	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ
166	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಪ್ಪನಹಳ್ಳಿ
167	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಗಳೂರು
168	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂತೇಬೆನ್ನೂರು, ಚನ್ನಗಿರಿ ತಾ:
169	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಪಟ್ಟಣ, ಚನ್ನಗಿರಿ ತಾ:
	ಚಿಕ್ಕಮಗಳೂರು ಜಿಲ್ಲೆ
170	ಐ.ಡಿ.ಎಸ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು–577 102
171	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ–577 125
172	ಶ್ರೀ ವಾಳೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಿಗೆರೆ–577 132
173	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ–577 134
174	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಜ್ಜಂಪುರ–577 547(ತರೀಕೆರೆ ತಾಲ್ಲೂಕು)
175	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಂಚನಹಳ್ಳಿ–573 132 (ಕಡೂರು ತಾಲ್ಲೂಕು)
176	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು–577 548
177	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶೃಂಗೇರಿ
178	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರಿಕೆರೆ
179	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಳಸ, ಶೃಂಗೇರಿ ತಾ:

180	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀರೂರ, ಕಡೂರ ತಾ:
181	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಗಟಿ, ಕಡೂರ ತಾ:
182	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಕರಾಯಪಟ್ಟಣ, ಕಡೂರು ತಾ:
	ಮಂಗಳೂರು ಪ್ರಾದೇಶಿಕ ಕಛೇರಿ ದಕ್ಷಿಣ ಕನ್ನಡ ಜಿಲ್ಲೆ(ಸರ್ಕಾರಿ ಕಾಲೇಜುಗಳು)
183	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಪ್ಪಿನಂಗಡಿ-572 241(ಪುತ್ತೂರು ತಾಲ್ಲೂಕು)
184	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ-574 214
185	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ-574 259 (ಪುತ್ತೂರು ತಾಲ್ಲೂಕು)
186	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ(ಮಂಗಳೂರು ತಾಲ್ಲೂಕು)
187	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ-574 212 (ಸೂಳ್ಯ ತಾಲ್ಲೂಕು)
188	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಮದಪದವು-574 237 (ಬಂಟ್ವಾಳ ತಾಲ್ಲೂಕು)
189	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ-574 243(ದಕ್ಷಿಣ ಕನ್ನಡ ಜಿಲ್ಲೆ)
190	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾವೂರು (ಮಂಗಳೂರು ತಾಲ್ಲೂಕು)
191	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಟ್ವಾಳ
192	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುತ್ತೂರು
193	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುಳ್ಯ
194	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು
195	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮಂಗಳೂರು
196	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಪುತ್ತೂರು
197	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಜಾಲಕಟ್ಟೆ, ಬೆಳ್ತಂಗಡಿ ತಾ:
198	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದನಕಟ್ಟೆ, ಬಂಟ್ವಾಳ ತಾ:
	ಉಡುಪಿ ಜಿಲ್ಲೆ
199	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ರಿ-576 112(ಕಾರ್ಕಳ ತಾಲ್ಲೂಕು)
200	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೈಂದೂರು-576 214
201	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ಕಳ-574 104
202	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಂಕರನಾರಾಯಣ-576 227(ಕುಂದಾಪುರ ತಾಲ್ಲೂಕು)
203	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಪು
204	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಡುಪಿ-576 101
205	ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು, ಉಡುಪಿ-576 106
206	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾರ್ಕೂರು(ಉಡುಪಿ ತಾಲ್ಲೂಕು)
207	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯಡ್ಕ, ಕುಂದಾಪುರ ತಾಲ್ಲೂಕು
208	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಾಪುರ
209	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಟಾ ಪಡುಕೆರೆ, ಉಡುಪಿ ತಾ:

	ಕೊಡಗು ಜಿಲ್ಲೆ
210	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ-571 234(ಸೋಮವಾರ ಪೇಟೆ ತಾಲ್ಲೂಕು)
211	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಪೊಕ್ಲು
212	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಡಿಕೇರಿ
213	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾಜಪೇಟೆ
	ಧಾರವಾಡ ಪ್ರಾದೇಶಿಕ ಕಛೇರಿ-ಧಾರವಾಡ ಜಿಲ್ಲೆ
214	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರ-581 108(ಧಾರವಾಡ ತಾಲ್ಲೂಕು)
215	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಗೇರಿ-581 107(ಕುಂದಗೋಳ್ ತಾಲ್ಲೂಕು)
216	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ, ಹುಬ್ಬಳ್ಳಿ
217	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ
218	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನವಲಗುಂದ
219	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಘಟಗಿ
220	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ
221	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಣ್ಣೀಗೇರಿ, ನವಲಗುಂದ ತಾ:
	ಗದಗ ಜಿಲ್ಲೆ
222	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಗುಂದ-582 207
223	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಜೇಂದ್ರಗಡ-582 114(ರೋಣ ತಾಲ್ಲೂಕು)
224	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರೋಣ-582 209
225	ಶ್ರೀ ಜಗದ್ಗುರು ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಹಟ್ಟಿ-582 120
226	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಂಡರಗಿ, ಗದಗ್ ಜಿಲ್ಲೆ-582 120
227	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗದಗ್
228	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲುಕೋಟಿ, ಗದಗ್ ತಾ:
229	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳಗುಂದ, ಮುಂಡರಗಿ ತಾ:
230	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರೇಗುಲ್, ರೋಣ ತಾ:
	ಹಾವೇರಿ ಜಿಲ್ಲೆ
231	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರು-581 111
232	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸವಣೂರು- 581 118
233	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಕ್ಕಿ ಆಲೂರು-581 102(ಹಾನಗಲ್ ತಾಲ್ಲೂಕು)
234	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಕಾಪುರ(ಶಿಗ್ಗಾಂವ ತಾಲ್ಲೂಕು)
235	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ
236	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಣೆಬೆನ್ನೂರು

237	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬ್ಯಾಡಗಿ
238	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ್
239	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾನಗಲ್
240	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುಣಕಲ್ಬಿದರಿ, ರಾಣಿಬೆನ್ನೂರು ತಾ:
ಉತ್ತರ ಕನ್ನಡ ಜಿಲ್ಲೆ	
241	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರವಾರ-581 301
242	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳಿಯಾಳ-581 329
243	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಂದಗೋಡ-591 349
244	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಮಟಾ
245	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೋಯಿಡಾ
246	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಂಕೋಲಾ
247	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾವರ
248	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಟ್ಕಳ
249	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ
250	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾಪುರ
251	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲ್ಲಾಪುರ-581 359
252	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಕಿ, ಹೊನ್ನಾವರ ತಾ:
253	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಡಾ, ಕುಮುಟಾ ತಾ:
ಬೆಳಗಾವಿ ಜಿಲ್ಲೆ	
254	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೇಸರ್ಗಿ-591 121 (ಬೈಲಹೊಂಗಲ್ ತಾಲ್ಲೂಕು)
255	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಐನಾಪುರ-591 303 (ಅಥಣಿ ತಾಲ್ಲೂಕು)
256	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೈಲಹೊಂಗಲ
257	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸದಲಗ, ಚಿಕ್ಕೋಡಿ, ತಾ:ಬೆಳಗಾಂ ಜಿಲ್ಲೆ
258	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳಗಾಂ
259	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಕ್ಕೇರಿ
260	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾನಾಪುರ
261	ಶ್ರೀ ಕರಬಸಪ್ಪ ಮಲ್ಲಿಕಾರ್ಜುನಪ್ಪ ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೌದತ್ತಿ, ಬೆಳಗಾಂ
262	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೋಕಾಕ್
263	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮದುರ್ಗ
264	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕೋಡಿ
265	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯ್‌ಬಾಗ್
266	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಥಣಿ

267	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಕೆ.ಕೊಪ್ಪ, ಬೆಳಗಾಂ
268	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಿತ್ತೂರು, ಬೈಲಹೊಂಗಲ ತಾ:
269	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆಲಸಂಗ, ಅಥಣಿ ತಾ:
270	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಶ್ಚಾಪುರ, ಹುಕ್ಕೇರಿ ತಾ:
271	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟಗೇರಿ, ಅಥಣಿ ತಾ:
272	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಲಗಿ, ಗೋಕಾಕ್ ತಾ:
	ಬಾಗಲಕೋಟೆ ಜಿಲ್ಲೆ
273	ಶ್ರೀ ರುದ್ರಗೌಡ ಪಾಟೀಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,, ಬೀಳಗಿ-587 116
274	ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು, ಜಮಖಂಡಿ-587 301
275	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆರದಾಳ್
276	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾವಳಗಿ(ಜಮಖಂಡಿ ತಾಲ್ಲೂಕು) ಬಾಗಲಕೋಟೆ ಜಿಲ್ಲೆ
277	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಗಲಕೋಟೆ
278	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಧೋಳ
279	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿ
280	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುನಗುಂದ
281	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಳಕಲ್, ಹುನಗುಂದ ತಾ:
282	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲೋಕಾಪುರ, ಮುಧೋಳ್ ತಾ:
283	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುನ್ನೂರ, ಜಮಖಂಡಿ ತಾ:
	ಬಿಜಾಪುರ ಜಿಲ್ಲೆ
284	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೊಳಸಂಗಿ(ಬಿಜಾಪುರ ಜಿಲ್ಲೆ)
285	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಿಜಾಪುರ
286	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನಬಾಗೇವಾಡಿ
287	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುದ್ದೇಬಿಹಾಳ
288	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಂಡಿ,
289	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿಂದಗಿ
290	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಮನಾಪುರ
	ಗುಲ್ಬರ್ಗ ಪ್ರಾದೇಶಿಕ ಕಛೇರಿ ಗುಲ್ಬರ್ಗ ಜಿಲ್ಲೆ
291	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಲ್ಬರ್ಗಾ-285 105
292	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ-585 202
293	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ-585 310
294	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಹಾಪುರ-580 223
295	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿತ್ತಾಪುರ-580 211
296	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ-585 222

297	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಫಜಲ್‌ಪುರ-580 301
298	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುರುಮಿಟ್‌ಕಲ್-583 224
299	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುರಪುರ-585 224
300	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಮಲಾಪುರ-585 313
301	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಳಂದ
302	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಂಚೋಳಿ
303	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿತ್ತಾಪುರ ತಾ:
304	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಿರ್ಜಗಿ, ಅಫಜಲ್‌ಪುರ ತಾ:
305	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಹಗಾಂವ್ ಕ್ರಾಸ್, ಗುಲ್ಬರ್ಗ
306	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ ಕಾಲೋನಿ, ಗುಲ್ಬರ್ಗ
307	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪರ್ತ್‌ಬಾದ್, ಜೇವರ್ಗಿ ತಾ:
308	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಬಾವಿ, ಸುರುಪುರ ತಾ:
309	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮದನಹಿಪ್ಪರಗಾ, ಆಳಂದ ತಾ:
310	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುಲೇಪೇಟೆ, ಚಿಂಚೋಳಿ ತಾ:
ರಾಯಚೂರು ಜಿಲ್ಲೆ	
311	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿಂಧನೂರು-584 128
312	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ-584 123
313	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವದುರ್ಗ-584 111
314	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಸ್ಕಿ
315	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು
316	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸಗೂರು
317	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಾಲಹಳ್ಳಿ, ದೇವದುರ್ಗ ತಾ:
318	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲು, ಲಿಂಗಸಗೂರು ತಾ:
ಕೊಪ್ಪಳ ಜಿಲ್ಲೆ	
319	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಬುರ್ಗ-583 236
320	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಷ್ಟಗಿ-584 121
321	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ-593 227
322	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ
323	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಬಂಡಿ, ಅರಳಾಪುರ, ಕೊಪ್ಪಳ ತಾ:
324	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿಟ್ನಾಳ, ಕೊಪ್ಪಳ ತಾ:
325	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಳವಂಡಿ, ಕೊಪ್ಪಳ ತಾ:
326	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಾಮನಗರ, ಗಂಗಾವತಿ ತಾ:
327	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇವಂಕಲಕುಂಟ, ಯಲುಬುರ್ಗಾ ತಾ:
328	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಕಲ್‌ಗಡ, ಕೊಪ್ಪಳ ತಾ:
ಬಳ್ಳಾರಿ ಜಿಲ್ಲೆ	

329	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೂಡ್ಲಿಗಿ-583 135
330	ಶ್ರೀಮತಿ ಸರಳಾದೇವಿ ಸತೀಶ್ ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ-583 101
331	ಶ್ರೀ ಗಂಗಾವತಿ ವೆಂಕಟರಮಣ ಶೆಟ್ಟಿ ಪದ್ಮಾವತಮ್ಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ-583 212
332	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ-583 182(ಹೊಸಪೇಟೆ ತಾಲ್ಲೂಕು)
333	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಗುಪ್ಪ-583 121
334	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುರಗೋಡು
335	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆಕ್ಕಲಕೋಟೆ, ಕುರುಗೋಡು ತಾ:
336	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು
337	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ
338	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೂವಿನಹಡಗಲಿ
339	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮರಿಯಮ್ಮನಹಳ್ಳಿ, ಹೊಸಪೇಟೆ ತಾ:
340	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ ಪೇಟೆ
341	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕ, ಬಳ್ಳಾರಿ
ಬೀದರ್ ಜಿಲ್ಲೆ	
342	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ-585 401
343	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಔರಾದ್
344	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಕಲ್ಯಾಣ
345	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಲ್ಕಿ
346	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಮ್ನಾಬಾದ್
347	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಟಗುಪ್ಪ, ಹುಮ್ನಾಬಾದ್ ತಾ:
348	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನಹಳ್ಳಿ, ಬೀದರ್
349	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲಸೂರ, ಬಸವಕಲ್ಯಾಣ ತಾ:

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (473)344
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ ಎಂ.(ಮಂಡ್ಯ)
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ. ಮಂಡ್ಯ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಕಟ್ಟಡ ಶಿಥಿಲಗೊಂಡಿದ್ದು, ಶೈಕ್ಷಣಿಕ ಚಟುವಟಿಕೆಗಳಿಗೆ ತೀರಾ ಅನಾನುಕೂಲವಾಗಿರುವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ವಿಳಂಬ ಮಾಡುತ್ತಿರಲು ಕಾರಣಗಳೇನು;

ಮಂಡ್ಯನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಕಟ್ಟಡ ಶಿಥಿಲಗೊಂಡಿದ್ದು, ಶೈಕ್ಷಣಿಕ ಚಟುವಟಿಕೆಗಳ ತೀರಾ ಅನಾನುಕೂಲವಾಗಿರುವುದನ್ನು ಸರ್ಕಾರ ಗಮನಿಸಿದೆ. ಆದ್ದರಿಂದ ಹೆಚ್ಚುವರಿ ಕೊಠಡಿ ಮತ್ತು ಗ್ರಂಥಾಲಯ ನಿರ್ಮಾಣಕ್ಕಾಗಿ ಲೆಕ್ಕಶೀರ್ಷಿಕೆ 4202ರಡಿ 50.00ಲಕ್ಷರೂ.ಗಳನ್ನು ಬಿಡುಗಡೆ ಮಾಡಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಾಮಗಾರಿಗಳನ್ನು ಪ್ರಾರಂಭಿಸಿದ್ದು, 2007-08ನೇ ಸಾಲಿಗೆ 15.00 ಲಕ್ಷರೂ.ಗಳನ್ನು ಖರ್ಚು ಮಾಡಲಾಗಿದೆ. 2008-09ನೇ ಸಾಲಿಗೆ ಸದರಿ ಲೆಕ್ಕಶೀರ್ಷಿಕೆಯಡಿ ಒದಗಿಸಲಾದ 2000.00ಲಕ್ಷರೂ.ಗಳಲ್ಲಿ ಮೇಲ್ಕಂಡ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಕಾಮಗಾರಿಗೆ ಅನುದಾನವನ್ನು ವಿಳಂಬವಿಲ್ಲದಂತೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು;

ಆ. ವಿದ್ಯಾರ್ಥಿಗಳ ಸಂಖ್ಯೆಯನ್ನು ಅನುಸರಿಸಿ ಕಟ್ಟಡದ ಸೌಲಭ್ಯವನ್ನು ಒದಗಿಸಿಕೊಟ್ಟು ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಸರ್ಕಾರದ ಕ್ರಮಗಳೇನು;

ಅನುದಾನದ ಲಭ್ಯತೆಯನ್ನು ಆಧರಿಸಿ ಆದ್ಯತೆಯ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಿ ಹಂತ ಹಂತವಾಗಿ ಕಟ್ಟಡ ಸೌಲಭ್ಯವನ್ನು ಒದಗಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು.

ಇ. ಈ ಕೊಠಡಿಗಳ ದುರಸ್ತಿ ಹಾಗೂ ನೂತನ ಕೊಠಡಿಗಳ ನಿರ್ಮಾಣದ ಕಾರ್ಯವನ್ನು ಈ ಸಾಲಿನಲ್ಲೇ ತೆಗೆದುಕೊಳ್ಳಲು ಸರ್ಕಾರದ ಕ್ರಮವೇನು?

2008-09ನೇ ಸಾಲಿಗೆ ಒದಗಿಸಲಾಗಿರುವ ಅನುದಾನದಲ್ಲಿ ಸದರಿ ಕಾಲೇಜಿನ ಕೊಠಡಿಗಳ ದುರಸ್ತಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (326)345
ಸದಸ್ಯರ ಹೆಸರು : ಶ್ರೀ ಸುರೇಶ್ ಬಾಬು ಸಿ.ಬಿ
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ
ಶಿಕ್ಷಣ ಸಚಿವರು

ಅ) ರಾಜ್ಯದಲ್ಲಿರುವ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು (ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ವಿವರ ನೀಡುವುದು);

ರಾಜ್ಯದಲ್ಲಿನ. ಸರ್ಕಾರಿ ಸಂಯುಕ್ತ ಪ್ರೌಢಶಾಲೆಗಳಲ್ಲಿ ಒಟ್ಟು 2311 ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಕೆಳಕಂಡಂತೆ ಶಿಕ್ಷಕರ ಹುದ್ದೆಗಳು (ವಿಷಯವಾರು) ಖಾಲಿ ಇರುತ್ತದೆ:-

ವಿಷಯ	ಖಾಲಿ ಹುದ್ದೆಗಳ ಸಂಖ್ಯೆ
ಆಂಗ್ಲ ಭಾಷಾ ಶಿಕ್ಷಕರು	01
ಹಿಂದಿ ಭಾಷಾ ಶಿಕ್ಷಕರು	04
ಭೌತ ವಿಜ್ಞಾನ ಶಿಕ್ಷಕರು	02
ಜೀವ ವಿಜ್ಞಾನ ಶಿಕ್ಷಕರು	02
ಕಲಾ ಶಿಕ್ಷಕರು	01
ದೈಹಿಕ ಶಿಕ್ಷಣ ಶಿಕ್ಷಕರು	04
ಒಟ್ಟು	**14**

ಆ) ಈ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗದಂತೆ ಶಿಕ್ಷಕರನ್ನು ನಿಯೋಜಿಸಲಾಗಿದೆ. ಖಾಲಿ ಹುದ್ದೆಗಳನ್ನು ಬಡ್ತಿ ಮುಖಾಂತರ ಹಾಗೂ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುವುದು

ಇ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಶಿಕ್ಷಣ ಇಲಾಖೆಯ ಆಯುಕ್ತರಿಂದ ಪ್ರಸ್ತಾವನೆ ಬಂದಾಗ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (328)346
ಸದಸ್ಯರ ಹೆಸರು : ಶ್ರೀ ಸುರೇಶ್ ಬಾಬು ಸಿ.ಬಿ
ಉತ್ತರಿಸುವ ಸಚಿವರು : (ಶ್ರೀ ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಸಂಖ್ಯೆ ಎಷ್ಟು;(ವಿಷಯವಾರು ವಿವರ ನೀಡುವುದು);

ಸದರಿ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಎರಡು ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತವೆ.

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇಂತಹ ಕಾಲೇಜುಗಳ ವಿವಿಧ ವಿಷಯಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಕಾರ್ಯಭಾರವನ್ನು ನಿರ್ವಹಿಸುವ ಸಲುವಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲು ಕಾಲೇಜುಗಳ ಪ್ರಾಂಶುಪಾಲರಿಗೆ ಅಧಿಕಾರ ನೀಡಲಾಗಿದೆ. ಅದಲ್ಲದೆ ಉಪನ್ಯಾಸಕರ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ತುಂಬಲು ಪ್ರಸ್ತಾವನೆ ಸಲ್ಲಿಸಿದ್ದು ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇ) ಸದರಿ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು?

ಕರ್ನಾಟಕ ಲೋಕ ಸೇವಾ ಆಯೋಗದಿಂದ ಅಭ್ಯರ್ಥಿಗಳ ಪಟ್ಟಿಗಳನ್ನು ಸ್ವೀಕರಿಸಿದ ನಂತರ ನೇಮಕಾತಿ ಮಾಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (291)300
ಸದಸ್ಯರ ಹೆಸರು : ಶ್ರೀ ಹ್ಯಾರೀಸ್ ಎನ್.ಎ
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಒಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ವಿವಿಧ ಮಾಧ್ಯಮವಾರು ವಿವರ ನೀಡುವುದು;

ಸರ್ಕಾರಿ ಪ್ರಾಥಮಿಕ ಶಾಲೆಗಳು

ಮಾಧ್ಯಮ	ಬೆಂಗಳೂರು ದಕ್ಷಿಣ ಜಿಲ್ಲೆ	ಬೆಂಗಳೂರು ಉತ್ತರ ಜಿಲ್ಲೆ
ಕನ್ನಡ	1216	421
ಆಂಗ್ಲ	11	–
ತಮಿಳು	31	11
ತೆಲುಗು	08	08
ಉರ್ದು	178	71
ಹಿಂದಿ	01	–
ಒಟ್ಟು	**1445**	**511**

ಆ) ಈ ಶಾಲೆಗಳಲ್ಲಿ ಎಷ್ಟು ಶಾಲೆಗಳು ಸ್ವಂತ ಕಟ್ಟಡ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಹೊಂದಿವೆ;

- <u>ಬೆಂಗಳೂರು ದಕ್ಷಿಣ ಜಿಲ್ಲೆ:</u> ಸ್ವಂತ ಕಟ್ಟಡಗಳು ಹೊಂದಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ – 1220
- ಬಹುತೇಕ ಎಲ್ಲಾ ಶಾಲೆಗಳು ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದು, ಕೆಲವು ಶಾಲೆಗಳಲ್ಲಿ ಮಾತ್ರ ಕುಡಿಯುವ ನೀರು ಹಾಗೂ ಶೌಚಾಲಯದ ನಿರ್ವಹಣೆಯ ಕೊರತೆ ಇರುತ್ತದೆ. ಇದನ್ನು ಶಾಲಾ ಹಂತದಲ್ಲಿಯೇ ಸರಿಪಡಿಸುವ ವ್ಯವಸ್ಥೆ ಮಾಡಲಾಗಿದೆ.
- <u>ಬೆಂಗಳೂರು ಉತ್ತರ ಜಿಲ್ಲೆ:</u> ಸ್ವಂತ ಕಟ್ಟಡಗಳಿರುವ ಶಾಲೆಗಳ ಸಂಖ್ಯೆ: 488, 511 ಶಾಲೆಗಳ ಪೈಕಿ 35 ಶಾಲೆಗಳಿಗೆ ಮೂಲಭೂತ ಸೌಲಭ್ಯಗಳ ಕೊರತೆ ಇದ್ದು, ಈ ಸೌಲಭ್ಯಗಳನ್ನು ಸರ್ವ ಶಿಕ್ಷಣ ಅಭಿಯಾನ, ಪಂಚಸೌಲಭ್ಯ, ಸಾರ್ವಜನಿಕ ಅನುದಾನಗಳ ಸಹಾಯದಡಿಯಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಅವುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಒಟ್ಟು ಮಕ್ಕಳ ಸಂಖ್ಯೆ ಹಾಗೂ ಕೊರತೆ ಇರುವ ಶಿಕ್ಷಕರುಗಳ ಸಂಖ್ಯೆ ಎಷ್ಟು ಹಾಗೂ ಮಕ್ಕಳ ಸಂಖ್ಯೆಗನುಗುಣವಾಗಿ ಶಿಕ್ಷಕರು ಕಾರ್ಯನಿರ್ವಹಿಸುವರೇ; ಹಾಗಿಲ್ಲದಿದ್ದಲ್ಲಿ, ಅದನ್ನು ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

- <u>ಬೆಂಗಳೂರು ದಕ್ಷಿಣ ಜಿಲ್ಲೆ:</u>

ಸರ್ಕಾರಿ ಪ್ರಾಥಮಿಕ ಶಾಲೆ ಮಕ್ಕಳ ಸಂಖ್ಯೆ:	2,22,002
ಮಂಜೂರಾದ ಶಿಕ್ಷಕರ ಸಂಖ್ಯೆ	6,870
ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು	6,594
ಕೊರತೆ ಇರುವ ಶಿಕ್ಷಕರು	276

ಪ್ರತಿ ಪ್ರಾಥಮಿಕ ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದು, ಕೆಲವು ಶಾಲೆಗಳಲ್ಲಿ ಅನುಪಾತದ ವ್ಯತ್ಯಾಸವಿದ್ದು, ಕಾರ್ಯಭಾರವಿಲ್ಲದ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ, ಕಾರ್ಯಭಾರವಿರುವ ಶಾಲೆಗಳಿಗೆ ಸ್ಥಳಾಂತರಿಸಿ, ಮಕ್ಕಳ ಪಾಠಪ್ರವಚನಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ. ಜಿಲ್ಲೆಯ ಶಿಕ್ಷಕರ ಮತ್ತು ಮಕ್ಕಳ ಅನುಪಾತ 1:35 ಇರುತ್ತದೆ.

<u>ಬೆಂಗಳೂರು ಉತ್ತರ ಜಿಲ್ಲೆ:</u>

ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 88,723 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಮತ್ತು ಶಿಕ್ಷಕರ ಸಂಖ್ಯೆಗನುಗುಣವಾಗಿ

ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಅನುಪಾತ 1:36 ಇರುತ್ತದೆ.

ಈ) ಶಾಂತಿನಗರ (ಬೆಂಗಳೂರು) ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ವಿವಿಧ ಮಾಧ್ಯಮದ ಶಾಲೆಗಳು ಮತ್ತು ಮಕ್ಕಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)?

ಶಾಂತಿನಗರ ಕ್ಷೇತ್ರವು ಬೆಂಗಳೂರು ದಕ್ಷಿಣ ಜಿಲ್ಲೆಗೆ ಒಳಪಡುತ್ತದೆ

ಮಾಧ್ಯಮ	ಶಾಲೆಗಳ ಸಂಖ್ಯೆ	ಮಕ್ಕಳ ಸಂಖ್ಯೆ
ಕನ್ನಡ	12	2268
ಆಂಗ್ಲ	03	4133
ತಮಿಳು	03	159
ತೆಲುಗು	02	265
ಉರ್ದು	02	53
ಹಿಂದಿ	01	41
ಒಟ್ಟು	**23**	**6929**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (425)301
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ(ಶಿರಾ)
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

